॥श्रीलक्ष्मीवेंकटेशो विजयते॥
॥श्रीमध्वेशो विजयतेतराम्॥

श्रीमदानन्दतीर्थभगवत्पादाचार्य विरचितम्

# प्रपंचमिथ्यात्व अनुमान खण्डनम्

## (टीका-टिप्पणीभिः विभूषिता कन्नडभाषा विवरणम्)

# ಪ್ರಪಂಚಮಿಥ್ಯಾತ್ವ ಅನುಮಾನ ಖಂಡನಮ್

**(ಟೀಕಾ-ಟಿಪ್ಪಣಿಗಳ ಸಹಿತ ಕನ್ನಡದಲ್ಲಿ ವಿವರಣೆ)**

## ಡಾ. ಮಂಗಸೂಳಿ ಜಯತೀರ್ಥಾಚಾರ್ಯ

Published by
Pradnya Foundations
॥ ॐअसतोमा सद्गमय ॐतमसोमा ज्योतिर्गमय ॐमृत्योर्मा अमृतंगमय॥
Bangaluru-97
2014

॥श्रीलक्ष्मीवेंकटेशो विजयते॥
॥श्रीमध्वेशो विजयतेतराम्॥

श्रीमदानन्दतीर्थभगवत्पादाचार्य विरचितम्

प्रपंचमिथ्यात्व अनुमान खण्डनम्

(टीका-टिप्पणीभिः विभूषिता कन्नडभाषा विवरणम्)

ಪ್ರಪಂಚಮಿಥ್ಯಾತ್ವ ಅನುಮಾನ ಖಂಡನಮ್

(ಟೀಕಾ-ಟಿಪ್ಪಣಿಗಳ ಸಹಿತ ಕನ್ನಡದಲ್ಲಿ ವಿವರಣೆ)

ಡಾ. ಮಂಗಸೂಳಿ ಜಯತೀರ್ಥಾಚಾರ್ಯ

Published by
Pradnya Foundations
॥ ॐअसतोमा सद्गमय ॐतमसोमा ज्योतिर्गमय ॐमृत्योर्मा अमृतंगमय॥
Bangaluru-97
2014

# समर्पणम्

श्रीसत्यध्यानमुनि सत्पादसेवा सम्प्राप्त
वैभवान् श्रीमन्न्यायसुधाविशारदान् मम
मातामहान् चिंचोळि कृष्टाचार्यवर्यान्
पादाङ्घ्रौ इदं ज्ञान पुष्पं परमादरात्
समर्पयामि ।

-





# गुरोःसमर्पणम्

श्रीवेंकटरमणाचार्य पदासक्त वैभवान्
श्रीमध्वशास्त्रदुग्धाब्ध्यो सदानिरतान्
मम पितामहान् रामाचार्यगुरूणां
अस्तु एषा भक्तियुक्ता तव पादयोः सेवा ।

# ग्रन्थानुक्रमणिका

ಪ್ರಸ್ತಾವನೆ ..... 8

उपोद्घातः ..... 14

मंगलाचरणम् ..... 22

१. टीका मंगलाचरणम् ..... 23

२. शास्त्रैकदेशसम्बन्धेन अस्य ग्रन्थस्य प्रकरणत्वोपपादनम् ..... 27

२.१ प्रकरणस्य स्वपक्षसाधनप्रकारताऽपि प्रतिपादनम् ..... 32
३. ग्रन्थारम्भे मङ्गलाचरणाभाव प्रयुक्त न्यूनता शङ्कापरिहारः ..... 35
४. मायावादि उक्त प्रपञ्चमिथ्यात्व अनुमान अनुवादः ..... 53
४.१ अनुवदित मिथ्यात्वानुमानस्य दलकृत्यं ..... 56
४.१.१ मिथ्यात्वानुमाने विमतपदकृत्यम् ..... 56
४.१.२ मिथ्यात्वानुमाने व्यतिरेकव्याप्तिप्रदर्शनाभावे कारणकथनम् ..... 63
४.१.३ मिथ्यात्वानुमाने यत्तत्पदयोरावृत्त्यभावेऽपि विवक्षितार्थ सिद्धिः ..... 65
४.१.४ मिथ्यात्वानुमाने सम्प्रतिपन्न पदकृत्यम् ..... 68
४.२ प्रपञ्चमिथ्यात्वानुमाने पञ्चावयव अननुवाद कारणम् ..... 70
४.२.१ सत्यनाथीय इतः परं टीकायां टिप्पण्या भिन्नभिप्राय निरूपणम् ..... 74
५. मायावदिनोक्त प्रपञ्चमिथ्यात्व अनुमाने प्रतिज्ञा निराकरणम् ..... 76
५.१ मिथ्यात्वानुमाने मिथ्यापदं असत्ववाचित्वे आश्रयासिद्धत्वदोषः ..... 77
५.१.१ मिथ्यात्वमसत्वमिति पक्षाश्रयणेन दूषणे छलशङ्का तत्परिहारश्च ..... 90
५.२ मिथ्यात्व अनुमाने असत्त्वस्य मिथ्यात्वरूपत्वे अपसिद्धान्तः ..... 94
५.३. सर्वथा निर्वचनानर्हत्वस्य मिथ्यात्वरूपत्वे अप्रसिद्धविशेषणता ..... 97
५.४ सदसद्वैलक्षण्यस्य मिथ्यात्वरूपत्वे सिद्धसाधनत्व दोषः ..... 103
५.४.१ सदसद्वैलक्षण्यं नाम सद्विलक्षणं असद्विलक्षणं च ..... 105
५.४.२ सदसद्वैलक्षण्यं नाम सद्वैलक्षण्येन सह असद्वैलक्षण्यं ..... 109
५.४.३ सदसद्वैलक्षण्यं नाम सद्वैलक्षण्य विशिष्ट असद्वैलक्षण्यं ..... 112

५.४.४ सदसद्वैलक्षण्यं नाम सदसत्व अनाश्रयत्वं ..... 114

५.४.५ सिद्धान्तिनामनिष्टस्य सदसद्वैलक्षण्स्य मिथ्यात्वरूपत्वे अप्रसिद्धविशेषणतादोषः ..... 120
५.५ सत्यविवेकस्य मिथ्यात्वरूपत्वे सिद्धसाधनता ..... 124
५.५.१ सत्यविवेकं नाम सत्यभिन्नत्वं ..... 124
५.५.२ सत्यविवेकं नाम सत्यता अनाश्रयत्वं ..... 126
५.५.३ सत्यविवेकं नाम सत्यं अबाध्यं बाध्यं वा सत्यता निषेधत्वं ..... 130
५.५.३.१ अन्यथा विज्ञातस्य सम्यग् विज्ञानं बाध्यत्वरूप सत्यविवेकत्वे सिद्धसाधनता ..... 131
५.५.३.२ प्रतिपन्नोपाधौ त्रैकालिकसत्यतानिषेधस्य सत्यविवेकत्वे अन्योन्याश्रयता ..... 131
५.५.३.३ सत्त्वाभावस्य आश्रयासिद्धि प्रयोजकत्व समर्थनम् ..... 137
५.५.३.४ व्यावहारिक सत्वस्य आश्रयत्व प्रयोजकत्व शङ्का तत् निरासश्च ..... 140
५.५.३.५ सत्ता विना प्रतीतिगोचरत्वस्यैव आश्रयत्वप्रयोजकत्व शङ्का तन्निरासश्च ..... 150
५.५.३.६ निषेधं प्रति असत् आश्रयत्व निराकरणम् ..... 157
५.६ तत्वप्रदीपिकाकारोक्त मिथ्यात्व निर्वचनस्य निराकरणम् ..... 161
५.७. आश्रयासिद्धेः अदोषत्व शङ्का तन्निरासश्च ..... 165
६. मायावदिनोक्त प्रपञ्चमिथ्यात्व अनुमाने हेतु निराकरणम् ..... 169
६.१ लिङ्गदर्शनाभास विचारः ..... 169
६.१.१ दृश्यत्वस्य सत्वाभावे असत्वप्रसङ्गेन असिद्धत्व उपपादनम् ..... 170
६.१.२ दृश्यत्वस्य अनिर्वचनीयत्वे अन्यतरासिद्धिः ..... 175



६.१.३ दृश्यत्वसामान्यस्य हेतुत्वे अन्यतरासिद्धि ..... 176
६.१.४ दृग्जन्यफलाश्रयत्वस्य दृश्यत्वे असिद्ध्यादिदोषाः ..... 181
६.२ व्याप्तिभङ्ग विचारः ..... 193
६.२.१ व्याप्तिभङ्ग भेदवताम् निरूपणम् ..... 194
६.२.२ दृश्यत्वहेतोर्विरुद्धत्व समर्थनम् ..... 199
६.२.२.१ मूले पूर्वापर विरोध शङ्का तत्परिहारश्च ..... 208
६.२.२.२ दृश्यत्व हेतोः साध्य अभावेन व्याप्तिसमर्थनम् ..... 210
६.२.३ दृश्यत्व हेतोः अनैकान्तिकत्व समर्थनम् ..... 211
६.२.३.१ अभ्युपगमवादोयं सपक्ष सद्भावात् दृश्यत्व हेतोः वाद्यनैकान्तिकत्वम् ..... 211
६.२.३.२ असत्त्वसद्विविक्तयोः साध्ये दृश्यत्व हेतोः अनैकान्तिकत्वम् ..... 214
६.२.३.३ आत्मनः स्वप्रकाशत्वेन दृश्यत्वाभाव शङ्का ..... 216
६.२.३.४ आत्मनः दृश्यत्व समर्थनम् ..... 227
६.२.३.५ सोपाधिक दृश्यत्वव्यतिरेकावच्छिन्नस्य दृश्यत्वं स्यादेव आनन्दबोधोक्ति निरासः ..... 236
६.२.३.६ प्रकारान्तरेण आत्मनो दृश्यत्व समर्थनम् ..... 247
६.२.३.७ आत्मनो वृत्तिविषयत्वेऽपि दृश्यत्व अभाव इति वादं निराकरोति ..... 255
६.२.३.८ फलव्याप्यत्व अभावेन आत्मनो न दृश्यं इति मतं निराकरोति ..... 264
६.२.४ दृश्यत्व हेतोः अनध्यवसितत्व समर्थनम् ..... 270
६.२.४.१ जगतोऽभाव इति जगतः सत्व अभावः इति अनुवादस्य अनुमोदनम् ..... 271
६.२.४.२ जगतोऽभावे अनुमानस्य अभाव इति तर्के व्याप्त्युपपादनम् ..... 275
६.२.४.३ मूलस्य असिद्ध्यादिपरत्वेन पुनरुक्ति शङ्का निराकरणम् ..... 278
६.२.४.४ तर्कबाधितत्वेन प्राप्त कालात्ययापदिष्टत्व शङ्का निराकरणम् ..... 283
६.२.४.५ अनध्यवसितलक्षणस्य दृश्यत्व हेतोः समर्थनम् ..... 287
६.२.४.६ असिद्ध् अनध्यवसित लक्षणयोः भेदस्य समर्थनम् ..... 294
६.२.४.७ असत्यस्य असाधकत्वोपयोगिता समर्थनम् ..... 302
७. विश्वमिथ्यात्व अनुमानस्य अनवसरः ..... 330
७.१ मिथ्यात्वानुमानस्य प्रबलप्रमाणबाधोपपादनम् ..... 331
७.१.१ प्रपञ्चे त्रैकालिक अबाध्यत्वस्य आगमसिद्धत्व उपपादनम् ..... 333
७.१.२ प्रपञ्चे त्रैकालिक अबाध्यत्वस्य अङ्गीकारवादः ..... 342
७.२ मिथ्यात्वानुमानस्य प्रतिरोध उपपादनम् ..... 349
७.२.१ मिथ्यात्वानुमानस्य प्रकरणसम दोष प्रतिपादनम् ..... 350
७.२.१.१ मूले प्रतिपादित अनुमानस्य दलं कृत्यम् ..... 351
७.२.१.२ शुक्तिरजते दृग्विषयत्वरूप दृश्यत्व अभाव समर्थनम् ..... 353
७.२.१.३ दृग्व्यावर्तकत्वरूप दृगुल्लेख्यत्वमेव शुक्तिरजतस्येति समर्थनम् ..... 359
७.२.१.४ शुक्तिरजते दृग्विषयत्वरूप दृश्यत्वाभावे न विरुद्धादिवाद विरोधः ..... 365
७.२.२. प्रपञ्चमिथ्यात्व अनुमाने सप्रतिसाधनदोष उपपादनम् ..... 375
७.२.२.१ प्रपञ्चसत्यत्व अनुमाने प्रमाणपदकृत्यम् ..... 376
७.२.२.२ अनुमाने व्याप्ति अभिधान नियम निराकरणम् ..... 381
७.२.२.३ प्रमाणदृष्टत्व अनुमाने असिद्धिशङ्का निराकरणम् ..... 381
७.२.२.४ प्रमाणदृष्टत्व अनुमाने शङ्कितस्य आत्मत्वोपाधेः विकल्पेन निरासः ..... 385
७.२.२.५ प्रपञ्च सत्यत्वे दृग्दृश्यसम्बन्धं विनैव दृश्यत्व उपपादनम् ..... 389
७.२.२.६ दृग्दृश्यत्वयोः संयोगसम्बन्ध अङ्गीकृत्य दृश्यत्वोपपादनम् ..... 394
७.२.२.७ दृग्दृश्यत्वयोः समवायसम्बन्धमाश्रित्य दृश्यत्वोपपादनम् ..... 401
७.२.२.८ दृग्दृश्यत्वयोः संयोगसमवाय अतिरिक्त वास्त्व सम्बन्धमाश्रित्य दृश्यत्वोपपादनम् ..... 402
७.२.२.९ प्रपञ्च मिथ्यात्वेऽपि दृश्यत्वानुपपत्ति समर्थनम् ..... 405
८. विश्वमिथ्यात्व अनुमानस्य दृष्टान्तदूषण अवसरः ..... 413
८.१ मिथ्यात्व अनुमाने दृष्टान्ते साध्यवैकल्योपपादनम् ..... 414

८.१.१ शुक्तिरजत अनिर्वचनीयत्व साधक अर्थापत्ति निराकरणम्........ 416
८.१.२ आध्यासिक सम्बन्धं विना दृश्यत्वानुपपत्तेः अभाव समर्थनम्........ 425
८.२ मिथ्यात्व अनुमाने दृष्टान्ते साधनवैकल्योपपादनम्........ 428
९. मिथ्यात्व अनुमाने उपाधि दोषोद्भावनम्........ 429
९.१ प्रमाणविरुद्धत्व उपाधेः साध्यव्यापकत्व समर्थनम्........ 441
९.२ प्रमाणविरुद्धत्व उपाधेः साधन अव्यापकत्व समर्थनम्........ 447
९.३ प्रमाणविरुद्धत्वस्यैव मिथ्यात्वे प्रयोजकत्व समर्थनम्........ 450
१०.अनुमान सम्बन्धिनि व्यवहृताः पदानां लक्षणकथनम्........ 451
१०.१ पक्षलक्षण कथनम्........ 453
१०.२ सपक्षलक्षण कथनम्........ 460
१०.३ विपक्षलक्षण कथनम्........ 463
१०.४ प्रतिज्ञालक्षण कथनम्........ 464
१०.५ हेतुलक्षण कथनम्........ 467
१०.६ दृष्टान्तलक्षण कथनम्........ 469
११. प्रकरणान्ते मङ्गल पद्यं........ 471
१२. टीकान्ते मङ्गल पद्यम्........ 479
परिशीलित ग्रन्थसूचि........ 481
पारिभाषिक शब्दार्थ कोशः........ 482



॥श्रीलक्ष्मीवेंकटेशो विजयते॥
॥श्री मध्वेशो विजयतेतराम्॥

# ಪ್ರಸ್ತಾವನೆ

ಜೀವಬ್ರಹ್ಮೈಕ್ಯ, ಬ್ರಹ್ಮನಿರ್ಗುಣತ್ವ ಮತ್ತು ಜಗನ್ಮಿಥ್ಯಾತ್ವಗಳು ಅದ್ವೈತವೇದಾಂತದ ಮೂಲಭೂತ ಪ್ರಮೇಯಗಳಾಗಿರುತ್ತವೆ. ಈ ಪ್ರಮೇಯಗಳನ್ನು ಪ್ರತ್ಯೇಕವಾಗಿ ತತ್ವಜ್ಞಾನದ ತಳಹದಿಯಲ್ಲಿ ವಿಮರ್ಷಿಸಿ ನಿರಾಕರಿಸಲು, ಶ್ರೀಮದಾನಂದತೀರ್ಥ ಭಗವತ್ಪಾದರು ಖಂಡನತ್ರಯನಾಮಕ ಮೂರು ಪ್ರಕರಣಗ್ರಂಥಗಳನ್ನು ರಚಿಸಿರುತ್ತಾರೆ. ಅವುಗಳಲ್ಲಿ ಪ್ರಪಂಚಮಿಥ್ಯಾತ್ವಖಂಡನಂ ನಾಮಕ ಈ ಪ್ರಕರಣ ಗ್ರಂಥವು ಅದ್ವೈತವೇದಾಂತದ ವಿಶ್ವಮಿಥ್ಯಾತ್ವ ಪ್ರಮೇಯವನ್ನು ವಿಮರ್ಷಿಸಿ, ಅದನ್ನು ನಿರಾಕರಿಸಲು ಪ್ರವೃತ್ತವಾಗಿರುತ್ತದೆ. ಪ್ರಕರಣ ಗ್ರಂಥವೆಂದರೆ, ಶಾಸ್ತ್ರದಲ್ಲಿಯ ಕೆಲವೊಂದು ವಿಷಯಗಳನ್ನು ತೆಗೆದುಕೊಂಡು ಅವುಗಳ ವಿಚಾರಮಂಥನೆ ಮಾಡುವದು. ಅದರಂತೆ ಪ್ರಕೃತ ಪ್ರಕರಣಗ್ರಂಥದಲ್ಲಿ ಶಾಸ್ತ್ರದಲ್ಲಿ ಪ್ರತಿಪಾದಿಸಿದ ವಿಶ್ವ ಸತ್ಯತ್ವ ಪ್ರಮೇಯದ ಬಗ್ಗೆ ವಿಚಾರಮಂಥನ ಮಾಡಲಾಗುವದು.

"यतो इमानि भूतानि जायन्ते" ಎಂಬ ಶೃತಿಯಂತೆ, ಮತ್ತು "अथाऽतो ब्रह्मजिज्ञासा" ಎಂದು ಭಗವಾನ್ ವೇದವ್ಯಾಸ ಮಹರ್ಷಿಗಳು ರಚಿಸಿದ ಮೊದಲಿನ ಸೂತ್ರದಂತೆ ಬ್ರಹ್ಮನ ಜಿಜ್ಞಾಸೆಗೆ ಹೇತುಭೂತವಾದ ಗುಣಪರಿಪೂರ್ಣತ್ವದ ಸಂಭಾವನೆಯಾಗಿ "जन्माद्यस्य यतः" ಎಂಬ ಎರಡನೆ ಸೂತ್ರದಿಂದ, ಪ್ರಪಂಚದ ಸೃಷ್ಟ್ಯಾದಿಗಳಿಗೆ ನಿಮಿತ್ತಕಾರಣನು ಎಂದು ಪರಬ್ರಹ್ಮನ ಲಕ್ಷಣವನ್ನು ಶಾಸ್ತ್ರದಲ್ಲಿ ಹೇಳಲಾಗಿದೆ. ಶಾಸ್ತ್ರದಲ್ಲಿ ಪ್ರತಿಪಾದಿಸಿದ ಈ ಪ್ರಮೇಯವು ಸತ್ಯವೆನಿಸಬೇಕಾದರೆ, ಈ ಜಗತ್ತು ಪಾರಮಾರ್ಥಿಕ ಸತ್ಯವಾಗದೆ ಸಾಧ್ಯವಿಲ್ಲ. ಅಂದರೆ, ಈ ಪಂಚಭೇದದಿಂದ ಕೂಡಿದ ಜಗತ್ತು ತ್ರಿಕಾಲದಲ್ಲೂ ಸತ್ಯವಾಗಿದೆ ಎಂದರ್ಥ. ಅಂದರೆ, ಈ ಜಗತ್ತು ಅಸತ್ಯ ಏನಿಸಿದರೆ ಅದಕ್ಕೆ ಪರಮಸತ್ಯ ಏನಿಸಿದ ಬ್ರಹ್ಮನು ಅದಕ್ಕೆ ಹೇಗೆ ಕಾರಣನಾಗಬಲ್ಲನು? .

ಮತ್ತು ಇದನ್ನು, ಪರಪಕ್ಷದವರು ಪ್ರಪಂಚಮಿಥ್ಯಾತ್ವ ವಿಷಯದಲ್ಲಿ ಪ್ರಮಾಣರೂಪವಾಗಿ ಪ್ರತಿಪಾದಿಸುವ "विमतं मिथ्या दृश्यत्वात् जडत्वात् परिच्छिन्नत्वात् शुक्तिरजतवत्" ಎಂಬ ಅನುಮಾನಕ್ಕೆ ಆಭಾಸತೆಯನ್ನು ಹುಟ್ಟಿಸದ ಅಥವಾ ದೋಷಗಳನ್ನು ತೋರಿಸದ ಹೊರತು ಸಮರ್ಥಿಸಲು ಸಾಧ್ಯವಿಲ್ಲ. ಇದರ ಹಿನ್ನೆಲೆಯಲ್ಲಿ ಶ್ರೀಮದಾಚಾರ್ಯರು ಈ ಪ್ರಕರಣವನ್ನು

ರಚಿಸಿದ್ದಾರೆ. ಅದರಂತೆ ವಿಶ್ವಮಿಥ್ಯಾತ್ವ ವಾದವನ್ನು ನಿರಾಕರಿಸಲು ಈ ಪ್ರಕರಣಗ್ರಂಥ ಇರುತ್ತದೆ. मानाधीना मेय सिद्धिः ಎಂಬ ನ್ಯಾಯದಂತೆ, ಪ್ರಮಾಣವಿಲ್ಲದೆ ಯಾವುದನ್ನು ಸಿದ್ಧಮಾಡಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟು ಈ ಪ್ರಕರಣ ಗ್ರಂಥದಲ್ಲಿ ಶ್ರೀಮದಾಚಾರ್ಯರು, ಪರಪಕ್ಷದವರು ಪ್ರತಿಪಾದಿಸಿದ ಪ್ರಪಂಚಮಿಥ್ಯಾತ್ವ ಅನುಮಾನದ ಪ್ರತಿಜ್ಞಾಹೇತುದೃಷ್ಟಾಂತಭೂತ ಅಂಗಗಳನ್ನು ಪ್ರಾಮಾಣಿಕವಾಗಿ ದೂಷಿಸಿ, ಹಾಗೂ ಆ ಅನುಮಾನಕ್ಕೆ ಪ್ರಬಲಪಮಾಣ ಬಾಧ ಹಾಗೂ ಅದನ್ನು ಪ್ರತಿರೋಧಿಸುವ ಪ್ರಮಾಣಗಳನ್ನು ತೋರಿಸಿ, ಆ ಅನುಮಾನದ ಬಗ್ಗೆ ಆಭಾಸತೆಯನ್ನು ಹುಟ್ಟಿಸಿ, ಅದಲ್ಲದೆ ವಿಶ್ವ ಸತ್ಯತ್ವದ ಬಗ್ಗೆ ಸಾಧಕ ಪ್ರಮಾಣಗಳನ್ನು ಪ್ರದರ್ಶಿಸಿ, ಶಾಸ್ತ್ರದಲ್ಲಿ ಪರತಿಪಾದಿಸಿದ ಪ್ರಪಂಚ ಸತ್ಯತ್ವ ಪ್ರಮೇಯವನ್ನು ಪೋಷಿಸುತ್ತಾರೆ.

ಪ್ರಕೃತದಲ್ಲಿ, "विमतं मिथ्या दृश्यत्वात् शुक्तिरजतवत्" ಎಂಬ ಅನುಮಾನದಲ್ಲಿ
विमतं मिथ्या ಇದು ಪ್ರತಿಜ್ಞಾ. ಇಲ್ಲಿ विमतं ಪದದಿಂದ ಪ್ರತಿಪಾದಿಸಲ್ಪಟ್ಟ ವಾದಿಪ್ರತಿವಾದಿಗಳ ಮಧ್ಯೆ ವಿವಾದಾಸ್ಪದವಾದ ಜಗತ್ತು ಪಕ್ಷ ವೆನಿಸುವದು. ಪಕ್ಷವೆಂದರೆ ಎಲ್ಲಿ ಸಾಧ್ಯಧರ್ಮವನ್ನು ಸಾಧಿಸಲಾಗುವ ಧರ್ಮಿ. ಮತ್ತು मिथ्या ಇದು ಸಾಧ್ಯ ಧರ್ಮ. ಮೇಲಿನ ಅನುಮಾನದ दृश्यत्वात् ಪದವು ಹೇತುವನ್ನು ಅಂದರೆ ವ್ಯಾಪ್ತಿ ಸಂಬಂಧದಿಂದ ಸಾಧ್ಯದ ಜ್ಞಾನಮಾಡಿಕೊಡುವ ಧರ್ಮವನ್ನು ಸೂಚಿಸುತ್ತದೆ. ಅದರಂತೆ ಮೇಲಿನ ಅನುಮಾನದಲ್ಲಿಯ शुक्तिरजतवत् ಪದವು ದೃಷ್ಟಾಂತವನ್ನು ಅಂದರೆ, ಸಾಧ್ಯ ಮತ್ತು ಹೇತುಗಳಿಗಿರುವ ವ್ಯಾಪ್ತಿ ಸಂಬಂಧವನ್ನು ತಿಳಿದುಕೊಳ್ಳಲು ಸಹಾಯಕವಾದ ಆಶ್ರಯ ಸ್ಥಲವನ್ನು ಸೂಚಿಸುತ್ತದೆ.

ಇಲ್ಲಿ ವಾದಿಪ್ರತಿವಾದಿಗಳ ವಿವಾದಾಸ್ಪದ ವಿಷಯದಿಂದ ಕೂಡಿದ ವಿಶ್ವವನ್ನು ಪಕ್ಷ ಮಾಡಿಕೊಂಡು, ಅಲ್ಲಿ ಮಿಥ್ಯಾತ್ವ ಧರ್ಮವನ್ನು ದೃಶ್ಯತ್ವ ಹೇತುವಿನಿಂದ ಸಾಧಿಸಲಾಗುವದು. ದೃಶ್ಯತ್ವ ಎಂದರೆ ಯಾವುದೆಲ್ಲ ಅನುಭವಗೋಚರವಾದದ್ದು ಎಂದರ್ಥ. ಅದರಂತೆ ಈ ವಿವಾದಾಸ್ಪದವಾದ ಜಗತ್ತು ಅನುಭವಗೋಚರವಾದ್ದರಿಂದ ಮಿಥ್ಯಾ ಆಗಿದೆ. ಉದಾಃ ಹೇಗೆ ಶುಕ್ತಿಯಲ್ಲಿ ಕಾಣುವ ರಜತವು ಕಾಣಿಸುತ್ತದೆ ಆದರೆ ಅದು ವಸ್ತುತಃ ಇರುವದಿಲ್ಲ. ಈ ರೀತಿಯಾಗಿ ಪರಪಕ್ಷದವರು ತಾವು ಪ್ರತಿಪಾದಿಸಿದ ಅನುಮಾನದಿಂದ ಪ್ರಪಂಚ ಮಿಥ್ಯಾತ್ವವನ್ನು ಪ್ರತಿಪಾದಿಸುತ್ತಾರೆ.

ಪರಪಕ್ಷದವರು ಪ್ರತಿಪಾದಿಸುವ ಅನುಮಾನವನ್ನು ಈ ಪ್ರಕರಣದಲ್ಲಿ ಸಖೋಲವಾಗಿ ವಿಮರ್ಶಿಸಿ ಖಂಡಿಸಲಾಗಿದೆ. ಆದ್ದರಿಂದ ಈ ಗ್ರಂಥದ ಪ್ರಪಂಚ ಅನುಮಾನಖಂಡನಂ ಎಂಬ ಹೇಸರು ತುಂಬ ಸಾರ್ಥಕವಾಗಿದೆ.

ಭಾವಗಂಭೀರದಿಂದ ಕೂಡಿದ ತಿಳಿಯಲು ಕಠಿನವಾದ ಈ ಪ್ರಕರಣಗ್ರಂಥಕ್ಕೆ ಶ್ರೀಪದ್ಮನಾಭತೀರ್ಥಯೋಗಿಗಳು ಹಾಗೂ ಶ್ರೀಮಜ್ಜಯತೀರ್ಥರು ಮಾಡಿರುವ



ವ್ಯಾಖ್ಯಾನರೂಪ ಟೀಕೆಗಳು ಇವೆ. ಅದರಲ್ಲಿ ಶ್ರೀಮಜ್ಜಯತೀರ್ಥರ ಟೀಕಾ ಗಹನಾರ್ಥದಿಂದ ಕೂಡಿದ್ದರಿಂದ ಸಜ್ಜನರ ಬೋಧನೆಗಾಗಿ, ಶ್ರೀವ್ಯಾಸತೀರ್ಥರು ಮಂದಾರ ಮಂಜರೀ, ಶ್ರೀಪಾಂಡುರಂಗೀ ಕೇಶವಾಚಾರ್ಯರು ಗುರುರಾಜೀಯ, ಶ್ರೀಶ್ರೀನಿವಾಸತೀರ್ಥರು ದುರ್ಗಮಾರ್ಥ ವ್ಯಾಖ್ಯಾ ಹಾಗೂ ಶ್ರೀಸತ್ಯನಾಥರು ಪರಶು ಎಂಬ ವ್ಯಾಖ್ಯಾನಗಳನ್ನು ರಚಿಸಿದ್ದಾರೆ. ಈ ಟಿಪ್ಪಣಿಗಳು ಜಟಿಲವಾದ ಟೀಕಾವಾಕ್ಯಗಳನ್ನು, ಜ್ಞಾನ ಪಿಪಾಸು ಸಜ್ಜನರಿಗಾಗಿ ವಿಶದೀಕರಿಸಿ, ಅದರಲ್ಲಿಯ ಪ್ರತಿಪಾದಿಸಿದ ಶಾಸ್ತ್ರೀಯ ವಿಷಯಗಳನ್ನು ಸೂರ್ಯಕಿರಣಗಳಿಂದ ಕಮಲಪುಷ್ಪ ಅರಳುವಂತೆ, ವಿವರಿಸುತ್ತವೆ.

ಈ ಪ್ರಕೃತಗ್ರಂಥದಲ್ಲಿ, ಈ ರೀತಿಯಲ್ಲಿ ಪ್ರತಿಪಾದಿತ ಟೀಕಾಟಿಪ್ಪಣಿಗಳ ಅರ್ಥಗಳನ್ನು ಆಕಲಿಸಿ ಗುರುಗಳ ಪರಮಾನುಗ್ರಹದಿಂದ ಪ್ರೇರಿತನಾಗಿ, ಪ್ರಪಂಚಮಿಥ್ಯಾತ್ವಾನುಮಾನಖಂಡನದ ಮೇಲೆ ನಮೂದಿಸಿದ ಎಲ್ಲ ಟೀಕಾಟಿಪ್ಪಣಿಗಳ ಸಮೇತ ಕನ್ನಡದಲ್ಲಿ ಅನುವಾದಮಾಡಲು ಪ್ರವರ್ತಿತನಾಗಿದ್ದೇನೆ. ಭಾವಗಂಭೀರತೆಯಿಂದ ಕೂಡಿದ ಈ ಪ್ರಕರಣ ಗ್ರಂಥ ಓದುಗರ ತಿಳಿಯುವಳಿಕೆಯ ಸೌಕರ್ಯಕ್ಕಾಗಿ, ಅಲ್ಲಲ್ಲಿ ವಿಷಯಕ್ಕೆ ಉಚಿತವಾದ ಪರಿಚ್ಛೇದಗಳನ್ನು ಮಾಡಿ ಅದರಲ್ಲಿ ಉಪ ಪರಿಚ್ಛೇದಗಳನ್ನೂ ಸಹ ಮಾಡಿದ್ದೇನೆ.

ಈಗ ಈ ಗ್ರಂಥದಲ್ಲಿ ಪ್ರತಿಪಾದಿತ ವಿಷಯಗಳನ್ನು ಒಟ್ಟು ಹನ್ನೆರಡು ಪರಿಚ್ಛೇದಗಳಲ್ಲಿ ಇಡಲಾಗಿದೆ. ಅವುಗಳಲ್ಲಿಯ ವಿಷಯಗಳನ್ನು ಸಂಕ್ಷೇಪವಾಗಿ ಈ ಕೆಳಗಿನಂತೆ ವಿವರಿಸಬಹುದುಃ

೧. ಮೊದಲಿನ ಪರಿಚ್ಛೇದದಲ್ಲಿ ಟೀಕಾಮಂಗಲಾಚರಣವನ್ನು ವಿವರಿಸಲಾಗಿದೆ. ಮಂಗಲಾಚರಣದಲ್ಲಿ ಶ್ರಿಯಃಪತಿಯನ್ನು ವಿಶ್ವದ ಹುಟ್ಟಸ್ಥಿತಿಲಯದ ನಿಮಿತ್ತಕಾರಣತ್ವವನ್ನು ಪ್ರತಿಪಾದಿಸುವದರಿಂದ ಈ ಪ್ರಕರಣದ ಉದ್ದೇಶವನ್ನು ಕೂಡ ಸೂಚಿಸಿದ್ದಾರೆ.

೨. ಎರಡನೆ ಪರಿಚ್ಛೇದದಲ್ಲಿ ಈ ಗ್ರಂಥಕ್ಕೆ ಶಾಸ್ತ್ರೈಕ್ಯ ಸಂಬಂಧವನ್ನು ತೋರಿಸಿ, ಈ ಗ್ರಂಥಕ್ಕೆ ಪ್ರಕರಣತ್ವವನ್ನು ಉಂಟುಮಾಡುವದು, ಹಾಗೆಯೆ ಸ್ವಪಕ್ಷ ಸಾಧನ ಪ್ರಕಾರವನ್ನು ಕೂಡ ನಿರುಪಿಸಲಾಗಿದೆ.

೩. ಇನ್ನು ಮೂರನೆ ಪರಿಚ್ಛೇದದಲ್ಲಿ, ಗ್ರಂಥಾರಂಭದಲ್ಲಿ ಶ್ರೀಮದಾಚಾರ್ಯರು ಮಂಗಲಾಚರಣ ಮಾಡದೆ ಇರುವದನ್ನು ನ್ಯೂನತೆ ಎಂದು ಶಂಕಿಸಿ ಅದರ ಪರಿಹಾರವನ್ನು ನಿರೂಪಿಸಲಾಗಿದೆ.

೪. ನಾಲ್ಕನೆ ಪರಿಚ್ಛೇದದಲ್ಲಿ, ಮಾಯಾವಾದಿ ಪ್ರತಿಪಾದಿಸಿದ ಪ್ರಪಂಚ ಮಿಥ್ಯಾತ್ವಾನುಮಾನದ ತ್ರವಯವ ಅನುವಾದ, ಅನುವದಿತ ಅನುಮಾನದ ದಲಕೃತ್ಯ, ಹಾಗೆಯೆ ಶ್ರೀಮದಾಚಾರ್ಯರು ಮಾಯಾವಾದಿಗಳು ಪ್ರತಿಪಾದಿಸಿದ

ಮಿಥ್ಯಾತ್ವಾನುಮಾನವನ್ನೆ ಇದ್ದಕ್ಕಿಂದಂತೆ ಏಕೆ ಅನುವಾದಿಸದ ಕಾರಣ, ಎಂಬ ಮುಂತಾದ ವಿಷಯಗಳನ್ನು ವಿವರಿಸಲಾಗಿದೆ.

೫. ಐದನೆ ಪರಿಚ್ಛೇದದಲ್ಲಿ ಮಿಥ್ಯಾತ್ವಾನುಮಾನದ, "विमतं मिथ्या" ಎಂಬ ಪ್ರತಿಜ್ಞೆಯನ್ನು, ಮಿಥ್ಯಾ ಪದದ ಎಷ್ಟೊಂದು ಪರ್ಯಾಯ ಅರ್ಥಗಳ ಹಿನ್ನೆಲೆಯಲ್ಲಿ ಯಥಾವತ್ತಾಗಿ ನಿರಾಕರಿಸಲಾಗಿದೆ.

೬. ಆರನೆ ಪರಿಚ್ಛೇದದಲ್ಲಿ ಮಿಥ್ಯಾತ್ವಾನುಮಾನದ ಹೇತುವಾದ ದೃಶ್ಯತ್ವವನ್ನು ನಿರಾಕರಿಸಲಾಗಿದೆ. ಅದರಲ್ಲಿ ಮೊದಲಿಗೆ ದೃಶ್ಯತ್ವ ಪದಾರ್ಥದ ಮೇಲಿನ ದೋಷಗಳನ್ನು ತೋರಿಸಿ, ತದನಂತರ ಸಾಧ್ಯ ಮತ್ತು ಹೇತುವಿನಲ್ಲಿಯ ವ್ಯಾಪ್ತಿ ಸಂಬಂಧ ಮೇಲಿನ ದೋಷಗಳಾದ: ವಿರುದ್ಧ, ಅನೈಕಾಂತಿಕ ಹಾಗೂ ಅನಧ್ಯವಸಿತಗಳನ್ನು ಕ್ರಮೇಣವಾಗಿ ಪ್ರಸ್ಥಾಪಿಸಲಾಗಿದೆ.

೭. ಏಳನೆ ಪರಿಚ್ಛೇದದಲ್ಲಿ ಮಿಥ್ಯಾತ್ವಾನುಮಾನಕ್ಕೆ ಬರುವ ಪ್ರಬಲ ಪ್ರಮಾಣ ಬಾಧ ಹಾಗೂ ಪ್ರತಿರೋಧವನ್ನು ಪ್ರತಿಪಾದಿಸಿ, ಮಿಥ್ಯಾತ್ವಾನುಮಾನವನ್ನು ನಿರಾಕರಿಸಲಾಗಿದೆ. ಹಾಗೂ ಪ್ರಪಂಚ ಸತ್ಯತ್ವಗ್ರಾಹಿ ಪ್ರಮಾಣಗಳನ್ನು ಪ್ರತಿಪಾದಿಸಲಾಗಿದೆ.

೮. ಎಂಟನೆ ಪರಿಚ್ಛೇದದಲ್ಲಿ, ಮಿಥ್ಯಾತ್ವಾನುಮಾನದ ದೃಷ್ಟಾಂತವನ್ನು ದೂಷಿಸಲಾಗಿದೆ.

೯. ಇನ್ನು ಒಂಬತ್ತನೆ ಪರಿಚ್ಛೇದದಲ್ಲಿ ಮಿಥ್ಯಾತ್ವಾನುಮಾನಕ್ಕೆ ಸರ್ವವಾದಿ ಸಮ್ಮತವಾದ ಉಪಾಧಿ ದೋಷವನ್ನು ತೋರಿಸಲಾಗಿದೆ.

೧೦. ಹತ್ತನೆ ಪರಿಚ್ಛೇದದಲ್ಲಿ ಈ ಗ್ರಂಥದಲ್ಲಿ ವ್ಯವಹರಿಸಲ್ಪಟ್ಟ ಪಕ್ಷ, ಸಪಕ್ಷ, ವಿಪಕ್ಷ, ಪ್ರತಿಜ್ಞಾ, ಹೇತು ಹಾಗೂ ದೃಷ್ಟಾಂತ ಎಂಬ ಪಾರಿಭಾಷಿಕ ಪದಗಳ ಸ್ವರೂಪ ತಿಳಿದುಕೊಳ್ಳದೆ, ಗ್ರಂಥದಲ್ಲಿ ಪ್ರತಿಪಾದಿಸಿದ ದೋಷಗಳ ಗಹನತೆ ತಿಳಿಯಲು ಕಷ್ಟವಾಗುವದರಿಂದ ಅವುಗಳ ಲಕ್ಷಣಗಳನ್ನು ವಿವರಿಸಲಾಗಿದೆ.

೧೧. ಹನ್ನೊಂದನೆ ಪರಿಚ್ಛೇದದಲ್ಲಿ, ಗ್ರಂಥ ಅಂತ್ಯದಲ್ಲಿ ಶ್ರೀಮದಾಚಾರ್ಯರು ಮಾಡಿದ ಮಂಗಲ ಪದ್ಯದ ವಿವರಣೆ ಇರುತ್ತದೆ. ಈ ಮಂಗಲ ಪದ್ಯದಲ್ಲಿ ಯಾವನ ಪ್ರಸಾದಕ್ಕಾಗಿ ಮತ್ತು ಯಾರ ಪ್ರೀತಿಗಾಗಿ ಈ ಪ್ರಕರಣವನ್ನು ಮಾಡಲ್ಪಟ್ಟಿತೋ, ಆ ರಮಾಪತಿಯನ್ನು ಸ್ತುತಿ, ನಮಸ್ಕಾರಗಳೊಂದಿಗೆ ಶ್ರೀಮದಾಚಾರ್ಯರು ಒಲಿಸುತ್ತಾರೆ.

೧೨. ಹನ್ನೆರಡನೆ ಪರಿಚ್ಛೇದದಲ್ಲಿ ಟೀಕಾ ಅಂತ್ಯದ ಮಂಗಲಪದ್ಯವನ್ನು ವಿವರಿಸಲಾಗಿದೆ. ಇಲ್ಲಿ ಯಾರಿಂದ, ಈ ಜಗತ್ತಿಗೆ ಉತ್ಪತ್ತಿ, ಸ್ಥಿತಿ ಮತ್ತು ನಾಶ ಉಂಟಾಗುತ್ತದೊ ಆ ರಮಾನಾಥನ ಜಯಕಾರ ಮಾಡಲಾಗಿದೆ.

ಈಗ ಈ ಗ್ರಂಥದ ಅಧ್ಯಯನ ಸಂಬಂಧವಾಗಿ ಕೆಲವೊಂದು ಅಂಶಗಳನ್ನು ಸ್ಪಷ್ಟಪಡಿಸಲು ಇಷ್ಟಪಡುತ್ತೇನೆ. ಶ್ರೀಮದಾಚಾರ್ಯರ ಈ ಪ್ರಕರಣ ಗ್ರಂಥ ಚಿಕ್ಕದಾದರೂ ತಿಳಿಯಲು ತುಂಬ



ಕಷ್ಟ ಸಾಧ್ಯ. ಪ್ರಾಯಃ ಶ್ರೀಮಜ್ಜಯತೀರ್ಥರ ಟೀಕಾ ವಿನಾ ಈ ಗ್ರಂಥದ ಗಹನತೆಯ ಅರಿವು ಉಂಟಾಗುವದಿಲ್ಲ. ಹಾಗೂ ಟೀಕೆಯನ್ನು ತಿಳಿಯಲು ಟಿಪ್ಪಣಿಗಳ ಅಧ್ಯಯನ ಅತ್ಯವಶ್ಯಕ. ಹೀಗೆ ಈ ಗ್ರಂಥದ ತಿಳಿಯ ಬಯಸುವವರು, ಈ ಟೀಕಾಟಿಪ್ಪಣಿಗಳ ಹಿನ್ನೆಲೆಯಲ್ಲಿ ಈ ಗ್ರಂಥದ ಅಧ್ಯಯನ ಮಾಡಬೇಕು. ಅದಕ್ಕಾಗಿಯೆ, ಈ ಗ್ರಂಥದಲ್ಲಿ ಮೂಲ ಹಾಗೂ ಟೀಕಾಟಿಪ್ಪಣಿಗಳ ವಾಕ್ಯಗಳನ್ನು ಕೊಟ್ಟು ಅವುಗಳ ಅನುವಾದ ಮಾಡಲಾಗಿದೆ.

ಈ ಗ್ರಂಥವನ್ನು ಕೆಳಗಿನ ರೀತಿಯಲ್ಲಿ ಅಧ್ಯಯನ ಮಾಡಿದಲ್ಲಿ ಗ್ರಂಥವನ್ನು ತಿಳಿಯಲು ಅನುಕೂಲವಾಗುವದು:

೧. ಮೊದಲಿಗೆ ಮೂಲವನ್ನು ಮಾತ್ರ ಹಿಡಿದು ಅದರ ಅನುವಾದವನ್ನು ಅವಲೋಕಿಸಬೇಕು. ಆಗ ಗ್ರಂಥದ ಮೇಲುಮೇಲಿನ ಅರ್ಥವಾಗುತ್ತದೆ.

೨. ಮೂಲ ಮತ್ತು ಶ್ರೀಪದ್ಮನಾಭತೀರ್ಥರ ಟೀಕಾ ಹಿಡಿದು ಅವುಗಳ ಅನುವಾದವನ್ನು ಅವಲೋಕಿಸಿದಲ್ಲಿ ಕಿಂಚಿತ್ ಗ್ರಂಥದ ಪರಿಚಯವಾಗಲು ಪ್ರಾರಂಭವಾಗುತ್ತದೆ.

೩. ಇಲ್ಲಿ, ಮೂಲವನ್ನು ಟೀಕಾ ಸಹಿತ ಅವುಗಳ ಅನುವಾದವನ್ನು ಅವಲೋಕಿಸಬೇಕು. ಆಗ ಗ್ರಂಥದ ಸ್ವಲ್ಪ ಗಹನತೆಯ ಅರ್ಥವಾಗುತ್ತದೆ.

೪. ಇಲ್ಲಿ ಮೂಲ, ಟೀಕಾ, ಶ್ರೀಶ್ರೀನಿವಾಸತೀರ್ಥರ ಟಿಪ್ಪಣಿ ಸಹಿತ ಅನುವಾದವನ್ನು ಅವಲೋಕಿಸಬೇಕು. ಆಗ, ಮೂಲ ಹಾಗು ಟೀಕಾ ಗ್ರಂಥಗಳ ನಿಲುಮೆ, ನ್ಯಾಯ ಪರಿಭಾಷೆಯ ಗಹನತೆ ಹಾಗೂ ಪ್ರಕ್ರಿಯಾ ಸಮೇತ ಶ್ರೀಮದಾಚಾರ್ಯರ ಮೂಲ ಹಾಗೂ ಟೀಕಾ ವಾಕ್ಯಗಳ ಅರ್ಥ ಸಿಗುತ್ತದೆ.

೫. ಇಲ್ಲಿ ಮೂಲ, ಟೀಕಾ ಹಾಗೂ ಶ್ರೀವ್ಯಾಸತೀರ್ಥರ ಮಂದಾರ ಮಂಜರಿ ಟಿಪ್ಪಣಿ ಸಹಿತ ಅನುವಾದವನ್ನು ಅವಲೋಕಿಸ ಬೇಕು. ಆಗ ನ್ಯಾಯ ಹಾಗೂ ತರ್ಕ ಪರಿಭಾಷೇಯ ಹಿನ್ನಲೆಯಲ್ಲಿ ಮೂಲ ಹಾಗೂ ಟೀಕಾ ವಾಕ್ಯಗಳ ಅರ್ಥ ಸಿಗುತ್ತದೆ.

೬. ಇಲ್ಲಿ ಮೂಲ ಟೀಕಾ ಹಾಗೂ ಶ್ರೀಕೇಶವಾಚಾರ್ಯರ ಟಿಪ್ಪಣಿ ಸಮೇತ ಅನುವಾದವನ್ನು ಅವಲೋಕಿಸಬೇಕು. ಈ ಟಿಪ್ಪಣಿಯಲ್ಲಿ ಶ್ರೀವ್ಯಾಸತೀರ್ಥರ ಟಿಪ್ಪಣಿಯಲ್ಲಿ ಸಿಗದ ಅಥವಾ ಅವರು ವ್ಯಾಖಾನಿಸದ ಭಾಗಗಳಿಗೆ ವ್ಯಾಖ್ಯಾನ ಮಾಡಲಾಗಿದೆ. ಹಾಗೂ ಕೆಲವು ಕಡೆ ಶ್ರೀವ್ಯಾಸತೀರ್ಥರ ವ್ಯಾಖ್ಯಾನಕ್ಕೆ ಅನುಕೂಲವಾಗುವ ನ್ಯಾಯ ಪ್ರಕ್ರಿಯೆಯನ್ನು ಕೂಡ ವಿಷದಿಕರಿಸುತ್ತದೆ. ಹೀಗಾಗಿ ನ್ಯಾಯ ತರ್ಕಶಾಸ್ತ್ರದ ಹಿನ್ನೆಲೆಯಲ್ಲಿ ಈ ಗ್ರಂಥದ ಅಭ್ಯಾಸ ಮಾಡುವವರಿಗೆ ಈ ಟಿಪ್ಪಣಿಯು ಜ್ಞಾನದೌತಣವೆ ಸರಿ.

೭. ಇಲ್ಲಿ ಮೂಲ ಟೀಕಾ ಹಾಗೂ ಮೇಲಿನ ಎಲ್ಲ ಟಿಪ್ಪಣಿಗಳ ವಿಮರ್ಷಾತ್ಮಕ ಅಧ್ಯಯನ, ಮತ್ತು ಶ್ರೀಸತ್ಯನಾಥರ ಟಿಪ್ಪಣಿ ಅನುವಾದದ ಜೊತೆ ಅವಲೋಕಿಸಬೇಕು. ಶ್ರೀಸತ್ಯನಾಥರು ಮೇಲಿನ ಟಿಪ್ಪಣಿಕಾರರ ಅವಲೋಕಿಸದ ಕೆಲವೊಂದು ಟೀಕಾವಾಕ್ಯಗಳಿಗೆ

ಅಭೂತಪೂರ್ವವಾದ ವ್ಯಾಖ್ಯಾನ ಮಾಡುತ್ತಾರೆ. ಇಲ್ಲಿಗೆ ಶ್ರೀಮದಾಚಾರ್ಯರ ಮೂಲ ಗ್ರಂಥದ ಗಹನತೆಯ ಅರ್ಥ ಅಧ್ಯಯನಶೀಲರಿಗೆ ಆಗುತ್ತದೆ.

ಹೀಗೆ ಮೇಲಿನ ಏಳು ಹಂತಗಳ ಅಧ್ಯಯನ ಪದ್ಧತಿ ನಮೂದಿಸಿದ್ದರೂ ಓದುಗರ ಯೋಗ್ಯತೆಯ ಅನುಗುಣವಾಗಿ ಕೆಲವೊಂದು ಹಂತಗಳ ಅಧ್ಯಯನವನ್ನು ಏರುಪೇರು ಮಾಡಬಹುದು.

ಈ ಗ್ರಂಥದಲ್ಲಿ ತಿಳಿದು ಅಥವಾ ತಿಳಿಯದೆ ಮುದ್ರಣಾದಿ ದೋಷಗಳು ಉಂಟಾಗಿರವ ಸಾಧ್ಯತೆಗಳಿವೆ. ಹಾಗಾಗಿ ಸಜ್ಜನ ಜಿಜ್ಞಾಸುಗಳು, ಯಾವದು ಸಾಧು, ಅದನ್ನು ಹಂಸಕ್ಷೀರನ್ಯಾಯದಂತೆ ಸ್ವೀಕರಿಸಿ ದೋಷಗಳೇನಾದರು ಕಂಡುಬಂದರೆ, ತಿದ್ದುಪಡೆಗಾಗಿ ನಮ್ಮ ದೃಷ್ಟಿಗೆ ತರಬೇಕು ಎಂದು ವಿನಮ್ರವಾಗಿ ಪ್ರಾರ್ಥಿಸುತ್ತೇನೆ.

ಕೊನೆಯದಾಗಿ, ಈ ಗ್ರಂಥದ ಉಪೋದ್ಘಾತವನ್ನು ಸಂಪೂರ್ಣವಾಗಿ ಸಂಸ್ಕೃತ ವ್ಯಾಕರಣ ಹಿನ್ನೆಲೆಯಲ್ಲಿ ಪರಿಶೀಲಿಸಿ ಕೆಲವೊಂದು ವ್ಯಾಕರಣ ದೋಷಗಳ ತಿದ್ದುಪಡೆ ಮಾಡಿಕೊಟ್ಟು, ನನ್ನ ಸಂಸ್ಕೃತ ಬರವಣಿಗೆಯನ್ನು ಸುಧಾರಿಸಲು ಅನುಕೂಲ ಮಾಡಿಕೊಟ್ಟು ಪ್ರೋತ್ಸಾಹಿಸಿದಕ್ಕೆ, ವೀಜಾಪೂರದ ಪಿಡಜೆ ಹಾಯಸ್ಕೂಲದ ನಿವೃತ್ತ ಪ್ರಾಂಶುಪಾಲರಾದಂಥ ತಿ. ಕೂ. ಸೌ ಪರಿಮಲಾ ಕೃಷ್ಣರಾವ ಕುಲಕರ್ಣಿ (ಪರಿಮಲಾ ಅತ್ಯಾ) ಇವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

---

ಶ್ರೀಜಯತೀರ್ಥಾಚಾರ್ಯ ಗು. ಮಂಗಸೂಳಿ
ಮನ್ಮಥನಾಮ ಸಂವಸ್ತರ, ವೈಶಾಖ ಮಾಸ,
ಶುಕ್ಲಪಕ್ಷ ಚತುರ್ದಶೀ ತಿಥಿ, ಶನಿವಾರ
ನೃಸಿಂಹ ಜಯಂತೀ
ದಿನಾಂಕಃ ೨-೫-೨೦೧೫
ಜಯಂತೀನಗರ (ಐನಾಪೂರ) ಕರ್ನಾಟಕ



॥श्रीलक्ष्मीवेंकटेशो विजयते॥
॥श्रीमध्वेशो विजयतेतराम्॥

यत् कृपाकारुण्यबलात् श्रीमध्वशास्त्रं भाति मया।
अस्तु एषा भक्तियुक्ता रामाचार्यगुरु पादयोः सेवा॥

# उपोद्घातः

अद्वैतानाम् ब्रह्मात्मैक्यं, ब्रह्मणः निर्गुणत्वं, जगन्मिथ्यात्वं च मूलभूत अभिप्रेत प्रमेयानि। तानि निराकरणाय श्रीमदानन्दतीर्थ भगवत्पादः खण्डनत्रयनामक त्रीणि प्रकरण ग्रन्थानि रचितवान्। तत्र जगन्मिथ्यात्वाख्य प्रमेयस्य निराकरणाय प्रवृत्तं खण्डनत्रयेषु प्रपञ्चमिथ्यात्वखण्डननामकं इदं प्रकरणं।

"यतो इमानि भूतानि जायन्त" इति श्रुत्या, "अथाऽतो ब्रह्मजिज्ञासा" इति भगवता सूत्रकृता जिज्ञासा हेतुभूतस्य गुणपूर्णत्वस्य सम्भावकतया "जन्माद्यस्य यतः" इति द्वितीय सूत्रेण च, जगज्जन्मादिकारणत्वं परस्य ब्रह्मणः लक्षणं अभिहितम्। तत् च जगत् सत्यतां विना वास्तवं न भवति। सा च परोदीरित जगत् मिथ्यात्व विषये, "विमतं मिथ्या दृश्यत्वात् जडत्वात् परिच्छिन्नत्वात् शुक्तिरजतवत्" इति यत् अनुमानस्य प्रमाणतया प्रतिपादयति, तत् आभासता व्युत्पादनेन विना उपपद्यत। अतः जगन्मिथ्यात्व वाद निरासाय इदं प्रकरणम्। मानाधीना मेय सिद्धिः इति न्यायेन न च मानं विना मेय सिद्धि इति अभिप्रायेण च, अस्मिन् प्रकरण ग्रन्थे, श्रीमदाचार्याः, परोदीरित मिथ्यात्व अनुमानस्य प्रतिज्ञाहेतुदृष्टान्तभूत अङ्गानां दूष्य, तस्य अनुमानस्य प्रमाणबाध प्रतिरोधं च, दर्शयितया आभासत्व व्युत्पादयन्, विश्व सत्यत्व साधकानि च प्रमाणान्यपि प्रदर्श्य, प्रपञ्चसत्यतां पोषयति।

अत्र अनुमानं च प्रतिज्ञाहेतुउदाहरणोपनयनिगमनरूप पञ्चावयवोपेतम्। प्रतिपादनाय पक्षवचनम् प्रतिज्ञा। साध्यधर्मवान् धर्मि पक्षः। यत् हेतुना जनयितव्या स साध्यधर्मः। साधनत्वं अभिव्यंजक विभक्त्यन्त लिङ्गवचनम् हेतुः। व्याप्ति ग्रहण स्थलं दृष्टान्तः। व्याप्तिदर्शन पुरस्सरं सम्यग् दृष्टान्त अभिधानं उदाहरणम्। दृष्टान्त उपमानेन लिङ्गस्य पक्षे उपसंहारः उपनयः। हेतु पुरस्सरं पक्षे साध्यो उपसंहारो निगमनम्।

यद्यपि परेण स्वग्रन्थे, पञ्चावयव मिथ्यात्व अनुमान प्रयोगः विहितः तथापि उपनयनिगमनयोः असाधनांगत्वात् श्रीमदाचार्येण प्रतिज्ञाहेतुउदाहरणरूपेण अवयवत्रय एव अनुवादः कृतः यथा "विमतं मिथ्या दृश्यत्वात् यदित्थं तत्था यथा सम्प्रतिपन्नम्" इति। उपनय वाक्यस्य हेतुवाक्येन गतार्थत्वात् निगमनस्य च प्रतिज्ञावाक्येन चरितार्थत्वात् न साधनांगत्वं इति ज्ञातव्यम्।

प्रकृत त्रवयव अनुवदित अनुमाने "विमतं मिथ्या दृश्यत्वात् शुक्तिरजतवत्" इत्यत्र, विमतं मिथ्या इति पक्षवचनः प्रतिज्ञा। वादिप्रतिवादि विमति विषयीभूतं विश्वं पक्षः। मिथ्यात्वं साध्यं। दृश्यत्वं हेतुः। शुक्तिरजतवत् उदाहरणः। शुक्तिरजतं दृष्टान्तम्।

अत्र, वादिप्रतिवादि विमति विषयीभूत विश्वं पक्षीकृत्य तत्र मिथ्यात्वं दृश्यत्व हेतुना साधयति। दृश्यत्वं नाम अनुभवगोचरत्वम्। विश्वं अनुभवगोचरत्वात् मिथ्या, यथा शुक्तिरजतं प्रतिभाति न तु वस्तुतः वर्तते इति। एवं मिथ्यात्व अनुमानेन प्रपञ्च मिथ्यात्वं समर्थयति।

एतत् अनुमान खण्डनं नाम प्रतिज्ञाहेतुउदाहरणदोष व्युत्पादनम्। अतो एतत् ग्रन्थस्य मिथ्यात्वानुमानखण्डनं नाम अन्वर्थकम्।

भावगम्भीरतया ज्ञातुं अशक्यं एतत् प्रकरण ग्रन्थस्य, श्रीपद्मनाभाख्ययोगिना कृता निर्मला भावप्रकाशिका टीका, मन्दानां अवबोधाय श्रीमज्जयतीर्थैः कृता श्रीमदाचार्यगम्भीराशय विशदकारिणी शास्त्रार्थ समुत्पादिता टीका च वर्तन्ते। साऽपि श्रीमज्जयतीर्थ कृता टीका गहनार्थतया विवरणार्थं व्याख्यान सापेक्षा। अतः तद् व्याख्यानस्य मन्दानां दुरवबोधात् टीका गाम्भीर्यं उद्धर्तुंक्षमाः, श्रीव्यासतीर्थाः मन्दारमञ्जरीं, श्रीपाण्डुरङ्गीकेशवाचार्याः गुरुराजीयाभिधा विषमपदवाक्यार्थविवरणं, श्रीश्रीनिवासतीर्थाः दुर्गमार्थ व्याख्या, श्रीसत्यनाथतीर्थाः परशु इति व्याख्यानानि विरचयामासुः।

तासु टिप्पणीषु, श्रीश्रीनिवासतीर्थीय टिप्पण्या सुलभसुलभया टिकाक्षरार्थ विज्ञानाय अत्यन्त उपयुक्ततया वर्तते। केचित् स्थलेषु व्यासतीर्थीय मन्दारमञ्जर्यागत वाक्यसाम्येन च तत् अनुकुर्वाणा विविधपूर्वा विचार गर्भिता च हृदयं आवर्जयति।

श्रीव्यासतीर्थीय मन्दारमञ्जर्या तु सुन्दरवचनविन्यासया बह्वर्थगर्भितया न्यायप्रक्रिया समेता टीका गहनार्थ विशदकारिणी भवति। श्रीपाण्डुरंगी केशवाचार्यैः कृता गुरुराजीयभिधा टिप्पणी च मधुरमधुरया बालानपि बोधजन्या अनन्वयालङ्कार उदाहरणभूतया शैल्या, मन्दारमञ्जर्या निलम्बित स्थलेषु सुललितवाण्या टीकाभिप्रायं विशदयन्ति। श्रीसत्यनाथीय परशु टिप्पण्या व्याख्यान शैली तु अपूर्वा, सूक्ष्मांश विवेचन दक्षा च श्लाघ्यतेतमाम्। इमे टीका ग्रन्थेषु इतर व्याख्यानकारैः अनाविष्कृतं विक्षिप्तभागं प्रदर्श्य साधुयुक्तिभिः समर्थयन्ति।

अत्र प्रकृते, एवं प्रतिपादित टीकाटिप्पण्यार्थान् अवलोक्य गुर्वानुग्रहेण प्रेरितस्सन् अस्य प्रकरण ग्रन्थस्य एतान् टिकाटिप्पण्या सहितानि च कन्नडभाषा विवरणं कर्तुं प्रवर्तितोस्मि। ग्रन्थ अवगाहन सौकर्याय, तत्र तत्र विषयादिकोचित परिच्छेदानि कृत्वा तथा एकैक परिच्छेदे प्रकरणादिकं अपि निर्ममास।

इदानीम् अस्मिन् ग्रन्थे प्रतिपादित प्रधानांशान् साररूपेण निरुपितु प्रयतामहे। अस्मिन् ग्रन्थे द्वादश परिच्छेदानि वर्तते। तानि च अस्मिन् क्रमोऽयं दृश्यते। तथाहि–

१. प्रथम परिच्छेदे टीकामंगलाचरणस्य विवरणम् वर्तते। मङ्गलाचरणे श्रियःपतिं, विश्वोदयस्थेमलयहेतुं इति विशेषित्वा अस्य प्रकरणस्य उद्देशप्रकारमपि सूचितं भवति।

२. द्वितीय परिच्छेदे, शास्त्रैकसम्बन्धं दर्शयित्वा अस्य ग्रन्थस्य प्रकरणत्व उपपादनं, तथा स्वपक्षसाधन प्रकारताऽपि निरूपिताः।

३.तृतीय परिच्छेदे, ग्रन्थारम्भे मङ्गलाचरण अभाव न्यूनता शङ्कां अनूद्य तत् परिहारश्च अपि निरूपिताः।

४. चतुर्थ परिच्छेदे, मायावादि उक्त प्रपञ्चमिथ्यात्वानुमानस्य "विमतं मिथ्या दृश्यत्वात् यदित्थं तत्तथा यथा सम्प्रतिपन्नम्" इति त्रवयव अनुवादः, अनुवदित अनुमानस्य दलकृत्यं, तथा परोदीरित प्रपञ्चमिथ्यात्व अनुमानस्य यथा अननुवादकारणं इत्यादि विषयाः सन्ति।

५. पञ्चम परिच्छेदे, मायावादिनोक्त प्रपञ्चमिथ्यात्व अनुमाने "विमतं मिथ्या" इति प्रतिज्ञा वचनं सकाशात् निराकरणम् वर्तते।

अत्र साध्यमानं मिथ्यात्वं पदार्थस्य एवं अधोलिखित पर्यायान् विकल्प्य पक्ष वचनम् निराकरोति। तथाहि–



• मिथ्यात्व पदं असत्त्ववाचित्वे जगतः अत्यन्त असत्त्व आपत्या मिथ्यात्वरूप साध्यधर्मस्य आश्रयशून्यतया आश्रयासिद्धि आपत्तेः। किंच जगतः असद्विलक्षणत्वस्य सिद्धान्तत्वेन जगत असत्वस्य तद्विरुद्धत्वेन तत् साधने अपसिद्धान्त आपत्तेः।

• सर्वथा निर्वचनानर्हत्वस्य मिथ्यात्वरूपे सर्वस्यापि निर्वचनार्हत्वेन निर्वचनानर्हत्वस्य एतत् अनुमानात् प्राग् असिद्धत्वेन तत् साधने अप्रसिद्ध विशेषणत्व आपत्तेः।

• सदसद्वैलक्षण्य मिथ्यात्वरूपत्वे सिद्धसाधनताः– तत्रापि सदसद्वैलक्षण्यस्य पदार्थस्य एवं अधोलिखित पर्यायान् विकल्प्य पक्ष वचनम् निराकरोति। तथाहि–

- सदसद्वैलक्षण्यं नाम सदसत् यत् एकं तत् भिन्नत्वम्:–अत्र सदेक स्वभावे जगति सदसद्रूपतायाः मया अनंगीकारेण सद्रूपं यत् एकं तत् भिन्नत्वस्य मां प्रति सम्मतत्वेन तत् साधने सिद्धसाधनता आपत्तेः।
- सदसद्वैलक्षण्यं नाम सद्विलक्षणम् असद्विलक्षणं चः–अत्र असद्भिन्नत्वांशस्य प्रपञ्चे मां प्रति सिद्धत्वेन तत् साधने सिद्धसाधनता आपत्तेः।
- सदसद्वैलक्षण्यं नाम सद्विलक्षणेन सह असद्वैलक्षण्यम्:–अत्र पर्वतः शिलात्मकः अग्निमांश्च इत्यादिवत् सिद्धस्य असिद्धेन सह उच्यमानस्यापि सिद्धत्वात् इति न्यायेन सिद्धसाधनस्य दुर्वारात्।
- सदसद्वैलक्षण्यं नाम सद्वैलक्षण्य विशिष्ट असद्वैलक्षण्यंः–अत्र सतोऽपि प्रपञ्चस्य सदन्तर विलक्षणत्व अङ्गीकारेण सद्भिन्नत्वस्य मया अपि अङ्गीकारेण सद्भिन्नत्वविशिष्ट असद्भिन्नत्वस्य सिद्धत्वेन तत् साधने सिद्धसाधनता आपत्तेः।
- सदसद्वैलक्षण्यं नाम सदसत्व अनाश्रयत्वंः–तत्रापि सदसत्व अनाश्रयत्वं पदार्थस्य एवं अधोलिखित पर्यायान् विकल्प्य पक्ष वचनम् निराकरोति। तथाहि–
  - सदसत्वरूपं यद्विशिष्टं तत् अनाश्रयत्वं साध्यम्:–अत्र सत्वैकस्वभावस्य प्रपञ्चस्य सदसत्वस्य मयापि अनङ्गीकारेण सदसत्व अनाश्रयत्व साधने सिद्धसाधनता आपत्तेः।
  - सत्व अनाश्रयत्वं असत्व अनाश्रयरूपं धर्मद्वयम् साध्यम्:– अत्र असत्व अनाश्रयत्वांशस्य मां प्रति सिद्धतया सिद्धासाधनता आपत्तेः।
  - सत्व अनाश्रयत्वविशिष्टं असत्व अनाश्रयत्वं साध्यम्:–अत्र घटादेः देशकालादिपरिच्छिन्नस्य अन्य देशकालयोः सत्व अनाश्रत्वस्य एतद्देशकालयोः असत अनाश्रयत्वस्य च त्वया अपि अङ्गीकारेण सत्व अनाश्रयत्वविशिष्ट असत्व अनाश्रयत्वस्य सिद्धत्वेन तत् साधने सिद्धसाधनत्व आपत्तेः।
  - सर्वथा सत्वानधिकरणत्वे सति असत्वानाधिकरणत्वे सति सदसत्वानाधिकरणत्वं साध्यम्:–अत्र सर्वथा सत्वानाश्रयत्वे सति असत्वानाश्रयत्वे सति सदसत्त्वानाश्रयत्वस्य एतत् अनुमानात् प्राग् असिद्धत्वेन तत् साधकत्वे अप्रसिद्ध विशेषणापत्तेः।

• सिद्धान्तीनाम् अनिष्टस्य सदसद्वैलक्षण्यस्य मिथ्यात्वरूपत्वे एतत् अनुमानात् प्राग् असिद्धत्वेन तत् साधकत्वे अप्रसिद्धविशेषणता दोषः स्यात् एव।

• सत्यविवेकस्य मिथ्यात्वरूपत्वे सिद्धसाधनता:–तत्रापि सत्यविवेकस्य पदार्थस्य एवं अधोलिखित पर्यायान् विकल्प्य पक्ष वचनम् निराकरोति। तथाहि–

• सत्यविवेकं नाम सत्यभिन्नत्वम्:–अत्र सत्यस्यापि प्रपञ्चस्य सत्यान्तरभिन्नताया: मया अङ्गीकारेण प्रपञ्चे सत्यभिन्नत्वस्य मां प्रति सिद्धत्वेन तत् साधने सिद्धसाधनता आपत्ते:।

• सत्यविवेकं नाम सत्यता अनाश्रयत्वम्:–अत्रापि सत्यविवेकस्य पदार्थस्य एवं अधोलिखित पर्यायान् विकल्प्य पक्ष वचनम् निराकरोति। तथाहि–

• सत्यत्वं नाम अर्थक्रियादिलक्षणम्:–अत्र प्रपञ्चे अर्थक्रियासामर्थ्यादिलक्षणसत्वस्य त्वयाऽपि अंगीकृतत्वेन तत् अनाश्रयत्व साधने अपसिद्धान्तापत्ते:।

• व्यवहारातीतत्वलक्षण पारमार्थिकत्वम्:–अत्र व्यवहारातीतत्वलक्षण पारमार्थिकत्व अनधिकरणत्वस्य प्रपञ्चे मया अपि अङ्गीकारेण तत् साधने सिद्धसाधनता आपत्ते:।

• सत्यविवेकं नाम सत्यं अबाध्यं बाध्यं वा सत्यता निषेधत्वम्:–अत्र अपि अधोलिखित पर्यायान् विकल्प्य पक्ष वचनं निराकरोति।

• अन्यथा विज्ञातस्य सम्यक् विज्ञानं बाध्यत्वरूप सत्यविवेकत्वे सिद्धसाधनता:– अत्र, मिथ्यात्व क्षणिकत्वादिना विज्ञातस्य प्रपञ्चस्य अक्षणिकत्वमिथ्या प्रकारक बाधकज्ञान विषयत्वेन अस्माभि: अपि अङ्गीकृतत्वेन सिद्धसाधनत्वात्।

• प्रतिपन्नोपाधौ त्रैकालिक सत्यतानिषेधस्य सत्यविवेकत्वे अन्योन्याश्रयता:–अत्रापि सत्यविवेकस्य पदार्थस्य एवं अधोलिखित पर्यायान् विकल्प्य पक्ष वचनम् निराकरोति। तथाहि–

• मिथ्यात्व लक्षणे सत्तामात्र निषेध: :–तथात्वे व्यावहारिक सत्वस्यापि अभाव आपत्त्या तदाश्रयेण अनाश्रयत्व समर्थन भङ्गान् आपत्ते:।

• मिथ्यात्व लक्षणे पारमार्थिकत्व निषेध: :–तथात्वे पारम्मर्थिक ज्ञानं तन्निषेधत्वलक्षण बाधक ज्ञानं, न च अवाच्यत्वरूप पारमार्थिकत्वज्ञानं इति परस्पर ज्ञानार्थं परस्पर ज्ञान अपेक्षायां अन्योन्याश्रयापत्ते:।

नापि भ्रान्तिसिद्ध असत्ताव्यावहारिकी सत्ता इति द्वितीय पक्ष: सम्भवति। तथापि भ्रान्ति सिद्धस्य अस्तित्वे भ्रान्तित्वस्य अयोगात्।

सत्ता नास्ति इति असत्वस्यैव व्यावहारिक सत्ता स्वीकारेण अनाश्रयत्व परिहार अनुपपत्ते:।

• सत्त्वाभावस्य आश्रयासिद्धि प्रयोजकत्व समर्थनम्:–तथाहि–

न च प्रतीतिसाध्यमात्रस्यैव आश्रयत्वे प्रयोजकत्वेन सत्वस्य तत्र अप्रयोजकत्वेन जगत: सत्व अभावेऽपि प्रतीयमानत्वेन आश्रयत्व प्रयोजकीभूताया: प्रतीते: विद्यमानत्वेन मिथ्यात्वरूप साध्यधर्मं प्रति आश्रयत्व सम्भवात् न आश्रय असिद्धि: इति वाच्यम्।



तथा सति सुरभिता साधने गगनारविन्दस्य आश्रयत्व आपत्त्या तच्च आश्रयासिद्धि: इति वाच्यम्।

न च गगनारविन्दस्य निरुपाख्यत्वेन आश्रयत्व प्रयोजन प्रतीते: एव अभावेन न सुरभितासाधने तस्य आश्रयत्वं इति वाच्यम्।

तथापि शब्दात् गगनारविन्दस्य सत्तप्रतीतिदशायां तस्य आश्रयत्व उपपत्त्या तत्र सुरभिता साधने आश्रयासिद्धे: अनुद्घाटनीयत्व आपत्ते:।

• व्यावहारिक सत्वस्य आश्रयत्व प्रयोजकत्व शङ्का तत् निरासश्च:– तथाहि–

न चेष्टापत्ति इति वाच्यम्। तथा सति तस्य सत् अनुमानत्व आपत्त्या इष्टापत्ते: वक्तुं अशक्यत्वात्।

न च अङ्गान्तर वैकल्यात् न सत् अनुमानत्वं इति वाच्यम्। अकाल्पनिक अङ्गसाकल्यस्य त्वन्मते कुत्राऽपि अभावात्। काल्पनिक अङ्गसाकल्यस्य च सर्वत्र सौलभ्यात्। सर्वस्यापि अनुमानस्य दुष्टताया एव प्रसङ्गेन किंचित् दुष्टं किंचित् अदुष्टं इति दुष्टादुष्ट विभागभङ्ग आपत्ते:।

न च अङ्गसाकल्यस्य काल्पनिकत्वेऽपि यत्र अङ्गसाकल्यं वादिप्रतिवादिभ्यां उपगतम् तत् साधनम्। यत्र तु न, न तत् साधनं इति विभागसम्भवात् न तत् भङ्गापत्ति इति वाच्यम्। तथात्वे भ्रान्तवाद्यादि आरब्ध कथाभासे वादिप्रतिवादिनो: अङ्गसाकल्य अभ्युपगमसत्वेन एतदीय असत्साधनदूषणयो: अपि दुष्टत्व आपत्ते:। किञ्च अङ्गसाकल्यस्य कल्पनिकत्वेऽपि वादिप्रतिवादिभ्यां अङ्गसाकल्यस्य अभ्युपगतिमात्रेण साधनस्य दुष्टत्व व्यवस्थापत्ते:, यत्र वादिप्रतिवादिनो: अङ्गसाकल्य अभ्युपगम: तत्र साधनस्य अदुष्टत्वप्राप्तौ अपि प्रकृत अनुमानाङ्गसाकल्यस्य त्वत्संमतत्वेऽपि मया तत् अनभ्युपगमेन वादिप्रतिवादि संमतत्व अभावेन अदुष्टत्वप्रयोजक अभावापत्त्या दृश्यत्व अनुमानस्य अदुष्टत्व अभावापत्ते:।

• तत्वप्रदीपिकाकारोक्त मिथ्यात्व निर्वचनस्य निराकरणम्:–अत्रापि एवं अधोलिखित पर्यायान् विकल्प्य पक्ष वचनम् निराकरोति। तथाहि–

• स्वसमानौ अधिकरण अत्यन्त अभाव प्रतियोगित्वं अभिमतम् :–अत्र शशविषाणादे: अपि स्वरूपेण अत्यन्त अभावप्रतियोगित्व अतिरिक्त असत्व अभावेन तत् साधने असत्व आपत्त्या अपसिद्धान्तापत्ते:।

• सदसद्विलक्षणस्वरूप अनुपमर्देन पारमार्थिकत्वाकारेण अत्यन्त अभाव प्रतियोगित्वं वा :– तथात्वे अनिर्वचनीयत्व आपत्त्या तत् पक्ष उक्तदोषापत्ते:।

६. षष्टम परिच्छेदे मायावादिनोक्त प्रपञ्चमिथ्यात्व अनुमाने दृश्यत्व हेतु निराकरणं वर्तते। अत्र आद्ये दृश्यत्व हेतुलिङ्गदर्शनाभासं दर्शयित्वा, आनन्तरं व्याप्तिभङ्ग दूषणानि प्रदर्शयति।

अत्र लिङ्गदर्शनाभास विचारे, दृश्यत्व पदार्थस्य एवं अधोलिखित पर्यायान् विकल्प्य दृश्यत्व हेतुंलिङ्गं आभासीकरिष्यति। तथाहि–

• दृश्यत्वस्य सत्यत्वं अनुपपन्नम्:– तथाहि– दृश्यत्वे दृश्यत्वस्य आवृत्तौ अज्ञान असिद्ध्यापत्त्या तत्र तद्वृत्तौ तत्रैव व्यभिचार आपत्त्या दृश्यत्व सत्यत्व अनुपपत्ते:।

• दृश्यत्वस्य सत्वाभावे असत्व प्रसङ्गेन वादिरीत्या स्वरूप असिद्ध्यापत्ते:।

• दृश्यत्वस्य अनिर्वचनीयत्वे, अनिर्वचनीय दृश्यत्वस्य प्रपञ्चे प्रतिवादि असंमतत्वेन च तद्रीत्या असिद्ध्यापत्ते:।

• दृश्यत्व सामान्यस्य हेतुत्वे अन्यतर असिद्धिः :– तथाहि–

न च साधारण प्रयुक्त हेतोः विशेषविकल्पेन निराकरणे, पर्वतोऽग्निमान् धूमात् इति अनुमानेऽपि किम् एतद्देशलसंल्लग्नो धूमो हेतुः किं वा नैतद्देशकालसंलग्नः। न आद्य। तथात्वे दृष्टान्ते एतद्देशकालसंलग्न धूमस्य असत्वेन साधन विकलत्वात्। न द्वितीयः। तथात्वे नैतद्देशकालसंलग्नो धूमः स्यात् स्वपक्षे असत्वात् असिद्धिः इति, विशेषविकल्पेन निराकरण कर्तुं शक्यत्वेन, सर्व अनुमान उच्छेद आपत्त्या तस्य असंभवेन धूम अनुमाने अविवक्षितविशेष धूमसामान्यस्य हेतुत्ववत्, दृश्यत्व अनुमानेऽपि अविवक्षित विशेषधूम सामान्यस्यैव हेतुत्व अभ्युपगमात् तस्य वादिप्रतिवादि संमतत्वात् न असिद्धिः इति वाच्यम्।

धूमद्वये धूमसामान्यस्य वादिप्रतिवादि संमतत्वेन धूम अनुमाने तथा परिहार उपपत्तौ अपि अनिर्वचनीयस्य स्वत एव प्रतिवादिनं प्रति असिध्या असिद्धाश्रयस्य सामान्यस्यापि असिद्धत्वेन सत्य अनिर्वचनीय दृश्यत्वयोः दृश्यत्व सामान्यस्य वादिप्रतिवादि संमतत्व अभावेन दृश्यत्व अनुमाने तथा परिहार अनुपपत्तेः।

• दृग्जन्यफलाश्रयत्वस्य दृश्यत्वे असिद्ध्यादिदोषाः :– तथाहि–

किंच वृत्तिव्याप्यत्वस्य साधारणस्य विपक्षभूत आत्मन्यापि अङ्गीकृतत्वेन अनैकान्तिकत्व आपत्त्या दृश्यत्वस्य तद्रूपत्व असंभवेन दृग्जन्यफलाश्रयत्वरूपत्वेन तत्रापि फलस्य व्यवहाररूपत्वे तस्य विपक्ष आत्मन्यपि वृत्या अनैकान्तिकत्व आपत्त्या ज्ञाततारूपस्यैव अङ्गीकार्यत्वात्। दृग् जन्यज्ञाततारूप फलाश्रयत्वस्य ज्ञातता अङ्गीकारिणः अस्मान् प्रति असिद्धत्वेन प्रतिवादि असिध्यापत्तेः।

इदानीं व्याप्तिभङ्ग विचारः। विरुद्धः,अनैकान्तिका, अनध्यवसिताः व्याप्तिभङ्गभेदाः वर्तन्ते। तत्र साध्य सम्बन्ध अभावे सति, तत् अभावेन एव सम्बन्ध संज्ञा विरुद्धः। विरुद्धः विपरीत निश्चयं करोति। साध्य तत् अभाव उभय संम्बन्ध संज्ञा अनैकान्तिकः। अनैकान्तिकः सन्देहं उत्पादयति। साध्य तत् अभाव उभय संबन्ध अभाव संज्ञा अनध्यवसितः। अनध्यवसितः तु ज्ञानमेव न जनयति। एवं व्याप्तिभङ्ग दूषणानि दृश्यत्वहेतोः समर्थयति। तथाहि–

• दृश्यत्वहेतोर्विरुद्धत्व समर्थनम् :– तथाहि–

साध्यमान मिथ्यात्वस्य अपसिद्धान्तभयेन असत्वरूपत्व अनुपपत्त्या अनिर्वचनीयरूपतया अनिर्वचनीयस्यैव सपक्षस्य वक्तव्यतया तस्य अनिर्वचनीयतया सिद्धि अभावेन पक्षीभूत वियदादि व्यतिरिक्तस्य सर्वस्यापि विपक्षतया शुक्तिरजतादौ विपक्षे वर्तमानत्वात् दृश्यत्वस्य साध्य अभाव व्याप्तत्व उपपत्त्या विरुद्धत्व आपत्तेः।

• दृश्यत्व हेतोः अनैकान्तिकत्व समर्थनम्:– तथाहि–

वस्तुतः सपक्ष अभावेऽपि परेण सपक्षस्य अङ्गीकृतत्वात्। तथा विपक्षीभूतस्य आत्मनोऽपि दृश्यत्वात्, वादि अनैकान्तिकः। अन्यथा वेदान्तानां वैयर्थ्यापत्तेः।

अथवा मिथ्यात्वं असत्वं वा अनिर्वचनीयत्वं वा सद्विविक्तं वा वक्तव्यं। तत्र अनिर्वचनीयत्व साध्ये विरुद्धत्व उक्त्वा, असत्व सद्विविक्तयोः अनैकान्तिकत्वं अनेन उच्यते। तथाहि–

आत्मनः अपराधीन प्रकाशत्वात् तस्य दृश्यत्वं न युक्तम्। तत्र ज्ञानमात्रस्य आत्मनि आवृत्ति प्रसङ्गात्, "सर्वप्रत्ययवेद्ये च ब्रह्मरूपे व्यवस्थिते" इत्यादि स्ववचन विरोधश्च स्यात्।

किंच "आत्मा न पराधीन प्रकाशः" इति वृत्तिविषयो न वा?



आद्ये दृश्यत्व आपत्तिः। मूकं अहं इतिवत् स्वक्रियाविरोधश्च। किंच यथा दण्डिनो दर्शने देवदत्तोऽपि दृष्ट एव, एवं अवच्छिन्न आत्मनो दृश्यत्वेऽपि आत्मा दृष्ट एव। तथापि शुद्धेन रूपेण न दृश्यत इत् चेत् मा दर्शि। सत्येऽपि आत्मनि गतं दृश्यत्वम्। अनैकान्तिकं स्थितं एव।

द्वितीये यत्र मिथ्यात्व अभावः तत्र दृश्यत्व अभावः इति व्यतिरेक असिद्ध्या सन्दिग्ध अनैकान्तिकः।

• दृश्यत्व हेतोः अनध्यवसितत्व समर्थनम्:– तथाहि–

किंच साध्यमान मिथ्यात्वस्य असत्यत्वे, जगतः अभावः इति पक्ष वचनं स्यात्। तर्हि तदन्तर्गत अनुमानस्यापि अभावः स्यात्। तथा च तर्क प्रतिरुद्दत्वेन दृश्यत्व हेतुः अविशेषात्, न विद्यते अध्यवसायो यस्मात् अनध्यवसितः भवति।

तथापि, यत्र जगतः अभावः तत्र अनुमानस्य अभावः इत्यत्र दृष्टान्त अभावेन व्याप्ति अयोगात् इति कथं आपादनं इति वाच्यम्। यदि जगन्मिथ्या स्यात् तदा तदन्तर्गत अनुमानमपि मिथ्या स्यात् यथा गन्धर्वगतनगरगत भवनम् इति सामान्यव्याप्ति सम्भवात्। अथवा यदि दृश्यत्वं जगति वर्तमानम् तत् मिथ्यात्वं प्रतिपादयेत् तदा दृश्यत्व अधिकरणत्व अविशेषात् अनुमानस्यापि मिथ्यात्व प्रतिपादयेत् अन्यथा दृश्यत्व हेतुज्ञान असिद्धेः।

७. सप्तम परिच्छेदे, मिथ्यात्वानुमानस्य प्रबल प्रमाणबाधः तत् प्रतिरोधश्च दर्शितानि भवन्तु। अस्य संक्षेपेण निरुपणं इत्थं वर्तते। तथाहि–

• प्रमाणबाधः–यथायथं प्रत्यक्ष अनुमान आगम सिद्धान् पदार्थान् पक्षीकृत्य, प्रपञ्चमिथ्यात्वं अनुमातव्यं अन्यथा आश्रयासिद्धिः स्यात्। प्रमाणानि च तत् सत्यता अवगाहिनि भवति। अतः प्रपञ्चमिथ्यात्वानुमानं प्रत्यक्षादि विरुद्धत्वात् अस्य धर्मिग्राहक प्रमाण बाधः भवति। अत्र कालत्रय अबाध्यता लक्षण सत्यता न प्रत्यक्षादि गोचरा इति वाच्यम्। तर्हि ब्रह्मणः सत्यता अपि कुतः सिद्धः स्यात् । "तत् सत्यं" इत्यादि आगम वाक्यात् इति चेत्। तर्हि "विश्वं सत्यं" इत्यादि आगमवाक्यादिना तत् समं इति, तत् विरोधात् प्रमाण बाधः एव।

• प्रतिरोधः – प्रतिरोधः द्विविधः वर्तते, तेन एव हेतुना हेत्वन्तरेण च इति। तत्र आद्यस्य दूष्य अनुमान हेतु निरपेक्षत्वात् प्रकरणसमः दूषणं भवति। द्वितीयस्य दूष्य अनुमान हेतु सापेक्षत्वात् सप्रतिसाधनः भवति। अस्य संक्षेपेण निरुपणं इत्थं वर्तते। तथाहि

• प्रकरणसमः दूषणम् – "रजतम् दृष्टं" इति भ्रममात्रत्वात् "विमतं सत्यं दृश्यत्वात् आत्मवत्" इति, प्रपञ्चमिथ्यात्व इव दृश्यत्वस्य सत्यत्वेऽपि प्रयोक्तुं शक्यत्वात् प्रकरणसमः। अत्र आत्मनः दृश्यत्वस्य यत् पूर्व एव उपपादितत्वात् न दृष्टान्तः साधन विकलः भवति इति ज्ञातव्यं। किंच मिथ्याभूतेऽपि शुक्तिरजते वर्तमानं दृश्यत्वं कथं प्रपञ्च सत्यता सिद्धौ प्रयोक्तुं शक्यते इति वाच्यम्। अत एव उक्तं रजतं दृष्टं इति भ्रममात्रत्वात् इति। अत्र दृग्विषयत्वं हि दृश्यत्वं इति अभिमतम्। "यत् सन्निकृष्टकरणेन यत् ज्ञानं उत्पद्यते स तस्य विषयः" इति अनित्यज्ञाने व्यवस्था वर्तते। अतः अत्र रजत ज्ञानं च शुक्ति सन्निकृष्ट इन्द्रियेण जातं इति शुक्तिः एव तस्य विषयः भवति। अतः अत्र रजतं दृष्टम् इति अन्यत् अन्यात्मना अवगाहते इति भ्रम एव भवति इति।

• सप्रतिसाधन दूषणम् – "विमतं सत्यं प्रमाणदृष्टत्वात् यदित्थं तत्तथा यथा आत्मा" इति प्रयोग सम्भवात् सप्रतिसाधनः। अत्र प्रमाणदृष्टत्व पदेन प्रामाणिकमात्रस्य अभिमतत्वात्। अथवा अत्र दृष्टत्व पदेन दृग्व्यावर्तकत्वमेव सूचितत्वात्, तत् च शुक्तिरजतादौ अस्ति इति सफलं प्रमाण विशेषणं इति ज्ञातव्यम्। किंच आत्मनः कथं प्रमाणदृष्टत्वं इति वाच्यम्। आत्मनः प्रमाणदृष्टत्व अनंगीकारे वेदान्त वैयर्थ्यं स्यात् इति ज्ञातव्यम्।

८. अष्टम परिच्छेदे, मिथ्यात्वानुमानस्य शुक्तिरजतवत् इति दृष्टान्तं दूषितं भवति। तत् संक्षेपेण निरूपणं इत्थं भवति। तथाहि–

• शुक्तिरजतस्य अत्यन्त असत् एव सिद्धत्वात्। शुक्तिरजतस्य अनिर्वचनीय अभावात्, जगतः नास्ति इति किमु वक्तव्यम् इति साध्यसमानधर्म विकलः दृष्टान्तः।

• "रजतं दृष्टं इति भ्रममात्रत्वात्" इति उक्तप्रकारेण शुक्तिरजतस्य दृश्यत्व अभावात् साधनविकलः दृष्टान्तः।

९. नवम परिच्छेदे, मिथ्यात्वानुमानस्य सर्ववादि संमतौ सत्यां उपाधिरूप दोषं निरूपितं भवति। मिथ्यात्वानुमानस्य प्रमाणविरुद्धत्वं उपाधि इति।

१०. दशम परिच्छेदे, इह ग्रन्थे व्यवहृता पक्षसपक्षविपक्षाः प्रतिज्ञाहेतु दृष्टान्ताः च स्वरूप अवगतेन विना उक्तदोष स्फूर्तिभवति इति, तल्लक्षणानि प्रतिपादितानि भवन्ति।

११. एकादश परिच्छेदे, ग्रन्थान्ते मंगलपद्यस्य विवरणं वर्तते। अत्र यस्मात् प्रसादात् यस्मै प्रीतये च इदं प्रकरणं कृतवान्, तमेव रमापतिं आचार्यः स्तुति प्रणाभ्यां प्रीणयति।

१२. द्वादश परिच्छेदे, टीकान्ते मंगलपद्यस्य विवरणं वर्तते। अत्र यस्मात् उत्पत्तिस्थितिभङ्गं विश्वं प्रपद्यते तत् रमानाथस्य जयकारं करोति।

अस्मिन ग्रन्थे अवधानजनिताः अनवधानजनिताश्च मुद्रणादिदोषाः स्युः। सुविद्वांसः यदत्र साधु तत् हंसक्षीरन्यायेन स्वीकृत्य दोषजातं बोधनीय इति सम्प्रार्थये।

तदेतत् सर्वं प्रातःस्मरणीय श्रीवेंकटरमणाचार्याणांतेवासिनां श्रीरामाचार्य गुरूणां परमानुग्रहेण संजातं इति अस्तु एषा भक्तियुक्ता रामाचार्य गुरोः सेवा।

---

श्रीमंगसूळि गुरुराजाचार्यसूनु
डा.मंगसूळि जयतीर्थाचार्यः

मन्मथनाम संवत्सरस्य
शालिवाहन शके १९३७
नृसिंहजयंती अवसरे
वैशाखमासे, चतुर्दश्यां तिथौ
शनिवासरे, जयंतीनगर (ऐनापूर)
दिनांकः २–५–२०१५



॥श्रीलक्ष्मीवेंकटेशो विजयते॥
॥श्रीमध्वेशो विजयतेतराम्॥

## मंगलाचरणम्

नमामि श्रीवेंकटेशं सर्वानिष्टनिवारकम्।
सर्वाभीष्टप्रदं श्रीशं रामार्याभीष्टदैवतम्॥
अनन्तवेदसंवेद्यं निर्दोषं गुणसागरम्।
अतीन्द्रियं नित्यमुक्तं श्रीनिवासं अहं भजे॥
नमस्ते प्राणेश प्रणतविभवायावनिमगा
नमस्स्वामिन् राम प्रियतम हनूमन् गुरुगण।
नमस्तुभ्यं भीमप्रबलतम कृष्णेष्ट भगवन्
नमः श्रीमन्मध्व प्रदिश सदृशं नो जय जय॥
पूर्णप्रज्ञकृतं भाष्यं आदौ तद्भावपूर्वकम्।
यो व्याकरोन्नमस्तस्मै पद्मनाभाख्ययोगिने॥
चित्रैपदश्चैयर्गम्भीरैः वाक्यैर्मानैः अखंडितैः।
गुरुभावंव्यंजयन्ति भाति श्रीजयतीर्थ वाक्॥
अर्थकल्पितकल्पोऽयं प्रत्यर्थिगजकेसरि।
व्यासतीर्थगुरुर्भूयात् अस्मदिष्टार्थ सिद्धये॥
सत्यनाथगुरुः पातु यो धीरो नवचन्द्रिकाम्।
नवामृतगदातीर्थ ताण्डवानि व्यचीक्लृपत॥
श्रीनिवासगुरून् वन्दे श्रीनिवासान्घ्रिसद्रतीन्।
श्रीमध्वशास्त्रदुग्धाब्धिपारगन्तॄन् अहं भजे॥
केशवाचार्य गुरून् वन्दे श्रीविद्याधीशपदाद्रतीन्।
शेषवाक्यार्थचन्द्रिकाकारान् अहं भजे मुहुर्मुहुः॥
येभ्यः श्रीमध्वसिद्धान्तमहंसम्यग् अधितवान्।
तान् रामाचार्यगुरून्वन्दे वेंकटार्यपदाश्रयान्॥
टीकाटिप्पण्यार्थान् साकल्य प्रणम्य गुरुपादपङ्कजे।
मिथ्यात्वानुमानखण्डनकन्नडभाषाविवरणं व्याकुर्वे तत्कृपाबलात्॥

---

॥श्रीलक्ष्मीवेंकटेशोविजयते॥
॥श्रीमध्वेशो विजयतेतराम्॥

## १. टीका मंगलाचरणम्

ಶ್ರೀಮಜ್ಜಯತೀರ್ಥ ಪೂಜ್ಯಪಾದರು, ಶ್ರೀಮದಾಚಾರ್ಯರಿಂದ ರಚಿಸಲ್ಪಟ್ಟ "ಪ್ರಪಂಚಮಿಥ್ಯಾತ್ವ ಅನುಮಾನ ಖಂಡನಮ್" ಎಂಬ ಪ್ರಕರಣಕ್ಕೆ ವ್ಯಾಖ್ಯಾನ ಮಾಡಲಿಚ್ಛಿಸುವರಾಗಿ, ಗ್ರಂಥದ ಆದಿಯಲ್ಲಿ ಮಂಗಲಾಚರಣಪೂರ್ವಕ, ತಾವು ಮಾಡಲಿಚ್ಛಿಸಿರುವ ಕಾರ್ಯವನ್ನು ಪ್ರಾರಂಭಿಸುತ್ತಾರೆ.

### टिप्पणीनाम् विशेषार्थानि

ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿ ವ್ಯಾಖ್ಯಾನವನ್ನು ಹೀಗೆ ಪ್ರಾರಂಭಿಸುತ್ತಾರೆ:

मङ्गलाचरणम्
कमलारमणं नत्वा पूर्णबोधेष्टदैवतम्।
व्याकुर्वे विश्वमिथ्यात्वमानखण्डन पञ्चिकाम्॥
स्पष्टार्थो य इह ग्रन्थः स न व्याक्रियते मया।
ग्रन्थगौरवभीरुत्वात् न चोद्ग्रन्थं बहूच्यते॥

ಪೂರ್ಣಬೋಧಗುರುಗಳ ಇಷ್ಟದೇವತೆಯಾದ ಕಮಲಾರಮಣನನ್ನು ನಮಸ್ಕರಿಸಿ ವಿಶ್ವಮಿಥ್ಯಾತ್ವಮಾನಖಂಡನಾಖ್ಯ ಪ್ರಕರಣಕ್ಕೆ ವ್ಯಾಖ್ಯಾನವನ್ನು ಮಾಡುವೆವು.

ಗ್ರಂಥಗಾತ್ರದ ಭೀತಿಯಿಂದ ವ್ಯಾಖ್ಯಾನವನ್ನು ವಿಸ್ತಾರದಿಂದ ಮಾಡಿಲ್ಲ ಮತ್ತು ಸ್ಪಷ್ಟ ಅರ್ಥ ಸಿಗುವಕಡೆ ನಾವು ವ್ಯಾಖ್ಯಾನಿಸಿಲ್ಲ.

प्रपञ्चमिथ्यात्वानुमान खण्डनं व्याचिख्यासुः जयतीर्थाचार्यवर्यः ग्रन्थादौ मङ्गलं आचरन् चिकीर्षितं निर्दिशति – नत्वा इति॥

ಪ್ರಪಂಚಮಿಥ್ಯಾತ್ವ ಅನುಮಾನ ಖಂಡನವನ್ನು ವ್ಯಾಖ್ಯಾನಿಸಲು ಇಚ್ಛೆವುಳ್ಳವರಾದ ಜಯತೀರ್ಥಾಚಾರ್ಯವರ್ಯರು, ಗ್ರಂಥದ ಆದಿಯಲ್ಲಿ ಮಂಗಲವನ್ನು ಆಚರಿಸುತ್ತ ತಾವು ಮಾಡುವ ಕಾರ್ಯವನ್ನು ತೋರಿಸುತ್ತಾರೆ.

ಶ್ರೀಸತ್ಯನಾಥರು ತಮ್ಮ ಪರಶು ವ್ಯಾಖ್ಯಾನವನ್ನು ಹೀಗೆ ಪ್ರಾರಂಭಿಸುತ್ತಾರೆ:

मङ्गलाचरणम्
रामचन्द्रमहं वन्दे श्रीमध्वकरपूजितम्।
दोषापेतं गुणैः पूर्णं टीकाविज्ञान सिद्धये॥
भार्गवं शरणं यामि शरणागतवत्सलम्।



मिथ्यात्वखण्डनं कर्तुं रामं परशु लब्धये॥
जयतीर्थमुनिं नत्वा गुरुं सत्यनिधिं तथा।
व्यक्तीकरिष्ये मिथ्यात्वमानखण्डन पञ्चिकाम्॥

ಸಕಲದೋಷದೂರನಾದ ಸರ್ವಗೂಣಪರಿಪೂರ್ಣನಾದ ಶ್ರೀಮಧ್ವಕರಪೂಜಿತ ರಾಮಚಂದ್ರದೇವರನ್ನು ಟೀಕಾವಿಜ್ಞಾನ ಸಿದ್ಧಿಗಾಗಿ ನಾವು ನಮಸ್ಕರಿಸುತ್ತೇವೆ.

ಮಿಥ್ಯಾತ್ವಖಂಡನ ಗ್ರಂಥಕ್ಕೆ ಪರಶುನಾಮಕ ವ್ಯಾಖ್ಯಾನ ಮಾಡುವ ಸಾಮಾರ್ಥ್ಯ ಪಡೆಯಲು, ಶರಣಾಗತವತ್ಸಲನಾದ ಭಾರ್ಗವನನ್ನು ಶರಣು ಹೋಗುತ್ತೇವೆ.

ಜಯತೀರ್ಥಮುನಿಗಳನ್ನು ಹಾಗೆಯೆ ಸತ್ಯನಿಧಿಗುರುಗಳನ್ನು ವಂದಿಸಿ ಮಿಥ್ಯಾತ್ವಮಾನಖಂಡನ ಪ್ರಕರಣಕ್ಕೆ ವ್ಯಾಖ್ಯಾನವನ್ನು ಮಾಡುತ್ತೇವೆ.

स्वयं मङ्गलं अनुष्ठाय शिष्यशिक्षार्थं ग्रन्थादौ निबध्नन् चिकीर्षितं प्रतिजानीते– नत्वा इति॥

ಸ್ವತಃ ಮಂಗಲವನ್ನು ಅನುಷ್ಠಿಸಿ, ಶಿಷ್ಯಶಿಕ್ಷಾರ್ಥಕ್ಕಾಗಿ ಗ್ರಂಥದ ಆದಿಯಲ್ಲಿ ಅದನ್ನು ರಚಿಸಿ, ತಾವು ಮಾಡಲು ಹೊರಟಿರು ಕಾರ್ಯವನ್ನು ಪ್ರಾರಂಭಿಸುತ್ತಾರೆ.

ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯನ್ನು ಹೀಗೆ ಪ್ರಾರಂಭಿಸುತ್ತಾರೆ:

मङ्गलाचरणम्
श्रीरामं हनुमत्सेव्यं श्रीकृष्णं भीमसेवितम्।
श्रीव्यासं श्रीमदानन्दतीर्थ संसेवितं भजे॥
प्रणम्य यादवाचार्यगुरूणां पादपङ्कजे
व्याख्यास्ये विश्वमिथ्यात्वमानखण्डन पञ्चिकाम्॥

ಹನುಮಂತದೇವರಿಂದ ಸೇವಿತನಾದ ಶ್ರೀರಾಮದೇವರನ್ನು, ಭೀಮಸೇನದೇವರಿಂದ ಸೇವಿತನಾದ ಶ್ರೀಕೃಷ್ಣದೇವರನ್ನು ಮತ್ತು ಶ್ರೀಮದಾನಂದತೀರ್ಥರಿಂದ ಸೇವಿತ ಶ್ರೀವ್ಯಾಸದೇವರನ್ನು ಭಜಿಸುತ್ತೇವೆ.

ಯಾದವಾಚಾರ್ಯ ಗುರುಗಳ ಪಾದಪಂಕಜಗಳಲ್ಲಿ ಪ್ರಣಿಮಿಸಿ ವಿಶ್ವಮಿಥ್ಯತ್ವಮಾನಖಂಡನ ಪ್ರಕರಣಕ್ಕೆ ವ್ಯಾಖ್ಯಾನವನ್ನು ಮಾಡುತ್ತೇವೆ.

सर्वज्ञकल्पाः टीकाकारा जयतीर्थ श्रीमच्चरणाः प्रपञ्चमिथ्यात्व अनुमान खण्डनाख्यं प्रकरणं व्याख्यातुकामा ग्रन्थादौ मङ्गलाचरण पूर्वकं चिकीर्षितं प्रतिजानते– नत्वा इति॥

ಸರ್ವಜ್ಞಕಲ್ಪರಾದ ಟೀಕಾಕಾರರಾದ ಜಯತೀರ್ಥಶ್ರೀಮಚ್ಚರಣರು ಪ್ರಪಂಚ ಮಿಥ್ಯಾತ್ವ ಅನುಮಾನ ಖಂಡನ ಎಂಬ ಹೆಸರಿನ ಪ್ರಕರಣ ಗ್ರಂಥಕ್ಕೆ ವ್ಯಾಖ್ಯಾನ ಮಾಡುವ ಇಚ್ಛೆವುಳ್ಳವರಾಗಿ ಗ್ರಂಥದ ಆದಿಯಲ್ಲಿ ಮಂಗಲಾಚರಣ ಪೂರ್ವಕ ತಾವು ಮಾಡಲಿಚ್ಛಿಸಿರುವ ಕಾರ್ಯವನ್ನು ಪ್ರಾರಂಭಿಸುತ್ತಾರೆ.

ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯನ್ನು ಹೀಗೆ ಪ್ರಾರಂಭಿಸುತ್ತಾರೆ:

मङ्गलाचरणम्
यद्विद्याधीशगुरोः शुश्रुषान्या न रोचते यस्मात्।

अस्त्वेषा भक्तियुक्ता श्रीविद्याधीशपादयोः सेवा।

ಶ್ರೀವಿದ್ಯಾಧೀಶಗುರುಗಳ ಸೇವೆಯ ಹೊರತಾಗಿ ನಮಗೆ ಯಾವದೂ ಇಷ್ಟವಿರುವದಿಲ್ಲವೊ ಹೀಗಾಗಿ ಈ ಭಕ್ತಿಪೂರ್ವಕವಾಗಿ ರಚಿಸಿದ ಗ್ರಂಥ, ಶ್ರೀವಿದ್ಯಾಧೀಶರಪಾದಗಳ ಸೇವೆಯಾಗಲಿ.

## टीकामंगलाचरणम्

**नत्वा विश्वोदयस्थेमलयहेतुं पतिं श्रियः।**
**कुर्मः प्रपञ्चमिथ्यात्वमानखंडन पञ्चिकाम्॥**

अन्वयः विश्वोदयस्थेमलयहेतुं श्रियः पतिं नत्वा, प्रपञ्चमिथ्यात्वमानखंडन पञ्चिकाम् कुर्मः।

ವಿಶ್ವದ ಉತ್ಪತ್ತಿ, ಸ್ಥಿತಿ ಮತ್ತು ನಾಶಕ್ಕೆ ಕಾರಣನಾದ, ಶ್ರೀಪತಿಯನ್ನು ನಮಸ್ಕರಿಸಿ, ಶ್ರೀಮದಾಚಾರ್ಯರಿಂದ ರಚಿಸಲ್ಪಟ್ಟ ಪ್ರಪಂಚಮಿಥ್ಯಾತ್ವಮಾನಖಂಡನ ಪ್ರಕರಣಕ್ಕೆ ವ್ಯಾಖ್ಯಾನಮಾಡುವೆವು.

### टिप्पणीनाम् विशेषार्थानि

### ॥नत्वा इति॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**यद्यपि सृष्टिसंहार प्रवाहस्य अनादित्वेन दर्शपौर्णमासीतिथ्योरिव न एकस्य आदित्वं सम्भवति। तथापि उत्पन्नस्य नाशवत् नष्टस्य न उत्पत्तिः इति एक व्यक्ति अपेक्षयादेः प्राथम्यात् इति सृष्टिस्थितिलयानां क्रमनिर्देश उपपन्नः।**

ಇಲ್ಲಿ ವಿಶ್ವದ ಉದಯ-ಸ್ಥೇಮ-ಲಯ ಎಂಬ ಕ್ರಮನಿರ್ದೇಶವು, उत्पन्नस्य नाशवत्, नष्ट्स्य न उत्पत्तिः ಎಂದು ಒಬ್ಬ ವ್ಯಕ್ತಿಯ ಅಪೇಕ್ಷೆಯನ್ನನುಸರಿಸಿ ಮಾಡಲಾಗಿದೆ. ವಾಸ್ತವದಲ್ಲಿ ಜಗತ್ತಿನ ಸೃಷ್ಟಿಸ್ಥಿತಿಲಯಗಳ ಪ್ರವಾಹವು ಚಂದ್ರನ ಪೂರ್ಣಿಮಾ ಅಮಾವಾಸ್ಯ ತಿಥಿಗಳಂತೆ ಅನಾದಿಯಾಗಿರುತ್ತವೆ.

### ॥ स्थेम इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**यद्यपि अत्र "अल्पाच् तरं पूर्वं" इति स्थेम शब्दस्य प्रथमप्रयोगे उचितः। तथापि लब्ध जन्मनो हि स्थित्यादि इत्यत उदयस्य अभ्यर्हितत्वात् आदौ निर्देशः कृतः। "अभ्यर्हितं पूर्वं" इति वचनात्। "अल्पाच् तरं पूर्वं" इति न्यायस्तु समुद्राभ्राद्धः आन्महतः समानाधिकरण जातीययोः इत्यादौ व्यभिचरितत्वात् अयुक्त इति ज्ञातव्यम्।**



विश्वोदयस्थेमलय ಎಂಬಲ್ಲಿ, "अल्पाच्तरं पूर्वम्" ಎಂಬ ವಚನದಂತೆ ಸ್ಥೇಮ ಪದವನ್ನು ಮೊದಲು ಪ್ರಯೋಗಿಸುವದು ಉಚಿತವಾಗಿದ್ದರೂ, ಜನ್ಮದ ನಂತರ ಸ್ಥಿತಿ ವದಗುವದರಿಂದ, "अभ्यर्हितं पूर्वं" ಎಂಬ ವಚನಕ್ಕನುಗುಣವಾಗಿ ಉದಯ ಪದವನ್ನು ಮೊದಲು ಇಡಲಾಗಿದೆ ಎಂದು ತಿಳಿಯಬೇಕು. ಮತ್ತು "अल्पाच्तरं पूर्वम्" ಎಂಬ ನ್ಯಾಯವು "समुद्राभ्राद्धः आन्महतः समानाधिकरणजातिययोः" ಇತ್ಯಾದಿಗಳಲ್ಲಿ ವ್ಯಭಿಚರಿಸುವದರಿಂದ, ಅದು ಇಲ್ಲಿ ಅಯುಕ್ತವಾಗಿದೆ ಎಂದು ತಿಳಿಯತಕ್ಕದ್ದು.

**यद्यपि स्थिर शब्द प्रकृतिक स्थेम शब्दो दार्ढ्ये रूढः। तथापि स्था धातु निष्पन्नत्वात् योगेन स्थितिवाच्यपि भवति इति अभिप्रेत्य स्थेम इत्युक्तम्। अत एव निखिलभुवनजन्मस्थेमभङ्गादिलीला इति प्राचां प्रयोगः। व्याख्यातं च तट्टीकायां स्थेम स्थितिः इति।**

ಇಲ್ಲಿ स्थिर ಶಬ್ದ ಪ್ರಕೃತಿಕ स्थेम ಶಬ್ದವು ದಾರ್ಢ್ಯ ಅರ್ಥದಲ್ಲಿ ರೂಢವಾಗಿರುತ್ತದೆ. ಹಾಗಿದ್ದರೂ स्था ಧಾತು निष्पन्नत्वादि ಯೋಗದಿಂದ स्थिति ವಾಚ್ಯಕೂಡ ಆಗುತ್ತದೆ ಎಂದು ಅಭಿಪ್ರಾಯಪಟ್ಟು स्थेम ಎಂದು ಹೇಳಲಾಗಿದೆ. ಆದ್ದರಿಂದಲೆ "निखिलभुवनजन्मस्थेमभङ्गादिलीला" ಎಂದು ಪೂರ್ವಜರ ಪ್ರಯೋಗವಿರುತ್ತದೆ. ಅದರಂತೆ ಟೀಕಾದಲ್ಲಿ स्थेम ಪದವನ್ನು स्थिति ಪರವಾಗಿ ವ್ಯಾಖ್ಯಾನಿಸಲಾಗಿದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**आद्य श्लोके स्थेम शब्दः स्थितिपरः।**
**ननु अजिर शिशिर शिथिल इत्यादि गुणादि सूत्रेण स्था धातोः किरच् प्रत्यये आतो लोप इति च, इति धात्वाकरलोपे च निष्पन्नस्य दृढार्थस्य स्थिर शब्दस्य दृढार्थत्वेन वर्णदृढादिभ्य इति तस्मात् इ मनिच् प्रत्यये स्थिर इत्यादिना स्थादेशे निष्पन्नस्य स्थेम शब्दस्य दार्ढ्यार्थतया प्रसिद्धत्वात् कथं स्थित्यर्थत्वं इति॥**

ಇನ್ನು, अजिर शिशिर शिथिल ಇತ್ಯಾದಿ ಗುಣಾದಿ ಸೂತ್ರದಿಂದ स्था ಧಾತುವಿನ ಮತ್ತು किरच् ಪ್ರತ್ಯಯದಲ್ಲಿ आतो लोप ಎಂದು, ಮತ್ತು ಧಾತು ಅಕಾರ ಲೋಪದಲ್ಲಿ ನಿಷ್ಪನ್ನವಾದ ದೃಢಾರ್ಥದ स्थिर ಶಬ್ದದ ದೃಢಾರ್ಥತ್ವದಿಂದ वर्णदृढादिभ्य ಎಂದು, ಆಕಾರಣದಿಂದ इ मनिच् ಪ್ರತ್ಯಯದಲ್ಲಿ स्थिर ಇತ್ಯಾದಿಗಳಿಂದ स्था ದೇಶದಲ್ಲಿ ನಿಷ್ಪನ್ನವಾದ स्थेम ಶಬ್ದವು ದಾರ್ಢ್ಯಾರ್ಥಪರವಾಗಿ ಪ್ರಸಿದ್ಧವಾಗಿದ್ದರಿಂದ, ಅದನ್ನು ಹೇಗೆ स्थिति ಅರ್ಥದಲ್ಲಿ ತೆಗೆದುಕೊಳ್ಳಲಾಗಿದೆ?

**अत्र स्वामिनः स्थेम शब्दस्य दार्ढ्ये प्रसिद्धौ अपि, स्थितौ अपि अखिलभुवनजन्मस्थेमभङ्गादिलीला इति रामानुजीयभाष्यनान्दि श्लोके स्थित्यर्थत्वेन तद् व्याख्यानरूप श्रुततत्त्वप्रकाशिकायां अन्यत्रापि च अभियुक्त प्रयोगाणां बहुलं उपलम्भात्, तिष्ठति इति स्थिरं इति व्युत्पत्तेः स्थितिमत्परत्वेऽपि उपपत्तेश्च स्थेम स्थब्दस्य स्थितौ अत्र प्रयोग इति।**

ಇಲ್ಲಿ ಸ್ವಾಮಿಗಳು ಸ್ಥೇಮ ಶಬ್ದವು ದಾರ್ಢ್ಯ ಅರ್ಥದಲ್ಲಿ ಪ್ರಸಿದ್ಧವಾಗಿದ್ದರೂ, ಸ್ಥಿತಿ ಅರ್ಥದಲ್ಲಿ ಕೂಡ, अखिलभुवनजन्मस्थेमभङ्गादिलीला ಎಂದು ರಾಮಾನುಜೀಯ ಭಾಷ್ಯನಾಂದಿ ಶ್ಲೋಕದಲ್ಲಿ ಸ್ಥಿತಿ ಅರ್ಥತ್ವದಿಂದ, ಅದರ ವ್ಯಾಖ್ಯಾನರೂಪ ಶೃತಿತತ್ತ್ವಪ್ರಕಾಶಿಕಾ ಹಾಗೂ ಅನ್ಯಗ್ರಂಥಗಳಲ್ಲಿ ಕೂಡ, ಬಹಳಷ್ಟು ಕಂಡುಬಂದಿರುವದರಿಂದ, ಮತ್ತು तिष्ठति इति स्थिरं ಎಂಬ ವ್ಯುತ್ಪತ್ತಿಯಂತೆ, ಸ್ಥೇಮ ಶಬ್ದದ ಅರ್ಥ ಸ್ಥಿತಿಪರತ್ವದಲ್ಲಿ ಕೂಡ ಸಮರ್ಥಿಸಬಹುದಾಗಿರುವದರಿಂದ ಇಲ್ಲಿ ಸ್ಥೇಮ ಶಬ್ದವನ್ನು ಸ್ಥಿತಿ ಅರ್ಥದಲ್ಲಿ ಪ್ರಯೋಗಿಸಲಾಗಿದೆ.

## २. शास्त्रैकदेशसम्बन्धेन अस्य ग्रन्थस्य प्रकरणत्वोपपादनम्

ಈಗ ಟೀಕಾಕೃತ್ಪಾದರು, ತಾವು ವ್ಯಾಖ್ಯಾನಿಸುವ ಗ್ರಂಥದ ಮುಖ್ಯ ಪ್ರಯೊಜನ ಹಾಗೂ ಈ ಗ್ರಂಥವು अनारम्भणिय ದೋಷಗ್ರಸ್ತವಲ್ಲ, ಎಂದರೆ ಈ ಗ್ರಂಥಕ್ಕೆ ಅನುಬಂಧಚ್ತುಷ್ಟಯಗಳಿವೆ, ಅಂತೆಯೆ ವ್ಯಾಖ್ಯಾನಿಸಲು ಅತ್ಯಂತ ಯುಕ್ತವಾಗಿದೆ ಎಂಬುದನ್ನು ಪ್ರಸ್ಥಾಪಿಸಲು, ಈ ಗ್ರಂಥದ ಶಾಸ್ತ್ರೈಕದೇಶ ಸಂಬಂಧವನ್ನು "जन्माद्यस्य यतः.."ಎಂಬ ಮುಂತಾದ ಮುಂದಿನ ಕೆಲವು ವಾಕ್ಯಗಳಿಂದ ತೋರಿಸುತ್ತಾರೆ.

ಅಂದರೆ, ಇದರಿಂದ ಬ್ರಹ್ಮಮೀಮಾಂಸಾ ಶಾಸ್ತ್ರಕ್ಕೆ ಇರುವ ವಿಷಯಾದಿಗಳು , ಈ ಗ್ರಂಥಕ್ಕೂ ಲಭಿಸುವವು ಎಂಬ ಭಾವವಿರುತ್ತದೆ.

### टीका

**"जन्माद्यस्य यतः" इति भगवता सूत्रकारेण जगदुदयादि निमित्तकारणत्वं परस्य ब्रह्मणो लक्षणम् अभिहितम्। न च जगत्सत्यताम् अन्तरेण तद्वास्तवं सम्भवति। सापि न परोदीरित प्रपञ्चमिथ्यात्व प्रमाणस्य आभासता व्युत्पादनेन विना उपपद्यत इति, तदर्थमिदं प्रकरणं आरभते भगवान् आचार्यः।**

ಸೂತ್ರಕಾರರಾದ ಭಗವಾನ್ ವೇದವ್ಯಾಸ ಮಹರ್ಷಿಗಳು "जन्माद्यस्य यतः" ಎಂಬ ಸೂತ್ರದಿಂದ, ಪ್ರಪಂಚದ ಸೃಷ್ಟ್ಯಾದಿಗಳಿಗೆ ನಿಮಿತ್ತಕಾರಣನು ಎಂದು ಪರಬ್ರಹ್ಮನ ಲಕ್ಷಣವನ್ನು ಹೇಳಿದ್ದಾರೆ. ಈ ಹೇಳಿಕೆಯು ವಾಸ್ತವವಾಗಬೇಕಾದರೆ, ಈ ಜಗತ್ತು ಪಾರಮಾರ್ಥಿಕ ಸತ್ಯವಾಗದೆ ಸಾಧ್ಯವಿಲ್ಲ. ಅಂದರೆ, ಈ ಪಂಚಭೇದದಿಂದ ಕೂಡಿದ ಜಗತ್ತು ತ್ರಿಕಾಲದಲ್ಲೂ ಸತ್ಯವಾಗಿದೆ ಎಂದರ್ಥ ಹಾಗೂ ಈ ಜಗತ್ತು ಅಸತ್ಯ ಎನಿಸಿದರೆ ಅದಕ್ಕೆ



ಬ್ರಹ್ಮನು ಕಾರಣನಾಗಲಾರ ಎಂಬ ಭಾವ. ಅದೂ ಕೂಡ ಜಗತ್ ಸತ್ಯತ್ವವನ್ನು ಪರಪಕ್ಷದವರು ಪ್ರತಿಪಾದಿಸುವ ಪ್ರಪಂಚಮಿಥ್ಯಾತ್ವ ಪ್ರಮಾಣಕ್ಕೆ ಆಭಾಸತೆಯನ್ನು ಹುಟ್ಟಿಸದ ಹೊರತು ಇದನ್ನು ಸಮರ್ಥಿಸಲು ಸಾಧ್ಯವಿಲ್ಲ. ಇದರ ಹಿನ್ನೆಲೆಯಲ್ಲಿ ಶ್ರೀಮದಾಚಾರ್ಯರು ಈ ಪ್ರಕರಣವನ್ನು ಆರಂಭಿಸುತ್ತಿದ್ದಾರೆ. ಅಂದರೆ, ಈ ಜಗತ್ತು ಪಾರಮಾರ್ಥಿಕ ಸತ್ಯವಾಗದೆ, ಅದಕ್ಕೆ ಕಾರಣನಾದ ಪರಬ್ರಹ್ಮ ಪಾರಮಾರ್ಥಿಕ ಸತ್ಯ ಎನಿಸಲಾರ ಎಂಬ ಭಾವ ಇಲ್ಲಿ ಅಡಕವಾಗಿರುತ್ತದೆ.

### टिप्पणीनाम् विशेषार्थानि

**॥ जन्माद्यस्य यत इत्यदिना॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु इदं प्रकरणं न आरम्भणीयं विषयादि अनुबन्ध चतुष्टय शून्यत्वात् इति आशङ्क्य अस्य प्रकरणस्य शास्त्रैकदेश सम्बन्धित्वात् शास्त्रे यद्विषयादिकं तदेव अत्र विषयादिकं भविष्यति इति अभिप्रेत्य अस्य प्रकरणस्य शास्त्रसम्बन्धं दर्शयति–जन्माद्यस्य यत इत्यादिना।**

ಈ ಪ್ರಕರಣವು ಜ್ಞಾನಿಗಳ ಅಧ್ಯಯನಕ್ಕೆ ಯೋಗ್ಯವಾಗಿರುವದಿಲ್ಲ ಏಕೆಂದರೆ ಈ ಪ್ರಕರಣಕ್ಕೆ ವಿಷಯಾದಿ ಅನುಬಂಧ ಚತುಷ್ಟಯಗಳು ಇರುವದಿಲ್ಲ, ಎಂದು ಆಶಂಕಿಸಿ, ಈ ಪ್ರಕರಣಕ್ಕೆ ಶಾಸ್ತ್ರೈಕದೇಶ ಸಂಬಂಧವಿರುವದರಿಂದ, ಶಾಸ್ತ್ರಕ್ಕೆ ಯಾವ ವಿಷಯಾದಿಗಳು ಇವೆಯೋ ಅವುಗಳೇ ಇಲ್ಲಿ ವಿಷಯಾದಿಗಳಾಗುತ್ತವೆ ಎಂದು ಅಭಿಪ್ರಾಯಪಟ್ಟು, ಈ ಪ್ರಕರಣದ ಶಾಸ್ತ್ರ ಸಂಬಂಧವನ್ನು ಈ ಟೀಕಾವಾಕ್ಯ ತೋರಿಸುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**व्याख्येयस्य ग्रन्थस्य प्रकरणता सिद्धये शस्त्रैकदेश समबन्धित्वं दर्शयति–जन्माद्यस्य यत इत्यादिना॥**

ಈಗ ವ್ಯಾಖ್ಯಾನಿಸುವ ಗ್ರಂಥದ ಪ್ರಕರಣತೆಯ ಸಿದ್ಧಿಗೋಸ್ಕರ, ಶಾಸ್ತ್ರೈಕದೇಶ ಸಂಬಂಧವನ್ನು ಈ ಟೀಕಾವಾಕ್ಯದಿಂದ ತೋರಿಸುತ್ತಾರೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु विषयादि शून्यत्वेन प्रेक्षावद्भिः अनुपादेयतया अस्य ग्रन्थस्य अव्याख्येयत्वात् न एतद् ग्रन्थ व्याख्यान प्रतिज्ञा युक्ता इति आशङ्क्य प्रकरणत्वात् अस्य शस्त्रीयविषयादिना एव विषयादिमत्व सम्भवेन प्रेक्षावत् उपादेयत्वात् व्याख्येयत्वा उपपत्तेः युक्त एव तत् व्याख्यान प्रतिज्ञा इति अभिप्रेत्य भवेत् एतदेवं यदि अस्य प्रकरणता सिद्धा स्यात् स एव कुतः इत्यतः शास्त्रैकदेश सम्बन्धित्वात् तत् सिद्धिः इति आशयवान् अस्य शस्त्रैकदेश सम्बन्धितां दर्शयितुं शास्त्रार्थं तावत् दर्शयति– जन्माद्यस्य यत इत्यादिना इति॥**

ವಿಷಯಾದಿ ಶೂನ್ಯತ್ವವಿರುವದರಿಂದ ಜ್ಞಾನಿಗಳಿಗೆ ಸ್ವೀಕರಿಸಲು ಅರ್ಹತೆ ಇಲ್ಲದ ಈ ಗ್ರಂಥದ ವ್ಯಾಖ್ಯಾನವನ್ನು ಮಾಡಬಾರದಾದ್ದರಿಂದ, ಈ ಗ್ರಂಥದ ವ್ಯಾಖ್ಯಾನ ಪ್ರತಿಜ್ಞಾ ಯುಕ್ತವಲ್ಲ

ಎಂದು ಶಂಕಿಸಿ, ಈ ಗ್ರಂಥ ಪ್ರಕರಣವಾಗಿರುವದರಿಂದ, ಶಾಸ್ತ್ರೀಯವಿಷಯಾದಿಗಳೇ ವಿಷಯಾದಿಗಳಾಗಬಹುದಾದ್ದರಿಂದ, ಈ ಗ್ರಂಥ ಜ್ಞಾನಿಗಳಿಗೆ ಸ್ವೀಕರಿಸಬಹುದಾದ್ದರಿಂದ, ವ್ಯಾಖ್ಯಾನಿಸುವದಕ್ಕೆ ಸಮರ್ಥಿನೆ ದೊರೆತದ್ದರಿಂದ, ಈ ಗ್ರಂಥದ ವ್ಯಾಖ್ಯಾನ ಪ್ರತಿಜ್ಞಾ ಯುಕ್ತವಾಗಿದೆ ಎಂದು ಅಭಿಪ್ರಾಯಪಟ್ಟು, ಈ ಗ್ರಂಥಕ್ಕೆ ಪ್ರಕರಣತಾ ಸಿದ್ಧವಾಗಿದ್ದರೆ ಅದು ಹೇಗೆ, ಎನ್ನಲು ಶಾಸ್ತ್ರೈಕದೇಶ ಸಂಬಂಧಿತವಾದ್ದರಿಂದ ಅದರ ಪ್ರಕರಣತಾ ಸಿದ್ಧವಾಗುತ್ತದೆ ಎಂದು ಆಶಯಪಟ್ಟು, ಈ ಗ್ರಂಥದ ಶಾಸ್ತ್ರೈಕದೇಶ ಸಂಬಂಧ ತೋರಿಸಲು, ಶಾಸ್ತ್ರಾರ್ಥವನ್ನು ಈ ಟೀಕಾವಾಕ್ಯದಿಂದ ತೋರಿಸುತ್ತಾರೆ.

**उपलक्षणं च एतत् । यतो वा इत्यादि श्रुत्या च इत्यपि द्रष्टव्यम्।**

ಮತ್ತು ಇದೊಂದು ಉಪಲಕ್ಷಣವಾಗಿರುತ್ತದೆ. ಇಲ್ಲಿ यतो वा ಮುಂತಾದ ಶ್ರುತಿಗಳಿಂದಲೂ ತಿಳಿದುಬರುತ್ತದೆ ಎಂದು ಕೂಡ ತಿಳಿಯಬೇಕು.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**प्रकरणारम्भ प्रयोजनम् आह – जनमाद्यस्य इति॥**

ಈ ಟೀಕಾವಾಕ್ಯ ಪ್ರಕರಣಾರಂಭದ ಪ್ರಯೋಜನವನ್ನು ಸೂಚಿಸುತ್ತದೆ.

## ॥निमित्तकारणत्वं इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**सूत्रोक्त जगज्जन्मादिकारणत्वं नाम जगद् उपादानत्वं। तच्च परिणामित्वेन इति भास्करः। आरोपाधिष्ठान इति मायावादिनः। तन्निरासार्थं उक्तं– निमित्तकारणत्वम् इति॥**

ಸೂತ್ರದಲ್ಲಿ ಹೇಳಿದ ಬ್ರಹ್ಮನ ಜಗತ್ತಿನ ಜನ್ಮಾದಿಕಾರಣತ್ವವನ್ನು, ಜಗತ್ತಿನ ಉಪಾದಾನಕಾರಣವೆನ್ನುವದಾದರೆ, ಅದನ್ನು ಭಾಸ್ಕರರು तच्च परिणामित्वेन ಎನ್ನುತ್ತಾರೆ, ಅಂದರೆ ಬ್ರಹ್ಮನು ಸ್ವತಃ ಪರಿಣಾಮಗೊಳ್ಳುತ್ತ ಜಗತ್ತಿನ ಉಪಾದಾನಕಾರಣನಾಗುತ್ತಾನೆ. ಮಾಯಾವಾದಿಗಳು आरोपाधिष्ठान ಎಂದೆನ್ನುತ್ತಾರೆ. ಅಂದರೆ, ಜಗತ್ತು ಅವನಲ್ಲಿ ಆರೋಪಿತವಾಗಿದ್ದು ಅವನು ಅದಕ್ಕೆ ಅಧಿಷ್ಠಾನ, ಅದರಂತೆ ಅವನು ಜಗತ್ತಿಗೆ ಉಪಾದಾನಕಾರಣನಾಗುತ್ತಾನೆ. ಈ ಎರಡೂ ಮತಗಳನ್ನು ನಿರಾಕರಿಸಲು ಟೀಕಾಕೃತ್ಪಾದರು निमित्तकारणत्वम् ಎಂಬ ಪದಪ್ರಯೋಗ ಮಾಡಿರುತ್ತಾರೆ. ಬ್ರಹ್ಮನ ಜಗತ್ತಿನ ಜನ್ಮಾಧಿಕರಣತ್ವವು ನಿಮಿತ್ತಕಾರಣವಾಗಿರುತ್ತದೆ ವಿನಹಾ ಉಪಾದಾನಕಾರಣವಲ್ಲ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**उपादानकारणत्वे च ब्रह्मणो निर्विकारत्व अनुपपत्तिः। विवर्ताधिष्ठानत्वे तु श्रुतौ "यतो इमानि भूतानि जायन्ते" इति निर्देशः, सूत्रे जन्मादि इति निर्देशश्च असङ्गतः स्यात्। न हि शुक्तिकातो रजतं जायत इति व्यपदेशः अस्ति इति भावः।**

ಸೂತ್ರದಲ್ಲಿ ಹೇಳಿದ ಜಗತ್ತಿನ ಜನ್ಮಾದಿಕಾರಣತ್ವವನ್ನು, ಬ್ರಹ್ಮನು ಜಗತ್ತಿಗೆ



ಉಪಾದಾನಕಾರಣನಾಗುತ್ತಾನೆ ಎಂದು ಪ್ರತಿಪಾದಿಸುವದಾದರೆ,

- ಭಾಸ್ಕರರು ಪ್ರತಿಪಾದಿಸುವಂತೆ " तत् च परिणामित्वेन"ದಿಂದ ಉಪಾದಾನಕಾರಣವನ್ನು ಸ್ವೀಕರಿಸಿದರೆ, ಬ್ರಹ್ಮನು ನಿರ್ವಿಕಾರನಾದ್ದರಿಂದ ಹೀಗೆ ಹೇಳುವದು ಸರಿಎನಿಸುವದಿಲ್ಲ.
- ಇನ್ನು ಮಾಯಾವಾದಿಗಳು ಪ್ರತಿಪಾದಿಸುವಂತೆ "आरोपाधिष्ठानत्वेन" ದಿಂದ ಉಪಾದಾನಕಾರಣವನ್ನು ಸ್ವೀಕರಿಸಿದರೆ, "यतो इमानि भूतानि जायन्ते.." ಎಂದು ಶೃತಿಯಲ್ಲಿ ಹೇಳಿದ ನಿರ್ದೇಶ ಮತ್ತು "जन्माद्यस्य यतः" ಎಂಬ ಸೂತ್ರದಲ್ಲಿ ಹೇಳಿದ ನಿರ್ದೇಶ ಅಸಂಗತವೆನಿಸುತ್ತದೆ. ಹಾಗೆಯೆ, ಶುಕ್ತಿಯಲ್ಲಿ ಕಾಣುವ ರಜತವು, ರಜತವೆನಿಸುವದಿಲ್ಲ ಎಂಬ ಅಭಿಧಾನವೂ ಕೂಡ ಇರುತ್ತದೆ ಎಂಬ ಭಾವ.

ಇವೆರಡೂ ಮತಗಳನ್ನು ನಿರಾಕರಿಸಲು, ಇಲ್ಲಿ "निमित्तकारणत्वं" ಎಂಬ ಪದವನ್ನು ಬಳಿಸಲಾಗಿದೆ.

## ॥ परस्य इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**माया अवच्छिन्नं शबलं व्यावर्तयितुं उक्तं– परस्य इति॥**

ಮಾಯಾವಾದ ಪ್ರಣೀತ "मायावच्छिन्न शबल"ಬ್ರಹ್ಮ ಇಲ್ಲಿ ಪರ್ಯಾಪ್ತನಲ್ಲ ಎಂದು ತಿಳಿಸಲು ಟೀಕಾಕೃತ್ಪಾದರು परस्य ಎಂಬ ಪದವನ್ನು ಬಳಿಸಿದ್ದಾರೆ.

## ॥ न च जगत्सत्यताम् अन्तरेण तद्वास्तवं सम्भवति इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**एतत् लक्षणं – तद्वास्तवं इति॥**
**तस्य ब्रह्मणो वास्तवं न च सम्भवति इत्यर्थः।**
**न च जगत्सत्यतां अन्तरेण तद्वास्तवं सम्भवति पाठे तत् लक्षणं इत्यर्थः।**
**जगत् कारणत्व लक्षणस्य अवास्तवत्वे तत् प्रतिपादक श्रुतिसूत्रयोः अप्रामाण्य प्रसङ्ग इति भावः।**

ಇಲ್ಲಿ ಎರಡು ಪಾಠಗಳಿರುತ್ತವೆ. ಒಂದು, न च तद्वास्तवं सम्भ्वति ಎಂದು. ಅದರ ಅರ್ಥ: ಬ್ರಹ್ಮನ ಜಗತ್ತಿನ ಜನ್ಮಾಧಿಕರಣತ್ವ ಲಕ್ಷಣವು, ವಾಸ್ತವವೆನಿಸಲಾರದು ಎಂದರ್ಥ. ಅಥವಾ न च जगत्सत्यतां अन्तरेण तद्वास्तवं सम्भ्वति ಎಂದು. ಅದರ ಅದರ ಅರ್ಥ ಹೀಗಾಗುತ್ತದೆ: ಬ್ರಹ್ಮನ ಜಗತ್ಕಾರಣತ್ವ ಲಕ್ಷಣತ್ವವು ಅವಾಸ್ತವವಾದಲ್ಲಿ, ಅದನ್ನು ಪ್ರತಿಪಾದಿಸುವ ಶೃತಿ ಸೂತ್ರಗಳಿಗೆ ಅಪ್ರಾಮಾಣ್ಯ ಉಂಟಾಗುವ ಪ್ರಸಂಗ ವದಗುವದು ಎಂಬ ಭಾವವಿರುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**जगत्कारणत्वस्य अवास्तवत्वे तत् प्रतिपादक श्रुति सूत्र अप्रामाण्य प्रसङ्ग इति भावः।**

ಬ್ರಹ್ಮನ ಜಗತ್ಕಾರಣತ್ವ ಲಕ್ಷಣತ್ವವು ಅವಾಸ್ತವವಾದಲ್ಲಿ, ಅದನ್ನು ಪ್ರತಿಪಾದಿಸುವ ಶ್ರುತಿ ಸೂತ್ರಗಳಿಗೆ ಅಪ್ರಾಮಾಣ್ಯ ಉಂಟಾಗುವ ಪ್ರಸಂಗ ವದಗುವದು ಎಂಬ ಭಾವವಿರುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**अस्तु अयं शास्त्रार्थः तथापि कथं अस्य सम्बन्धित्वं इत्यतः तत् दर्शयति– न च इत्यादिना॥**

ಶಾಸ್ತ್ರಾರ್ಥವಿರಲಿ, ಹಾಗಿದ್ದರೂ ಈ ಗ್ರಂಥಕ್ಕೆ ಶಾಸ್ತ್ರದ ಸಂಬಂಧ ಹೇಗಾಯಿತು ಎಂಬುದನ್ನು ಈ ಟೀಕಾ ವಾಕ್ಯ ಸ್ಪಷ್ಟಪಡಿಸುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**जगतः पारमार्थिक सत्यतामन्तरेण जगत्कारणत्वं पारमार्थिकसत्यं न भवति इत्यर्थः।**

**ननु जगतः व्यावहारिक सत्यत्वेऽपि जगत्कारणत्वं पारमार्थिक सत्यं इति वक्तुं शक्यते। अन्यथा स्वाप्नगजतुरागादेः वासनामयत्वेन तत्कारणत्वस्य वासनामयत्वं स्यात्। न हि कार्यस्य वासनामयत्वं कारणस्य वासनामयत्वं न प्रयोजयति। प्रयोजयति च कार्यस्य व्यावहारिकत्वं कारणत्वस्य व्यावहारिकत्वं इति राज्ञां आज्ञां अस्ति इति चेत् उच्यते।**

**न ब्रूमो वयं कार्यस्य व्यावहारिकत्वात् कारणत्वस्य व्यावहारिकत्वं स्यात्। येन उक्त दोषः स्यात्। किम् नाम येन अनुमानेन जगतो व्यावहारिक सिद्धिः। तेनैव अनुमानेन जगदन्त पातितया पराभिमतस्य जगत्कारणत्वस्य व्यावहारिकत्वं सेत्स्यति इति। तदिदम् उक्तं– जगत्सत्यतामन्तरेण तद्वास्तवं सम्भवति इति॥**

**एक अनुमानविषयोः वैजात्यं न सम्भवति इति भावः।**

ಅಂದರೆ, ಜಗತ್ತು ಪಾರಮಾರ್ಥಿಕ ಸತ್ಯವಾಗದೆ ಜಗತ್ಕಾರಣತ್ವವು ಪಾರಮಾರ್ಥಿಕ ಸತ್ಯವಾಗಲಾರದು ಎಂದರ್ಥ.

ಇಲ್ಲಿ ಒಂದು ಶಂಕೆ ಉದ್ಭವಿಸಲು ಆಸ್ಪದವಿದೆ. ಅದೆನೆಂದರೆ, ಜಗತ್ತು ವ್ಯಾವಹಾರಿಕ ಸತ್ಯವಾದರೂ ಜಗತ್ಕಾರಣತ್ವವು ಪಾರಮಾರ್ಥಿಕ ಸತ್ಯಎಂದು ಹೇಳಲು ಶಕ್ಯವಿದೆ. ಇಲ್ಲವಾದರೆ, ಸ್ವಪ್ನದಲ್ಲಿ ವಾಸನಾಮಯತ್ವದಿಂದ ಕಾಣುವ ಆನೆಕುದರೆಗಳನ್ನು ಕಂಡು ಅದರ ಕಾರಣತ್ವವೂ ವಾಸನಾಮಯತ್ವದಿಂದ ಕೂಡಿರುತ್ತದೆ ಎಂದು ಹೇಳಬೇಕಾಗುತ್ತದೆ. ಕಾರ್ಯದ ವಾಸನಾಮಯತ್ವವು ಕಾರಣದ ವಾಸನಾಮಯತ್ವವನ್ನು ಪ್ರೇರಿಸುವದಿಲ್ಲ. ಆದರೆ ಕಾರ್ಯದ ವ್ಯಾವಹಾರಿಕತ್ವವನ್ನು ಕಾರಣದ ವ್ಯಾವಹಾರಿಕತ್ವವು ಪ್ರೇರಿಸುತ್ತದೆ. ಉದಾಹರಣೆಗೆ ರಾಜನ ಆಜ್ಞೆ.

ಇದರ ಸಮಾಧಾನ ಹೀಗಿರುತ್ತದೆ: ನಾವಾದರೂ ಕಾರ್ಯದ ವ್ಯಾವಹಾರಿಕತ್ವದಿಂದ ಕಾರಣತ್ವದ ವ್ಯಾವಹಾರಿಕತ್ವ ಉಂಟಾಗುತ್ತದೆ ಎಂದು ಹೇಳುವದಿಲ್ಲ. ನಾವು ಹೇಳುವದಿಷ್ಟೆ, ಯಾವ ಪರಪಕ್ಷದವರ ಅನುಮಾನದಿಂದ ಜಗತ್ತಿನ ವ್ಯಾವಹಾರಿಕತ್ವ ಸಿದ್ಧಿಸುತ್ತದೋ, ಅದೇ ಅನುಮಾನದಿಂದ ಜಗತ್ತಿನ ಅಭಾವತೆ ಅಥವಾ ಜಗತ್ತಿನ ಅಂತ ಸಿದ್ಧಿಸುವದರಿಂದ,



ಪರಾಭಿಮತದ ಜಗತ್ಕಾರಣತ್ವದ ವ್ಯಾವಹಾರಿಕತ್ವವು ಸಿದ್ಧವಾಗುತ್ತದೆ. ಏಕೆಂದರೆ ಒಂದೇ ಅನುಮಾನದ ವಿಷಯಗಳು ವಿಜಾತೀಯವೆನಿಸಲು ಸಾಧ್ಯವಿಲ್ಲ.

**॥ सापि इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**जगत् सत्यतापि इत्यर्थः।**

ಅಂದರೆ ಜಗತ್ತಿನ ಸತ್ಯತ್ವ ಕೂಡ ಎಂದರ್ಥ.

### *२.१ प्रकरणस्य स्वपक्षसाधनप्रकारताऽपि प्रतिपादनम्*

ಯಾವದೆ ಮತ ಅಥವಾ ಶಾಸ್ತ್ರನಿರ್ಣಯವು ಸ್ವಪಕ್ಷ ಸಾಧನ ಮತ್ತು ಪರಪಕ್ಷ ದೂಷಣಗಳೆರಡರಿಂದ ಕೂಡಿರಬೇಕು ವಿನಹಾ ಕೇವಲ ಒಂದೊಂದರಿಂದ ಮಾತ್ರವಲ್ಲ. ಈ ಪ್ರಕರಣದಲ್ಲಿ ಪರಪಕ್ಷದವರು ಪ್ರತಿಪಾದಿಸಿದ ಪ್ರಪಂಚಮಿಥ್ಯಾತ್ವ ಪ್ರಮಾಣಕ್ಕೆ ಆಭಾಸತೆಯನ್ನು ಹುಟ್ಟಿಸುವದರಿಂದ ಪರಪಕ್ಷ ದೂಷಣವನ್ನು ಮಾಡಲಾಗಿದೆ ವಿನಹಾ ಪ್ರಪಂಚ ಸತ್ಯತ್ವವೆನ್ನುವ ಸ್ವಪಕ್ಷಸಾಧನವನ್ನು ಮಾಡಿಲ್ಲ ಹಾಗೂ ಜಗತ್ ಸತ್ಯತ್ವವನ್ನು ಪ್ರತಿಪಾದಿಸುವ ಪ್ರಮಾಣಗಳನ್ನು ನಮೂದಿಸಿಲ್ಲ. ಅದಕ್ಕೆ ಇದೊಂದು ನ್ಯೂನತೆವಲ್ಲವೆ? ಎಂದು ಶಂಕಿಸಿ, ಅದಕ್ಕೆ ಸಮಾಧಾನವನ್ನು ಮುಂದಿನ "ननु.."ದಿಂದ ಪ್ರಾರಂಭವಾಗುವ ಕೆಲವು ವಾಕ್ಯಗಳಿಂದ ಟೀಕಾಕೃತ್ಪಾದರು ತೋರಿಸುತ್ತಾರೆ.

## टीका

**ननु कथं स्वपक्षसाधनेन विना निर्णयः। सत्यं, तथापि शास्त्रैकदेश सम्बन्धित्वात् प्रकरणस्य न दोषः। विज्ञास्यते च कालातीतता व्युत्पादनेन स्वपक्ष साधन प्रकारोऽपि इति।**

ಇಲ್ಲಿ ಒಂದು ಶಂಕೆ ಬರಬಹುದು ಸಹಜಃ ಈ ಪ್ರಕರಣದಲ್ಲಿ ಸ್ವಪಕ್ಷಸಾಧನವಿಲ್ಲದೆನೆ ಹೇಗೆ ನಿರ್ಣಯಮಾಡಲಾಗಿದೆ?

ಇಲ್ಲಿ ಈ ಸಂಶಯ ಬರುವುದು ನಿಜ, ಆದರೂ ಈ ಪ್ರಕರಣವು ಏಕದೇಶದಿಂದ ಬ್ರಹ್ಮಮೀಮಾಂಸಾ ಶಾಸ್ತ್ರಕ್ಕೆ ಸಂಬಂಧಿಸಿದ್ದರಿಂದ, ಇಲ್ಲಿ ಈ ತರಹದ ಸ್ವಪಕ್ಷಸಾಧನ ಅಭಾವರೂಪ ದೋಷಕ್ಕೆ ಆಸ್ಪದ ವಿರುವದಿಲ್ಲ. ಹಾಗೂ ಮುಂದೆ ಪ್ರಕರಣದಲ್ಲಿ ಶ್ರೀಮದಾಚಾರ್ಯರು, ಪ್ರಪಂಚ ಮಿಥ್ಯಾತ್ವ ಅನುಮಾನಕ್ಕೆ ಪ್ರಪಂಚ ಸತ್ಯತ್ವವನ್ನು ಗ್ರಹಿಸುವ ಪ್ರತ್ಯಕ್ಷಾದಿ ಪ್ರಮಾಣಗಳ ಬಾಧಕವನ್ನು ತೋರಿಸಿ कालात्ययापदिष्ट् ಎಂಬ ದೋಷವನ್ನು

ಹೇಳುವದರಿಂದ, ಈ ಪ್ರಕರಣದಲ್ಲಿ ಪ್ರಪಂಚ ಸತ್ಯತ್ವರೂಪ ಸ್ವಪಕ್ಷಸಾಧನ ಪ್ರಕಾರವನ್ನು ಕೂಡ ತಿಳಿಯಬಹುದಾಗಿದೆ.

## टिप्पणीनाम् विशेषार्थानि

### ॥ ननु कथं इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु स्वपक्षसाधन परपक्ष उपालम्भाभ्यां एव निर्णयः न अन्यतरमात्रेण। अत्र च परोदीरित प्रपञ्चमिथ्यात्व प्रमाणस्य आभासता व्युत्पादनेन परपक्ष उपलम्भ एव क्रियते। न तु सत्यत्वरूप स्वपक्षसाधनम्। तत् प्रमाणस्य अनुपन्यस्तत्वात्। अतो न्यूनता इति आशङ्कते– ननु इति॥**

ಸ್ವಪಕ್ಷ ಸಾಧನ ಮತ್ತು ಪರಪಕ್ಷದೂಷಣಗಳಿಂದ ಕೂಡಿದ್ದೆ ಶಾಸ್ತ್ರನಿರ್ಣಯವೆನಿಸುತ್ತದೆ ವಿನಹಾ ಅವುಗಳಿಲ್ಲಿಯ ಒಂದೊಂದರಿಂದಲ್ಲ. ಮತ್ತು ಇಲ್ಲಿ ಪರಪಕ್ಷದವರು ಪ್ರತಿಪಾದಿಸಿದ ಪ್ರಪಂಚಮಿಥ್ಯಾತ್ವ ಪ್ರಮಾಣದ ಆಭಾಸತೆ ವ್ಯುತ್ಪಾದನೆಯಿಂದ ಪರಪಕ್ಷದೂಷಣ ಮಾತ್ರ ಮಾಡಲಾಗಿದೆ ವಿನಹಾ ಸತ್ಯತ್ವರೂಪ ಸ್ವಪಕ್ಷಸಾಧನವನ್ನು ತೋರಿಸಿಲ್ಲ. ಹಾಗೂ ಅದರ ಪ್ರಮಾಣವನ್ನು ವಿವರಿಸಿಲ್ಲ. ಆದ್ದರಿಂದ ಅದು ನ್ಯೂನತಾ ಆಗುತ್ತದೆ ಎಂದು ಈ ಟೀಕಾವಾಕ್ಯ ಆಶಂಕಿಸುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**तथा च स्वपक्ष साधन अभावो दोषः इति भावः।**

ಅದರಂತೆ ಸ್ವಪಕ್ಷ ಸಾಧನ ಅಭಾವವು ದೋಷದಲ್ಲಿ ಪರಿಗಣಿಸಲಾಗುತ್ತದೆ ಎಂಬ ಭಾವವಿರುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**स्वपक्षसाधन अभावेन न्यून्यतां आशङ्कते– ननु कथं इति॥**

ಸ್ವಪಕ್ಷ ಸಾಧನ ವಿಲ್ಲದಿರುವದು ಒಂದು ನ್ಯೂನತೆ ಆಗುತ್ತದೆ ಎಂದು ಈ ಟೀಕಾವಾಕ್ಯ ಆಶಂಕಿಸುತ್ತದೆ.

### ॥ तथापि इति॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**तथापि शास्त्र इव अत्र स्वपक्षसाधन अभावेन निर्णय असम्भवेऽपि परपक्षदूषणेन जगत्सत्यत्वस्य अश्रद्धेयता निरासमात्रं भविष्यति इत्यर्थः।**

ಹಾಗಿದ್ದರೂ, ಶಾಸ್ತ್ರದಂತೆ ಅಥವಾ ಮತ ನಿರ್ಣಯದಂತೆ ಇಲ್ಲಿ ಸ್ವಪಕ್ಷಸಾಧನೆಯ ಅಭಾವತೆಯಿಂದ ನಿರ್ಣಯ ಅಸಂಭವವಾದರೂ, ಪರಪಕ್ಷದವರ ಪ್ರಪಂಚ ಮಿಥ್ಯಾತ್ವ ಅನುಮಾನದ ದೂಷಣೆಯಿಂದ ಸ್ವಪಕ್ಷದ ತತ್ವವೆನಿಸಿದ ಜಗತ್ತಿನ ಸತ್ಯತ್ವದ ಮೇಲಿನ



ಅಶ್ರದ್ಧತೆಯನ್ನುಮಾತ್ರ ನಿವಾರಿಸಿದಂತಾಗುವದು. ಆದ್ದರಿಂದ ಇಲ್ಲಿ ದೋಷಕ್ಕೆ ಆಸ್ಪದವಿಲ್ಲ ಎಂಬ ಭಾವ.

### ॥ शास्त्रैकदेश सम्बन्धित्वात् इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**शास्त्रैकदेशसम्बद्धं शास्त्रकार्यान्तरे स्थितम्। आहुः प्रकरणं नाम ग्रन्थभेदं विपश्चित् इति वचनात् इत्यर्थः। तथाच स्वपक्षसाधन प्रकारः शास्त्र एव कृतो द्रष्टव्य इति भावः।**

शास्त्रैकदेशसम्बन्ध ವೆಂದರೆ, ಶಾಸ್ತ್ರದ ಕೆಲವೊಂದು ವಿಷಯಗಳನ್ನು ತೆಗೆದುಕೊಂಡು ಅವುಗಳ ವಿಚಾರಮಂಥನ ಮಾಡುವದು. ಇದನ್ನೊಳಗೊಂಡ ಗ್ರಂಥವನ್ನೇ ಪ್ರಕರಣ ಗ್ರಂಥ ಎನ್ನುವರು. ಇದನ್ನೇ " आहुः प्रकरणं नाम ग्रन्थभेद विपश्चितः"ಎಂಬ ವಚನವು ಸ್ಪಷ್ಟಪಡಿಸುತ್ತದೆ. ಅದರಂತೆ, ಸ್ವಪಕ್ಷಸಾಧನಪ್ರಕಾರ ಕೂಡ ಶಾಸ್ತ್ರವೇ ಮಾಡುತ್ತದೆ ಎಂದು ತಿಳಿಯಬೇಕು. ಆದ್ದರಿಂದ ಇಲ್ಲಿ ಸ್ವಪಕ್ಷ ಸಾಧನ ಅಭಾವತೆಯ ದೋಷವನ್ನು ಹೇಳಲು ಬರುವದಿಲ್ಲ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**शास्त्रेण एकदेशवत् सम्बम्धवत्वात् इत्यर्थः। अस्मिन् प्रकरणे स्वपक्षसाधन अभावेऽपि स्वपक्षसाधनवता शास्त्रेण एकवाक्यत्वात् न न्यूनता। अन्यथा (परपक्षनिराकरणरूप शस्त्रैकदेशेऽपि स्वपक्ष) साधन अभावेन न्यूनता स्यात् इति भावः।**

ಶಾಸ್ತ್ರದ ಏಕದೇಶ ಸಂಬಂಧ ಹೊಂದಿರುವದರಿಂದ ಈ ಗ್ರಂಥವು ಪ್ರಕರಣ ಗ್ರಂಥವೆನಿಸುವದು. ಈ ಪ್ರಕರಣ ಗ್ರಂಥದಲ್ಲಿ ಸ್ವಪಕ್ಷಸಾಧನೆಯ ಅಭಾವತೆ ಇದ್ದರೂ, ಸ್ವಪಕ್ಷಸಾಧಿಸುವ ಶಾಸ್ತ್ರದ ಜೊತೆ ಏಕವಾಕ್ಯವಾಗಿರುವದರಿಂದ ಅಂದರೆ ಸಮರಸ್ಯವಾಗಿರುವದರಿಂದ ಇಲ್ಲಿ ಯಾವ ನ್ಯೂನತೆಗೆ ಆಸ್ಪದವಿರುವದಿಲ್ಲ. ಅನ್ಯಥಾ, ಪರಪಕ್ಷನಿರಾಕರಣರೂಪ ಶಾಸ್ತ್ರೈಕದೇಶವಿದ್ದರೂ ಸ್ವಪಕ್ಷಸಾಧನದ ಅಭಾವತೆಯು, ನ್ಯೂನತೆ ಎಂದೆ ಪರಿಗಣಿಸ ಬೇಕಾಗುತ್ತಿತ್ತು.

### ॥ न दोष इति ॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**स्वपक्षसाधन अभाव इति शेषः। अन्यथास्यापि शास्त्रप्रसक्त्या प्रकरणत्व भङ्गापत्तेः इति भावः। अङ्गीकृत्य च इदं उक्तम्।**

ಇಲ್ಲಿ ಸ್ವಪಕ್ಷ ಸಾಧನ ಅಭಾವ ಎಂಬ ಪದಗಳನ್ನು ಜೋಡಿಸಿ ಅರ್ಥವನ್ನು ಹೇಳಬೇಕು. ಅನ್ಯಥಾ, ಈ ಗ್ರಂಥವು ಶಾಸ್ತ್ರಗ್ರಂಥವೆನಿಸಿ, ಅದರ ಪ್ರಕರಣತ್ವದ ಭಂಗವಾಗುವ ಪ್ರಸಂಗ ಬರುತ್ತದೆ.

ಅಂದರೆ,ಸ್ವಪಕ್ಷ ಸಾಧನದ ಅಭಾವತೆಯ ದೋಷ ಈ ಪ್ರಕರಣಕ್ಕೆ ಹೇಳಲಾಗುವದಿಲ್ಲ. ಏಕೆಂದರೆ, ಈ ಪ್ರಕರಣವು ಸ್ವಪಕ್ಷಸಾಧನೆಯನ್ನು ಮಾಡಿಬಿಟ್ಟಿದ್ದರೆ, ಇದು ಪ್ರಕರಣ ಗ್ರಂಥವೆನಿಸದೆ ಶಾಸ್ತ್ರಗ್ರಂಥವೆನಿಸ ಬೇಕಾಗುವುದು.

ಇದನ್ನು ಅಂಗೀಕರಿಸಿಯೇ ಹೀಗೆ ಹೇಳಲಾಗಿದೆ.

॥ विज्ञास्यते च इति ॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**वस्तुतस्तु स्वपक्ष साधन अभाव असिद्ध इत्याह – विज्ञास्यते च इति॥**

ವಸ್ತುತಃ ಇಲ್ಲಿ ಸಪಕ್ಷ ಸಾಧನ ಅಭಾವ ಅಸಿದ್ಧವಾಗಿದೆ. ಇದನ್ನೆ ಈ ಟೀಕಾವಾಕ್ಯ ಪ್ರತಿಪಾದಿಸುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**प्रकारन्तरेण न्यूनतां परिहरति– विज्ञास्यते च इति॥**

ಇಲ್ಲಿ ಈ ಟೀಕಾವಾಕಯವು ಪ್ರಕಾರಾಂತರದಿಂದ ಸಪಕ್ಷ ಸಾಧನ ಅಭಾವದ ನ್ಯೂನತೆಯನ್ನು ಪರಹರಿಸುತ್ತದೆ.

॥ कालातीतता व्युत्पादनेन इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**प्रत्यक्षादि विरुद्धत्वात् विश्वं सत्यं इत्यादि वाक्य विरुद्धत्वाच्च कालात्ययापदिष्टः इति वाक्येन मिथ्यात्व अनुमानस्य सत्यत्वग्राहि प्रत्यक्षादिबाध व्युत्पादनं क्रियते। तेन सत्यत्वरूप स्वपक्षसाधन प्रकारो विज्ञास्यते । अतो न न्यूनता इति भावः।**

ಈ ಪ್ರಕರಣದಲ್ಲಿ ಮುಂದೆ "ಪ್ರತ್ಯಕ್ಷ್ಯಾದಿ ವಿರುದ್ಧತ್ವಾತ್, "ವಿಶ್ವಂ ಸತ್ಯಂ" ಇತ್ಯಾದಿ ವಾಕ್ಯ ವಿರುದ್ಧತ್ವಾತ್ ಚ ಕಾಲಾತ್ಯಯಾಪದಿಷ್ಟಃ" ಎಂಬ ವಾಕ್ಯದಿಂದ ಮಿಥ್ಯಾತ್ವ ಅನುಮಾನಕ್ಕೆ ಪ್ರಪಂಚ ಸತ್ಯತ್ವಗ್ರಾಹಿ ಪ್ರತ್ಯಕ್ಷಾದಿ ಬಾಧದ ವ್ಯುತ್ಪಾದನವನ್ನು ಶ್ರೀಮದಾಚಾರ್ಯರು ಮಾಡುತ್ತಾರೆ. ಇದರಿಂದ ಸತ್ಯತ್ವರೂಪ ಸ್ವಪಕ್ಷಸಾಧನ ಪ್ರಕಾರವು ತಿಳಿದು ಬರುತ್ತದೆ. ಆದ್ದರಿಂದ ಇಲ್ಲಿ ಯಾವತರಹದ ನ್ಯೂನತೆಗೆ ಆಸ್ಪದವಿರುವದಿಲ್ಲ ಎಂಬ ಭಾವವಿರುತ್ತದೆ.

## ३. ग्रन्थारम्भे मङ्गलाचरणाभाव प्रयुक्त न्यूनता शङ्कापरिहारः

ಈ ಪ್ರಕರಣದ ಆರಂಭದಲ್ಲಿ ಶ್ರೀಮದಾಚಾರ್ಯರು ಏಕೆ ಮಂಗಲಾಚರಣವನ್ನು ಅನುಷ್ಠಿಸಿಲ್ಲ: ಮಂಗಲಾಚರಣ ಅನುಷ್ಠಾನದಲ್ಲಿ ಫಲಪ್ರಮಾಣಗಳು ಇಲ್ಲವೆಂದೊ? ಅಥವಾ ಮಂಗಲಾಚರಣಕ್ಕೆ ಯಾವ ನಿಮಿತ್ತವಿಲ್ಲವೆಂದೊ? ಈ ಶಂಕೆ ನಿವಾರಣೆಗೋಸ್ಕರವೇ " ಅವಗೀತ.." ಎಂಬ ಮುಂದಿನ ಟೀಕಾವಾಕ್ಯಗಳು ಪ್ರವೃತ್ತವಾಗಿವೆ.



### टीका

**ननु अवगीतशिष्टाचार परम्परादि प्राप्तं प्रारिप्सित परिसमाप्त्यादि प्रयोजनम् किमपि मङ्गलाचरणं प्रकरणादौ कस्मात् आचार्यः न अनुष्ठितवान् इति चेत्। कथं एतत् अवगतम्। अनुपलम्भात् इति चेत् न। तत्कालीनस्य अधुना उपलब्धुम् अशक्यत्वात्।**

ಸರ್ವರಿಗೂ ಮಾನ್ಯವಾದ ಶಿಷ್ಟಾಚಾರ ಪರಂಪರೆ ಪ್ರಾಪ್ತವಾಗಿದ್ದರೂ, ಪ್ರಾರಂಭಮಾಡಿದ ಕಾರ್ಯ ನಿರ್ವಿಘ್ನದಿಂದ ಪರಿಸಮಾಪ್ತಿ ಮುಂತಾದವುಗಳನ್ನು ಕಾಣುವ ಪ್ರಯೋಜನದಿಂದ ಕೂಡಿದ್ದರೂ, ಶ್ರೀಮದಾಚಾರ್ಯರು ಈ ಪ್ರಕರಣದ ಆದಿಯಲ್ಲಿ ಯಾವತರಹದ ಮಂಗಲಾಚರಣವನ್ನು ಏಕೆ ಅನಿಷ್ಠಿಸಿಲ್ಲ? ಎಂದರೆ, ಇದನ್ನು ತಾವು ಹೇಗೆ ತಿಳಿದುಕೊಂಡಿರಿ? ಪ್ರತ್ಯಕ್ಷವಾಗಿ ಕಾಣುತ್ತಲಿಲ್ಲವಲ್ಲ ಎಂದರೆ, ಅದು ಸರಿಯಲ್ಲ. ಏಕೆಂದರೆ, ಗ್ರಂಥವನ್ನು ಮಾಡುವ ಕಾಲ ಈಗ ಉಪಲಬ್ಧ ಮಾಡಿಕೊಳ್ಳಲು ಶಕ್ಯವಿಲ್ಲ.

### टिप्पणीनाम् विशेषार्थानि

॥ ननु इति ॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु तथापि इदं न व्याकर्तव्यम् अनुपादेयत्वात्। न हि विषयादि सत्तामात्रेण उपादेयत्वात्। किं नाम स्वरूपलाभेन अपि। न च अस्य स्वरूपलाभः अस्ति। मङ्गलाचरण रहितत्वेन तत् साध्यनिरन्तराय परिसमाप्ति असम्भवेन असमाप्तत्वात् इत्यभिप्रेत्य तत् अकर्तव्यत्व साधकतया पराभिमतहेत्वोः असिद्धि व्युत्पादनेन तत् कर्तव्यतां उपपादयन्नेव ग्रन्थादौ तत् अनुष्ठाने निमित्तं आक्षिपति–ननु इति॥**

**अत्र प्रकरणादौ मङ्गलं कस्मात् न अनुष्ठितवान् इति सम्बन्धः। प्रकरणादौ मङ्गल अननुष्ठाने न किमपि निमित्तं अस्ति इत्यर्थः।**

ಹಾಗಿದ್ದರೂ, ಈ ಗ್ರಂಥವನ್ನು ವ್ಯಾಖ್ಯಾನಿಸುವದು ಸ್ವೀಕಾರಾರ್ಹವಲ್ಲ. ವಿಷಯಾದಿಗಳು ಇದ್ದಮಾತ್ರಕ್ಕೆ ಗ್ರಂಥವು ಸ್ವೀಕಾರಾರ್ಹವಾಗುವದಿಲ್ಲ. ಅದು ಸ್ವರೂಪವನ್ನು ಕೂಡ ಹೊಂದಿರಬೇಕು. ಈ ಗ್ರಂಥಕ್ಕೆ ಸ್ವರೂಪ ಉಂಟಾಗಿರುವದಿಲ್ಲ. ಮಂಗಲಾಚರಣವಿಲ್ಲದ್ದರಿಂದ ಅದರ ಸಾಧ್ಯನಿರಂತರ ಪರಿಸಮಾಪ್ತಿ ಅಸಂಭವವಾದ್ದರಿಂದ, ಗ್ರಂಥ ಪೂರ್ಣತ್ವವನ್ನು ಹೊಂದಿಲ್ಲ ಎಂದು ಅಭಿಪ್ರಾಯಪಟ್ಟು, ಮಂಗಲಾಚರಣವನ್ನು ಮಾಡದೆ ಇರುವದನ್ನು ಸಾಧಿಸುತ್ತ, ಪರಾಭಿಮತ ಹೇತುವಿಗೆ ಅಸಿದ್ಧಿ ವ್ಯುತ್ಪಾದನೆಯಿಂದ, ಮಂಗಲಾಚರಣ

ಮಾಡುವದು ಆವಶ್ಯಕವೆಂದು ಸಮರ್ಥಿಸಲು, ಗ್ರಂಥದ ಆದಿಯಲ್ಲಿ ಮಂಗಲಾಚರಣದ ನಿಮಿತ್ತನ್ನು ಈ ಟೀಕಾವಾಕ್ಯ ಆಕ್ಷೇಪಿಸುತ್ತದೆ.

ಇಲ್ಲಿ ಪ್ರಕರಣದ ಆದಿಯಲ್ಲಿ ಮಂಗಲವನ್ನು ಏಕೆ ಅನುಷ್ಠಿಸಿಲ್ಲ ಎಂದು ಸಂಬಂಧವಿರುತ್ತದೆ. ಪ್ರಕರಣದ ಆದಿಯಲ್ಲಿ ಮಂಗಲವನ್ನು ಆಚರಿಸದಿದ್ದಕ್ಕೆ ಯಾವ ನಿಮಿತ್ತವು ಇರುವದಿಲ್ಲ ಎಂದರ್ಥ.

## ॥ अवगीत इत्यादि ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**मङ्गलाचरणस्य अनुष्ठेयत्वे फलप्रमाणयोः अभावात् आचार्यः प्रकरणादौ तत् न अनुष्ठितवान् इत्यत उक्तम्– अवगीत इत्यादिना॥**

**अवगीतः अविरुद्धः सर्वसंप्रतिपन्नम् इत्यर्थः। परिसमाप्त्यादि पदेन प्रचय ग्रहणम्। एतत् मङ्गल अननुष्ठानम्।**

ಮಂಗಲಾಚರಣದ ಅನುಷ್ಠಾನತ್ವದಿಂದ ಫಲ ಪ್ರಮಾಣಗಳು ಇಲ್ಲವೆಂದು, ಶ್ರೀಮದಾಚಾರ್ಯರು ಪ್ರಕರಣದ ಆದಿಯಲ್ಲಿ ಮಂಗಲಾಚರಣವನ್ನು ಅನಿಷ್ಠಿಸಲಿಲ್ಲವೇನು? ಎಂಬ ಆಶಂಕೆಯನ್ನು ದೂರಮಾಡಲು ಈ ಟೀಕಾವಾಕ್ಯ ಇರುತ್ತದೆ.

ಅವಗೀತ ಎಂದರೆ, ಅವಿರುದ್ಧವಾದದ್ದು ಅಥವಾ ಸರ್ವಸಮ್ಮತಿಪಡೆದದ್ದು ಎಂದರ್ಥ. परिसमाप्त्यादि ಪದದಿಂದ ಸಂಪೂರ್ಣ ಗ್ರಂಥವನ್ನು ಗ್ರಹಿಸಲಾಗಿದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**तत् हि भवत् अप्रामाणिकत्वं वा अफलत्वं वा इति मनसि निधाय आद्यं दूषयति– अवगीत इति॥**

ಅದರಂತೆ ಆಗಲಿ ಮಂಗಲ ಅನುಷ್ಟಾನವು ಅಪ್ರಾಮಾಣಿಕವಾಗಿದೆ ಅಥವಾ ಫಲವಿಲ್ಲದ್ದಾಗಿದೆ ಎಂದು ಮನಸ್ಸಿನಲ್ಲಿಟ್ಟು, ಮೊದಲನೆಯದನ್ನು ಈ ಟೀಕಾವಾಕ್ಯ ದೂಷಿಸುತ್ತದೆ.

**अविगीत शिष्टाचार अनुमित श्रुतिबोधित कर्तव्यताकम् इत्यर्थः।**

अविगीत शिष्टाचार ಎಂದರೆ, ಶೃತಿಬೋಧನೆಯಿಂದ ತಿಳಿಯಲ್ಪಟ್ಟ ಕರ್ತವ್ಯತೆ ಹೊಂದಿರುವದು ಎಂದರ್ಥ.

## ॥ प्रारप्सित इति ॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**द्वितीयं दूषयति– प्रारिप्सित इति॥**

ಎರಡನೆಯದನ್ನು ಕೂಡ, प्रारिप्सित ಮುಂತಾದವುಗಳಿಂದ ಈ ಟೀಕಾವಾಕ್ಯ ದೂಷಿಸುತ್ತದೆ.

ಇದರಿಂದ ಮಂಗಲಾಚರಣ ಅನುಷ್ಠಾನಕ್ಕೆ ಫಲವಿಲ್ಲ ಎಂಬುದನ್ನು ಅಲ್ಲಗೆಳೆದಂತಾಯಿತು

**आदि पदेन प्रचय परिग्रहः।**



ಇಲ್ಲಿ आदि ಪದದಿಂದ ಪ್ರಾರಂಭಮಾಡಿದ ಕಾರ್ಯ ನಿರ್ವಿಘ್ನದಿಂದ ಪರಿಸಮಾಪ್ತಿ ಕಾಣುವ ಹೊರತಾಗಿ ಅನ್ಯ ಫಲಗಳನ್ನು ಕೂಡ ಗ್ರಹಿಸುತ್ತದೆ ಎಂಬ ಭಾವ.

## ॥ किमपि इति ॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**नतिस्तुत्यादिरूपे नानाविधे मङ्गले यत् किंचित् अपि इत्यर्थः।**

ಇಲ್ಲಿ किमपि ಅಂದರೆ ನಮಸ್ಕಾರ, ಸ್ತುತಿ ಮುಂತಾದರೂಪ ನಾನಾವಿಧ ಮಂಗಲಗಳನ್ನು, ಯತ್ಕಿಂಚ ಕೂಡ ಎಂದಂರ್ಥ.

## ॥ कथं एतत् अवगतम् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**एतत् मङ्गल अननुष्ठानम्।**

ಇಲ್ಲಿ एतत् ಪದದ ಅರ್ಥ ಮಂಗಲ ಅನನುಷ್ಠಾನವನ್ನು ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**अनुष्ठेयतया शिष्टाचार परम्पराप्राप्तस्य सप्रयोजनस्य अननुष्ठानं कथं निश्चितम् इति भावः।**

ಶಿಷ್ಟಾಚಾರ ಪರಂಪರಾಪ್ರಾಪ್ತವಾದ ಮತ್ತು ಪ್ರಯೋಜನಭರಿತ ಮಂಗಲ ಅನುಷ್ಟಾನವು, ಇಲ್ಲಿ ಅನುಷ್ಠಿತವಾಗಿಲ್ಲ ಎಂದು ಹೇಗೆ ನಿಶ್ಚಯಿಸಲ್ಪಟ್ಟಿತು? ಎಂಬ ಭಾವವಿರುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**कर्तव्यमेव प्रकरणादौ मङ्गलाचरणम्। कृतं च भगवता आचार्येण। ततश्च तत् साध्य समाप्त्यादेः उपपत्तेः समाप्तस्य अस्य ग्रन्थस्य लब्धस्वरूपतया उपादेयत्वात् व्याख्येयत्व उपपत्तिः इति अभिप्रेत्य ग्रन्थादौ मङ्गल अननुष्ठानं साधक प्रमाण अभावेन दूषयति– कथं एतत् अवगतं इति॥**

ಪ್ರಕರಣದ ಆದಿಯಲ್ಲಿ ಮಂಗಲಾಚರಣ ಮಾಡುವದು ಕರ್ತವ್ಯವೇ ಆಗಿದೆ. ಮತ್ತು ಶ್ರೀಮದಾಚಾರ್ಯರು ಅವಶ್ಯವಾಗಿ ಆಚರಿಸಿರುತ್ತಾರೆ. ಅದು ಗ್ರಂಥದ ಸಾಧ್ಯ ಸಮಾಪ್ತ್ಯಾದಿಗಳಿಂದ ಸಮರ್ಥಿಸಬಹುದಾಗಿದೆ. ಈ ಗ್ರಂಥದ ಸಮಾಪ್ತಿಯ ಲಬ್ಧವಾದ ಸ್ವರೂಪವು ಸ್ವೀಕರಿಸಲು ಅರ್ಹತೆಯನ್ನು ಹೊಂದಿರುವದರಿಂದ, ಗ್ರಂಥದ ವ್ಯಾಖ್ಯಾನ ಮಾಡವದನ್ನು ಸಮರ್ಥಿಸಲು ಸಾಧ್ಯವಿದೆ ಎಂದು ಅಭಿಪ್ರಾಯಪಟ್ಟು, ಗ್ರಂಥದ ಆದಿಯಲ್ಲಿ ಮಂಗಲ ಅನನುಷ್ಠಾನದ ಸಾಧಕ ಪ್ರಮಾಣ ಇಲ್ಲದಿರುವದರಿಂದ, ಮಂಗಲ ಅನನುಷ್ಠಾನ ಶಂಕೆಯನ್ನು ಈ ಟೀಕಾವಾಕ್ಯ ದೂಷಿಸುತ್ತದೆ.

**एतत् ग्रन्थादौ आचार्येण मङ्गलं न अनुष्ठितं इत्येतत् कथं केन प्रमाणेन अवगतं भवति इत्यर्थः। अनुष्ठान अभाव अवगमकं न किमपि प्रमाणं अस्ति इत्याशयः।**

ಅಂದರೆ, ಈ ಗ್ರಂಥದ ಆದಿಯಲ್ಲಿ ಮಂಗಲಾಚರಣವನ್ನು ಆಚರಿಸಲಿಲ್ಲ ಎಂದು ಯಾವ

ಪ್ರಮಾಣದಿಂದ ಹೇಗೆ ತಿಳಿಯಲ್ಪಟ್ಟಿತು? ಎಂದರ್ಥ. ಅನುಷ್ಠಾನ ಅಭಾವತೆಯನ್ನು ತಿಳಿಸುವ ಯಾವ ಪ್ರಮಾಣವು ಇರುವದಿಲ್ಲ ಎಂಬ ಆಶಯವಿರುತ್ತದೆ.

## ॥ अनुपलम्भात् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**मङ्गलं एतत् ग्रन्थारम्भ समयनिष्ठ अभाव प्रतियोगि तत् अनुपलभ्यमानत्वात्। यत् यदा न उपलम्भते तत् तदा नास्ति। यथा शशविषाणम् इति प्रयोगं अनेन सूचयति।**

ಮಂಗಲವು ಗ್ರಂಥಾರಂಭ ಸಮಯನಿಷ್ಠಭಾವ ಪ್ರತಿಯೋಗಿ ಆಗಿರುತ್ತದೆ. ಅದು ಇಲ್ಲಿ ಉಪಲಬ್ಧವಿಲ್ಲವಾದ್ದರಿಂದ, ಯಾವದು ಯವಾಗ ಉಪಲಬ್ಧ ಆಗಿರುವದಿಲ್ಲವೋ ಅದು ಆಗ ಅದು ಇರುವದಿಲ್ಲ. ಉದಾಹರಣೆಗೆ ಶಶವಿಷಾಣದಂತೆ ಎಂಬ ಅನುಮಾನದ ಪ್ರಯೋಗ ಇದರಿಂದ ಸೂಚಿತವಾಗುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**अनुपलब्धेः एव तन्निश्चायकत्वात् कथं तत् अभाव इति आशङ्कते–अनुपलब्धत्वात् इति चेत् इति॥**

ಮಂಗಲಾಚರಣದ ಅನುಪಲಬ್ಧಿಯೇ ನಿಶ್ಚಾಯಕವಾಗಿರುವಾಗ ಮಂಗಲಾಚರಣದ ಅಭಾವತೆಯ ಬಗ್ಗೆ ಆಶಂಕೆ ಏಕೆ? ಎಂಬುದನ್ನು ಈ ಟೀಕಾವಾಕ್ಯ ನಿರಾಕರಿಸುತ್ತದೆ.

**न अनुपलम्भमात्रं अभाव निश्चायकं अतीन्द्रियः उच्छेदापत्तेः। किन्तु योग्य अनुपलम्भ एव। न च असौ इह अस्ति।**

ಮಂಗಲಾಚರಣದ ಅನುಪಲಬ್ಧಿಯೇ ಅದರ ಅಭಾವ ನಿಶ್ಚಾಯಕವಾಗುವದಿಲ್ಲ, ಹಾಗೆನಾದರೆ, ಅತೀಂದ್ರಿಯಾದಿಗಳ ಉಚ್ಚಾಟನೆ ಆಗುವ ಪ್ರಸಂಗವದಗುತ್ತದೆ. ಪರಂತು ಯೋಗ್ಯ ಅನುಪಲಂಭವೇ ಅದರ ಅಭಾವತೆಯ ನಿಶ್ಚಾಯಕವಾಗಲು ಸಾಧ್ಯ. ಮತ್ತು ಅಂತಹ ಯೋಗ್ಯ ಅನುಪಲಂಭ ಈ ಗ್ರಂಥಕ್ಕೆ ಇರುವದಿಲ್ಲ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**परिहारं आशङ्कते – अनुपलम्भात् इति॥**
**प्रतियोगि अनुपलम्भस्य अभाव निश्चायकत्वात् अनुष्ठान अभावो निश्चीयते इति भावः।**

ಈ ಟೀಕಾವಾಕ್ಯ ಶ್ರೀಮದಾಚಾರ್ಯರು ಮಂಗಲಾಚರಣ ಆಚರಿಸಿಲ್ಲದಕ್ಕೆ ಯಾವದೇ ಪ್ರಮಾಣವಿಲ್ಲ ಎಂಬ ಪರಿಹಾರವನ್ನು ಆಶಂಕಿಸುತ್ತದೆ. ಪ್ರತಿಯೋಗಿ ಕಾಣಿಸದಾಗ, ಅದರ ಅಭಾವತೆಯ ನಿಶ್ಚಾಯಕವಾಗುವದರಿಂದ, ಇಲ್ಲಿ ಮಂಗಲಾಚರಣ ಅನುಷ್ಠಾನವಿಲ್ಲದರ ನಿಶ್ಚಯ ಮಾಡಲಾಗುತ್ತಿದೆ ಎಂಬ ಭಾವವಿರುತ್ತದೆ.

## ॥ तत्कालीनस्य इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**अनुपलम्भमात्रस्य अभाव साधकत्वे परमाण्वादौ व्यभिचार आपत्या योग्यत्वे सति अनुपलभ्यमानत्वस्य हेतूकर्तव्यत्वेन तत् कालीनस्य मङ्गलस्य इदानीं उपलब्धि योग्यत्व अभावेन**



**विशेषण असिद्धिः इति भावः।**
**अशक्यत्वात् अयोग्यत्वात्।**

ಮಂಗಲಾಚರಣದ ಅನುಪಲಬ್ಧಿಮಾತ್ರ ಅದರ ಅಭಾವ ಸಾಧಕವಾದಲ್ಲಿ ಪರಮಾಣು ಮುಂತಾದವುಗಳಲ್ಲಿ ವ್ಯಭಿಚಾರ ಉಂಟಾಗುವ ಪ್ರಸಂಗ ಬರುವದರಿಂದ, ಯೋಗ್ಯ ಅನುಪಲಂಭಮಾತ್ರ ಮಂಗಲಾಚರಣದ ಅಭಾವತೆಯ ಸಾಧಕವಾಗುತ್ತದೆ ಎಂದು, ಗ್ರಂಥಮಾಡಿದ ಕಾಲದ ಮಂಗಲದ ಈಗ ಅದರ ಅಭಾವ ಸಾಧಕ ಯೋಗ್ಯ ಉಪಲಬ್ಧಿಯ ಇಲ್ಲವಾದ್ದರಿಂದ, ಮಂಗಲದ ಅನುಷ್ಠಾನವಾಗಿಲ್ಲ ಎಂದು ಸಿದ್ಧಮಾಡಲು ಬರುವದಿಲ್ಲ ಎಂಬ ಭಾವವಿರುತ್ತದೆ.

ಇಲ್ಲಿ अशक्यत्वात् ಪದದ ಅರ್ಥ ಅಯೋಗ್ಯವಾಗಿದೆ ಎಂದಾಗುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**तत् कथं तेन अनुष्ठान अभावनिश्चय इति अभिप्रेत्य तत् अनुष्ठानेऽपि, अयोग्यताम् उपपादयति–तत् कालीनस्य इति॥**

ಮಂಗಲಾಚರಣದ ಅನುಷ್ಠಾನದ ಅಭಾವ ನಿಶ್ಚಯ ಹೇಗೆ ಸಾಧ್ಯ ಎಂದು ಅಭಿಪ್ರಾಯಪಟ್ಟು, ಆ ಅಭಾವತೆಯ ನಿಶ್ಚಯದ ಅಯೋಗ್ಯತ್ವವನ್ನು ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ.

**ग्रन्थे निवेशन अभावः तावत् इति। अत एव तत् अननुष्ठान सिद्धि सम्भवात् न तत् असिद्धिः इति भावः।**

ಅಂದರೆ ಗ್ರಂಥದ ಆದಿಯಲ್ಲಿಯ ನಿವೇಶನದ ಅಭಾವತೆಯು ಮಂಗಲಾಚರಣದ ಅಭಾವತೆಯನ್ನು ಸಿದ್ಧಿಸಲು ಯೋಗ್ಯವಲ್ಲ ಎಂದರ್ಥ. ಆದ್ದರಿಂದ ಇದರಿಂದ ಮಂಗಲಾಚರಣದ ಅನನುಷ್ಠಾನ ಸಿದ್ಧಿವಾಗುವದಿಲ್ಲ. ಅಂದರೆ ಅದು ಅಸಿದ್ಧವಾಗಿದೆ ಎಂಬ ಭಾವವಿರುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**न अनुपलम्भमात्रं भवति निश्चायकं किन्तु योग्यस्य प्रतियोगिनः अनुपलम्भः अभाव निश्चायकः। न च इदानीं तत् काल अवच्छिन्न प्रतियोगिनः योग्यता अस्ति, येन तत् अनुपलम्भेन अनुष्ठान अभाव निश्चयः स्यात् इति भावः।**

ಅಂದರೆ, ಮಂಗಲದ ಅನುಪಲಬ್ಧಿಮಾತ್ರ, ಮಂಗಲ ಅನುಷ್ಠಾನದ ಅಭಾವತೆಗೆ ನಿಶ್ಚಾಯಕವಾಗುವದಿಲ್ಲ ಪರಂತು ಮಂಗಲ ಅನುಷ್ಠಾನದ ಯೋಗ್ಯತೆಯನ್ನು ಹೊಂದಿರುವ ಪ್ರತಿಯೋಗಿಯ ಅನುಪಲಬ್ಧಿ, ಮಂಗಲದ ಅಭಾವ ನಿಶ್ಚಾಯಕ ವಾಗುತ್ತದೆ. ಆದರೆ, ಈಗ ಗ್ರಂಥರಚನೆಯಾದ ಕಾಲದಿಂದ ಬೇರ್ಪಡಿಸಲ್ಪಟ್ಟ ಪ್ರತಿಯೋಗಿಯ ಯೋಗ್ಯತೆ ಇರುವದಿಲ್ಲ. ಅದರ ಅನುಪಲಬ್ಧಿ ಮಂಗಲ ಅನುಷ್ಠಾನ ಅಭಾವತೆಯ ನಿಶ್ಚಾಯಕವೆನಿಸುತ್ತದೆ.

## टीका

**ग्रन्थे निवेशन अभावः तावत् प्रत्यक्ष सिद्ध इति चेत्। किमतः? न हि ग्रन्थे निवेशनमेव तत् अनुष्ठानम्। नापि तद्व्याप्तम्। कायावाक् चित्तनिमित्तानाम् अनेकेषां भावात्। ग्रन्थान्तरे निवेशनादिनैव शिष्या अवगमिष्यन्ति। अत एव न तत् अनुष्ठान सन्देहः अपि इति।**

ಇನ್ನು ಶ್ರೀಮದಾಚಾರ್ಯರು ಮಂಗಲಾಚರಣವನ್ನು ಅನುಷ್ಠಿಸಿಲ್ಲ ಎಂಬುದನ್ನು, ಗ್ರಂಥದ ಆದಿಯಲ್ಲಿಯ ನಿವೇಶನ ಅಭಾವತೆಯಿಂದ ಪ್ರತ್ಯಕ್ಷ ಸಿದ್ಧವಾಗಿದೆ ಎನ್ನುವದಾದರೆ, ಅದು ಹೇಗೆ? ಗ್ರಂಥದ ಆದಿಯಲ್ಲಿಯ ನಿವೇಶನದಿಂದಲೆ, ಮಂಗಲಾಚರಣದ ಅನುಷ್ಠಾನವಾಗುತ್ತದೆ ಎಂದು ಹೇಳಲಿಕ್ಕಾಗುವದಿಲ್ಲ. ಹಾಗೂ ಅದು ಅದರಲ್ಲಿಯೆ ವ್ಯಾಪ್ತಿಯನ್ನು ಪಡೆದಿಲ್ಲ. ಮಂಗಲಾಚರಣೆಯ ಅನುಷ್ಠಾನವು, ಕಾಯ-ವಾಕ್-ಚಿತ್ತ ಮುಂತಾದ ವಿಧಿಗಳಿಂದ ಕೂಡಿರುತ್ತದೆ. ಇದನ್ನು ಗ್ರಂಥದ ಅಂತ್ಯದಲ್ಲಿ ಶ್ರೀಮದಾಚಾರ್ಯರು ಮಾಡಿದ ನಿವೇಶನದಿಂದ ಶಿಷ್ಯರು ತಿಳಿಯಬಹುದಾಗಿದೆ. ಆದ್ದರಿಂದ ಶ್ರೀಮದಾಚಾರ್ಯರು ಗ್ರಂಥದ ಆದಿಯಲ್ಲಿ ಮಂಗಲಾಚರಣವನ್ನು ಅನುಷ್ಠಿಸಲಿಲ್ಲ ಎಂಬ ಸಂದೇಹಕ್ಕೆ ಆಸ್ಪದವೇ ಇರುವದಿಲ್ಲ.

### टिप्पणीनाम् विशेषार्थानि

### ॥ ग्रन्थे निवेशन अभाव इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु अथ अपि एवं अनुमीयते। मङ्गलं एतत् ग्रन्थारम्भ समयस्यनिष्ठ अभाव प्रतियोगि, ग्रन्थे अनिवेशितत्वात् न च स्वरूप असिद्धिः, तस्य प्रत्यक्षसिद्ध्त्वात् इति आशङ्कते-ग्रन्थ इति।**

ಶ್ರೀಮದಾಚಾರ್ಯರು ಗ್ರಂಥದ ಆದಿಯಲ್ಲಿ ಮಂಗಲಾಚರಣ ಅನುಷ್ಠಸಲಿಲ್ಲ ಎಂಬುದನ್ನು ಹೀಗೆ ಕೂಡ ಅನುಮಾನಿಸಬಹುದು. ಮಂಗಲವು ಗ್ರಂಥಾರಂಭ ಸಮಯನಿಷ್ಠ ಅಭಾವೆತೆಯ ಪ್ರತಿಯೋಗಿ ಆಗಿರುತ್ತದೆ. ಅದರಂತೆ, ಗ್ರಂಥದ ಆದಿಯಲ್ಲಿ ಯಾವತರಹದ ನಿವೇಶನವಿರುವದಿಲ್ಲ, ಅದರಿಂದ ಮಂಗಲಾಚರಣ ಅನುಷ್ಠಾನವಿಲ್ಲದ ಸ್ವರೂಪ ಅಸಿದ್ಧವೆಂದು ಹೇಳಲಾಗದು, ಹೀಗಾಗಿ ಅದು ಪ್ರತ್ಯಕ್ಷ ಸಿದ್ಧವಾಯಿತು ಎಂದು ಆಶಂಕಿಸುತ್ತಾರೆ ಎಂಬ ಭಾವ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**मङ्गलरूप प्रतियोगिनः योग्यत्वात् तत् अभावनिश्चयः न सम्भवति इत्युक्तम्। समयान्तर अनुष्ठेयस्य मङ्गलान्तरस्य अयोग्यत्वेऽपि शिष्टाचार परम्परा प्राप्तस्य ग्रन्थादौ अवश्यं अनुष्ठेयस्य निवेशनरूप मङ्गलस्य योग्यत्वात्, अनुपलब्ध्या तद् अभाव निश्चयः सम्भवति इति भावः।**



ಅಂದರೆ, ಮಂಗಲಸ್ವರೂಪವು ಗ್ರಂಥಾರಂಭ ಸಮಯನಿಷ್ಠ ಅಭಾವತೆಯ ಪ್ರತಿಯೋಗಿಯ ಯೋಗ್ಯತೆಯನ್ನು ಹೊಂದಿದ್ದರಿಂದ ಮಂಗಲ ಅನುಷ್ಠಾನದ ಅಭಾವತೆಯು, ಮಂಗಲದ ಅಭಾವತೆಯ ನಿಶ್ಚಾಯಕವಾಗುವದಿಲ್ಲ ಎಂದು ಹೇಳಲಾಯಿತು.

ಅದರಂತೆ, ಸಮಯಾಂತರದಲ್ಲಿ ಮಂಗಲಾಂತರದಿಂದ (ನಿವೇಶನಕ್ಕಿಂತ ಬೇರೆರೂಪದಿಂದ ಮಾಡಿದ್ದು) ಅನುಷ್ಠಿತವಾದ ಮಂಗಲವು, ಮಂಗಲದ ಅಭಾವತೆಯನ್ನು ನಿಷ್ಚಯಿಸಲು ಅಯೋಗ್ಯವಾಗಿದ್ದರೂ, ಶಿಷ್ಟಾಚಾರ ಪರಂಪರಾ ಪ್ರಾಪ್ತವಾದ ಗ್ರಂಥದ ಆದಿಯಲ್ಲಿ ಅವಶ್ಯವಾಗಿ ಅನುಷ್ಠಿಸಲ್ಪಡುವ ನಿವೇಶನರೂಪ ಮಂಗಲವು ಆ ಯೋಗ್ಯತೆಯನ್ನು ಹೊಂದಿದ್ದರಿಂದ, ಅದರ ಅನುಪಲಬ್ಧಿಯು ಮಂಗಲ ಅಭಾವ ನಿಶ್ಚಾಯಕವಾಗಬಹುದು ಎಂಬ ಭಾವ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**अत एव तत् अनुष्ठान सिद्धि सम्भवात् न तत् असिद्धिः इति भावः।**

ಆದ್ದರಿಂದ ಮಂಗಲಾಚರಣ ಅನುಷ್ಠಾನದ ಸಿದ್ಧಿಯ ಸಂಭವವಿರುವದರಿಂದ, ಅದು ಅಸಿದ್ಧವಲ್ಲ ಎಂಬ ಭಾವವಿರುತ್ತದೆ.

### ॥ किमत इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**अप्रयोजकत्व अभिप्रायेण आह–किमत इति॥**

ಅಪ್ರಯೋಜಕ ಅಭಿಪ್ರಾಯವೆಂದು ಸೂಚಿಸಲು ಪ್ರಶ್ನಿಸುತ್ತಾರೆ ಎಂಬ ಭಾವ.

### ॥ न हि इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**तत् उपपादयति – न हि इति॥**
**ग्रन्थे निवेशनस्यैव मङ्गलान् अनुष्ठानत्वे अभेदऽपि व्याप्यव्यापकभाव अङ्गीकृत्य, तत् अभावेन तत् अभाव अनुमानम् युक्तं स्यात्, न हि एवं इति भावः।**

ಹಿಂದೆ ಅಪ್ರಯೋಜಕ ಅಭಿಪ್ರಾಯವೆಂದು ಹೇಳಿದ್ದನ್ನು ಟೀಕಾಕೃತ್ಪಾದರು ತೋರಿಸುತ್ತಾರೆ. ಗ್ರಂಥದಲ್ಲಿ ನಿವೇಶನದಿಂದಲೇ ಮಂಗಲವನ್ನು ಅನುಷ್ಠಿಸುವದಾದಲ್ಲಿ, ಅವುಗಳಲ್ಲಿ ಅಭೇದವಿದ್ದರೂ ವ್ಯಾಪ್ಯವ್ಯಾಪಕಭಾವವನ್ನು ಅಂಗೀಕರಿಸಿ, ನಿವೇಶನದ ಅಭಾವತೆಯಿಂದ ಮಂಗಲ ಅನುಷ್ಠಾನದ ಅಭಾವತೆಯನ್ನು ಅನುಮಾನಿಸುವದು ಯುಕ್ತವೇ ಅನಿಸುತ್ತಿತ್ತು, ಆದರೆ ಅದು ಹಾಗಿರುವದಿಲ್ಲ ಎಂಬ ಭಾವ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**किम् अत्र निवेशन व्यतिरेकेण, अनुमानस्य अभावात्, निवेशन अभावस्य प्रत्यक्षेण एव सिद्धत्वात्, अनुष्ठान अभावस्य प्रत्यक्षेण एव सिद्धिः अभिमतम्?**

ಏಕೆ, ಇಲ್ಲಿ ನಿವೇಶನ ವ್ಯತಿರೇಕದಿಂದ, ಅನುಮಾನದ ಅಭಾವತೆ ಇರುವಾಗ, ನಿವೇಶನದ ಅಭಾವವು ಪ್ರತ್ಯಕ್ಷದಿಂದಲೇ ಸಿದ್ಧವಾಗಿರುವಾಗ, ಮಂಗಲಾಚರಣ ಅನುಷ್ಠಾನದ ಅಭಾವತೆಯು ಪ್ರತ್ಯಕ್ಷದಿಂದಲೆ ಸಿದ್ಧಿಯನ್ನು ಪಡೆಯುತ್ತದೆ ಎಂದು ತಮ್ಮ ಅಭಿಮತವೊ?

**किं वा निवेशनस्य तत् व्यापकत्वात् व्यापक अभावे च व्याप्य अभाव नियमात्, प्रत्यक्ष सिद्धेन निवेशन अभावेन तत् अनुमान सम्भवात्, अनुमानतः तत् सिद्धिः इति अभिमतम्।**

ಅಥವಾ, ಏಕೆ ನಿವೇಶನವು ಮಂಗಲಾಚರಣ ಅನುಷ್ಠಾನದ ವ್ಯಾಪಕವಾಗಿರುವದರಿಂದ, ವ್ಯಾಪಕವಿಲ್ಲದಾಗ ನಿಯಮದಿಂದ ಅದರ ವ್ಯಾಪ್ಯದ ಅಭಾವವು ಸಿದ್ಧಿಸುವಾಗ, ಪ್ರತ್ಯಕ್ಷಸಿದ್ಧವಾದ ನಿವೇಶನದ ಅಭಾವತೆಯಿಂದ, ಮಂಗಲಾಚರಣದ ಅನುಷ್ಠಾನವಗಿಲ್ಲ ಎಂಬ ಅನುಮಾನ ಸಂಭವಿಸುವಾಗ, ಮಂಗಲಾಚರಣದ ಅನುಷ್ಠಾನವಾಗಿಲ್ಲ ಎಂದು ಅನುಮಾನದಿಂದ ಸಿದ್ಧವಾಗುತ್ತದೆ ಎಂದು ತಮ್ಮ ಅಭಿಮತವೊ?

**किं वा निवेशनस्य अनुष्ठान व्याप्यत्वात् तदेकप्रमाणकस्य अनुष्ठानस्य तत् अभाव निश्चयेन व्यतिरेक सिद्धिः, इति विकल्पान् मनसि निधाय, आद्य पक्षं प्रतिक्षिपति– न हि इति॥**

ಅಥವಾ, ಏಕೆ, ನಿವೇಶನವು ಅನುಷ್ಠಾನ ವ್ಯಾಪ್ಯವಾಗಿರುವದರಿಂದ ಅದೊಂದೆ ಅನುಷ್ಠಾನದ ಪ್ರಮಾಣಕವಾದ್ದರಿಂದ, ಅದರ ಅಭಾವ ನಿಷ್ಚಯದಿಂದ ವ್ಯತಿರೇಕವಾಗಿ ಅನುಷ್ಠಾನದ ಅಭಾವತೆ ಸಿದ್ಧಿಸುತ್ತದೆ, ಎಂಬ ಮೂರು ವಿಕಲ್ಪಗಳನ್ನು ಮನಸ್ಸಿನಲ್ಲಿರಿಸಿ, ಟೀಕಾಕೃತ್ಪಾದರು ಮೊದಲ್ನೆಯ ವಿಕಲ್ಪವನ್ನು ಈ ವಾಕ್ಯದಿಂದ ಅಲ್ಲಗೆಳೆಯುತ್ತಾರೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**न हि निवेशनं एकमेव ग्रन्थारम्भ समये अनुष्ठेयं मङ्गलं न अन्यत इति इत्यत्र किञ्चित् नियामकं अस्ति। येन निवेशन अनुपलब्ध्या आचार्येण मङ्गलं न अनुष्ठित इति निश्चयः स्यात् इति भावः।**

ನಿವೇಶನವೇ ಗ್ರಂಥಾರಂಭ ಸಮಯದಲ್ಲಿ ಮಾಡಲ್ಪಡುವ ಮಂಗಲಾಚರಣೆಯ ಪ್ರತೀಕ, ಬೇರಾವದರಿಂದ ಇಲ್ಲ ಎಂಬಲ್ಲಿ ಯಾವ ನಿಯಮಾವಳಿಯು ಇರುವದಿಲ್ಲ. ಅದರಿಂದ, ನಿವೇಶನದ ಅನುಪಲಬ್ಧಿಯಿಂದ, ಶ್ರೀಮದಾಚಾರ್ಯರು ಮಂಗಲವನ್ನು ಅನುಷ್ಠಿಸಲಿಲ್ಲ ಎಂಬುವದನ್ನು ನಿಶ್ಚಯಿಸಲು ಸಾಧ್ಯ, ಎಂಬ ಭಾವವಿರುತ್ತದೆ.

## ॥ नापि तद्व्याप्तम् इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु न एवं अनुमीयते अपितु यदि अत्र मङ्गलं आचार्यैः अनुष्ठितं तर्हि ग्रन्थे निवेशनीयं स्यात् न च एवं तस्मात् अनुष्ठितं इत्येव आपाद्यत इति चेत् तत्र आह–नापि इति॥**

ಇಲ್ಲಿ ನಾವು ಕೇವಲ ಅನುಮಾನಿಸುತ್ತಿಲ್ಲ ಪರಂತು ಶ್ರೀಮದಾಚಾರ್ಯರು ಮಂಗಲ ಅನಿಷ್ಠಿಸಿದ್ದರೆ ಆಗ ಗ್ರಂಥದ ಆರಂಭದಲ್ಲಿ ನಿವೇಶನ ಇರಬೇಕಾಗಿತ್ತು, ಅದು ಇರುವದಿಲ್ಲ,



ಆದ್ದರಿಂದ ಮಂಗಲವು ಅನುಷ್ಠಿತವಾಗಿಲ್ಲ ಎಂದು ಆಪಾದನೆ ಕೂಡ ಮಾಡುತ್ತೆವೆ ಎಂದು ಹೇಳುತ್ತೆವೆ. ಅದಕ್ಕೆ ಉತ್ತರವಾಗಿ ಟೀಕಾಕೃತ್ಪಾದರ ವಾಕ್ಯವಿರುತ್ತದೆ.

**स्यात् एव आपादनं, यदि तत् मङ्गलानुष्ठानरूपं आपादकं तेन ग्रन्थे निवेशनरूप आपाद्येन व्याप्तं स्यात्, न च एवं इत्यर्थः।**

ತಮ್ಮ ಈ ಆಪಾದನವು ಸರಿಯೆನಿಸುತ್ತಿತ್ತು ಒಂದು ವೇಳೆ ಮಂಗಲಾನುಷ್ಠಾನರೂಪ ಆಪಾದಕವು ಗ್ರಂಥಾರಂಭದಲ್ಲಿಯ ನಿವೇಶನರೂಪ ಆಪಾದ್ಯದಿಂದ ವ್ಯಾಪ್ತವಾಗಿದ್ದರೆ, ಆದರೆ ಅದು ವ್ಯಾಪ್ತವಾಗಿರುವದಿಲ್ಲ ಎಂದಂರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**कर्मणि क्तः। ततश्च " व्याप्तेः कर्म व्याप्तम्" इति टीकाकारैः अन्यत्र उक्तत्वात् तत् अनुष्ठानं व्याप्तं व्याप्यं यस्य ग्रन्थनिवेशनस्य तत् तद्व्याप्तं इति बहुव्रीहिः।**

ಇಲ್ಲಿ ಕರ್ಮಣಿ ಕ್ತಃ. ಅದರಂತೆ " व्याप्तेः कर्म व्याप्तम्" ಎಂದು ಟೀಕಾಕೃತ್ಪಾದರು ಮತ್ತೆಡೆ ಹೇಳಿರುತ್ತಾರೆ. ಅನುಷ್ಠಾನವು ವ್ಯಾಪ್ತ, ಗ್ರಂಥನಿವೇಶನವು ವ್ಯಾಪ್ಯಾ ಅಂದರೆ ಅನುಷ್ಟಾನವು ಗ್ರಂಥನಿವೇಶನದಲ್ಲಿ ವ್ಯಾಪ್ತಿಯನ್ನು ಹೊಂದಿರುತ್ತದೆ ತತ್ ವ್ಯಾಪ್ತಂ ಎಂದು ಬಹುವ್ರೀಹಿ ಸಮಾಸವಿರುತ್ತದೆ.

**यद्वा तत् इति व्यस्तं पदं। तथा च तत् अनुष्ठानं ग्रन्थे निवेशनेन व्याप्तं न हि इत्यर्थः।**

ಅಥವಾ ತತ್ ಇದು ವ್ಯಸ್ತ ಪದವಾಗಿದೆ. ಅದರಂತೆ ಆ ಅನುಷ್ಟಾನವು ಗ್ರಂಥ ನಿವೇಶನದಿಂದ ವ್ಯಾಪ್ತವಾಗಿರುವದಿಲ್ಲ ಎಂದರ್ಥ.

**अथवा। भावे क्तः। "तयोः एव कृत्यक्तखलर्थाः" इति कर्मणि इव भावेऽपि क्तविधानात्। ततो "भुक्ता ब्राह्मणाः", "पीता गावः" इत्यादौ इव मत्वर्थी योऽकारः। तथाच ग्रन्थे निवेशनं व्यापकत्वेन व्याप्ति निरूपकतया अनुष्ठानेन व्याप्तं इत्यर्थः।**

ಅಥವಾ ಭಾವದಲ್ಲಿ क्तः| "तयोः एव कृत्यक्तखलर्थाः", ಎಂದು ಕರ್ಮಣಿಯಂತೆ ಭಾವದಲ್ಲಿ ಕೂಡ क्त ವಿಧಾನವಿರುತ್ತದೆ. ಅದರಂತೆ, "भुक्ता ब्राह्मणाः", "पीता गावः" ಮುಂತಾದವುಗಳಲ್ಲಿಯಂತೆ मत्वर्थी योऽकारः. ಅದರಂತೆ ಗ್ರಂಥದಲ್ಲಿ ನಿವೇಶನ ವ್ಯಾಪಕತ್ವದಿಂದ ವ್ಯಾಪ್ತಿ ನಿರೂಪಕವಾಗಿ ಅನುಷ್ಠಾನದಿಂದಲೆ ವ್ಯಾಪ್ತವಾಗಿರುತ್ತದೆ ಎಂದರ್ಥ.

**यद्वा "चैत्रो ग्रामं प्राप्तः" इत्युक्ते "ग्रामं गतः" इत्यर्थ प्रतीतेः आप्नोतेः अपि गत्यर्थत्वात् "द्वितीया श्रितातीतपतितगतात्यस्तप्राप्तापन्नैः"इति सूत्रे कर्त्रर्थस्य प्राप्त शब्दस्य पाणिनिनापि प्रयुक्तत्वाच्च "गत्यर्थाकर्मकश्लिषशीङ्स्थासवसजनरुहजीर्यतिभ्यश्च" इत्यादिना सूत्रेण कर्तरि क्तः। तथाच "व्याप्तेः कर्तृ व्यापकं" इति टीकाकारैः अन्यत्र उक्तत्वात् ग्रन्थे निवेशनं तस्य अनुष्ठानस्य व्यापकम् इत्यर्थः।**

ಅಥವಾ, "चैत्रो ग्रामं प्राप्तः" ಎಂದು ಹೇಳಿದಲ್ಲಿ "ग्रामं गतः" ಎಂಬ ಅರ್ಥ ಪ್ರತೀತವಾಗುತ್ತದೆ, ಅಂದರೆ ಪ್ರಾಪ್ತಮಾಡಿಕೊಳ್ಳುವದು ಕೂಡ ಗತ್ಯರ್ಥವಾಗುವದರಿಂದ, "द्वितीया श्रितातीतपतितगतात्यस्तप्राप्तापन्नैः" ಎಂಬ ಸೂತ್ರದಲ್ಲಿ ಕರ್ತೃ ಅರ್ಥದ ಪ್ರಾಪ್ತ ಶಬ್ದವನ್ನು ಪಾಣಿನಿಯು ಕೂಡ ಪ್ರಯೋಗಿಸಿದ್ದಾನೆ. ಮತ್ತು

"गत्यर्थाकर्मकश्लिषशीङ्स्थासवसजनरुहजीर्यतिभ्यश्च" ಎಂಬ ಮುಂತಾದ ಸೂತ್ರದಿಂದ ಕರ್ತರಿ क्तः ಆಗುತ್ತದೆ. ಅದರಂತೆ "व्याप्तेः कर्तृ व्यापकं" ಎಂದು ಟೀಕಾಕಾರರು ಮತ್ತೆಡೆ ಹೇಳಿರುವದರಿಂದ, ಗ್ರಂಥದಲ್ಲಿ ನಿವೇಶನವು ಅದರ ಅನುಷ್ಠಾನದ ವ್ಯಾಪಕವಾಗಿರುತ್ತದೆ ಎಂದರ್ಥ.

**एवं च पक्ष चतुष्टयेऽपि अयं वाक्यार्थः।**

ಈ ರೀತಿಯಾಗಿ ಇಲ್ಲಿ ನಾಲ್ಕೂ ಪಕ್ಷಗಳು ಕೂಡ, ಈ ಟೀಕಾವಾಕ್ಯದ ವಾಕ್ಯಾರ್ಥಗಳಾಗಿರುತ್ತವೆ

**ग्रन्थे निवेशनम् अनुष्ठान व्यापकं चेत् अनिवेशनेन अननुष्ठानम् अनुमीयते। तथात्वं तु नास्ति इत्यर्थः।**

ಗ್ರಂಥದಲ್ಲಿಯ ನಿವೇಶನವು ಮಂಗಲಾಚರಣ ಅನುಷ್ಠಾನದ ವ್ಯಾಪಕವಾಗಿದ್ದರೆ, ಅನಿವೇಶನ ಅಂದರೆ ನಿವೇಶನದ ಇಲ್ಲದಿರುವಿಕೆಯಿಂದ ಮಂಗಲ ಅನನುಷ್ಠಾನದ ಅನುಮಾನವನ್ನು ಮಾಡಬಹುದಾಗಿತ್ತು. ಆದರೆ ಇಲ್ಲಿ ನಿವೇಶನವು ಅಂತಹ ಧರ್ಮ ಹೊಂದಿರುವದಿಲ್ಲ ಎಂದಂರ್ಥ.

**यद्वा ग्रन्थे निवेशनमेव अनुष्ठान व्याप्यं चेत् अनुष्ठाने लिङ्गान्तर अभावात् रूपोपलब्ध्येकलिङ्गस्य चक्षुषो रूप अनुपलब्ध्या अभाव इव अनिवेशनेन अननुष्ठानम अनुमीयेत तथात्वं तु नास्ति इति। ग्रंथकर्तुः आचार्यस्य परमास्तिकत्वादिलिङ्गान्तरस्यापि सत्वात् इति वाक्यार्थः।**

ಅಥವಾ ಗ್ರಂಥದಲ್ಲಿ ಕೇವಲ ನಿವೇಶನವೇ ಮಂಗಲಾಚರಣ ಅನುಷ್ಠಾನ ವ್ಯಾಪ್ಯವಾಗಿದ್ದರೆ, ಅನುಷ್ಠಾನದಲ್ಲಿ ಬೇರೆ ಪ್ರಕಾರಗಳ ತಿಳಿವಳಿಕೆ ಇಲ್ಲದಾಗ, ರೂಪದ ಉಪಲಬ್ಧಿಯಿಂದಲೇ ತಿಳಿಯಲ್ಪಡುವ, ಕಣ್ಣುಗಳಿಗೆ ಕಾಣದ ರೂಪದ ಅಭಾವತೆಯಂತೆ, ಅನಿವೇಶನೆಯಿಂದ, ಮಂಗಲಾಚರಣ ಅನುಷ್ಠಿತವಾಗಿಲ್ಲ ಎಂದು ಅನುಮಾನಿಸಬಹುದು. ಆದರೆ ಇಲ್ಲಿ ಆತರಹದ ಸ್ಥಿತಿ ಇರುವದಿಲ್ಲ. ಏಕೆಂದರೆ, ಆಚಾರ್ಯರ ಪರಮಾಸ್ತಿಕತ್ವಾದಿಗಳಿಂದ, ಅವರು ಬೇರೆ ಪ್ರಕಾರಗಳಿಂದ ಮಂಗಲಾಚರಣ ಅನುಷ್ಠಿಸಿದ್ದು ಸತ್ಯವಾಗಿದೆ ಎಂದು ತಿಳಿಯಬಹುದಾಗಿದೆ ಎಂದಂರ್ಥ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**द्वितीयं दूषयति– नापि इति॥**

**ततश्च निवेशनमेव तत् अनुष्ठानं, इत्यस्य असिद्धेः न अनुष्ठान अभावस्य प्रत्यक्षेण सिध्दिः। अनिवेशितस्यापि मानसादेः मङ्गलत्वेन, निवेशनस्य अनुष्ठान व्याप्यकत्व असिद्धेः, न निवेशन अभावेन अनुष्टान अभाव अनुमानम् अपि इति आशयः।**

ನಾವು ಹಿಂದೆ ಮಾಡಿದ ವಿಕಲ್ಪಗಳಲ್ಲಿಯ ಎರಡನೆ ವಿಕಲ್ಪವನ್ನು ಇಲ್ಲಿ ಟೀಕಾಕೃತ್ಪಾದರು ದೂಷಿಸುತ್ತಾರೆ ಎಂಬ ಭಾವ. ಅದನ್ನು ಹೀಗೆ ವಿವರಿಸಬಹುದು:



ನಿವೇಶನದಿಂದಲೇ ಮಂಗಲಾಚರಣದ ಅನುಷ್ಠಾನ ಎಂಬುದು ಅಸಿದ್ಧವಾದ ಸಂಗತಿ, ಅದರಂತೆ ಮಂಗಲಾಚರಣ ಅನುಷ್ಠಾನದ ಅಭಾವತೆಯನ್ನು ಪ್ರತ್ಯಕ್ಷದಿಂದ ಸಿದ್ಧಮಾಡಲು ಬರುವದಿಲ್ಲ.

ಇನ್ನು, ನಿವೇಶನವಿಲ್ಲದಿದ್ದರೂ ಮಾನಸಾದಿಗಳಿಂದ ಮಂಗಲವನ್ನು ಆಚರಿಸಬಹುದಾದ್ದರಿಂದ, ನಿವೇಶನವು ಅನುಷ್ಠಾನ ವ್ಯಾಪಕವು ಎಂದು ಸಿಧ್ದಿಸುವದಿಲ್ಲ. ಆದ್ದರಿಂದ ನಿವೇಶನದ ಅಭಾವತೆಯಿಂದ ಮಂಗಲ ಅನುಷ್ಠಾನದ ಅಭಾವತೆಯನ್ನು ಅನುಮಾನಿಸಲು ಬರುವದಿಲ್ಲ ಎಂದು ಆಶಯವಿರುತ್ತದೆ.

**ननु एवं अपि, निवेशनस्यापि नमस्कारादेः मङ्गलत्वात् निवेशनं अनुष्ठान व्याप्यं स्यात एव। ततश्च ग्रन्थे निवेशनस्य अनुष्ठान व्याप्यत्वात् तत् कालीने आचार्यीय मङ्गलानुष्ठानेऽपि, तदेव प्रमाणं वाच्यम्। व्याप्यान्तर अदर्शनेन अनिष्ठानस्य निवेशनैक प्रमाणकत्वात्। तथा च रूपादि उपलभ्धैक प्रमाणकस्य, चक्षुरादेः रूपादेः उपलब्धि अभावे, व्यतिरेक निश्चयो यथा एवं निवेशनैक प्रमाणकस्य व्यतिरेक निर्णयः स्यात् इति, तृतीय पक्षमपि निषेधति– नापि इति॥**

ಇಲ್ಲಿ ಒಂದು ಸಂಶಯಕ್ಕೆ ಆಸ್ಪದವಿರುತ್ತದೆ ಅದು ಹೀಗಿರುತ್ತದೆ:

ನಿವೇಶನವು ಕೂಡ ನಮಸ್ಕಾರದಿರೂಪ ಮಂಗಲವಾಗಿರುವದರಿಂದ, ನಿವೇಶನವು ಮಂಗಲ ಅನುಷ್ಠಾನದ ವ್ಯಾಪ್ಯವನ್ನು ಹೊಂದಿರುತ್ತದೆ. ಅದರಂತೆ ಗ್ರಂಥದಲ್ಲಿ ನಿವೇಶನದ, ಅನುಷ್ಠಾನ ವ್ಯಾಪ್ಯವಾಗಿರುವದರಿಂದ, ಗ್ರಂಥಾರಂಭ ಕಾಲದಲ್ಲಿಯ ಶ್ರೀಮದಾಚಾರ್ಯರ ಮಂಗಲ ಅನುಷ್ಠಾನದಲ್ಲಿ ಅದನ್ನೇ ಪ್ರಮಾಣವೆಂದು ಹೇಳಬೇಕು. ಬೇರಾವ ವ್ಯಾಪ್ಯಾಂತರಗಳು ಕಾಣದಿರುವದರಿಂದ ಅನುಷ್ಠಾನದ ನಿವೇಶನೊಂದೆ ಪ್ರಮಾಣಕವಾಗುತ್ತದೆ. ಅದರಂತೆ, ಹೇಗೆ ರೂಪಾದಿಗಳ ಉಪಲಬ್ಧರೂಪ ಏಕೈಕ ಪ್ರಮಾಣಕದಂತೆ, ಕಣ್ಣುಮುಂತಾದವುಗಳಿಂದ ಅವುಗಳ ಅಭಾವತೆಯನ್ನು ಕಂಡು ವ್ಯತಿರೇಕ ನಿಷ್ಚಯ ಮಾಡಲಾಗುವದೊ, ಅದರಂತೆ ನಿವೇಶನೊಂದೆ ಪ್ರಮಾಣಕದ ವ್ಯತಿರೇಕ ನಿರ್ಣಯ, ಮಂಗಲ ಅನುಷ್ಠಾನದ ಅಭಾವತೆಯನ್ನು ನಿಶ್ಚಯಿಸುತ್ತದೆ, ಎಂಬ ನಮ್ಮ ಹಿಂದೆ ಮಾಡಿದ ಮೂರನೆ ವಿಕಲ್ಪವನ್ನು ಕೂಡ ಈ ಟೀಕಾಕೃತ್ಪಾದರ ವಾಕ್ಯ ತಳ್ಳಿಹಾಕುತ್ತದೆ.

**अयं भावः – स्यात् एव रूपादि अनुपलब्ध्या चक्षुरादेः अभाव निश्चयः। मानान्तर विरहेण तस्य रूपादि उपलब्धैक प्रमाणकत्वात्। न च एवं अनुष्ठानस्य निवेशनैक प्रमाणकत्वं अस्ति। ग्रन्थ कर्तुः आचार्यस्य परमास्तिकत्वादिरूप लिङ्गान्तरेणापि तत् निश्चय सम्भवात्। ततश्च अनुष्ठानस्य निवेशनैक प्रमाणकत्व अभावात् न व्यतिरेक निर्णयः इति।**

**नापि तद्व्याप्तं इत्येतद् वाक्यं चिरन्तन टीकायां स्पष्टम्। तत् एव अवगन्तव्यम्।**

ಇಲ್ಲಿ ಈ ಭಾವವಿರುತ್ತದೆ. ಹೌದು, ರೂಪಾದಿಗಳ ಅನುಪಲಬ್ಧಿಗಳನ್ನು ಚಕ್ಷುರಾದಿಗಳಿಂದ ಅವುಗಳ ಅಭಾವವನ್ನು ಕಂಡು ನಿಶ್ಚಾಯಕವಾಗುತ್ತದೆ. ಹಾಗೂ ಅದು, ಬೇರಾವ ಪ್ರಮಾಣಗಳು ಇಲ್ಲದಿರುವ ಹಿನ್ನೆಲೆಯಲ್ಲಿ, ರೂಪಾದಿ ಉಪಲಬ್ಧಿಗೆ ಅದೊಂದೇ ಪ್ರಮಾಣಕವಾಗಿರುತ್ತದೆ. ಆದರೆ ಅದರಂತೆ, ಪ್ರಸ್ತುತದಲ್ಲಿ ಮಂಗಲಾಚರಣ ಅನುಷ್ಠಾಕ್ಕೆ

ನಿವೇಶನೊಂದೇ ಪ್ರಮಾಣಕವಾಗಿರುವದಿಲ್ಲ. ಗ್ರಂಥ ಕರ್ತುಗಳಾದ ಶ್ರೀಮದಾಚಾರ್ಯರ, ಪರಮಾಸ್ತಿಕತ್ವಮುಂತಾದರೂಪ ತಿಳುವಳಿಕೆಯಿಂದ ಮಂಗಲ ಅನುಷ್ಠಾನದ ನಿಶ್ಚಯ ಸಂಭವಿಸಬಹುದಾಗಿದೆ. ಅದರಂತೆ, ಮಂಗಲ ಅನುಷ್ಠಾನದ ನಿವೇಶನೊಂದೇ ಪ್ರಮಾಣಕವಾಗಲಾರದ್ದರಿಂದ, ಇಲ್ಲಿ ವ್ಯತಿರೇಕ ನಿರ್ಣಯದಿಂದ ಮಂಗಲ ಅನುಷ್ಠಾನವಾಗಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ಇದು ಟೀಕಾವಾಕ್ಯದಿಂದ ಸ್ಪಷ್ಟವಾಗಿರುತ್ತದೆ ಎಂದು ತಿಳಿಯಬೇಕು.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**तर्हि, ग्रन्थे निवेशनस्य मङ्गलानुष्ठान व्यापकत्वात् व्यापकीभूत ग्रन्थ निवेशनस्य निवृत्त्या व्याप्यस्य मङ्गलानुष्ठानस्यापि निवृत्तिः अस्तु इत्यत आह– नापि तद्व्याप्तम् इति॥**
**तत् इति भिन्नपदम्। तत् मङ्गलानुष्ठानं निवेशनेन व्याप्तम् इत्यर्थः।**

ಹಾಗಿದ್ದರೆ, ಗ್ರಂಥದಲ್ಲಿ ನಿವೇಶನವು ಮಂಗಲಾನುಷ್ಠಾನದ ವ್ಯಾಪಕವಾಗುವದರಿಂದ, ವ್ಯಾಪಕೀಭೂತ ಗ್ರಂಥ ನಿವೇಶನವು ಇಲ್ಲದಿರುವಾಗ, ವ್ಯಾಪ್ಯವಾದ ಮಂಗಲಾನುಷ್ಠಾನ ಕೂಡ ಇಲ್ಲದಾಗಬೇಕಾಗುತ್ತದೆ. ಇದನ್ನು ತಳ್ಳಿಹಾಕಲು ಈ ಟೀಕಾವಾಕ್ಯವಿರುತ್ತದೆ.

ಇಲ್ಲಿ ತತ್ ಪದವನ್ನು ಭಿನ್ನಪದವೆಂದೇ ಪರಿಗಣಿಸಬೇಕು. ಅದರಂತೆ, तद्व्याप्तम् ಎಂದರೆ ಮಂಗಲಾನುಷ್ಠಾನವು ನಿವೇಶನದಿಂದ ವ್ಯಾಪ್ತವಾಗಿದೆ ಎಂದರ್ಥ ಸಿಗುತ್ತದೆ.

## ॥ कायावाक् इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**कुत एतत् इत्यतो व्यभिचारात् इति आह– काया इति॥**
**"करशिरस्संयोगः नमश्शब्दः त्वत्तोंहमपकृष्टे मत्तस्त्वं उत्कृष्ट" इत्येवं रूपाणां कायवाक् चित्तकृतानाम् अनेकेषां मङ्गलानाम् इत्यर्थः।**

ಅನುಷ್ಠಾನವು ನಿವೇಶನದ ವ್ಯಾಪಕವಲ್ಲ ಎಂದು ಹೇಗ ತಿಳಿಯುವದು. ಅದಕ್ಕಾಗಿಯೆ ಈ ಟೀಕಾವಾಕ್ಯವಿರುತ್ತದೆ. "करशिर संयोगः नमः शब्दः, त्वत्तोंहमपकृष्टे, ಮತ್ತು मत्तस्त्वं उत्कृष्ट ಮುಂತಾದ ರೂಪಗಳ ಶರೀರ, ವಾಣಿ ಹಾಗೂ ಚಿತ್ತದಿಂದ ಮಾಡಿದ ಅನೇಕ ಮಂಗಲ ಮಾಡುವ ವಿಧಾನಗಳಿರುವದರಿಂದ, ಇಲ್ಲಿ व्यभिचार ಎಂಬ ದೋಷ ಉಂಟಾಗುತ್ತದೆ. व्यभिचार ಕಾರ್ಯಕಾರಣಭಾವ ಇಲ್ಲದೆ ಇರೋಣ ಎಂದರ್ಥ.

**यद्वा उक्त अनुमाने व्यतिरेक व्याप्तिः न सम्भवति व्यभिचारात् इति आह् नापि इति, इति योज्यम्।**

ಅಥವಾ, ನಮೂದಿಸಿದ ಅನುಮಾನದಿಂದ ವ್ಯತಿರೇಕ ವ್ಯಾಪ್ತಿ ಸಂಭವಿಸುವದಿಲ್ಲವಾದ್ದರಿಂದ ವ್ಯಭಿಚಾರ ಉಂಟಾಗುತ್ತದೆ ಎಂದು नापि तद्व्याप्तं ಎಂಬ ಹಿಂದಿನ ಟೀಕಾವಾಕ್ಯದ ಜತೆ ಸಂಯೊಜಿಸಬೇಕು.

**एवं अयोजने सर्वथा एतद्वाक्यं असङ्गतमेव स्यात्। तथा हि–**



**तत् ग्रन्थे निवेशनं अनुष्ठानेन व्याप्तं इत्यर्थकरणे वक्ष्यमाण व्यभिचार कथनस्य असंगतत्वात्। मङ्गलानुष्ठानं ग्रन्थनिवेशनेन व्याप्तं इति अङ्गीकारेपि, मङ्गलानुष्ठानस्य हेतुतया अनुक्तत्वेन तस्य व्यभिचारकथनस्य अश्लिष्टत्वात् इति अवगन्तव्यम्।**

ಹೀಗೆ ಸಂಯೊಜಿಸದಿದ್ದಲ್ಲಿ, ಈ ವಾಕ್ಯವು ಅಸಂಗತವೆನಿಸುತ್ತದೆ. ಇದನ್ನು ಹೀಗೆ ವಿವರಿಸಬಹುದು:

ಈ ಗ್ರಂಥದಲ್ಲಿ ನಿವೇಶನವು ಅನುಷ್ಠಾನದಿಂದ ವ್ಯಾಪ್ತವಾಗಿದೆ ಎಂಬಂರ್ಥದಲ್ಲಿ ಹೇಳಲ್ಪಡುವ ವ್ಯಭಿಚಾರವು ಅಸಂಗತವೆನಿಸುತ್ತದೆ ಎಂದರ್ಥ. ಹಾಗೂ ಮಂಗಲಾನುಷ್ಠಾನ ಗ್ರಂಥನಿವೇಶನದಿಂದ ವ್ಯಾಪ್ತವಾಗಿದೆ ಎಂದು ಅಂಗೀಕರಿಸಿದರೂ, ಇಲ್ಲಿ ಮಂಗಲಾನುಷ್ಠಾನವನ್ನು ಹೇತುವೆಂದು ಹೇಳಿಲ್ಲವಾದ್ದರಿಂದ, ಅದರ ವ್ಯಭಿಚಾರಕಥನವು ಸರಿ ಎನಿಸುವದಿಲ್ಲ ಎಂಬ ಭಾವ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**कुतो न निवेशनं व्यापकं इत्यत आह– कायवाक् इति॥**
**निवेशन विधुराणां कायवाक् चित्तनिमित्तानां अनेकेषां मङ्गलानां शिष्टैः अनुष्ठीयमानानां भावेन व्यभिचारात् न व्यापकत्वं इति भावः।**

ಇಲ್ಲಿ ನಿವೇಶನವು ಅನುಷ್ಠಾನದ ವ್ಯಾಪಕವಾಗುವದಿಲ್ಲ ಎಂದು ಹೇಗೆ ಹೇಳುತ್ತೀರಿ, ಅದಕ್ಕೆ ಈ ಟೀಕಾವಾಕ್ಯವಿರುತ್ತದೆ. ನಿವೇಶನವೆಂದು ಗಣಿಸದ ಕಾಯ, ವಾಕ್ ಮತ್ತು ಚಿತ್ತ ನಿಮಿತ್ತಗಳಿಂದ ಅನೇಕ ಮಂಗಲಗಳನ್ನು ಶಿಷ್ಟರಿಂದ ಅನುಷ್ಠಿಸಲ್ಪಟ್ಟದ್ದರಿಂದ, ವ್ಯಭಿಚಾರ ಉಂಟಾಗುವದರಿಂದ, ನಿವೇಶನವು ಅನುಷ್ಠಾನದ ವ್ಯಾಪಕವಾಗಿರುವದಿಲ್ಲ ಎಂಬ ಭಾವವಿರುತ್ತದೆ.

## ॥ ग्रन्थान्तरे निवेशनादिनैव इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु ग्रन्थादौ मङ्गलाचरणस्य कर्तव्यतां शिष्यान्प्रति ज्ञापयितुं अपि ग्रन्थे निवेशनं कार्यं, तत्कुतो न कृतं इति चेत् तत्र आह– ग्रन्थान्तरेति॥**
**आदि पदेन प्रत्यक्षग्रहणम्।**

ಇಲ್ಲಿ ಒಂದು ಶಂಕೆಗೆ ಆಸ್ಪದವಿದೆ, ಅದನ್ನು ಹೀಗೆ ಪ್ರತಿಪಾದಿಸಬಹುದು:

ಗ್ರಂಥದ ಆದಿಯಲ್ಲಿ ಮಂಗಲಾಚರಣದ ಕರ್ತವ್ಯತೆಯನ್ನು ಶಿಷ್ಯರಿಗೆ ಜ್ಞಾಪಿಸಲಾದರೂ ಗ್ರಂಥದಲ್ಲಿ ಅದರ ನಿವೇಶನ ಮಾಡಬೇಕು. ಹಾಗಿದ್ದರೂ ಶ್ರೀಮದಾಚಾರ್ಯರು ನಿವೇಶನವನ್ನು ಮಾಡಲಿಲ್ಲವೇಕೆ?

ಈ ಸಂಶಯದ ಪರಿಹಾರಗೋಸ್ಕರವೆ, ಈ ಟೀಕಾವಾಕ್ಯವಿರುತ್ತದೆ. ಇಲ್ಲಿ आदि ಪದದಿಂದ ಪ್ರತ್ಯಕ್ಷವನ್ನು ಗ್ರಹಿಸಲಾಗಿದೆ ಎಂಬ ಭಾವ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु शिष्यशिक्षणार्थत्वात् निवेशनमपि मङ्गलस्य आवश्यकम्। अन्यथा शिष्यकर्तृक ग्रन्थारम्भे तेषां मङ्गलकर्तव्यता बुद्धिः न सिध्येत् इत्यतो ग्रन्थान्तर निवेशनादिना एव शिष्याणां स्वयं मङ्गलकर्तव्यता बुद्धेः सम्भवेन प्रयोजनस्य अन्यथा सिद्धत्वात् न निवेशनस्य आवश्यकता इत्याशयेन आह– ग्रन्थान्तरनिवेशनादिना एव इति॥**

ಶಿಷ್ಯಶಿಕ್ಷಣಾರ್ಥಾಕ್ಕಾಗಿಯಾದರೂ ಮಂಗಲದ ನಿವೇಶನ ಕೂಡ ಆವಶ್ಯಕವಾಗಿರುತ್ತದೆ. ಅನ್ಯಥಾ ಶಿಷ್ಯಮಾಡುವ ಗ್ರಂಥಾರಂಭದಲ್ಲಿ ಮಂಗಲಕರ್ತವ್ಯತಾ ಬುದ್ಧಿ ಸಿದ್ಧವಾಗುವದಿಲ್ಲ ಎಂದು, ಗ್ರಂಥದ ಅಂತ್ಯದಲ್ಲಿ ನಿವೇಶನಾದಿಗಳಿಂದಲೇ ಶಿಷ್ಯರಿಗೆ ಸ್ವಯಂ ಮಂಗಲ ಕರ್ತವ್ಯತಾ ಬುದ್ಧಿ ಸಂಭವದಿಂದ, ಪ್ರಯೋಜನವು ಅನ್ಯಥಾ ಸಿದ್ಧವಾದ್ದರಿಂದ, ಅದಕ್ಕಾಗಿ ಇಲ್ಲಿ ಗ್ರಂಥದ ಆದಿಯಲ್ಲಿ ನಿವೇಶನದ ಆವಶ್ಯಕವಿಲ್ಲ ಎಂಬ ಆಶಯದಿಂದ, ಶ್ರೀಮದಾಚಾರ್ಯರ ಮಂಗಲ ಅನನುಷ್ಠಾನಪರ ಈ ಶಂಕೆಯನ್ನು ಈ ಟೀಕಾವಾಕ್ಯ ಪರಿಹರಿಸುತ್ತದೆ.

**आदि पदेन आचार्यीय मङ्गलानुष्ठान दर्शन परिग्रहः।**

ಇಲ್ಲಿ ಆದಿ ಪದದಿಂದ ಆಚಾರ್ಯೀಯ ಮಂಗಲಾನುಷ್ಠಾನದ ದರ್ಶನವನ್ನು ಪರಿಗ್ರಹಿಸಲಾಗಿದೆ.

**अयं भावः – सन्निहिता असन्निहिता भेदेन शिष्या द्विविधाः। तत्र सन्निहितानां ग्रन्थारम्भकालीन आचार्यकृत मङ्गलानुष्ठान दर्शनात्, असन्निहितानन‍ां च ग्रन्थान्तर निवेशनेन तत् अनुमानात् स्वकर्तृक ग्रन्थारम्भकालीन मङ्गलकर्तव्यता बुद्धेः उपपन्नत्वात् न निवेशनं इति दोषः।**

ಇಲ್ಲಿ ಈ ಭಾವವಿರುತ್ತದೆಃ ಶಿಷ್ಯರು ಎರಡು ತರಹರಿರುತ್ತಾರೆಃ ಸನ್ನಿಹಿತ ಅಂದರೆ ಗುರುಗಳ ಜೊತೆಯೆ ಇರುವವರು ಮತ್ತು ಅಸನ್ನಿಹಿತ ಅಂದರೆ ಗುರುಗಳಿಂದ ದೂರ ಇರುವವರು ಎಂದು. ಅಲ್ಲಿ ಸನ್ನಿಹಿತ ಶಿಷ್ಯರು ಗ್ರಂಥಾರಂಭಕಾಲದಲ್ಲಿ ಶ್ರೀಮದಾಚಾರ್ಯರು ಮಾಡಿದ ಮಂಗಲಾನುಷ್ಠಾನವನ್ನು ಕಂಡಿರುತ್ತಾರೆ. ಇನ್ನು ಅಸನ್ನಿಹಿತ ಶಿಷ್ಯರು ಗ್ರಂಥದ ಅಂತ್ಯದಲ್ಲಿಯ ನಿವೇಶನದಿಂದ, ಗ್ರಂಥದ ಆರಂಭದಲ್ಲಿಯ ಮಂಗಲಾನಿಷ್ಠಾನವನ್ನು ಅನುಮಾನದಿಂದ ತಿಳಿದು, ಸ್ವತಃ ಮಾಡುವ ಗ್ರಂಥಾರಂಭ ಕಾಲದಲ್ಲಿ ಮಂಗಲ ಕರ್ತವ್ಯತಾ ಬುದ್ಧಿಯನ್ನು ಹೊಂದುತ್ತಾರೆ. ಆದ್ದರಿಂದ ಗ್ರಂಥಾರಂಭದಲ್ಲಿಯ ನಿವೇಶನ ಇಲ್ಲದಿರುವದು ಯಾವ ದೋಷಕ್ಕೂ ಆಸ್ಪದಕೊಡುವದಿಲ್ಲ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆಃ

**ननु आचार्येण अवश्यं अनुष्ठित मङ्गलस्य निवेशनं कार्यं, शिष्यशिक्षारूप प्रयोजन सद्भावात् इति आशङ्का निरासाय प्रयोजनं अन्यथा सिद्धं इत्याह– ग्रन्थान्तरे इति॥**

ಶ್ರೀಮದಾಚಾರ್ಯರು ಮಂಗಲವನ್ನು ಅವಶ್ಯವಾಗಿ ಆಚರಿಸಬೇಕು, ಏಕೆಂದರೆ ಅದು ಶಿಷ್ಯಶಿಕ್ಷಾರೂಪ ಪ್ರಯೋಜನದಿಂದ ಕೂಡಿರುತ್ತದೆ ಎಂದು ಆಶಂಕಾ ನಿವಾರಿಸಲು ಈ ಪ್ರಯೋಜನವು ಅನ್ಯರೀತಿಯಿಂದ ಸಿದ್ಧವಾಗಿರುತ್ತದೆಂಬುದನ್ನು ಈ ಟೀಕಾವಾಕ್ಯ ಪ್ರತಿಪಾದಿಸುತ್ತದೆ.



**आदि पदेन शिष्टाचारः ग्रन्थान्ते निवेशश्च ग्राह्यः।**

ಇಲ್ಲಿ ಆದಿ ಪದದಿಂದ ಶಿಷ್ಟಾಚಾರ ಮತ್ತು ಗ್ರಂಥದ ಅಂತ್ಯದಲ್ಲಿಯ ನಿವೇಶನವನ್ನು ಗ್ರಹಿಸಲಾಗಿದೆ.

## ॥ अवगमिष्यन्ति इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆಃ

**ग्रन्थादौ मङ्गलाचरणस्य अनुष्ठेयतां इति शेषः। तथा च अत्र निवेशनं किम् कृत्यं इति च शेषः। तथा च शिष्या द्विविधाः। असन्निहिताः सन्निहिताश्च इति। तत्र आद्या ग्रन्थान्तर निवेशनेन ग्रन्थादौ मङ्गलाचरणस्य अनुष्ठेयतां अवगमिष्यन्ति। द्वीतियास्तु प्रत्यक्षत एव इति भावः।**

ಇಲ್ಲಿ, ಟೀಕಾವಾಕ್ಯದ अवगमिष्यन्ति ಪದದ ನಂತರ "ग्रन्थादौ मङ्गलाचरणस्य अनुष्ठेयतां" ಎಂಬ ಪದಗಳನ್ನು ಸೆರಿಸಿ ಅರ್ಥಮಾಡಬೇಕು. ಅದರಂತೆ, ಶಿಷ್ಯರು ಗ್ರಂಥದ ಆದಿಯಲ್ಲಿ ಮಂಗಲಾಚರಣವನ್ನು ಅನುಷ್ಠಿಸುವದು ಕರ್ತವ್ಯವಾಗಿರುತ್ತದೆ ಎಂದು ತಿಳಿದು ಕೊಳ್ಳುತ್ತಾರೆ ಎಂಬ ಭಾವ ವಿರುತ್ತದೆ.

ಅದರಂತೆ, अत्र निवेशनं किम् कृत्यं ಶೇಷವನ್ನು ಸೇರಿಸಬೇಕು ಅಂದರೆ, ಇಲ್ಲಿ ಶ್ರೀಮದಾಚಾರ್ಯರು ನಿವೇಶನವನ್ನು ಏಕೆ ಮಾಡಬೇಕು? ಎಂದು ಹೇಳಿದಂತಾಯಿತು. ಅಂದರೆ ಇಲ್ಲಿ ಶ್ರೀಮದಾಚಾರ್ಯರಿಗೆ ಶಿಷ್ಯರಿಗೆ ಮಂಗಲಾಚರಣದ ಅನುಷ್ಠಾನದ ಕರ್ತವ್ಯವೆಂದು ಜ್ಞಾಪಿಸುವಗೊಸ್ಕರ ನಿವೇಶನ ಮಾಡಬೇಕೆಂಬ ಅವಶ್ಯಕತೆ ಇರುವದಿಲ್ಲ ಎಂದಂರ್ಥ.

ಹಾಗೂ ಶಿಷ್ಯರು ಎರಡು ಪ್ರಕಾರ ಉಳ್ಳವರಾಗಿರುತ್ತಾರೆಃ ದೇಶಕಾಲದಿಂದ ಗುರುಗಳ ಜೊತೆಗೆ ಇರದವರು ಮತ್ತು ದೇಶಕಾಲದಿಂದ ಗುರುಗಳ ಜೊತೆ ಇರುವವರು ಎಂದು. ಅಲ್ಲಿ, ಮೊದಲನೆಯವರು, ಗ್ರಂಥದ ಕೊನೆಯಲ್ಲಿ ಮಾಡಿದ ನಿವೇಶನದಿಂದ, ಗ್ರಂಥದ ಆದಿಯಲ್ಲಿ ಮಂಗಲವನ್ನು ಅನುಷ್ಠಿಸಬೇಕೆಂದು ತಿಳಿದುಕೊಳ್ಳುತ್ತಾರೆ. ಇನ್ನು ಎರಡನೆ ಗುಂಪಿನವರು ಪ್ರತ್ಯಕ್ಷದಿಂದಲೇ ಕಂಡು ತಿಳಿದುಕೊಳ್ಳುತ್ತಾರೆ ಎಂಬ ಭಾವವಿರುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆಃ

**ग्रन्थादौ मङ्गलाचरणस्य कर्तव्यतां इति शेषः।**

ಇಲ್ಲಿ ग्रन्थादौ मङ्गलाचरणस्य कर्तव्यतां ಎಂಬುದನ್ನು ಸೇರಿಸಿ ಅರ್ಥಮಾಡಬೇಕು.

## ॥ अत एव इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆಃ

**ननु अत्र ग्रन्थे निवेशन अभावे, न मङ्गलानुष्ठान सन्देह एव स्यात्, न निश्चय इत्यत आह– अत एव इति॥**

ಹೀಗೆ, ಇಲ್ಲಿ ಗ್ರಂಥದ ಆದಿಯಲ್ಲಿ ನಿವೇಶನವಿಲ್ಲದ ಮೂಲಕ ಮಂಗಲಾನುಷ್ಠಾನದ ಸಂದೇಹವೆನೊ ನಿವಾರಣೆಯಾಯಿತು, ಆದರೆ ಅದರ ನಿಶ್ಚಯವಾಗಲಿಲ್ಲವಲ್ಲ ಎಂಬ ಸಂಶಯ

ನಿವಾರಿಸಲು ಈ ಟೀಕಾವಾಕ್ಯ ಇರುತ್ತದೆ.

**ग्रन्थान्तरे निवेशनाद् एव इत्यर्थः।**

**यद्वा कायवाक् चित्तनिमित्तानां अनेकेषां भावेन ग्रन्थ निवेशनस्य अप्रयोजकत्वात् एव इत्यर्थः।**

ಇದನ್ನು ಗ್ರಂಥದ ಅಂತದಲ್ಲಿ, ಶ್ರೀಮದಾಚಾರ್ಯರು ಮಾಡಿದ ನಿವೇಶನದಿಂದಲೇ ನಿಶ್ಚಯಿಸಬಹುದಾಗಿದೆ ಎಂದರ್ಥ.

ಅಥವಾ ಕಾಯಾವಾಕ್ ಚಿತ್ತನಿಮಿತ್ತ ಮುಂತಾದ ಅನೇಕ ಭಾವಗಳಿಂದ ಗ್ರಂಥ ನಿವೇಶನೆಮಾಡಿದ್ದು ಇವೆಲ್ಲ ಈ ನಿರ್ಧಾರಣೆಗೆ ಅಪ್ರಯೋಜಕಗಳಾಗುತ್ತವೆ ಎಂದರ್ಥ.

ಇಲ್ಲಿ ಶ್ರೀಕೇಶವಾಚಾರ್ಯರು ಹಿಂದೆ ನಮೂದಿಸಿದ ಎಲ್ಲ ಅಂಶಗಳನ್ನು ಅವಲೋಕಿಸಿ, ಇದೇ ಅಭಿಪ್ರಾಯವನ್ನು ವಿವರಿಸುತ್ತಾರೆ. ಇಲ್ಲಿ ಪ್ರತ್ಯೇಕವಾಗಿ ಅವರ ವಿವರಣೆಯನ್ನು ಕೊಟ್ಟಿಲ್ಲ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**आचार्य कर्तृक आरम्भस्य अन्यत्र मङ्गलाचरणेन भूयः साहचर्य दर्शनात्, उपाधि व्यभिचारयोः अदर्शनात्, अत्र अपि तदनुष्ठानं निश्चीयत इति आह–अत एव इति॥**

ಶ್ರೀಮದಾಚಾರ್ಯರು ಆರಂಭ ಮಾಡಿದ ಗ್ರಂಥಕ್ಕೆ, ಅವರು ಮಾಡಿದ ಗ್ರಂಥದ ಅಂತದಲ್ಲಿಯ ಮಂಗಲಾಚರಣೆಯ ಇರುವ ಮೂಲಕ ಸಾಹಚರ್ಯ ಕಂಡುಬರುವದರಿಂದ, ಹಾಗೂ ಉಪಾಧಿ, ವ್ಯಭಿಚಾರಗಳು ಕಾಣದಿರುವದರಿಂದ, ಗ್ರಂಥದ ಆರಂಭದಲ್ಲಿ ಕೂಡ ಮಂಗಲದ ಅನುಷ್ಠಾನವಾಗಿದೆ ಎಂದು ನಿಶ್ಚಯಿಸುತ್ತದೆ, ಅದನ್ನೇ ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ ಎಂಬ ಭಾವವಿರುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु तथापि ग्रन्थारम्भे स्वयं मङ्गलं कर्तव्यमेव इति अवधारणं असन्निहित शिष्याणां न सिद्ध्येत। तत् हि सार्वत्रिक निवेशने सत्येव सम्भवति। तथा सति आचार्यकर्तृक ग्रन्थारम्भेषु तेन मङ्गलस्य अनुष्ठितत्व निश्चयेन क्वाचित् कस्यापि तत् अनुष्ठानस्य अलाभेन शिष्याणां स्वयं अकर्तव्यत्वकोटि प्रापक अभावात्।**

ಹಾಗಾದರೂ ಗ್ರಂಥಾರಂಭದಲ್ಲಿ ಸ್ವಯಂ ಮಂಗಲವನ್ನು ಆಚರಿಸುವದು ಕರ್ತವ್ಯವಾಗಿರುತ್ತದೆ ಎಂದು ನಿರ್ಧಾರಣ ಅಸನ್ನಿಹಿತ ಶಿಷ್ಯರಿಗೆ ಸಿದ್ದವಾಗುವದಿಲ್ಲ. ಇದು ಸಾರ್ವತ್ರಿಕ ನಿವೇಶನದಲ್ಲಿ ಮಾತ್ರ ಸತ್ಯವಾಗಿ ಸಂಭವಿಸುತ್ತದೆ. ಹಾಗಾದಲ್ಲಿ, ಆಚಾರ್ಯಕರ್ತೃಕ ಗ್ರಂಥಾರಂಭದಲ್ಲಿ ಮಂಗಲ ಆಚರಿಸಿದ್ದು ನಿಶ್ಚಯವಾಗಿ, ಯಾರಿಗೂ ಎಲ್ಲಿಯೂ ಆ ಮಂಗಲಾನುಷ್ಠಾನ ಸಿಗದಿದ್ದರಿಂದ ಶಿಷ್ಯರಿಗೆ ಸ್ವಯಂ ಅಕರ್ತವ್ಯತ್ವವಿಕಲ್ಪ ಬರಲು ಸಾಧ್ಯವಿಲ್ಲ.

**क्वाचित्के तत् अनिवेशने सति तु तत्रैव् ग्रन्थे तन्निश्चायक प्रमाण अभावेन आचार्यीय मङ्गलानुष्ठान निश्चय असम्भवेन तस्य अननुष्ठितत्व प्राप्त्या तत एव शिष्यान् प्रति स्वयं अकर्तव्यत्वकोटि प्राप्ति सम्भवात्, तेषां स्वकर्तृक ग्रन्थारम्भे स्वयं मङ्गलं कर्तव्यं न वा इति सन्देहस्यैव प्रसङ्गात्, इत्यतो भवेत् एतदेवं यदि अनुष्ठानस्य निवेशन एक प्रमाणकत्व स्यात्।**



ಕೆಲವು ಶಿಷ್ಯರು ನಿವೇಶನ ಮಾಡದೆ ಇರುವಾಗ, ಅಲ್ಲಿಯೆ ಗ್ರಂಥದಲ್ಲಿ ಮಂಗಲಾನುಷ್ಠಾನದ ನಿಶ್ಚಾಯಕ ಪ್ರಮಾಣ ಇಲ್ಲದಿರುವಾಗ, ಆಚಾರ್ಯೀಯ ಮಂಗಲಾನುಷ್ಠಾನದ ನಿಶ್ಚಯ ಅಸಂಭವವೆನಿಸಿದಾಗ, ಅದರ ಅನನುಷ್ಠಿತತ್ವ ಪ್ರಾಪ್ತವಾಗಿ, ಅದೇ ಶಿಷ್ಯರ ಪ್ರತಿ ಸ್ವಯಂ ಅಕರ್ತವ್ಯತ್ವದವಿಕಲ್ಪ ಉಂಟಾಗುವ ಸಂಭವವೆನಿಸಿದಾಗ, ಅವರು ಸ್ವತಃ ಮಾಡಿದ ಗ್ರಂಥಾರಂಭದಲ್ಲಿ ಸ್ವಯಂ ಮಂಗಲ ಮಾಡಬೇಕೊ ಅಥವ ಮಾಡಬಾರದೊ ಎಂಬ ಸಂದೇಹವೇ ಉಂಟಾಗುವ ಪ್ರಸಂಗ ಬರುತ್ತದೆ. ಹೌದು, ಇದೆಲ್ಲ ಆಗುವದು ಯಾವಗ, ಮಂಗಲಾನುಷ್ಠಾನದ ನಿವೇಶನ ಒಂದೇ ಪ್ರಮಾಣವಾದಾಗ.

**न च एतदस्ति, परमास्तिकत्वादिरूप लिङ्गान्तरस्य अपि निश्चायकत्वात्। ततश्च निवेशनस्थले तेन एव अनिवेशनस्थले लिङ्गान्तरेण आचार्यीय मङ्गलानुष्ठान निश्चयेन आचार्यकर्तृक ग्रन्थारम्भकालीनस्य मङ्गलस्य कृतत्व प्राप्त्या कोटिद्वय प्रापक अभावेन शिष्याणां स्वयं मङ्गलं अनुष्ठेयं न वा इत्येवं रूप अनुष्ठान सन्देह असम्भवात् युज्यत एव मङ्गलं कर्तव्यमेव इति अवधारणं इति न तत् अनिवेशनं दोष इति आशयवान् आह– अत एव॥**

ಅದು ಹಾಗಿರುವದಿಲ್ಲ, ಪರಮಾಸ್ತಿಕತ್ವಾದಿರೂಪ ಲಿಂಗಾಂತರ ಅಂದರೆ ಬೇರೆತರಹದ ತಿಳಿಯುವಳಿಕೆಯು, ಕೂಡ ನಿಶ್ಚಾಯಕವಾಗುತ್ತದೆ. ಅದರಂತೆ, ನಿವೇಶನಸ್ಥಲದಲ್ಲಿಯ ಮಂಗಲಾನುಷ್ಠಾನದಿಂದಲೇ ಅನಿವೇಶನಸ್ಥಲದಲ್ಲಿ ಪರಮಾಸ್ತಿಕರೂಪ ಲಿಂಗಾಂತರದಿಂದ ಆಚಾರ್ಯಿಯ ಮಂಗಲಾನುಷ್ಠಾನದ ನಿಶ್ಚಯವಾಗಿ, ಆಚಾರಕರ್ತೃಕ ಗ್ರಂಥಾರಂಭ ಕಾಲೀನದ ಮಂಗಲದ ಆಚರಣೆಯು ಸಿದ್ಧವಾಗಿ, ವಿಕಲ್ಪದ್ವಯ ಪ್ರಾಪ್ತವಾಗವ ಪ್ರಸಕ್ತಿ ಉಂಟಾಗದೆ ಇರುವದರಿಂದ, ಶಿಷ್ಯರಿಗೆ ಸ್ವಯಂ ಮಂಗಲ ಆಚರಿಸ ಬೇಕೊ ಅಥಾವ ಬೇಡವೊ ಎಂಬ ಸಂದೇಹವೇ ಹುಟ್ಟುವದಿಲ್ಲ, ಅದರಿಂದ ಮಂಗಲ ಅವಶ್ಯವಾಗಿ ಆಚರಿಸತಕ್ಕದ್ದು ಎಂಬ ನಿರ್ಧಾರಣೆ ಉಂಟಾಗುವದು ಯುಕ್ತವಾಗಿದೆ. ಹೀಗಾಗಿ ಗ್ರಂಥಾರಂಭದಲ್ಲಿಯ ಅನಿವೇಶನ ದೋಷ ಬರುವದಿಲ್ಲ ಎಂಬುದನ್ನು ಈ ಟೀಕಾವಾಕ್ಯ ಪ್ರಸ್ಥಾಪಿಸುತ್ತದೆ.

**अनुष्ठानस्य निवेशन एक प्रमाणकत्व अभावं बुद्धिनिष्ठमत एव इति परामृशति। तच्च परमास्तिकत्वात् अनुमीयत इति अन्यत्र उक्त्या च तस्य बुद्धिस्थितत्व सिद्धिः इति अवधेयम्।**

ಇಲ್ಲಿ ಮಂಗಲಾನುಷ್ಠಾನದ ನಿವೇಶನ ಒಂದೆ ಪ್ರಮಾಣಕವಲ್ಲ ಎಂದು ಬುದ್ಧಿನಿಷ್ಠಮತದಿಂದಲೇ ಪರಾಮರ್ಷಿಸಲಾಗಿದೆ. ಅದನ್ನು ಪರಮಾಸ್ತಿಕತ್ವದಿಂದ ಅನುಮಾನಿಸಬಹುದಾಗಿದೆ ಎಂದು ಟೀಕಾಕೃತ್ಪಾದರು ಮತ್ತೆಡೆ ಹೇಳಿರುತ್ತಾರೆ. ಮತ್ತು ಇದರಿಂದ ಬುದ್ಧಿಯಲ್ಲಿದ್ದುದು ಸಿದ್ಧವಾಯಿತು ಎಂದು ಸ್ವೀಕರಿಸಬೇಕು.

**इति शब्दः प्रकरणस्य आरम्भणीयत्व व्याख्येयत्वयोः उपपादन समाप्त्यर्थः।**

ಇಲ್ಲಿ इति ಶಬ್ದವು ವ್ಯಾಖ್ಯಾನದ ಸಮಾಪ್ತಿ ಹಾಗೂ ಗ್ರಂಥದ ಆರಂಬಣೀಯತ್ವವನ್ನು ಸೂಚಿಸುವದಕ್ಕಾಗಿ ಇಡಲಾಗಿದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

ननु न मया आचार्यैः मङ्गलं न अनुष्ठितं इति निश्चियते। अपि तु सन्दिह्य इत्यत आह– अत एव इति॥

ಇಲ್ಲಿ ನಾವು ಶ್ರೀಮದಾಚಾರ್ಯರು ಮಂಗಲಾಚರಣ ಮಾಡಿಲ್ಲ ಎಂದು ನಿಶ್ಚಯಿಸುತ್ತಲಿಲ್ಲ ಆದರೂ ಸಂದೇಹಸುತ್ತೆವೆ, ಇದನ್ನು ಪರಿಹರಿಸಲೆಂದೆ ಈ ಟೀಕಾವಾಕ್ಯವಿರುತ್ತದೆ.

ग्रन्थान्तरे ग्रन्थान्ते च निवेशनेन एव मङ्गलस्य आवश्यकत्व बोधनात् एव इत्यर्थः। न हि परस्य मङ्गलं आवश्यकं इति बोधयन्, परमास्तिकः स्वयं मङ्गलं न अनुष्ठाति इति सम्भवति, इति भावः।

ಮಂಗಲ ಅನುಷ್ಠಾನದ ಅವಶ್ಯಕತೆಯ ಬೋಧನವು, ಶ್ರೀಮದಾಚಾರ್ಯರು ಗ್ರಂಥ ಅಂತ್ಯದಲ್ಲಿ ಮಾಡಿದ ನಿವೇಶನದಿಂದಲೇ ಆಗುತ್ತದೆ ಎಂದಂರ್ಥ. ಹಾಗೂ ಶಿಷ್ಯರಿಗೆ ಮಂಗಲದ ಆವಶ್ಯಕೆತೆಯನ್ನು ಬೋಧಿಸಿ, ಪರಮಾಸ್ತಿಕರಾದ ಶ್ರೀಮದಾಚಾರ್ಯರು ಸ್ವತಃ ಮಂಗಲ ಅನುಷ್ಠಾನಮಾಡಿಲ್ಲ ಎಂದು ಆಗಲು ಸಾಧ್ಯವಿಲ್ಲ ಎಂಬ ಭಾವ.

## ४. मायावादि उक्त प्रपञ्चमिथ्यात्व अनुमान अनुवादः

### टीका

तत्र तावत् मायावादिना उदितं प्रपञ्चमिथ्यात्व अनुमानं अनुवदति।

ಈಗ ಮಾಯಾವಾದಿಗಳು, ಪ್ರಪಂಚ ಮಿಥ್ಯೆಯಾಗಿದೆ ಎಂದು ಸಮರ್ಥಿಸಲು ಹೇಳಿದ ಅನುಮಾನವನ್ನು ಶ್ರೀಮದಾಚಾರ್ಯರು ಅನುವಾದಿಸುತ್ತಾರೆ

### टिप्पणीनाम् विशेषार्थानि

॥ तत्र इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

अस्य प्रकरणस्य आरम्भणीयत्व सिद्धेसति इत्यर्थः।
यद्वा परोदीरित प्रपञ्चमिथ्यात्व अनुमानस्य आभासत्वे व्युत्पादनीये सति इत्यर्थः।

ಇಲ್ಲಿ तत्र ಪದದ ಅರ್ಥ ಹೀಗಿರುತ್ತದೆ: ಈ ಪ್ರಕರಣದ ಮೇಲಿನ ಎಲ್ಲ ವಿವೇಚನೆಗಳಿಂದ, ಈ ಪ್ರಕರಣದ ಆರಂಭಣೆಯತ್ವ ಸಿಧ್ಧವಾಗುತ್ತಿರಲು ಎಂದಂರ್ಥ.

ಅಥವಾ ಪರಪಕ್ಷದವರು ಪ್ರತಿಪಾದಿಸಿದ ಪ್ರಪಂಚ ಮಿಥ್ಯಾತ್ವ ಅನುಮಾನದ ಆಭಾಸತೆಯನ್ನು ಹುಟ್ಟಿಸುವದಕ್ಕಾಗಿ ಎಂದಂರ್ಥ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

प्रथम वाक्यस्य अनुमान आभासत्व व्युत्पाद्कत्वात् आनर्थक्यं आशङ्क्य परिहरति – तत्र इति॥



ಮೊದಲೆನೆ ವಾಕ್ಯವೆ ಅನುಮಾನ ಆಭಾಸತ್ವ ಹುಟ್ಟಿಸುವದರಿಂದ ಉಂಟಾಗುವ ಅನರ್ಥತೆಯನ್ನು ಆಶಂಕಿಸಿ, ಅದನ್ನು ಪರಿಹರಿಸುತ್ತಾರೆ.

परोदीरित प्रपञ्चमिथ्यात्व प्रमाणस्य आभास व्युत्पादके अस्मिन् प्रकरणे इत्यर्थः।

ಪರಪಕ್ಷದವರು ಪ್ರತಿಪಾದಿಸಿದ ಪ್ರಪಂಚ ಮಿಥ್ಯಾತ್ವ ಪ್ರಮಾಣದ ಆಭಾಸತೆಯನ್ನು ಉತ್ಪಾದಿಸುವ ಈ ಪ್ರಕರಣದಲ್ಲಿ ಎಂದಂರ್ಥ.

॥ तावत् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

आभासत्व पश्चात वदिष्यति इति भावः।

ಅಂದರೆ, ಮೊದಲು ಪರಪಕ್ಷದವರು ಪ್ರತಿಪಾದಿಸಿದ ಪ್ರಪಂಚ ಮಿಥ್ಯಾತ್ವ ಅನುಮಾನವನ್ನು ಅನುವಾದಿಸಿ ಆಮೆಲೆ ಅದರ ಆಭಸತ್ವವನ್ನು ಶ್ರೀಮದಾಚಾರ್ಯರು ಪ್ರತಿಪಾದಿಸಲಿದ್ದಾರೆ ಎಂಬ ಭಾವ ವಿರುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

ननु अनुवादो व्यर्थ इति आशङ्क्य, तस्य दूष्य स्वरूप अवगमकतया तत् अवगतिद्वारा आभासत्व व्युत्पादन अयोगात्। अन्यथा अनवधारित स्वरूपस्य दूषणैः आभासताया एव ज्ञापन अयोगात् इति, भावेन दूषणस्य अनुवाद पूर्वकत्वं वक्तुं तावत् इति उक्तम्।

ಪರಪಕ್ಷದವರ ಪ್ರಪಂಚ ಮಿಥ್ಯಾತ್ವ ಪ್ರತಿಪಾದಿಸುವ ಅನುಮಾನದ ಅನುವಾದ ವ್ಯರ್ಥವೆಂದು ಶಂಕಿಸಿ, ಆ ಅನುಮಾನದ ದೂಷ್ಯ ಸ್ವರೂಪವನ್ನು ತಿಳಿದುಕೊಂಡು ಅದರ ತಿಳುವಳಿಕೆ ದ್ವಾರಾ ಆಭಾಸತ್ವವನ್ನು ಉತ್ಪಾದಿಸುವದು ಅಯೋಗ್ಯವೆನಿಸುತ್ತದೆ. ಅನ್ಯಥಾ ತಿಳಿಯದೆಯಿದ್ದ ಸ್ವರೂಪದ ದೂಷಣದಿಂದ ಆಭಾಸತೆಯನ್ನು ಜ್ಞಾಪಿಸುವದೆ ಅಯೋಗ್ಯವಾಗಿರುತ್ತದೆ. ಈ ಭಾವನೆಗಳ ಹಿನ್ನೆಲೆಯಲ್ಲಿ ದೂಷಿಸುವ ಅನುಮಾನದ ದೂಷಣವನ್ನು ಅದರ ಅನುವಾದಪೂರ್ವಕ ವಾಗಿ ಮಾಡಬೇಕೆಂದು ಹೇಳುವ ಗೋಸ್ಕರ ಟೀಕಾಕೃತ್ಪಾದರು तावत् ಎಂದು ಹೇಳಿದ್ದಾರೆ ಎಂಬ ಭಾವ.

॥ अनुमानं अनुवदति इति ॥

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

मायावादिनोक्त मिथ्यात्व अनुमानरूपं वाक्यं उच्चरति इत्यर्थः।

ಮಾಯಾವಾದಿಗಳು ಪ್ರತಿಪಾದಿಸಿದ ಅನುಮಾನರೂಪ ವಾಕ್ಯವನ್ನು ಶ್ರೀಮದಾಚಾರ್ಯರು ಉಚ್ಚರಿಸುತ್ತಾರೆ ಎಂದಂರ್ಥ.

### मिथ्यात्वानुमानखण्डनम्

विमतम् मिथ्या दृश्यत्वात् यदित्थं तत्तथा यथा सम्प्रतिपन्नम्।

**ವಿವಾದಾಸ್ಪದವಾದ ಜಗತ್ತು ಅನುಭವಗೋಚರಾದ್ದರಿಂದ ಮಿಥ್ಯೆಯಾಗಿದೆ. ಯಾವುದು ಅನುಭವಗೋಚರವೊ ಅದೆಲ್ಲವೂ ಮಿಥ್ಯೆಯಾಗಿರುತ್ತದೆ, ಉದಾಹರಣೆಗೆ ಶುಕ್ತಿಯಲ್ಲಿ ಕಾಣುವ ರಜತದಂತೆ.**

## श्रीपद्मनाभतीर्थीयटीका

**प्रपञ्चमिथ्यात्व साधनं यत् तत् दूषयितुं तत्वावादाचार्यः अनुवदति - विमतम इति॥**

**विमतं विवाद अध्यासितं मिथ्यात्वेन लोकसिद्ध रज्जुसर्पादि व्यतिरिक्त गगनादिकं जगन्मिथ्या दृश्यत्वात्। यत् तत् दृश्यं तत् तत् मिथ्याभूतं, दृष्टं यथा शुक्तिरजतम् इत्येतत् अनुमानं निरूपयति।**

ಪ್ರಪಂಚಮಿಥ್ಯಾತ್ವವನ್ನು ಸಾಧಿಸುವ ಯಾವ ಅನುಮಾನವನ್ನು ಮಾಯಾವದಿಗಳು ಪ್ರತಿಪಾದಿಸುತ್ತಾರೊ ಆ ಅನುಮಾನವನ್ನು ದೂಷಿಸಲು ತತ್ವವಾದಾಚಾರ್ಯರು ಅದನ್ನು ಅನುವಾದಿಸುತ್ತಾರೆ.

ವಿವಾದಕ್ಕೆ ಸಿಲುಕಿದ ಆಶ್ರಯವಾದ ಮಿಥ್ಯಾತ್ವವಾದ ಲೋಕಸಿದ್ಧ ರಜ್ಜುಸರ್ಪಾದಿ ವ್ಯತಿರಿಕ್ತ ಗಗನಾದಿಕ ಜಗತ್ತು ಮಿಥ್ಯಾ ಏಕೆಂದರೆ ದೃಷ್ಟಿಗೋಚರವಾಗಿದೆ. ಯಾವ ಯಾವದು ದೃಷ್ಟಿಗೋಚರವೊ ಅದೆಲ್ಲ ಮಿಥ್ಯಾ, ಹೇಗೆ ದೃಷ್ಟವಾದ ಶುಕ್ತಿರಜತ. ಹೀಗೆ ಮಾಯಾವಾದಿಗಳು ಪ್ರತಿಪಾದಿಸುವ ಅನುಮಾನವನ್ನು ತತ್ವವಾದಾಚಾರ್ಯರು ನಿರೂಪಿಸುತ್ತಾರೆ.

ಪರಪಕ್ಷದವರು ಪ್ರತಿಪಾದಿಸಿದ ಪ್ರಪಂಚ ಮಿಥ್ಯಾತ್ವ ಅನುಮಾನದ ತ್ರಯವಯವಗಳು ಹೀಗಿರುತ್ತವೆ:

**प्रतिज्ञा:**
**विमतम् मिथ्या।**
विमतः ಎಂದರೆ ವಿವಾದಾಸ್ಪದವಾದ ಜಗತ್ತು ಎಂದರ್ಥ.
मिथ्या: ಮಿಥ್ಯೆಯಾಗಿದೆ.

**हेतु ಅಥವಾ हेतुवाक्य:**
**दृश्यत्वात् ।**



ಅನುಭವಗೋಚರಾದ್ದರಿಂದ ಎಂದರ್ಥ.

**उदाहरण:**
**यत् इत्थं तत् तथा। यथा सम्प्रतिपन्नम्।**
यत् इत्थं तत् तथा। ಈ ವಾಕ್ಯವು ಸಾಧ್ಯ ಮತ್ತು ಹೇತುವಿನಲ್ಲಿಯ ವ್ಯಾಪ್ತಿ ಸಂಬಂಧವನ್ನು ಪ್ರದರ್ಶಿಸುತ್ತದೆ. ಅಂದರೆ,
यत् इत्थं ಯಾವುದು ಅನುಭವಗೋಚರವೊ तत् तथा ಅದೆಲ್ಲವೂ ಮಿಥ್ಯೆಯಾಗಿರುತ್ತದೆ ಎಂದರ್ಥ.
यथा सम्प्रतिपन्नम्। ಅಂದರೆ, ಎರಡೂ ಪಕ್ಷಗಳಿಗೆ ಸಮ್ಮತವಾದ, ಉದಾಹರಣೆಗೆ ಶುಕ್ತಿಯಲ್ಲಿ ಕಾಣುವ ರಜತದಂತೆ ಎಂದರ್ಥ.
ಇವರೆಗಿನ ವಿವೇಚನೆಯಿಂದ, ಶ್ರೀಮದಾಚಾರ್ಯರು ಪ್ರತಿಪಾದಿಸಿದ ಅನುಮಾನದ ಅರ್ಥ ಹೀಗಾಗುತ್ತದೆ;

**ವಿವಾದಾಸ್ಪದವಾದ ಜಗತ್ತು ಅನುಭವಗೋಚರಾದ್ದರಿಂದ ಮಿಥ್ಯೆಯಾಗಿದೆ. ಯಾವುದು ಅನುಭವಗೋಚರವೊ ಅದೆಲ್ಲವೂ ಮಿಥ್ಯೆಯಾಗಿರುತ್ತದೆ, ಉದಾಹರಣೆಗೆ ಶುಕ್ತಿಯಲ್ಲಿ ಕಾಣುವ ರಜತದಂತೆ.**

### *४.१ अनुवदित मिथ्यात्वानुमानस्य दलकृत्यं*

ಈ ಪರಿಚ್ಛೇದದಲ್ಲಿ ಪರಪಕ್ಷದವರು ಪ್ರತಿಪಾದಿಸಿದ ಮಿಥ್ಯಾತ್ವ ಅನುಮಾನದ ಪ್ರಮಾಣತೆಯನ್ನು ಮತ್ತಿಷ್ಟು ಆಳವಾಗಿ ತಿಳಿದುಕೊಳ್ಳಲು , ಅವರ ಮತದಣುಗುಣವಾಗಿ ಪ್ರತಿಯೊಂದು ಪದಗಳ ಪದಕೃತ್ಯಗಳನ್ನು ಮಾಡಲಾಗುವದು.

#### ४.१.१ मिथ्यात्वानुमाने विमतपदकृत्यम्

## टीका

**"सर्वं मिथ्या" इत्युक्ते ब्रह्मणि प्रमाणबाधः, शुक्तिरजतादौ सिद्धार्थता च स्यात् इति विमतं इति उक्तम्। विमतेः अनेकविधत्वेऽपि साध्य विशेष उपादानात् तत् विशेष सिद्धिः। तथा च सत्यमिथ्यात्वाभ्यां वादिप्रतिवादि विमति विषयो वियदादि इतुक्तं भवति। तर्हि वियदादि इत्येव वक्तव्यम्। न च एवं शङ्क्यं अवच्छेदक अनुक्तौ उक्तदोष अनिस्तारात्।**

ಇಲ್ಲಿ "सर्वं मिथ्या" ಎಂದು ಹೇಳಿದ್ದರೆ, ಬ್ರಹ್ಮನಲ್ಲಿ ಪ್ರಮಾಣಬಾಧ ಉಂಟಾಗುತ್ತದೆ. ಹಾಗೂ ಶುಕ್ತಿರಜತಾದಿಗಳಲ್ಲಿ, (ಅವುಗಳನ್ನು ಮಿಥ್ಯಾ ಎಂದು ಪರಿಗಣಿಸಿದ್ದರಿಂದ) सिद्धार्थता ದೋಷ ಉಂಟಾಗುತ್ತದೆ. ಆದ್ದರಿಂದ ಇಲ್ಲಿ विमतं ಎಂದು ಹೇಳಲಾಗಿದೆ. ವಾದಿಪ್ರತಿವಾದಿಗಳಲ್ಲಿ ವಿವಾದಾಸ್ಪದ ವಿಷಯಗಳು ಅನೇಕವಿದ್ದರೂ ಮಿಥ್ಯಾತ್ವ ಹಾಗೂ ಸತ್ಯತ್ವ ತತ್ವಗಳಲ್ಲಿ ವಿಶೇಷವಾದ ಭಿನ್ನಾಭಿಪ್ರಾಯಗಳಿವೆ, ಉದಾಹರಣೆಗೆ ಸತ್ಯತ್ವ ಹಾಗೂ ಮಿಥ್ಯಾತ್ವ ಎಂಬ ವಾದಿಪ್ರತಿವಾದಿಗಳ ವಿವದಾಸ್ಪದ ವಿಷಯವಾದ वियदादि ಎಂದರೆ ಆಕಾಶಾದಿಗಳಿಂದ ಕೂಡಿದ ಪ್ರಪಂಚ ಎಂದರ್ಥ. ಹಾಗಾದರೆ विमतं ಪದದ ಬದಲು वियदादि ಎಂದು ಹೇಳಬೇಕು. ಹಾಗೆ ಹೇಳಲು ಬರುವದಿಲ್ಲ ಏಕೆಂದರೆ वियदादि ಎಂದು ಹೇಳಿದರೂ ಸರಿಯಾಗಿ अवच्छेदक ವನ್ನು ತೋರಿಸಲು ಬರವದಿಲ್ಲವಾದ್ದರಿಂದ , ಮೇಲೆ ನಮೂದಿಸಿದ ब्रह्मणि प्रमाणबाधः ಹಾಗೂ शुक्तिरजतादौ सिद्धार्थता ದೋಷಗಳನ್ನು ನಿವಾರಿಸಲು ಬರುವದಿಲ್ಲ. ಆದ್ದರಿಂದ ಇಲ್ಲಿ विमतं ಎಂದು ಹೇಳಿದ್ದು ಸಮಂಜಸವಾಗಿದೆ ಎಂಬ ಭಾವ ಇರುತ್ತದೆ.

## टिप्पणीनाम् विशेषार्थानि

### ॥ सर्वं मिथ्या इत्युक्त इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**प्रमाण बाध इति– तस्य सत्यत्वेन, तत्र मिथ्यात्व अभावस्यैव प्रमितत्वात् इति भावः।**

ಪರಪಕ್ಷದವರಂತೆ, ಬ್ರಹ್ಮನೊಬ್ಬನೇ ಯಾವಾಗಲೂ ಸತ್ಯನಾಗಿದ್ದರಿಂದ ಅಲ್ಲಿ ಮಿಥ್ಯಾತ್ವದ ಇಲ್ಲದಿರುವಿಕೆಯು ಎಲ್ಲರಿಗೆ ತಿಳಿದವಿಷಯವಾದಿರುತ್ತದೆ ಎಂಬ ಭಾವ.

**सिद्धार्थता च इति– तत्र मिथ्यात्वस्य सिद्धत्वात् इति भावः।**

ಶುಕ್ತಿಯಲ್ಲಿ ಕಾಣುವ ರಜತ ಮಿಥ್ಯಾ ಎಂದು ಸಿದ್ಧವಾಗಿರುತ್ತದೆ ಎಂಬ ಭಾವ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**ननु कस्य व्याख्यानम्। किम् आचार्यवाक्यस्य उत मायावादिवाक्यस्य।**

ಇಲ್ಲಿ ಒಂದು ಶಂಕೆಗೆ ಆಸ್ಪದವಿದೆ. ಈ ಟೀಕಾವಾಕ್ಯವು ಯಾವ ವಾಕ್ಯದ ವ್ಯಾಖ್ಯಾನ್ವಿರುತ್ತದೆ? ಶ್ರೀಮದಾಚಾರ್ಯರ ವಾಕ್ಯದ್ದೊ ಅಥವಾ ಮಾಯಾವಾದಿವಾಕ್ಯದ್ದೊ?

**न आद्यः। अनुवादके न अन्यथा अनुवाद परिजिहीर्षया विमतं मिथ्या इत्येव वक्तत्वेन, न बाध सिद्धसादनता परिहारार्थं विमतं मिथ्या इत्युक्तं इति उक्ति अयोगात्। न हि आचार्यवर्यः स्वयमेव बाध सिद्धसाधनता परिहाराय प्रयत्नं कृत्वा स्वयमेव अनुमानं दूषयति इति सम्भवति। अन्यथा अनुवाद प्रसङ्गेन, सर्वं मिथ्या इत्युक्ति सम्भावन अभावाच्च।**

ಮೊದಲನೆಯದಾದ, ಶ್ರೀಮದಾಚಾರ್ಯರ ವಾಕ್ಯದ ವ್ಯಾಖ್ಯಾನವೆಂದು ಹೇಳಲಿಕ್ಕಾಗುವದಿಲ್ಲ. ಅನುವಾದದಲ್ಲಿ, ಅನ್ಯಥಾ ಅನುವಾದಕ್ಕೆ ಸ್ಥಾನವಿಲ್ಲದ್ದರಿಂದ ಪರಪಕ್ಷದವರು "विमतं मिथ्या" ಎಂದೆ ಹೇಳಿದ್ದರಿಂದ, ಬಾಧಕ ಹಾಗೂ ಸಿದ್ಧಸಾಧನತಾ ದೋಷ ಪರಿಹಾರಕ್ಕಾಗಿ "विमतं



मिथ्या इत्युक्तं" ಎಂದು ಹೇಳುವ ಟೀಕಾ ವಾಕ್ಯವು ಅಯೋಗವೆನಿಸುತ್ತದೆ. ಹಾಗೆಯೆ, ಶ್ರೀಮದಾಚಾರ್ಯರು, ಸ್ವತಃ ಅನುಮಾನದ ಬಾಧಕ ಮತ್ತು ಸಿದ್ಧಸಾಧನತಾ ದೋಷಗಳ ಪರಿಹಾರಕ್ಕೆ ಪ್ರಯತ್ನವನ್ನು ಮಾಡಿ, ಸ್ವತಃ ಪರರ ಪ್ರಪಂಚ ಮಿಥ್ಯಾ ಅನುಮಾನವನ್ನು ದೂಷಿಸುತ್ತಾರೆ ಎಂದು ಸಂಭವವೆನಿಸುವದಿಲ್ಲ. ಮತ್ತು ಅನ್ಯಥಾ ಅನುವಾದ ಮಾಡಿದ ಪ್ರಸಂಗ ಉಂಟಾಗಿ, "सर्वं मिथ्या" ಎಂಬ ಉಕ್ತಿಯ ಸಂಭಾವನೆಯೆ ಇಲ್ಲದಂತಾಗುವದು.

**नापि द्वितीयः। मायावादिवाक्यस्य एतत् ग्रन्थे निवेशाभावेन व्याख्येयत्वात् इति चेत्, उक्तं, किम् उक्तं, मायावादिवाक्यमेव आचार्येण अनुवाद व्याजेन स्वग्रन्थे निवेशितं इति।**

ಇನ್ನು ಈ ಟೀಕಾವಾಕ್ಯವು ಮಾಯಾವಾದಿಗಳ ವಾಕ್ಯದ ವ್ಯಾಖ್ಯಾನವೆಂತಲೂ ಹೇಳಲಾಗುವದಿಲ್ಲ. ಹಾಗೆ ಮಾಯಾವಾದಿವಾಕ್ಯದ ಗ್ರಂಥದ ಪೂರ್ವಪೀಠಿಕೆಗಾಗಿ ವ್ಯಾಖ್ಯಾನ ಮಾಡಲಾಗಿದೆ ಎಂದು ಅನ್ನೋಣವೆಂದರೆ, ಟೀಕಾ ವಾಕ್ಯದಲ್ಲಿ उक्तं ಎಂದು ಏಕೆ ಹೇಳಲಾಗಿದೆ? ಇದರಿಂದ, ಮಾಯಾವಾದಿಗಳ ವಾಕ್ಯವನ್ನೇ ಶ್ರೀಮದಾಚಾರ್ಯರು ಅನುವಾದದ ನೆಪದಿಂದ ತಮ್ಮ ಗ್ರಂಥದ ಪ್ರಾರಂಭದಲ್ಲಿ ಇಟ್ಟಿದ್ದಾರೆ ಎಂದು ತಿಳಿದುಬರುತ್ತದೆ.

**ततश्च एवं योजना–सर्वं मिथ्या इत्युक्ते ब्रह्मणि प्रमाण बाधः शुक्तिरजतादौ सिद्धार्थता च स्यात् इति, विमतं इति मायावादिनोक्तं तत् च आचार्येण अनुदितम् इति।**

ಅದರಂತೆ ಈ ಟೀಕಾವಾಕ್ಯವನ್ನು ಹೀಗೆ ತಿಳಿಯಬೇಕು: ಇಲ್ಲಿ "सर्वं मिथ्या" ಎಂದು ಹೇಳಿದರೆ ಬ್ರಹ್ಮನಲ್ಲಿ ಪ್ರಮಾಣ ಬಾಧ ಉಂಟಾಗುತ್ತದೆ, ಮತ್ತು ಶುಕ್ತಿರಜತಾದಿಗಳಲ್ಲಿ ಸಿದ್ಧವಾದ ಅರ್ಥವನ್ನೆ ಹೇಳಿದಂತಾಗುತ್ತದೆಂದು "विमतं" ಎಂದು ಮಾಯಾವಾದಿಗಳು ಹೇಳಿದ್ದನ್ನೇ ಶ್ರೀಮದಾಚಾರ್ಯರು ಅನುವಾದ ಮಾಡಿದ್ದಾರೆ ಎಂದರ್ಥ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु शुक्तिरजतादौ साध्यसिद्धौ अपि न सिद्धसाधनम्। पक्षतावच्छेदक अवच्छेदेन साध्यसिद्धेः, इह उद्देश्यतया तदवच्छिन्ने साध्य असिद्ध्या, तत् अनवसरात्। न च तत् सामानाधिकरण्येन साद्ध्य सिद्धेः, उद्देश्यत्वात् सिद्धिसाधनं इति वाच्यम्। तथा सति तत् सामानाधिकरण्येन साध्यसिद्धिरूप उद्देश्य सिद्धेः, अविकलत्वेन उद्देश्य सिद्धि अविरोधात्, ब्रह्मणि अंशे प्रमाण बाधस्य अदोषत्व आपातात्।**

ಇಲ್ಲಿ ಒಂದು ಶಂಕೆ, "सर्वं मिथ्या" ಎಂದು ತೆಗೆದುಕೊಂಡರೆ, ಶುಕ್ತಿರಜತಾದಿಗಳಲ್ಲಿ ಸಾಧ್ಯಸಿದ್ಧಿಸಿದರೂ ಕೂಡ ಇಲ್ಲಿ ಸಿದ್ಧಸಾಧನತಾ ದೋಷವನ್ನು ಹೇಳಲು ಬರುವದಿಲ್ಲ. ಏಕೆಂದರೆ, ಪಕ್ಷವನ್ನು ವಿಂಗಡಿಸುವ ಅವಚ್ಛೇದದಿಂದ ಸಾಧ್ಯಸಿದ್ಧಿಸಿದರೂ, ಇಲ್ಲಿ ಉದ್ದೇಶಪೂರ್ವಕ ಪಕ್ಷವನ್ನು ವಿಂಗಡಿಸಲ್ಪಟ್ಟದ್ದರಿಂದ ಸಾಧ್ಯ ಅಸಿದ್ಧವಾಗುವದರಿಂದ ಅಲ್ಲಿ ಸಿದ್ಧಸಾಧನತಾ ಅಪರ್ಯಾಪ್ತವೆನಿಸುತ್ತದೆ.

ಇಲ್ಲಿ ಸಮಾನ ಅಧಿಕರಣದಿಂದ ಸಾಧ್ಯ ಸಿದ್ಧಿಸುವದರಿಂದ, ಅದೇ ಉದ್ದೇಶವಾಗುವಾಗ ಸಿದ್ಧಸಾಧನತಾ ದೋಷವನ್ನು ಹೇಳಬಹುದಲ್ಲ ಎಂದರೆ ಅದು ಸರಿಯಲ್ಲ. ಹಾಗೆ ಹೇಳುವದಾದರೆ, ಅಂದರೆ, ಇಲ್ಲಿ ಸಮಾನ ಅಧಿಕರಣದಿಂದ ಸಾಧ್ಯಸಿದ್ಧಿರೂಪ ಉದ್ದೇಶ್ಯ ಸಿದ್ಧಿಸುವದಾದರೆ, ಯಾವದೆ ನಿಯಮದ ಉಲ್ಲಂಘವಾಗದೆ ಉದ್ದೇಶ ಸಿದ್ಧಿಯಾಗಿ, ಅದರ ಸಿದ್ಧಿಗೆ ಯಾವದೆ ವಿರೋಧವಿಲ್ಲದಂತಾಗಿ, ಬ್ರಹ್ಮನಲ್ಲಿಯ ಪ್ರಮಾಣಬಾಧದ ದೋಷವನ್ನು, ಅದೋಷವೆಂದು ಪರಿಗಣಿಸ ಬೇಕಾಗುತ್ತದೆ.

**ततश्च यदि अत्र पक्षतावच्छेदक सामानाधिकरण्येन साध्यसिद्धिः उद्देश्या तदा शुक्तिरजतादौ सिद्धसाधनत्व प्रसक्तौ अपि न ब्रह्मणि प्रमाण बाध प्रसङ्गः।**
**यदि च तत् अवच्छेदेन तत् सिद्धेः उद्देश्या, तदा ब्रह्मणि अंशे बाध प्रसक्तौ अपि न शुक्तिरजतादौ सिद्धसाधनता इति।**

ಇನ್ನಷ್ಟು ಸ್ಪಷ್ಟವಾಗಿ ಹೇಳುವದಾದರೆ, ಇಲ್ಲಿ ಪಕ್ಷದ ವಿಂಗಡಕ ಸಮಾನ ಅಧಿಕರಣದಿಂದ ಸಾಧ್ಯಸಿದ್ಧಿಸುವದಾದರೆ, ಅದೇ ಪಕ್ಷದ ವಿಂಗಡಣೆಯ ಉದ್ದೇಶವೆಂದು ಹೇಳಬೇಕು, ಆಗ ಶುಕ್ತಿರಜತಾದಿಗಳಲ್ಲಿ ಸಿದ್ಧಸಾಧನತಾ ಉಂಟಾಗುವದಾದರೂ, ಬ್ರಹ್ಮನಲ್ಲಿ ಪ್ರಮಾಣ ಬಾಧವಿಲ್ಲದ ಪ್ರಸಂಗ ಉಂಟಾಗುವದು. ಇನ್ನು, ಪಕ್ಷದಲ್ಲಿ ಉದ್ದೇಶಪೂರ್ವಕ ಅವಚ್ಛೇದದಿಂದ ಪಕ್ಷದವಿಂಗಡಕದ ಮೂಲಕ ಸಾಧ್ಯಸಿದ್ಧಿಸುವದೆಂದಾದರೆ, ಆಗ ಬ್ರಹ್ಮನಲ್ಲಿ ಪ್ರಮಾಣಬಾಧ ಹೇಳಭುದಾದರೂ, ಶುಕ್ತಿರಜತದಲ್ಲಿ ಸಿದ್ಧಸಾಧನತಾ ಹೇಳಲಾಗುವದಿಲ್ಲ.

**कथं उक्तदोष समावेश अत्र इति चेत्।**

ಹೀಗಿದ್ದಾಗ, ಇಲ್ಲಿ ಎರಡೂ ಹೇಳಲ್ಪಟ್ಟ ದೋಷಗಳನ್ನು ಹೇಗೆ ಸಮಾವೇಶ ಮಾಡುತ್ತೀರಿ ಎಂದರೆ,

**अत्र स्वामिनः, किम् अत्र पक्षतावच्छेदक अवच्छेदेन साध्यसिद्धिः उद्देश्यतया अभिमता, किं वा पक्षतावच्छेदक धर्म सामानाधिकरण्येन।**
**आद्ये ब्रह्मणि बाधः। द्वितीये, शुक्तिरजतादौ सिद्धसाधनता, इति पक्षभेदेन दूषणद्वयं अत्र अभिमतम्।**

ಇದರ ಸಮಾಧಾನ ಹೀಗಿರುತ್ತದೆಃ "सर्वं मिथ्या" ಎಂಬಲ್ಲಿ, ಸ್ವಾಮಿ ತಾವು ಪಕ್ಷವಿಂಗಡಕ ಅವಚ್ಛೆದದಿಂದ ಸಾಧ್ಯಸಿದ್ಧಿ ಎಂದು ಹೇಳುತ್ತೀರೋ, ಅಥವಾ ಪಕ್ಷವಿಂಗಡಕ ಸಮಾನ ಅಧಿಕರಣ ಧರ್ಮದಿಂದಲೊ? ಮೊದಲನೆಯದನ್ನು ಹೇಳುವದಾದರೆ, ಬ್ರಹ್ಮನಲ್ಲಿ ಪ್ರಮಾಣ ಬಾಧ ಉಂಟಾಗುತ್ತದೆ, ಮತ್ತು ತಮ್ಮದು ಎರಡನೆಮತವಾದರೆ, ಶುಕ್ತಿರಜತಾದಿಗಳಲ್ಲಿ ಸಿದ್ಧಸಾಧನತಾ ದೋಷ ಉಂಟಾಗುತ್ತದೆ, ಎಂದು ನಮ್ಮ ಅಭಿಮತವಾಗಿರುತ್ತದೆ ಎಂಬ ಭಾವ.

**यद्यपि समानप्रकारक विरहज्ञानस्यैव प्रतिबन्धकतया ब्रह्मत्व अवच्छेदेन साध्य अभाव निश्चयेऽपि सर्वत्व अवच्छेदेन तत् असिद्ध्या, न अंश बाधस्य दूषणत्वं। तथापि पक्षतावच्छेदक अवच्छेदेन सर्वत्र जायमानाया, अनुमितेः तदंशे प्रमात्व प्रतिबन्धकतया तस्य दोषत्वं इति, अत्र तात्पर्यात् अदोषः।**



**मूले च शब्दस्तु व्यवस्थित विकल्पार्थक वा शब्दार्थः इति, न तद्विरोधः अपि इति।**

ಸಮಾನ ಪ್ರಕಾರಕ ವಿರಹಜ್ಞಾನದಿಂದಲೇ ಪ್ರತಿಬಂಧಕದ ಮೂಲಕ ಬ್ರಹ್ಮತ್ವದ ಅವಚ್ಛೆದದಿಂದ ಸಾಧ್ಯ ಅಭಾವ ನಿಶ್ಚಯವಾದರೂ, ಸರ್ವತ್ವದ ಅವಚ್ಛೇದದಿಂದ ಸಾಧ್ಯ ಅಭಾವತೆಯನ್ನು ಸಾಧಿಸಲು ಬರುವದಿಲ್ಲವಾದ್ದರಿಂದ ಬ್ರಹ್ಮನಲ್ಲಿ ಪ್ರಮಾಣ ಬಾಧಕವನ್ನು ದೂಷಿಸಲು ಬರುವದಿಲ್ಲ. ಹಾಗಿದ್ದರೂ ಪಕ್ಷ ವಿಂಗಡಕ ಅವಚ್ಛೆದದಿಂದ ಸರ್ವತ್ರ ಆಗುವ ಅನುಮಿತಿಯಿಂದ, ಬ್ರಹ್ಮನಲ್ಲಿ ಪ್ರಮಾತ್ವಕ್ಕೆ ಪ್ರತಿಬಂಧಕದ ಮೂಲಕ ದೋಷತ್ವ ಉಂಟಾಗುತ್ತದೆ ಎಂದು ಇಲ್ಲಿ ತಾತ್ಪರ್ಯವಿರುತ್ತದೆ. ಆದ್ದರಿಂದ ಇಲ್ಲಿ ಯಾವದೆ ದೋಷ ಉಂಟಾಗುವದಿಲ್ಲ.

ಮೂಲದಲ್ಲಿ ಅಂದರೆ ಶ್ರೀಮದಾಚಾರ್ಯರ ವಾಕ್ಯದಲ್ಲಿಯ च ಶಬ್ದವು ವ್ಯವಸ್ಥಿತ ವಿಕಲ್ಪಾರ್ಥಕ ಅಥವಾ ಶಬ್ದಾರ್ಥ ಸೂಚಿಸಲು ಉಪಯೋಗಿಸಲಾಗಿದೆ ವಿನಹಾ ವಿರೋಧದಲ್ಲಿ ಅಲ್ಲ ಎಂದಂರ್ಥ.

## ॥ विमतेः अनेकविधत्वेऽपि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆಃ

**नित्यत्व अनित्यत्वादिना इत्यर्थः।**

ಪರಪಕ್ಷ ಹಾಗೂ ನಮ್ಮ ಪಕ್ಷಗಳಲ್ಲಿ ವಿವಾದಾಸ್ಪದವಾದ ವಿಷಯಗಳು ಅನೇಕ ತರಹದಾಗಿರುತ್ತವೆ. ಉದಾಹರಣೆಗೆ ಹೇಳುವದಾದರೆ, ನಿತ್ಯತ್ವ ಹಾಗೂ ಅನಿತ್ಯತ್ವ ವಿಷಯಗಳಲ್ಲಿ ಎಂದಂರ್ಥ.

**साध्य विशेषः मिथ्यात्वम्।**

ವಿವಾದಾಸ್ಪದ ವಿಷಯಗಳಲ್ಲಿ, ವಿಶೇಷವಾಗಿ ಪ್ರಪಂಚ ಮಿಥ್ಯಾ ಎಂದು ಸಾಧಿಸುವ ವಿಚಾರದಲ್ಲಿ ಎಂದಂರ್ಥ.

**तत् विशेषः विमति विशेषः।**

ವಿಶೇಷವಾದ ವಿವಾದಾಸ್ಪದ ಅಥವಾ ಭಿನ್ನಮತಗಳಿವೆ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆಃ

**ननु विमतं इत्युक्तौ अपि ब्रह्मणि प्रमाण बाधः, शुक्तिरजतादौ सिद्धसाधनता च स्यात्। तयोः अपि विमति विषयत्वात् इत्यत आह– विमतेः अनेकविधत्वेपि इति।**

ಇಲ್ಲಿ विमतं ಎಂದು ಹೇಳಿದರೂ ಕೂಡ ಬ್ರಹ್ಮನಲ್ಲಿ ಪ್ರಮಾಣ ಬಾಧ ಹಾಗೂ ಶುಕ್ತಿರಜತಾದಿಗಳಲ್ಲಿ ಸಿದ್ಧಸಾಧನತಾ ದೋಷಗಳು ಉಳದೇಬಿಡುತ್ತವೆ. ಅವುಗಳಲ್ಲಿ ಕೂಡ ವಿವಾದಾಸ್ಪದ ವಿಷಯಗಳು ಇದ್ದೇ ಇವೆ.

ಇದನ್ನು ಈಗಾಗಲೆ ಮೇಲೆ ಶ್ರೀಕೇಶವಾಚಾರ್ಯರ ವಿವರಣೆಯಿಂದ ಓದುಗರು ಪರಿಗಣಿಸಿರಬಹುದು.

## ॥ तथा च इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

तमेव विवृणोति – तथा च इति॥
ಮೇಲೆ ನಮೂದಿಸಿಂತೆ, ಮಿಥ್ಯಾ ಎಂದು ಸಾಧಿಸುವ ವಿಚಾರಗಳಲ್ಲಿ ಎಂಬುದನ್ನು ಇಲ್ಲಿ ವಿವರಿಸುತ್ತಾರೆ ಎಂದಂರ್ಥ.

वियदादि इति– आदि कार्यत्वात् वियत् ग्रहणम्। "आत्मनः आकाशस्सम्भूतः" इति श्रुतेः।
ಇಲ್ಲಿ, आदि ಪದದಿಂದ ಆಕಾಶದ ಕಾರ್ಯವನ್ನು ಗ್ರಹಿಸಲಾಗಿದೆ. ಅಂದರೆ, वियदादि ಅಂದರೆ, ಆಕಾಶ ಮತ್ತು ಅದರ ಕಾರ್ಯ ಪ್ರಪಂಚ ಎಂದಂರ್ಥ.

ಆದರೆ, ಆತ್ಮನು ಆಕಾಶ ಸಂಭೂತನಾಗಿದ್ದಾನೆ ಎಂದು ಶ್ರುತಿ ಹೇಳುತ್ತಿದೆ, ಹೀಗಾಗಿ ಆಕಶಾದಿಗಳು ಸತ್ಯವೊ ಅಥವಾ ಮಿಥ್ಯಾನೊ ಎಂಬ ವಿವಾದ ಉತ್ಪನ್ನವಾಯಿತಲ್ಲ ಎಂಬ ಭಾವವಿರುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

ननु ब्रह्मणोऽपि सत्यत्वमिथ्यात्वाभ्यां तटस्थ विमति विषयत्वेन पक्षत्व आपत्या बाध इत्यत आह– वादिप्रतिवादि इति॥
ಬ್ರಹ್ಮನು ಸಹ, ಸತ್ಯ ಮತ್ತು ಮಿಥ್ಯಾಗಳಲ್ಲಿಯ ವಿವಾದದಿಂದ ಕೂಡಿದ ವಾದಿಪ್ರತಿವಾದಿಗಳ ತಟಸ್ಥ ವಿಷಯಗಳಲ್ಲೂ ವಿವಾದದಿಂದ ಕೂಡಿದ್ದರಿಂದ, ಅವನು ಪಕ್ಷದಲ್ಲಿ ಬರುವದರಿಂದ ಬಾಧ ಉಂಟಾಗುತ್ತದೆ.

वादिप्रतिवादि विमतेः एव पक्षत्व प्रयोजकत्वेन तटस्थ विमतेः अप्रयोजकत्वं इति भावः।
ಪ್ರಸ್ತುತದಲ್ಲಿ, ವಾದಿಪ್ರತಿವಾದಿಗಳ ವಿವಾದಾಸ್ಪದಗಳೆ ಮಾತ್ರ ಪಕ್ಷತ್ವಕ್ಕೆ ಪ್ರಯೋಜಕಗಳಾಗಿವೆ, ಆದ್ದರಿಂದ ತಟಸ್ಥ ವಿವಾದಗಳು ಇಲ್ಲಿ ಅಪ್ರಯೋಜಕಗಳಾಗುತ್ತವೆ ಎಂಬ ಭಾವ.

## ॥ तर्हि वियदादि इत्येव वक्तव्यम् इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

यदि सर्वं मिथ्या इतुक्ते प्रमाण बाधादिः तर्हि तथा अनुक्त्वा वियदादि इत्येव उच्यताम्। तथात्वे प्रमाणबाधादि अभावात्, अतो विमतं इति कस्मात उक्तम्? इति भावः।
ಇನ್ನು सर्वं मिथ्या ಎಂದು ಹೇಳಿದರೆ, ಪ್ರಮಾಣ ಬಾಧಾದಿಗಳು ಉಂಟಾಗುವುದಾದರೆ ಹಾಗೆ ಹೇಳದೆ, वियदादि ಎಂದೇ ಹೇಳಲ್ಪಡಲಿ. ಹಾಗೆಮಾಡಿದಲ್ಲಿ ಪ್ರಮಾಣಬಾಧಾದಿಗಳು ಇಲ್ಲದಾಗುತ್ತವೆ. ಆದ್ದರಿಂದ ಇಲ್ಲಿ विमतं ಎಂದು ಏಕೆ ಹೇಳಲಾಗಿದೆ? ಎಂಬ ಭಾವವಿರುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

आवश्यकत्वात् लाघवाच्च तत्र उक्त दोष अप्रसराच्च इति भावः।
ಅಲ್ಲಿ ವಿಯದಾದಿ ಪದವು ಹಗುರವಾಗಿದ್ದರೂ ಆವಾಶ್ಯಕವಾದ್ದರಿಂದ ಹೇಳಿದದೋಷಗಳು ಹರಡುವದಿಲ್ಲ ಎಂಬ ಭಾವವಿರುತ್ತದೆ.



ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

यदि बाध सिद्धसाधनता परिहाराय प्रयत्नः तर्हि वियदादि इत्येव वक्तव्यं। एवं सति बाध सिद्धसाधनता प्रसक्ति अभावात्। स्फुटं "वियदादि मिथ्या" इति उद्दिश्य प्रतीति सिद्धि सम्भवात् च।
ಇಲ್ಲಿ, ಪ್ರಮಾಣಬಾಧ ಹಾಗೂ ಸಿದ್ಧಸಾಧನತಾ ದೋಷಗಳ ಪರಿಹಾರದ ಪ್ರಯತ್ನಮಾಡುವದಾದರೆ, वियदादि ಎಂದೇ ಹೇಳಬೇಕು. ಹೀಗೆ ಹೇಳಿದಲ್ಲಿ ಪ್ರಮಾಣಬಾಧ ಮತ್ತು ಸಿದ್ಧಸಾಧನತಾ ದೋಷಗಳು ಇಲ್ಲದಾಗಿ, ಹಾಗೂ ಸ್ಫುಟವಾಗಿ "वियदादि मिथ्या" ಎಂದು ಉದ್ದೇಶಿಸಿ ಪರಿಜ್ಞಾನದ ಸಿದ್ಧಿಕೂಡ ಸಂಭವಿಸುವದು.

## ॥ अवच्छेदक अनुक्तौ उक्तदोष अनिस्तारात् इति् ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

अयं अर्थः – वियदादि इत्यत्र आदि शब्दः किम् असंकुचित् वृत्ति? किं वा संकुचित वृत्तिः?
ಇಲ್ಲಿ ಅರ್ಥ ಹೀಗಿರುತ್ತದೆ: वियदादि ಎಂಬಲ್ಲಿಯ आदि ಪದವು ಅಸಂಕುಚಿತ ವೃತ್ತಿಯಲ್ಲಿ ಇರುತ್ತದೊ ಅಥವಾ ಸಂಕುಚಿತ ವೃತ್ತಿಯಲ್ಲಿ ಇರುತ್ತದೊ?

आद्ये ब्रह्म शुक्तिरूप्ययोः अपि पक्षतया बाध सिद्धसाधनता इति।
ಮೊದಲನೆಯದು ಎನ್ನುವದಾದರೆ, ಬ್ರಹ್ಮ ಹಾಗೂ ಶುಕ್ತಿರೂಪ್ಯಗಳು ಪಕ್ಷದಲ್ಲಿ ಬರುವವಾದ್ದರಿಂದ, ಪ್ರಮಾಣ ಹಾಗೂ ಸಿದ್ಧಸಾಧನತಾ ದೋಷಗಳು ಹಾಗೆಯೆ ಉಳಿಯುತ್ತವೆ.

द्वितीये विवक्षित व्यक्ति विशेषेण अनन्तत्वेन, तत्तन्नाम्ना जन्म सहस्रेणापि निर्देष्टुं अशक्यत्वात् इयानेव आदि शब्दार्थ इति किंचित् अवच्छेदकम् वाच्यम्। तच्च विमति विषयत्वात् अतिरिक्तं नास्ति।
ಇನ್ನು ಎರಡನೆಯದು ಎನ್ನುವದಾದರೆ, ವಿವಕ್ಷಿತ ವ್ಯಕ್ತಿ ವಿಶೇಷ ಅನಂತತ್ವದಿಂದ ಕೂಡಿರುವದರಿಂದ, ಅದನ್ನು ಇಷ್ಟೆ ಎಂಬ ಮಾಪುದಾರಿಕೆಯಲ್ಲಿ ಇಡಲು ಜನ್ಮ ಸಹಸ್ರಕಳೆದರೂ ಶಕ್ಯವಿಲ್ಲ. ಆದ್ದರಿಂದ ಇಷ್ಟು ಪರಿಮಾಣವುಳ್ಳ आदि शब्दार्थ ಎಂದು ಅನಿರ್ದಿಷ್ಟವಾದ ಅವಚ್ಛೆದಕವನ್ನು ಹೇಳಬೇಕು. ಮತ್ತು ಅದು ವಿವಾದವಿಷಯದ ಅತಿರಿಕ್ತ ಬೇರೆ ಏನಾದರು ಇರಲು ಸಾಧ್ಯವಿಲ್ಲ.

यद्यपि असद्विलक्षणत्वे सति प्रातिभासिक अतिरिक्तत्वे सति ब्रह्मव्यतिरिक्तं पक्षतावच्छेदकं अस्ति। तथापि प्रतीति गौरवात् न तत् अवच्छेदकम्। लाघवात् विमति विषयत्वमेव अवच्छेदकं इति।
ಆದರೂ "असद्विलक्षणत्वे सति प्रातिभासिक अतिरिक्तत्वे सति ब्रह्मव्यतिरिक्तं" ಎಂದರೆ, ಅಸದ್ವಿಲಕ್ಷಣ ವಿದ್ದು ಪ್ರಾತಿಭಾಸಿಕ ಅತಿರಿಕ್ತವಾಗಿದ್ದು ಬ್ರಹ್ಮನ್ನಿಂದ ವ್ಯತಿರಿಕ್ತವಾದದ್ದು ಎಂಬ ಪಕ್ಷದ ಅವಚ್ಛೇದಕವೆಂದು ಹೇಳಬಹುದಲ್ಲ. ಹಾಗಿದ್ದರೂ ಪರಿಜ್ಞಾನದ ಮರ್ಯಾದೆಯ ಮೇರೆಗೆ ಅದನ್ನು ಅವಚ್ಛೇದಕವೆಂದು ಹೇಳಲು ಬರುವದಿಲ್ಲ. ಹೀಗಾಗಿ ಅದು ಹಗುರ

ಮತವಾಗುತ್ತದೆ. ಆದ್ದರಿಂದ ವಿವಾದಾಸ್ಪದ ವಿಷಯತ್ವವೇ ಅವಚ್ಛೇದಕವೆಂದು ಹೇಳಬೇಕು. ಅದರಂತೆ ಇಲ್ಲಿ विमतं ಎಂದು ಹೇಳಿದ್ದೆ ಸರಿಯಾಗಿದೆ ಎಂಬ ಭಾವ ವಿರುತ್ತದೆ.

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**आदिपदग्राह्यता अवच्छेदक अनुक्तौ इत्यर्थः।**

ಇಲ್ಲಿ ಆದಿಪದವನ್ನು ಗ್ರಹಿಸುವ ಅವಚ್ಛೇದಕವನ್ನು ಹೇಳದೇ ಇರುವದರಿಂದ ಎಂದರ್ಥ.

**तथा च आदिपदग्राह्यता अवच्छेदक अनुक्तौ असंकुचितेन आदिपदेन शुक्तिरजतादेः अपि ग्रहणापत्त्या बाध सिद्धसाधनतारूप उक्तदोष अनिस्तारात् इत्यर्थः।**

ಅದರಂತೆ, ಆದಿಪದಗ್ರಹಿಸುವ ಅವಚ್ಛೇದಕವನ್ನು ಹೇಳದೆ ಇರುವದರಿಂದ, ಅಸಂಕುಚಿತ ಆದಿ ಪದದಿಂದ ಶುಕ್ತಿರಜತಾದಿಗಳನ್ನು ಕೂಡ ಗ್ರಹಿಸಬೇಕಾಗುವದರಿಂದ ಬಾಧ ಹಾಗೂ ಸಿದ್ಧಸಾಧನತಾರೂಪ ಮೇಲೆ ಹೇಳಿದ ದೋಷಗಳ ನಿವಾರಣೆ ಆಗುವದಿಲ್ಲ ಎಂದರ್ಥ.

**एवं च उक्तदोषपरिहाराय आदि पदग्राह्यता अवच्छेदके वाच्ये विमति विषयत्व अतिरिक्तस्य तस्य अभावात् तदेव अवच्छेदकत्वेन वाच्यम्। तथा च तस्यैव पक्षतावच्छेदकत्व उपपत्तौ किं तद्ग्रहाधीन ग्रहणेन वियदादि इति वचनेन इत्याशयेन विमतं इत्येव उक्त इति भावः।**

ಈ ರೀತಿಯಾಗಿ ಮೇಲೆ ಹೇಳಿದ ದೋಷಗಳ ಪರಿಹಾರಕ್ಕಾಗಿ, ಆದಿಪದ ಗ್ರಹಿಸುವ ಅವಚ್ಛೇದಕವನ್ನು (ಅಂದರೆ ಬೇರ್ಪಡಿಸುವಿಕೆಯನ್ನು) ಹೇಳಬೇಕು. ಆ ಅವಚ್ಛೆದಕವು, ವಿಮತಿ ಅಂದರೆ ವಿವಾದಾಸ್ಪದ ವಿಷಯತ್ವ ಹೊರತಾಗಿ ಅದು ಇರಲು ಸಾಧ್ಯವಿಲ್ಲ, ಹೀಗಾಗಿ ವಿಮತಿಭೂತ ವಿವಾದಾಸ್ಪದ ವಿಷಯವನ್ನೇ ಅವಚ್ಛೇದಕವೆಂದು ಹೇಳಬೇಕು. ಅದರಂತೆ ವಿಮತಿಯೆ ಪಕ್ಷ ಅವಚ್ಛೇದಕವೆಂದು ಯುಕ್ತಿ ಪೂರ್ವಕವಾಗಿ ಸಮರ್ಥಿತವಾದದ್ದರಿಂದ, ಅದರ ಗ್ರಹಾಣಾಧೀನವಾದ ವಿಯದಾದಿ ಪದದಿಂದ ಏಕೆ? (ಅಂದರೆ ವಿಯಾದಾದಿ ಪದ ಮಿಮತಿಪದದಲ್ಲಿ ಅಂತರ್ಭೂತವಾಗುತ್ತವೆ) ಎಂಬ ಆಶಯದಿಂದ ವಿಮತಂ ಎಂದು ಹೇಳಲಾಗಿದೆ ಎಂಬ ಭಾವವಿರುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**अवच्छेदक अनुक्तौ ब्रह्मादीनां पक्षप्रवेशभ्रमापत्त्या पुनः बाधादिशंका प्रसङ्गः इति भावः।**

ಇಲ್ಲಿ ಅವಚ್ಛೇದಕ ಹೇಳದಿದ್ದಲ್ಲಿ, ಬ್ರಹ್ಮಾದಿಗಳಿಗೂ ಪಕ್ಷ ಪ್ರವೇಶದ ಭ್ರಮ ಉಂಟಾಗಿ ಪುನಃ ಹಿಂದೆ ನಮೂದಿಸಿದ ಬಾಧಾದಿ ಶಂಕೆಗಳು ಹುಟ್ಟುವ ಪ್ರಸಂಗ ಉಂಟಾಗುತ್ತದೆ ಎಂಬ ಭಾವವಿರುತ್ತದೆ.

### ४.१.२ मिथ्यात्वानुमाने व्यतिरेकव्याप्तिप्रदर्शनाभावे कारणकथनम्

## टीका



**यद्यपि दृश्यत्व हेतुः अन्वयव्यतिरेकी। तथापि अकुटिले अन्वये सम्भवति, न कुटिलो व्यतिरेक आदरणीय इति सूचयितुं यदित्थंतत्तथा इति अन्व एव दर्शितः।**

ಇಲ್ಲಿ, ದೃಶ್ಯತ್ವ ಹೇತು ಅನ್ವಯವ್ಯತಿರೆಕಿ ಯಾಗಿರುತ್ತದೆ. ಅಂದರೆ ಅನ್ವಯ ವ್ಯಾಪ್ತಿ (यत्र यत्र दृश्यत्वं तत्र तत्र मिथ्यात्वं ) ಹಾಗೂ ವ್ಯತಿರೇಕವ್ಯಾಪ್ತಿ (यत्र यत्र मिथ्यात्व अभावः तत्र तत्र दृश्यत्व अभावः) ಎರಡನ್ನು ಹೊಂದಿರುತ್ತದೆ ಎಂದಂರ್ಥ. ಹಾಗಿದ್ದರೂ, ಅಕುಟಿಲ ಅನ್ವಯ ಸಂಭವಿಸುವಾಗ, ಕುಟಿಲವಾದ ವ್ಯತಿರೇಕವನ್ನು ಅನುವಾದ ಮಾಡುವದು ಆದರಣೀಯವಲ್ಲ ಎಂದು ಸೂಚಯಿಸಲು "यदित्थं तत्तथा" ಎಂದು ಅನ್ವಯ ವ್ಯಾಪ್ತಿಯನ್ನು ಮಾತ್ರ ಇಲ್ಲಿ ನಮೂದಿಸಲಾಗಿದೆ.

## टिप्पणीनाम् विशेषार्थानि

**॥ यद्यपि इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ

**परमते व्यतिरेक व्याप्तौ ब्रह्मणो दृष्टान्तस्य सत्वेन, यत् न मिथ्या न तत् दृश्यत्वं इति व्यतिरेकोऽपि प्रदर्शितव्यः इत्यर्थः।**

**सम्भवति सति।**

ಪರಮತದಲ್ಲಿ, ವ್ಯತಿರೇಕ ವ್ಯಾಪ್ತಿಯಲ್ಲಿ ಬ್ರಹ್ಮನ ದೃಷ್ಟಾಂತವು ಸತ್ಯವಾಗಿರುವದರಿಂದ यत् न मिथ्या न तत् दृश्यत्वं इति ಎಂಬ ವ್ಯತಿರೇಕ ವ್ಯಾಪ್ತಿಯನ್ನು ಕೂಡ ಇಲ್ಲಿ ಪ್ರದರ್ಶಿಸ ಬೇಕಾಗಿತ್ತು ಎಂದಂರ್ಥ.

ಟೀಕಾದ तथापि ಎಂದು ಪ್ರಾರಂಭವಾಗುವ ವಾಕ್ಯದಲ್ಲಿ सम्भवति ಪದದ ನಂತರ सति ಪದವನ್ನು ಸೇರಿಸಿ ಅರ್ಥವನ್ನು ಹೇಳಬೇಕು.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**ततश्च अन्वय व्यतिरेकस्य अपि उपदर्शनीयत्वात् तत् अप्रदर्शनं दोषः। यदि च अन्वय व्यतिरेकयोः अन्यतर उपदर्शनेन चारितार्थ्यात्, उभय अप्रदर्शनं इति मन्यसे, तदा व्यतिरेक उपदर्शनेन अपि तत् सिद्धेः अन्वय दर्शन अनुपपत्तिः इति आशंका अभिप्रायः।**

ಇಲ್ಲಿ ಅನ್ವಯ ವ್ಯಾಪ್ತಿಯನ್ನು ಅನುವಾದಿಸಲಾಗಿದೆ. ವ್ಯತಿರೇಕ ವ್ಯಾಪ್ತಿಯನ್ನೂ ಅನುವಾದಿಸಿ ಪ್ರದರ್ಶಿಸಬೇಕಾಗಿತ್ತು, ಅದರ ಅಪ್ರದರ್ಶನ ದೋಷವನ್ನು ಸೂಚಿಸುತ್ತದೆ.

ಅನ್ವಯವ್ಯತಿರೇಕಗಳಲ್ಲಿ ಯವದಾದರೊಂದು ವ್ಯಾಪ್ತಿ ಪ್ರದರ್ಶನದಿಂದ, ಅನುವಾದದ ನಿರ್ವಾಹಣೆ ಆಗುತ್ತಿರುವಾಗ, ಅದನ್ನು ಎರಡೂ ವ್ಯಾಪ್ತಿಗಳ ಅಪ್ರದರ್ಶನವೆಂದು ಮನ್ನಿಸಿದರೆ, ಆಗ ವ್ಯತಿರೇಕ ವ್ಯಾಪ್ತಿ ಪ್ರದರ್ಶನದಿಂದಲೂ ಕೂಡ ಅದು ಸಿದ್ಧವಾಗುವದರಿಂದ , ಅನ್ವಯ ವಾಪ್ತಿ ದರ್ಶನ ಕೂಡ ಸರಿಯಲ್ಲ ಎಂದು ಆಶಂಕಿಸುವ ಪ್ರಸಂಗ ಉಂಟಾಗುವದು ಎಂದರ್ಥ.

### ॥ कुटिल इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**अन्वय व्याप्ति अनुमापकतया प्रकृत साध्यसिद्ध्यंगत्व अभावेन कुटिलत्वं अन्यत्र उपपादितं द्रष्टव्यम्।**

ಪ್ರಕೃತದಲ್ಲಿ, ಪರಪಕ್ಷದವರು ಪ್ರತಿಪಾದಿಸಿದ ಈ ಅನುಮಾನವು ಅವರು ಪ್ರತಿಪಾದಿಸಿದ ಅನ್ವಯವ್ಯಾಪ್ತಿಯು ಸಾಧ್ಯಸಿದ್ಧ್ಯಂಗತ್ವ ವಾಗುವದಿಲ್ಲ ಎಂಬ ಕುಟಿಲತ್ವವನ್ನು ಮತ್ತೆಡೆ ಪ್ರತಿಪಾದಿಸಲಾಗಿದೆ ಎಂದು ತಿಳಿಯಬೇಕು.

### ४.१.३ मिथ्यात्वानुमाने यत्तत्पदयोरावृत्यभावेऽपि विवक्षितार्थ सिद्धिः

## टीका

## यत् तत् इति साधारण प्रयोगात् एव सर्वोपसंहारसिद्धेः द्विर्वचन अभावो न दोषाय। "गौर्न पदा स्प्रष्टव्या" इतिवत्।

ಇಲ್ಲಿ, यत् तत् इति ಎಂದು ಸಾಧಾರಣ ಪ್ರಯೋಗದಿಂದಲೆ ಸಮ್ಯಕ್ ವ್ಯಾಪ್ತಿ ಪ್ರದರ್ಶನರೂಪ ಸರ್ವಾರ್ಥಸಿದ್ಧಿಸುತ್ತಿರುವಾಗ, "यत् यत् इत्थं तत् तत् तथा" ಎಂಬ ದ್ವಿವಚನರೂಪ ಪ್ರಯೋಗವನ್ನು  ವ್ಯಾಪ್ತಿ ಪ್ರದರ್ಶಿಸಲು ಉಪಯೋಗಿಸಿಲ್ಲದ್ದು ಯಾವ ದೋಷವನ್ನುಂಟು ಮಾಡುವದಿಲ್ಲ. ಉದಾಹರಣೆಗೆ गौर्न पदा स्प्रष्टव्या" ಅಂದರೆ ಆಕಳಿಗೆ ತೊಂದರೆ ಕೊಡಬಾರದು. ಎಂಬಂತೆ. ಈ ಪ್ರಯೋಗದಲ್ಲಿ ಆಕಳು ಎಂಬ ಏಕವಚನದಿಂದಲೇ ಪೂರ್ಣ ಅರ್ಥ ಸಿಗುವಾಗ, ದ್ವಿವಚನವಾಗಲಿ ಅಥವಾ ಬಹುವಚನರೂಪ "ಹಸುಗಳಿಗೆ " ಅಥವಾ "ಯಾವ ಯಾವ ಹಸುಗಳಿವೆಯೋ ಅವುಗಳಿಗೆ ತೊಂದರೆ ಕೊಡಬಾರದು ಎಂಬ ಪ್ರಯೋಗ ಮಾಡದಿರುವದು ದೋಷವಲ್ಲ ಎಂದರ್ಥ.

### टिप्पणीनाम् विशेषार्थानि

### ॥ यत् तत् इति साधारण प्रयोगात इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु सर्वोपसंहारेण व्याप्तिग्रहण सिध्यर्थं "यद्यदित्थं तत्तत्तथा" इति यत्तच्छब्दयोः द्विर्वचन रूप वीप्सा वक्तव्य इति चेत् तत् आह – यत्तदिति॥**



ಇಲ್ಲಿ ಸರ್ವತೋಪರಿಯಿಂದ ವ್ಯಾಪ್ತಿಯನ್ನು ಗ್ರಹಿಸಲು "यद्यदित्थं तत्तत्तथा"" ಎಂದು यत् ಮತ್ತು तत् ಪದಗಳ ದ್ವಿರ್ವಚನ ರೂಪ ದ್ವಿರುಕ್ತಿಯನ್ನು ಹೇಳಬೇಕಾಗಿತ್ತು, ಅದಕ್ಕೇನೆ ಈ ಟೀಕಾವಾಕ್ಯವಿರುತ್ತದೆ.

ಇಲ್ಲಿ साधारण ಪದದ ಅರ್ಥ ಸರ್ವಸಂಗ್ರಾಹಕ ಎಂದಿರುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु सकलस्य साधनवतः साध्यवत्वरूप व्याप्त्यन्तर्गत साकल्यार्थत्वात् यद्यदित्थं तत्तथा इति यच्छब्दवीप्साया आवश्यकत्वात् तत् अभावः अत्र दोष इत्यतो वीप्सां विनापि यदित्थं तत्तथा इति सामान्य उक्तैव तत् सिद्धेः वीप्सा अभावः न दोष इत्याह – यत्त्दिति साधारण प्रयोगात् इति॥**

ಇಲ್ಲಿ, ಎಲ್ಲ ಸಾಧನದಿಂದ ಕೂಡಿದ ಸಾಧ್ಯತ್ವ ರೂಪ ವ್ಯಾಪ್ತ್ಯಾಂತರ್ಗತ ಸಾಕಲ್ಯಾರ್ಥವನ್ನು ಹೊಂದಿದ್ದರಿಂದ, "यद्यदित्थं तत्तथा" ಎಂದು  यत् ಪದ ದ್ವಿರುಕ್ತಿಯ ಪ್ರಯೋಗವು ಆವಶ್ಯಕವಾಗಿರುವದರಿಂದ, ಅದರ ಅಭಾವತೆಯು ಒಂದು ದೋಷವೆಂದು ಪರಿಗಣಿಸಲಾಗುವದು. ಆದರೆ ಇಲ್ಲಿ यत् ಪದದ ಆರೀತಿ ದ್ವಿರುಕ್ತಿ ವಿಲ್ಲದೆ यदित्थं तत्तथा इति ಎಂಬ ಸಾಮಾನ್ಯ ಉಕ್ತಿಯಿಂದಲೇ ಅರ್ಥ ಸಿಗುತ್ತಿರುವಾಗ , ಆ ದ್ವಿರುಕ್ತಿಯ ಅಭಾವತೆಯು ದೋಷವೆಂದೆನಿಸುವದಿಲ್ಲ ಎಂಬ ಭಾವವನ್ನು ಈ ಟೀಕಾವಾಕ್ಯ ಹೇಳುತ್ತದೆ.

### ॥"गौर्न पदा स्प्रष्टव्या" इतिवत् इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**द्विर्वचनरूप वीप्साया अभावेऽपि सर्वसंग्रहसिद्धिः इत्यत्र उदाहरणं आह– गौर्नपदा इति॥ "या या गौः सा सा न पदा स्प्रष्टव्या" इति द्विर्वचन अभावेऽपि यथा सर्वगवां पदा अस्प्रष्टव्या सिद्धिः तद्वत् इत्यर्थः।**

ಇಲ್ಲಿ ದ್ವಿರ್ವಚನರೂಪ ದ್ವಿರುಕ್ತಿಯ ಅಭಾವತೆ ಇದ್ದರೂ ಸರ್ವಾರ್ಥ ಸಿದ್ಧಿಯಾಗುತ್ತದೆ ಎಂದು ಹಿಂದೆ ಹೇಳಿದ್ದಕ್ಕೆ ಈಗ ಉದಾಹರಣೆಯನ್ನು ಹೇಳುತ್ತಾರೆ.

"गौर्न पदा स्प्रष्टव्या" ಎಂಬಲ್ಲಿ, "या या गौः सा सा न पदा स्प्रष्टव्या" ಎಂದು या या ಹಾಗೂ सा सा ಎಂಬ ದ್ವಿರ್ವಚನ ಸೂಚಿಸುವ ಪದಗಳ ಅಭಾವತೆ ಇದ್ದರೂ,

यथा सर्वगवां पदा अस्प्रष्टव्या सिद्धिः ಅಂದರೆ, ಹೇಗೆ ಎಲ್ಲ ಆಕಳಗಳನ್ನು ಪೀಡಿಸಬಾರದು ಎಂಬ ಅರ್ಥ ಸಿದ್ಧಿಸುತ್ತದೊ ಅದರಂತೆ  "यदित्थं तत्तथा" ಎಂಬ ಪ್ರಯೋಗವಿರುತ್ತದೆ ಎಂಬ ಭಾವ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**यथा "या या गौः सा सा न पदा स्प्रष्टव्या" इति वीप्साया अभावेऽपि सर्वगवां पदा अस्प्रष्टव्या सिद्धिः तद्वत् इत्यर्थः।**

"गौर्न पदा स्प्रष्टव्या" ಎಂಬಲ್ಲಿ, "या या गौ: सा सा न पदा स्प्रष्टव्या" ಎಂದು या या ಹಾಗೂ सा सा ಎಂಬ ದ್ವಿರ್ವಚನ ಸೂಚಿಸುವ ಪದಗಳ ಅಭಾವತೆ ಇದ್ದರೂ,

यथा सर्वगवां पदा अस्प्रष्टव्या सिद्धि: ಅಂದರೆ, ಹೇಗೆ ಎಲ್ಲ ಆಕಳಗಳನ್ನು ಪೀಡಿಸಬಾರದು ಎಂಬ ಅರ್ಥ ಸಿದ್ಧಿಸುತ್ತದೊ ಅದರಂತೆ "यदित्थं तत्तथा" ಎಂಬ ಪ್ರಯೋಗವಿರುತ್ತದೆ ಎಂಬ ಭಾವ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**सामान्य प्रयोगेन वीप्सार्थ लाभे उदाहरणं आह – गौर्नपदा इति॥**
**दृश्यत्वमिथ्यात्ववत्तया इति शेष इति।**

ಈ ಟೀಕಾವಾಕ್ಯವು ಸಾಮಾನ್ಯ ಪ್ರಯೋಗದಿಂದಲೇ ದ್ವಿರುಕ್ತಿಯಿಂದ ಉಂಟಾಗುವ ಅರ್ಥ ಲಭಿಸುವ ಉದಾಹರಣವನ್ನು ಹೇಳುತ್ತದೆ.

ಈ ಟೀಕಾವಾಕ್ಯದ ನಂತರ "दृश्यत्वमिथ्यात्ववत्तया इति" ಎಂಬ ಪದಗಳನ್ನು ಸೇರಿಸಬೇಕು. ಅಂದರೆ, ಈ ಉದಾಹರಣದಂತೆ ಇಲ್ಲಿ ಅನುಭವಗೊಚರತ್ವ ಮತ್ತು ಮಿಥ್ಯಾತ್ವ ಪದಗಳನ್ನು ಇಡಲಾಗಿದೆ ಎಂದರ್ಥ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**कथं वीप्सां विनापि व्याप्त्यन्तर्गत उक्त साकल्यस्य साधारण प्रयोगात् सिद्धि: इत्यत: तथा दृष्टत्वात्, इत्यभिप्रायेण अनुरुपं दृष्टान्तं आह – गौर्न पदा स्प्रष्टव्या इति॥**

ದ್ವಿರುಕ್ತಿ ಪ್ರಯೋಗ ಮಾಡದೆ ಕೂಡ, ವ್ಯಾಪ್ತ್ಯಾಂತರ್ಗತ ಹೇಳಲ್ಪಟ್ಟ ಸಕಲಾರ್ಥವನ್ನು ಸಾಧಾರಣ ಪ್ರಯೋಗದಿಂದ ಸಿದ್ಧವಾಗುವುದನ್ನು ಕಾಣಬಹುದಾಗಿದೆ ಎಂಬ ಅಭಿಪ್ರಾಯವನ್ನು ಪುಷ್ಟಿಸುವದಕ್ಕೆ ಅನುರೂಪವಾದ ದೃಷ್ಟಾಂತ ಪ್ರತಿಪಾದಿಸಲು ಈ ಟೀಕಾವಾಕ್ಯ ಹೊರಟಿರುತ್ತದೆ.

**ब्राह्मणो न हन्तव्य:। यस्य उभयं हविरार्तिमार्च्छति। य: अवगुरेत्तं शतेन यातायात् इत्यादौ वीप्सां विनापि सामान्योक्त्या व्याप्त्यन्तर्गत उक्तरूप साकल्यस्य सिद्धिदर्शनात् इत्यर्थ:।**

ಅದರಂತೆ, "ब्राह्मणो न हन्तव्य:", "य: अवगुरेत्तं शतेन यातायात्" ಎಂಬ ಮುಂತಾದವುಗಳಲ್ಲಿ ಕೂಡ, ದ್ವಿರುಕ್ತಿ ಪ್ರಯೋಗವಿಲ್ಲದೆ ಸಾಮಾನ್ಯ ಪ್ರಯೋಗದಿಂದಲೂ ವ್ಯಾಪ್ತ್ಯಾಂತರ್ಗತ ಹೇಳಲ್ಪಟ್ಟ ಸಕಲಾರ್ಥ ಸಿದ್ಧವಾಗುವದನ್ನು ಕಾಣಬಹುದಾಗಿದೆ.

**उपलक्षणंच एतत्, "इदं एतत् अभिन्नं एतत् असाधारण धर्माधिकरणत्वात् एतद्वत् " इति अभेद अनुमाने सपक्ष व्यक्ति भेद अभावेन वीप्सार्थ अभावाच्च इत्यपि द्रष्टव्यम्।**

ಇಲ್ಲಿ ಉಪಲಕ್ಷಣದಿಂದ, ಸಪಕ್ಷವಿಲ್ಲದ ಅನುಮಾನದಲ್ಲಿ, ಈ ತರಹದ ದ್ವಿರುಕ್ತಿಯನ್ನು ಪ್ರಯೋಗಿಸಲು ಬರುವದಿಲ್ಲ ಎಂಬುದನ್ನು ತಿಳಿಯಬೇಕು. ಉದಾಹರಣೆಗೆ, "इदं एतत् अभिन्नं



एतत् असाधारण धर्माधिकरणत्वात् एतद्वत् " ಎಂಬ ಅಭೇದ ಅನುಮಾನದಲ್ಲಿ ಸಪಕ್ಷವಿಲ್ಲದ್ದರಿಂದ ದ್ವಿರುಕ್ತಿ ಪ್ರಯೋಗಿಸಲು ಬರುವದಿಲ್ಲ

ಇಲ್ಲಿ ಒಟ್ಟರಲ್ಲಿ ಹೀಗೆ ಹೇಳಿದಂತಾಯಿತು: "यत् यत् दृश्यत्वं तत् तत् मिथ्यात्वं" ಎಂದರೆ, "ಯಾವ ಯಾವದು ಅನುಭವಗೋಚರವೊ ಅದೆಲ್ಲ ಮಿಥ್ಯಾ", ಎಂದು ವ್ಯಾಪ್ತಿ ಪ್ರದರ್ಶಿಸುವ ವಾಕ್ಯವನ್ನು ಶ್ರೀಮದಾಚಾರ್ಯರು "यदित्थं तत्तथा" ಅಂದರೆ, "ಯಾವದು ಅನುಭವಗೋಚರವೊ ಅದು ಮಿಥ್ಯಾ", ಎಂದು ಅದೇ ಅರ್ಥವನ್ನು ಸ್ವಲ್ಪದರಲ್ಲಿ ಹೇಳುವ ವಾಕ್ಯದಿಂದ ಪ್ರತಿಪಾದಿಸಿದ್ದಾರೆ ಎಂಬ ಭಾವವಿರುತ್ತದೆ.

### ४.१.४ मिथ्यात्वानुमाने सम्प्रतिपन्न पदकृत्यम्

## टीका

**सम्प्रतिपन्नं दृश्यत्वमिथ्यात्ववत्तया इति शेष:। सम्प्रतिपन्नग्रहणेन साध्यविकलत्वादि दृष्टान्तदोष निरासोऽपि कृत: स्यात् इति शुक्तिरजतं इत्येव न उक्तम्।**

सम्प्रतिपन्नं ಎಂದರೆ, ಎರಡೂ ಪಕ್ಷದವರು ಒಪ್ಪಿದಂಥ ವಿಷಯ ಎಂದರ್ಥ. ಮೂಲದಲ್ಲಿ सम्प्रतिपन्नं ಪದದ ನಂತರ दृश्यत्वमिथ्यात्ववत्तया इति ಎಂಬ ಪದಗಳನ್ನು ಸೇರಿಸಿ ಅರ್ಥಮಾಡಬೇಕು. ಅಂದರೆ, ದೃಶ್ಯತ್ವ ಹಾಗು ಮಿಥ್ಯಾತ್ವ ವಿಷಯದಲ್ಲಿ, ಎರಡೂ ಪಕ್ಷದವರು ಒಪ್ಪಿದ ವಿಷಯ ಎಂದರ್ಥವಾಗುತ್ತದೆ. ಅದಲ್ಲದೆ, ಇಲ್ಲಿ सम्प्रतिपन्नं ಪದದಿಂದ ಸಾಧ್ಯವಿಕಲತ್ವ ಮುಂತಾದ ದೃಷ್ಟಾಂತ ದೋಷಗಳನ್ನು ನಿವಾರಿಸಿದಂತಾಗಿರುವದರಿಂದ ಶ್ರೀಮದಾಚಾರ್ಯರು शुक्तिरजतं ಎಂದು ಹೇಳಲಿಲ್ಲ.

### टिप्पणीनाम् विशेषार्थानि

**॥ सम्प्रतिपन्नग्रहणेन इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु यथा शुक्तिरजतं इति अनुक्त्वा सम्प्रतिपन्नं इति कस्मात् उक्तं, इत्यत आह – सम्प्रतिपन्नं ग्रहणेन इति॥**

ಇಲ್ಲಿ "यथा शुक्तिरजतं" ಅಂದರೆ "ಶುಕ್ತಿಯಲ್ಲಿ ಕಾಣುವ ರಜತದಂತೆ" ಎಂದು ಹೇಳದೆ, "यथा सम्प्रतिपन्नं" ಅಂದರೆ "ಎರಡೂ ಪಕ್ಷದವರಿಗೆ ಸಮ್ಮತವಾದ ವಿಷಯದಂತೆ" ಎಂದು ಏಕೆ ಹೇಳಲಾಗಿದೆ, ಎಂಬ ಸಂಶಯವನ್ನು ದೂರಮಾಡಲು ಈ ಟೀಕಾವಾಕ್ಯವಿರುತ್ತದೆ.

**आदि पदेन साधन वैकल्य, आश्रयवैकल्यो ग्रहणम्।**

ಪ್ರಸ್ತುತ ಆದಿ ಪದದಿಂದ ಅನುಮಾನಕ್ಕೆ ಒದಗುವ ದೃಷ್ಟಾಂತ ದೋಷಗಳಾದ ಸಾಧನ ವೈಕಲ್ಯ ಮತ್ತು ಆಶ್ರಯವೈಕಲ್ಯಗಳನ್ನೂ ಗ್ರಹಿಸಲಾಗಿದೆ.

ಈ ದೃಷ್ಟಾಂತ ದೋಷಗಳ ಬಗ್ಗೆ ಸ್ವಲ್ಪದರಲ್ಲಿ ಸಾಮಾನ್ಯ ಭಾಷೆಯಲ್ಲಿ ಹೀಗೆ ವಿವರಿಸಬಹುದು: ಈ ದೋಷಗಳು, ದೃಷ್ಟಾಂತದಲ್ಲಿಯ ಅನುಮಾನದ ಕೆಲವೊಂದು ಅಂಶಗಳ ಅಭಾವತೆಯನ್ನು ಸೂಚಿಸುತ್ತವೆ. ಅದರಂತೆ, ಯಾವಾಗ ಪ್ರತಿಪಾದಿಸಿದ ಅನುಮಾನದ ದೃಷ್ಟಾಂತ ವಚನದಲ್ಲಿ, ಅನುಮಾನದ ಸಾಧನ, ಸಾಧ್ಯ ಹಾಗೂ ಆಶ್ರಯಗಳು ಕಂಡುಬರುವದಿಲ್ಲವೋ, ಆಗ ಪ್ರತಿಪಾದಿಸಿದ ಅನುಮಾನವು ಕ್ರಮವಾಗಿ ಸಾಧನ ವೈಕಲ್ಯ, ಸಾಧ್ಯವೈಕಲ್ಯ ಮತ್ತು ಆಶ್ರಯ ವೈಕಲ್ಯ ಎಂಬ ದೃಷ್ಟಾಂತ ದೋಷಗಳಿಂದ ಗ್ರಸ್ತವಾಗುತ್ತದೆ. ಈ ದೃಷ್ಟಾಂತ ದೋಷಗಳ ಪಾರಿಭಾಷಿಕ ವಾಖ್ಯೆಗಳನ್ನು ಈ ಗ್ರಂಥದ ಅಂತ್ಯದಲ್ಲಿ ಕೊಟ್ಟ ಪಾರಿಭಾಷಿಕ ಶಬ್ದಾರ್ಥ ಕೋಶ ದಲ್ಲಿ ವಿವರಿಸಲಾಗಿದೆ.

ಈಗ ಮೇಲೆ ನಮೂದಿಸಿದ ದೃಷ್ಟಾಂತ ದೋಷಗಳನ್ನು ಈ ಕೆಳಗಿನಂತೆ ಪ್ರತಿಪಾದಿಸಬಹುದು. ಒಂದು ವೇಳೆ ಮೇಲೆ ನಮೂದಿಸಿದ ಅನುಮಾನದಲ್ಲಿ "यथा सम्प्रतिपन्नं" ಎಂದು ದೃಷ್ಟಾಂತ ವಚನ ಹೇಳದೆ "यथा शुक्तिरजतं" ಎಂದು ಹೇಳಿದ್ದರೆ.

- ಮೇಲೆ ನಮೂದಿಸಿದ ಅನುಮಾನಕ್ಕೆ ಸಾಧ್ಯ ವೈಕಲ್ಯ ಮತ್ತು ಸಾಧನವೈಕಲ್ಯ ದೋಷಗಳನ್ನು ಹೀಗೆ ಹೇಳಬಹುದು:

  **यदि शुक्तिरजते साध्य साधन धर्मौ न स्यातां तदा किम् धर्मवत्तया तत्र सम्प्रतिपन्नं स्यात्।**
  ಅಂದರೆ, ಒಂದು ವೇಳೆ ಶುಕ್ತಿರಜತದಲ್ಲಿ ಸಾಧ್ಯ ಸಾಧನ ಧರ್ಮಗಳು ಇಲ್ಲವಾದಾಗ, ಆಗ ಯಾವ ಧರ್ಮದ ಮೆರೆಗೆ ಅಲ್ಲಿ ಎರಡೂ ಪಕ್ಷದವರಿಗೆ ಒಪ್ಪಿದಂತ ವಿಷಯವಿರುತಿತ್ತು? ಜಗತ್ತೇ ಇಲ್ಲವೆಂದಾಗ ಅಲ್ಲಿ ಸಾಧ್ಯ ಸಾಧನ ಧರ್ಮಗಳು ಎಲ್ಲಿಂದ ಬರುತ್ತವೆ ಎಂಬ ಭಾವ.

- ಮೇಲೆ ನಮೂದಿಸಿದ ಅನುಮಾನಕ್ಕೆ ಆಶ್ರಯ ವೈಕಲ್ಯದೋಷವನ್ನು ಹೀಗೆ ಹೇಳಬಹುದು:

  **यदि वा शुक्तिरजतमेव न स्यात् तदा साध्य साधन धर्मयोः कुत्र सम्प्रतिपत्ति स्यात्।**
  ಅಂದರೆ, ಒಂದು ವೇಳೆ, ಶುಕ್ತಿರಜತವೇ ಇಲ್ಲದಾಗ ಆಗ ಎರಡೂ ಪಕ್ಷದವರಿಗೆ ಸಾಧ್ಯ ಸಾಧನ ಧರ್ಮಗಳ ಸಮ್ಮತೆ ಎಲ್ಲಿ ಆಗುತಿತ್ತು? ಜಗತ್ತೇ ಇಲ್ಲವೆಂದಾಗ ಶುಕ್ತಿರಜತವು ಎಲ್ಲಿಂದ ಬರುತ್ತದೆ ಎಂಬ ಭಾವ.

**इति एवं साध्यवैकल्यादि दृष्टान्त दोष निरासाय सम्प्रतिग्रहणं कृतम्।**
ಹೀಗೆ ಸಾಧ್ಯವೈಕಲ್ಯಾದಿ ದೃಷ್ಟಾಂತ ದೋಷಗಳ ನಿರಾಸಕ್ಕಾಗಿ "यथा सम्प्रतिपन्नं" ಎಂದು ಹೇಳಲಾಗಿದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:



ಇಲ್ಲಿ ಶ್ರೀಸತ್ಯನಾಥರ ಅಭಿಪ್ರಾಯ ಕಿಂಚಿತ್ ಬೇರೆ ಆಗಿರುತ್ತದೆ. ಅದನ್ನು ಅವರು ಹೀಗೆ ವಿವರಿಸುತ್ತಾರೆ:

**यद्यपि पराभिप्रेत मिथ्यावत्तया शुक्तिरजतादिकं, न अस्माकं सम्प्रतिपन्नं, तथापि अस्माकं सम्प्रतिपन्नं इति भ्रान्त्या परेण तथा उक्तं – शुक्तिरजतं इत्येव न उक्तं इति॥**
ಪರಪಕ್ಷದವರು ಪ್ರತಿಪಾದಿಸುವ ಮಿಥ್ಯಾಧರ್ಮನ್ನೊಳಗೊಂಡ ಶುಕ್ತಿರಜತಾದಿಗಳು ನಮಗೆ ಒಪ್ಪಿಗೆ ಇಲ್ಲದಿದ್ದರೂ, ನಾವು ಅವರು ಪ್ರತಿಪಾದಿಸುವ ಮಿಥ್ಯಾಧರ್ಮದಂತೆಯೇ ಶುಕ್ತಿರಜತಾದಿಗಳು ಮಿಥ್ಯಾ ಎಂದು ಒಪ್ಪಿದ್ದೇವೆ ಎಂಬ ಭ್ರಾಂತಿಯಲ್ಲಿ ಹಾಗೆ ಪರಪಕ್ಷದವರು ಹೇಳಿದ್ದಾರೆ ಎಂದು ಪ್ರತಿಪಾದಿಸಲು ಈ ಟೀಕಾವಾಕ್ಯ ವಿರುತ್ತದೆ.

**परेण इति शेषः।**
ಅದರಂತೆ, ಈ ಟೀಕಾವಾಕ್ಯದ ಅಂತ್ಯದಲ್ಲಿ "परेण इति" ಎಂಬ ಪದಗಳನ್ನು ಸೇರಿಸಿ ಅರ್ಥ ಹೇಳಬೇಕು.

**एतेन साध्यवैकल्यादि दोष परिहाराय स्वयमेव सम्प्रतिपन्नं इत्युक्त्वा पुनः उत्तरत्र साध्यवैकल्यादि दोष अभिधानं अनुपपन्नं परास्तं।**
ಹೀಗೆ ಹೇಳಿದ್ದರಿಂದ, ಸಾಧ್ಯವೈಕಲ್ಯಾದಿ ದೋಷ ಪರಿಹಾರಕ್ಕಾಗಿ ಸ್ವತಃ ಶ್ರೀಮದಾಚಾರ್ಯರು "यथा सम्प्रतिपन्नं" ಎಂದು ಹೇಳಿ, ಪುನಃ ಮುಂದೆ ತಾವೆ ಈ ಗ್ರಂಥದಲ್ಲಿ ಸಾಧ್ಯವೈಕಲ್ಯಾದಿ ದೃಷ್ಟಾಂತ ದೋಷಗಳನ್ನು ಹೇಳುವದು ಸರಿಯಲ್ಲ ಎಂಬ ಬರಬಹುದಾದ ಹೇಳಿಕೆಯನ್ನು ಇಲ್ಲೇ ಖಂಡಿಸಲಾಯಿತು ಎಂದು ತಿಳಿದುಬರುತ್ತದೆ.

## *४.२ प्रपञ्चमिथ्यात्वानुमाने पञ्चावयव अननुवाद कारणम्*

### टीका

**यद्यपि परेण स्वग्रन्थे पञ्चावयव प्रयोग अस्य विहित इति, तथैव अनुवादः युक्तः। तथापि उपनय–निगमनयोः असाधनङ्गत्वात् अनुवाद अर्हतापि नास्ति इति सूचयितुं त्रवयव अनुवादः। तच्च अन्यत्र उपपादितम्। एवं च अनुवदतैव् अधिकं नाम निग्रह स्थानं अपि सूचितं भवति।**

ಪರಪಕ್ಷದವರು ತಮ್ಮ ಗ್ರಂಥಗಳಲ್ಲಿ ಪ್ರಪಂಚ ಮಿಥ್ಯಾತ್ವವನ್ನು ಪ್ರತಿಪಾದಿಸಲು, ಪಂಚ ಅವಯವಗಳಿಂದ (ಪ್ರತಿಜ್ಞಾ, ಹೇತು, ಉದಾಹರಣ, ಉಪನಯ ಮತ್ತು ನಿಗಮನ) ಕೂಡಿದ ಅನುಮಾನವನ್ನು ಪ್ರತಿಪಾದಿಸಿದ್ದಾರೆ. ಇಲ್ಲಿ ಅದರಂತೆಯೇ ಅನುವಾದ ಯುಕ್ತವಾಗಿದ್ದರೂ, ಶ್ರೀಮದಾಚಾರ್ಯರು, ಅನುಮಾನದ ಅವಯವಗಳಾದ ಉಪನಯ ಮತ್ತು ನಿಗಮನಗಳಲ್ಲಿ ಸಾಧಸುವಂತಹದ್ದು ಏನು ಇರುವದಿಲ್ಲ, ಅಂತೆಯೇ ಅವುಗಳ ಅನುವಾದದ ಅವಶ್ಯಕತೆ ಕೂಡ

ಇರುವದಿಲ್ಲ ಎಂದು ಸೂಚಿಸಲು, ಪರಪಕ್ಷದವರು ಪ್ರತಿಪಾದಿಸಿದ ಪಂಚ ಅವಯವ ಅನುಮಾನವನ್ನು ಹಾಗೆಯೇ ಅನುವಾದಿಸಿದೆ, ಅವರು ಪ್ರತಿಪಾದಿಸಿದ ಅನುಮಾನದ ತ್ರವಯವಗಳನ್ನು (ಪ್ರತಿಜ್ಞಾ, ಹೇತು ಮತ್ತು ಉದಾಹರಣ) ಮಾತ್ರ ಅನುವಾದಿಸಿದ್ದಾರೆ. ಮತ್ತು ಈ ಅನುಮಾನದ ಅವಯವ ವಿಷಯಗಳ ಬಗ್ಗೆ, ಶ್ರೀಮದಾಚಾರ್ಯರುತಮ್ಮ ಬೇರೆ ಗ್ರಂಥಗಳಲ್ಲಿ ವಿಶೇಷವಾಗಿ ಪ್ರಸ್ಥಾಪಿಸಿದ್ದಾರೆ.

ಹಾಗೂ, ಇಲ್ಲಿ ಸಾಧ್ಯಸಾಧನ ವಿಶೇಷವಿಲ್ಲದ ವಾಕ್ಯಗಳನ್ನು ಅನುವಾದಿಸುವದು , "अधिकं" ಎಂಬ निग्रह स्थान (ವಾದದಲ್ಲಿಯ ಒಂದು ದೋಷ) ಕ್ಕೆ ಆಸ್ಪದ ಕೊಟ್ಟಂತೆ ಅಗುತ್ತದೆ, ಎಂದು, ಇದರಿಂದ ಸೂಚಿಸಿದಂತಾಯಿತು.

## टिप्पणीनाम् विशेषार्थानि

### ॥ तथैव इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**तथा च "इदं दृश्यं" "तस्मात् मिथ्या" इति उपनय निगमनरूप अवयव द्वय अनुवादोऽपि कर्तव्य इत्यर्थः।**

ಅದರಂತೆ, "इदं दृश्यं" ಎಂದು ಮಿಥ್ಯಾತ್ವ ಅನುಮಾನದ ಉಪನಯರೂಪ, ಹಾಗೂ "तस्मात् मिथ्या" ಎಂದು ಮಿಥ್ಯಾತ್ವ ಅನುಮಾನದ ನಿಗಮನರೂಪ ಅವಯವ ದ್ವಯಗಳನ್ನು ಕೂಡ ಅನುವಾದ ಮಾಡಬೇಕು ಎಂದರ್ಥ.

ಅಂದರೆ, ಪಂಚ ಅವಯವಗಳನ್ನೊಳಗೊಂಡ ಪರಪಕ್ಷದವರು ಪ್ರತಿಪಾದಿಸಿದ ಪ್ರಪಂಚ ಮಿಥ್ಯಾತ್ವದ ಅನುವಾದ ಈ ಕೆಳಗಿನಂತಾಗುತ್ತದೆ.

विमतं मिथ्या दृश्यत्वात्। यदित्थं तत्तथा यथा सम्प्रतिपन्नं। इदं दृश्यं । तस्मात् मिथ्या।

### ॥ तथापि इति॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**यद्यपि दूष्यैकदेश अनुवादे, अननुभाषण प्रसङ्गात् सर्व अनुवादः प्राप्तः। तथापि भट्टमतानुसारिणा परेण अपि उपनय–निगमनयोः असाधनाङ्गता अङ्गीकारात् पञ्चावयव प्रयोगे परस्य अधिकं नाम निग्रहस्थानं सूचयितुं त्रवयव अनुवादः कृतः इत्यर्थः।**

ಇಲ್ಲಿ ಏಕದೇಶ ಅಂದರೆ ಕೆಲವಂಶ ಅನುವಾದಮಾಡಿ ದೂಷಣಮಾಡಿದಲ್ಲಿ, अननुभाषण ಎಂಬ ವಾದ ದೋಷಬರುವದೆಂದು, ಪೂರ್ಣ ಅನುವಾದಮಾಡುವದು ವಿಹಿತವಾಗಿರುತ್ತದೆ. ಆದರೂ, ಭಟ್ಟಮತಾನುಸಾರಿಗಳಾದ ಪರಪಕ್ಷದವರು ಕೂಡ ಉಪನಯ ಮತ್ತು ನಿಗಮನಗಳನ್ನು ಅನುಮಾನದ ಅಸಾಧನ ಅಂಗಗಳೆಂದು ಅಂಗೀಕರಿಸಿದ್ದರಿಂದ, ಪಂಚ ಅವಯವ ಅನುಮಾನದ ಪ್ರಯೋಗವು, ಪರಪಕ್ಷದವರಿಗೆ अधिकं ಎಂಬ ವಾದದಲ್ಲಿ



ಉಂಟಾಗುವ निग्रहस्थानं ಸೂಚಿಸುವದಕ್ಕೆ ಆಸ್ಪದಮಾಡಕೊಟ್ಟಂತಾಗುವದರಿಂದ ಇಲ್ಲಿ ಶ್ರೀಮದಾಚಾರ್ಯರು ತ್ರವಯವ ಅನುವಾದವನ್ನು ಮಾಡಿರುತ್ತಾರೆ.

### ॥ असाधनङ्गत्वात् इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**उपनय वाक्यस्य हेतुवाक्येन गतार्थत्वात्, निगमनस्य च प्रतिज्ञा वाक्येन चरितार्थत्वात् न साधनाङ्गत्वं।**

ಅಂದರೆ, ಉಪನಯ ವಾಕ್ಯವನ್ನು ಹೇತುವಾಕ್ಯದಿಂದಲೇ ತಿಳಿಯಬಹದಾಗಿದೆ, ಹಾಗೂ ನಿಗಮನವನ್ನು ಪ್ರತಿಜ್ಞಾ ವಾಕ್ಯದಿಂದಲೇ ತಿಳಿಯಬಹುದಾಗಿದೆ, ಆದ್ದರಿಂದ ಅವುಗಳು ಅನುಮಾನದ ಸಾಧನಾಂಗಗಳಾಗುವದಿಲ್ಲ.

### ॥ त्रवयव इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**प्रतिज्ञा हेतु उदाहरणरूप् अवयवत्रय इत्यर्थः।**
**मीमांसकैः अवयवत्रय नियम अङ्गीकारात्। मायिनाच व्यवहारे भट्टनयः इति अङ्गीकारात् इति भावः। यथा उक्तं कारिकायां "त्रीन् उदाहरणान्तान्वा, यद्वा उदाहरणादिकान्" मीमांसका इति।**

ಇಲ್ಲಿ ಅನುಮಾನದ ತ್ರವಯವಗಳೆಂದರೆ ಪ್ರತಿಜ್ಞಾ, ಹೇತು ಮತ್ತು ಉದಾಹರಣೆ ಎಂದರ್ಥ. ಮೀಮಾಂಸಕರು ಅನುಮಾನಕ್ಕೆ ಅವಯವತ್ರಯ ನಿಯಮವನ್ನು ಅಂಗೀಕರಿಸಿದ್ದಾರೆ. ಮಾಯಾವಾದಿಗಳು व्यवहारे भट्टनयः ಎಂದು ಅಂಗೀಕರಿಸಿದ್ದಾರೆ. ಹಾಗೆಯೆ कारिका ಗ್ರಂಥದಲ್ಲಿ, ಮೀಮಾಂಸಕರು ಅನುಮಾನದ ತ್ರಯವಯ ನಿಯಮವನ್ನು ಅಂಗೀಕರಿಸಿದ್ದನ್ನು ಹೀಗೆ ವಿವರಿಸಲಾಗಿದೆ "त्रीन् उदाहरणान्तान्वा, यद्वा उदाहरणादिकान्" मीमांसका इति।

### ॥ तच्च इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**उपनय–निगमनयोः असाधनाङ्गत्वं तत्त्वनिर्णयादौ उपपादितम् इत्यर्थः।**

ಶ್ರೀಮದಾಚಾರ್ಯರು, ಉಪನಯ ನಿಗಮನಗಳಿಗೆ ಅಸಾಧನಾಂಗತ್ವವನ್ನು ತಮ್ಮ ವಿಷ್ಣುತತ್ವನಿರ್ಣಯ ಮುಂತಾದ ಗ್ರಂಥಗಳಲ್ಲಿ ಪ್ರದಿಪಾದಿಸಿದ್ದಾರೆ ಎಂದರ್ಥ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**भवेत् एतत् एवं यदि उपनयनिगमनयोः असाधनङ्गत्वंस्यात्, तदेव कुत इत्यत आह– तच्च इति॥**

ಹಾಗಿದ್ದರೆ ತ್ರವಯವ ಅನುವಾದವೆ ಇರಲಿ, ಒಂದು ವೇಳೆ ಉಪನಯ ನಿಗಮನಗಳಿಗೆ ಅಸಾಧನಾಂಗತ್ವವು ಇದ್ದಲ್ಲಿ, ಅದು ಹೇಗೆ ಎಂಬುದನ್ನು ವಿವರಿಸುವಗೋಸ್ಕರವೇ ಈ ಟೀಕಾವಾಕ್ಯವಿರುತ್ತದೆ.

### ॥ अन्यत्र इति॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**प्रमाणलक्षणादौ इत्यर्थः।**

ಇಲ್ಲಿ अन्यत्र ಎಂದರೆ, ಶ್ರೀಮದಾಚಾರ್ಯರು ತಮ್ಮ ಪ್ರಮಾಣಲಕ್ಷಣಾದಿ ಗ್ರಂಥಗಳಲ್ಲಿ ಎಂದರ್ಥ

**उपनयनस्य हेतुवचनेन, निगमनस्य च प्रतिज्ञावाक्येन गतार्थत्वात् न साधनाङ्गत्वम्।**

ಉಪನಯವು, ಅನುಮಾನದ ಹೇತು ವಚನದಿಂದ, ಮತ್ತು ನಿಗಮನವು ಅನುಮಾನದ ಪ್ರತಿಜ್ಞಾವಾಕ್ಯದಿಂದ ತಿಳಿಯಲ್ಪಡುವದರಿಂದ, ಅವುಗಳಿಗೆ ಅನುಮಾನದ ಸಾಧನಾಂಗತ್ವ ಉಂಟಾಗುವದಿಲ್ಲ.

**न च उपसंहारार्थत्वात् निगमनस्य न अनर्थकं इति वाच्यम्। विजातीय बहुप्रमेय अव्यवधानेन तत् अनपेक्षणात्। अन्यथा प्रत्येकं कण्टकोद्धार नन्तरं, तस्मात् सर्वदोषपरिहारात् इदं साधकं इत्याद्यपि निगमन नियतं स्यात।**

ಇನ್ನು ನಿಗಮನವು ಉಪಸಂಹಾರಾರ್ಥಕ್ಕಾಗಿ ಪ್ರಯೋಗಿಸಲಾಗುತ್ತದೆ, ಅದಕ್ಕೆ ಅದು ಪ್ರಯೋಜನವಿಲ್ಲದ್ದು ಎಂದು ಹೇಳಬಾರದು. ಏಕೆಂದರೆ, ಅದು ವಿಜಾತೀಯ ಬಹುಪ್ರಮೇಯನ್ನೊಳಗೊಂಡದ್ದರಿಂದ ಅದು ಅಪೇಕ್ಷಿತವೆನಿಸುವದಿಲ್ಲ. ಹಾಗಿಲ್ಲದಿದ್ದಲ್ಲಿ, ಪ್ರತ್ಯೈಕೆ ಅನುಮಾನ ಸಿದ್ಧಿಯ ನಂತರ "तस्मात् सर्वदोषपरिहारात् इदं साधकं।" (ಆದ್ದರಿಂದ ಎಲ್ಲದೋಷಗಳು ಪರಿಹರಿಸಿದ್ದರಿಂದ, ಇದನ್ನು ಸಾಧಿಸಲಾಯಿತು) ಎಂದು ನಿಗಮನ ನಿಯಾಮಕವಾಗಬೇಕದೀತು.

**न च बाधादि शङ्का निरासार्थं तत् इति वाच्यं। उदाहरण उपनय उक्त व्याप्ति पक्षधर्मताभ्यां एव विरोध सर्वदोष प्रतिक्षेपात् इति उपपादन प्रकारः अवधेयः। शिष्ट चिरन्तन टीकायां एवं स्पष्टं, तत एव प्रतिपत्तव्यम्।**

ಇನ್ನು ಪ್ರಮಾಣ ಬಾಧಾದಿ ಶಂಕೆಗಳ ನಿರಸನಗೋಸ್ಕರ ನಿಗಮನ ಸಾಧನಾಂಗವಾಗ ಬಹುದಲ್ಲ ಎಂದು ಹೇಳಲು ಬರುವದಿಲ್ಲ. ಅನುಮಾನದ ಅಂಗಗಳಾದ ಉದಾಹರಣ, ಉಪನಯ ಪ್ರತಿಪಾದಿಸಿದ ವ್ಯಾಪ್ತಿ, ಹಾಗೂ ಪಕ್ಷಧರ್ಮತಾಗಳಿಂದಲೇ ವಿರೋಧ, ಸರ್ವದೋಷಗಳನ್ನು ಪರಿಹರಿಸಲಾಗುತ್ತದೆ, ಎಂಬ ಪ್ರತಿಪಾದಿಸುವ ಪ್ರಕಾರದಿಂದ ಅರಿತುಕೊಳ್ಳಬೇಕು. ಹಾಗೂ ಇದು ವ್ಯಾಸತೀರ್ಥರ ಟಿಪ್ಪಣಿಯಿಂದಲೆ ಟೀಕಾದಿಂದಲೆ ಸ್ಪಷ್ಟವಾಗಿರುತ್ತದೆ. ಹಾಗೆಯೆ ತಿಳಿಯತಕ್ಕದ್ದು.

## ॥ एवं च अनुवदत इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**मायिना स्वग्रन्थे पञ्चावयव प्रयोगे विहितेऽपि अवयवत्रय अनुवादं कुर्वता आचार्येण इत्यर्थः।**



ಮಾಯಾವಾದಿಗಳು ತಮ್ಮಗ್ರಂಥದಲ್ಲಿ ಪ್ರಪಂಚ ಮಿಥ್ಯಾ ಎಂದು ಪ್ರತಿಪಾದಿಸಲು, ಪಂಚಾವಯವ ಅನುಮಾನದ ಪ್ರಯೋಗ ಮಾಡಿದ್ದರೂ, ಆ ಅನುಮಾನದ ಅವಯವತ್ರಯ ಅನುವಾದ ಮಾಡುವ ಶ್ರೀಮದಾಚಾರ್ಯರು ಎಂದರ್ಥ.

**अपि शब्दः अपसिद्धान्त समुच्चायकः। तथा च व्यवहारे भट्टनयः इति अङ्गीकृतापि मायिनः पुनः पञ्चावयव प्रयोग विधाने, आधिक्येन निग्रहः अपसिद्धान्तश्च सूचितम् अनेन इति द्रष्टव्यं इत्यर्थः।**

ಇಲ್ಲಿ अपि ಶಬ್ದವು अपसिद्धान्त ದೋಷವನ್ನು ಜೊತೆಗೂಡಿಸುತ್ತದೆ. ಅಪಸಿದ್ಧಾಂತ ಎಂದರೆ ಪೂರ್ವದಲ್ಲಿ ಅಂಗೀಕೃತ ಪ್ರಮೆಯಕ್ಕೆ ವಿರುದ್ಧವಾದುದನ್ನು ಅಂಗೀಕರಿಸುವದು ಎಂದರ್ಥ. ಅದರಂತೆ, व्यवहारे भट्टनयः इति ಅಂದರೆ "ವ್ಯವಹಾರದಲ್ಲಿ ನಾವು ಭಾಟ್ಟರ ಮತಾನುಯಾಯಿಗಳು" ಎಂದು ಅಂಗೀಕರಿಸಿದ ಮಾಯಾವಾದಿಗಳು ಪುನಃ ಪಂಚಾವಯವ ಅನುಮಾನ ಪ್ರಯೊಗಿಸುವದು, आधिक्य ಎಂಬ ನಿಗ್ರಹ ಸ್ಥಾನ ಹಾಗೂ ಅಪಸಿದ್ಧಾಂತ ಎಂಬ ದೋಷಕ್ಕೊಳಗಾಗುತ್ತದೆ ಎಂದು ಇದರಿಂದ ಶ್ರೀಮದಾಚಾರ್ಯರು ಸೂಚಿಸಿದ್ದಾರೆ ಎಂದು ತಿಳಿಯಬೇಕು ಎಂದರ್ಥ.

### ४.२.१ सत्यनाथीय इतः परं टीकायां टिप्पण्या भिन्नभिप्राय निरूपणम्

ಇಲ್ಲಿ ಶ್ರೀಸತ್ಯನಾಥರು ತಮ್ಮ ಪರಶು ಟಿಪ್ಪಣಿಯಲ್ಲಿ, ಅತಿಸೂಕ್ಷ್ಮವಾದ ಗಹನವಾದ ಶಾಸ್ತ್ರದ ತತ್ವಗಳ, ಕೆಲವೊಂದು ಅಂಶಗಳಕಡೆ ಓದುಗರ ಗಮನ ಸೆಳೆಯುತ್ತಾರೆ. ಅವರ ಈ ಅಂಶಗಳು ಇತರ ಟಿಪ್ಪಣಿಕಾರರಿಂದ ಸಾಕಷ್ಟು ಭಿನ್ನವಾಗಿದ್ದು, ಇತರ ಟಿಪ್ಪಣಿಕಾರರ ವ್ಯಾಖ್ಯಾನಕ್ಕೆ ವಿರೋಧವನ್ನು ಕೂಡ ಸೂಚಿಸುತ್ತವೆ. ಅದಲ್ಲದೆ ಶ್ರೀಸತ್ಯನಾಥರು ಅದನ್ನು ಶಾಸ್ತ್ರದ ಚೌಕಟ್ಟಿನಲ್ಲಿ ತುಂಬ ಸೌಜನ್ಯಪೂರ್ವಕ ಸಮರ್ಥಿಸುತ್ತಾರೆ.

ಇದು ಅವರ ಮಧ್ವಶಾಸ್ತ್ರದಲ್ಲಿಯ ಅಮೋಘವಾದ ಪಾಂಡಿತ್ಯ ಹಾಗೂ ಸಂಶೋಧನೆಯ ಅಗ್ರೆಸರತೆಯನ್ನು ಎತ್ತಿ ತೋರಿಸುತ್ತದೆ.

ಹೌದು ಅಪರೋಕ್ಷಜ್ಞಾನಿಗಳ ಕೆಲೆವೊಂದು ಅಂಶಗಳಲ್ಲಿ ಭಿನ್ನಾಭಿಪ್ರಾಯಗಳು ಕಂಡುಬಂದರೂ, ಶಾಸ್ತ್ರದ ಚೌಕಟ್ಟಿನಲ್ಲಿ ಅವೇಲ್ಲವೂ ನಮಗೆ ಅಮೃತ ಧಾರೆಗಳೆ ಎಂದು ಇದರಿಂದ ತಿಳಿದುಬರುತ್ತದೆ.

## ॥ यद्यपि परेण इति॥

**इतः परं टीकायां श्रूयमाणं "उपनयनिगमनयोः असाधनाङ्गत्वात् अनुवादार्हतापि नास्ति इति सूचयितुं त्रवयव अनुवादः। तच्च अन्यत्र उपपादितम्। एवं च अनुवदतैव अधिकं नाम निग्रह स्थानं अपि सूचितं भवति।" इति वाक्य त्रयं प्रक्षिप्तं न टीकावाक्यम्।**

ಇತರ ಟಿಪ್ಪಣಿಕಾರರ ವ್ಯಾಖ್ಯಾನದಲ್ಲಿ ಕಂಡುಬರುವ उपनयनिगमनयोः..., तच्च..., ಹಾಗೂ एवं

ಚ ..ಇತಿ, ಎಂಬ ವಾಕ್ಯತ್ರಯಗಳು ಬೇರೆಯವರು ಸೇರಿಸಿದ ವಾಕ್ಯಗಳಾಗಿವೆ, ಅವು ಟೀಕಾ ವಾಕ್ಯಗಳಲ್ಲ.

**तथापि इत्यतः परं उपनयनिगमनयोः इह अदूषणात् , अदूष्यांश अनुवादे आधिक्यं स्यात् इति, तत् परिहाराय इत्येतावत् उत्सन्नम्। अवश्यं च एतदेवं विज्ञेयम्।**

ಹಾಗಿದ್ದರೂ, ಪರಪಕ್ಷದವರು ಪ್ರಯೋಗಿಸಿದ ಪ್ರಪಂಚ ಮಿಥ್ಯಾ ಎಂದು ಪ್ರತಿಪಾದಿಸಲು ಪ್ರಯೋಗಿಸಿದ ಪಂಚವಯವ ಅನುಮಾನದ ಉಪನಯ ನಿಗಮನಗಳನ್ನು ಇಲ್ಲಿ ದೂಷಿಸಲ್ಪಟ್ಟದ್ದರಿಂದ, ದೂಷಿಸಲ್ಪಡದ ಅಂಶವನ್ನು ಅನುವಾದ ಮಾಡುವದು, ಆಧಿಕ್ಯಂ ಎಂಬ ದೋಷಕ್ಕೆ ಆಸ್ಪದಕೊಟ್ಟಂತಾಗುವದರಿಂದ ಅದರ ಪರಿಹಾರಕ್ಕಾಗಿ, ಅವುಗಳನ್ನು ಅನುವದಿಸಲಿಲ್ಲ. ಇದನ್ನು ಅವಶ್ಯವಾಗಿ ತಿಳಿಯಬೇಕು.

**उपनय निगमनयोः स्वमते साधनाङ्गत्वात्। व्यवहारे भट्टनयः इति वदता, परेणापि प्रतिज्ञा–हेतु–उदाहरणानाम् इव उदाहरण–उपनय–निगमनानामपि साधनाङ्गत्व अङ्गीकारेण उपनयनिगमनयोः असाधनाङ्गत्वात् इत्युक्तेः अयुक्तत्वात्।**

ಹಾಗೂ ಉಪನಯ ಹಾಗೂ ನಿಗಮನಗಳು ನಮ್ಮ ಪಕ್ಷದಲ್ಲಿ ಅವಶ್ಯವಾಗಿ ಸಾಧನಾಂಗಗಳಾಗಿವೆ. ಮತ್ತು "व्यवहारे भट्टनयः" ಎಂದು ಹೇಳತಾ ಪರಪಕ್ಷದವರು ಕೂಡ ಪ್ರತಿಜ್ಞಾ-ಹೇತು-ಉದಾಹರಣದಂತೆ, ಉದಾಹರಣ-ಉಪನಯ-ನಿಗಮನ ಗಳೂ ಕೂಡ ಸಾಧನಾಂಗ ಎಂದು ಅಂಗೀಕರಿಸಿದ್ದರಿಂದ, ಉಪನಯ ನಿಗಮನಗಳು ಅಸಾಧನಾಂಗಗಳು ಎಂದು ಹೇಳುವದು ಅಯುಕ್ತವೆನಿಸುತ್ತದೆ.

**साधन अनङ्गत्वेऽपि, दूषणार्थं तस्य अनुवाद्यत्वेन अनुवादर्हताऽपि नास्ति इत्युक्ति अयोगात्। अन्यथा व्यभिचारत्वेन् असाधकस्य दृश्यत्वस्य अपि अनुवादर्हता न स्यात्।**

ಮತ್ತು, ಉಪನಯ-ನಿಗಮನಗಳು ಸಾಧನಾಂಗಗಳಿಲ್ಲದಿದ್ದರೂ, ಅನುಮಾನ ದೂಷಣಾರ್ಥಕ್ಕಾಗಿ ಅವುಗಳ ಅನುವಾದ ಮಾಡಬೇಕಾಗುವದರಿಂದ, ಅವುಗಳು ಅನುವಾದ ಅರ್ಹತೆಕೂಡ ಪಡೆದಿಲ್ಲ ಎಂದು ಹೇಳುವದು ಅಯೋಗ್ಯವೆನಿಸುತ್ತದೆ. ಅನ್ಯಥಾ, ವ್ಯಭಿಚರಿತ್ವದಿಂದ (ಬ್ರಹ್ಮನಲ್ಲಿ) ಅಸಾಧಕವಾದ ದೃಶ್ಯತ್ವ ಹೇತುವು ಕೂಡ ಅನುವಾದ ಅರ್ಹತೆ ಪಡೆದಿರುವದಿಲ್ಲ ಎಂದೆನ್ನ ಬೇಕಾಗುತ್ತದೆ.

**उपनयनिगमनयोः साधनाङ्गत्वस्य अपि क्वापि अनुपपादितत्वेन तच्च अन्यत्र उपपादितं इति उक्ति अयोगाच्च।**

ಮತ್ತು, ಉಪನಯನಿಗಮನಗಳ ಸಾಧನಾಂಗತ್ವವನ್ನು ಎಲ್ಲಿ ಕೂಡ ಅಲ್ಲಗೆಳಯದಿದ್ದರಿಂದ, ಇದನ್ನು "ಶ್ರೀಮದಾಚರ್ಯರು ತಮ್ಮ ಅನ್ಯಗ್ರಂಥಗಳಲ್ಲಿ ಉಪನಯ ನಿಗಮನಗಳ ಅಸಾಧಾನಾಂಗತ್ವವನ್ನು ನಿರೂಪಿಸಿದ್ದಾರೆ" ಎಂಬ ಹೇಳಿಕೆಯು ಅಯೋಗ್ಯವೆನಿಸುತ್ತದೆ.

**कथायां समयबन्धानुसारेण अवयव प्रयोगं कुर्वतो मायावादिनः आधिक्य सूचन अयोगाच्च। अस्य प्रसङ्गस्य कथा बहिर्भावेन निग्रहस्थानस्य अवक्तव्यत्वात्। कथा बाह्यस्य अनिग्रहस्थानत्वात्।**

ಇನ್ನು ಕಥಾ ಅಂದರೆ ವಾದವಿವಾದ ಪ್ರಕ್ರಿಯೆಯಲ್ಲಿ ಸಮಯದ ಬಂಧನಕ್ಕನುಗುಣವಾಗಿ



ಅನುಮಾನದ ಅವಯವ ಪ್ರಯೋಗವನ್ನು ಮಾಡುವ ಮಾಯಾವಾದಿಗಳಿಗೆ आधिक्य ಸೂಚನೆ ಅಯೋಗ್ಯವಾಗಿದೆ. ಈ ಸನ್ನಿವೇಶವು ಕಥಾ ಅಥವಾ ವಾದವಿವಾದ ಪ್ರಕ್ರಿಯೆಗೆ ಒಳಗಾಗಿರುವದಿಲ್ಲದ್ದರಿಂದ ಅದನ್ನು ನಿಗ್ರಹಸ್ಥಾನವೆಂದು ಹೇಳಬಾರದು. ಕಥಾ ಬಾಹ್ಯವಿರುವದ್ದೆಲ್ಲ ನಿಗ್ರಹ ಸ್ಥಾನವೆನಿಸುವದಿಲ್ಲ.

ಆದ್ದರಿಂದ ಇತರ ಟಿಪ್ಪಣಿಗಳಲ್ಲಿ ಕಂಡುಬರುವ ಈ ಮೂರು ವಾಕ್ಯಗಳು ಬೇರೆಯಾರಾದರು ಸೇರಿಸಿರುವ ಸಾಧ್ಯತೆಗಳಿದ್ದು, ಇವು ಟೀಕಾವಾಕ್ಯಗಳಲ್ಲ.

**ततश्च एवं टीका पाठः–**

ಮೇಲಿನ ವಿವೇಚನೆ ಮೇರೆಗೆ, ಟೀಕಾ ಪಾಠ ಹೀಗಿರುತ್ತದೆ

**यद्यपि परेण स्वग्रन्थे पञ्चावयव प्रयोगः अस्य विहितः इति तथैव अनुवादः युक्तः। तथाऽपि उपनयनिगमनयोः इह अदूषणात् अदूष्य अंशानुवादे आधिक्य स्यात् इति तत् परिहाराय त्रयवयव अनुवादः कृतः इति।**

ಪರಪಕ್ಷದವರು ತಮ್ಮ ಗ್ರಂಥಗಳಲ್ಲಿ, ಪ್ರಪಂಚ ಮಿಥ್ಯಾತ್ವವನ್ನು ಪ್ರತಿಪಾದಿಸಲು ಪಂಚಾವಯವ ಅನುಮಾನದ ಪ್ರಯೋಗ ಮಾಡಿದ್ದರೂ, ಅದರಂತೆಯೇ ಅನುವಾದ ಮಾಡುವದು ಯೋಗ್ಯವಾಗಿದ್ದರೂ, ಶ್ರೀಮದಾಚಾರ್ಯರು, ಉಪನಯ ನಿಗಮನಗಳನ್ನು ಇಲ್ಲಿ ದೂಷಿಸಿಲ್ಲವಾದ್ದರಿಂದ, ದೂಷಣಮಾಡದ ಅನುಮಾನದ ಅಂಶಗಳನ್ನು ಅನುವಾದಿಸುವದು आधिक्य ದೋಷಕ್ಕೆ ಆಸ್ಪದಕೊಟ್ಟಂತಾಗುವದರಿಂದ, ಅದರ ಪರಿಹಾರಕ್ಕಾಗಿ, ತ್ರಯವಯವ ಅನುವಾದ ಮಾತ್ರ ಮಾಡಿದ್ದಾರೆ ಎಂಬ ಭಾವ.

## ५. मायावदिनोक्त प्रपञ्चमिथ्यात्व अनुमाने प्रतिज्ञा निराकरणम्

### टीका

एवं अनुदित अनुमानं दूषयिष्यन् प्रथमप्रप्तत्वात् प्रतिज्ञाश्रयं दोषं आह –

ಹೀಗೆ ಮಾಯಾವಾದಿಗಳು ಪ್ರಪಂಚ ಮಿಥ್ಯಾತ್ವ ಪ್ರತಿಪಾದಿಸುವ ಅನುವದಿಸಿದ ಅನುಮಾನವನ್ನು ದೂಷಿಸುವಂತರಾಗಿ, ಶ್ರೀಮದಾಚಾರ್ಯರು, ಎಲ್ಲ ದೂಷಣಗಳಲ್ಲಿ ಮೊದಲಿಗೆ ಪ್ರಾಪ್ತವಾದ ಪ್ರತಿಜ್ಞಾವಾಕ್ಯದ ದೋಷವನ್ನು ಹೇಳುತ್ತಾರೆ.

### टिप्पणीनाम् विशेषार्थानि

॥ दूषयिष्यन् इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**सर्वैः दूषणैः इति शेषः।**

ಅಂದರೆ, ಮೇಲಿನ ಟೀಕಾವಾಕ್ಯದಲ್ಲಿ दूषयिष्यन् ಎಂಬ ಪದದ ನಂತರ, सर्वैः दूषणैः ಎಂಬ ಪದಗಳನ್ನು ಸೇರಿಸಬೇಕು. ಅದರಂತೆ, ಟೀಕಾವಾಕ್ಯ ಕೆಳಗಿನಂತಾಗುತ್ತದೆಃ
एवं अनुदितं अनुमानण् दूषयिष्यन्, सर्वैः दूषणैः प्रथमप्राप्तत्वात् प्रतिज्ञाश्रय दोषं आह।

### *५.१ मिथ्यात्वानुमाने मिथ्यापदं असत्ववाचित्वे आश्रयासिद्धत्वदोषः*

प्रपञ्चमिथ्यात्वानुमानखण्डनम्
इत्युक्ते जगतोऽभावात् आश्रयासिद्धः पक्षः।

**ಹೀಗೆ ಪ್ರತಿವಾದಿಗಳು ಸಾಧಿಸಲು ಹೊರಟರೆ, ಜಗತ್ತೇ ಇಲ್ಲದಾಗಿ, ಅನುಮಾನಕ್ಕೆ ಆಶ್ರಯ ಅಸಿದ್ಧಿ ದೋಷ ಉಂಟಾಗುತ್ತದೆ.**

**श्रीपद्मनाभतीर्थीयटीका**

**जगतोऽभावात् आश्रयासिद्धः पक्षः इत्यादिना॥**
**पक्ष शब्देन अत्र मिथ्यात्वाख्य साध्यधर्म तावत् उच्यते। प्रपञ्चश्च पक्ष शब्देन उच्यते। साध्यधर्म विशिष्टस्यापि पक्षत्वात्।**

ಇಲ್ಲಿ ಪಕ್ಷ ಶಬ್ದದಿಂದ ಮಿಥ್ಯಾತ್ವಾಖ್ಯ ಸಾಧ್ಯಧರ್ಮವನ್ನು ಹೊಂದುವಂತಹದು ಎಂದು ಹೇಳುತ್ತಾರೆ. ಮತ್ತು ಪ್ರಪಂಚವನ್ನು ಪಕ್ಷ ಶಬ್ದದಿಂದ ಪ್ರತಿಪಾದಿಸುತ್ತಾರೆ. ಸಾಧ್ಯಧರ್ಮದಿಂದ ಕೂಡಿದ್ದು ಅಥವಾ ವಿಶಿಷ್ಟವಾದದ್ದು ಪಕ್ಷವೆನಿಸುತ್ತದೆ.

टीका

इति मायावादिनोक्ते, वक्तव्यं इति शेषः। अग्न्याहितादिवत् असिद्ध आश्रयो यस्य असौ, आश्रय असिद्धः। पक्ष इति तत् एकदेशः साध्यधर्मो लक्ष्यते। अथवा सप्तम्यर्थे बहुव्रीहि इति मुख्यार्थ एव पक्ष शब्दः।

ಇಲ್ಲಿ इत्युक्ते, ಅಂದರೆ ಹೀಗೆ ಮಾಯಾವಾದಿಗಳು ಹೇಳಲು ಹೊರಟರೆ ಎಂದಂರ್ಥ. ಇಲ್ಲಿ पक्षः ಪದದ ನಂತರ वक्तव्यं इति ಎಂಬ ಪದಗಳನ್ನು ಸೇರಿಸಬೇಕು, ಆಗ ಮೂಲವಾಕ್ಯದ ಅರ್ಥ ಸಿಗುತ್ತದೆ.
ಇಲ್ಲಿ "अग्न्याहितादिवत्" ಪದದಂತೆ, ಯಾವುದರ ಅಸಿದ್ಧವಾದ ಆಶ್ರಯವೊ ಅದರ ಆಶ್ರಯ



ಅಸಿದ್ಧ ಎಂಬಂತೆ आश्रयासिद्धः ಎಂಬ ಶಬ್ದ ಪ್ರಯೋಗವು ಸರಿಯಾಗಿದೆ ಎಂದಂರ್ಥ.
ಇಲ್ಲಿ पक्षः ಪದವು ಏಕದೇಶದಿಂದ ಸಾಧ್ಯಧರ್ಮವಾದ ಮಿಥ್ಯಾವನ್ನು (ಶುಕ್ತಿಯಲ್ಲಿ ಕಾಣುವ ರಜತದಂತೆ) ಲಕ್ಷಿಸುತ್ತದೆ. ಅದರಂತೆ ಸಾಧ್ಯಧರ್ಮ ವಿಶಿಷ್ಟ ಧರ್ಮೀರೂಪ ಪಕ್ಷವು, (ಅಂದರೆ, ಮಿಥ್ಯಾಧರ್ಮವನ್ನು ಹೊಂದಿದ ಪಕ್ಷ ) ಇಲ್ಲಿ ಆಶ್ರಯವಾಯಿತು. ಆದರೆ ಜಗತ್ತೆ ಇಲ್ಲವಾದರೆ, ಮಿಥ್ಯಾಧರ್ಮ ಹೊಂದಿದ ಪಕ್ಷವೇ ಇಲ್ಲವಾದ್ದರಿಂದ, ಆಶ್ರಯ ಅಸಿದ್ಧವಾಯಿತು ಎಂಬ ಭಾವ. ಅಥವಾ पक्षः ಪದವನ್ನು ಸಾಧ್ಯಧರ್ಮವಿಶಿಷ್ಟ ಧರ್ಮಿ ಎಂದು ಮುಖ್ಯಾರ್ಥದಿಂದ ತೆಗೆದುಕೊಂಡರೂ, ಕೂಡ ಮೇಲಿನಂತೆಯೆ ಅನುಮಾನಕ್ಕೆ ಆಶ್ರಯ ಅಸಿದ್ಧತೆಯನ್ನು ಸಾಧಿಸಬಹುದಾಗಿದೆ.

**टिप्पणीनाम् विशेषार्थानि**

**॥ इति मायावादिनोक्ते इति ॥**

<u>ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆಃ</u>

**ननु इत्युक्ते आश्रयासिद्धः पक्षः इति अयुक्तम्। आश्रयासिद्धेः उक्ति निमित्तत्व अभावात्।अन्यथा पर्वतः असत् इति केनचित् उक्ते, धूमस्य अपि आश्रयासिद्धिः स्यात्।**
**न च जगतः अभावात् इति वदता, जगतः अभाव निमित्तैव आश्रयासिद्धिः। न उक्ति निमित्त इति अभिप्रेयत इति वाच्यम्। इत्युक्त इत्यस्य अनन्वितत्व प्रसङ्गात्।**
**श्रूयमाणानां, जगतो भावात् इत्यादीनां अन्वय प्रतियोगित्व अभावात् इत्यत आह – इति मायावादिनोक्त इति॥**

ಪ್ರಸ್ತುತದಲ್ಲಿ "इत्युक्ते आश्रयासिद्धः पक्षः" ಎಂದು ಹೇಳುವದು ಅಯುಕ್ತವೆನಿಸುತ್ತದೆ. ಏಕೆಂದರೆ, ಆಶ್ರಯ ಅಸಿದ್ಧಿಗೆ, ಯಾರಾದರ ಹೇಳಿಕೆ ನಿಮಿತ್ತವಾಗಲು ಸಾಧ್ಯವಿಲ್ಲ. ಹಾಗೆನಾದರು ಇದ್ದರೆ, ಪರ್ವತ ಅಸತ್ಯವಾಗಿದೆ ಎಂದು ಯಾರಾದರ ಹೇಳಿಕೆ ಮೇರೆಗೆ, ಹೊಗೆಗೂ ಕೂಡ ಆಶ್ರಯಾಸಿದ್ಧಿ ಎಂಬ ದೋಷವನ್ನು ಹೇಳಬೇಕಾದೀತು.
ಹಾಗೂ ಜಗತ್ತೆ ಇಲ್ಲವೆಂದು ಹೇಳಿದ ಮಾತ್ರಕ್ಕೆ ಜಗತ್ತಿನ ಅಭಾವತೆ ಮೂಲಕ ಆಶ್ರಯಾಸಿದ್ಧಿ ದೋಷ ಉಂಟಾಗುತ್ತದೆ ಎಂದು ಹೇಳಲಿಕ್ಕೆ ಬರುವದಿಲ್ಲ. ಇನ್ನು, ಈ ಪ್ರಸ್ತುತದಲ್ಲಿ, ಹೇಳಿಕೆ ನಿಮಿತ್ತವಿಲ್ಲದೆ, ಆಶ್ರಯಾಸಿದ್ಧದ ಅಭಿಪ್ರಾಯವಿದೆ ಎಂದು ಹೇಳಬಾರದು, ಹಾಗೆನಾದರು ಹೇಳಿದರೆ, ಟೀಕಾವಾಕ್ಯದಲ್ಲಿಯ इत्युक्त ಪದದ ಅನ್ವಯ ಸಿಗದೆ ಇರುವ ಪ್ರಸಂಗವದಗುವದು. ಈ ಎಲ್ಲ ಶಂಕೆಗಳನ್ನು ಹಾಗೂ ಮಾಯಾವಾದಿಗಳಿಂದ ಕೇಳಿದವರು, ಮತ್ತು ಕೇಳದವರ ಅನ್ವಯ ಪ್ರತಿಯೋಗಿತ್ವವನ್ನು ದೂರಮಾಡಲು, ಈ ಟೀಕಾವಾಕ್ಯ ಹೊರಟಿರುತ್ತದೆ.

**अनेन मायावादिना विमतं मिथ्या इत्युक्ते, तन्मते जगतोऽभावात् सत्ववैधुर्यात् आश्रयासिद्धः पक्ष इति वक्तव्यं इति मूले योजनोक्ता भवति।**

ಅದರಂತೆ, ಮೂಲ ವಾಕ್ಯವನ್ನು ಹೀಗೆ ಯೋಜಿಸಿದಂತಾಯಿತುಃ ಮಾಯಾವಾದಿಗಳು, ವಿವಾದಸ್ಪದ ಪ್ರಪಂಚವನ್ನು ಮಿಥ್ಯಾಎಂದು ಹೇಳಲು ಹೊರಟರೆ, ಅವರ ಮತದಂತೆ ಜಗತ್ತು

ಇಲ್ಲದಂತಾಗಿ ಅಂದರೆ, ಜಗತ್ತು ಸತ್ಯತ್ವವನ್ನು ಕಳೆದುಕೊಳ್ಳುವಂತಾಗುವದರಿಂದ, ಆಶ್ರಯಾಸಿದ್ಧ ಪಕ್ಷ ಎಂದು ಹೇಳಬೇಕು.

## ॥ वक्तव्यं इति शेष इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**इत्युक्ते आश्रयासिद्धः पक्षः, इति अनन्वितम्, अत आह – वक्तव्यं इति॥**

ಇಲ್ಲಿ "इत्युक्ते आश्रयासिद्धः पक्षः" ಎಂದು ಮೂಲವಾಕ್ಯವನ್ನು ಪರಿಗಣಿಸಿದರೆ, ಅದಕ್ಕೆ ಅನ್ವಯವೇ ಆಗುವದಿಲ್ಲ. ಆದಕ್ಕೆ ಮೂಲವಾಕ್ಯದ ಅಂತದಲ್ಲಿ वक्तव्यं इति ಎಂಬ ಪದಗಳನ್ನು ಸೇರಿಸಬೇಕು, ಎಂದು ಟೀಕಾವಾಕ್ಯದ ಅಭಿಪ್ರಾಯವಾಗಿದೆ.

**तथाच "इत्युक्ते जगतोऽभावात् आश्रयासिद्धः पक्षः इति, वक्तव्यं इति" एवं इति शब्दस्य अनुवृत्या योजनीयम्। अन्यथा पुनः अनन्वितत्वमेव स्यात् इति द्रष्टव्यम्।**

ಅದರಂತೆ ಮೂಲವಾಕ್ಯವನ್ನು ಹೀಗೆ ಹೇಳಬೇಕುಃ "इत्युक्ते जगतोऽभावात् आश्रयासिद्धः पक्षः इति, वक्तव्यं इति". ಈ ವಾಕ್ಯದಲ್ಲಿ पक्षः ಎಂಬ ಪದದ ನಂತರ, ಮೂಲವಾಕ್ಯದಲ್ಲಿಯ इत्युक्ते ಪದದಲ್ಲಿಯ इति ಪದವನ್ನು ಅನುವೃತ್ತಿಮಾಡಿ ಇಡಲಾಗಿದೆ. ಹಾಗೆ ಮಾಡದೆ ಇದ್ದರೆ, ಮತ್ತೆ ಮೂಲವಾಕ್ಯದ ಅನ್ವಯ ಸಿಗುತ್ತಿರಲಿಲ್ಲ ಎಂದು ತಿಳಿಯಬೇಕು.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**ननु स्वार्थ अनुमाने अपि आश्रयासिद्धिः अस्ति एव। तत आचार्येण, इत्युक्ते आश्रयासिद्धिः इति कथं उक्तम्? इति आशंक्य, सत्यं एवं तथापि आश्रयासिद्धि उक्तिस्तु परार्थ अनुमान एव। तथा च श्रुतस्य इतुक्ते इत्यस्य उपपत्तये अश्रुतम् अपि अध्याह्रियत इत्याह– वक्तव्यं इति शेषः॥**

ಇಲ್ಲಿ, ಸ್ವತಃ ಅನುಮಾನವೆಂದಿದ್ದರೂ ಕೂಡ ಆಶ್ರಯಾಸಿದ್ಧ ದೋಷ ಇದ್ದೆ ಇರತಿತ್ತು. ಹಾಗಿದ್ದರೂ इत्युक्ते आश्रयासिद्धिः ಎಂದು ಶ್ರೀಮದಾಚಾರ್ಯರು ಏಕೆ ಹೇಳಿದ್ದಾರೆ? ಎಂಬ ಆಶಂಕೆಗೆ, ಹೌದು, ಇದು ಸತ್ಯ, ಇಲ್ಲಿ ಆಶ್ರಯಾಸಿದ್ಧಿ ಎಂದು ಹೇಳಿರುವದು ಪರಾರ್ಥ ಅನುಮಾನಕ್ಕೆನೆ. ಹಾಗೆಯೆ, ಈಗಾಗಲೆ ಅನುಮಾನ ತಿಳಿದುಕೊಂಡವರಿಗೆ इतुक्ते, ಎಂಬ ಪದದಿಂದ ಅರ್ಥ ಸಿಗುತ್ತದಾದರೂ, ಅನುಮಾನದ ಅಶ್ರುತರಿಗೂ ಕೂಡ ಸೆರಿಸುವದಕ್ಕಾಗಿ वक्तव्यं इति शेषः ಎಂದು ಟೀಕಾವಾಕ್ಯ ಹೇಳುತ್ತಿದೆ.

**ननु "इति वक्तव्यं इति शेषः" इति वाच्यम्। इति शब्द अभावे, "आश्रयासिद्धः पक्षो वक्तव्यं" इति उक्ते अनन्वयात् इति चेत्। इत्युक्ते, इत्यत्र विद्यमानस्य शब्दस्य अनुषंगेण एव सम्बन्ध सम्भवेन तस्य अध्याहार्यता अभावात्।**

ಇನ್ನೊಂದು ಸಂಗತಿ, ಇಲ್ಲಿ "इति वक्तव्यं इति शेषः" ಎಂದು ಟೀಕಾವಾಕ್ಯ ಇರಬೇಕಾಗಿತ್ತಲ್ಲೆವೆ, ಏಕೆಂದರೆ, पक्षः ಪದದ ನಂತರ इति ಶಬ್ದ ಇಲ್ಲವಾದಲ್ಲಿ, ಅಂದರೆ "आश्रयासिद्धः पक्षो वक्तव्यं" ಎಂದು ಹೇಳಿದಂತಾಗಿ, ಮೂಲವಾಕ್ಯದ ಅರ್ಥವೆ ಸಿಗದಂತಾಗುವದು, ಎಂದರೆ. ಅದಕ್ಕೆ, ಮೂಲವಾಕ್ಯದಲ್ಲಿಯ इत्युक्ते,, ಪದದಲ್ಲಿಯ इति ಶಬ್ದದ ಅನುಶಂಗದಿಂದಲೆ



ಅರ್ಥಸಂಬಂಧ ಸಿಗುವದರಿಂದ, ಬೇರೆಯಾಗಿ इति ಶಬ್ದದ ಅಧ್ಯಾಹಾರದ ಆವಶ್ಯಕತೆ ಇರುವದಿಲ್ಲ ಎಂದು ತಿಳಿಯಬೇಕು.

## ॥ अग्न्याहितादिवत् इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**ननु असिद्ध शब्दस्य निष्ठान्तत्वात् "निष्ठा" इत्यनेन पूर्वनिपात् प्रकरणगतेन सूत्रेण, "कृतकट" इत्यत्र कृत शब्द्स्य इव पूर्वनिपातेन भवितव्यं इत्यत आह–अग्न्याहितादिवत् इति॥**

ಇಲ್ಲಿ, असिद्ध ಶಬ್ದವು निष्ठान्त ವಾಗಿರುವದರಿಂದ, "निष्ठा" ಎಂಬ पूर्वनिपात् ಪ್ರಕರಣದಲ್ಲಿಯ ಸೂತ್ರದಂತೆ, "कृतकट"ದಲ್ಲಿಯ कृत ಶಬ್ದದಂತೆ, "आश्रयासिद्" ಎಂಬಲ್ಲಿ आश्रय ಪದಕ್ಕಿಂತಲೂ ಮುಂಚೆ ಪ್ರಯೋಗಿಸುವದು ಉಚಿತವಾಗಿತ್ತಲ್ಲ..? ಅಂದರೆ "आश्रयासिद्" ಬದಲಿಗೆ "असिद्धाश्रय" ಎಂದು ಪ್ರಯೋಗಿಸುವದು ಉಚಿತವಾಗಿತ್ತು ಎಂಬ ಭಾವ. ಈ ಶಂಕೆಯನ್ನು ದೂರಮಾಡುವದಕ್ಕಾಗಿಯೆ ಈ ಟೀಕಾವಾಕ್ಯವಿರುತ್ತದೆ.

**"वाऽऽहिताग्न्यादिषु" इत्यनेन सूत्रेण आहितादिनां अग्न्यादि सम्बन्धे परनिपातस्याऽपि उक्तत्वात् तस्य च आकृतिगणत्वात्, असिद्ध् शब्द्स्य विकल्पेन परनिपात उपपत्तिः इत्यर्थः।**

ಅದನ್ನು ಹೀಗೆ ವಿವರಿಸಬಹುದು. "वाऽऽहिताग्न्यादिषु" ಎಂಬ ಸೂತ್ರದಂತೆ आहितादि ಶಬ್ದಗಳನ್ನು अग्न्यादि ಸಂಬಂಧದಲ್ಲಿ, अग्न्यादि ಪದಗಳನಂತರ ಕೂಡ ಪ್ರಯೋಗಿಸಬಹುದು ಎಂದು ಹೇಳಲಾಗಿರುತ್ತದೆ, ಮತ್ತು ಅವು आकृतिगण ದಲ್ಲಿ ಸಮಾವೇಶಗೊಳ್ಳುತ್ತವಾದ್ದರಿಂದ, असिद्ध् ಶಬ್ದವನ್ನು ವಿಕಲ್ಪದಿಂದ आश्रय ಪದದ ನಂತರ ಪ್ರಯೋಗಿಸುವದು ಉಚಿತವಾಗಿದೆ ಎಂದು ತಿಳಿದು ಬರುತ್ತದೆ ಎಂದರ್ಥ. ಆದ್ದರಿಂದ, असिद्ध् ಪದವನ್ನು आश्रय ಪದದ ಮೊದಲಿಗೆ ಪ್ರಯೋಗಸಿಲ್ಲದ್ದು ಯಾವ ದೋಷವನ್ನು ಉಂಟುಮಾಡುವದಿಲ್ಲ ಎಂಬ ಭಾವ.

ಇದರಂತೆಯೆ, ಉಳಿದ ಟಿಪ್ಪಣಿಕಾರರ ವಿವರಣೆ ಕೂಡ ಆಗಿರುವದರಿಂದ, ಅವರ ವಿವರಣೆಗಳನ್ನು ಇಲ್ಲಿ ಪ್ರತ್ಯೇಕವಾಗಿ ನಮೂದಿಸಿಲ್ಲ.

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ

**आहिताग्निर्येन असौ आहिताग्निः इति भाव्ये वाहिताग्न्यादिषु इति सूत्रेण आहितादीनां शब्दानां अग्न्यादिसम्बन्धे परनिपातस्य अपि उक्तत्वात् तस्य च आकृतिगणत्वात् असिद्धशब्दस्यापि परनिपातो युक्त इत्यर्थः।**

"आहिताग्निः येन् असौ आहिताग्निः इति ಎಂಬಲ್ಲಿ वाहिताग्न्यादिषु ಎಂಬ ಸೂತ್ರದಿಂದ, आहितादि ಶಬ್ದಗಳನ್ನು अग्न्यादि ಪದದ ಸಂಬಂಧ ಬಂದಾಗ ಅದು आकृतिगणವಾಗಿರುವದರಿಂದ अग्न्यादि ಪದದ ನಂತರ ಅಂದರೆ अग्न्याहितादि ಯಂತೆ ಪ್ರಯೋಗಿಸಬಹುದೆಂದು ಹೇಳಲಾಗಿರುತ್ತದೆ. ಅದರಂತೆ, ಪ್ರಕೃತದಲ್ಲಿ ಕೂಡ असिद्ध ಪದವನ್ನು आश्रय ಪದದನಂತರ ಪ್ರಯೋಗಿಸುವದು ಯುಕ್ತವಾಗಿದೆ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**ननु आश्रयासिद्धः पक्षः इत्युयुक्तम। निष्ठा इति सूत्रेण बहुव्रीहौ निष्ठाप्रत्ययान्तस्य पदस्य पूर्वं प्रयोज्यतायाः नियमितत्वात् इत्यत आह– अग्न्याहितादिवत् इति॥**

ಇಲ್ಲಿ आश्रयासिद्धः पक्षः ಎಂದು ಹೇಳಿದ್ದು ಸರಿಯಲ್ಲ. "निष्ठा" ಎಂಬ ಸೂತ್ರದಂತೆ, ಬಹುವ್ರೀಹಿಯನ್ನು ನಿಷ್ಠಾ ಪ್ರತ್ಯಯಾಂತದ ಪದದ ಪೂರ್ವದಲ್ಲಿ ಪ್ರಯೋಗಿಸಬೇಕು ಎಂಬ ನಿಯಮವಿರುತ್ತದೆ. ಈ ಶಂಕೆಯನ್ನು ನಿವಾರಿಸಲು ಈ ಟೀಕಾವಾಕ್ಯವಿರುತ್ತದೆ.

**आश्रयासिद्ध इति रूपम् अग्न्याहित इत्यादि शब्दवत् साधु इति ज्ञातव्यम् इत्यर्थः।**
**निष्ठा इत्यनेन निष्ठान्तस्य बहुव्रीहौ पूर्वनिपातनियम विधानेऽपि वाहिताग्निषु इति सूत्रे आहिताग्न्यादिषु शब्देषु पूर्वं निपातविकल्प अभिधानात्। आहिताग्न्यादेः आकृतिगणत्वात्। आश्रयासिद्धः इत्यत्र असिद्ध शब्दस्य पूर्वनिपात अभावो न दोषाय इति भावः।**

ಅಂದರೆ, आश्रयासिद्ध ಎಂಬ ರೂಪವು अग्न्याहित ಇತ್ಯಾದಿ ಶಬ್ದಗಳಂತೆ ಸರಿಯಾಗಿದೆ ಎಂದು ತಿಳಿಯತಕ್ಕದ್ದು ಎಂದರ್ಥ. निष्ठा ಎಂಬ ಸೂತ್ರದಂತೆ, ನಿಷ್ಠಾಂತದ ಪೂರ್ವದಲ್ಲಿ बहुव्रीहौ ಪದವನ್ನು ಪ್ರಯೊಗಿಸುವ ನಿಯಮವಿದ್ದರೂ, वाहिताग्निषु ಎಂಬ ಸೂತ್ರದಂತೆ आहिताग्न्याद ಆಹಿತಾಗ್ನ್ಯಾದಿಗಳು ಆಕೃತಿಗಣವಾಗಿರುವದಿಂದ, आहिताग्न्यादि ಶಬ್ದಗಳಲ್ಲಿ अग्नि ಪದವನ್ನು ಪೂರ್ವದಲ್ಲಿ ಪ್ರಯೋಗಿಸಬಹುದು ಎಂದು ಹೇಳಲಾಗಿದೆ. ಅದರಂತೆ ಆಶ್ರಯಾಸಿದ್ಧಿ ಎಂಬಲ್ಲಿ ಅಸಿದ್ಧ ಶಬ್ದವನ್ನು ಆಶ್ರಯ ಪದದ ಪೂರ್ವದಲ್ಲಿ ಇಡದೆ ಇರುವದರಲ್ಲಿ ಯಾವ ದೋಷ ಉಂಟಾಗುವದಿಲ್ಲ ಎಂಬ ಭಾವ.

## ॥ पक्ष इति तत् एकदेशः इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु विशेषणभूतं साध्यधर्मं प्रति आश्रयो विशेष्यरूपो धर्मी, तत् असिद्धिः एव दोषो, न तु साध्यधर्म विशिष्ट धर्मीरूप पक्षस्य यः आश्रयः तत् असिद्धः, अतः आश्रयासिद्धः पक्षः इति कथं उक्तं आचार्यैः इत्यत आह– पक्ष इति॥**

ವಿಶೇಷಣಭೂತ ಸಾಧ್ಯಧರ್ಮದ ಪ್ರತಿ ಆಶ್ರಯವಾದ ಎಂದರೆ ವಿಶೇಷ್ಯರೂಪ ಧರ್ಮಿ, ಅದರ ಅಸಿದ್ಧಿ ದೋಷವೆನಿಸುತ್ತದೆ. ವಿನಹಾ ಸಾಧ್ಯಧರ್ಮವಿಶಿಷ್ಟ ಧರ್ಮೀರೂಪ ಪಕ್ಷದ, ಆಶ್ರಯದ ಅಸಿದ್ಧಿ ಅನುಮಾನ ದೋಷವೆನಿಸಲಾರದು. ಹೀಗಿದ್ದಲ್ಲಿ आश्रयासिद्धः पक्षः ಎಂದು ಶ್ರೀಮದಾಚಾರ್ಯರು ಏಕೆ ಹೇಳಿರುತ್ತಾರೆ? ಈ ಸಂದೇಹವನ್ನು ನಿವಾರಿಸಲು ಈ ಟೀಕಾವಾಕ್ಯವಿರುತ್ತದೆ.

**साध्यधर्म विशिष्टो धर्मी हि, पक्ष शब्द मुख्यार्थः। तत्र साध्यधर्मरूप एकेदेशो लक्ष्यत इत्यर्थः। लक्षणाबीज सम्बन्ध दर्शयितुं तदेकदेश इत्युक्तम्। तथाच पक्षः साध्यधर्मः स आश्रयासिद्धः असिद्धाश्रयः, साध्यधर्म प्रति आश्रय असिद्ध इतियावत् इति मूलार्थो द्रष्टव्यः।**

ಸಾಧ್ಯಧರ್ಮ ವಿಶಿಷ್ಟವಾದ ಧರ್ಮಿಯೆ ಪಕ್ಷ ಶಬ್ದದ ಮುಖ್ಯಾರ್ಥವಾಗಿರುತ್ತದೆ. ಅಲ್ಲಿ, ಸಾಧ್ಯಧರ್ಮರೂಪ ಏಕದೇಶ ವನ್ನು ಲಕ್ಷಿಸುತ್ತದೆ ಎಂದಂರ್ಥ. ಸಾಧ್ಯಧರ್ಮರೂಪ ಅಗ್ನಿಯನ್ನು ಪರ್ವತದ ಏಕದೇಶದಲ್ಲಿ ಸಾಧಿಸಿದಂತೆ. ಈ ಲಕ್ಷಣಬೀಜ ಸಂಬಂಧವನ್ನು



ತೋರಿಸುವದಕ್ಕೆಯೆ ಶ್ರೀಮದಾಚಾರ್ಯರು तदेकदेश ಎಂದು ಹೇಳಿದ್ದಾರೆ. ಅದರಂತೆ, ಪಕ್ಷವು ಸಾಧ್ಯಧರ್ಮದ ಆಶ್ರಯ ಅಸಿದ್ಧ ಎಂದರೆ, ಅಸಿದ್ಧ ಆಶ್ರಯವಾಗಿದೆ, ಅಂದರೆ ಸಾಧ್ಯಧರ್ಮದ ಪ್ರತಿ ಆಶ್ರಯ ಅಸಿದ್ಧವಾಗಿದೆ ಎಂದು ಮೂಲಾರ್ಥಸಿಗುತ್ತದೆ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**ननु विशेषणं साध्यधर्मं प्रति यः आश्रयो धर्मी विशेष्यः तत् असिद्धिः एव दोषः। विशेष्य अभावे विशिष्ट अभावेन धर्मविशिष्ट धर्मिविषयकस्य अनुमानस्य अप्रामाण्य अपातात्। न तु साध्यधर्म विशिष्टस्य पक्षस्य यः आश्रयः तत् असिद्धिः। तत् सिद्धे प्रकृत अनुपयोगात्। तस्मात् आश्रयासिद्धः पक्षः इति कथं आचार्येण उक्तं इति आशङ्क्य आह – पक्ष इति तदेकदेशः इति॥**

ವಿಶೇಷಣವಾದ ಸಾಧ್ಯಧರ್ಮದ ಪ್ರತಿ ಯವುದು ಯಾವುದು ಆಶ್ರಯವಾದ ಧರ್ಮೀ ವಿಶೇಷ್ಯ, ಅದರ ಅಸಿದ್ಧಿ ಯೆ ಅನುಮಾನದ ದೋಷವಿನಿಸುತ್ತದೆ. ವಿಶೇಷ್ಯ ವಿಲ್ಲದಾಗ, ವಿಶಿಷ್ಟವೂ ಇಲ್ಲದಾಗುವದರಿಂದ ಧರ್ಮವಿಶಿಷ್ಟ ಧರ್ಮವಿಷಯವು ಅನುಮಾನಕ್ಕೆ ಅಪ್ರಾಮಾಣ್ಯ ತಂದುಕೊಡುತ್ತದೆ. ವಿನಹಾ ಸಾಧ್ಯಧರ್ಮವಿಶಿಷ್ಟವಾದ ಪಕ್ಷಕ್ಕೆ ಯಾವುದು ಆಶ್ರಯವೊ ಅದರ ಅಸಿದ್ಧಿ ಅನುಮಾನ ದೋಷವೆನಿಸುವದಿಲ್ಲ. ಹಾಗೂ ಅದರ ಸಿದ್ಧಿಯು ಪ್ರಕೃತದಲ್ಲಿ ಉಪಯೋಗವಿಲ್ಲದ್ದೂ ಆಗಿರುತ್ತದೆ. ಆದ್ದರಿಂದ आश्रयासिद्धः पक्षः ಎಂದು ಶ್ರೀಮದಾಚಾರ್ಯರು ಹೀಗೆಕೆ ಹೇಳಿದರು, ಎಂದು ಆಶಂಕಿಸಿ, ಅದನ್ನು ನಿವಾರಿಸುವದಕ್ಕೆ ಈ ಟೀಕಾವಾಕ್ಯವಿರುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**ननु पक्ष शब्दस्य साध्यधर्मविशिष्ट धर्मि वाचित्वात् तत् आश्रय असिद्धेः अनुमानदोषत्व अभावेन तत् उद्भावनं अयुक्तं इत्यत आह– पक्ष इति॥**
**साध्यधर्म आश्रय असिद्धेः अनुमान दोषत्वात् तत् उद्भावनं युक्तमेव इति भावः।**

ಪಕ್ಷ ಶಬ್ದದ ಅರ್ಥ ಸಾಧ್ಯಧರ್ಮವಿಶಿಷ್ಟ ಧರ್ಮಿ ಎಂದಿರುತ್ತದೆ, ಅದರ ಆಶ್ರಯ ಅಸಿದ್ಧವು ಪ್ರಸ್ತುತ ಅನುಮಾನದ ದೋಷವೆನಿಸುವದಿಲ್ಲವಾದ್ದರಿಂದ ಅದನ್ನು ಇಲ್ಲಿ ಹೇಳುವದು ಅಯುಕ್ತವಾಗಿದೆ. ಇದಕ್ಕೆ ಉತ್ತರವಾಗಿಯೆ ಈ ಟೀಕಾವಾಕ್ಯವಿರುತ್ತದೆ. ಇಲ್ಲಿ ಶ್ರೀಮದಾಚಾರ್ಯರು ಪಕ್ಷ ಪದದಿಂದ ಪಕ್ಷದ ಸಾಧ್ಯಧರ್ಮದ ಏಕದೇಷವನ್ನು ಉಪಲಕ್ಷಿಸುವದರಿಂದ, ಸಾಧ್ಯಧರ್ಮದ ಆಶ್ರಯ ಅಸಿದ್ಧಿಯು ಅನುಮಾನ ದೋಷವಾಗುತ್ತದೆ, ಹಾಗೆ ಅದನ್ನು ಹೇಳುವದು ಯುಕ್ತವೇ ಆಗಿದೆ ಎಂಬ ಭಾವ.

## ॥ मुख्यार्थ एव इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**तथाच साध्यधर्म विशिष्टो धर्मी पक्षः स असिद्ध् आश्रयः। पक्ष शब्दार्थे आश्रयभागः असिद्धः इति यावत्।**

ಅದರಂತೆ "साध्यधर्म विशिष्टो धर्मी पक्षः" ಎಂದು ಪಕ್ಷ ಶಬ್ದವನ್ನು ಮುಖ್ಯಾರ್ಥದಲ್ಲಿಯೆ ತೆಗೆದುಕೊಂಡರೆ, ಅದು ಅಸಿದ್ಧ ಆಶ್ರಯವಾಗುತ್ತದೆ. ಅಂದರೆ ಪಕ್ಷ ಶಬ್ದಾರ್ಥದಲ್ಲಿ ಆಶ್ರಯಭಾಗ ಅಸಿದ್ಧವಾಗಿದೆ ಎಂದು ಹೇಳಿದಂತಾಯಿತು.

## टीका

**"उक्ते" इत्यनेन उक्ति निमित्तं इदं दूषणं इति सूचयता "अनुक्त उपालम्भः अयं, प्रपंच असत्वस्य असाधनात्" इति निरस्तं भवति।**

ಇಲ್ಲಿ इत्युक्ते ಎಂದು ಹೇಳಿದ್ದರಿಂದ, ಪರಪಕ್ಷದವರ ಉಕ್ತಿ ನಿಮಿತ್ತ ಈ ದೂಷಣ ವಿರುತ್ತದೆ ಎಂದು ಸೂಚಿಸುತ್ತ, “ಇದೆನು, ನಾವು ಹೇಳದಿದ್ದ ವಿಷಯದಲ್ಲಿ ದೋಷವನ್ನು ತೋರಿಸುತ್ತೀರಲ್ಲ? ಪ್ರಪಂಚದ ಅಸತ್ಯತ್ವವನ್ನು ನಾವು ಸಾಧಿಸುವದೇ ಇಲ್ಲ." ಎಂಬ ಪರಪಕ್ಷದವರ ಟೊಳ್ಳುವಾದವನ್ನು ನಿರಾಕರಿಸದಂತಾಯಿತು.

### टिप्पणीनाम् विशेषार्थानि

**॥ (उक्ते) इत्युक्ते इत्यनेन इति॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु आश्रय असिद्धि कथनं अयुक्तम्। अनुक्त उपालम्भरूपत्वात्। न हि परेण मिथ्या इति असत्वं साधितम्। किन्तु अनिर्वचनीयत्वं इति चेत् न। एतत् आशङ्का परिहार्थमेव आचार्यैः आश्रयासिद्धः पक्षः इत्येव वक्तव्ये इत्युक्ते इत्युक्तं इति आह – इत्युक्ते इत्यनेन इति॥**

ಇಲ್ಲಿ, ಆಶ್ರಯ ಅಸಿದ್ಧಿ ದೋಷವನ್ನು ಹೇಳುವದು ಅಯುಕ್ತವಾಗಿದೆ. ಹಾಗು, ಅದು ಪರಪಕ್ಷದವರು ಪ್ರತಿಪಾದಿಸದ ವಿಷಯದಲ್ಲಿ ದೋಷವನ್ನು ಪ್ರತಿಪಾದಿಸುವರೂಪದ್ದಾಗಿರುತ್ತದೆ. ಮತ್ತು ಪರಪಕ್ಷದವರು ಮಿಥ್ಯಾ ಪದದಿಂದ ಅಸತ್ವವನ್ನು ಸಾಧಿಸವದಿಲ್ಲ, ಪರಂತು ಅನಿರ್ವಚನವನ್ನು ಸಾಧಿಸುತ್ತಾರೆ. ಹೀಗೆ ಯಾರಾದರು ಹೇಳಿದರೆ ಅದು ಸರಿಯಲ್ಲ. ಈ ಶಂಕೆಯ ಪರಿಹಾರಾರ್ಥಕ್ಕಾಗಿಯೆ ಶ್ರೀಮದಾಚಾರ್ಯರು, आश्रयासिद्धः पक्षः ಎಂಬ ತಮ್ಮ ವಕ್ತವ್ಯದಲ್ಲಿ इत्युक्ते ಎಂದು ಹೇಳಿದ್ದಾರೆ. ಅದನ್ನೆ ಈ ಟೀಕಾವಾಕ್ಯ ಸ್ಪಷ್ಟ ಪಡಿಸುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**ननु आचार्येण "इत्यत्र आश्रयासिद्धः पक्षः" इत्येव वक्तव्यं। किमर्थं उक्तं ग्रहण कृतम्? यत् उपपत्यर्थं वक्तव्यपदं अध्याह्रियत इत्यत आह– उक्त इति इति॥**

ಇಲ್ಲಿ ಶ್ರೀಮದಾಚಾರ್ಯರು "इत्यत्र आश्रयासिद्धः पक्षः" ಎಂದಿಷ್ಟೆ ಹೇಳಬೇಕಾಗಿತ್ತು. ಯಾತಕ್ಕೆ उक्तं ಅಥವಾ इत्युक्ते ಎಂಬ ಪದವನ್ನು ಗ್ರಹಿಸಿದ್ದಾರೆ? वक्तव्य ಪದವನ್ನು



ಅನ್ವಯಗೋಸ್ಕರ ಅಧ್ಯಾಹರ ಮಾಡಲಾಗಿದೆ ಎಂಬುದೆನೊ ಅರ್ಥವಾಯಿತು. ಈ ಶಂಕೆಯನ್ನು ನಿವಾರಿಸಲು ಈ ಟೀಕಾವಾಕ್ಯ ಹೊರಟಿರುತ್ತದೆ.

**मिथ्या शब्दस्य अनिर्वचनीय वाचिताया अन्यत्र निरस्तत्वात्, "विमतं असत्" इति अनुक्तौ अपि मिथ्या शब्देन एव असत्वस्य उक्तत्वात् "मिथ्या" इत्युक्ति निमितं इदं दूषणम्। न तु पर–अभिप्रेत अनिर्वचनीयत्वादिरूप अर्थ निमित्तं इति।**

ಮಿಥ್ಯಾ ಪದವನ್ನು ಅನಿರ್ವಚನೀಯ ಪರವಾದ ವ್ಯಾಖ್ಯಾನವನ್ನು ಮತ್ತೆಡೆ ನಿರಾಕರಿಸಲಾಗಿದೆ. ಇಲ್ಲಿ , "विमतं असत्"ಎಂದು ಹೇಳದಿದ್ದರೂ ಕೂಡ, ಮಿಥ್ಯಾ ಶಬ್ದದಿಂದ ಅಸತ್ವವನ್ನೆ ಹೇಳಲ್ಪಟ್ಟದ್ದರಿಂದ "मिथ्या" ಎಂದು ಹೇಳಿಕೆಯ ನಿಮಿತ್ತ ಈ ದೂಷಣ ವಿರುತ್ತದೆ, ವಿನಹಾ ಪರ ಅಭಿಪ್ರೆತ ಅನಿರ್ವಚನೀಯತ್ವಾದಿರೂಪ ಅರ್ಥ ನಿಮಿತ್ತವಾಗಿ ಅಲ್ಲ.

**"उक्तं" इति निमित्त सप्तमी प्रयोगात् सूचयता आचार्येण "अनुक्त उपालम्भः अयं परेण असत्वस्य असाधनात्, अनिर्वचनीयत्वरूप मिथ्यास्यैव तेन साधनात्" इति निरस्तं भवति।**

"उक्तं ಅಥವಾ इत्युक्ते" ಎಂದು ನಿಮಿತ್ತ ಸಪ್ತಮಿ ಪ್ರಯೋಗದ ಮೂಲಕ "ಇದು ಪ್ರತಿಪಾದಿಸದ ವಿಷಯದಲ್ಲಿ ದೋಷ ಹೇಳಿದಂತಾಗುತ್ತದೆ, ಪರಪಕ್ಷದವರು ಅಸತ್ವವನ್ನು ಸಾಧಿಸುವದಿಲ್ಲ, ಅನಿರ್ವಚನೀಯತ್ವರೂಪ ಮಿಥ್ಯಾವನ್ನೆ ಸಾಧಿಸುತ್ತಾರೆ" ಎಂಬ ವಾದವನ್ನು ಶ್ರೀಮದಾಚಾರ್ಯರಿಂದ ನಿರಾಕರಿಸಲಾಯಿತು.

**तेन अनुक्त उपालम्भ निरास सूचनार्थं "उक्तं" इति वक्तव्यं इत्यर्थः।**

ಇದರಿಂದ ಪ್ರತಿಪಾದಿಸದ ವಿಷಯದಲ್ಲಿ ದೋಷವನ್ನು ಹೇಳಿದಂತಾಯಿತು ಎಂಬುದನ್ನು ತಳ್ಳಿಹಾಕಲು "उक्तं ಅಥವಾ इत्युक्ते" ಎಂದು ಹೇಳಲಾಗಿರುತ್ತದೆ ಎಂದಂರ್ಥ.

**॥ उक्ति निमित्तं इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**यदि मिथ्या इत्यनेन असत्वं परेण उक्तं स्यात् तदा एव आश्रयासिद्धः पक्ष इति दूषणं अस्माभिः उच्यते इति सूचितं इत्यर्थः।**

ಪರಪಕ್ಷದವರು ಮಿಥ್ಯಾ ಪದದಿಂದ ಅಸತ್ವವನ್ನು ಹೇಳುವದಾದರೆ ಆಗ ಮಾತ್ರ आश्रयासिद्धः पक्ष ಎಂಬ ದೂಷಣವನ್ನು ನಾವು ಹೇಳುತ್ತೆವೆ ಎಂದು ಇಲ್ಲಿ ಸೂಚಿಸಲಾಯಿತು ಎಂದರ್ಥ.

**अनिर्वचनीय अर्थत्वे तु अन्यदेव दूषणं भविष्यति इत्याशयः।**

ಮಿಥ್ಯಾಪದದಿಂದ ಪರಪಕ್ಷದವರು ಅನಿರ್ವಚನೀಯ ಎಂದು ಅರ್ಥಿಸಿದರ, ಅದಕ್ಕೆ ಬೇರೆಯೆ ದೂಷಣವಿರುತ್ತದೆ ಎಂಬ ಆಶಯವಿರುತ್ತದೆ.

**असाधनात् इति– मिथ्यापदेन इति शेषः।**

ಇಲ್ಲಿ असाधनात् ಎಂಬ ಶಬ್ದದ ನಂತರ, मिथ्यापदेन इति ಎಂಬ ಪದಗಳನ್ನು ಸೇರಿಸಿ ಅರ್ಥಮಾಡಬೇಕು, ಅಂದರೆ, ಮಿಥ್ಯಾ ಪದದಿಂದ ಅಸತ್ವವನ್ನು ಸಾಧಿಸುವದಿಲ್ಲ ಎಂಬ ಅರ್ಥ ಸಿಗುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**अत्र टीकायां इतः परं श्रूयमाणं "इत्युक्ते इत्यनेन उक्ति निमित्तं इदं दूषणं इति सूचयता "अनुक्त उपालम्भः अयं परेण प्रपञ्च असत्त्वस्य असाधनात्" इति निरस्तं भवति।" इति वाक्य त्रयं प्रक्षिप्तं न टीकावाक्यम्।**

ಇತರ ಟಿಪ್ಪಣಿಕಾರರಿಂದ ಕೇಳಿಬರುವ ಮೇಲಿನ ಟೀಕಾ ವಾಕ್ಯತ್ರಯಗಳು, ಟೀಕಾವಾಕ್ಯಗಳಿರುವದಿಲ್ಲ. ಇವುಗಳು ಯಾರಿಂದಲೊ ಟೀಕಾವಾಕ್ಯಗಳೆಂದು ಸೇರಿಸಲ್ಪಟ್ಟಿರುತ್ತವೆ.

**अवश्यं च एतदेवं विज्ञेयम्। परेण असत्त्व असाधनेऽपि आश्रयत्व प्रयोजक सत्व वैधुर्यस्य अभिधानेन अनुक्त उपालम्भ अभावेन तत् निरास अयोगात्। इति शब्दस्य पूर्व प्रकृत परामर्शकत्वेन पूर्वं असत्त्व उक्ति अभावात् इत्युक्त इत्यस्य असत् इत्युक्त इत्यर्थकथन अयोगात्।**

ಇದನ್ನು ಅವಶ್ಯವಾಗಿ ತಿಳಿಯಬೇಕು. ಪರಪಕ್ಷದವರು ಅಸತ್ವವನ್ನು ಸಾಧಿಸದಿದ್ದರೂ ಅವರ ಆಶ್ರಯತ್ವ ಪ್ರಯೋಜಕ ಸತ್ವದ ವಿಯೋಗದ ಅಭಿಧಾನದಿಂದ, ಹೇಳದ ವಿಷಯದ ಮೇಲೆ ದೋಷವನ್ನು ಹೇಳುವದು, ಸ್ಥಾಪಿತವಾಗಲ್ಲದ್ದರಿಂದ, ಅದರ ನಿರಾಕರಣೆ ಅಯೋಗ್ಯವಾಗಿರುತ್ತದೆ. ಮತ್ತು इति ಪದವು ಪೂರ್ವ ಮತ್ತು ಪ್ರಕೃತ ವಿಷಯಗಳನ್ನು ಪರಾಮರ್ಶಿಸುತ್ತದೆ, ಇಲ್ಲಿ ಪೂರ್ವದಲ್ಲಿ ಅಸತ್ವದ ಬಗ್ಗೆ ಯಾವ ಉಲ್ಲೇಖ ವಿರುವದಿಲ್ಲ, ಅದರಂತೆ इत्युक्त ಪದವನ್ನು ಅಸತ್ವ ಪರವಾಗಿ ಅರ್ಥಮಾಡಿ ಹೇಳುವದು ಸರಿಯೆನಿಸುವದಿಲ್ಲ.

## टीका

**ननु "जगतोऽभावात्" इति हेतुः सिद्धश्चेत्, सिद्धं परस्य अभिमतम्। किम् अप्रसिद्ध् विशेष्यता करिष्यति? असिद्धश्चेत् तथापि। असिद्धाश्रयत्व साधक अभावात्।**

ಇಲ್ಲಿ ಒಂದು ಶಂಕೆ, "जगतोऽभावात्" ಅಂದರೆ "ಜಗತ್ತು ಇಲ್ಲ" ಎಂಬುದರಿಂದ ಜಗತ್ತು ಮಿಥ್ಯಾ ಎಂದು ಸಿದ್ಧವಾಗಿದೆ ಎಂತೆಂದರೆ, ಸಿದ್ಧವಾಗಿದೆ ಎಂದು ಪರಮತದವರ ಅಭಿಮತವಾಗಿರುತ್ತದೆ. ಹಾಗಾದರೆ ಪ್ರಪಂಚ ಮಿಥ್ಯಾತ್ವ ಅನುಮಾನಕ್ಕೆ "जगतोऽभावात्" ದಿಂದ ಅಸಿದ್ಧಾಶ್ರಯ ದೋಷವನ್ನು ಹೇಗೆ ಹೇಳಲಿಕ್ಕಾಗುತ್ತದೆ? ಇನ್ನು "ಜಗತ್ತು ಮಿಥ್ಯಾ" ಎಂದು ಅಸಿದ್ಧವಾದಲ್ಲಿ, ಅಸಿದ್ಧಾಶ್ರಯಾದಿ ದೋಷಗಳಿಗೆ ಆಸ್ಪದವಿರುತ್ತಿತ್ತು. ಆದರೆ "ಜಗತ್ತು ಮಿಥ್ಯಾ" ಎಂದು ಸಿದ್ಧವಾಗಿದೆ ಎಂದು ಪರಮತದವರ ಅಭಿಮತವಾಗಿರುತ್ತದೆ. ಆದ್ದರಿಂದ ಇಲ್ಲಿ ಪ್ರಪಂಚ ಮಿಥ್ಯಾತ್ವ ಅನುಮಾನಕ್ಕೆ "जगतोऽभावात्" ಎಂಬುದರಿಂದ ಅಸಿದ್ಧಾಶ್ರಯತ್ವವನ್ನು ಸಾಧಿಸಲು ಬರುವದಿಲ್ಲ.

### टिप्पणीनाम् विशेषार्थानि



## ॥ ननु इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**पक्षः आश्रयासिद्धो भवितुं अर्हति।**

ಇಲ್ಲಿ ಪಕ್ಷವು आश्रयासिद्ध ಹೊಂದಲು ಅರ್ಹವಾಗಿರುತ್ತದೆ.

**जगतोऽभावात् इति, साधन अनुमानेन उक्तं इति भ्रान्तः शङ्कते – ननु इति।
सिद्धश्चेत् इति – सिद्धान्तिनाम् इति।**

जगतोऽभावात् इति ಎಂದು ಸಾಧನ ಅನುಮಾನದಿಂದ ಹೇಳಲಾಗಿದೆ, ಎಂದು ಭ್ರಾಂತಿಯಲ್ಲಿರುವವರ ಶಂಕೆಯನ್ನು ಈ ಟೀಕಾವಾಕ್ಯ ಪ್ರತಿಪಾದಿಸುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**जगतोऽभावात् इत्यनेन उक्तं सत्ववैधुर्यं सिद्धं वा न वा। सिद्धं चेत्, सिद्धं परस्य अभिमतम्। जगत् सद्वैलक्षण्यस्यैव पराभिलषितत्वात्।**

ಇನ್ನು"जगतोऽभावात्" ಎಂಬುದರಿಂದ ಮಿಥ್ಯಾತ್ವ ಅನುಮಾನ ಹೇಳಿದ सत्ववैधुर्य ಅಂದರೆ ಪ್ರಪಂಚ ಸತ್ಯತ್ವವನ್ನು ಕಳೆದುಕೊಳ್ಳುವಿಕೆ, ಸಿದ್ಧವಾಗಿದೆಯೋ ಅಥವಾ ಇಲ್ಲವೊ? ಸಿದ್ಧವಾಗಿದೆ ಎಂದರೆ, ಸಿದ್ಧವಾಗಿದೆ ಎಂದು ಪರಪಕ್ಷದವರ ಅಭಿಮತವಾಗಿರುತ್ತದೆ. ಏಕೆಂದರೆ ಜಗತ್ತು ಸದ್ವೈಲಕ್ಷಣ್ಯವಾಗಿದೆ ಎಂದು ಪರರ ಮತವಾಗಿರುತ್ತದೆ.

**ततश्च अप्रसिद्ध् विशेष्यता, अनुमान विघटन द्वारा अभिलषित विघटना न भवति इति सा न वक्तव्या।**

ಅದರಂತೆ, ಅನುಮಾನದ ವಿಘಟನ ಮೂಲಕ ಪರಪಕ್ಷದವರಿಗೆ ಅಭಿಪ್ರೇತವಾದುದನ್ನು ಪ್ರತ್ಯೇಕೀಕರಿಸಲು ಬರುವದಿಲ್ಲ. ಆದ್ದರಿಂದ ಅದಕ್ಕೆ अप्रसिद्ध् विशेष्यता ಎಂದು ಹೇಳಲಿಕ್ಕಾಗುವದಿಲ್ಲ.

**असिद्धं चेत्, सिद्धं परस्य अभिमतं, अनुमान दोष साधक अभावेन, निर्दोषेण अनुमानेन अभिलषितार्थ सिद्धि सम्भवात् इत्यर्थः।**

ಇನ್ನು, "जगतोऽभावात्" ಎಂಬುದರಿಂದ ಮಿಥ್ಯಾತ್ವ ಅನುಮಾನ ಹೇಳಿದ सत्ववैधुर्य ಅಂದರೆ ಪ್ರಪಂಚ ಸತ್ಯತ್ವವನ್ನು ಕಳೆದುಕೊಳ್ಳುವಿಕೆ, ಸಿದ್ಧವಾಗಿಲ್ಲವೆಂದರೆ, ಸಿದ್ಧವಾಗಿದೆ ಎಂದು ಪರಪಕ್ಷದವರ ಅಭಿಮತವಾಗಿದೆ. ಅದರಿಂದ ಅನುಮಾನ ದೋಷ ಸಾಧಕವಾಗಲಾರದ್ದರಿಂದ, ಪ್ರಪಂಚ ಮಿಥ್ಯಾತ್ವ ಅನುಮಾನವು ನಿರ್ದೋಷವೆನಿಸಿ, ಪರಪಕ್ಷದವರ ಅಭಿಲಷಿತಾರ್ಥದ ಸಿದ್ಧಿ ಸಂಭವಿಸುತ್ತದೆ ಎಂದರ್ಥ.

## ॥ असिद्धश्चेत् तथापि इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**अन्ये तु "खपुष्पं सुरभि" इत्यादाविव, न वस्तुत आश्रयासिद्धिः। प्रपञ्चस्य सत्त्वात् किन्तु, मिथ्या इति परोक्ति निमित्ता इत्यनेन प्रकारेण उक्ति निमित्तं इति ग्रन्थ व्याचक्षते।**

ಮತ್ತೆ ಕೆಲವರ ಅಭಿಪ್ರಾಯದಂತೆ, ಗಗನಕುಸುಮದ ಪರಿಮಳದಂತೆ, ಇಲ್ಲಿ ವಸ್ತುತಃ ಆಶ್ರಯಾಸಿದ್ಧಿ ದೋಷ ಸಾಧಿಸಲು ಬರುವದಿಲ್ಲ. ಪ್ರಪಂಚವು ಸತ್ಯವಾಗಿದೆ, ಪರಂತು ಇಲ್ಲಿ ಪ್ರಪಂಚವು ಮಿಥ್ಯಾ ಎಂದು ಪರಪಕ್ಷದವರ ಉಕ್ತಿ ನಿಮಿತ್ತ ಹೀಗೆ ಗ್ರಂಥವನ್ನು ವಿಮರ್ಶಿಸಲಾಗುತ್ತಿದೆ ಎಂಬ ಭಾವ.

**असिद्धत्व पक्षं दूषयति – असिद्धश्चेत तथापि इति।**
**"सिद्धं परस्य अभिमतं" इत्यनेन अनुषक्तेन अस्य सम्बन्धः। तत्र हेतुः असिद्धाश्रयत्व इति।**

असिद्धश्चेत तथापि ಎಂಬ ಟೀಕಾವಾಕ್ಯದಿಂದ "जगतोऽभावात्" ಎಂಬುದರಿಂದ ಪ್ರಪಂಚ ಮಿಥ್ಯಾತ್ವ ಅನುಮಾನದ ಅಸಿದ್ಧತ್ವ ಪಕ್ಷವನ್ನು ದೂಷಿಸುತ್ತಾರೆ. ಇಲ್ಲಿ ಕೂಡ "सिद्धं परस्य अभिमतं" ಎಂಬ ವಾಕ್ಯದ ಜೊತೆಗೆ ಈ ಸಂಬಂಧವಿರುತ್ತದೆ.
ಅಲ್ಲಿ ಹೇತುವು ಅಸಿದ್ಧಾಶ್ರಯತ್ವವಾಗಿರುತ್ತದೆ.

## टीका

**मैवम्। यदि जगत् अभावो अत्र साध्यते तदा जगतः अभावात् साध्यधर्मस्य आश्रयासिद्धिः स्यात्। ततश्च विशेष्य अभावात् विशिष्ट अभावः इति प्रतिज्ञार्थो बाधितः स्यात्, इत्येवं पर–अङ्गीकृतेन परस्य दोषोद्भावनम्।**

ಅದು ಹಾಗಲ್ಲ. ನಾವು ಹೇಳುವದು ಇಷ್ಟೆ. ಪರಪಕ್ಷದವರು ಜಗತ್ತು ಇಲ್ಲ ಎಂದು ಇಲ್ಲಿ ಸಾಧಿಸಿದರೆ, ಜಗತ್ತು ಇಲ್ಲದಾಗುವದರಿಂದ ಸಾಧ್ಯಧರ್ಮಕ್ಕೆ ಆಶ್ರಯ ಅಸಿದ್ಧಿ ಉಂಟಾಗುತ್ತದೆ. ಅದರಂತೆ, ವಿಶೇಷ್ಯದ (ಜಗತ್ತಿನ) ಅಭಾವತೆಯಿಂದ ವಿಶಿಷ್ಟಕ್ಕೂ (ಸಾಧ್ಯಧರ್ಮವಾದ ಮಿಥ್ಯಾಕ್ಕೂ) ಅಭಾವತೆ ಉಂಟಾಗಿ, ಪ್ರತಿಜ್ಞಾರ್ಥಕ್ಕೆ ಬಾಧಕ ಉಂಟಾಗುತ್ತದೆಂದು ಪರಪಕ್ಷದವರು ಅಂಗೀಕರಿಸಿದ್ದರಿಂದ, ಇದು ಪರಪಕ್ಷದವರ ಮಿಥ್ಯಾತ್ವ ಅನುಮಾನಕ್ಕೆ ದೋಷವನ್ನು ಹೇಳಿದಂತಾಯಿತು.

### टिप्पणीनाम् विशेषार्थानि

**॥ यदि जगत् अभावो अत्र इति॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**दूषण अनुमानमेव अत्र विवक्षितं न साधन अनुमानं इत्याह् – यदि इति॥**

ಇಲ್ಲಿ ದೂಷಣ ಅನುಮಾನವೆ ಅಪೇಕ್ಷಿತವಾಗಿರುತ್ತದೆ, ಸಾಧನ ಅನುಮಾನವಲ್ಲ, ಎಂದು ತಿಳಿಸಲು ಈ ಟೀಕಾವಾಕ್ಯವಿರುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:



**यदि जगत् अभावः सद्वैलक्षण्यं अत्र विप्रतिपन्ने जगति साध्यते तर्हि जगतः अभावात् सत्ववैधुर्यात् साध्यधर्मस्य सद्विलक्षण स्वरूपस्य आश्रयासिद्धि दोषः स्यात् इति भावः।**

ಒಂದು ವೇಳೆ ಜಗತ್ ಅಭಾವಃ ಎಂದರೆ ಸದ್ವೈಲಕ್ಷಣ್ಯ ಅದನ್ನು ಇಲ್ಲಿ ವಿವಾದಾಸ್ಪದವಾದ ಜಗತ್ತಿನಲ್ಲಿ ಸಾಧಿಸುವುದಾದರೆ, जगतः अभावात् ಅಂದರೆ ಜಗತ್ತು ಸತ್ಯತ್ವವನ್ನು ಕಳೆದುಕೊಂಡಿದ್ದರಿಂದ ಸಾಧ್ಯಧರ್ಮವಾದ ಸದ್ವಿಲಕ್ಷಣಸ್ವರೂಪಕ್ಕೆ ಆಶ್ರಯಾಸಿದ್ಧ ದೋಷ ಉಂಟಾಗುತ್ತದೆ ಎಂಬ ಭಾವ.

**॥ ततश्च इति ॥**

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**विशेष्य अभावात् विशेष्यभूत जगतः अभावात् सत्ववैधुर्यात् जगतः साध्यधर्मं वैशिष्ट्यरूप प्रतिज्ञार्थो बाधितः स्यात्। विशेष्य अभावे विशिष्ट अयोगात् इति भावः।**

ಈ ಪ್ರಕೃತದಲ್ಲಿ, विशेष्य अभावात् ಅಂದರೆ, ವಿಶೇಷ್ಯಭೂತ ಜಗತ್ತು ಅಭಾವತ್ ಎಂದರೆ ಸತ್ಯತ್ವವನ್ನು ಕಳೆದುಕೊಂಡ ಜಗತ್ತು, ಸಾಧ್ಯಧರ್ಮ ವೈಶಿಷ್ಟ್ಯದಿಂದ ಕೂಡಿದ ಪ್ರತಿಜ್ಞಾರ್ಥಕ್ಕೆ ಬಾಧಕವಾಗುತ್ತದೆ. ಅಂದರೆ ವಿಶೇಷ್ಯ ಇಲ್ಲದಾಗ ವಿಶಿಷ್ಟದ ಇರುವಿಕೆ ಅಯೋಗ್ಯವಾಗಿರುತ್ತದೆ ಎಂಬ ಭಾವ. ಹೀಗೆ ಪರಪಕ್ಷದವರ ಪ್ರತಿಜ್ಞಾವಾಕ್ಯಕ್ಕೆ ದೋಷ ಹೇಳಿದಂತಾಯಿತು.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**आचार्येण पक्षग्रहणेन सूचितं आश्रयासिद्धेः प्रतिज्ञा दोषं दर्शयति– ततश्च इति॥**

ಇಲ್ಲಿ, ಶ್ರೀಮದಾಚಾರ್ಯರು ಪಕ್ಷಗ್ರಹಣಮೂಲಕ ಸೂಚಿತ ಆಶ್ರಯಾಸಿದ್ಧಿ ಪ್ರತಿಜ್ಞಾ ದೋಷವನ್ನು ತೋರಿಸುತ್ತಿದ್ದಾರೆಂದು ಈ ಟೀಕಾವಾಕ್ಯ ಪ್ರತಿಪಾದಿಸುತ್ತಿದೆ.

**ननु यत्र विशेष्य सद्भावः विशेषण अविरोधी तत्र विशेष्य अभावे विशिष्ट अभावः। यथा पुरुष अभावे दण्डि अभावः।**

**प्रकृते तु प्रपञ्चरूप विशेष्य सद्भावो मिथ्यात्वलक्षण विशेषण विरोधी। ततश्च विशेष्य सद्भाव अङ्गीकारे विशेषण अयोगात्, विशेषण अभाव प्रयुक्तो विशिष्ट अभावः। यथा "प्रध्वस्तो घटः" इत्यत्र घट सद्भाव अङ्गीकारे प्रध्वंस विशिष्ट घट अभावः। तस्मात् कथं उक्तं विशेष्य अभावात् विशिष्ट अभाव इति।**

ಇಲ್ಲೊಂದು ಶಂಕೆಗೆ ಆಸ್ಪದವಿದೆ. ಅದು ಹೀಗಿರುತ್ತದೆಃ ಎಲ್ಲಿ ವಿಶೇಷ್ಯದ ಅಸ್ಥಿತ್ವವಿದ್ದು, ವಿಶೇಷಣ ವಿಶೇಷ್ಯದ ಅವಿರೋಧವಾಗಿದ್ದ ಸಂದರ್ಭದಲ್ಲಿ ವಿಶೇಷ್ಯ ಇಲ್ಲದಾಗ ವಿಶಿಷ್ಟವು ಕೂಡ ಇಲ್ಲವೆಂದು ಹೇಳುತ್ತೆವೆ. ಉದಾಹರಣೆಗೆ, ಪುರಷ ಇಲ್ಲದಾಗ ಅವನ ಬಡಿಗೆ ಕೂಡ ಇಲ್ಲವೆಂದು ಹೇಳಿದಂತೆ.

ಆದರೆ ಪ್ರಕೃತದಲ್ಲಿ. ಪ್ರಪಂಚರೂಪ ವಿಶೇಷ್ಯದ ಅಸ್ಥಿತ್ವವು ಮಿಥ್ಯಾತ್ವಲಕ್ಷಣರೂಪ ವಿಶೇಷಣದ ವಿರೋಧಿಯಾಗಿರುತ್ತದೆ. ಅದರಂತೆ ಇಲ್ಲಿ, ವಿಶೇಷ್ಯದ ಅಸ್ಥಿತ್ವವನ್ನು ಅಂಗೀಕರಿಸಿದರೆ, ವಿಶೇಷಣ ಅಯೋಗ್ಯವೆನಿಸುತ್ತದೆ. ಹಾಗೂ ವಿಶೇಷಣ ಅಭಾವ ಅಂದರೆ ಮಿಥ್ಯಾ ಪ್ರಯುಕ್ತ ವಿಶಿಷ್ಟ ಅಂದರೆ ವಿಶೇಷಣ ವಿಶಿಷ್ಟ ಜಗತ್ತು ಇಲ್ಲದಾಗುತ್ತದೆ.

ಉದಾಹರಣೆಗೆ, "प्रध्वस्तो घट:" ಅಂದರೆ "ನಾಶಮಾಡಿದ ಘಟ" ಎಂಬಲ್ಲಿ ಘಟದ ಅಸ್ಥಿತ್ವ ಅಂಗೀಕರಿಸಿದರೆ प्रध्वंस विशिष्ट ಅಂದರೆ ನಾಶವಿಶಿಷ್ಟ ಘಟ ಇಲ್ಲದಾಗುತ್ತದೆ. ಹೀಗಿರುವಾಗ ಶ್ರೀಮದಾಚಾರ್ಯರು, "विशेष्य अभावात् विशिष्ट अभाव" ಎಂದು ಹೇಗೆ ಹೇಳುತ್ತಾರೆ?

**मैवम्। "प्रतिपन्न स्वभाव अनुपमर्देन सत्यविवेक अपरपर्याय धर्मसाधनं" इति वदता परेण प्रपञ्चरूप विशेष्ये सद्विलक्षण स्वरूपसद्भावस्य मिथ्यात्वलक्षण विशेषण अनुकूलता अङ्गीक्रियते। ततश्च विशेषणस्य अत्यन्त असत्वे, विशेष्य अभावेन विषिष्ट अभाव अपरिहारात्।**

ಅದು ಹಾಗಲ್ಲ. ಸ್ವಾಭಾವಿಕ ತಿಳಿಯಲ್ಪಟ್ಟದ್ದನ್ನು ಬಿಟ್ಟು ಸತ್ಯವಿವೇಕ ಪರ್ಯಾಯವಲ್ಲದ ಧರ್ಮಸಾಧನ ಹೇಳತಾ, ಪರಪಕ್ಷದವರು ಪ್ರಪಂಚರೂಪ ವಿಶೇಷ್ಯದಲ್ಲಿ ಸದ್ವಿಲಕ್ಷಣ ಸ್ವರೂಪ ಸದ್ಭಾವದ ಮಿಥ್ಯಾತ್ವಲಕ್ಷಣ ವಿಶೇಷಣದ ಅನುಕೂಲತೆಯನ್ನು ಅಂಗೀಕರಿಸುತ್ತಾರೆ. ಅದರಂತೆ ವಿಶೇಷಣವು ಅತ್ಯಂತ ಅಸತ್ವವಾದಾಗ, ವಿಶೇಷ್ಯವೆ ಇಲ್ಲವಾದ್ದರಿಂದ ವಿಶಿಷ್ಟದ ಅಭಾವತೆಯನ್ನು ಪರಿಹರಿಸಲು ಸಾಧ್ಯವಿಲ್ಲ ಎಂದರ್ಥ..

## ॥ विशिष्ट अभाव इति इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**साध्यधर्म विशिष्ट धर्मि अभाव इत्यर्थ:।**

ಇಲ್ಲಿ विशिष्ट अभाव ವೆಂದರೆ, ಸಾಧ್ಯಧರ್ಮ ವಿಶಿಷ್ಟ ಧರ್ಮಿಯ ಅಭಾವತೆ ಎಂದರ್ಥ.

## ॥ पर–अङ्गीकृतेन इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**मिथ्या शब्दोक्त प्रपञ्च असत्वेन इत्यर्थ:।**

पर–अङ्गीकृतेन ಎಂದರೆ, ಮಿಥ್ಯಾ ಶಬ್ದದಿಂದ ಹೇಳಿದ ಪ್ರಪಂಚ ಅಸತ್ವದಿಂದ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**अस्माभि: परोक्तार्थ अनङ्गीकारात्, प्रतिवादिन: स्वाभिलिषित सिद्धं इति न सन्तोष्टव्यं इत्यर्थ:।**

ನಾವು ಪ್ರಪಂಚ ಮಿಥ್ಯಾತ್ವದ ವಿಷಯದಲ್ಲಿ ಪರರು ಹೇಳಿದ ಅರ್ಥ ಅಂಗೀಕರಿಸಿರುವದಿಲ್ಲ, ಆದ್ದರಿಂದ ಪ್ರತಿವಾದಿಗಳು ತಮ್ಮ ಅಭಿಲಿಷಿತ ಸಿದ್ಧವಾಯಿತೆಂದು ಸಂತೋಷಪಡುವ ಕಾರಣವಿಲ್ಲ.

**एतेन पराङ्गीकारेण (कृतेन) परस्य दोषोद्भावनं इति अयुक्तं।**

ಇದರಿಂದ ಪರರ ಪಕ್ಷ ಅಂಗೀಕರಿಸಿ, ಪರರ ಪಕ್ಷದವರ ದೋಷವನ್ನು ಹೇಳಲಾಗಿದೆ ಎಂದು ಹೇಳುವದು ಅಯುಕ್ತವೆನಿಸುತ್ತದೆ.

**असत्वस्य धर्मिसत्ताविरोधित्वेन तत् सत्ता अनपेक्ष्यत्वात्। अन्यथा शशविषाणं नास्ति इति वदतो, भवितोपि अप्रसिद्ध विशेष्यत्वं स्यात्।**

ಅಸತ್ವವು ಧರ್ಮಿಸತ್ತಾ ವಿರೋಧಿಯಾಗಿರುವದರಿಂದ ಅದರ ಸತ್ತಾ ಅನಪೇಕ್ಷಿತವಾಗಿರುತ್ತದೆ. ಅನ್ಯಥಾ ಶಶವಿಷಾಣಗಳು ಇಲ್ಲ ಹೇಳತಾ ಇವೆ ಎಂದಾದರೂ ಅವು ಅಪ್ರಸಿದ್ಧ ವಿಶೇಷ್ಯವಾಗುತ್ತವೆ.



**जगत् असत्त्वस्यैव प्रतिज्ञार्थत्वेन प्रतिज्ञार्थस्य बाधितत्व अभिधान अयोगात् च इति निरस्तम्।**

ಇದರಿಂದ ಜಗತ್ತಿನ ಅಸತ್ಯತ್ವವೇ ಪ್ರತಿಜ್ಞಾರ್ಥವಾಗುವದರಿಂದ ಪ್ರತಿಜ್ಞಾರ್ಥಕ್ಕೆ ಬಾಧಕತ್ವ ಅಭಿಧಾನವು ಅಯೋಗ್ಯವಾಗಿದೆ ಎಂಬ ಹೇಳಿಕೆಯನ್ನು ತಳ್ಳಿಹಾಕಲಾಯಿತು.

**मिथ्या इत्यनेन मायावादिना जगतोऽसत्वं उच्यत इति पक्षे, अनेन मूलवाक्येन दोष उच्यत इति अनङ्गीकारात्, तर्हि कस्मिन् पक्ष दोष: अयं उच्यत इति चेत्।**

ಮಿಥ್ಯಾ ಶಬ್ದದಿಂದ ಮಾಯಾವಾದಿಗಳು जगतोऽसत्वं ಹೇಳುತ್ತಾರೆ ಎಂಬ ಪಕ್ಷವನ್ನು ಅನುಸರಿಸಿ ಮೂಲವಾಕ್ಯದಿಂದ ಹೇಳಿದ ದೋಷ ನಾವು ಅಂಗೀಕರಿಸುವದಿಲ್ಲ, ಆಗ ಯಾವ ಪಕ್ಷದೋಷವನ್ನು ತಾವು ಹೇಳುತ್ತೀರಿ ಎಂದರೆ,

**मिथ्या इत्यनेन सदसद्वैलक्षण्य विशिष्ट स्वरूपं उच्यत इति ब्रूम:। असत् शब्द अभिधेयस्य नि:स्वरूपस्य धर्मिसत्ता विरोधित्वेन धर्मिसत्ता अनपेक्षत्वात्।**

ಮಿಥ್ಯಾ ಪದದಿಂದ ಸದಸದ್ವೈಲಕ್ಷಣ್ಯ ವಿಶಿಷ್ಟ ಸ್ವರೂಪ ಎಂದು ನಾವು ಹೇಳುತ್ತೆವೆ ಎಂದೆನ್ನುತ್ತವೆ. ಅಸತ ಶಬ್ದ ಅಭಿಧೇಯವಾದ ನಿಸ್ವರೂಪವು ಧರ್ಮಿಸತ್ತಾ ವಿರೋಧಿಯಾಗಿರುವದರಿಂದ, ಧರ್ಮಿಸತ್ತಾ ಅನಿಸಲು ಅನಪೇಕ್ಷಿತವಾಗಿರುತ್ತದೆ.

**शशविषाणं असत् इति उक्ति सम्भवेपि, सदसद्वैलक्षण्य विशिष्टस्वरूपस्य धर्मिसत्ता सापेक्षत्वेन, मिथ्या शब्दार्थभूत सदसद्वैलक्षण्य विशिष्ट स्वरूपस्य धर्मि सत्ता सापेक्षत्वेन, मिथ्या शब्दार्थभूत सदसद्वैलक्षण्य विशिष्ट स्वरूपलक्षण साध्यस्य आश्रयासिद्ध दूषणमेव।**

ಶಶವಿಷಾಣಗಳು ಅಸತ್ಯವಾಗಿವೆ ಎಂಬ ಹೇಳಿಕೆ ಸಂಭವಿಸಿದರೂ, ಸದಸದ್ವೈಲಕ್ಷಣ್ಯ ವಿಶಿಷ್ಟ ಸ್ವರೂಪದ ಧರ್ಮಿಸತ್ತಾ ಸಾಪೆಕ್ಷತ್ವದಿಂದ, ಮಿಥ್ಯಾಶಬ್ದಾರ್ಥಭೂತ ಸದಸದ್ವೈಲಕ್ಷಣ್ಯ ವಿಶಿಷ್ಟ ಸ್ವರೂಪದ ಧರ್ಮಿಸತ್ತಾ ಸಾಪೆಕ್ಷತ್ವದಿಂದ, ಮಿಥ್ಯಾಶಬ್ದಾರ್ಥಭೂತ ಸದಸದ್ವೈಲಕ್ಷಣ್ಯ ವಿಶಿಷ್ಟ ಸ್ವರೂಪಲಕ್ಷಣ ಸಾಧ್ಯದ ಆಶ್ರಯಾಸಿದ್ಧಿ, ದೂಷಣವೇ ಆಗಿರುತ್ತದೆ.

**अत एव शशविषाणं असत् इत्याद्युक्तौ अविद्यमान विशेष्यत्वस्य अदोषत्वेऽपि जगत् मिथ्या इत्युक्तौ सत्वशून्य विशेष्यकत्वं दोष:।**

ಆದ್ದರಿಂದಲೇ ಶಶವಿಷಾಣಗಳು ಅಸತ್ಯ ಎಂದು ಮುಂತಾದ ಹೇಳಿಕೆಗಳು ಅವಿದ್ಯಮಾನ ವಿಶೇಷ್ಯತ್ವವನ್ನು ಹೇಳುವುದು ಅದೋಷವೆಂದೆನಿಸಿದರೂ, ಜಗತ್ತು ಮಿಥ್ಯಾ ಎಂಬ ಹೇಳಿಕೆ ಸತ್ವಶೂನ್ಯ ವಿಶೇಷ್ಯಕತ್ವವೆಂದು ಪ್ರತಿಪಾದಿಸುವದು ದೋಷವೆನಿಸುತ್ತದೆ.

**सत्वविधुरस्य सदसद्वैलक्षण्य विशिष्ट स्वरूपस्य अयोगेन प्रतिज्ञार्थोऽपि बाधित एव।**

ಮತ್ತು ಸತ್ವವಿಧುರವಾದುದಕ್ಕೆ ಸದಸದ್ವೈಲಕ್ಷಣ್ಯ ವಿಶಿಷ್ಟಸ್ವರೂಪವು ಅಯೋಗವೆನಿಸುವದರಿಂದ, ಪ್ರತಿಜ್ಞಾರ್ಥಕ್ಕೆ ಕೂಡ ಬಾಧಿತವೇ ಆಗುತ್ತದೆ.

### ५.१.१ मिथ्यात्वमसत्वमिति पक्षाश्रयणेन दूषणे छलशङ्का तत्परिहारश्च

## टीका

**मिथ्या शब्देन किम् असत् उच्यते? उत अन्यत् किमपि? इति विकल्पेन उपक्रमात् न छलप्रसङ्गः। शिष्याणां कथाक्रम शिक्षणार्थं विकल्पः।**

ಈ ಟೀಕಾವಾಕ್ಯವು, मिथ्या ಶಬ್ದದ ಅರ್ಥವನ್ನು ಪರಪಕ್ಷದವರು अनिर्वचनीय ಎಂದು ಹೇಳುತ್ತಿರಲು, ಅವರಿಗೆ ವಿವಕ್ಷಿತವಾದ ಅರ್ಥವನ್ನು ತ್ಯಜಿಸಿ, असत्व ಎಂದು ಅರ್ಥಮಾಡಿ, ಪ್ರಪಂಚ ಮಿಥ್ಯಾತ್ವ ಪ್ರತಿಪಾದಿಸುವ ಅನುಮಾನಕ್ಕೆ आश्रयासिद्धि ದೋಷವನ್ನು ಹೇಳುವದು ಛಲ ಪ್ರಸಂಗ ವೆನಿಸುವದಿಲ್ಲವೇನು? ಎಂಬ ಶಂಕೆಗೆ ಉತ್ತರರೂಪವಾಗಿರುತ್ತದೆ..

ಇಲ್ಲಿ, मिथ्या ಶಬ್ದದಿಂದ असत् ಎಂದು ಹೇಳುತ್ತೀರೊ ಅಥವಾ ಅದಕ್ಕಿಂತಲೂ ಬೇರೆಯೆಂದೊ, ಎಂಬ ವಿಕಲ್ಪವನ್ನು ಅನುಸರಿಸಿ ಅನುಮಾನದ ದೂಷಣಾತ್ಮಕ ವಿಮರ್ಶೆಯನ್ನು ಪ್ರಾರಂಭಿಸಿದ್ದರಿಂದ, ಛಲ ಪ್ರಸಂಗಕ್ಕೆ ಅವಕಾಶವಿರುವದಿಲ್ಲ. ಹಾಗೂ ಈ ವಿಕಲ್ಪವನ್ನು ಅನುಸರಿಸಿದ್ದು ಶಿಷ್ಯರಿಗೆ ಕಥಾಕ್ರಮ ಅಥವಾ ವಾದ ಕ್ರಮವನ್ನು ತಿಳಿಸಿಕೊಡುವ ಪಾರ್ಶ್ವಭೂಮಿಯಲ್ಲಿ, ಎಂಬ ಭಾವವಿರುತ್ತದೆ.

## टिप्पणीनाम् विशेषार्थानि

### ॥ मिथ्या शब्देन इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**मिथ्या शब्दस्य, अनिर्वचनीय वाचितया परेण विवक्षितत्वात्, विवक्षित पक्षं परित्यज्य, अविवक्षित असत्वपक्ष आश्रयणेन, आश्रयासिद्धि अभिधाने छलप्रसङः इति आशक्य आह– मिथ्याशब्देन इति॥**

**अन्यत् किंचित् (किमपि) अनिर्वचनीयम्।**

ಮಿಥ್ಯಾ ಶಬ್ದದ ಅನಿರ್ವಚನೀಯ ಪರವಾದ ಅರ್ಥ ಪರಪಕ್ಷದವರಿಗೆ ಅಭಿಪ್ರೇತವಾಗಿರುತ್ತದೆ. ಅವರಿಗೆ ಅಭಿಪ್ರೇತವಾದ ಅರ್ಥವನ್ನು ತೊರೆದು, ಅವರಿಗೆ ಸಮ್ಮತವಲ್ಲದ ಅಸತ್ವಪಕ್ಷವನ್ನು ಆಶ್ರಯಿಸಿ, ಆಶ್ರಯಾಸಿದ್ಧಿ ದೋಷವನ್ನು ಪ್ರಪಂಚ ಮಿಥ್ಯಾತ್ವ ಅನುಮಾನಕ್ಕೆ ಹೇಳುವದು, ಛಲಪ್ರಸಂಗ ಎನಿಸುವ ಶಂಕೆ ಯನ್ನು ದೂರಮಾಡಲು ಈ ಟೀಕಾವಾಕ್ಯ ಹೊರಟಿರುತ್ತದೆ.

अन्यत् किंचित् (किमपि) ಎಂದರೆ ಅನಿರ್ವಚನೀಯ ಎಂದರ್ಥ.

### ॥ विकल्पेन उपक्रमात् इति॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**ननु मिथ्या शब्दस्य, अनिर्वचनीय अवाचित्वेऽपि तार्किकैः समवाय शब्देन नित्य सम्बन्धवत्, परैः अपि परिभाषामात्रेण अपि, मिथ्या शब्देन अनिर्वचनीयत्वस्य विवक्षितुं शक्यत्वात्, विवक्षित पक्षं परित्यज्य अविवक्षित असत्त्वपक्ष आश्रयणेन आश्रयासिद्धि अभिधाने छलप्रसङ्ग् इति आशंक्य आह– विकल्पेन उपक्रमात् इति॥**



ಮಿಥ್ಯಾ ಶಬ್ದವು ಅನಿರ್ವಚನೀಯ ಅವಾಚಕವಾದರೂ, ತಾರ್ಕಿಕರು ಹೇಗೆ ಸಮವಾಯ ಶಬ್ದದಿಂದ ನಿತ್ಯಸಂಬಂಧ (ತಂತುಪಟ, ಗುಣಗುಣಿ) ಸೂಚಿಸುವಂತೆ, ಪರಪಕ್ಷದವರಿಗೂ ಕೂಡ ಪರಿಭಾಷಾ (ವಿವರಣೆ) ಮಾತ್ರದಿಂದಲಾದರೂ ಮಿಥ್ಯಾ ಶಬ್ದದಿಂದ ಅನಿರ್ವಚನೀಯತ್ವವು ಅಭಿಪ್ರೆತವಾಗಿರುತ್ತದೆಂದು ತಿಳಿಯಲು ಶಕ್ಯವಾಗಿರುತ್ತದೆ. ಅದರಂತೆ ಪರರಿಗೆ ಅಭಿಪ್ರೇತವಾದ ಪಕ್ಷವನ್ನು ಪರಿತ್ಯಜಿಸಿ, ಅವರಿಗೆ ಸಮ್ಮತವಲ್ಲದ ಅಸತ್ವಪಕ್ಷದ ಆಶ್ರಯಹೊಂದಿ, ಆಶ್ರಯಾಸಿದ್ಧಿ ದೋಷವನ್ನು, ಪ್ರಪಂಚ ಮಿಥ್ಯಾತ್ವ ಅನುಮಾನಕ್ಕೆ ಹೇಳುವದು ಛಲಪ್ರಸಂಗವೆನಿಸುತ್ತದೆ, ಎಂಬ ಶಂಕೆಯನ್ನು ನಿವಾರಿಸಲು, ಈ ಟೀಕಾವಾಕ್ಯ ಹೊರಟಿರುತ್ತದೆ.

**आचार्यो मिथ्यात्वं किम् असत्त्वं? किं वा अनिर्वचनीयत्वादि? इति विकल्पं हृदि निधाय आद्ये आश्रयासिद्धिं आह। अन्यत्र दोषं वक्ष्यति। तेन छलप्रसङ्गो नास्ति इत्यर्थः।**

ಶ್ರೀಮದಾಚಾರ್ಯರು ಮಿಥ್ಯಾತ್ವವು ಅಸತ್ವಪರ ಅಥವಾ ಅನಿರ್ವಚನೀಯತ್ವಾದಿಪರ ಅರ್ಥವನ್ನು ಸೂಚಿಸುತ್ತದೊ, ಎಂಬ ವಿಕಲ್ಪವನ್ನು ಮನಸ್ಸಿನಲ್ಲಿಟ್ಟುಕೊಂಡು, ಮೊದಲಿನಪರ ಅಂದರೆ ಅಸತ್ವಪರ ಅರ್ಥವನ್ನು ಪ್ರತಿಪಾದಿಸಿದರೆ ಆಶ್ರಯಾಸಿದ್ಧಿ ದೋಷವನ್ನು ಮಿಥ್ಯಾತ್ವ ಅನುಮಾನಕ್ಕೆ ಹೇಳಿದ್ದಾರೆ. ಮತ್ತು ಮಿಥ್ಯಾ ಶಬ್ದಕ್ಕೆ ಅನಿರ್ವಚನೀಯತ್ವಾದಿಪರ ಅರ್ಥಕ್ಕೆ ದೋಷವನ್ನು ಈ ಗ್ರಂಥದಲ್ಲಿ ಮುಂದೆ ಹೇಳುತ್ತಾರೆ. ಹೀಗಾಗಿ ಇಲ್ಲಿ ಛಲಪ್ರಸಂಗಕ್ಕೆ ಆಸ್ಪದವಿರುವದಿಲ್ಲ ಎಂದರ್ಥ.

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ

**तथा च एवं विकल्पं हृदि निधाय असत्त्व पक्षे आश्रयासिद्धः उक्ता इति, छल प्रसंगः नास्ति इत्यर्थः।**

ಅದರಂತೆ ಶ್ರೀಮದಾಚಾರ್ಯರು ಹೀಗೆ ವಿಕಲ್ಪವನ್ನು ಮನಸ್ಸಿನಲ್ಲಿ ಧರಿಸಿ, ಅಸತ್ವ ಪಕ್ಷಕ್ಕೆ ಆಶ್ರಯಾಸಿದ್ಧಿ ದೋಷವನ್ನು ಹೇಳಿದ್ದಾರೆ, ಆದ್ದರಿಂದ ಇಲ್ಲಿ ಛಲಪ್ರಸಂಗಕ್ಕೆ ಆಸ್ಪದವಿರುವದಿಲ್ಲ ಎಂದರ್ಥ.

### ॥ शिष्याणां इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**ननु पर–अभिप्रेत एव पक्षो दूष्यः। किम् अनभिप्रेत असत्त्वपक्ष दूषणार्थं विकल्पेन, इति तत्र आह– शिष्याणाम् इति॥**

ಪರ ಅಭಿಪ್ರೇತ ಪಕ್ಷವನ್ನೇ ದೂಷಿಸಬೇಕು. ಹೀಗಿರುವಾಗ ಪರ-ಅಭಿಪ್ರೇತವಲ್ಲದ ಅಸತ್ವಪಕ್ಷವನ್ನು ದೂಷಿಸುವದಕ್ಕಾಗಿ ಏಕೆ ಈ ವಿಕಲ್ಪಮಾಡಲಾಗಿದೆ? ಈ ಶಂಕೆಯನ್ನು ಈ ಟೀಕಾವಾಕ್ಯ ನಿವಾರಿಸುತ್ತದೆ.

**शुक्तिरूप्यादेः मिथ्यात्वं अस्मद्रीत्या असत्त्वं, परस्य तु अनिर्वचनीयत्वादिकं इति। तथा च प्रकृते का रीतिः? इति विकल्पयता। आचार्येण अन्यत्रापि सामान्य शब्दे प्रयुक्ते रीति द्वय सम्भवे च विकल्प पूर्वकमेव दोषो वाच्यः।**

ಮಿಥ್ಯೆಯಾದ ಶುಕ್ತಿಯಲ್ಲಿ ಕಾಣುವ ರಜತವು ನಮ್ಮ ಮತದಂತೆ ಅಸತ್ಯ, ಪರ ಮತದಂತೆ ಅನಿರ್ವಚನೀಯ ಮುಂತಾದವುಗಳು ಆಗಿರುತ್ತದೆ. ಅದರಂತೆ, ಪ್ರಕೃತದಲ್ಲಿಯ ಮಿಥ್ಯಾಪದವು ಯಾವರೀತಿಯಾಗಿರುತ್ತದೆ? ಎಂಬುದನ್ನು ಇಲ್ಲಿ ವಿಕಲ್ಪಿಸಲಾಗಿದೆ. ಇಲ್ಲಿಷ್ಟೆ ಅಲ್ಲ ಶ್ರೀಮದಾಚಾರ್ಯರು ಮತ್ತೆಡೆ ಕೂಡ ನಮ್ಮ ಹಾಗೂ ಪರಪಕ್ಷದವರಲ್ಲಿಯ ಸಾಮಾನ್ಯ ಶಬ್ದಗಳಲ್ಲಿ ಈ ರೀತಿಯ ದ್ವಯಾರ್ಥ ಸಂಭವವಿದ್ದಲ್ಲಿ, ಈ ತರಹದ ವಿಕಲ್ಪ ಪೂರ್ವಕ ಪರಪಕ್ಷದ ದೋಷಗಳನ್ನು ತೋರಿಸಿರುತ್ತಾರೆ.

**पर–अभिप्रेत पक्ष एव दोषोभिधाने, परः "त्वद्रीत्या मया उक्तं तस्मात् अनुक्त उपालम्भः" इति प्रतारयेत् इति सूचितम् इत्यर्थः।**

ಮತ್ತು, ಇಲ್ಲಿ, ಕೇವಲ ಪರ-ಅಭಿಪ್ರೇತ ಪಕ್ಷದ ದೋಷವನ್ನು ಪ್ರತಿಪಾದಿಸಿದ್ದರೆ, ಪರಪಕ್ಷದವರು, ತಮ್ಮ ಪಕ್ಷದಂತೆಯೆ ನಾವು ಹೇಳಿದ್ದೇವೆ, ಆದ್ದರಿಂದ अनुक्त उपालम्भः ಎಂಬ ದೋಷವನ್ನು ತೋರಿಸಿ ವಂಚಿಸಬಹುದು, ಎಂಬುದನ್ನು ಸೂಚಿಸಲಾಗಿದೆ ಎಂದರ್ಥ.

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु पर–अभिप्रेत पक्षो दूष्यः, किम् अनभिप्रेत असत्त्वपक्ष दूषणार्थं विकल्पेन इत्यत आह– शिष्याणाम् इति॥**

ಪರ ಅಭಿಪ್ರೇತ ಪಕ್ಷವನ್ನೇ ದೂಷಿಸಬೇಕು. ಹೀಗಿರುವಾಗ ಪರ-ಅಭಿಪ್ರೇತವಲ್ಲದ ಅಸತ್ವಪಕ್ಷವನ್ನು ದೂಷಿಸುವದಕ್ಕಾಗಿ ಏಕೆ ಈ ವಿಕಲ್ಪಮಾಡಲಾಗಿದೆ? ಈ ಶಂಕೆಯನ್ನು ಈ ಟೀಕಾವಾಕ್ಯ ನಿವಾರಿಸುತ್ತದೆ.

**शुक्तिरजतादेःमिथ्यात्वं मद्रीत्या असत्त्वं, परीत्या अनिर्वचनीयत्वं इति। तथा च प्रकृतेः का रीतिः इति विकल्पयता। आचार्येण अन्यत्रापि केनचित् सामान्य शब्द प्रयुक्ते रीतिद्वय सम्भवेच विकल्प पूर्वकमेव दोषो वाच्यः।**

ಮಿಥ್ಯೆಯಾದ ಶುಕ್ತಿಯಲ್ಲಿ ಕಾಣುವ ರಜತವು ನಮ್ಮ ಮತದಂತೆ ಅಸತ್ಯ, ಪರ ಮತದಂತೆ ಅನಿರ್ವಚನೀಯ ಮುಂತಾದವುಗಳು ಆಗಿರುತ್ತದೆ. ಅದರಂತೆ, ಪ್ರಕೃತದಲ್ಲಿಯ ಮಿಥ್ಯಾಪದವು ಯಾವರೀತಿಯಾಗಿರುತ್ತದೆ? ಎಂಬುದನ್ನು ಇಲ್ಲಿ ವಿಕಲ್ಪಿಸಲಾಗಿದೆ. ಇಲ್ಲಿಷ್ಟೆ ಅಲ್ಲ ಶ್ರೀಮದಾಚಾರ್ಯರು ಮತ್ತೆಡೆ ಕೂಡ ನಮ್ಮ ಹಾಗೂ ಪರಪಕ್ಷದವರಲ್ಲಿಯ ಸಾಮಾನ್ಯ ಶಬ್ದಗಳಲ್ಲಿ ಈ ರೀತಿಯ ದ್ವಯಾರ್ಥ ಸಂಭವವಿದ್ದಲ್ಲಿ, ಈ ತರಹದ ವಿಕಲ್ಪ ಪೂರ್ವಕ ಪರಪಕ್ಷದ ದೋಷಗಳನ್ನು ತೋರಿಸಿರುತ್ತಾರೆ.

**अन्यथा पर–अभिप्रेत पक्षस्यैव दोषाभिधाने, परः "त्वद्रीत्या मया उक्तं तस्मात् अनुक्त उपालम्भ" इति प्रतारयेत् इति सूचितं इत्यर्थः।**

ಅನ್ಯಥಾ ಕೇವಲ ಪರ-ಅಭಿಪ್ರೇತ ಪಕ್ಷದ ದೋಷವನ್ನು ಪ್ರತಿಪಾದಿಸಿದ್ದರೆ, ಪರಪಕ್ಷದವರು, ತಮ್ಮ ಪಕ್ಷದಂತೆಯೆ ನಾವು ಹೇಳಿದ್ದೇವೆ, ಆದ್ದರಿಂದ अनुक्त उपालम्भः ಎಂಬ ದೋಷವನ್ನು ತೋರಿಸಿ ವಂಚಿಸಬಹುದು, ಎಂಬುದನ್ನು ಸೂಚಿಸಲಾಗಿದೆ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:



ಇಲ್ಲಿ ಶ್ರೀಸತ್ಯನಾಥರ ವ್ಯಾಖ್ಯಾನವು ಇತರ ಟಿಪ್ಪಣಿಕಾರರಕ್ಕಿಂತಲೂ ಸಾಕಷ್ಟು ಪ್ರಮಾಣದಲ್ಲಿ ಭಿನ್ನಾಭಿಪ್ರಾಯದಿಂದ ಕೂಡಿರುತ್ತದೆ ಎಂದು ಓದುಗರು ಗಮನಿಸಬೇಕು.

**इतः परं श्रूयमाणं " मिथ्यापदेन........विकल्प" इति वाक्यद्वयं प्रक्षिप्तम्। न टीका वाक्यं। अवश्यं च एतेदेवं विज्ञेयम्।**

ಬೇರೆ ಟಿಪ್ಪಣಿಗಳಲ್ಲಿ ಕಂಡುಬರುವ ಮೇಲಿನ ವಾಕ್ಯದ್ವಯಗಳು, ಟೀಕಾವಾಕ್ಯಗಳೆಂದು ಬೇರೆಯಾರಿಂದಲಾದರು ಸೇರಿಸಲ್ಪಟ್ಟಿರುತ್ತವೆ. ಅವುಗಳು ಟೀಕಾವಾಕ್ಯಗಳಾಗಿರುವದಿಲ್ಲ. ಇದನ್ನು ಅವಶ್ಯವಾಗಿ ತಿಳಿಯತಕ್ಕದ್ದು.

**पर उक्त सद्वैलक्षण्य पक्ष एव मूलोक्त दूषण सम्भवात्, विकल्पेन उत्थानस्य प्रयोजन अभावात्। परोक्तस्य एव दूषितत्वेन छलप्रसङ्ग अभावात् च।**

ಇನ್ನು, ಪರಪಕ್ಷದವರು ಪ್ರತಿಪಾದಿಸಿದ ಸದ್ವೈಲಕ್ಷಣ್ಯ ಪಕ್ಷವನ್ನೆ ಶ್ರೀಮದಾಚಾರ್ಯರ ಮೂಲವಾಕ್ಯ ದೂಷಿಸುತ್ತದೆ. ಹೀಗಾಗಿ, ವಿಕಲ್ಪದಿಂದ ಅದರ ಉತ್ಥಾನ್ನಿಸುವದು ಪ್ರಯೋಜನವಿಲ್ಲದ್ದಾಗಿದೆ. ಅದರಂತೆ, ಪರಪಕ್ಷದವರು ಹೇಳಿದ್ದನ್ನೆ ಇಲ್ಲಿ ದೂಷಿಸಿದ್ದರಿಂದ ಛಲ ಪ್ರಸಂಗಕ್ಕೆ ಅವಕಾಶವೇ ಇರುವದಿಲ್ಲ.

**उक्त इत्यनेन, उक्ति निमित्तं इदं दूषणं इति सूचयता, अनुक्त उपालम्भः अयं परेण प्रपञ्च असत्त्वस्य असाधनात् इति निरस्तं भवति इति, अस्य टीकावाक्यत्वपक्षे अनेन गतार्थत्वात् च।**

ಮೂಲವಾಕ್ಯದಲ್ಲಿ, उक्त इत्यनेन, ಎಂಬುದರಿಂದ ಇದು ಪರರ ಹೇಳಿಕೆಯ ನಿಮಿತ್ತ ದೂಷಣ ಎಂದು ಸೂಚಿಸುತ್ತಾ "अनुक्त उपालम्भः अयं परेण प्रपञ्च असत्त्वस्य असाधनात् इति निरस्तं भवति" ಎಂಬ ಟೀಕಾವಾಕ್ಯವಿದ್ದ ಪಕ್ಷದಲ್ಲಿಯೆ, ಇದನ್ನು ತಿಳಿಯಬಹುದಾಗಿದೆ.

**असत्त्वरूप धर्मस्य आश्रयासिद्धेः भूषणत्वेन दूषणत्व अभिधान अयोगाच्च। अत एव शिष्याणां कथाक्रम शिक्षार्थं विकल्प इत्यस्य अयोगाच्च।**

ಮತ್ತು, ಅಸತ್ವರೂಪ ಧರ್ಮಕ್ಕೆ ಆಶ್ರಯಾಸಿದ್ಧಿಯು ಭೂಷಣವೇ ಆಗುವದರಿಂದ, ಅದನ್ನು ದೂಷಣವೆಂದು ಹೇಳುವದು ಅಯೋಗ್ಯವೆನಿಸುತ್ತದೆ. ಆದ್ದರಿಂದ ಶಿಷ್ಯರಿಗೆ ಕಥಾಕ್ರಮದ ಶಿಕ್ಷಣಕ್ಕಾಗಿ ಈ ವಿಕಲ್ಪವನ್ನು ಮಾಡಲಾಗಿದೆ ಎಂದೆನ್ನುವದು ಅಯೋಗ್ಯವೇ ಆಗಿರುತ್ತದೆ.

### *५.२ मिथ्यात्व अनुमाने असत्वस्य मिथ्यात्वरूपत्वे अपसिद्धान्तः*

## टीका

**अथवा जगतोऽसत्वे प्रतिज्ञाते अपसिद्धान्तं अनेन आचष्टे। तथा हि– पक्षः प्रतिज्ञार्थः प्रपञ्चस्य असत्व लक्षणः। स "आश्रयासिद्धः"। आश्रयः सिद्धान्तः, तदाश्रयणेन कथा प्रवृत्तेः। तस्मिन् न सिद्धः तद्विरुद्धः इति यावत्। कुतः? जगतो भावात् भावत्वेन असद्विलक्षणत्वेन परेण अङ्गीकृतत्वात्।**

ಅಥವಾ, "विमतं असतम्" ಅಂದರೆ, ಜಗತ್ತು ಅಸತ್ಯವಾಗಿದೆ, ಎಂದು ಅನುಮಾನದ ಪ್ರತಿಜ್ಞಾವಾಕ್ಯವಾದಲ್ಲಿ, ಶ್ರೀಮದಾಚಾರ್ಯರ ಮೂಲವಾಕ್ಯದಿಂದ ಮಿಥ್ಯಾತ್ವ ಅನುಮಾನಕ್ಕೆ ಅಪಸಿದ್ಧಾಂತ ದೋಷ ಬರುತ್ತದೆ. ಅದನ್ನು ಈ ಕೆಳಗಿನಂತೆ ವಿವರಿಸಬಹುದುঃ ಇಲ್ಲಿ, ಪಕ್ಷ ಪ್ರಪಂಚವು ಅಸತ್ಯ ಲಕ್ಷಣವುಳ್ಳದ್ದಾಗಿರುತ್ತದೆ, ಇದು ಪ್ರತಿಜ್ಞಾರ್ಥ ಕೂಡ. ಅದು ಆಶ್ರಯಾಸಿದ್ಧವಾಗಿರುತ್ತದೆ. ಅಂದರೆ ಆಶ್ರಯವೇ ಸಿದ್ಧಾಂತ, ಅದರ ಆಶ್ರಯದಿಂದಲೇ, ಈ ಸಂಭಾಷಣೆಯು ಪ್ರವೃತ್ತವಾಗಿರುತ್ತದೆ. ಅದು ಸಿದ್ಧವಾಗಿಲ್ಲ ಅಂದರೆ ಅದು ಆಶ್ರಯದ ವಿರುದ್ಧವಾಯಿತು. ಏಕೆಂದರೆ, ಜಗತ್ತನ್ನು ಭಾವತ್ವದಿಂದ ಅಸದ್ವಿಲಕ್ಷಣ ಎಂದು ಪರಪಕ್ಷದವರು ಅಂಗೀಕರಿಸಿದ್ದಾರೆ.

## टिप्पणीनाम् विशेषार्थानि

### ॥ अथवा इति॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆः

**एवं "जगतो विश्वस्य अभावात्" इति पदविभागं आश्रित्य व्याख्यातम्। इदानीं "भावात्" इति पदविभागं आश्रित्य व्याचष्टे–अथवा इति॥**

ಈಗಿನವರೆಗೆ, जगतो विश्वस्य अभावात् ಎಂಬ ಪದವಿಭಾಗವನ್ನು ಆಶ್ರಯಿಸಿ ವ್ಯಾಖ್ಯಾನ ಮಾಡಲಾಯಿತು. ಈಗ जगतो भावात् ಎಂಬ ಪದವಿಭಾಗವನ್ನು ಆಶ್ರಯಿಸಿ ವ್ಯಾಖ್ಯಾನಿಸುತ್ತಾರೆ.

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆः

**एवं जगतो विश्वस्य अभावात् इति पदविभागं आश्रित्य व्याख्यातम्। इदानीं भावात् इति पदविभागं आश्रित्य व्याचष्टे–अथवा इति॥**

ಇಲ್ಲಿಯ ಅನುವಾದವೂ ಮೇಲಿನಂತೆಯೇ ಇರುವದರಿಂದ, ಈ ಟಿಪ್ಪಣಿವಾಕ್ಯಗಳ ಅನುವಾದ ಪ್ರತ್ಯೇಕವಾಗಿ ಮಾಡಿಲ್ಲ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆः

**जगतः असत्व प्रतिज्ञाने सत्व–अभाव प्रतिज्ञाने सद्वैलक्षण्य प्रतिज्ञान इति यावत्। अपसिद्धान्तं अनेन मूलेन आचष्ट इत्यर्थः।**

ಜಗತ್ತು ಅಸತ್ಯ ಎಂದು ಪ್ರತಿಜ್ಞಾವಾಕ್ಯವಾದಲ್ಲಿ, ಅಂದರೆ ಜಗತ್ತು ಸತ್ಯವಾಗಿಲ್ಲ ಎಂದು ಪ್ರತಿಜ್ಞಾವಾಕ್ಯವಾದಲ್ಲಿ ಅಂದರೆ ಜಗತ್ತು ಸದ್ವೈಲಕ್ಷಣ್ಯವುಳ್ಳದ್ದಾಗಿದೆ ಎಂದರ್ಥ. ಹೀಗೆ ಪ್ರತಿಜ್ಞಾವಾಕ್ಯವಾದರೆ, ಈ ಅನುಮಾನಕ್ಕೆ ಮೂಲವಾಕ್ಯದಂತೆ ಅಪಸಿದ್ಧಾಂತ ದೋಷ ಕೂಡ ಬರುತ್ತದೆ ಎಂದರ್ಥ.

### ॥ पक्ष इत्यादिना यावत् इत्यन्तेन॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆः



**अपसिद्धान्तं वक्तुं पक्ष आश्रयासिद्ध शब्दान् व्याचष्टे–पक्ष इत्यादिना यावत् इत्यन्तेन॥**

ಅಪಸಿದ್ಧಾಂತ ದೋಷವನ್ನು ಪ್ರತಿಪಾದಿಸಲು ಪಕ್ಷಾಶ್ರಯ-ಅಸಿದ್ಧ ಶಬ್ದಗಳಿಂದ पक्ष ಪದದಿಂದ ಹಿಡಿದು यावत् ದ ವರೆಗೆ, ವ್ಯಾಖ್ಯಾನಿಸುತ್ತಾರೆ.

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆः

**अपसिद्धान्तं वक्तुं पक्ष आश्रयासिद्ध शब्दान् व्याचष्टे–पक्ष इत्यादिना यावत् इत्यन्तेन॥**

ಅಪಸಿದ್ಧಾಂತ ದೋಷವನ್ನು ಪ್ರತಿಪಾದಿಸಲು ಪಕ್ಷಾಶ್ರಯ-ಅಸಿದ್ಧ ಶಬ್ದಗಳಿಂದ पक्ष ಪದದಿಂದ ಹಿಡಿದು यावत् ದ ವರೆಗೆ, ವ್ಯಾಖ್ಯಾನಿಸುತ್ತಾರೆ.

### ॥ प्रपञ्चस्य असत्व लक्षण इति॥

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆः

**प्रपञ्चस्य सद्वैलक्षण्य लक्षण इत्यर्थः।**

प्रपञ्चस्य असत्व लक्षण ಎಂದರೆ ಪ್ರಪಂಚದ ಸದ್ವೈಲಕ್ಷಣ್ಯ ಲಕ್ಷಣ ಎಂದರ್ಥ.

### ॥ भावत्वेन इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆः

**भावात् इति एतत् व्याचष्टे – भावत्वेन अंगीकारात् इति॥**

ಈ ಟೀಕಾವಾಕ್ಯವು ಮೂಲವಾಕ್ಯದ भावात् ಪದದ ಅರ್ಥವನ್ನು ವಿವರಿಸುತ್ತದೆ.

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆः

**भावात् इति एतत् व्याचष्टे – भावत्वेन इति॥**

ಈ ಟೀಕಾವಾಕ್ಯವು ಮೂಲವಾಕ್ಯದ भावात् ಪದದ ಅರ್ಥವನ್ನು ವಿವರಿಸುತ್ತದೆ.

**भवति इति सन् सत्वेन इत्यर्थः।**

भवति इति ಎಂದರೆ ಸತ್ಯತ್ವವನ್ನು ಹೊಂದಿರುತ್ತದೆ ಎಂದರ್ಥ

### ॥ असद्विलक्षणत्वेन इति॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆः

**भावत्वेन इति स्वपदं विवृणोति–असद्विलक्षणत्वेन इति॥**

भावत्वेन ಪದದ ಅರ್ಥವನ್ನು ತಮ್ಮ ಪದಗಳಿಂದ ವಿವರಿಸುತ್ತಾರೆ. भावत्वेन ಎಂದರೆ, ಅಸದ್ವಿಲಕ್ಷಣ ಎಂದರ್ಥ.

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆः

**तत् अभिप्रायं आह– असद्विलक्षणत्वेन इति॥**

भावत्वेन ಪದದ ಅಭಿಪ್ರಾಯವನ್ನು ಸ್ಪಷ್ಟಪಡಿಸುತ್ತಾರೆ. भावत्वेन ಎಂದರೆ, ಅಸದ್ವಿಲಕ್ಷಣ ಎಂದರ್ಥ.

**तथा च असत्व साधने अपसिद्धान्त इति भावः।**

ಅದರಂತೆ, ಜಗತ್ತು ಅಸತ್ಯ ಎಂದು ಸಾಧಿಸಿದರೆ ಅಪಸಿದ್ಧಾಂತ ದೋಷ ಬರುತ್ತದೆ ಎಂಬ ಭಾವವಿರುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**सत्वेन परेण परमेश्वरेण सूत्रकारेण अंगीकृतत्वात् इत्यर्थः।**

ಈ ಜಗತ್ತು ಸತ್ಯ ಎಂದು ಸೂತ್ರಕಾರರಾದ ವೇದವ್ಯಾಸ ಮಹರ್ಷಿಗಳಿಂದ ಅಂಗೀಕರಿಸಲ್ಪಟ್ಟಿರುತ್ತದೆ ಎಂದರ್ಥ.

### *५. ३. सर्वथा निर्वचनानर्हत्वस्य मिथ्यात्वरूपत्वे अप्रसिद्धविशेषणता*

## टीका

**स्यादेतत्, न वयं मिथ्या इति अत्यन्त असन्तं गगनकुसुम समं प्रपञ्चं आचक्ष्महे। येन साध्यधर्मस्य आश्रयासिद्धिः अपसिद्धान्तो वा स्यात्। किन्तु अनिर्वचनीयमेव इति। अतः आह–**

ಇರಲಿ, ನಾವು ಮಿಥ್ಯಾ ಪದದಿಂದ ಅತ್ಯಂತ ಅಸತ್ಯವಾದ ಗಗನಕುಸುಮ ಸಮ ಪ್ರಪಂಚವನ್ನು ಕಾಣುವದಿಲ್ಲ. ಇದರಿಂದ ಸಾಧ್ಯಧರ್ಮಕ್ಕೆ ಆಶ್ರಯಾಸಿದ್ಧಿ, ಅಥವಾ ಅಪಸಿದ್ಧಾಂತ ದೋಷ ಉಂಟಾಗುತ್ತದೆ. ಪರಂತು ಅನಿರ್ವಚನೀಯ ಎಂದೆನ್ನುತ್ತೇವೆ. ಅಂದರೆ ಮಿಥ್ಯಾ ಪದದ ಅರ್ಥ ಅನಿರ್ವಚನೀಯ ಎಂದೆನ್ನುತ್ತೇವೆ. ಅದರಂತೆ "विमतं अनिरवचनीयम्" ಎಂದು ಪ್ರಪಂಚಮಿಥ್ಯಾತ್ವ ಅನುಮಾನದ ಪ್ರತಿಜ್ಞಾವಾಕ್ಯವಾಯಿತು. ಅದಕ್ಕೆ ಶ್ರೀಮದಾಚಾರ್ಯರು ಈ ಕೆಳಗಿನಂತೆ ಹೇಳುತ್ತಾರೆ:

### टिप्पणीनाम् विशेषार्थानि

**॥ न वयं इति॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**शङ्कते–न वयं इति॥**

ಮಿಥ್ಯಾ ಎಂದರೆ ಅನಿರ್ವಚನೀಯ ಎಂದು ತೆಗೆದುಕೊಂಡರೆ, ಮೇಲೆ ನಮೂದಿಸಿದ ಪ್ರತಿಜ್ಞಾ ದೋಷಗಳ ನಿವಾರಣೆ ಆಗುತ್ತದಲ್ಲಾ ಎಂದು ಈ ಟೀಕಾವಾಕ್ಯ ಶಂಕಿಸುತ್ತದೆ.

**॥ स्यादेतत् इति ॥**

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**मिथ्या इति पदेन अत्यन्त असन्तं सद् (सन्मात्र) विलक्षणस्वरूपं न आचक्ष्महे। येन आश्रयासिद्धिः अपसिद्धान्तो वा स्यात्। किम् नाम अनिर्वचनीयं आचक्ष्महे इत्यर्थः।**

ಇಲ್ಲಿ, ಮಿಥ್ಯಾ ಪದದಿಂದ ನಾವು ಅತ್ಯಂತ ಅಸತ್ಯ ಅಂದರೆ ಸತ್ಯತ್ವಮಾತ್ರಕ್ಕಿಂತ ವಿಲಕ್ಷಣಸ್ವರೂಪವೆಂದು ನಾವು ಸ್ವೀಕರಿಸುವದಿಲ್ಲ. ಅದರಿಂದ ಆಶ್ರಯಾಸಿದ್ಧಿ ಅಥವಾ



ಅಪಸಿದ್ಧಾಂತ ದೋಷ ಉಂಟಾಗುತ್ತದೆ. ಮತ್ತೆನು, ಅನಿರ್ವಚನೀಯ ಎಂದು ಸ್ವೀಕರಿಸುತ್ತೇವೆ ಎಂದರ್ಥ.

**एतेन असतो असत्व अभिधाने आश्रयासिद्धेः अदूषणत्वेन तत् परिहाराय पूर्वपरित्यागेन पक्षान्तर स्वीकारः अनुपपन्नं इति परास्तम्।**

ಇದರಿಂದ, ಅಸತ್ತನ್ನು ಅಸತ್ವವೆಂದು ಹೇಳಿಕೆಯಿಂದ ಆಶ್ರಯಾಸಿದ್ಧಯು ಅದೂಷಣವಾಗುವದರಿಂದ, ಅದರ ಪರಿಹಾರಕ್ಕಾಗಿ ಮೊದಲು ಸ್ವೀಕರಿಸಿದ ಪಕ್ಷವನ್ನು ತ್ಯಜಿಸಿ, ಪಕ್ಷಾಂತರ ಸ್ವೀಕಾರಮಾಡುವದು ಸರಿಯಲ್ಲ ಎಂಬ ವಾದವನ್ನು ತಳ್ಳಿಹಾಕಿದಂತಾಯಿತು.

**॥ आह इति॥**

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**विप्रतिपन्नस्यैव साधनीयत्वात् निर्वचन अनर्हत्वं साधने क्लिष्टं दूषणम्। शिष्यैः एव उह्यतां इति भावेन दूषणान्तरं आह इत्यर्थः। अर्थान्तरं इति एवं उत्तरत्रापि द्रष्टव्यम्।**

ವಿವಾದಸ್ಪದ ವಿಷಯವನ್ನೇ ಸಾಧಿಸುವುದಾದರೆ, ವಾಕ್ಯದಿಂದ ವರ್ಣಿಸಲು ಅನರ್ಹವಾದದ್ದನ್ನು ಸಾಧಿಸಿದಲ್ಲಿ ಕ್ಲಿಷ್ಟಕರವಾದ ದೂಷಣವನ್ನು ಶಿಷ್ಯರೇ ಊಹಿಸ ಬೇಕೆಂಬ ಭಾವದಿಂದ ಇಲ್ಲಿ ಬೇರೆ ಪ್ರಕಾರದ ದೂಷಣವನ್ನು ಶ್ರೀಮದಾಚಾರ್ಯರು ಪ್ರತಿಪಾದಿಸುತ್ತಾರೆ. ಹಾಗೂ ಮಿಥ್ಯಾ ಪದದ ಅರ್ಥಾಂತರದ ವಿಶ್ಲೇಷಣವನ್ನು ಮುಂದೆ ಮಾಡಲಾಗುತ್ತದೆ ಎಂದು ತಿಳಿಯತಕ್ಕದ್ದು.

## प्रपञ्चमिथ्यात्वानुमानखण्डनम्
## अनिर्वचनीय असिद्धेः अप्रसिद्धविशेषणः।

**ಅನಿರ್ವಚನೀಯ ವಸ್ತುವು ಅನುಭವಸಿದ್ಧವಲ್ಲ, ಆದುದರಿಂದ ಸಾಧ್ಯವು ಅಪ್ರಸಿದ್ಧವಾದ ಧರ್ಮವುಳ್ಳದ್ದಾಗಿದೆ. ಅಂದರೆ ಪಕ್ಷದಲ್ಲಿ ಸಾಧಿಸುವ ಧರ್ಮ ಅಪ್ರಸಿದ್ಧವಾಗಿದೆ. ಆದ್ದರಿಂದ ಪಕ್ಷವು ಅಪ್ರಸಿದ್ಧವಿಶೇಷಣ ಎಂಬ ದೋಷಗ್ರಸ್ತವಾಯಿತು.**

### श्रीपद्मनाभतीर्थीयटीका

**पक्ष अयं अप्रसिद्धविशेषणः सदसद्विलक्षणरूप मिथ्यात्वस्य मायावादि अभिमतस्य शुक्तिरजतादौ अप्रसिद्धत्वात्।**

ಸದಸದ್ವಿಲಕ್ಷಣರೂಪ ಮಿಥ್ಯಾತ್ವವು ಮಾಯಾವಾದಿ ಅಭಿಮತವಾದ ಶುಕ್ತಿರಜತಾದಿಗಳಲ್ಲಿಯೂ ಅಪ್ರಸಿದ್ಧವಾಗಿರುವದರಿಂದ ಈ ಪಕ್ಷವು ಅಪ್ರಸಿದ್ಧವಿಶೇಷಣ ಎಂಬ ದೋಷಗ್ರಸ್ತವಾಗಿರುತ್ತದೆ.

## टीका

**पक्ष इति अनुवर्तते। अत्र पक्ष इति तदेकदेशो धर्मी प्रपञ्चो लक्ष्यते। अप्रसिद्धं विशेषणं यस्मिन् इति मुख्यार्थो वा। अनिर्वचनीयं खलु निर्वचन अनर्हं उच्यते। न च तत् प्राक् एतत् अनुमानात् सिद्धं। सर्वस्यापि निर्वचन अर्हत्वात्। अन्यथा स्वव्याघातो मूकता वा स्यात्। अतो मिथ्या पदेन विमतस्य अनिर्वचनीय अभिधाने पक्षः अप्रसिद्धविशेषणो भवति।**
**अयमपि वचन निमित्तो दोष इति ज्ञातव्यम्।**

ಇಲ್ಲಿ ಮೂಲವಾಕ್ಯದ ಅಂತ್ಯದಲ್ಲಿ ಪಕ್ಷ ಪದವನ್ನು ಸೇರಿಸಿ ಅರ್ಥಹೇಳಬೇಕು. ಇಲ್ಲಿ ಪಕ್ಷವು ಏಕದೇಶದಿಂದ ಧರ್ಮಿಯಾದ ಪ್ರಪಂಚವನ್ನು ಉಪಲಕ್ಷಿಸುತ್ತದೆ. ಇದರಲ್ಲಿ ಅಪ್ರಸಿದ್ಧವಾದ ವಿಶೇಷಣವನ್ನು ಸಾಧಿಸಲಾಗುತ್ತಿದೆ. ಅನಿರ್ವಚನೀಯ ಅಂದರೆ, ನಿಜವಾಗಿ ಯಾವದೆ ತರಹದಿಂದ ವರ್ಣಿಸಲು ಅರ್ಹತೆಯನ್ನು ಪಡೆಯದಿಲ್ಲದ್ದು. ಇದು ಪೂರ್ವದಲ್ಲಿ ಯಾವದೆ ಅನುಮಾನದಿಂದ ಸಿದ್ಧವಾಗದ ವಸ್ತು. ಈ ಜಗತ್ತಿನಲ್ಲಿ ಎಲ್ಲ ವಸ್ತುಗಳು ಒಂದಲ್ಲ ಒಂದು ರೀತಿಯಿಂದ ವರ್ಣಿಸಲ್ಪಡುವ ಅರ್ಹತೆಯನ್ನು ಹೊಂದಿರುತ್ತವೆ. ಹಾಗೆನು ಇಲ್ಲದಿದ್ದರೆ, स्वव्याघात ಅಥವಾ मूकता ಎಂಬ ದೋಷಗಳಿಗೆ ಆಸ್ಪದವಿರುತ್ತಿತ್ತು. ಆದ್ದರಿಂದ ಮಿಥ್ಯಾ ಪದದಿಂದ ವಿವಾದಾಸ್ಪದವಾದ ಪ್ರಪಂಚಕ್ಕೆ ಅನಿರ್ವಚನೀಯ ಎಂದು ಹೇಳಿದರೆ, ಪಕ್ಷವು ಅಪ್ರಸಿದ್ಧವಿಶೇಷಣ ಉಳ್ಳದ್ದಾಯಿತು. ಮತ್ತು ಈ ಅಪ್ರಸಿದ್ಧ ವಿಶೇಷಣತ್ವವನ್ನು ಕೂಡ ಅನಿರ್ವಚನೀಯ ಪದಪ್ರಯೋಗ ನಿಮಿತ್ತ ವಿರುತ್ತದೆ ಎಂದು ತಿಳಿಯಬೇಕು.

### टिप्पणीनाम् विशेषार्थानि

**॥ पक्ष इति इति॥**

<u>ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:</u>

**ननु साध्यधर्म विशिष्टः पक्षः, तस्य यद्विशेषणं तत् अप्रसिद्धं इति उच्यते तत् असङ्गतम्। अतो व्याचष्टे– पक्ष इति॥**
**अनुवर्तता पक्ष शब्देन इत्यर्थः। तथा च पक्षो धर्मी स अप्रसिद्ध साध्यरूपं यद्विशेषणं तद्वान् इति मूलार्थो द्रष्टव्यः।**



ಸಾಧ್ಯಧರ್ಮ ವಿಶಿಷ್ಟವಾದದ್ದು ಪಕ್ಷ, ಅದರ ಯಾವ ವಿಶೇಷಣವೊ ಅದು ಅಪ್ರಸಿದ್ಧ ಎಂದು ಹೇಳುವದು ಅಸಂಗತವೆನಿಸುತ್ತದೆ. ಅದಕ್ಕೆ ಈ ಟೀಕಾವಾಕ್ಯ ವ್ಯಾಖ್ಯಾನಿಸುತ್ತದೆ.
ಪಕ್ಷ ಶಬ್ದದಿಂದ ಇಲ್ಲಿ ಅನುವರ್ತಿಸಬೇಕು ಎಂದರ್ಥ. ಅದರಂತೆ, ಪಕ್ಷವು ಧರ್ಮಿ, ಅದು ಯಾವದು ಅಪ್ರಸಿದ್ಧವಾದ ಸಾಧ್ಯರೂಪ ವಿಶೇಷಣವೊ ಅದರಿಂದ ಕೂಡಿದ್ದು ಎಂದು, ಮೂಲವಾಕ್ಯಾದ ಅರ್ಥವೆಂದು ತಿಳಿಯಬೇಕು.

**॥ पक्ष इति तदेकदेश इति॥**

<u>ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:</u>

**ननु साध्यधर्म विशिष्टः पक्षः। तस्य कथं अप्रसिद्ध विशेषणं यस्य इति बहुव्रीहिणा आचार्येण साध्यधर्म वैशिष्ट्यं उक्तं। न हि दण्डिनः पुनः दण्ड वैषिष्ट्यं किंतु देवदत्तस्यैव इति। अत आह– पक्ष इति तदेकदेश इति॥**
ಸಾಧ್ಯಧರ್ಮ ವಿಶಿಷ್ಟವಾದದ್ದು ಪಕ್ಷ ಎನಿಸುತ್ತದೆ. ಹಾಗಾದರೆ, ಪಕ್ಷಕ್ಕೆ ಹೇಗೆ ಅಪ್ರಸಿದ್ಧ ವಿಶೇಷಣ ಹೇಳಲಾಗುತ್ತಿದೆ? ಅದನ್ನು ಸ್ಪಷ್ಟಮಾಡುವಗೋಸ್ಕರ ಶ್ರೀಮದಾಚಾರ್ಯರು ಪಕ್ಷಕ್ಕೆ ಸಾಧ್ಯಧರ್ಮ ವಿಶಿಷ್ಟತೆಯನ್ನು ಹೇಳಿದ್ದಾರೆ. ಇಲ್ಲಿ ದಂಡಿಯನ್ನು ಹಿಡಿದುಕೊಂಡವನಿಗೆ ಪುನಃ ದಂಡ ವಿಶಿಷ್ಟ ಎಂದು ಹೇಳಲಿಲ್ಲ ಪರಂತು ದೇವದತ್ತನಿಗೆ ದಂಡ ವಿಶಿಷ್ಟತೆಯನ್ನು ಹೇಳಿದಂತೆ ಎಂಬ ಭಾವವಿರುತ್ತದೆ. ಅದನ್ನೆ ಈ ಟೀಕಾ ವಾಕ್ಯ ಸ್ಪಷ್ಟಪಡಿಸುತ್ತದೆ.

**॥ इति मुख्यार्थो वा इति ॥**

<u>ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:</u>

**सप्तम्यर्थे बहुव्रीहिः इति मुख्यार्थ एव पक्ष शब्द इत्यर्थः। तथा च साध्यधर्मो विशिष्टो धर्मी पक्षः। सः अप्रसिद्धविशेषणः सर्वस्य अपि इति प्रपञ्चस्य इत्यर्थः।**
ಇಲ್ಲಿ ಸಪ್ತಮಿವಿಭಕ್ತಿಯ ಅರ್ಥದಲ್ಲಿ ಬಹುವ್ರೀಹಿ ಸಮಾಸದ ಮುಖ್ಯಾರ್ಥದಲ್ಲಿ ಪಕ್ಷ ಶಬ್ದವಿರುತ್ತದೆ ಎಂದರ್ಥ. ಅದರಂತೆ, ಸಾಧ್ಯಧರ್ಮ ವಿಶಿಷ್ಟ ಧರ್ಮಿ ಪಕ್ಷವೆಂದಾಯಿತು. ಆ ಸಾಧ್ಯಧರ್ಮವು ಎಲ್ಲೆಡೆಯೂ ಅಪ್ರಸಿದ್ಧವಿಶೇಷಣ, ಅದರಲ್ಲೂ ಪ್ರಪಂಚಕ್ಕೆ ಎಂದರ್ಥ.

**॥ अनिर्वचनीयं खलु इति ॥**

<u>ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:</u>

**अप्रसिद्ध विशेषणत्वं उपपादयति–अनिर्वचनीय इति॥**
ಈ ಟೀಕಾವಾಕ್ಯವು, ಅಪ್ರಸಿದ್ಧ ವಿಶೇಷಣತ್ವವನ್ನು ವಿವರಿಸುತ್ತದೆ

**॥ अन्यथा इति ॥**

<u>ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:</u>

**निर्वचन अनर्हं किम्? इति प्रश्ने, यदि इदं इति वदेत तदा स्वव्याघातः। न चेत् मूकता इत्यर्थः।**
ಯಾವದೆ ತರಹದಿಂದ ವರ್ಣಿಸಲು ಅನರ್ಹವಾದದ್ದು ಎಂದರೆ ಏನು? ಎಂಬ ಪ್ರಶ್ನೆಗೆ, ಒಂದು ವೇಳೆ ಇದು ಇಂತಹದು ಎಂದು ಹೇಳಿದರೆ ಅದು ಸ್ವವ್ಯಾಘಾತ ಎಂಬ ದೋಷ

ಎಂದೆನಿಸುವದು. ಇನ್ನು ಏನನ್ನು ಹೇಳದೆ ಸುಮ್ಮನಿದ್ದರೆ, ಅದು ಮೂಕತಾ ಎಂಬ ದೋಷಗ್ರಸ್ತವಾಗುವದು ಎಂದರ್ಥ.

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**सर्वस्यापि निर्वचन अर्हत्वं अनङ्गीकृत्य निर्वचन अनर्हत्वरूप अनिर्वचनीयत्वं अङ्गीकार इत्यर्थः।**

ಎಲ್ಲವನ್ನು ಕೂಡ ವರ್ಣಿಸಲು ಸಾಧ್ಯ ಎಂಬುದನ್ನು ಅಂಗೀಕರಿಸದೆ, ವರ್ಣಿಸಲು ಅನರ್ಹವುಳ್ಳದ್ದು ಅನಿರ್ವಚನೀಯತ್ವವೆಂದು ಅಂಗೀಕರಿಸಬೇಕು ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**कस्यचित् निर्वचन अनर्हत्व उक्तौ सत्यां स्वव्याघातः। निर्वचन अर्हत्वं उक्तैव निर्वचन अर्हत्व लाभात्। वादिना सर्व निर्वचन अनर्हं इत्युक्तेऽपि प्रत्युत्तर अदाने मूकवत् अनादरणीयं स्यात् इत्यर्थः।**

ಯಾರಾದರು, ಇದು ಯಾವದೆರೀತಿಯಿಂದ ವರ್ಣಿಸಲು ಅನರ್ಹವಾಗಿದೆ ಎಂದು ಹೇಳಿದ್ದು ಸತ್ಯವಾದರೆ ಅದು ಸ್ವವ್ಯಾಘಾತ ಎಂದು ದೋಷಗ್ರಸ್ತವಾಗುವದು. ವರ್ಣಿಸಲು ಅರ್ಹತ್ವವು, ಉಕ್ತಿ ಯಿಂದಲೇ ವರ್ಣಿಸಲು ಅರ್ಹತ್ವವನ್ನು ಪಡೆಯುತ್ತದೆ. ಮತ್ತು ವಾದಿಗಳು ಎಲ್ಲವೂ ಯಾವದೆರೀತಿಯಿಂದ ವರ್ಣಿಸಲು ಅನರ್ಹವತ್ವವನ್ನು ಹೇಳಿದರೂ ಕೂಡ ಪ್ರತ್ಯುತ್ತರ ಕೊಡದೆ ಹಾಗೆಯೆ ಸುಮ್ಮನಿದ್ದರೆ, ಮೂಕನಂತೆ ಅನಾದರಣೀಯವಾಗುತ್ತದೆ ಎಂದರ್ಥ.

## ॥ स्वव्याघात इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**अनिर्वचनीयत्वं नाम किम् इति पक्षे उत्तरं उच्यते न वा। आद्ये आह– स्वव्याघात इति॥**

ಅನಿರ್ವಚನೀಯತ್ವ ಎಂದರೆ ಏನು? ಎಂಬುದಕ್ಕೆ ಉತ್ತರವನ್ನು ಹೇಳುತ್ತೀರೊ ಅಥವಾ ಇಲ್ಲವೋ. ಮೊದಲನೆದಾದ ಉತ್ತರವನ್ನು ಹೇಳುತ್ತೇವೆ ಎಂದರೆ ಸ್ವವ್ಯಾಘಾತವೆಂಬ ದೋಷ ಬರುತ್ತದೆ ಎಂದು ಈ ಟೀಕಾವಾಕ್ಯ ಹೇಳುತ್ತದೆ.

**निर्वचन अनर्हपदेन एव निर्वचनीयत्व प्राप्त्या स्ववचन व्याघात इत्यर्थः। यद्वा विमत पदेन एव सर्वस्यापि निर्वचनात् तत् अनर्हत्व उक्तौ स्वव्याघात इत्यर्थः।**

ಯಾವುದರಿಂದಲೂ ವರ್ಣಿಸಲು ಅನರ್ಹವಾದುದು, ಎಂಬುದರಿಂದಲೆ, ವರ್ಣನೆ ಪ್ರಾಪ್ತವಾದ್ದರಿಂದ, ಇದು ಸ್ವವಚನ ವ್ಯಾಘಾತ ಎಂದರ್ಥ. ಅಥವಾ ವಿಮತ ಪದದಿಂದಲೇ ಎಲ್ಲವನ್ನು ವರ್ಣಿಸಲು ಸಾಧ್ಯ ಎಂದು ಹೇಳಿದಂತಾದುದರಿಂದ ಮತ್ತೆ ಅದನ್ನೆ ವರ್ಣಿಸಲು ಅನರ್ಹದೆಂದು ಹೇಳುವದು ಸ್ವವ್ಯಾಘಾತವೆನಿಸುವದು ಎಂದರ್ಥ.

## ॥ मूकता वा इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**अनिर्वचनीयत्वं नाम किम् इति प्रश्ने निर्वचनं अक्रुत्वा यदि तूष्णी स्थीयते तदा मूकता स्यात्। तथा च अननुभाषणं नाम निग्रहस्थानं इति भावः।**



ಅನಿರ್ವಚನೀಯತ್ವ ಎಂದರೆ ಏನು ಎಂಬ ಪ್ರಶ್ನೆಗೆ ವರ್ಣನೆಯನ್ನು ಮಾಡದೆ ಸುಮ್ಮನೆ ಕೂತಲ್ಲಿ ಆಗ ಮೂಕತಾ ಎಂಬ ದೋಷ ಉಂಟಾಗುತ್ತದೆ. ಹಾಗೂ ಕಥಾಲಕ್ಷಣದ ಪರಿಭಾಷೆಯಲ್ಲಿ अननुभाषणं, ಎಂಬ ನಿಗ್ರಹಸ್ಥಾನ ಕೂಡ ಉಂಟಾಗುತ್ತದೆ ಎಂದು ಭಾವವಿರುತ್ತದೆ.

## ॥ अतो मिथ्या पदेन इति ॥

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**उपलक्षणं एतत्। अपसिद्धान्तश्च भवति इति द्रष्टव्यं। सूत्रकारेण निर्वचन अङ्गीकारात्।**

ಇದನ್ನು ಉಪಲಕ್ಷಣ ಪರವಾಗಿ ತೆಗೆದುಕೊಂಡರೆ ಇಲ್ಲಿ ಅಪಸಿದ್ಧಾಂತವೆಂಬ ದೋಷಕೂಡ ಉಂಟಾಗುತ್ತದೆ ಎಂದು ತಿಳಿಯಬೇಕು. ಏಕೆಂದರೆ ಸೂತ್ರಕಾರರಾದ ಶ್ರೀವೇದವ್ಯಾಸ ಮಹರ್ಶಿಗಳಿಂದ ಈ ಜಗತ್ತೆಲ್ಲವೂ ವರ್ಣಿಸಲು ಅರ್ಹತೆಯನ್ನು ಹೊಂದಿದೆ ಎಂದು ಅಂಗೀಕರಿಸಲಾಗಿರುತ್ತದೆ.

## ॥ अयमपि वचन निमित्त इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**यथा आश्रयासिद्धिं मिथ्यापदोक्तनिमित्तां एवं अप्रसिद्धविशेषणत्वं अपि अनिर्वचनीय पदप्रयोग निमित्तम्। तस्य निर्वचन अनर्हवाचित्वात् तस्य च अप्रसिद्धत्वात्। न तु पर परिभाषित सदसद्विलक्षणत्वरूपार्थ निमित्तम्। तत्र सिद्धसाधनत्वादेः वक्षमाणत्वात् इत्यर्थः।**

ಪೂರ್ವದಲ್ಲಿ ಹೇಗೆ ಆಶ್ರಯಾಸಿದ್ಧಿ ದೋಷವನ್ನು ಮಿಥ್ಯಾಪದ ನಿಮಿತ್ತ ಅಂದರೆ ಸರ್ವಸಾಮಾನ್ಯ ಅರ್ಥದಲ್ಲಿ, ಅಸತ್ವವೆಂದರ್ಥದಲ್ಲಿ ಹೇಳಲಾಯಿತು, ಅದರಂತೆಯೆ ಇಲ್ಲಿಯೂ ಕೂಡ ಅಪ್ರಸಿದ್ಧವಿಶೆಷಣತ್ವ ದೋಷವನ್ನು ಕೂಡ ಅನಿರ್ವಚನೀಯ ಪದಪ್ರಯೊಗ ನಿಮಿತ್ತ ಹೇಳಲಾಗಿದೆ. ಅನಿರ್ವಚನೀಯ ಎಂದರೆ ಸಾಮಾನ್ಯವಾಗಿ ಯಾವದೆರೀತಿಯಿಂದ ವರ್ಣಿಸಲು ಅನರ್ಹತ್ವವನ್ನು ಪಡೆದದ್ದು ಎಂದರ್ಥ, ಇಂತಹ ವಸ್ತು ಎಲ್ಲಲ್ಲೂ ಇಲ್ಲ ಆದ್ದರಿಂದ ಅಪ್ರಸಿದ್ಧವಾದದ್ದು ಎಂದರ್ಥ. ಈ ದೂಷಣೆಯು ಪರಪಕ್ಷದವರ ಪರಿಭಾಷೆಯಲ್ಲಿಯ ಸದಸದ್ವಿಲಕ್ಷಣರೂಪಾರ್ಥ ನಿಮಿತ್ತ ಇರುವದಿಲ್ಲ. ಈ ಸದಸದ್ವಿಲಕ್ಷಣ ಅರ್ಥದಲ್ಲಿ ಮುಂದೆ ಸಿದ್ಧಸಾಧನತ್ವಾದಿ ದೋಷಗಳನ್ನು ಮುಂದೆ ಗ್ರಂಥದಲ್ಲಿ ಹೇಳಲಾಗಿದೆ.

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**आश्रयासिद्धिवद् अप्रसिद्धविशेषणत्वरूपोऽपि दोष इत्यर्थः।**
**यथा मिथ्यात्वं नाम असत्त्वं इति परेण उक्ते, आश्रयासिद्ध उक्ता, एवं मिथ्यात्वं नाम अनिर्वचनीयत्वं तच्च निर्वचन अनर्हत्वं इति परेण उक्तं सत् इदं दूषणं उक्तं।**
**सदसद्विलक्षणत्वे तु सिद्धसाधनत्वादिरूपं दोषान्तरं भविष्यति इति भावः।**

ಇಲ್ಲಿ, ಹಿಂದಿನ ಆಶ್ರಯಾಸಿದ್ಧದಂತೆ ಅಪ್ರಸಿದ್ಧವಿಶೇಷಣತ್ವ ದೋಷ ಕೂಡ ಇರುತ್ತದೆ. ಅಂದರೆ ಹಿಂದೆ ಹೇಗೆ ಮಿಥ್ಯಾತ್ವವನ್ನು ಪರಪಕ್ಷದವರು ಅಸತ್ವವೆಂದು ಹೇಳಿದಲ್ಲಿ,

ಆಶ್ರಯಾಸಿದ್ಧಿದೋಷವನ್ನು ಹೇಳಲಾಯಿತು, ಅದರಂತೆ ಇಲ್ಲಿ ಮಿಥ್ಯಾತ್ವವನ್ನು ಅನಿರ್ವಚನೀಯತ್ವವೆಂದು, ಅನಿರ್ವಚನೀಯವನ್ನು ಯವರೀತಿಯಿಂದಲೂ ವರ್ಣಿಸಲು ಅನರ್ಹತ್ವವದದ್ದು ಎಂದು ಹೇಳುತ್ತಿರಲು, ಈ ಅಪ್ರಸಿದ್ಧದೋಷವನ್ನು ಹೇಳಲಾಗಿದೆ. ಅನಿರ್ವಚನೀಯವನ್ನು ಸದಸದ್ವಿಲಕ್ಷಣತ್ವವೆಂದು ತೆಗೆದುಕೊಂಡರೆ ಸಿದ್ಧಸಾಧನತ್ವಾದಿ ದೋಷಾಂತರಗಳು ಸಂಭವಿಸುತ್ತವೆ ಎಂಬ ಭಾವವಿರುತ್ತದೆ.

<u>ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:</u>

**इतः परं श्रूयमाणं "अयमपि...दोष" इति वाक्यं प्रक्षिप्तं न टीकावाक्यम्। अनिर्वचनीय असिद्धेः इति मूलावतारिकायां गतार्थत्वात्।**

ಇತರ ಟಿಪ್ಪಣಿಕಾರರಿಂದ ಕೇಳಿಬರುವ ಈ ವಾಕ್ಯವು, ಬೇರೆಯಾರಿಂದಲೋ ಸೇರಿಸಲ್ಪಟ್ಟದ್ದಾಗಿದೆ. ಇದು ಟೀಕಾವಾಕ್ಯವಲ್ಲ. ಅನಿರ್ವಚನೀಯ ಅಸಿದ್ಧವಾಗಿದೆಯೆಂದು ಮೂಲ ಅವತಾರಿಕೆ ಇಂದಲೇ ಇಲ್ಲಿ ತಿಳಿಯಬಹುದಾಗಿದೆ.

### *५. ४ सदसद्वैलक्षण्यस्य मिथ्यात्वरूपत्वे सिद्धसाधनत्व दोषः*

## टीका

**ननु सदसद्वैलक्षण्यमेव मिथ्यात्वं ब्रूमो न असत्वम्। एतदेव अनिर्वचनीयत्वं नाम। न तु सर्वथा निर्वचन अनर्हत्वं एव। अतो न उक्तदोष इति। तत्र आह–**

ಮಿಥ್ಯಾ ಎಂದರೆ ಸದಸದ್ವೈಲಕ್ಷಣ್ಯ ಎಂದು ಹೇಳುತ್ತೇವೆ. ಮಿಥ್ಯಾ ಎಂದರೆ ಅಸತ್ವ ಅಲ್ಲ. ಈ ಅರ್ಥದಲ್ಲಿಯೇ ಮಿಥ್ಯಾ ಅಂದರೆ ಅನಿರ್ವಚನೀಯಯೆಂತಲೂ ಹೇಳಿದ್ದು, ಸರ್ವಥಾ ವರ್ಣಿಸಲು ಅರ್ಹತೆ ಇಲ್ಲದ್ದು ಎಂತಲ್ಲ. ಆದ್ದರಿಂದ ಇಲ್ಲಿ ಮೇಲೆ ನಮೂದಿಸಿದ ದೋಷಗಳು ಬರುವದಿಲ್ಲ. ಅಲ್ಲಿ ಶ್ರೀಮದಾಚಾರ್ಯರು ಹೇಳತಾರೆ-

<u>टिप्पणीनाम् विशेषार्थानि</u>

**॥ ननु सदसद्वैलक्षण्यमेव इति ॥**

<u>ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ::</u>

**ननु सदसद्वैलक्षण्यमेव मिथ्यात्वं ब्रूमः न तु सर्वथा निर्वचन अनर्हत्वम्।**

ನಾವು ಮಿಥ್ಯಾತ್ವವನ್ನು ಸದಸದ್ವೈಲಕ್ಷಣ್ಯವೆಂದೆ ಹೇಳುತ್ತೇವೆ, ವಿನಹಾ ಸರ್ವಥಾ ವರ್ಣಿಸಲು ಅನರ್ಹವಾದದ್ದು ಎಂದು ಅಲ್ಲ.

**न च जगतः अनिर्वचनीयत्व अङ्गीकारात् अपसिद्धान्तः। अनिर्वचनीय पदेन सदसद्वैलक्षण्य अभिधानात्।**



ಇನ್ನು ಜಗತ್ತನ್ನು ಅನಿರ್ವಚನೀಯತ್ವವೆಂದು ಅಂಗೀಕರಿಸಿದಲ್ಲಿ ಅಪಸಿದ್ಧಾಂತ ದೋಷ ಬರುವದಿಲ್ಲ. ಏಕೆಂದರೆ ಅನಿರ್ವಚನೀಯ ಪದದಿಂದ ಸದಸದ್ವೈಲಕ್ಷಣ್ಯವನ್ನೆ ಹೇಳಲಾಗಿದೆ.

**न च अप्रसिद्ध विशेषणाख्यो दोषः। अनिर्वचनीय पदेन सर्वथा निर्वचन अनर्हत्व अनभिधानात्।**

ಇನ್ನು ಅಪ್ರಸಿದ್ಧವಿಶೇಷಣ ದೋಷ ಕೂಡ ಬರುವದಿಲ್ಲ. ಏಕೆಂದರೆ ಅನಿರ್ವಚನೀಯ ಪದದಿಂದ ಸರ್ವಥಾ ವರ್ಣಿಸಲು ಅನರ್ಹವಾದದ್ದು ಎಂದು ನಾವು ಹೇಳುವದಿಲ್ಲ.

**नापि आश्रयासिद्धिः। असद्विलक्षण्त्वस्यैव आश्रयत्व प्रयोजकत्वात्।**

ಇನ್ನು ಆಶ್ರಯಾಸಿದ್ಧ ದೋಷವೂ ಬರುವದಿಲ್ಲ. ಏಕೆಂದರೆ ಅಸದ್ವಿಲಕ್ಷಣವು ಆಶ್ರಯತ್ವಕ್ಕೆ ಪ್ರಯೋಜಕವಾಗಿರುತ್ತದೆ.

**सदसद्विलक्षणत्वस्य सूत्रकार अभिमतत्वेन अपसिद्धान्त अभावाच्च इति भावेन शङ्कते–ननु सदसद्वैलक्षण्यमेव इति॥**

ಹಾಗೂ ಸದಸದ್ವಿಲಕ್ಷಣತ್ವವು ಸೂತ್ರಕಾರರಿಗೆ ಅಭಿಮತವಾದ್ದರಿಂದ ಅಪಸಿದ್ಧಾಂತ ದೋಷದ ಕೂಡ ಅಭಾವತೆ ಇದೆ, ಎಂಬ ಭಾವದಿಂದ ಈ ಟೀಕಾವಾಕ್ಯವು ಶಂಕಿಸುತ್ತದೆ.

**॥ न असत्वम् इति ॥**

<u>ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:</u>

**इतः परः टीकायां श्रूयमाणं "न असत्वं" इति वाक्यं प्रक्षिप्तम्। न टीकावाक्यम्। अवश्यं च इदं विज्ञेयम्। मिथ्या शब्दार्थत्वेन सत्वस्य अप्रसक्तत्वात्।**

ಇತರ ಟಿಪ್ಪಣಿಕಾರರಲ್ಲಿ ಕೇಳಿಬರುವ "न असत्वं"ಎಂಬ ವಾಕ್ಯವು, ಬೇರೆಯವರಿಂದ ಸೇರಿಸಲ್ಪಟ್ಟದ್ದು, ಟೀಕಾವಾಕ್ಯವಲ್ಲ. ಇದನ್ನು ಅವಶ್ಯವಾಗಿ ತಿಳಿಯಬೇಕು. ಇಲ್ಲಿ ಮಿಥ್ಯಾ ಪದದ ವಿಮರ್ಷೆಯಲ್ಲಿ ಸತ್ಯತ್ವವನ್ನು ಹೇಳುವದು ಅಪ್ರಸಕ್ತವೆನಿಸುತ್ತದೆ.

**॥ एतदेव च इति ॥**

<u>ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:</u>

**ननु यदि सदसद्विलक्षणत्वमेव मिथ्यात्वं उच्यते तर्हि अनिर्वचनीयत्वं मिथ्यात्वं इति गतः पक्षः इत्यत आह– एतदेव च इति॥**

ಪರಪಕ್ಷದವರು ಸದಸದ್ವಿಲಕ್ಷಣತ್ವವನ್ನೆ ಮಿಥ್ಯಾತ್ವವನ್ನು ಹೇಳಿದರೆ, ಅನಿರ್ವಚನೀಯತ್ವವನ್ನು ಮಿಥ್ಯಾತ್ವವೆಂದು ಹೇಳಿದ ಹಿಂದಿನ ಪಕ್ಷದ ಗತಿ ಏನಾಯಿತು ಎಂಬ ಶಂಕೆಗೆ ಉತ್ತರರೂಪವಾಗಿ ಈ ಟೀಕಾವಾಕ್ಯವಿರುತ್ತದೆ ಎಂದರ್ಥ.

**॥ उक्तदोष इति ॥**

<u>ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ</u>

**मिथ्यात्व प्रयुक्त असत्व प्रयुक्त आश्रयासिद्धिः अपसिद्धान्तरूपः। अनिर्वचनीयत्वस्य अनिर्वचन अर्हता प्रयुक्त अप्रसिद्ध् विशेषणता लक्षण वा इत्यर्थः।**

ಮಿಥ್ಯಾತ್ವ ಪ್ರಯುಕ್ತ ಅಂದರೆ ಅಸತ್ವ ಪ್ರಯುಕ್ತ ಆಶ್ರಯಾಸಿದ್ಧಿ ಮತ್ತು ಅಪಸಿದ್ಧಾಂತರೂಪ ದೋಷಗಳು. ಅಥವಾ ಅನಿರ್ವಚನೀಯ ಅಂದರೆ ಯಾವುದರಿಂದಲೂ ವರ್ಣಿಸಲಾಗದ ಅರ್ಹತೆಯನ್ನು ಪಡೆದದ್ದು ಎಂಬುದರ ಪ್ರಯುಕ್ತ ಅಪ್ರಸಿದ್ಧ ವಿಶೇಷಣತಾ ಲಕ್ಷಣ ದೋಷ ಎಂದರ್ಥ.

## प्रपञ्चमिथ्यात्वानुमानखण्डनम्
## सदसद्वैलक्षण्ये मिथ्यात्वे सिद्धसाधनता।

**ಮಿಥ್ಯಾ ಅಂದರೆ ಸತ್ಯವೂ ಅಲ್ಲದ ಅಸತ್ಯವೂ ಅಲ್ಲದ ವಸ್ತು ಎಂದು ಹೇಳಿ, ಅದನ್ನು ಪಕ್ಷದಲ್ಲಿ ಸಾಧಿಸಲು ಹೊರಟರೆ, ಅನುಮಾನಕ್ಕೆ ಸಿದ್ಧಸಾಧನತಾ ದೋಷ ಬರುತ್ತದೆ.**

### श्रीपद्मनाभतीर्थीयटीका

**सदसद्विलक्षणः प्रपञ्च इत्युक्ते सिद्धसाधनता दोषः स्यात्।**

ಪ್ರಪಂಚವು ಸದಸದ್ವಿಲಕ್ಷಣ ಎಂದರೆ ಸಿದ್ಧಸಾಧನತಾ ದೋಷ ಉಂಟಾಗುತ್ತದೆ.

**५.४.१ सदसद्वैलक्षण्यं नाम सद्विलक्षणं असद्विलक्षणं च**

### टीका

प्रतिज्ञादूषण प्रस्तावात् साधन शब्दः अत्र भावसाधनः। करणसाधनत्वे हि हेतुदूषणं स्यात्। सदसद्वैलक्षण्ये मिथ्यात्वे अङ्गीक्रियमाणे हि, विमतं सद्विलक्षणं असद्विलक्षणं च, इति प्रतिज्ञार्थः स्यात्। तत्र असद्विलक्षणत्वं प्रपञ्चस्य अस्माभिः अङ्गीकृतमेव इति सिद्धसाधनता भविष्यति।

ಇಲ್ಲಿ ಪ್ರತಿಜ್ಞಾದೂಷಣ ಪ್ರಸ್ತಾವವಿರುವದರಿಂದ, ಸಿದ್ಧಸಾಧನತಾ ಶಬ್ದದಲ್ಲಿಯ ಸಾಧನ ಶಬ್ದವು ಭಾವ ಸಾಧಕವಾಗಿರುತ್ತದೆ. ಅಂದರೆ ತಿಳಿದವಿಷಯವನ್ನು ತಿಳಿಸಿಕೊಡುತ್ತದೆ ಎಂದರ್ಥ. ಇನ್ನು ಸಾಧನ ಶಬ್ದವು ಕರಣ ಸಾಧಕವಾದಾಗ ಸಿದ್ಧಸಾಧನತಾ ಹೇತು ದೂಷಕ ವಾಗುತ್ತದೆ. ಅಂದರೆ ಸಿದ್ಧವಾದುದನ್ನು ಸಾಧಿಸುತ್ತದೆ ಎಂದರ್ಥ. ಸದಸದ್ವೈಲಕ್ಷಣ್ಯವನ್ನೆ ಮಿಥ್ಯಾತ್ವವೆಂದು ಅಂಗೀಕರಿಸಿದಾಗ "ವಿವಾದಾಸ್ಪದವಾದ ಪ್ರಪಂಚ ಸದ್ವಿಲಕ್ಷಣವು ಮತ್ತು ಅಸದ್ವಿಲಕ್ಷಣವೂ ಹೌದು" ಎಂದು ಪ್ರತಿಜ್ಞಾರ್ಥವಾಗುತ್ತದೆ. ಅಲ್ಲಿ, ಅಸದ್ವಿಲಕ್ಷಣತ್ವವನ್ನು ಪ್ರಪಂಚಕ್ಕೆ ನಾವು ಕೂಡ ಅಂಗೀಕರಿಸಿದ್ದರಿಂದ, ಇದು ಸಿದ್ಧಸಾಧನತಾ ಆಗುತ್ತದೆ.



### टिप्पणीनाम् विशेषार्थानि

**॥ साधन शब्दः अत्र इति ॥**

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

सिद्धसाधनता इत्यत्र साधन शब्दः भावसाधनः, सिद्धिरूप धात्वर्थवाचकः। न तु करणवाचकः। एवं च सिद्धस्य साधनं, सिद्धिः यस्य इति, विग्रहं आश्रयणे दोषस्य प्रतिज्ञानिष्ठत्व लाभः।

ಇಲ್ಲಿ ಸಿದ್ಧಸಾಧನತಾ ದಲ್ಲಿಯ ಸಾಧನ ಶಬ್ದವು ಭಾವಸಾಧಕವಾಗಿರುತ್ತದೆ ಅಂದರೆ ಸಿದ್ಧಿರೂಪ ಧಾತುವಿನ ಅರ್ಥವಾಚಕ ವಾಗಿರುತ್ತದೆ, ಕರಣವಾಚಕವಲ್ಲ.

ಅದರಂತೆ ಇಲ್ಲಿ सिद्धसाधनता ಶಬ್ದವನ್ನು सिद्धस्य साधनं, सिद्धिः यस्य इति ಎಂದು ವಿಗ್ರಹದ ಆಶ್ರಯದಿಂದ ಉಂಟಾದ ದೋಷ ಪ್ರತಿಜ್ಞಾನಿಷ್ಠವಾಗಿರುತ್ತದೆ. ಅಂದರೆ ಸಾಧನ ಪದವು ಪಕ್ಷದಲ್ಲಿದ್ದ ಸಿದ್ಧವಾದ ವಿಷಯವನ್ನು ತಿಳಿಸುತ್ತದೆ ವಿನಹಾ ಸಿದ್ಧವಾದ ವಿಷಯವನ್ನು ಸಾಧಿಸುವದಿಲ್ಲ. ಹೀಗಾಗಿ ಇದು ಪ್ರತಿಜ್ಞಾ ದೋಷವಾಗುತ್ತದೆ ಎಂಬ ಭಾವ.

प्रतिज्ञायाः सिद्धिकरणत्व अभावेऽपि सिद्धिकारणत्व सद्भावात्, करणसाधनं तु सिद्धं साध्यते, अनेन इति विग्रह प्रसङ्गेन सिद्धिकरणस्यैव लाभः स्यात्। न तु कारणमात्रस्य प्रतिज्ञादेः इति लाभः।

ಪ್ರತಿಜ್ಞಾದಲ್ಲಿ ಸಿದ್ಧಿಕರಣತ್ವದ ಅಭಾವವಿದ್ದರೂ, ಸಿದ್ಧಿಕಾರಣತ್ವ ಇರುತ್ತದೆ. ಅದರಂತೆ ಕರಣಸಾಧನವು सिद्धं साध्यते ಎಂಬ ವಿಗ್ರಹದಂತೆ ಸಿದ್ಧವಾದುದನ್ನು ಸಾಧಿಸುತ್ತದೆ ಅದರಿಂದ ಸಿದ್ಧಿಕರಣದ ಲಾಭ ಉಂಟಾಗುತ್ತದೆ, ಸಿದ್ಧಿಕಾರಣತ್ವದ್ದಲ್ಲ. ಸಿದ್ಧಿಕಾರಣತ್ವವು ಪ್ರತಿಜ್ಞಾಕ್ಕೆ ಲಾಭವನ್ನುಂಟು ಮಾಡುತ್ತದೆ ಎಂಬ ಭಾವ.

**॥ भावसाधन इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

भावः धातु अर्थः तं साधयति प्रतिपादयति इति भावसाधन इत्यर्थः। तथा च सिद्धस्य ज्ञातस्यैव साधनता अनुमितिरुप सिद्धज्ञानविषयता प्राप्त इत्यर्थ द्रष्टव्यः।

ಭಾವ ಎಂದರೆ ಧಾತುವಿನ ಅರ್ಥ ಅದನ್ನು ಸಾಧಿಸುವದು ಎಂದರೆ ಪ್ರತಿಪಾದಿಸುವದು, ಭಾವಸಾಧನ ಎಂದರ್ಥ. ಅದರಂತೆ, ಸಿದ್ಧವಾದ ಅಂದರೆ ತಿಳಿದ ಅಥವಾ ಜ್ಞಾತವಾದದ್ದನ್ನೆ, ಸಾಧನತಾ ಎಂದರೆ ಅನುಮಿತಿರೂಪ ಸಿದ್ಧವಾದ ಜ್ಞಾನವಿಷಯವನ್ನು ಪ್ರಾಪ್ತಮಾಡಿಕೊಡುವದು, ಸಿದ್ಧಸಾಧನತಾದ ಅರ್ಥ ಎಂದು ತಿಳಿಯಬೇಕು.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

भावो धातुः इत्यर्थः। स साधनं अभिधेयं यस्य स तथोक्तः। भाववाचकः इत्यर्थः।
साधनविकलः अयं दृष्टान्त इत्यादौ अपि उक्तार्थता निरासाय उक्तं –अत्र इति॥
भावसाधनत्वे नियामकं आह–प्रतिज्ञा इति॥

ಇಲ್ಲಿ ಭಾವ ಎಂದರೆ ಧಾತು ಎಂದರ್ಥ. ಅದರ ಸಾಧನ ಎಂದರೆ ಪ್ರತಿಪಾದಿಸುವದು ಅದು ಭಾವವಾಚಕವೆನಿಸುತ್ತದೆ.

ಟೀಕಾವಾಕ್ಯದಲ್ಲಿಯ अत्र ಪದದಿಂದ ಅನುಮಾನದ साधनविकल: अयं दृष्टान्त ಎಂಬ ದೃಷ್ಟಾಂತ ದೋಷವನ್ನು ಹೇಳುವ ಸಂದರ್ಭದಲ್ಲಿ ಕೂಡ ಭಾವಸಾಧನಾರ್ಥದ ಉಪಯೋಗತೆಯನ್ನು ನಿರಾಕರಿಸಲು ಇಡಲಾಗಿದೆ.

ಹಾಗೂ ಭಾವಸಾಧನತ್ವದಲ್ಲಿಯ ನಿಯಾಮಕವನ್ನು प्रतिज्ञादूषण प्रस्तावात् ಎಂಬುದರಿಂದ ಹೇಳಲಾಗಿದೆ.

## ॥ करणसाधनत्वे हि इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**तथात्वे साधनं लिङ्गं स्यात्। तथा च सिद्धसाधनतापि अनिष्टैव इति हेतु दोषः स्यात् इत्यर्थः।**

ಇಲ್ಲಿ, ಸಿದ್ಧಸಾಧನತಾ ದಲ್ಲಿಯ ಸಾಧನ ಶಬ್ದವು ಕರಣಸಾಧನವಾದರೆ, ಅದು ಸಾಧ್ಯ ಮತ್ತು ಹೇತುವಿನಲ್ಲಿಯ ವ್ಯಾಪ್ತಿಸ್ಮೃತಿ ಮಾಡಿಕೊಡುತ್ತದೆ. ಅದರಂತೆ ಕೂಡ ಸಿದ್ಧಸಾಧನತಾ ಅನಿಷ್ಟವೇ ಆಗುತ್ತದೆ. ಅಂದರೆ ಸಿದ್ಧವಾದುದನ್ನೆ ಸಾಧಿಸುತ್ತದೆ ಎಂಬ ಹೇತು ದೋಷವಾಗುತ್ತದೆ ಎಂದರ್ಥ.

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**एवं करणसाधन शब्दार्थोऽपि ज्ञातव्यः। ननु करणसाधनत्वे को दोष इत्यत आह– करण साधनत्वे हि इति॥**

ಹಾಗೆಯೆ, ಸಿದ್ಧಸಾಧನತಾ ಶಬ್ದದಲ್ಲಿಯ ಸಾಧನ ಪದವು ಕರಣಸಾಧಕವೂ ಆಗುತ್ತದೆ ಎಂದು ತಿಳಿಯಬೇಕು. ಹಾಗಾದರೆ, ಕರಣಸಾಧಕವಾದರೆ ಯಾವ ದೋಷ ಬರುತ್ತದೆ ಎಂಬ ಶಂಕೆಯನ್ನು ಪರಿಹರಿಸಲು ಈ ಟೀಕಾವಾಕ್ಯವಿರುತ್ತದೆ.

**सिद्धं साध्यते अनेन इति सिद्धसाधन शब्दार्थत्वे सिद्धसाधकत्वस्य हेतु धर्मत्वेन हेतुदूषणं स्यात् इत्यर्थः।**

ಸಿದ್ಧವಾದುದನ್ನು ಸಾಧಿಸುವದು ಸಿದ್ಧಸಾಧನತಾದ ಶಬ್ದಾರ್ಥವಾದಲ್ಲಿ, ಸಿದ್ಧಸಾಧಕವು ಹೇತು ಧರ್ಮವಾಗುವದರಿಂದ ಇಲ್ಲಿ ಸಿದ್ಧಸಾಧನತಾ ಹೇತು ದೂಷಣವೆಂದಂತಾಯಿತು ಎಂದರ್ಥ.

**अस्तु हेतु दूषणं इत्यत उक्तं–प्रतिज्ञादूषणं प्रस्तावात् इति॥**

ಹೇತು ದೂಷಣವೇ ಆಗಲಿ ಅಂದರೆನೆಂತೆ, ಈ ಸಂಶಯವನ್ನು ಪರಿಹರಿಸಲು प्रतिज्ञादूषणं प्रस्तावात् ಎಂದು ಹೇಳಲಾಗಿದೆ. ಅಂದರೆ, ಇಲ್ಲಿ ಸಾಧನ ಶಬ್ದವನ್ನು ಕರಣಸಾಧಕವೆಂದು ಪರಿಗಣಿಸಿದರೆ ಸಿದ್ಧಸಾಧನತಾ ದೋಷವು ಪ್ರತಿಜ್ಞಾದೂಷಣ ಏನಿಸುವದಿಲ್ಲ ಎಂಬ ಭಾವ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**करणसाधनत्वमेव साधन शब्दस्य किं न स्यात् इत्यत आह– करण इति॥**



ಇಲ್ಲಿ ಸಿದ್ಧಸಾಧನತಾದಲ್ಲಿಯ ಸಾಧನ ಶಬ್ದವು ಕರಣಸಾಧನತ್ವ ಏಕೆ ಆಗುವದಿಲ್ಲ ಎಂಬ ಸಂಶಯವನ್ನು ಈ ಟೀಕಾವಾಕ್ಯ ಪರಿಹರಿಸುತ್ತದೆ. ಹೀಗೆ ಕರಣಸಾಧಕತ್ವವನ್ನು ಪರಿಗಣಿಸಿದರೆ, ಕರಣಸಾಧಕತ್ವವು ಹೇತು ಧರ್ಮವಾಗಿರುವದರಿಂದ, ಇಲ್ಲಿ ಸಿದ್ಧಸಾಧನತಾ ದೋಷವು ಹೇತು ದೋಷವೆನಿಸುವದು ಎಂದು ಭಾವ.

**करणं साधनं अभिधेयं यस्य इति करणसाधनः। करणवाचक इत्यर्थः। ततश्च प्रतिज्ञानिरास उपक्रम विरोधः इति भावः।**

ಯಾವುದು ಕಾರ್ಯವನ್ನು ಸಾಧಿಸವದೊ ಅದು ಕರಣಸಾಧನ. ಅಂದರೆ ಕರಣಸಾಧಕ ಎಂದರ್ಥ. ಅದು ಇಲ್ಲಿ ಪ್ರತಿಜ್ಞಾನಿರಾಸ ಸಂದರ್ಭದಲ್ಲಿ ವಿರೋಧವನ್ನುಂಟು ಮಾಡುತ್ತದೆ ಎಂದರ್ಥ.

## ॥ सदसद्वैलक्षण्ये मिथ्यात्वे अङ्गीक्रियमाण इत्यादिना ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**सदसद्विलक्षणं इति कः अर्थः? सत्–असत्–रूपं यदेकं ततो विलक्षणं इति वा? सद्विलक्षणं असद्विलक्षणं च इति वा? सद्विलक्षणत्वे सति असद्विलक्षणं इति वा? आद्ये सदसद्रूपतायाः मया अपि अनङ्गीकारात् सिद्धसाधनता प्रसङ्गेन द्वितीय एव अङ्गीकार्यः इति आह– सदसद्वैलक्षण्य इति॥**

ಸದಸದ್ವಿಲಕ್ಷಣ ಎಂದರೆ ಎನರ್ಥಾ? ಸತ್-ಅಸತರೂಪ ಒಂದೇ ಎಂದು ತೆಗೆದುಕೊಂಡು, ಅದರಿಂದ ವಿಲಕ್ಷಣವಾದುದೆಂದೊ? ಅಥವಾ ಸದ್ವಿಲಕ್ಷಣ ಮತ್ತು ಅಸದ್ವಿಲಕ್ಷಣವೆಂದೊ ಅಥವಾ ಸದ್ವಿಲಕ್ಷಣ ಇರುವಾಗ (ಜೊತೆಗೆ) ಅಸದ್ವಿಲಕ್ಷಣವೆಂತಲೊ?

ಮೊದಲಿನದಾದರೆ, ಸತ್-ಅಸತ್-ರೂಪತ್ವವನ್ನು ಪ್ರಪಂಚಕ್ಕೆ ನಾವು ಕೂಡ ಅಂಗೀಕರಿಸಿಲ್ಲ, ಆದ್ದರಿಂದ, ಪ್ರಪಂಚವು ಸತ್ಯ ಎಂದು ಹೇಳುವ ನಾವು ಪ್ರಪಂಚವು ಸದಸದ್ರೂಪತ್ವಕ್ಕಿಂತ ವಿಲಕ್ಷಣ ಎಂಬುದು ನಮಗೆ ಸಿದ್ಧವಾಗಿದೆ. ಆದ್ದರಿಂದ ಸಿದ್ಧಸಾಧನತಾ ಪ್ರಸಂಗ ಬರುವದರಿಂದ ಎರಡನೆ ಪಕ್ಷವನ್ನೆ ಅಂಗೀಕರಿಸಬೇಕು ಎಂಬುದು ಈ ಟೀಕಾವಾಕ್ಯದ ತಾತ್ಪರ್ಯಾರ್ಥವಾಗಿದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**सदसद्विलक्षणत्वं किं सदसद्भिन्नत्वं अभिमतं सदसत्त्व अनधिकरणत्वं वा। आद्येऽपि सदसद्रूपत्वं यदेकं ततो भिन्नत्वं वा सद्भिन्नत्वं असद्भिन्नत्वं च इति धर्मद्वयं वा। न आद्यः सदेकस्वभावे प्रपञ्चे सदसद्रूपतायाः मया अनङ्गीकारेण तद्भिन्नतायाः सिद्धत्वेन तत् साधने सिद्धसाधनं इति मनसि निधाय द्वितीयं पक्षं परिशिनष्टि–सदसद्वैलक्षण्ये मिथ्यात्वे अङ्गीक्रियमाण इत्यादिना ॥**

ಸದಸದ್ವಿಲಕ್ಷಣ ಎಂದರೆ, ಸದಸತ್-ಕ್ಕಿಂತಲೂ ಭಿನ್ನವೆಂತೆಲೊ, ಅಥವಾ ಸದಸತ್ವಕ್ಕೆ ಅಧಿಕರಣವಿಲ್ಲದು ಎಂತಲೋ? ಮೊದಲನೆಯದು ಎಂದರೆ, ಸದಸದ್ರೂಪತ್ವ ಒಂದು ಎಂದು ಪರಿಗಣಿಸಿ, ಅದಕ್ಕಿಂತಲು ಭಿನ್ನವೆಂತಲೊ ಅಥವಾ ಸದ್-ಭಿನ್ನತ್ವ ಮತ್ತು ಅಸತ್-ಭಿನ್ನತ್ವ

ಎಂದು ಎರಡು ಧರ್ಮಗಳಿಂದ ಕೂಡಿದ್ದು ಎಂತಲೊ. ಇಲ್ಲಿಕೂಡ ಮೊದಲನೆಯದ್ದು ಎಂದು ಹೇಳುವದು ಸರಿಯಲ್ಲ, ಪ್ರಪಂಚ ಸತ್ಯವೆಂದು ಹೇಳುವ ನಾವು, ಪ್ರಪಂಚಕ್ಕೆ ಸದಸದ್ರೂಪತ್ವ ಅಂಗೀಕರಿಸಿರುವದಿಲ್ಲ. ಆದ್ದರಿಂದ ಸದಸದ್ರೂಪತ್ವಕ್ಕಿಂತಲೂ ಭಿನ್ನ ಎಂಬುದು ಸಿದ್ಧವಾಗಿರುವದರಿಂದ, ಮತ್ತೆ ಅದನ್ನೆ ಸಾಧಿಸುವದರಿಂದ ಸಿದ್ಧಸಾಧನತಾ ದೋಷ ಉಂಟಾಗುವದು ಎಂದು ಮನಸ್ಸಿನಲ್ಲಿಟ್ಟುಕೊಂಡು, ಟೀಕಾಕೃತ್ಪಾದರು ಇಲ್ಲಿ ದ್ವಿತೀಯ ಪಕ್ಷವನ್ನು ಇಲ್ಲಿ ಪರಿಶೀಲಿಸುತ್ತಾರೆ.

### ॥ तत्र इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**तर्हि द्वितीय एव अस्तु इत्यत आह–तत्र इति॥**

ಹಾಗಾದರೆ ಎರಡನೆಯದೆ ಇರಲಿ, ಅದಕ್ಕೂ ಕೂಡ ಈ ಟೀಕಾವಾಕ್ಯ ಸಿದ್ಧಸಾಧನತಾ ದೋಷ ಉಂಟಾಗುತ್ತದೆ ಎಂದು ಪ್ರತಿಪಾದಿಸುತ್ತದೆ.

ಇಲ್ಲಿ ಶ್ರೀಕೇಶವಾಚಾರ್ಯರು ಹೀಗೆ ವಿವರಿಸುತ್ತಾರೆ:

**अस्तु तर्हि अयमेव प्रतिज्ञार्थः को दोष इत्यतः, किम् अत्र समप्राधान्येन उभयसाधनं अभिमत किं वा विशेषण विशेष्य भावेन इति मनसि निधाय आद्यं निराचष्टे– तत्र इति॥**

ಹಾಗಾದರೆ ಎರಡನೆಯದೆ ಪ್ರತಿಜ್ಞಾರ್ಥವಾಗಲಿ, ಆಗ ಯಾವ ದೋಷ ಉಂಟಾಗುತ್ತದೆ? ಅಂದರೆ ಇಲ್ಲಿ "विमतं सद्विलक्षणं असद्विलक्षणं च" ಅನುಮಾನದ ಪ್ರತಿಜ್ಞವಾಕ್ಯವಾಯಿತು. ಹಾಗದರೆ ಇಲ್ಲಿ ಸಮ ಪ್ರಧಾನತೆಯಿಂದ ಸದ್ವಿಲಕ್ಷಣ ಮತ್ತು ಅಸದ್ವಿಲಕ್ಷಣ ಎರಡೂ ಧರ್ಮಗಳನ್ನು ಸಾಧಿಸುತ್ತೀರೋ ಅಥವಾ ವಿಶೇಷಣ ವಿಶೇಷ್ಯ ಭಾವಗಳಿಂದಲೋ ಎಂಬ ವಿಕಲ್ಪಗಳನ್ನು ಮನಸ್ಸಿನಲ್ಲಿಟ್ಟು, ಮೊದಲಿನ ಪಕ್ಷವನ್ನು ನಿರಾಕರಿಸಲು ಈ ಟೀಕಾವಾಕ್ಯವಿರುತ್ತದೆ.

### ॥ सिद्धसाधनता इति ॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**अंशे सिद्धसाधनता इत्यर्थ।**

ಇಲ್ಲಿ ಸಿದ್ಧಸಾಧನತಾ ಎಂದರೆ ಅಂಶಾತ್ಮಕ ಸಿದ್ಧಸಾಧನತಾ ಎಂದರ್ಥ.

### ५.४.२ सदसद्वैलक्षण्यं नाम सद्वैलक्षण्येन सह असद्वैलक्षण्यं

## टीका

**ननु सद्वैलक्षण्येन सह असद्वैलक्षण्यं अत्र साध्यते। तत् कथं एष दोष इति। मैवं, न हि सिद्धं असिद्धेन सह उच्यमानं असिद्धं भवति।**



ಸದಸದ್ವೈಲಕ್ಷಣ್ಯ ಎಂದರೆ, ಸದ್ವೈಲಕ್ಷಣ್ಯದ ಜೊತೆಗೆ ಅಸದ್ವೈಲಕ್ಷಣ್ಯವನ್ನು ಇಲ್ಲಿ ಸಾಧಿಸುತ್ತೇವೆ. ಅದರಂತೆ, ಸಿದ್ಧಸಾಧನತಾ ದೋಷ ಹೇಗೆ ಉಂಟಾಗುತ್ತದೆ?

ಹಾಗೆ ಹೇಳುವದು ಸರಿಯಲ್ಲ. ಸಿದ್ಧವಾದುದನ್ನು ಅಸಿದ್ಧವಾದುದರ ಜೊತೆಗೆ ಹೇಳಿದರೆ, ಸಿದ್ಧವಾದುದು ಅಸಿದ್ಧವಾಗುವದಿಲ್ಲ ತಾನೆ.

## टिप्पणीनाम् विशेषार्थानि

### ॥ ननु सद्वैलक्षण्येन सह इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु असद्वैलक्षण्यमात्रस्य सिद्धत्वेऽपि सद्वैलक्षण्यस्य असिद्धत्वेन तेन सह असद्वैलक्षण्यं साध्यते अतो न दोष इति आशङ्कते– ननु इति॥**

ಅಸದ್ವೈಲಕ್ಷಣ್ಯಮಾತ್ರ ಸಿದ್ಧವಾಗಿದ್ದರೂ, ಅಸಿದ್ಧವಾದ ಸದ್ವೈಲಕ್ಷಣ್ಯದ ಜೊತೆಗೆ ಅಸದ್ವೈಲಕ್ಷಣ್ಯವನ್ನು ಇಲ್ಲಿ ಸಾಧಿಸುತ್ತೇವೆ. ಆದ್ದರಿಂದ ಸಿದ್ಧಸಾಧನತಾ ದೋಷ ಬರುವದಿಲ್ಲ, ಎಂದು ಶಂಕಿಸುತ್ತಾರೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु पक्षैकदेशे सम्पूर्ण साध्य सिद्धौ अंशतः सिद्धसाधनत्वस्य दोषत्वेऽपि, सर्वस्मिन् पक्षे साध्यैकदेश सिद्ध्या तस्य अदोषत्वात्। प्रकृते च उभयोः मिलितयोः साधानात् न सिद्धसाध्नता इति शङ्कते–ननु इति॥**

ಪಕ್ಷದ ಏಕದೇಶದಲ್ಲಿ ಸಾಧ್ಯಧರ್ಮ ಸಿದ್ಧವಾದಲ್ಲಿ, ಅಂಶತಃ ಸಿದ್ಧಸಾಧನತಾ ದೋಷ ಉಂಟಾದರೂ, ಸರ್ವಪಕ್ಷದಲ್ಲಿ ಸಾಧ್ಯಧರ್ಮ ಏಕದೇಶದಲ್ಲಿ ಸಿದ್ಧವಾದರೂ ಅದು ದೋಷವಾಗುವದಿಲ್ಲ. ಪ್ರಕೃತದಲ್ಲಿ ಸದ್ವೈಲಕ್ಷಣ್ಯ ಮತ್ತು ಅಸದ್ವೈಲಕ್ಷಣ್ಯ ಎರಡೂ ಧರ್ಮಗಳನ್ನು ಜೊತೆಯಾಗಿ ಇಲ್ಲಿ ಸಾಧಿಸುತ್ತಿರುವದರಿಂದ ಸಿದ್ಧಸಾಧನತಾ ದೋಷ ಬರುವದಿಲ್ಲ ಎಂದು ಶಂಕಿಸುತ್ತಾರೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**स्यात् अयं दोषः, यदि असद्वैलक्षण्यमात्रं साधयामः। न च एवं सति दोषो भवति। एकाकिनः सार्थस्य गमने चोरादि बाधेऽपि बलवद्भिः सह गमने तद् अभाव दर्शनात् इति भावः।**

ಒಂದು ವೇಳೆ ಅಸದ್ವೈಲಕ್ಷಣ್ಯವನ್ನುಮಾತ್ರ ನಾವು ಸಾಧಿಸುತ್ತಿದ್ದರೆ ಸಿದ್ಧಸಾಧನತಾ ದೋಷ ಇರುತ್ತಿತ್ತು. ಆದರೆ ಅದು ಹಾಗಿರುವದಿಲ್ಲ ಆದ್ದರಿಂದ ಇಲ್ಲಿ ಸಿದ್ಧಸಾಧನತಾ ದೋಷವನ್ನು ಹೇಳಲಾಗುವದಿಲ್ಲ. ಹೇಗೆ, ಜನರ ಗುಂಪ ಮುಂದೆ ತೆರಳಿದಲ್ಲಿ, ಬಲವಂತನಾಗಿದ್ದರೂ ಕೂಡ ಒಬ್ಬಂಟಿಗನಾಗಿ ಉಳಿದವನಿಗೆ ಕಳ್ಳಮುಂತಾದವರ ಹಾವಳಿ ಇರುತ್ತದಾದರೂ, ಆದರೆ

ಅವನು ಆ ಜನರ ಗುಂಪದ ಜೊತೆಗೆ ಹೋಗಿದ್ದರೆ ಕಳ್ಳರ ಹಾವಾಳಿ ಹೇಗೆ ಇರುವದಿಲ್ಲವೋ ಅದರಂತೆ ಇಲ್ಲಿ ಕೂಡ ಎಂಬ ಭಾವ.

**॥ न हि सिद्धं असिद्धेन ॥**

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**"पर्वतः शिलात्मकः अग्निमांश्च" इत्यादौ इव अंशे सिद्धसाधनता दुर्वारः इत्यर्थः।**

ಇಲ್ಲಿ "पर्वतः शिलात्मकः अग्निमांश्च" ಎಂಬ ಅನುಮಾನದಲ್ಲಿ शिलात्मक ಮತ್ತು अग्निमान् ಗಳು ಸಾಧ್ಯ ಧರ್ಮಗಳಾಗಿರುತ್ತವೆ. ಅವುಗಳನ್ನು ಪಕ್ಷವಾದ ಪರ್ವತದಲ್ಲಿ ಸಾಧಿಸಲಾಗುತ್ತಿದೆ. ಅವುಗಳಲ್ಲಿ शिलात्मक ಧರ್ಮವು ಪಕ್ಷವಾದ ಪರ್ವತದಲ್ಲಿ ಸಿದ್ಧವಾಗಿದೆ ಮತ್ತು अग्निमान् ವು ಅಸಿದ್ಧವಾದ ಧರ್ಮ. ಹೀಗಿದ್ದರೂ ಈ ಅನುಮಾನಕ್ಕೆ ಅಂಶತಃ ಸಿದ್ಧಸಾಧನತಾ ದೋಷವನ್ನು ತಪ್ಪಿಸಲಾಗುವದಿಲ್ಲ ಎಂಬ ಭಾವ.

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**तथात्वे "पर्वतोऽग्निमान् पाषाणवांश्च" इत्यत्रापि अंशे सिद्धसाधनता न स्यात् इति भावः।**

ಹಾಗಾದರೆ, "पर्वतोऽग्निमान् पाषाणवांश्च" ಎಂಬಲ್ಲಿ ಕೂಡ ಅಂಶತಃ ಸಿದ್ಧಸಾಧನತಾ ದೋಷ ಇಲ್ಲವೆನ್ನ ಬೇಕಾದೀತು ಎಂಬ ಭಾವ. ಪರ್ವತದಲ್ಲಿ ಕಲ್ಲುಗಳು ಇರುತ್ತವೆ ಎಂಬುದು ಸಿದ್ಧವಾದ ಸಂಗತಿ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**उभयोः मिलितयोः पक्षत्वेऽपि पक्षतावच्छेदक नानात्वात्, क्वचित् अधिकरणे पक्षतावच्छेदक अवच्छेदेन साध्य सिद्धौ, अंशतः सिद्धसाधनतावत्, उभयोः मिलितयोः साध्यत्वेऽपि साध्यतावच्छेदक नानात्वात् साध्यतावच्छेदक अवच्छिन्नस्य पक्षतावच्छेदक अवच्छेदेन सिद्धरूपस्य सिद्धसाधनता बीजस्य सत्वात् अंशतः सिद्धसाधनत्व इत्याशयेन आह– न हि इति॥**

ಎರಡೂ ಧರ್ಮಗಳು ಜೊತೆಗಿರುವ ಅಥವಾ ಮಿಲಿತಾಗಿರುವ ಪಕ್ಷತ್ವವಾದರೂ, ಪಕ್ಷ ಬೇರ್ಪಡಿಸುವಿಕೆ ನಾನಾತರಹವಾಗಿದ್ದರಿಂದ, ಕ್ವಚಿತ್ ಅಧಿಕರಣದಲ್ಲಿ, ಪಕ್ಷವನ್ನು ಬೇರ್ಪಡಿಸುವ ಅವಚ್ಛೇದದಿಂದ ಸಾಧ್ಯ ಸಿದ್ಧವಾದಾಗ ಹೇಗೆ ಅಂಶತಃ ಸಿದ್ಧಸಾಧನತಾ ಉಂಟಾಗುವಂತೆ, ಎರಡೂ ಧರ್ಮಗಳೂ ಕೂಡಿರುವ ಸಾಧ್ಯತ್ವ ವಿದ್ದರೂ, ಸಾಧ್ಯವನ್ನು ಬೇರ್ಪಡಿಸುವ ನಾನಾತರಹವಾಗಿದ್ದರಿಂದ, ಸಾಧ್ಯತೆಯ ಬೇರ್ಪಡಿಸುವ ಅವಚ್ಛಿನ್ನದ ಪಕ್ಷವನ್ನು ಬೇರ್ಪಡಿಸುವ ಅವಚ್ಛೇದದಿಂದ ಸಿದ್ಧಿರೂಪ ಸಿದ್ಧಸಾಧನತಾ ಬೀಜತ್ವ ಸತ್ಯವಾದ್ದರಿಂದ ಅಂಶತಃ ಸಿದ್ಧಸಾಧನತಾ ಉಂಟಾಗುತ್ತದೆ ಎಂಬುದನ್ನು ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:



**हि यस्मात् सिद्धं असिद्धेन सह उक्तं असिद्धं न भवति। तस्मात् मैवं इति अन्वयः। चोरादि बाधस्य पुरुषान्तरनिष्ठ बलनिवृत्यत्ववत् सिद्धसाधनत्वस्य साध्यान्तरनिष्ठ सिद्धि निवर्त्यत्व अभावात् वैषम्य इति भावः।**

ಯಾವಕಾರಣದಿಂದ ಸಿದ್ಧವಾದುದು ಅಸಿದ್ಧದ ಜೊತೆಗೆ ಹೇಳಿದ್ದಕ್ಕೆ ಅಸಿದ್ಧವಾಗುವದಿಲ್ಲವೊ, ಆದ್ದರಿಂದ ಹಾಗೆ ಹೇಳುವದು ಸರಿಯಲ್ಲ ಎಂದು ಅನ್ವಯವಿರುತ್ತದೆ. ಹೇಗೆ ಕಳ್ಳರ ಹಾವಳಿಯ ಪುರುಷಾಂತರನಿಷ್ಠ ಬಲದ ನಿವೃತ್ತಿಯಾಗುವದಿಲ್ಲವೊ, ಅದರಂತೆಯೆ ಸಿದ್ಧಸಾಧನತ್ವದ ಸಾಧ್ಯಾಂತರನಿಷ್ಠ ಸಿದ್ಧಿ ನಿವೃತ್ತಿಯಾಗುವದಿಲ್ಲ ಎಂಬ ಭಾವವಿರುತ್ತದೆ.

### ५.४.३ सदसद्वैलक्षण्यं नाम सद्वैलक्षण्य विशिष्ट असद्वैलक्षण्यं

## टीका

**सद्वैलक्षण्यविशिष्ट असद्वैलक्षण्यं साधनात् अदोष इति चेत्, । तथापि सिद्धसाधनता एव। सतोऽपि सत्–अन्तरवैलक्षण्य अङ्गीकारात्।**

ಸದಸದ್ವೈಲಕ್ಷಣ್ಯ ಎಂದರೆ ಸದ್ವೈಲಕ್ಷಣ್ಯ ವಿಶಿಷ್ಟ ಅಸದ್ವೈಲಕ್ಷಣ್ಯ ಎಂದು ಸಾಧಿಸುತ್ತೇವೆ ಆದ್ದರಿಂದ ಸಿದ್ಧಸಾಧನತಾ ದೋಷ ಉಂಟಾಗುವದಿಲ್ಲ ಎಂದರೆ?

ಹಾಗಾದರೂ ಕೂಡ, ಸಿದ್ಧಸಾಧನತಾ ದೋಷ ನಿವಾರಿಸಲಾಗುವದಿಲ್ಲ. ಸತ್ ವಸ್ತುವಿನಲ್ಲಿಯೂ ಸತ್-ಅಂತರವೈಲಕ್ಷಣ್ಯ (ಎರಡು ಸತ್ಯ ವಸ್ತುಗಳಲ್ಲಿಯ ಅಂತರವೈಲಕ್ಷಣ್ಯ) ಗುಣ ನಾವು ಅಂಗೀಕರಿಸಿರುವ ವಿಷಯವಾಗಿದೆ.

### टिप्पणीनाम् विशेषार्थानि

**॥ सद्वैलक्षण्यविशिष्ट इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**तथाच विशिष्टस्य अखण्डपदार्थन्तरत्वेन तत्र अंश अभावात् न अंशे सिद्धसाधनता इति भावः।**

ವಿಶಿಷ್ಟವು, ಅಖಂಡಪದಾರ್ಥದ ಧರ್ಮವಾಗುವದರಿಂದ ಅಲ್ಲಿ ಅಂಶತ್ವದ ಅಭಾವತೆ ಉಂಟಾಗುವದರಿಂದ, ಅಂಶತಃ ಸಿದ್ಧಸಾಧನತಾಗೆ ಆಸ್ಪದವಿರುವದಿಲ್ಲ ಎಂಬ ಭಾವವಿರುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**तृतीयं शङ्कते–सद्वैलक्षण्य इति॥**

ಈ ಟೀಕಾವಾಕ್ಯ ಮೇಲೆ ನಮೂದಿಸಿದ ವಿಕಲ್ಪಗಳಲ್ಲಿ ಮೂರನೆ ವಿಕಲ್ಪವನ್ನು ಶಂಕಿಸುತ್ತದೆ.

**विशिष्टस्य अखण्ड एकपदार्थन्तरत्वात् न अंशः। तत्रापि येन अंशे सिद्धसाधनता स्यात्। अन्यथा "प्रामाण्यं स्वतो ज्ञायते" इति प्रतिज्ञायां ज्ञानमात्रस्य परतस्त्ववादि नापि अङ्गीकारात्, अंशे सिद्धसाधनता।**

ಇಲ್ಲಿ ವಿಶಿಷ್ಟವು ಅಂಖಂಡಪದಾರ್ಥರೂಪ ಧರ್ಮವಾಗುವದರಿಂದ, ಅಂಶತಃ ಸಿದ್ಧಸಾಧತಾಗೆ ಆಸ್ಪದವಿರುವದಿಲ್ಲ. ಅಲ್ಲಿಕೂಡ ಇದರಿಂದ ಅಂಶತಃ ಸಿದ್ಧಸಾಧನತಾ ಬಂದೆ ಬರುತ್ತದೆ. ಇಲ್ಲವಾದರೆ "प्रामाण्यं स्वतो ज्ञायते" ಎಂಬ ಪ್ರತಿಜ್ಞೆಯಲ್ಲಿ, ಜ್ಞಾನಮಾತ್ರಕ್ಕೆ ಬೇರೆ ಎಂದು ಅಂಗೀಕರಿಸಲಾಗುವದಿಲ್ಲ. ಆದ್ದರಿಂದ ಅಂಶತಃ ಸಿದ್ಧಸಾಧನತಾವನ್ನು ನಿರಾಕರಿಸಲಾಗುವದಿಲ್ಲ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**द्वितीयं शङ्कते–सद्वैलक्षण्य विशिष्ट इति॥**

ಈ ಟೀಕಾವಾಕ್ಯವು ಮೇಲೆ ನಮೂದಿಸಿದ ಎರಡನೆ ವಿಕಲ್ಪವನ್ನು ಶಂಕಿಸುತ್ತದೆ

**॥ तथापि इति॥**

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ

**परिहरति– तथापि इति॥**

ಈ ಟೀಕಾವಾಕ್ಯವು ಮೇಲೆ ನಮೂದಿಸಿದ ಶಂಕೆಯನ್ನು ನಿವಾರಿಸುತ್ತದೆ.

**॥ सिद्धसाधनता इति ॥**

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ::

**सद्भिन्नत्व विशिष्ट असद्भिन्नत्वस्य प्रपञ्चे मया अपि अङ्गीकारात् इत्यर्थः।**

ಸತ್-ಭಿನ್ನತ್ವ ವಿಶಿಷ್ಟ ಅಸತ್-ಭಿನ್ನತ್ವವನ್ನು ಪ್ರಪಂಚದಲ್ಲಿ ನಾವು ಕೂಡ ಅಂಗೀಕರಿಸಿರುವದರಿಂದ ಎಂದರ್ಥ.

**॥ सतोऽपि इति॥**

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ::

**तत् कथं इत्यतः, असद्विलक्षणत्वस्य प्रपञ्चे उभयवादि सम्मतत्वेन तत् अंशस्य उपपादन निरपेक्षत्वात्, तत् अनुपपाद्यैव सद्भिन्नस्यैव तत् सापेक्षत्वात्, सदेव सद्भेद्वादिना इति, अनुव्याख्यानं मनसि निधाय उपपादयति–सतोऽपि इति॥**

ಇದು ಹೇಗೆ ಎಂಬುದಕ್ಕೆ, ಪ್ರಪಂಚವು ಅಸದ್ವಿಲಕ್ಷಣತ್ವವಾಗಿದೆ ಎಂಬುದು ಉಭಯವಾದಿಗಳಿಗೆ ಸಮ್ಮತವಾದ ವಿಷಯ, ಅದು ಪ್ರಪಂಚದ ಅಂಶತ್ವ ಪ್ರತಿಪಾದನೆಯ ನಿರಪೇಕ್ಷವಾಗಿರುತ್ತದೆ. ಇನ್ನು ಪ್ರಪಂಚದ ಅಂಶತ್ವವು ಸತ್-ಭಿನ್ನತ್ವದ ಸಾಪೇಕ್ಷವಾಗಿರುವದರಿಂದ ಅದು ಸತ್ಯ ಭೇದವಾದಿಗಳಿಗೆ ಸತ್ಯವೇ ಆಗಿರುತ್ತದೆ ಎಂದು



ಶ್ರೀಮಧ್ವರು ತಮ್ಮ ಅನುವ್ಯಾಖ್ಯಾನ ಗ್ರಂಥದಲ್ಲಿ ಪ್ರತಿಪಾದಿಸಿದ್ದನ್ನು ಮನಸ್ಸಿನಲ್ಲಿ ಧರಿಸಿ, ಟೀಕಾಕೃತ್ಪಾದರು ಈ ವಾಕ್ಯದಿಂದ ಸಿದ್ಧಸಾಧನತಾ ದೋಷವನ್ನು ಸಮರ್ಥಿಸುತ್ತಾರೆ.

### ५.४.४ सदसद्वैलक्षण्यं नाम सदसत्व अनाश्रयत्वं

**टीका**

**सदसद्वैलक्षण्यं नाम सदसत्व अनाश्रयत्वं इति चेत्। तथापि न सिद्धसाधनता निस्तारः। सत्वैक स्वभावस्य प्रपञ्चस्य सदसत्व अनङ्गीकारात्।**

ಸದಸದ್ವೈಲಕ್ಷಣ್ಯ ಎಂದರೆ, ಸತ್-ಅಸತ್ವಕ್ಕೆ ಆಶ್ರಯವಿಲ್ಲದ ಎಂದು ಹೇಳುತ್ತೇವೆ ಎಂದರೆ, ಹಾಗಾದರೂ ಕೂಡ ಸಿದ್ಧಸಾಧನತಾ ದೋಷವನ್ನು ನಿರಾಕರಿಸಲು ಆಗುವದಿಲ್ಲ. ಏಕೆಂದರೆ, ನಾವು ಪ್ರಪಂಚವನ್ನು ಸತ್ಯ ಸ್ವಭಾವುಳ್ಳದ್ದು ಎಂದು ಹೇಳುವದರಿಂದ, ಪ್ರಪಂಚವು ಸದಸತ್ವ ಸ್ವಭಾವದ್ದು ಎಂದು ನಾವು ಅಂಗೀಕರಿಸುವದಿಲ್ಲ.

**टिप्पणीनाम् विशेषार्थानि**

**॥ सदसद्वैलक्षण्यं नाम इति ॥**

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**आद्य द्वितीयं शङ्कते–सदसद्वैलक्षण्यं नाम इति॥**

ಮೊದಲನೆ ವಿಕಲ್ಪದಲ್ಲಿಯ ಎರಡನೆ ವಿಕಲ್ಪವನ್ನು ಈ ಟೀಕಾವಾಕ್ಯ ಶಂಕಿಸುತ್ತದೆ.

**विधि अर्थ अभाव इत्यत्र विशब्दस्य अभावार्थतया अभियुक्त व्याख्यानात् सदसद्विलक्षण शब्दस्य, सदसत् लक्षण अभाव परत्वे लक्षणस्य च सन्निधानात् सद्सत् शब्दोपस्थितस्यैव् ग्रहणेन सदसत्व अनधिकरणत्वस्यैव तत् शब्दात् प्रसक्तेः इति भावः।**

विधि ಪದದ ಅರ್ಥ ಅಭಾವಪರ ಎಂದು ತೆಗೆದುಕೊಂಡಲ್ಲಿ, वि ಪದದ ಅಭಾವಾರ್ಥತತ್ಪರ ವ್ಯಾಖ್ಯಾನದಿಂದ, ಸದಸದ್ವಿಲಕ್ಷಣ ಶಬ್ದದ, ಸದಸತ್ ಲಕ್ಷಣ ಅಭಾವಪರತ್ವ ಲಕ್ಷಣದ ಸನ್ನಿಧಾನದಿಂದ, ಸದಸತ್ ಶಬ್ದೋಪಸ್ಥಿತವೇ ಗ್ರಹಿಸುವದಿಂದ, ಸದಸತ್ವ ಅನಧಿಕರಣತ್ವವೇ ಸದಸದ್ವಿಲಕ್ಷಣ ಶಬ್ದದ ಅರ್ಥ ಆಗುತ್ತದೆ ಎಂಬ ಭಾವ.

**॥ सदसत्त्व अनाश्रयत्वं इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**सतः सत्–अन्तरवैलक्षण्येऽपि सत्त्व–अनाश्रयत्वेन, तत् अनाश्रयत्व अभावात् न उक्त दोषः इति भावः।**

ಸತ್ಯ, ಮತ್ತು ಸತ್-ವಿಲಕ್ಷಣವು ಅಂದರೆ, ಸತ್ವದ ಅನಾಶ್ರತ್ವ, ಅವುಗಳ ಅನಾಶ್ರಯತ್ವ ಎಂದರೆ ಅಭಾವವೆಂದಂತಾಗುವದರಿಂದ ಸಿದ್ಧಸಾಧನತಾ ದೋಷ ಉಂಟಾಗುವದಿಲ್ಲ ಎಂಬ ಭಾವ.

### ॥ तथापि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

ननु सदसत्त्व् अनाश्रयत्वं इत्यत्र, सत् च असत् च सदसत् तत्त्व अनाश्रयत्वं साध्यं इति विवक्षितम्। अथवा सत् च असत् च सदसती तयोर्भाव: सदसत्त्वं द्वन्द्वान्ते श्रूयमाणस्त्व प्रत्येकं सम्बध्यते। तथा च् सत्व अनाश्रयत्वे सति असत्व अनाश्रयत्वरूपं विशिष्टं साध्यत इति, आद्यं दूषयति–तथापि इति॥

ಸದಸತ್ ಅನಾಶ್ರಯ ಎಂಬಲ್ಲಿ, ಸತ್ ಮತ್ತು ಅಸತ್ ಕೂಡಿದ ಸದಸತ್ ತತ್ವದ ಅನಾಶ್ರಯತ್ವ ಧರ್ಮವನ್ನು ಸಾಧ್ಯಧರ್ಮ ಎನ್ನುತ್ತೀರೊ, ಅಥವಾ ಸತ್ ಮತ್ತು ಅಸತ್ ಅವುಗಳ ಪ್ರತ್ಯೈಕವಾಗಿ ಸಂಬಂಧವುಳ್ಳ ಅನಾಶ್ರಯತ್ವ ಧರ್ಮವನ್ನು ಸಾಧ್ಯ ಧರ್ಮ ಎನ್ನುತ್ತೀರೊ, ಅಥವಾ ಸತ್ವದ ಅನಾಶ್ರಯತ್ವವಿರುವಾಗ, ಅಸತ್ವದ ಅನಾಶ್ರಯತ್ವರೂಪ ವಿಶಿಷ್ಟತ್ವದಿಂದ ಕೂಡಿದ ಧರ್ಮವನ್ನು ಸಾಧ್ಯಧರ್ಮವೆಂದು ಸಾಧಿಸುತ್ತೀರೊ? ಈ ಮೂರು ವಿಕಲ್ಪಗಳಲ್ಲಿಯ ಮೊದಲ್ನೆ ವಿಕಲ್ಪವನ್ನು ಈ ಟೀಕಾವಾಕ್ಯ ದೂಷಿಸುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

तर्हि सदसत्त्व अनाश्रयत्वं साध्यं इति चेत्, किम् अत्र सदसद्रूपत्वं यत् विशिष्टं तत्त्व अनाश्रयत्वं साध्यते। किम् वा सत्व अनाश्रयत्वं असत्व अनाश्रयत्वं च इति द्वयम् । यद्वा सत्व अनाश्रयत्वे सति असत्व अनाश्रयत्वं नाम विशिष्टम्। इति विकल्प्य आद्यं दूषयति– तथापि इति॥

ಹಾಗಾದರೆ ಸದಸತ್ವ ಅನಾಶ್ರಯತ್ವವನ್ನು ಸಾಧ್ಯಧರ್ಮ ಎನ್ನುತ್ತೇವೆ ಎಂದರೆ, ಸದಸದ್ರೂಪದಿಂದ ವಿಶಿಷ್ಟವಾದ ತತ್ವದ ಅನಾಶ್ರಯತ್ವವನ್ನು ಸಾಧಿಸುತ್ತೀರೊ? ಅಥವಾ, ಸತ್ವದ ಅನಾಶ್ರಯತ್ವ ಮತ್ತು ಅಸತ್ವದ ಅನಾಶ್ರಯತ್ವ ಎಂದು ಪ್ರತ್ಯೇಕವಾಗಿ ಉಭಯಗಳ ಅನಾಶ್ರಯತ್ವ ಧರ್ಮ ಸಾಧಿಸುತ್ತೀರೊ? ಅಥವಾ ಸತ್ವದ ಅನಾಶ್ರಯತ್ವವಿರಲು, ಅಸತ್ವ ಅನಾಶ್ರಯತ್ವ ವಿಶಿಷ್ಟವನ್ನು ಸಾಧಿಸುತ್ತೀರೋ? ಎಂದು ವಿಕಲ್ಪಿಸಿ, ಮೊದಲ್ನೆ ವಿಕಲ್ಪವನ್ನು , ಈ ಟೀಕಾವಾಕ್ಯ ದೂಷಿಸುತ್ತದೆ.

### ॥ सत्वैक स्वभावस्य इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

तत् उपपादयति–सत्वैक स्वभावस्य इति॥

ಮೇಲ ಹೇಳಿದ್ದನ್ನು ಈ ಟೀಕಾವಾಕ್ಯ ಪ್ರಸ್ತಾಪಿಸುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:



किम् अत्र सत्वे सति असत्वरूपं यद्विशिष्टं तत् अनधिकरणत्वं इत्यभिमतं। किम् वा सत्व अनधिकरणत्व् असत्व अनधिकरणत्वं इति धर्मद्वयं इति विकल्पं मनसि निधाय आद्यं निराचष्टे– सत्त्वैक स्वभावस्य इति॥

ಇಲ್ಲಿ, ಸದಸತ್ವ ಅನಾಶ್ರಯತ್ವವೆಂದರೆ ಏನು? ಸತ್ವಧರ್ಮವಿರಲು ಅಸತ್ವರೂಪ, ಅವುಗಳಿಂದ ವಿಶಿಷ್ಟವಾದ ಧರ್ಮಕ್ಕೆ ಆಧಾರ ವಿಲ್ಲದ್ದು ಎಂತಲೋ? ಅಥವಾ ಪ್ರತ್ಯೇಕವಾಗಿ, ಸತ್ವಕ್ಕೆ ಆಧಾರವಲ್ಲದ್ದು ಮತ್ತು ಅಸತ್ವಕ್ಕೂ ಆಧಾರವಲ್ಲದ್ದು ಎಂತಲೋ, ಎಂಬ ವಿಕಲ್ಪಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಮೊದಲನೆ ವಿಕಲ್ಪವನ್ನು ಅಲ್ಲಗೆಳೆಯುತ್ತಾರೆ.

### ॥ सदसत्व अनङ्गीकारात् इति ॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

सत्त्वविशिष्टस्य असत्त्व अनङ्गीकारात् तत् साधने सिद्धसाधनता इति भाव:।

ಪ್ರಪಂಚವನ್ನು ಸತ್ಯವೆಂದು ಹೇಳುವ ನಾವು ಸಹ ಸತ್ವವಿಶಿಷ್ಟಅಸತ್ಯ ಪ್ರಪಂಚಕ್ಕೆ ಅಂಗೀಕರಿಸಿರುವದಿಲ್ಲವಾದ್ದರಿಂದ, ಅದರ ಸಾಧನದಿಂದ ಸಿದ್ಧಸಾಧನತಾ ದೋಷ ಬರುತ್ತದೆ ಎಂಬ ಭಾವವಿರುತ್ತದೆ.

## टीका

## प्रत्येकं उभय अनाश्रयत्वं इति चेत्। तथाऽपि असत्त्व अनाश्रयत्वेन सिद्धसाधनता तादवस्थ्यम्।

ಸದಸತ್ ಅನಾಶ್ರಯತ್ವ ಎಂದರೆ, ಪ್ರತ್ಯೇಕವಾಗಿ ಸತ್ ಮತ್ತು ಅಸತ್ ಎಂಬ ಉಭಯ ಧರ್ಮಗಳಿಗೆ ಆಶ್ರಯವಿಲ್ಲದ್ದು ಎಂದು ಎನ್ನುತ್ತೇವೆ ಎಂದರೆ, ಹಾಗಾದರೂ ಕೂಡ ನಾವು ಪ್ರಪಂಚಕ್ಕೆ ಅಸತ್ವ ಅನಾಶ್ರಯತ್ವವನ್ನು ಅಂಗೀಕರಿಸಿದ್ದರಿಂದ ಸಿದ್ಧಸಾಧನತಾ ಹಾಗೆಯೆ ಉಳಿಯಬೇಕಾಗುತ್ತದೆ.

### टिप्पणीनाम् विशेषार्थानि

### ॥ प्रत्येकं इति॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

द्वितीयं शङ्कते– प्रत्येकं इति॥

ಮೇಲೆ ನಮೂದಿಸಿದ ವಿಕಲ್ಪಗಳಲ್ಲಿಯ ಎರಡನೆ ವಿಕಲ್ಪವನ್ನು ಶಂಕಿಸುತ್ತಾರೆ.

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

द्वितीयं शङ्कते– प्रत्येकं इति॥

ಮೇಲೆ ನಮೂದಿಸಿದ ವಿಕಲ್ಪಗಳಲ್ಲಿಯ ಎರಡನೆ ವಿಕಲ್ಪವನ್ನು ಶಂಕಿಸುತ್ತಾರೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

द्वितीयं शङ्कते– प्रत्येकं इति॥

ಮೇಲೆ ನಮೂದಿಸಿದ ವಿಕಲ್ಪಗಳಲ್ಲಿಯ ಎರಡನೆ ವಿಕಲ್ಪವನ್ನು ಶಂಕಿಸುತ್ತಾರೆ.

## ॥ तथाऽपि असत्त्व इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

दूषयति–तथाऽपि असत्त्व इति॥

ಎರಡನೆ ವಿಕಲ್ಪವನ್ನು ಕೂಡ ಈ ಟೀಕಾವಾಕ್ಯ ದೂಷಿಸುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

किम् अत्र समप्रधातया उभयसाधनं अभिमतं किम् वा विशेषण विशेष्यभावेन इति विकल्पद्वयं मनसि निधाय आद्यं प्रत्याचष्टे– तथापि इति॥

ಇಲ್ಲಿ, ಸಮಪ್ರಧಾನವಾಗಿ ಉಭಯ ಸಾಧನವೆಂದರೆ ಅಸತ್ವ ಅನಾಶ್ರಯತ್ವ ಮತ್ತು ಸತ್ ಅನಾಶ್ರಯತ್ವಗಳನ್ನು ಸಾಧಿಸುವದು ಎಂದು ತಮ್ಮ ಅಭಿಮತವಾಗಿದೆಯೊ ಅಥವಾ ಈ ಧರ್ಮಗಳನ್ನು ವಿಶೇಷಣ ವಿಶೇಷ್ಯಭಾವದಿಂದ ಸಾಧಿಸುವದೊ? ಎಂಬ ವಿಕಲ್ಪದ್ವಯಗಳನ್ನು ಮನಸ್ಸಿನಲ್ಲಿ ಧರಿಸಿ, ಮೊದಲೆನೆ ವಿಕಲ್ಪವನ್ನು ಅಲ್ಲಗೇಳೆಯುತ್ತದೆ ಈ ಟೀಕಾವಾಕ್ಯ.

## ॥ सिद्धसाधनता इति ॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

अंशे सिद्धसाधनता इत्यर्थ:। उपपादन प्रकारस्तु पूर्ववत् एव द्रष्टव्य:।

ಇಲ್ಲಿ ಸಿದ್ಧಸಾಧನತ ಎಂದರೆ ಅಂಶತಃ ಸಿದ್ಧಸಾಧನತಾ ಎಂದರ್ಥ. ಅದರ ಪ್ರತಿಪಾದನೆಯು ಮೇಲೆ ವಿವರಿಸಿದಂತೆಯೆ ಇದೆ ಎಂದು ತಿಳಿಯಬೇಕು.

## टीका

**विशिष्ट साधनात् अदोष इति चेत्। तथाऽपि देशकाल परिच्छिन्नेषु घटादिषु व्यवस्थाश्रयेण सिद्धसाधनता एव इति।**

ಸದಸತ ಅನಾಶ್ರಯತ್ವ ಎಂದರೆ, ಸತ್ವ ಅನಾಶ್ರಯತ್ವ ಇರಲು ಅಸತ್ವ ಅನಾಶ್ರಯತ್ವರೂಪ ವಿಶಿಷ್ಟ , ಎಂದು ಸಾಧಿಸುವದರಿಂದ ದೋಷವಿಲ್ಲ ಎಂದರೆ, ಆಗ ಕೂಡ ದೇಶಕಾಲವ್ಯತ್ಯಾಸ ಮೇರೆಗೆ ಘಟಾದಿಗಳಲ್ಲಿ ಈ ವ್ಯವಸ್ಥಾಶ್ರಯವು ಕಂಡುಬರುವದರಿಂದ ಅಥವಾ ನಾವು ಈಗಾಗಲೆ ಒಪ್ಪಿಂದರಿಂದ ಸಿದ್ಧಸಾಧನತಾ ದೋಷ ಇದ್ದೇ ಇದೆ.





## ॥ विशिष्ट इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

तृतीयं शङ्कते– विशिष्ट इति॥

ಮೇಲೆ ಪ್ರತಿಪಾದಿಸಿದ ವಿಕಲ್ಪಗಳಲ್ಲಿಯ ಮೂರನೆ ವಿಕಲ್ಪವನ್ನು ಈ ಟೀಕಾವಾಕ್ಯ ಶಂಕಿಸುತ್ತದೆ.

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ::

तृतीयं शङ्कते– विशिष्ट इति॥

ಮೇಲೆ ಪ್ರತಿಪಾದಿಸಿದ ವಿಕಲ್ಪಗಳಲ್ಲಿಯ ಮೂರನೆ ವಿಕಲ್ಪವನ್ನು ಈ ಟೀಕಾವಾಕ್ಯ ಶಂಕಿಸುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

द्वितीयं शङ्कते– विशिष्ट इति॥

ಮೇಲೆ ಹೇಳಿದ ವಿಕಲ್ಪಗಳಲ್ಲಿಯ ಎರಡನೆ ವಿಕಲ್ಪವನ್ನು ಈ ಟೀಕಾವಾಕ್ಯ ಶಂಕಿಸುತ್ತದೆ.

## ॥ तथाऽपि इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

ननु तथाऽपि देशकाल इति घटादे: सत्त्व–अनाश्रयत्वं अङ्गीकृत्य परिहार: अभिहित:। स न युक्त:, घटादे: सत्त्व–आश्रयत्व अङ्गीकारात्। स्वदेशकालादि अवच्छेदेन सत्त्वाश्रयस्यापि घटादे: देशान्तरादि अवच्छेदेन सत्त्व–अनाश्रयत्वं च अस्ति इति चेत्, तर्हि देशान्तरादि अवच्छेदेन असत्त्व–आश्रयत्वं च अस्ति इति, सत्त्वैकस्वभावस्य इत्येतद् असङ्गतं स्यात् इति चेत्।

ಇಲ್ಲಿ ಒಂದು ಶಂಕೆಗೆ ಆಸ್ಪದವಿದೆ. ಅದನ್ನು ಹೀಗೆ ವಿವರಿಸಬಹುದು: ಇಲ್ಲಿ ದೇಶಕಾಲ ಮುಂತಾದವುಗಳಿಂದ ಘಟಾದಿಗಳಲ್ಲಿ ಸತ್ವ-ಅನಾಶ್ರಯತ್ವವನ್ನು ಅಂಗೀಕರಿಸಿ, ಪರಿಹಾರವನ್ನು ಹೇಳಲಾಗಿದೆ. ಅದು ಯುಕ್ತವಲ್ಲ, ಏಕೆಂದರೆ ಘಟಾದಿಗಳಲ್ಲಿ ಸತ್ವ-ಆಶ್ರಯತ್ವವನ್ನು ಅಂಗೀಕರಿಸಲೇ ಬೇಕಾಗುತ್ತದೆ. ಇನ್ನು ಸ್ವದೇಶಕಾಲಾದಿ ಅವಚ್ಛೆದದಿಂದ (ಅವಚ್ಛೇದ ಎಂದರೆ ಬೇರ್ಪಡಿಸುವಿಕೆ ಎಂದರ್ಥ) ಸತ್ವ-ಆಶ್ರಯತ್ವವಿದ್ದರೂ ಘಟಾದಿಗಳಿಗೆ ದೇಶಾಂತರಾದಿ ಅವಚ್ಛೇದದಿಂದ ಸತ್ವ-ಅನಾಶ್ರಯತ್ವವು ಇರುತ್ತದಲ್ಲ ಎಂದರೆ, ಹಾಗಾದರೆ ದೇಶಾಂತರಾದಿ ಅವಚ್ಛೆದದಿಂದ ಅಸತ್ವ-ಆಶ್ರಯತ್ವವೂ ಇರಬೇಕಾಗುತ್ತದೆ. ಇದರಿಂದ ಸತ್ವೈಕಸ್ವಭಾವದಲ್ಲಿ ಅಸಂಗತಿ ಉಂಟಾಗುತ್ತದೆ.

मैवं सत्वैकस्वभावस्य इत्यत्र सर्वदेशकाल सम्बन्ध–अभावरूप अत्यंत अभाव प्रतियोगित्वं सत्त्वं विवक्षित्वा सत्त्वैकस्वभावत्वं उक्तम्। तथाऽपि देशकाल इत्यत्र तु "अस्ति इति प्रमितिविषयत्वं सत्त्वं""तत् अविषयत्वं च असत्त्वं" विवक्षित्वा, अन्यदेशादौ सत्त्व–अनाश्रयत्वं स्वदेशादौ असत्त्व–अनाश्रयत्वं च उक्तं इति।

ಅದು ಹಾಗಿರುವದಿಲ್ಲ. ಸತ್ವೈಕಸ್ವಭಾವ ಎಂಬಲ್ಲಿ ಸರ್ವದೇಶಕಾಲ ಸಂಬಂಧದ ಅಭಾವರೂಪ ಅತ್ಯಂತ ಅಭಾವದ ಪ್ರತಿಯೋಗಿತ್ವವು ಸತ್ವವೆಂದು ಅನುಗಣಿಸಿ

ಸತ್ವೈಕಸ್ವಭಾವ ಧರ್ಮವನ್ನು ಹೇಳಲಾಗಿರುತ್ತದೆ. ಅದರಂತೆ ದೇಶಕಾಲ ಎಂಬಲ್ಲಿ, ವಸ್ತುವಿನ ಇರುವಿಕೆಯ  ಪ್ರಮತಿವಿಷಯವಾದದ್ದು ಅದು ಸತ್ವಧರ್ಮ, ಅದರ ವಿಷಯವಲ್ಲದ್ದು ಅದು ಅಸತ್ವ ಧರ್ಮ ಎಂಬ ವಿವಕ್ಷಿತಾರ್ಥದಲ್ಲಿ, ಅನ್ಯದೇಶಾದಿಗಳಲ್ಲಿ ಸತ್ವ ಅನಾಶ್ರಯತ್ವ, ಮತ್ತು ಸ್ವದಶಾದಿಗಳಲ್ಲಿ ಅಸತ್ವ ಅನಾಶ್ರಯತ್ವವನ್ನು ಹೇಳಿರುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**घटादेः देशकाल परिच्छिन्नतया स्वदेशकाल अवच्छेदेन असत्त्व अनाश्रयत्वस्य अन्यदेशकाल अवच्छेदेन सत्त्व–अनाश्रयत्वस्य च सत्त्वेन विशिष्ट साध्यस्यापि सिद्धेः सिद्धसाधनत्वं एव इति परिहरति– तथापि इति॥**

ಘಟಾದಿಗಳಲ್ಲಿ ದೇಶಕಾಲಗಳ ವ್ಯತ್ಯಾಸ ಮೇರೆಗೆ, ಸ್ವದೇಶ ಕಾಲ ಅವಚ್ಛೆದದಿಂದ ಅಸತ್ವ ಅನಾಶ್ರಯತ್ವದ, ಮತ್ತು ಅನ್ಯದೇಶಕಾಲ ಅವಚ್ಛೆದದಿಂದ ಸತ್ವ-ಅನಾಶ್ರಯತ್ವದ ಸತ್ಯತ್ವದಿಂದ ವಿಶಿಷ್ಟ ಸಾಧ್ಯ ಕೂಡ ಸಿದ್ಧವಾಗುವದರಿಂದ ಸಿದ್ಧಸಾಧನತ್ವ ಇದ್ದೆ ಇದೆ ಎಂದು ಈ ಟೀಕಾವಾಕ್ಯ ಉದ್ಭವಿಸಿದ ಶಂಕೆಯನ್ನು ನಿವಾರಿಸುತ್ತದೆ.

**अत्र पूर्वोत्तरग्रन्थ विरोधः चिरन्तन टीकायां एव स्पष्टः।**

ಇಲ್ಲಿ ಪೂರ್ವೋತ್ತರ ಗ್ರಂಥದ ವಿರೋಧವಿರುವದು  ವ್ಯಾಸತೀರ್ಥರ ವ್ಯಾಖ್ಯಾನದಿಂದಲೇ ಸ್ಪಷ್ಟವಾಗುತ್ತದೆ.

## ॥ व्यवस्थाश्रयेण इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**अस्मिन् देशे सन् देशान्तरे असन्, अस्मिन् काले सन् कालान्तरेअसन्, इत्येवं घटादीनां देशकालव्यवस्थया सदसत्व आश्रयेणेन, देशान्तरीय कालान्तरीय सत्व–अनाश्रयत्वस्य एतत् देशकालीन असत्व अनाश्रयत्वस्य च सिद्धत्वात् सिद्धसाधनता इत्यर्थः।**

ಸ್ವದೇಶದಲ್ಲಿ ಸತ್ಯ, ದೇಶಾಂತರದಲ್ಲಿ ಅಸತ್ಯ, ಈಗಿನ ಕಾಲದಲ್ಲಿ ಸತ್ಯ ಕಾಲಾಂತರದಲ್ಲಿ ಅಸತ್ಯ ಎಂದು ಈ ಪ್ರಕಾರದ ಘಟಾದಿಗಳಿಗೆ ದೇಶಕಾಲವ್ಯವಸ್ಥೆ ಮೇರೆಗೆ ಸದಸತ್ವ ಆಶ್ರಯ ಲಭಿಸುವದರಿಂದ , ದೇಶಾಂತರೀಯ ಕಾಲಾಂತರೀಯ ಸತ್ಯತ್ವದ ಅನಾಶ್ರಯತ್ವವು, ಈ ದೇಶಕಾಲೀನ ಅಸತ್ಯತ್ವ ಅನಾಶ್ರಯತ್ವಕ್ಕೆ ಲಭಿಸುತ್ತದೆ ಎಂದು ಸಿದ್ಧವಾಗಿರುವದರಿಂದ, ಸಿದ್ಧಸಾಧನತಾ ದೋಷ ಉಂಟಾಗುತ್ತದೆ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**घटादीनां स्वदेशकालयोः असत्वं न, देशान्तरकालयोः सत्व न इति अङ्गीकारेण सत्त्व–अनधिकरणत्वविशिष्ट असत्व–अनधिकरणत्वस्य सिध्या सिद्धसाधनता एव इति भावः।**

ಘಟಾದಿಗಳಿಗೆ ಸ್ವದೇಶಕಾಲಗಳಲ್ಲಿ ಅಸತ್ವ ಇರುವದಿಲ್ಲ, ದೇಶಾಂತರಕಾಲಗಳಲ್ಲಿ ಸತ್ವ ಇರುವದಿಲ್ಲ ಎಂದು ಅಂಗೀಕರಿಸಿದ್ದರಿಂದ, ಸತ್ಯತ್ವಕ್ಕೆ-ಆಧಾರವಲ್ಲದ ವಿಶಿಷ್ಟ ಅಸತ್ಯತ್ವಕ್ಕೆ-



ಆಧಾರವಿಲ್ಲತ್ವವು ಸಿದ್ಧವಾಗಿರುವದರಿಂದ ಸಿದ್ಧಸಾಧನತಾ ದೋಷ ಉಳದೆ ಉಳಿಯುತ್ತದೆ ಎಂಬ ಭಾವ.

**एतेन घटादीनां स्वदेशकालयोः सत्वं, देशान्तरे कालान्तरे वा असत्व इति व्यवस्थाश्रयणेन घटादीनां सदसत्व लाभेऽपि सत्व–अनाश्रयत्वविशिष्ट असत्व–अनाश्रयत्व अलाभात्, न सिद्धसाधनता इति निरस्तम्।**

ಇದರಿಂದ ಘಟಾದಿಗಳಿಗೆ ಸ್ವದೇಶಕಾಲಗಳಲ್ಲಿ ಸತ್ಯತ್ವ, ದೇಶಾಂತರ ಕಾಲಾಂತರಗಳಲ್ಲಿ ಅಸತ್ಯತ್ವ ಎಂಬ ವ್ಯವಸ್ಥೆಯ ಆಶ್ರಯ ಮೆರೆಗೆ, ಘಟಾದಿಗಳಿಗೆ ಸದಸತ್ವ ಲಭಿಸಿದರೂ ಸತ್ಯತ್ವ-ಅನಾಶ್ರಯತ್ವವಿಶಿಷ್ಟ ಅಸತ್ಯತ್ವ ಅನಾಶ್ರಯತ್ವ ಲಭಿಸಲಾರದ್ದರಿಂದ  ಸಿದ್ಧಸಾಧನತಾ ದೋಷ ಉಂಟಾಗುವದಿಲ್ಲ ಎಂಬುದನ್ನು ತಳ್ಳಿಹಾಕಲಾಯಿತು.

**उपलक्षणं एतत् धर्माणाम्। प्रातिस्त्विकत्वेन देशादि अपरिच्छिन्नेषु अपि, गगनादिषु परकीयसत्व अनधिकरणत्वस्य विद्यमानत्वेन सत्व–अनधिकरणत्वविशिष्ट असत्व–अनधिकरणत्वस्य सत्वेन सिद्धसाधनता इति द्रष्टव्यम्।**

ಈ ಧರ್ಮಗಳ ಉಪಲಕ್ಷಣರೂಪವಾಗಿ, ದೇಶಾದಿಗಳಂತೆ ಬೇರ್ಪಡಿಸಲಾಗದ ಅಸಾಧಾರಣಧರ್ಮದಿಂದ ಕೂಡಿದ ಗಗಾನಾದಿಗಳಲ್ಲಿಯೂ ಕೂಡ ಪರಕೀಯ ಸತ್ಯತ್ವದ ಆಶ್ರಯತ್ವವಲ್ಲತ್ವವು ಇರುವದರಿಂದ, ಸತ್ಯತ್ವ-ಆಧಾರಪಡೆಯದ ವಿಶಿಷ್ಟ ಅಸತ್ಯತ್ವದ ಆಶ್ರಯವಲ್ಲತ್ವವು, ಸತ್ಯವಾದುದರಿಂದ ಸಿದ್ಧಸಾಧನತಾ ದೋಷ ಉಂಟಾಗುತ್ತದೆ  ಎಂದು ತಿಳಿಯಬೇಕು.

### ५.४.५ सिद्धान्तिनामनिष्टस्य सदसद्वैलक्षण्स्य मिथ्यात्वरूपत्वे अप्रसिद्धविशेषणतादोषः

## टीका

**अथैवं ब्रूयात् यादृशं सदसद्वैलक्षण्यं सद्वादीनां अनिष्टं तन्मिथ्यात्वं इति। तत्र अपि एतदेव उत्तरम्। तथा हि– सदसद्वैलक्षण्ये मिथ्यात्वे अङ्गीक्रियमाणे सति असिद्धसाधनता अप्रसिद्धविशेषणता भवति इति। एतत् च दृष्टान्त व्युदास प्रस्तावे वक्ष्यामः। सर्वत्र असद्वैलक्षण्य साधन वैयर्थ्यं च।**

ನಾವು ಹೀಗೆ ಹೇಳುತ್ತೇವೆ: ಯಾವತರಹದ ಸದಸದ್ವೈಲಕ್ಷಣ್ಯ ಪದದ ಅರ್ಥಮಾಡಿದಲ್ಲಿ ಅದು ಸತ್ಯವಾದಿಗಳಿಗೆ ಅನಿಷ್ಟವಾಗಿರುತ್ತದೊ, ಅದು ಮಿಥ್ಯಾ ಪದದ ಅರ್ಥ. ಪರಪಕ್ಷದವರು ಹೀಗೆ ಪ್ರತಿಪಾದಿಸಿದರೆ ಅಲ್ಲಿ ಕೂಡ ನಮ್ಮದು ಮೇಲೆ ಮೂಲದಲ್ಲಿಯ  ಶ್ರೀಮದಾಚಾರ್ಯರ ಉತ್ತರವೇ ಆಗಿರುತ್ತದೆ. ಅಂದರೆ ಇಲ್ಲಿ ಮೂಲದಲ್ಲಿಯ  ಶ್ರೀಮದಾಚಾರ್ಯರ ವಾಕ್ಯವನ್ನು " सदसद्वैलक्षण्ये मिथ्यात्वे असिद्धसाधनता" ಎಂದು ಪದವಿಭಾಗ ಮಾಡಬೇಕು. ಅದನ್ನು ಮತ್ತಿಷ್ಟು ಸ್ಪಷ್ಟವಾಗಿ ಹೀಗೆ ವಿವರಿಸಬಹುದು: ಇಂತಹ ಸದಸದ್ವೈಲಕ್ಷಣ್ಯವನ್ನು ಮಿಥ್ಯಾತ್ವ

ಎಂದು ಅಂಗೀಕರಿಸಿದರೆ, ಅಸಿದ್ಧಸಾಧನತಾ ಅಂದರೆ ಅಪ್ರಸಿದ್ಧವಿಶೇಷಣತಾ ಎಂದರ್ಥ. ಇದನ್ನು ಮಿಥ್ಯಾತ್ವ ಅನುಮಾನದ ದೃಷ್ಟಾಂತ ನಿರಾಕರಿಸುವ ಸಂದರ್ಭದಲ್ಲಿ ವಿವರಿಸಲಾಗುವದು. ಹಾಗೂ ಈತರಹದ ಸದಸದ್ವೈಲಕ್ಷಣ್ಯ ಪದದ ಅರ್ಥಮಾಡಿದಲ್ಲಿ, ಮೇಲಿನ ಎಲ್ಲ ವಿಕಲ್ಪಗಳಲ್ಲಿಯ ಅಸದ್ವೈಲಕ್ಷಣ್ಯ ಸಾಧನೆಗೆ ವೈಯರ್ಥ ಉಂಟಾಗುತ್ತದೆ.

## टिप्पणीनाम् विशेषार्थानि

### ॥ यादृशं इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

देशान्तरे कालान्तरे च असत्वं उभयवादि सिद्धम्। स्वदेशकालयो: सत्वं सद्वादीनां इष्टम्। तत् अपि नास्ति इति उच्यते। तथा च सर्वथा सत्व-अनधिकरणत्वे सति असत्व-अनधिकरणत्वरूपं, सदसत्व अनधिकरणत्वं सद्वादीनां अनिष्टं इति तदेव मया साध्यत इत्यर्थ:।

ದೇಶಾಂತರ ಮತ್ತು ಕಾಲಾಂತರಗಳಲ್ಲಿ ಅಸತ್ಯತ್ವವು ಉಭಯವಾದಿಗಳಿಗೆ ಸಿದ್ಧವಾದ ವಿಷಯವಾಗಿದೆ. ಸ್ವದೇಶಕಾಲಗಳಲ್ಲಿ ಸತ್ಯತ್ವ ಸತ್ಯವಾದಿಗಳಿಗೆ ಇಷ್ಟವಾದದ್ದಾಗಿರುತ್ತದೆ. ಅದು ಕೂಡ ಇಲ್ಲ ಎಂದು ನಾವು ಹೇಳುತ್ತೇವೆ ಎಂದರ್ಥ. ಅದರಂತೆ, ಸರ್ವಥಾ ಸತ್ಯತ್ವಕ್ಕೆ ಆಧಾರವಿಲ್ಲದ್ದಿರುವಾಗ ಅಸತ್ಯತ್ವಕ್ಕೆ ಆಧಾರವಿಲ್ಲದ್ದಾಗಿರುವರೂಪ, ಸದಸತ್ವ ಕ್ಕೆ ಆಧಾರವಿಲ್ಲದ್ದು, ಅದು ಸತ್ಯವಾದಿಗಳಿಗೆ ಅನಿಷಟವಾದದ್ದು, ಅದನ್ನು ನಾನು ಸಾಧಿಸುತ್ತೇನೆ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

सर्वथा सत्व-अनधिकरणत्वे सति असत्व-अनधिकरणत्वं सदसत्व-अनधिकरण्वं इत्यर्थ:।

ಸರ್ವಥಾ ಸತ್ಯತ್ವಕ್ಕೆ ಆಧಾರವಿಲ್ಲದ್ದಿರುವಾಗ ಅಸತ್ಯತ್ವಕ್ಕೆ ಆಧಾರವಿಲ್ಲದ್ದಾಗಿರುವರೂಪ, ಸದಸತ್ವ ಕ್ಕೆ ಆಧಾರವಿಲ್ಲದ್ದು, ಅದು ಸತ್ಯವಾದಿಗಳಿಗೆ ಅನಿಷಟವಾದದ್ದು, ಅದನ್ನು ನಾನು ಸಾಧಿಸುತ್ತೇನೆ ಎಂದರ್ಥ.

### ॥ तत्र अपि एतदेव उत्तरम् इति॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

असिद्धसाधनता इति पदविभागं आश्रित्य तत् परिहाराय तदेव वाक्यं व्याचष्टे- तत्र अपि एतदेव उत्तरं इति॥

ಇಲ್ಲಿ ಶ್ರೀಮದಾಚಾರ್ಯರ ಮೂಲವಾಕ್ಯದಲ್ಲಿ, ಅಸಿದ್ಧಸಾಧನತಾ ಎಂಬ ಪದವಿಭಾಗವನ್ನು ಆಶ್ರಯಿಸಿ, ಈ ಶಂಕೆಯನ್ನು ಪರಿಹರಿಸಲು, ಮೂಲವಾಕ್ಯವನ್ನೆ ಪ್ರಸ್ತುತ ಟೀಕಾವಾಕ್ಯದಿಂದ ವ್ಯಾಖ್ಯಾನಿಸುತ್ತಾರೆ.

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

सदसद्वैलक्षण्यं इति मूलवाक्येन इत्यर्थ:। एतत् अप्रसिद्धविशेषणत्वं।



ಸದಸದ್ವೈಲಕ್ಷಣ್ಯ, ಎಂಬ ಶ್ರೀಮದಾಚಾರ್ಯರ ಮೂಲವಾಕ್ಯದಿಂದ ಎಂದರ್ಥ. ಅದು ಅಪ್ರಸಿದ್ಧವಿಶೇಷಣತ್ವ ಎನಿಸುತ್ತದೆ.

### ॥ एतत् च इति ॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ

ननु च ख्याति बाध अन्यथा अनुपपत्या उक्तरूप सदसद्विलक्षणत्वस्य शुक्तिरूप्ये सिद्धत्वात् कथं अप्रसिद्धविशेषणत्वं इत्यत् आह- एतत् च इति॥

ಪ್ರತಿಪಾದಿಸಿದ ಸದಸದ್ವಿಲಕ್ಷಣವು ಶುಕ್ತಿರೂಪ್ಯದಲ್ಲಿ ಸಿದ್ಧವಾಗಿದ್ದಾಗ ಮತ್ತು ಹಾಗಿಲ್ಲದಿದ್ದರೆ ಅರಿವಿನ ಬಾಧಕವೇ ಯೋಗ್ಯವೆನಿಸಲಾರದು. ಹೀಗಿರುವಾಗ, ಅಪ್ರಸಿದ್ಧವಿಶೇಷಣತ್ವವು ಹೇಗೆ ಕೂಡುತ್ತದೆ ಎಂಬ ಶಂಕೆಯನ್ನು ದೂರಮಾಡಲು ಈ ಟೀಕಾವಾಕ್ಯ ಹೊರಟಿರುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

ननु अप्रसिद्धविशेषणता इति अयुक्तम्। दृष्टान्त सद्भावेन तत्रैव साध्यस्य प्रसिद्धत्वात्, अन्यथा दृष्टान्तत्वं न स्यात इत्यत आह- एतत् च इति॥

दृष्टान्तस्य साध्यवैकल्ये अभिहिते विशेषणस्य असिद्धि: सिद्धा भवति।

ಇಲ್ಲಿ ಅಪ್ರಸಿದ್ಧವಿಶೇಷಣತಾ ಹೇಳುವದು ಅಯುಕ್ತವಾಗಿದೆ. ಏಕೆಂದರೆ, ಶುಕ್ತಿರಜತ ಎಂಬ ದೃಷ್ಟಾಂತ ಇರುವಾಗ ಅಲ್ಲಿಯೆ ಮಿಥ್ಯಾತ್ವ ಅನುಮಾನದ ಸಾಧ್ಯ ಪ್ರಸಿದ್ಧವಿರುವಾಗಿರುತ್ತದೆ, ಇಲ್ಲವಾದರೆ ಆ ದೃಷ್ಟಾಂತವೆ ಇರಬಾರದಾಗಿತ್ತು. ಈ ಸಂಶವನ್ನು ದೂರಮಾಡಲು, ಈ ಟೀಕಾವಾಕ್ಯವಿರುತ್ತದೆ.

ಹಾಗೂ ಮುಂದೆ ಗ್ರಂಥದಲ್ಲಿ, ಪ್ರತಿಪಾದಿಸಿದ ದೃಷ್ಟಾಂತಕ್ಕೆ ಸಾಧ್ಯವೈಕಲ್ಯ ಎಂಬ ದೋಷವನ್ನು ಹೇಳಿದ್ದರಿಂದ, ಸಾಧ್ಯಧರ್ಮರೂಪ ವಿಶೇಷಣವು ಅಸಿದ್ಧವಾಗಿದೆ ಎಂದು ಸಿದ್ಧಮಾಡಲಾಗಿದೆ.

### ॥ वक्ष्याम इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

शुक्तिरजतस्य अपि अनिर्वचनीयत्व अभावात् साध्यविकलो दृष्टान्त इति अत्र इत्यर्थ:। तत्र शुक्तिरजतादे: असत्वेन तत् अनधिकरणत्व अभावस्य उपपादितत्वात् इति भाव:।

ಮುಂದೆ ಗ್ರಂಥದಲ್ಲಿ, ಶುಕ್ತಿರಜತಕ್ಕೆ ಕೂಡ ಅನಿರ್ವಚನಿಯತ್ವ ಎಂದೆನ್ನಲು ಬರುವದಿಲ್ಲ ಎಂದು ಪ್ರದಿಪಾದಿಸಿ ಸಾಧ್ಯವಿಕಲ ಎಂಬ ದೃಷ್ಟಾಂತ ದೋಷವನ್ನು ಹೇಳಲಾಗಿದೆ ಎಂದರ್ಥ. ಹಾಗೂ ಅಲ್ಲಿ ಶುಕ್ತಿರಜತ ಅಸತ್ಯವಾಗಿರುವದರಿಂದ ಅದು ಅಸತ್ಯತ್ವಕ್ಕೆ ಆಧಾರವಿಲ್ಲದ್ದು ಎಂದು ಹೇಳಲಾಗುವದಿಲ್ಲ ಎಂದು ಪ್ರತಿಪಾದಿಸಲಾಗಿದೆ ಎಂಬ ಭಾವ ಇರುತ್ತದೆ.

### ॥ सर्वत्र इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**प्रत्येकं उभयवैलक्षण्यं साधनपक्षे, प्रत्येकं उभय-अनाश्रयत्व साधनपक्षे, विशिष्ट साधनपक्षे च असद्वैलक्षण्ये साधने सिद्धसाधनता उक्त्वा व्यर्थ विशेष्यत्वरूप दोषान्तरं आह – सर्वत्र इति॥**

ಈತರಹದ ಸದಸದ್ವೈಲಕ್ಷಣ್ಯತ್ವವನ್ನು ಪರಪಕ್ಷದವರು ಸಾಧಿಸಲು ಹೊರಟರೆ, ಮೇಲಿನ ಎಲ್ಲ ಪ್ರತಿಪಾದಿಸಿದ ವಿಕಲ್ಪಗಳಲ್ಲಿಯ ಅಂದರೆ, ಪ್ರತ್ಯೇಕ ಹಾಗೂ ಉಭಯವೈಲಕ್ಷಣ್ಯ ಸಾಧನಪಕ್ಷ, ಪ್ರತ್ಯೇಕ ಹಾಗೂ ಉಭಯ-ಅನಾಶ್ರಯತ್ವ ಸಾಧನಪಕ್ಷ, ಮತ್ತು ವಿಶಿಷ್ಟ ಸಾಧನಪಕ್ಷ ಗಳಲ್ಲಿಯ ಅಸದ್ವೈಲಕ್ಷಣ್ಯದ ಸಾಧನೆಯನ್ನು ಸಿದ್ಧಸಾಧನತಾ ಎಂಬ ದೋಷವನ್ನು ಹೇಳಿ, ಈಗ ಈ ಟೀಕಾವಾಕ್ಯದಿಂದ ವ್ಯರ್ಥ ವಿಶೆಷ್ಯತ್ವರೂಪ ದೋಷಾಂತರವನ್ನು ಪ್ರತಿಪಾದಿಸುತ್ತಾರೆ.

<u>ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:</u>

**सदसद्वैलक्षण्यं साध्यं इति पक्षे, तथा सद्वैलक्षण्येन सह असद्वैलक्षण्यं साध्यं इति पक्षे, सद्वैलक्षण्य विशिष्ट असद्वैलक्षण्यं साध्यं इति पक्षे, यादृशं सदसद्वैलक्षण्यं सद्वादिनां अनिष्टं तादृशं साध्यं इति पक्षे, च असद्वैलक्षण्यं व्यर्थं। सदसत्व अनाश्रयत्वं इत्यादि पक्षेषु असत्व अनाश्रयत्वं साधनं व्यर्थं इति भावः।**

**एतेन सदसत्व अनाश्रयत्व इत्यादि पक्षेषु असद्वैलक्षण्य साधन अभाव वैयर्थ्य अभिधानं युक्तं इति परस्तम्।**

ಸದಸದ್ವೈಲಕ್ಷಣ್ಯವನ್ನು ಸಾಧಿಸುವ ಪಕ್ಷದಲ್ಲಿ, ಹಾಗೆಯೆ ಸದವೈಲಕ್ಷಣ್ಯದ ಜೊತೆ ಅಸದ್ವೈಲಕ್ಷಣ್ಯಾನ್ನು ಸಾಧಿಸುವ ಪಕ್ಷದಲ್ಲಿ, ಸದ್ವೈಲಕ್ಷಣ್ಯ ವಿಶಿಷ್ಟ ಅಸದ್ವೈಲಕ್ಷಣ್ಯವನ್ನು ಸಾಧಿಸುವ ಪಕ್ಷದಲ್ಲಿ, ಮತ್ತು ಯಾವ ಸದಸದ್ವೈಲಕ್ಷಣ್ಯದಿಂದ ಸತ್ಯವಾದಿಗಳಿಗೆ ಅನಿಷ್ಟವೋ ಅಂತಹದನ್ನು ಸಾಧಿಸುವ ಪಕ್ಷದಲ್ಲಿ, ಇವೆಲ್ಲಕಡೆ ಅಸದ್ವೈಲಕ್ಷಣ್ಯ ಸಾಧನೆಗೆ ವೈಯರ್ಥ ಉಂಟಾಗುತ್ತದೆ. ಹಾಗೂ ಸದಸತ್ವ ಅನಾಶ್ರಯತ್ವ ಮುಂತಾದ ಕಡೆಯಲ್ಲಿ ಕೂಡ ಅಸತ್ವ ಅನಾಶ್ರಯತ್ವ ಸಾಧನೆಯು ವ್ಯರ್ಥವಾಗುತ್ತದೆ ಎಂಬ ಭಾವ.

ಇದರಿಂದ, ಸದಸತ್ವ ಅನಾಶ್ರಯತ್ವ ಮುಂತಾದವುಗಳ ಪಕ್ಷಗಳಲ್ಲಿ, ಅಸದ್ವೈಲಕ್ಷಣ್ಯ ಸಾಧನ ಅಭಾವಕ್ಕೆ ವೈಯರ್ಥವೆಂದು ಹೇಳುವದು ಯುಕ್ತವೆಂದು ಹೇಳುವ ಮತವನ್ನು ನಿರಾಕರಿಸಲಾಯಿತು.

<u>ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:</u>

**विशिष्ट साधन पक्षेऽपि " प्रर्वतः प्रमेयत्वे सति अग्निमान्" इत्यादाविव अंशे सिद्धसाधनता दुर्वारः। "प्रामाण्यं स्वतो ज्ञायते" इत्यादौ "ज्ञायते" इति अनुक्त्वा विप्रतिपन्न स्वतस्त्वमात्रस्य साधयितुं अशक्यत्वात् न सिद्धसाधनता। न च एवं प्रकृते। "असद्विलक्षणत्वम्", इति अनुक्त्वापि विप्रतिपन्नसद्विलक्षणत्वमात्रस्य साधयितुं शक्यत्वात् इति भावः।**

ಸತ್ಯತ್ವ ಆಶ್ರಯವಲ್ಲದ ವಿಶಿಷ್ಟ ಅಸತ್ಯತ್ವ ಆಶ್ರಯವಲ್ಲದ ಎಂಬ ಸಾಧನ ಪಕ್ಷದಲ್ಲಿ ಕೂಡ " ಪರ್ವತವು ಪ್ರಮೆಯತ್ವವಿರುವಾಗ ಅಗ್ನಿವುಳ್ಳದ್ದು" ಇತ್ಯಾದಿಗಳಂತೆ ಅಂಶತಃ ಸಿದ್ಧಸಾಧನತಾವನ್ನು ಪರಿಹರಿಸಲಾಗುವದಿಲ್ಲ.



ಇನ್ನು, "प्रामाण्यं स्वतो ज्ञायते" ಇತ್ಯಾದಿಗಳಲ್ಲಿ "ज्ञायते" ಎಂದು ಹೇಳದೆ "विप्रतिपन्न स्वतस्त्वमात्रं" ಎಂದು ಸಾಧಿಸಲು ಅಶಕ್ಯವಾಗಿರುವದರಿಂದ ಇಲ್ಲಿ ಸಿದ್ಧಸಾಧನತಾ ಹೇಳಲಾಗುವದಿಲ್ಲ. ಆದರೆ ಪ್ರಕೃತದಲ್ಲಿ ಹಾಗಿರುವದಿಲ್ಲ, "असद्विलक्षणत्वम्", ಎಂದು ಹೇಳದಿದ್ದರೂ ಕೂಡ, "विप्रतिपन्नसद्विलक्षणत्वमात्रं" ಎಂಬುದನ್ನು ಸಾಧಿಸಲು ಶಕ್ಯವಾಗಿರುತ್ತದೆ. ಆದ್ದರಿಂದ ಎಲ್ಲಕಡೆ ಅಸದ್ವಿಲಕ್ಷಣ್ಯತ್ವವನ್ನು ಸಾಧಿಸುವದು ವ್ಯರ್ಥವಾಗಿರುತ್ತದೆ ಎಂಬ ಭಾವ.

<u>ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:</u>

**असद्विलक्षणत्वं अनुपादाय विप्रतिपन्नसद्विलक्षणत्वमात्रस्यैव साधयितुं शक्यत्वात् इति भावः।**

ಇಲ್ಲಿ ಅಸದ್ವಿಲಕ್ಷಣತ್ವವನ್ನು ತೆಗೆದುಕೊಳ್ಳದೆ ವಿವಾದಾಸ್ಪದದಿಂದ ಕೂಡೀದ ಸದ್ವಿಲಕ್ಷಣಮಾತ್ರ ಎಂಬ ಧರ್ಮವನ್ನು ಸಾಧಿಸಲು ಶಕ್ಯವಾಗಿರುತ್ತದೆ, ಆದ್ದರಿಂದ ಎಲ್ಲಕಡೆ ಅಸದ್ವಿಲಕ್ಷಣ ಸಾಧಿಸುವದು ವ್ಯರ್ಥವಾಗಿದೆ ಎಂಬ ಭಾವ.

## *೫.೫ सत्यविवेकस्य मिथ्यात्वरूपत्वे सिद्धसाधनता*

### ೫.೫.१ सत्यविवेकं नाम सत्यभिन्नत्वं

**टीका**

**सत्यविवेकस्य मिथ्याभावस्य साध्यत्वात् न उक्त दोष इति चेत् न। सत्यान्तरविवेक अङ्गीकारेण सिद्धसाधनत्वात्।**

ಸತ್ಯವಿವೇಕವನ್ನು ಮಿಥ್ಯಾಭಾವಕ್ಕೆ ಸಾಧಿಸುತ್ತೇವೆ ಎಂದರೆ ಸಿದ್ಧಸಾಧನತಾ ದೋಷ ಉಂಟಾಗುವದಿಲ್ಲ ಎಂದರೆ, ಅದು ಹಾಗಿರುವದಿಲ್ಲ. ಸತ್ಯವಿವೇಕವೆಂದರೆ ಸತ್ಯಕ್ಕಿಂತಲೂ ಬೇರೆಯಾದದ್ದು ಅಥವಾ ಸತ್ಯಕ್ಕಿಂತ ಭಿನ್ನವಾದದ್ದು ಎಂದರ್ಥ. ಎರಡು ವಸ್ತುಗಳಲ್ಲಿಯ ಸತ್ಯಾಂತರವಿವೇಕವನ್ನು ಅಂದರೆ, ಉದಾಹರಣೆಗೆ ಘಟವು ಪಟಸತ್ಯಕ್ಕಿಂತ ಬೇರೆ ಆಗಿದೆ ಎಂದು ಮುಂತಾಗಿ ನಾವು ಈಗಾಗಲೆ ಅಂಗೀಕರಿಸಿದ್ದರಿಂದ ಸಿದ್ಧಸಾಧನತಾ ದೋಷ ಹಾಗೆಯೆ ಉಳಿಯುತ್ತದೆ ಎಂಬ ಭಾವ.

<u>**टिप्पणीनाम् विशेषार्थानि**</u>

**॥ सत्यविवेकस्य इति॥**

<u>ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:</u>

सत्यभिन्नस्य इत्यर्थः। सत्यविविक्तस्य इति यावत्।
ಸತ್ಯವಿವೇಕ ಎಂದರೆ ಸತ್ಯಕ್ಕಿಂತ ಭಿನ್ನ ಎಂದರ್ಥ. ಸತ್ಯವಿವಿಕ್ತ ಎಂದರೆ ಸತ್ಯಕ್ಕಿಂತ ಬೇರೆಯಾದ ಎಂದರ್ಥ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

अत्र वदन्ति "गुणादिकं गुण्यादिना भिन्नाभिन्नं समानाधिकरणत्वात्" इत्यत्र तार्किक अङ्गीकृत भिन्नत्वस्येव व्यापक विशेषणानाम् उद्देश्य प्रतीति अर्थत्वात्, इह च सद्विलक्षणत्वे सति असद्विलक्षण्त्वं इति प्रतीतेः उद्देश्यत्वात् न असद्विलक्षणत्व साधन वैयर्थ्यं।
ಇಲ್ಲಿ ಪರಪಕ್ಷದವರು ಹೀಗೆ ಹೇಳುತ್ತಾರೆ, "ಗುಣಾದಿಗಳು ಗುಣ್ಯಾದಿಗಳಿಗೆ ಭಿನ್ನ-ಅಭಿನ್ನ ಸಮಾನಾಧಿಕರಣವಾಗಿರುತ್ತವೆ" ಎಂಬಲ್ಲಿ ತಾರ್ಕಿಕರು ಅಂಗೀಕರಿಸಿದ ಭಿನ್ನತ್ವವೆ ವ್ಯಾಪಕ ವಿಶೇಷಣಗಳ ಉದ್ದೇಶ್ಯ ಪ್ರತೀತಿ ಅರ್ಥವಾಗಿರುವದರಿಂದ, ಈ ಪ್ರಕೃತದಲ್ಲಿ ಸದಸದ್ವಿಲಕ್ಷಣತ್ವವಿರಲು ಅಸದ್ವಿಲಕ್ಷಣತ್ವವು ಪ್ರತೀತಿ ಉದ್ದೇಶ್ಯವಾಗಿರುವದರಿಂದ ಅಸದ್ವಿಲಕ್ಷಣತ್ವ ಸಾಧನ ವೈಯರ್ಥ್ಯವೆನಿಸುವದಿಲ್ಲ.

न च अभेदे सत्यपि घटः कलश इति सामानाधिकरण्य दर्शनात्, अप्रयोजकत्व निरासाय विशिष्ट धियः तत्र उद्देश्यत्वेऽपि, प्रकृते तादृश प्रयोजन अदर्शनेन विशिष्ट धिय उद्देश्यत्व अनुपपत्तेः वैयर्थ्यं इति वाच्यं। तुच्छे सद्विलक्षणत्वे सत्यपि दृश्यत्व अदर्शनेन प्राप्त अप्रयोजकत्व शङ्का निरासाय एव। प्रकृतेऽपि तथाधिय उद्देश्यत्वेन वैयर्थ्य अयोगात्।
ಘಟ ಮತ್ತು ಕಲಶಗಳಲ್ಲಿ ಅಭೇದವು ಸತ್ಯವಿದ್ದರೂ ಸಾಮಾನಾಧಿಕರಣ್ಯ ಕಂಡುಬರುವದರಿಂದ, ಅಪ್ರಯೋಜಕತ್ವವನ್ನು ನಿರಾಕರಿಸಲು ವಿಶಿಷ್ಟ ಬುದ್ಧಿ ಅಲ್ಲಿ ಉದ್ದೇಶ್ಯವೆನಿಸಿದರೂ, ಪ್ರಕೃತದಲ್ಲಿ ಆಂತಹ ಪ್ರಯೋಜನ ಕಂಡುಬರಲ್ಲಾದ್ದರಿಂದ ವಿಶಿಷ್ಟ ಬುದ್ಧಿ ಉದ್ದೇಶತ್ವವು ಅಸಂಗತವೆನಿಸುವದರಿಂದ ವೈಯರ್ಥ್ಯವನ್ನು ಹೇಳಲು ಬರುವದಿಲ್ಲ. ಆದ್ದರಿಂದ ಪ್ರಕೃತದಲ್ಲಿ ಅಂತಹ ಬುದ್ಧಿ ಉದ್ದೆಶ್ಯತ್ವದಿಂದ ವೈಯರ್ಥ ಹೇಳುವದು ಅಯೋಗ್ಯವೆನಿಸುತ್ತದೆ.

अत एव न्यायामृतेऽपि व्यर्थ विशेषणं न इत्युक्तं तत् कथं एतत् इति, आनन्दबोधोक्त मिथ्यात्व निर्वचनम् आशङ्कते – सत्यविवेक इति॥
ಆದ್ದರಿಂದ ನ್ಯಾಯಾಮೃತದಲ್ಲಿ ಕೂಡ ವ್ಯರ್ಥ ವಿಶೇಷಣವನ್ನು ನಿರಾಕರಿಸಲಾಗಿದೆ ಅದು ಹೇಗೆ,? ಅದಕ್ಕೆ ಆನಂದಬೋಧದಲ್ಲಿ ಪ್ರತಿಪಾದಿಸಿದ ಮಿಥ್ಯಾತ್ವದ ಅರ್ಥವಿಮರ್ಶಣೆಯನ್ನು, ಈ ಟೀಕಾವಾಕ್ಯ ಆಶಂಕಿಸುತ್ತದೆ.

॥ मिथ्याभावस्य इति॥
ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:
मिथ्याया भावो धर्मो मिथ्यात्वं तस्य इत्यर्थः।
ಮಿಥ್ಯಾ ಭಾವವುಳ್ಳ ಧರ್ಮ ಮಿಥ್ಯಾತ್ವ ಎಂದರ್ಥ.

॥ सत्यान्तर इति॥



ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:
सत्यविविक्तत्वरूप मिथ्यात्व साधनपक्षेऽपि पूर्ववत् सिद्धसाधनता इति आह – सत्यान्तर इति॥
ಸತ್ಯವಿವಿಕ್ತರೂಪ ಮಿಥ್ಯಾತ್ವವನ್ನು ಸಾಧನವಿಕಲ್ಪದಲ್ಲಿ ಕೂಡ ಸಿದ್ಧಸಾಧನತಾ ಇದ್ದೆ ಇದೆ ಎಂದುದನ್ನು ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

सत्यविविक्तं कः अर्थः? किं सद्भिन्नत्वं। किं वा सत्यता अनाश्रयत्वं। किं वा बाध्यत्वं इति विकल्पान् मनसि निधाय आद्यं निराचष्टे – न सत्यान्तर इति॥
ಸತ್ಯವಿವಿಕ್ತ ಎಂದರೆ ಏನರ್ಥ? ಸತ್ಯಕ್ಕಿಂತಲು ಭಿನ್ನವೆಂದೊ? ಅಥವಾ ಸತ್ಯತ್ವ ಅನಾಶ್ರಯತ್ವ ವೆಂದೊ? ಅಥವಾ ಬಾಧ್ಯವಾದದ್ದೊ? ಎಂಬ ವಿಕಲ್ಪಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಮೊದಲಿನ ವಿಕಲ್ಪವನ್ನು ಈ ಟೀಕಾವಾಕ್ಯ ನಿರಾಕರಿಸುತ್ತದೆ.

### ५.५.२ सत्यविवेकं नाम सत्यता अनाश्रयत्वं

## टीका

सत्यता अनाश्रयत्वं सत्यविवेक इति चेत्। केयं सत्यता? अर्थक्रियासामर्थ्यादि लक्षणा चेत्, तत् अनाश्रयत्व साधने परस्य अपसिद्धान्त प्रसक्तिः। तत् अन्या चेत् सिद्धसाधनता एव।

ಸತ್ಯವಿವೇಕವೆಂದರೆ, ಸತ್ಯವಾದುದಕ್ಕೆ ಅನಾಶ್ರಯವಾದದ್ದು ಎಂದು ನಾವು (ಪರಪಕ್ಷದವರು) ಎಂದು ಹೇಳುತ್ತೇವೆ ಎಂದರೆ. ಇನ್ನು ಸತ್ಯತಾ ಎಂದರೆ ಏನು? ಸತ್ಯತಾ ಎಂದರೆ ಅರ್ಥಕ್ರಿಯಾಸಾಮರ್ಥ್ಯಾದಿ ಲಕ್ಷಣಗಳಿಂದ ಕೂಡಿದ್ದು ಎಂದೆನ್ನುತ್ತೇವೆ ಎಂದರೆ. ಹಾಗಾದರೆ, ಇಂತಹ ಸತ್ಯವು ವ್ಯವಹಾರ ವಿಷಯವುಳ್ಳದ್ದು ಎಂದು ಹೇಳಿದಂತಾಯಿತು. ಇಂತಹ ಸತ್ಯಕ್ಕೆ ಅನಾಶ್ರಯತ್ವವನ್ನು ಪರಪಕ್ಷದವರು ಸಾಧಿಸಲು ಹೊರಟರೆ, ಅವರೂ ಕೂಡ ವ್ಯಾವಹಾರಿಕ ಸತ್ಯವನ್ನು ಅಂಗೀಕರಿಸಿದ್ದರಿಂದ ಅಪಸಿದ್ಧಾಂತವೆಂಬ ದೋಷ ಉಂಟಾಗುತ್ತದೆ.
ಇನ್ನು ಇಂತಹ ಸತ್ಯವನ್ನು ಬಿಟ್ಟು ಬೇರೆಯಾವುದಾದರೂ ಸತ್ಯದ ವ್ಯಾಖ್ಯೆಯನ್ನು ಅನುಸರಿಸಿ ಅದರ ಅನಾಶ್ರಯತ್ವವನ್ನು ಸಾಧಿಸುವುದಾದರೆ, ಸಿದ್ಧಸಾಧನತಾ ದೋಷ ಇದ್ದೆ ಇದೆ.

## टिप्पणीनाम् विशेषार्थानि

॥ सत्यता अनाश्रयत्वं इति ॥
ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:
सत्यान्तरविवेकेऽपि सत्यताश्रयत्वस्यैव सत्वेन, तत् आश्रयत्व अभावात्, न उक्त दोष इति भावः।

ಸತ್ಯಾಂತರವಿವೇಕದಲ್ಲಿ ಕೂಡ ಸತ್ಯತ್ವದ ಆಶ್ರಯವು ಸತ್ಯವಾಗಿರುವದರಿಂದ, ಅಂತಹ ಆಶ್ರಯತ್ವವು ಇಲ್ಲಿ ಇಲ್ಲದಾಗಿರುವದರಿಂದ, ಹೇಳಿದ ಸಿದ್ಧಸಾಧನತಾ ದೋಷ ಉಂಟಾಗುವದಿಲ್ಲ ಎಂಬ ಭಾವ ವಿರುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**तत् तत् धर्मतया अङ्गीकृत सत्व अनाश्रयत्वं सद्विविक्तं इति शब्दार्थतया विवक्षितम्। अतो न परकीयसत्व अनधिकरणत्वादिकं आदाय सिद्धसाधनता।**

ಇಲ್ಲಿ ಯಾವ ಯಾವ ಧರ್ಮಗಳಿಂದ ಸತ್ಯತ್ವವೆಂದು ಅಂಗೀಕರಿಸಲಾಗಿದೆಯೊ, ಅದರ ಅನಾಶ್ರಯತ್ವವು ಸದ್ವಿವಿಕ್ತ ಎಂದು ಶಬ್ದಾರ್ಥ ವಿವಕ್ಷಿತವಾಗಿರುತ್ತದೆ. ಆದ್ದರಿಂದ ಮೊದಲಿನ ವಿಕಲ್ಪದಂತೆ (ಅಂದರೆ ಸತ್ಯವಿವೇಕವೆಂದರೆ ಸತ್ಯಭಿನ್ನತ್ವ) ಬೇರೆ ವಸ್ತುಗಳ ಸತ್ಯತ್ವದ ಅನಧಿಕರಣತ್ವ ಮುಂತಾದವುಗಳನ್ನು ತಂದು ಅದರಿಂದ ಸಿದ್ಧಸಾಧನತಾ ಇಲ್ಲಿ ಹೇಳಲು ಬರುವದಿಲ್ಲ ಎಂಬ ಭಾವವಿರುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**द्वितीयं आशङ्कते – सत्यता इति॥**

ಮೇಲೆ ನಮೂದಿಸಿದ ವಿಕಲ್ಪಗಳಲ್ಲಿಯ ಎರಡನೆ ವಿಕಲ್ಪವನ್ನು ಈ ಟೀಕಾವಾಕ್ಯ ಆಶಂಕಿಸುತ್ತದೆ.

## ॥ केयं सत्यता इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**यत् अनाश्रयत्वं साध्यत इत्यर्थः। अर्थक्रिया सामर्थ्यं अर्थक्रियाकारित्वम्। आदि पदेन व्यवहारविषयत्वं ग्राह्यम्।**

ಯಾವುದಕ್ಕೆ ಅನಾಶ್ರಯತ್ವವನ್ನು ಸಾಧಿಸಲಾಗುತ್ತದೊ ಅದು ಎಂದರ್ಥ. ಅರ್ಥಕ್ರಿಯಾಸಾಮರ್ಥ್ಯ ಎಂದರೆ ಅರ್ಥಕ್ರಿಯಾಕಾರಿತ್ವ ಎಂದರ್ಥ. ಇಲ್ಲಿ ಆದಿ ಪದದಿಂದ ವ್ಯವಹಾರವಿಷಯತ್ವವನ್ನು ಗ್ರಹಿಸಲಾಗಿದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**सत्यता अनाश्रयत्वं इत्यत्र, सत्यताशब्देन् किम् उच्यते? किं अर्थक्रियासामर्थ्यादिकम्? किं वा व्यवहार अतीतत्व लक्षण पारमार्थिकत्वम्? अथवा अबाध्यत्वम्? इति विकल्पयति–केयम् इति॥**

ಸತ್ಯತಾ ಅನಾಶ್ರಯತ್ವಾ ಎಂಬಲ್ಲಿ, ಸತ್ಯತಾ ಶಬ್ದದಿಂದ ಏನು ಹೇಳುತ್ತೀರಿ? ಅರ್ಥಕ್ರಿಯಾಸಾಮರ್ಥ್ಯಾದಿಗಳು ಎಂತಲೊ? ಅಥವಾ ವ್ಯವಹಾರ ಅತೀತತ್ವ ಲಕ್ಷಣದಿಂದ ಕೂಡಿದ ಪಾರಮಾರ್ಥಿಕತ್ವ ಎಂತಲೊ? ಅಥವಾ ಅಬಾಧ್ಯವಾದುದು ಎಂತಲೊ? ಎಂದು ಈ ಟೀಕಾವಾಕ್ಯ ವಿಕಲ್ಪಿಸುತ್ತದೆ.



ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**सत्यता शब्देन किम् उच्यते। किं अर्थक्रियासामर्थ्यादिकम्? किं वा व्यवहार अतीतत्व लक्षण पारमार्थिकत्व इति विकल्पयति–केयम् इति॥**

ಸತ್ಯತಾ ಶಬ್ದದಿಂದ ಏನು ಹೇಳುತ್ತೀರಿ? ಅರ್ಥಕ್ರಿಯಾಸಾಮರ್ಥ್ಯಾದಿಗಳು ಎಂತಲೊ? ಅಥವಾ ವ್ಯವಹಾರ ಅತೀತತ್ವ ಲಕ್ಷಣದಿಂದ ಕೂಡಿದ ಪಾರಮಾರ್ಥಿಕತ್ವ ಎಂತಲೊ? ಎಂದು ಈ ವಾಕ್ಯದಿಂದ ಟೀಕಾಕೃತ್ಪಾದರು ವಿಕಲ್ಪಿಸುತ್ತಾರೆ.

## ॥ अर्थक्रिया इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**आद्यं शङ्कते– अर्थक्रिया इति॥**
**आदि शब्देन सत्ताजात्याश्रयत्व असद्विविक्तत्वादिकं विवक्षति।**

ಮೊದಲಿನ ವಿಕಲ್ಪವನ್ನು ಈ ಟೀಕಾವಾಕ್ಯ ಶಂಕಿಸುತ್ತದೆ.

ಇಲ್ಲಿ ಆದಿ ಶಬ್ದದಿಂದ ಸತ್ತಾಜಾತ್ಯಾಶ್ರಯತ್ವ , ಅಸತ್-ವಿವಿಕ್ತತ್ವಾದಿಗಳನ್ನು ಅಪೇಕ್ಷಿಸಲಾಗುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**आद्यं आशङ्क्य परिहरति–अर्थक्रिया इति॥**

ಈ ಟೀಕಾವಾಕ್ಯ ಮೇಲೆ ನಮೂದಿಸಿದ ವಿಕಲ್ಪಗಳಲ್ಲಿ ಮೊದಲನೆ ವಿಕಲ್ಪವನ್ನು ಆಶಂಕಿಸಿ ಪರಿಹರಿಸುತ್ತದೆ.

## ॥ तत् अनाश्रयत्व इति॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**अर्थक्रियासामर्थ्यादिः पक्षे परेण अपि अङ्गीकारात् तत् अनाश्रयत्व साधने अपसिद्धान्त इति परिहरति– तत् अनाश्रयत्व इति॥**

ಇಲ್ಲಿ ಮೊದಲನೆ ವಿಕಲ್ಪವಾದ ಸತ್ಯತಾ ಎಂದರೆ ಅರ್ಥಕ್ರಿಯಾಸಾಮರ್ಥ್ಯಾದಿಗಳು ಎಂದು ತೆಗೆದುಕೊಂಡು, ಅಂತಹ ಸತ್ಯತ್ವವನ್ನು ಪ್ರಪಂಚಕ್ಕೆ ಪರಪಕ್ಷದವರು ಅಂಗೀಕರಿಸಿದ್ದರಿಂದ, ಪ್ರಪಂಚಕ್ಕೆ ಅದರ ಅನಾಶ್ರಯತ್ವವನ್ನು ಸಾಧಿಸಿದರೆ ಅಪಸಿದ್ಧಾಂತ ದೋಷ ಉಂಟಾಗುತ್ತದೆ ಎಂದು ಈ ಟೀಕಾವಾಕ್ಯದಿಂದ ಪರಿಹರಿಸುತ್ತಾರೆ.

## ॥ अपसिद्धान्त इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**अर्थक्रिया सामर्थ्यस्य व्यवहार विषयत्वस्य च प्रपञ्चे परेण अंगीकारात् तत् अनाश्रत्व साधने अपसिद्धान्त इत्यर्थः।**

ಅರ್ಥಕ್ರಿಯಾಸಾಮರ್ಥ್ಯ ಮತ್ತು ವ್ಯವಹಾರವಿಷಯಗಳನ್ನು ಪ್ರಪಂಚಕ್ಕೆ ಪರಪಕ್ಷದವರು ಅಂಗೀಕರಿಸಿದ್ದರಿಂದ ಮತ್ತೆ ಅವುಗಳ ಅನಾಶ್ರಯತ್ವವನ್ನು ಪ್ರಪಂಚಕ್ಕೆ ಸಾಧಿಸಿದರೆ, ಅಪಸಿದ್ಧಾಂತ ದೋಷ ಬರುತ್ತದೆ ಎಂದರ್ಥ.

### ॥ तत् अन्या चेत् ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**द्वितीयं आशङ्कते– तत् अन्या चेत इति॥**

ಎರಡನೆಯ ವಿಕಲ್ಪವನ್ನು ಈ ಟೀಕಾವಾಕ್ಯ ಆಶಂಕಿಸುತ್ತದೆ.

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**अर्थक्रियासामर्थ्यादि भिन्ना सत्ताजात्यधिकरणत्वरूपा सत्यता चेत् इत्यर्थ:।**

ಅಂದರೆ ಅರ್ಥಕ್ರಿಯಾಸಾಮರ್ಥ್ಯಾದಿ ವಿಕಲ್ಪಕ್ಕಿಂತ ಭಿನ್ನ ಅಂದರೆ ಸತ್ತಜಾತಿ ಅಧಿಕರಣರೂಪವಾದದ್ದು ಅದನ್ನು ಸತ್ಯತಾ ಎಂದು ತೆಗೆದುಕೊಂಡರೆ ಎಂದರ್ಥ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**द्वितीयं आशङ्क्य परिहरति–तदन्याचेत् इति ॥**

ಮೆಲೆ ನಮೂದಿಸಿದ ವಿಕಲ್ಪಗಳಲ್ಲಿಯ ಎರಡನೆ ವಿಕಲ್ಪವನ್ನು ಈ ಟೀಕಾವಾಕ್ಯ ಆಶಂಕಿಸಿ ಪರಿಹರಿಸುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**अर्थक्रियासामर्थ्यादि लक्षणया: सत्यता: सदन्या च इत्यर्थ:।**

ಅಂದರೆ ಅರ್ಥಕ್ರಿಯಾಸಾಮರ್ಥ್ಯಾದಿ ಲಕ್ಷಣದಿಂದ ಕೂಡಿದ ಸತ್ಯತಾಕ್ಕಿಂತಲೂ ಅನ್ಯವಾದ ಸತ್ಯತಾ ಎಂದರ್ಥ.

### ॥ सिद्धसाधनता एव इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**तादृश पारमार्थिकत्व अनधिकरणत्वस्य पक्षे मया अपि अंगीकारात् सिद्धसाधनता इति परिहरति– सिद्धसाधनता एव इति॥**

ಅಂತಹ ಪಾರಮಾರ್ಥಿಕ ಅನಧಿಕರಣತ್ವ ವಿಕಲ್ಪ, ನಾವು ಕೂಡ ಅಂಗೀಕರಿಸಿದ್ದರಿಂದ ಸಿದ್ಧಸಾಧನತಾ ದೋಷ ಹಾಗೆಯೆ ಉಳಿಯುತ್ತದೆಂದು ಮೇಲಿನ ವಾಕ್ಯದ ಶಂಕೆಯನ್ನು ಈ ಟೀಕಾವಾಕ್ಯ ಪರಿಹರಿಸುತ್ತದೆ.

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**अनुगतजाते: अस्माभि: अनङ्गीकारेण तत् अनधिकरणत्वस्य सिद्धत्वात् इत्यर्थ:।**



ಸತ್ತಾಜಾತಿ ಅಧಿಕರಣರೂಪ ಸತ್ಯತಾ ನಮಗೂ ಅಂಗೀಕಾರವಿರುವದಿಲ್ಲ, ಆದ್ದರಿಂದ ಅಂತಹ ಸತ್ಯತಾದ ಅನಧಿಕರಣತ್ವ ಪ್ರಪಂಚದಲ್ಲಿ ಸಿದ್ಧವಾದುದರಿಂದ ಸಿದ್ಧಸಾಧನತಾ ದೋಷ ಹಾಗೆಯೆ ಉಳಿಯುತ್ತದೆ ಎಂದರ್ಥ.

## ५.५.३ सत्यविवेकं नाम सत्यं अबाध्यं बाध्यं वा सत्यता निषेधत्वं

### टीका

**सत्यं अबाध्यं बाध्यं मिथ्या इति तद्विवेक इति चेत्। तर्हि बाधो वक्तव्य:।**

ಅಬಾಧಿತ ಸತ್ಯಕ್ಕೆ ಬಾಧಿಸುವದು ಮಿಥ್ಯಾ, ಅದನ್ನೇ ಸತ್ಯವಿವೇಕವೆನ್ನುತ್ತೇವೆ ಎಂದರೆ. ಹಾಗಾದರೆ ಅಬಾಧಿತ ಸತ್ಯತ್ವವನ್ನು ನಿಷೇಧಿಸುವ ಬಾಧವನ್ನು ಹೇಳಬೇಕು. ಅದು ಬಾಧರೂಪ ಸತ್ಯವಿವೇಕವೆನಿಸುವದು ಎಂದರ್ಥ.

### टिप्पणीनाम् विशेषार्थानि

### ॥ सत्यं अबाध्यं इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**तृतीयं आशङ्कते–सत्यं अबाध्यं इति॥**

ಮೇಲೆ ಪ್ರತಿಪಾದಿಸಿದ ವಿಕಲ್ಪಗಳಲ್ಲಿಯ ಮೂರನೆ ವಿಕಲ್ಪವನ್ನು ಈ ಟೀಕಾವಾಕ್ಯವು ಆಶಂಕಿಸುತ್ತದೆ.

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**सत्यविवेक शब्दार्थ इत्यर्थ:।**

ಇದು ಸತ್ಯವಿವೇಕ ಪದದ ಶಬ್ದಾರ್ಥವಾಗಿರುತ್ತದೆ ಎಂದರ್ಥ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**विकल्पित सत्यविवेक शब्दार्थेषु तृतीयं आशङ्कते– सत्यं इति॥**

ಮೇಲೆ ವಿಕಲ್ಪಿಸಿದ ಸತ್ಯವಿವೇಕ ಶಬ್ದಾರ್ಥಗಳಲ್ಲಿ, ಮೂರನೆ ವಿಕಲ್ಪವನ್ನು ಈ ಟೀಕಾವಾಕ್ಯ ಆಶಂಕಿಸುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**सत्यमिथ्याशब्दार्थयो: विवेककथनव्याजेन बाध्यत्वं मिथ्या इति विवक्षित साध्यं उपादत्ते – सत्यं बाध्यं इति॥**

ಸತ್ಯ ಮತ್ತು ಮಿಥ್ಯಾ ಶಬ್ದಾರ್ಥಗಳಲ್ಲಿ ವಿವೇಕ ಪದದ ನೆಪದಿಂದ ಬಾಧಿತವಾದುದು ಮಿಥ್ಯಾ ಎಂದು ಇಲ್ಲಿ ವಿವಕ್ಷಿತ ಸಾಧ್ಯವನ್ನು ಈ ಟೀಕಾವಾಕ್ಯ ವಿವರಿಸುತ್ತದೆ.

### ५.५.३.१ अन्यथा विज्ञातस्य सम्यग् विज्ञानं बाध्यत्वरूप सत्यविवेकत्वे सिद्धसाधनता

## टीका

**अन्यथा विज्ञातस्य सम्यग् विज्ञानं चेत् सिद्धसाधनता एव। क्षणिकत्वादिना विज्ञातस्य प्रपञ्चस्य, अक्षणिकत्वादि बाधकज्ञान विषयत्वस्य अस्माभिः अङ्गीकृतत्वात्।**

ಇಲ್ಲಿ ಬಾಧರೂಪ ಸತ್ಯವಿವೇಕವನ್ನು ಹೀಗೆ ಹೇಳುತ್ತೇವೆ: ಅನ್ಯಥಾ ತಿಳುವಳಿಕೆಯು ಸಮ್ಯಗ ಜ್ಞಾನದ ಬಾಧಕವಿಷಯ ವಾಗುತ್ತದೆ ಎಂದು ಎನ್ನುತ್ತೇವೆ ಎಂದರೆ. ಹಾಗಾದರೆ ಇದು ಸಿದ್ಧಸಾಧನತಾ ದೋಷವನ್ನೇ ಉಂಟುಮಾಡುತ್ತದೆ. ಏಕೆಂದರೆ, ಕ್ಷಣಿಕತ್ವಾದಿಗಳಿಂದ ತಿಳಿದ ಪ್ರಪಂಚಕ್ಕೆ, ಅಕ್ಷಣಿಕತ್ವಾದಿ ಬಾಧಕ ಜ್ಞಾನವಿಷಯತ್ವವನ್ನು ನಾವು ಕೂಡ ಅಂಗೀಕರಿಸಿರುತ್ತೇವೆ.

### टिप्पणीनाम् विशेषार्थानि

**॥ विज्ञानं चेत् इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**बाधः तद्विषयत्वं, बाध्यत्वं इति शेषः।**

ಬಾಧಕ ಮತ್ತು ಅದರ ವಿಷಯತ್ವ ಎಂದರೆ ಬಾಧ್ಯತ್ವ. ಈ ಟೀಕಾವಾಕ್ಯದ ಅರ್ಥವನ್ನು ಹೇಳುವಾಗ विज्ञानं ಪದದ ನಂತರ बाध्यत्वं ಎಂದು ಸೇರಿಸಿ ಅರ್ಥಹೇಳಬೇಕು.

### ५.५.३.२ प्रतिपन्नोपाधौ त्रैकालिकसत्यतानिषेधस्य सत्यविवेकत्वे अन्योन्याश्रयता

## टीका

**प्रतिपन्न उपाधौ त्रैकालिक सत्यता निषेध इति चेत् न। सत्यताया एव अद्यापि अनिरूपणात्।**

ಸತ್ಯವಿವೇಕ ಎಂದರೆ ತಿಳಿಯಲ್ಪಟ್ಟ ಉಪಾಧಿಗಳಲ್ಲಿಯ ತ್ರೈಕಾಲಿಕ ಸತ್ಯವಾದುದನ್ನು ನಿಷೇಧಿಸುವದೇ ಸತ್ಯವಿವೇಕ ಎನ್ನುತ್ತೇವೆ (ಅದೇ ಬಾಧಕ ಎಂದರ್ಥ), ಎಂದರೆ. ಇಲ್ಲಿ ಇನ್ನೂ सत्यता, ಪದವೇ ನಿರೂಪಿತವಾಗಿಲ್ಲ ಅಂದರೆ ಆ ಪದದ ತಿಳುವಳಿಕೆ ಆಗಿರುವದಿಲ್ಲ.

ಅಂದರೆ ಸತ್ಯತಾ ಪದದ ತೀಳುವಳಿಕೆ ಇಲ್ಲದಾಗ ಅದಕ್ಕೆ ಬಾಧಕವನ್ನು ಹೇಗೆ ಹೇಳಲು ಬರುತ್ತದೆ ಎಂಬ ಭಾವವಿರುತ್ತದೆ.



### टिप्पणीनाम् विशेषार्थानि

**॥ प्रतिपन्न उपाधौ इति ॥**

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

ಈ ಟೀಕಾವಾಕ್ಯ ತಿಳಿಯಲು ಕಠಿಣವಿರುವದರಿಂದ, ವಾಕ್ಯದ ಪದಕೃತ್ಯಮಾಡಿ ವಿವರಿಸುತ್ತಾರೆ.

**सत्यता ग्रहण अभावे बाधलक्षणं असम्भवि स्यात्।**

ಈ ಟೀಕಾವಾಕ್ಯದಲ್ಲಿ सत्यता ಪದವನ್ನು ಗ್ರಹಿಸದಿದ್ದರೆ, ಬಾಧ ಲಕ್ಷಣ ಅಸಂಭಾವಿತವೆನಿಸುವದು.

**मायिकस्य आविद्यकस्य वियदादेः शुक्तिरूप्यादेःच मायावादिना प्रतिभासकाले अवस्थिति अङ्गीकारेण स्वरूपतः त्रैकालिक निषेध प्रतियोगित्व अनङ्गीकारात्, तदर्थं सत्यता ग्रहणम्।**

ಇನ್ನು ಮಾಯಿಕವಾದ, ಆವಿದ್ಯಕವಾದ ವಿಯದಾದಿ ಮತ್ತು ಶುಕ್ತಿರೂಪ್ಯಾದಿಗಳಗೆ ಮಾಯಾವಾದಿಗಳು ಪ್ರತಿಭಾಸಕಾಲದಲ್ಲಿ, ಅವಸ್ಥೆಯನ್ನು ಅಂಗೀಕರಿಸಿದ್ದರಿಂದ, ಸ್ವರೂಪತಹಾ ತ್ರೈಕಾಲಿಕ ನಿಷೇಧರೂಪ ಪ್ರತಿಯೊಗಿತ್ವವನ್ನು ಅಂಗೀಕರಿಸಿಲ್ಲವಾದ್ದರಿಂದ, ಅದಕ್ಕಾಗಿ ಈ ವಾಕ್ಯದಲ್ಲಿ सत्यता ಪದವನ್ನು ಗ್ರಹಿಸಲಾಗಿದೆ.

**त्रैकालिक पद अभावे तु सिद्धसाधनत्वं, सत्यत्ववादिनाम् अपि घटादेः कालान्तर अवच्छिन्न प्रतिषेध अङ्गीकारात्, तदर्थं त्रैकालिकत्वेन प्रतिषेधो विशेषितः।**

ಇನ್ನು ಈ ವಾಕ್ಯದಲ್ಲಿ त्रैकालिक ಪದವಿಲ್ಲದಿದ್ದಲ್ಲಿ, ಸಿದ್ಧಸಾಧನತಾದೋಷ ಉಂಟಾಗುತ್ತದೆ, ಏಕೆಂದರೆ, ಸತ್ಯತ್ವವಾದಿಗಳಿಗೆ ಕೂಡ ಘಟಾದಿಗಳಿಗೆ ಕಾಲಾಂತರದಿಂದ ಬೇರ್ಪಡಿಸಲ್ಪಟ್ಟ ಪ್ರತಿಷೇಧವನ್ನು ಅಂಗೀಕರಿಸಿದ್ದಾರೆ. ಅದಕ್ಕಾಗಿ त्रैकालिक ದಿಂದ निषेध ಪದವನ್ನು ವಿಶೇಷಿಸಲಾಗಿದೆ.

**प्रतिपन्न उपाधि अभावे पुनः तदेव सिद्धसाधनत्वं, सत्यत्ववादिनां अपि गोत्वादेः अश्वादौ उक्त प्रतिषेध अङ्गीकारात्, तदर्थं प्रतिपन्न उपाधि पदम्।**

ಇನ್ನು, ಈ ವಾಕ್ಯದಲ್ಲಿ प्रतिपन्न उपाधि, ಪದಗಳು ಇಲ್ಲದಿದ್ದಲ್ಲಿ, ಪುನಃ ಸಿದ್ಧಸಾಧನತಾ ದೋಷ ಉಂಟಾಗುತ್ತದೆ. ಏಕೆಂದರೆ ಸತ್ಯತ್ವವಾದಿಗಳಿಗೆ ಕೂಡ ಗೋತ್ವಗಳಿಗೆ ಅಶ್ವಾದಿಗಳಲ್ಲಿ ಹೇಳಿದ ಪ್ರತಿಷೇಧ ಅಂಗೀಕರಿಸಿದ್ದಾರೆ. ಅದಕ್ಕಾಗಿ, प्रतिपन्न उपाधि ಪದಗಳನ್ನು ಇಡಲಾಗಿದೆ.

ಇಲ್ಲಿ उपाधि ಎಂದರೆ, ತನ್ನ ಸಂಬಂಧವುಳ್ಳ ಒಂದು ವಸ್ತುವನ್ನು ತನ್ನ ಸಂಬಂಧವಿಲ್ಲದ ಅದೇ ವಸ್ತುವಿಗಿಂತಲೂ ಬೇರೆಯೆಂದು ತಿಳಿಸುವ ಒಂದು ವಸ್ತು. ಘಟವು, ಘಟದಲ್ಲಿರುವ ಆಕಾಶವನ್ನು ಹೊರಗಿನ ಆಕಾಶಕ್ಕಿಂತಲೂ ಬೇರೆಯೆಂದು ತಿಳಿಸುವದು. ಇಲ್ಲಿ ಘಟವನ್ನು ಉಪಾಧಿ ಎನ್ನಲಾಗುವದು. प्रतिपन्न ಎಂದರೆ ತಿಳಿಯಲ್ಪಟ್ಟ ಎಂದರ್ಥ.

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

ಈ ಟೀಕಾವಾಕ್ಯ ತಿಳಿಯಲು ಕಠಿಣವಿರುವದರಿಂದ, ವಾಕ್ಯದ ಪದಕೃತ್ಯಮಾಡಿ ವಿವರಿಸುತ್ತಾರೆ.

**संयोगेन समवायेन वा प्रतियोगि आधारत्वेन प्रतिपन्न उपाधौ इत्यर्थः।**

ಇಲ್ಲಿ प्रतिपन्न उपाधौ ಎಂದರೆ ಸಂಯೋಗ, ಸಮವಾಯ ಸಂಬಂಧ ಅಥವಾ ಪ್ರತಿಯೋಗಿ ಆಧಾರತ್ವದಿಂದ ಎಂದರ್ಥ.

**तत्र त्रैकालिक प्रतिषेधो बाध इत्युक्ते असम्भवः। मायिकस्य वियदादेः आविद्यकस्य शुक्तिरजतादेः च प्रतीति काले असद्विलक्षण स्वरूप अङ्गीकारेण, स्वरूपस्य त्रैकालिक निषेध अभावात्। अतः सत्यता प्रतिषेध इत्युक्तम्। एवं च न असम्भवः।**

ಪ್ರಸ್ತುತ ಟೀಕಾವಾಕ್ಯದಲ್ಲಿ ತ್ರೈಕಾಲಿಕ ನಿಷೇಧವು ಬಾಧ ಅಥವಾ ಬಾಧಕ ಎಂದಿದ್ದರೆ ಅದು ಅಸಂಭವವೆನಿಸುತ್ತದೆ. ಏಕೆಂದರೆ ಮಾಯಾವಾದಿಗಳಿಗೆ ವಿಯದಾದಿಗಳ ಮತ್ತು ಆವಿದ್ಯಕರಿಗೆ ಶುಕ್ತಿರಜತಾದಿಗಳ ಪ್ರತೀತಿ ಕಾಲದಲ್ಲಿ ಅಸದ್ವಿಲಕ್ಷಣ ಸ್ವರೂಪ ಅಂಗೀಕಾರವಾದ್ದರಿಂದ, ಸ್ವರೂಪಕ್ಕೆ ತ್ರೈಕಾಲಿಕ ನಿಷೇಧವಿರುವದಿಲ್ಲ. ಆದ್ದರಿಂದ सत्यता प्रतिषेध ಪದಗಳನ್ನು ಇಡಲಾಗಿದೆ. ಆದ್ದರಿಂದ ಇಂತಹ ನಿಷೇಧ ಅಸಂಭವವೆನಿಸುವದಿಲ್ಲ.

**सत्व प्रतिषेध बाध इत्येव उक्ते, सिद्धसाधनता। घटे काशीस्थ सत्व प्रतिषेध सद्भावात्। अतः कालिक इत्युक्तं।**

ಇನ್ನು ಸತ್ಯತ್ವದ ನಿಷೇಧವೇ ಬಾಧ ಅಥವಾ ಬಾಧಕ ಎಂದು ಹೇಳಿದ್ದರೆ, ಸಿದ್ಧಸಾಧನತಾ ದೋಷ ಉಂಟಾಗುತ್ತದೆ. ಏಕೆಂದರೆ, ಕಾಶಿಯಲ್ಲಿದ್ದ ಘಟದಲ್ಲಿ ಸತ್ಯತ್ವ ನಿಷೇಧ ಇರುತ್ತದೆ. ಆದ್ದರಿಂದ ಟೀಕಾವಾಕ್ಯದಲ್ಲಿ कालिक ಪದವನ್ನು ಇಡಲಾಗಿದೆ.

**तथाऽपि घटादौ कालान्तरीय सत्व प्रतिषेध सद्भावेन पुनः सिद्धसाधनता वारणाय त्रैकालिक इत्युक्तम्। वर्तमानकाले सत्व सद्भावेन त्रैकालिक प्रतिषेध अभावात् न सिद्धसाधनता।**

ಹಾಗಿದ್ದರೂ, ಘಟಾದಿಗಳಲ್ಲಿ ಕಾಲಾಂತರೀಯ ಸತ್ಯತ್ವದ ನಿಷೇಧ ಇರುವದರಿಂದ ಪುನಃ ಸಿದ್ಧಸಾಧನತಾ ದೋಷ ಉದ್ಭವಿಸುವದಾದ್ದರಿಂದ, ಅದನ್ನು ನಿವಾರಿಸಲು त्रैकालिक ಪದವನ್ನು ಇಡಲಾಗಿದೆ. ಅದರಂತೆ, ವರ್ತಮಾನಕಾಲದಲ್ಲಿ ಸತ್ಯತ್ವ ಇರುವದರಿಂದ, ತ್ರೈಕಾಲಿಕ ನಿಷೇಧದ ಅಭಾವ ಉಂಟಾಗುವದರಿಂದ ಸಿದ್ಧಸಾಧನತಾ ದೋಷಕ್ಕೆ ಆಸ್ಪದವಿರುವದಿಲ್ಲ.

**त्रैकालिक सत्व प्रतिषेधो बाध इत्युक्ते सति शशविषाणादौ अतिव्याप्तिः, तस्य कालत्रयेऽपि अभावात्। अतः प्रतिपन्न उपाधौ इत्युक्तम्।**

ಇನ್ನು, ತ್ರೈಕಾಲಿಕ ಸತ್ಯತ್ವದ ನಿಷೇಧವೇ ಬಾಧಕವೆಂದು ಹೇಳಿದ್ದರೆ, ಶಶವಿಷಾಣಾದಿಗಳಲ್ಲಿ ಅತಿವ್ಯಾಪ್ತಿ ಉಂಟಾಗುತ್ತದೆ, ಏಕೆಂದರೆ ಅದು ಕಾಲತ್ರಯದಲ್ಲಿಯೂ ಇರುವದಿಲ್ಲ. ಆದ್ದರಿಂದ ಟೀಕಾ ವಾಕ್ಯದಲ್ಲಿ प्रतिपन्न उपाधौ ಎಂದು ಹೇಳಲಾಗಿದೆ.

**संयोगेन समवायेन वा प्रतियोगिभूत शशविषाणादि आधारत्वेन प्रतिपन्नस्य उपाधेः एव अभावात् न तत्रापि व्याप्तिः इति पदानां क्रुत्यं इति द्रष्टव्यम्।**

ಅಂದರೆ, ಸಂಯೋಗ, ಸಮವಾಯ ಅಥವಾ ಪ್ರತಿಯೋಗಿಭೂತ ಆಧಾರತ್ವಗಳಿಂದ ಅಂದರೆ ತಿಳಿಯಲ್ಪಟ್ಟ ಉಪಾಧಿಗಳೆ ಶಶವಿಷಾಣಾದಿಗಳಿಗೆ ಇಲ್ಲದಿರುವಾಗ ಅಲ್ಲಿ ವ್ಯಾಪ್ತಿ ಉಂಟಾಗುವದಿಲ್ಲದಾಗ, ಅತಿವ್ಯಾಪ್ತಿಗೆ ಆಸ್ಪದವಿರುವದಿಲ್ಲ ಎಂಬ ಭಾವ.

ಹೀಗೆ ಮೇಲಿನ ಟೀಕಾ ವಾಕ್ಯದ ಪದಗಳ ಕೃತ್ಯ ಎಂದು ತಿಳಿಯಬೇಕು. ಇಲ್ಲಿ ಉಪಯೋಗಿಸಿದ



ಪಾರಿಭಾಷಿಕ ಪದಗಳ ಅರ್ಥವನ್ನು ಓದುಗರು, ಈ ಗ್ರಂಥದ ಅಂತ್ಯದಲ್ಲಿ ಪಾರಿಭಾಷಿಕ ಶಬ್ದಾರ್ಥ ಕೋಶದಲ್ಲಿ ಕಾಣಬಹುದು.

## ॥ सत्यताया एव इति॥

<u>ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:</u>

**सत्यता निरुक्तौ बाध निरुक्तिः तन्निरुक्तौ बाध्यत्व अभाव लक्षण सत्यता निरुक्तिः इति अन्योन्याश्रय इति परिहरति–सत्यताया इति॥**

ಹೀಗೆ ಸತ್ಯತ್ವ ಅಬಾಧ್ಯತೆಗೆ ಬಾಧಕವಾದದ್ದು ಸತ್ಯವಿವೇಕ ಮತ್ತು ಬಾಧಕವನ್ನು ಮೇಲಿನ ಟೀಕಾವಾಕ್ಯದಂತೆ ಹೇಳತ್ತೇವೆ ಎಂದರೆ, ಆ ವಾಕ್ಯದಲ್ಲಿಯ ಸತ್ಯತಾ ಪದದ ಅರ್ಥನಿರ್ವಚನವೇ ಸಿಗುವದಿಲ್ಲ ಅಥವಾ ಬೋಧನೆ ಆಗುವದಿಲ್ಲ.

ಹಾಗಾದರೆ, ಸತ್ಯತಾದ ಬೋಧನೆ ಆದಾಗ, ಬಾಧದ ಬೋಧನೆ ಆಗುತ್ತದೆ, ಇನ್ನು ಬಾಧದ ಬೋಧನೆ ಆಯಿತೆಂದರೆ, ಅದರ ಅಭಾವಲಕ್ಷಣವಾದ ಸತ್ಯತಾದ ಬೋಧನೆ ಆಗಬೇಕು ಹೀಗೆ ಅನ್ಯೋನ್ಯಾಶ್ರಯ ದೋಷ ಉಂಟಾಗುತ್ತದೆ ಎಂದು ಹೇಳತಾ ಈ ಟೀಕಾವಾಕ್ಯ ಹಿಂದಿನ ವಾಕ್ಯದಲ್ಲಿ ಪ್ರತಿಪಾದಿಸಿದ ಬಾಧಲಕ್ಷಣವನ್ನು ನಿರಾಕರಿಸುತ್ತದೆ.

<u>ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:</u>

**अबाध्यत्व व्यतिरेकेण सत्यताया अनिरूपणात् इत्यर्थः।**

ಅಂದರೆ, ಅಭಾಧ್ಯತ್ವರೂಪ ಸತ್ಯತ್ವವನ್ನು, ಪ್ರತಿಪಾದಿಸಿದ ಬಾಧಲಕ್ಷಣದ ವ್ಯತಿರೇಕದಿಂದ ನಿರೂಪಿಸಲು ಬರುವದಿಲ್ಲ ಎಂದು ಈ ಟೀಕಾವಾಕ್ಯ ಸ್ಪಷ್ಟ ಪಡಿಸುತ್ತದೆ ಎಂದರ್ಥ.

**बाध्य ज्ञाने अबाध्यत्वरूप सत्यताज्ञाने च त्रैकालिक सत्यता प्रतिषेधरूप बाध ज्ञानं इति अन्योन्याश्रय इति भावः।**

ಹಾಗೂ, ಬಾಧದ ಜ್ಞಾನವಾದಲ್ಲಿ ಅಬಾಧ್ಯತ್ವರೂಪ ಸತ್ಯತಾದ ಜ್ಞಾನ ಉಂಟಾಗುತ್ತದೆ, ಇನ್ನು ಅಬಾಧ್ಯತ್ವರೂಪ ಸತ್ಯತಾ ಜ್ಞಾನದಿಂದ, ತ್ರೈಕಾಲಿಕ ಸತ್ಯತಾ ಪ್ರತಿಷೇಧರೂಪ ಬಾಧದ ಜ್ಞಾನ ಉಂಟಾಗುತ್ತದೆ. ಹೀಗೆ ಅನ್ಯೋನ್ಯಾಶ್ರಯ ದೋಷ ಉಂಟಾಗುತ್ತದೆ ಎಂಬ ಭಾವ.

## ॥ अद्यापि इति॥

<u>ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:</u>

**सत्यता निरुक्तौ बाध निरुक्तिः बाधलक्षणान्तः पातित्वात् सत्यतायाः बाधनिरुक्तौ च अबाध्यत्वलक्षण सत्यत्व निरुक्तिः।**

ಹೀಗೆ ಬಾಧರೂಪ ಸತ್ಯವಿವೇಕ ಎಂದು ಹೇಳುತ್ತೇವೆ ಎಂದರೆ. ಇಲ್ಲಿ ಸತ್ಯತಾಶಬ್ದದ ಅರ್ಥಬೋಧನೆ ಆಗುವದಿಲ್ಲ ಎಂದರ್ಥ. ಅಂದರೆ ಇಲ್ಲಿ, ಸತ್ಯತಾದ ಅರ್ಥಬೋಧನೆ ಆದಲ್ಲಿ ಬಾಧದ ಅರ್ಥಬೋಧನೆ ಆಗುತ್ತದೆ. ಮತ್ತು ಸತ್ಯತಾ ಬಾಧಲಕ್ಷಣನ್ನೊಳಗೊಂಡಿದ್ದರಿಂದ, ಬಾಧದ ಅರ್ಥಬೋಧನೆ ಆದಲ್ಲಿ ಅಬಾಧ್ಯತ್ವರೂಪ ಸತ್ಯತ್ವದ ಅರ್ಥಬೋಧನೆ ಆಗುತ್ತದೆ.

**अभाव निरूपणस्य प्रतियोगि निरूपणाधीनत्वात् इति अन्योन्याश्रय इति भावः।**

ಮತ್ತು ಇಲ್ಲಿ ಅಭಾವ ನಿರೂಪಣವು ಪ್ರತಿಯೋಗಿ ನಿರೂಪಣದಾ ಅಧೀನವಾಗಿರುವದರಿಂದ ಅನ್ಯೋನ್ಯಾಶ್ರಯ ದೋಷ ಉಂಟಾಗುತ್ತದೆ ಎಂಬ ಭಾವ.

## टीका

**किं च एवं सति अत्यन्त असत्वमेव प्राप्तं इति आश्रयासिद्ध्यादि प्रत्यावृत्तिः।**

ಮತ್ತು, ಹೀಗೆ ಮೇಲೆ ಹೇಳಿದಂತೆ ಬಾಧರೂಪ ಸತ್ಯವಿವೇಕವನ್ನು ಸ್ವೀಕರಿಸಿದರೆ, ಅತ್ಯಂತ ಅಸತ್ಯವೇ ಪ್ರಾಪ್ತವಾದಂತಾಗಿ ಹಿಂದೆ ಪ್ರತಿಪಾದಿಸಿದ ಆಶ್ರಯಾಸಿದ್ಧ್ಯಾದಿ ದೋಷಗಳು ಮರುಕಳಿಸುತ್ತವೆ

### टिप्पणीनाम् विशेषार्थानि

**॥ किं च एवं सति इति॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**सत्यता अनाश्रयत्वं सत्यविवेक इति पक्षे दूषणान्तरं आह– किं च एवं सति इति॥**

ಈ ಟೀಕಾವಾಕ್ಯವು "सत्यता अनाश्रयत्वं सत्यविवेक" ಎಂಬ ವಿಕಲ್ಪದಲ್ಲಿಯ ದೂಷಣಾಂತರ ಅಂದರೆ ಇತರ ದೂಷಣವನ್ನು ಪ್ರತಿಪಾದಿಸುತ್ತದೆ.

**त्रैकालिक सत्व निषेधे सति इत्यर्थः।**

ಆ ದೂಷಣವು ತ್ರೈಕಾಲಿಕ ಸತ್ಯತ್ವದ ನಿಷೇಧದ ಹಿನ್ನೆಲೆಯಲ್ಲಿ ಇರುತ್ತದೆ ಎಂದರ್ಥ.

**आश्रयासिद्ध्यादि इत्यादि पदेन अपसिद्धान्त ग्रहणम्।**

ಟೀಕಾವಾಕ್ಯದಲ್ಲಿಯ ಆಶ್ರಯಾಸಿದ್ಧ್ಯಾದಿ ಪದದಿಂದ ಅಪಸಿದ್ಧಾಂತ ದೋಷವನ್ನು ಗ್ರಹಿಸಲಾಗಿದೆ ಎಂಬ ಭಾವ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**एवं तावत् सत्यता अनाश्रयत्वं सत्यविवेक इति पक्षः सत्यत्व निरुक्त्या दूषितः। इदानीं अस्तु यत् किंचित् सत्यत्वम्।**

ಈಗಿನವರೆಗೆ "सत्यता अनाश्रयत्वं सत्यविवेक" ಎಂಬ ವಿಕಲ್ಪವನ್ನು ಸತ್ಯತ್ವದ ನಿರುಕ್ತಿ ಅಂದರೆ ಅರ್ಥಬೋಧನೆಯ ಅಭಾವತೆಯನ್ನು ಅನುಸರಿಸಿ ದೂಷಿಸಲಾಯಿತು. ಈಗ ಕಿಂಚಿತ್ ಸತ್ಯತ್ವದ ಅರ್ಥಉಂಟು ಎಂಬ ವಿಕಲ್ಪವನ್ನು ಅನುಸರಿಸಿ ವಿವರಿಸುತ್ತಾರೆ.

**अथाऽपि तत् अनाश्रयत्वं साधने अत्यन्त असत्वमेव आपन्नं इति आश्रयासिद्धि अपसिद्धान्तौ स्याताम् इति तस्मिन्नेव पक्षे दोषान्तरं आह– किंच एवं इति॥**

ಇಂತಹ ಕಿಂಚಿತ್ ಅರ್ಥವನ್ನು ಕೂಡಿದ ಸತ್ಯತ್ವಕ್ಕೂ ಅನಾಶ್ರಯತ್ವ ಸಾಧಿಸಿದಲ್ಲಿ, ಮಿಥ್ಯಾ ಶಬ್ದದ ಅರ್ಥ ಅಸತ್ಯತ್ವವನ್ನೇ ಹೊಂದುವದರಿಂದ, ಪೂರ್ವದಲ್ಲಿ ಹೇಳಿದ ಆಶ್ರಯಾಸಿದ್ಧಿ



ಅಪಸಿದ್ಧಾಂತ ಮುಂತಾದ ದೋಷಗಳು ಉಂಟಾಗುತ್ತವೆ ಎಂದು ಈ ಟೀಕಾವಾಕ್ಯ ಪ್ರತಿಪಾದಿಸುತ್ತದೆ .

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**न केवलं अस्मिन् पक्षे इतरेतराश्रय किन्तु अन्यत्र असत्वेन सम्प्रतिपन्नस्य पटादेः, प्रतिपन्न उपाधौ सत्यता निषेध प्रतियोगित्वे सार्वदैशिक सार्वकालिक निषेध प्रतियोगित्वेन अत्यन्त असत्वात् आश्रयासिद्धि अपसिद्धान्तौ स्याताम् इत्याह–किंच इति॥**

ಈ ತರಹದ ಬಾಧಕವನ್ನು ಪ್ರತಿಪಾದಿಸುವ ಸತ್ಯತ್ವ ನಿಷೇಧರೂಪ ಸತ್ಯವಿವೇಕ ವಿಕಲ್ಪದಲ್ಲಿ, ಕೇವಲ ಅನ್ಯೋನ್ಯಾಶ್ರಯ ದೋಷವೇ ಮಾತ್ರವಲ್ಲ, ಪರಂತು ಬೇರೆಕಡೆ ಅಸತ್ವವೆಂದು ಎರಡುಪಕ್ಷದವರಿಗೆ ಸಮ್ಮತಿಯಾದ ಪಟಾದಿಗಳು, ಮೇಲೆ ನಮೂದಿಸಿದ "प्रतिपन्न उपाधौ .." ಬಾಧದಂತೆ, ಸಾರ್ವದೈಶಿಕ, ಸಾರ್ವಕಾಲಿಕ ನಿಷೇಧ ಪ್ರತಿಯೋಗಿತ್ವದಿಂದ ಅತ್ಯಂತ ಅಸತ್ವವನ್ನು ಹೊಂದುವದರಿಂದ, ಆಶ್ರಯಾಸಿದ್ಧಿ ಅಪಸಿದ್ಧಾಂತ ದೋಷಗಳು ಉಂಟಾಗುತ್ತವೆ ಎಂದು ಈ ಟೀಕಾ ವಾಕ್ಯ ಪ್ರತಿಪಾದಿಸುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**अन्यत्र सत्ताप्रतिषेध सिद्धः अस्ति, प्रतिपन्न उपाधौ अपि सत्य निषेधे क्रियमाणे प्रपञ्चस्य अत्यन्त असत्वं एव प्राप्तं इति आश्रयासिद्ध्यादि प्रत्यासत्तिः, अतद्गुणसंज्ञान बहिव्रीणा अपसिद्धान्त प्रत्यापत्तिः इति भावः।**

**एतेन असत्व साध्यत्वं पक्षे आश्रयासिद्धेः दूषणत्व अभावेन तत् प्रत्यासत्यभिधानं न अनिष्टं इति परास्तम्॥**

ಬೇರೆಕಡೆಗೆ ಸತ್ತಾ (ಅಂದರೆ ಇರುವಿಕೆ ) ಪ್ರತಿಷೇಧವು ಸಿದ್ಧವಾಗಿರುತ್ತದೆ, ಮೇಲೆ ನಮೂದಿಸಿದ "प्रतिपन्न उपाधौ.." ಬಾಧಕದಂತೆ ಸತ್ಯತ್ವವನ್ನು ನಿಷೇಧಿಸಿದರೆ ಮತ್ತು ಅಂತಹ ಮಿಥ್ಯಾತ್ವವನ್ನು ಪ್ರಪಂಚಕ್ಕೆ ಸಾಧಿಸಿದರೆ, ಪ್ರಪಂಚಕ್ಕೆ ಅತ್ಯಂತ ಅಸತ್ವವೇ ಪ್ರಾಪ್ತವಾದಂತಾಗಿ, ಆಶ್ರಯಾಸಿಧ್ಧ್ಯಾದಿ ದೋಷಗಳು ಮರುಕಳಿಸುತ್ತವೆ. ಹಾಗೂ ಪರಪಕ್ಷದವರು ತಾವು ಪ್ರತಿಪಾದಿಸಿದ ಗುಣವನ್ನು ತಾವೆ ಗ್ರಹಿಸದೆ ಇರುವದರಿಂದ ಅಪಸಿದ್ಧಾಂತ ದೋಷ ಕೂಡ ಮರುಕಳಿಸುತ್ತದೆ ಎಂಬ ಭಾವ್.

ಇದರಿಂದ ಅಸತ್ವ ಸಾಧ್ಯ ಪಕ್ಷದಲ್ಲಿ ಆಶ್ರಾಯಾಸಿದ್ಧ್ಯಾದಿಗಳಿಗೆ ದೂಷಣತ್ವದ ಅಭಾವದಿಂದ ಅವುಗಳ ಮರುಕಳಿಸುವ ಅಭಿಧಾನವು, ಯಾವ ಅನಿಷ್ಟವನ್ನು ಮಾಡುವದಿಲ್ಲ ಎಂಬ ಹೇಳಿಕೆಯನ್ನು ನಿರಾಕರಿಸಲಾಯಿತು.

ವಿಶೇಷವಾದ ಅವತರಣಿಕೆ:

ಇಲ್ಲಿ ಓದುಗರು ಒಂದು ವಿಶೇಷತೆಯನ್ನು ಗಮನಿಸಿರಬಹದು: ಶ್ರೀವ್ಯಾಸತೀರ್ಥರು ಹಾಗೂ ಶ್ರೀಶ್ರೀನಿವಾಸತೀರ್ಥರು, ಈ ಟೀಕಾವಾಕ್ಯವನ್ನು ಸತ್ಯವಿವೇಕವೆಂದರೆ ಸತ್ಯತ್ವದ ಅನಾಶ್ರಯತ್ವವೆಂಬ ವಿಕಲ್ಪವನ್ನು ಅನುಸರಿಸಿ ವ್ಯಾಖ್ಯಾನಿಸಿರುತ್ತಾರೆ. ಆದರೆ

ಶ್ರೀಕೇಶವಾಚಾರ್ಯರು ಹಾಗೂ ಶ್ರೀಸತ್ಯನಾಥರು ಈ ಟೀಕಾವಾಕ್ಯವನ್ನು ಸತ್ಯವಿವೇಕವೆಂದರೆ, ಸತ್ಯತೆಯ ನಿಷೇಧವೆಂಬ ಪಕ್ಷವನ್ನು ಅನುಸರಿಸಿ ವ್ಯಾಖ್ಯಾನಿಸಿದ್ದಾರೆ. ಈ ಎಲ್ಲ ವ್ಯಾಖ್ಯಾನಗಳು ತನ್ನ ತನ್ನ ವಿಷಯಕ್ಕೆ ಅನುಗುಣವಾಗಿ ಕೊನೆಗೆ ಅತ್ಯಂತ ಅಸತ್ವವನ್ನು ಪ್ರತಿಪಾದಿಸುತ್ತ ಆಶ್ರಯಾಸಿದ್ಧ್ಯಾದಿ ದೋಷಗಳನ್ನು ತೋರಿಸುತ್ತವೆ. ಇದೋಂದು ಜ್ಞಾನಾನಂದಾತ್ಮಕ ಔತಣವೇ ಹೌದು.

### ५.५.३.३ सत्त्वाभावस्य आश्रयासिद्धि प्रयोजकत्व समर्थनम्

## टीका

सत्व निषेध एव क्रियते न तु असत्व विधिः इति चेत् न। सत्त्वनिषेध अतिरिक्तस्य असत्वस्य अभावात्।भावत्वेऽपि सत्त्वनिषेधेन एव आश्रयासिद्धिः स्यात्।

असत्वं अनाश्रयत्वे प्रयोजकं न सत्त्व अभाव इति चेत् न। नियामक अभावात्। समं प्रतिवादिनोऽपि इति चेत्। अस्तु तावत्, आश्रयासिद्धि सन्देहेऽपि अनुमानं असाधकम्।

.ಇಲ್ಲಿ ನಾವು (ಪರಪಕ್ಷದವರು) ಸತ್ಯತ್ವದ ನಿಷೇಧವನ್ನು ಮಾತ್ರ ಮಾಡುತ್ತೇವೆ, ಅಸತ್ವದ ವಿಧಿ ಅಂದರೆ ಇರುವಿಕೆಯನ್ನು ನಿಷೇಧಮಾಡುತ್ತಿಲ್ಲ, ಆದ್ದರಿಂದ ಆಶ್ರಾಯಾಸಿಧ್ಯಾದಿ ದೋಷಗಳಿಗೆ ಇಲ್ಲಿ ಸ್ಥಾನವಿರುವದಿಲ್ಲ ಎಂದೆನ್ನುತ್ತೇವೆ ಎಂದರೆ. ಹಾಗನ್ನಲು ಬರುವದಿಲ್ಲ ಏಕೆಂದರೆ ಸತ್ಯತ್ವದ ನಿಷೇಧದ ಹೊರತಾಗಿ ಅಸತ್ಯತ್ವದ ಅಸ್ಥಿತ್ವವೇ ಇರುವದಿಲ್ಲ ಎಂಬ ಭಾವ. ಇನ್ನು ಭಾವತ್ವದಲ್ಲಿ ಕೂಡ ಸತ್ಯತ್ವದ ನಿಷೇಧದಿಂದಲೇ ಆಶ್ರಯಾಸಿದ್ಧಿ ದೋಷ ಉಂಟಾಗುತ್ತದೆ.

ಅಲ್ಲ, ನಾವು (ಪರಪಕ್ಷದವರು ಹೀಗೆ ಅನ್ನುತ್ತಾರೆ) ಅಸತ್ವವು ಅನಾಶ್ರಯತ್ವಕ್ಕೆ ಪ್ರಯೋಜಕ, ಸತ್ಯತ್ವದ ಅಭಾವತೆ ಅಲ್ಲ ಎಂದೆನ್ನುತ್ತೇವೆ ಎಂದರೆ.

ಹಾಗೆ ಅನ್ನಲು ಬರುವದಿಲ್ಲ ಏಕೆಂದರೆ ಅಂತಹದೇನು ನಿಯಮವಿರುವದಿಲ್ಲ. ಸತ್ಯತ್ವದ ಅಭಾವತೆಯೇ ಅನಾಶ್ರಯತ್ವಕ್ಕೆ ಪ್ರಯೋಜಕ ಅಸತ್ಯತ್ವವಲ್ಲ ಎಂದು ಹೇಳಬಹುದು. ಹಾಗಾದರೆ ನಾವು (ಪರಪಕ್ಷದವರು) ಕೂಡ ಅಂತಹ ನಿಯಮವಿರುವದಿಲ್ಲ ಎಂದು ಹೇಳಬಹುದು. ಹೀಗಾಗಿ ಎರಡೂ ಪಕ್ಷದವರಿಗೆ ಇದು ಸಮವಾಯಿತಲ್ಲ.

ಇದರಿಂದ ಆಶ್ರಯಾಸಿದ್ಧಿಯಬಗ್ಗೆ ಸಂದೇಹ ಉಂಟಾಯಿತು. ಈ ಸಂದೇಹವೂ ಮಿಥ್ಯಾತ್ವ ಅನುಮಾನವು ಅಸಾಧಕವೆಂದೆನ್ನಲು ಸಾಕು ಎಂಬ ಭಾವ.



## टिप्पणीनाम् विशेषार्थानि

### ॥ सत्व निषेध एव इति॥

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

अतः तर्हि प्राग् उक्त पक्षे सत्व निषेध एव क्रियते–सत्व निषेध एव इति॥

ಆದ್ದರಿಂದ ಮೇಲಿನ ಪ್ರತಿಪಾದಿಸಿದ ವಿಕಲ್ಪದಲ್ಲಿ ಸತ್ಯತ್ವದ ನಿಷೇಧವನ್ನು ಮಾತ್ರ ಮಾಡುತ್ತೇವೆ ಎಂಬ ಪರಪಕ್ಷದವರ ವಾದವನ್ನು ಈ ಟೀಕಾವಾಕ್ಯ ಪ್ರತಿಪಾದಿಸುತ್ತದೆ.

### ॥ न तु इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

तथा च न आश्रयासिद्ध्यादि इति भावः।

ಹಾಗಾದಲ್ಲಿ ಆಶ್ರಯಾಸಿದ್ಧ್ಯಾದಿಗಳಿಗೆ ಆಸ್ಪದವಿರುವದಿಲ್ಲ ಎಂಬ ಭಾವ.

### ॥ सत्त्वनिषेध अतिरिक्त इति॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

शशश्रृङ्गादौ सत्त्व अभावेन एव क्लृप्तेन असद् व्यवहार उपपत्तौ, तत् व्यतिरिक्त असत्व कल्पनं, नित्यत्व अभाव अतिरिक्त अनित्यत्व कल्पनमिव निष्प्रमाणम् इत्यर्थः।

ಶಶಶೃಂಗಾದಿಗಳಲ್ಲಿ ಸತ್ಯತ್ವದ ಅಭಾವತೆಯಿಂದಲೇ, ಸಿದ್ಧವಾಗಿರುವ ಅಸತ್ಯ ವ್ಯವಹಾರದ ಉಪಪತ್ತಿ ಉಂಟಾಗಲುವದರಿಂದ, ಅದರ ವ್ಯತಿರಿಕ್ತ ಅಸತ್ಯದ ಕಲ್ಪನೆಯು, ನಿತ್ಯತ್ವದ ಅಭಾವತೆಯ ವ್ಯತಿರಿಕ್ತ ಅನಿತ್ಯತ್ವದ ಕಲ್ಪನೆಯಂತೆ, ಪ್ರಮಾಣವಿಲ್ಲದ್ದಾಗಿದೆ ಎಂದರ್ಥ.

### ॥ असत्वं इति ॥

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

उत्तरं शङ्कते– असत्वं इति॥

ಪರಪಕ್ಷದವರ ಮೋದಲಿನ ಪ್ರತಿಪಾದನೆಗೆ ಕೊಟ್ಟ ನಮ್ಮ ಉತ್ತರಕ್ಕೆ ಪರಪಕ್ಷದವರ ಶಂಕೆಯನ್ನು ಈ ಟೀಕಾವಾಕ್ಯ ಪ್ರತಿಪಾದಿಸುತ್ತದೆ.

### ॥ न सत्त्व अभाव इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

तथा च तावत् मात्रेण न आश्रयासिद्धिः इति भावः।

ಅದರಂತೆ ಅಂದರೆ, ಅಸತ್ವವೇ ಅನಾಶ್ರಯತ್ವಕ್ಕೆ ಪ್ರಯೋಜಕ ಸತ್ಯತ್ವದ ಅಭಾವತೆ ಅಲ್ಲ. ಅದರಿಂದ ಆಶ್ರಯಾಸಿದ್ಧಿ ದೋಷಕ್ಕೆ ಆಸ್ಪದವಿರುವದಿಲ್ಲ ಎಂಬ ಭಾವ.

### ॥ नियामक अभावात् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

तथा च अनाश्रयत्वे सत्त्व अभावस्यैव प्रयोजकत्वं न असत्वस्य इत्यपि वक्तुं शक्यत्वेन आश्रय असिद्धिः स्यात् इति आशयः।

ಅದರಂತೆ, ಅನಾಶ್ರಯತ್ವದಲ್ಲಿ ಸತ್ಯತ್ವ ಅಭಾವತೆಯೇ ಪ್ರಯೋಜಕವಿರುತ್ತದೆ ಅಸತ್ಯತ್ವವಲ್ಲ ಎಂದೂ ಕೂಡ ಹೇಳಲು ಶಕ್ಯವಿರುವದರಿಂದ ಆಶ್ರಯಾಸಿದ್ಧಿ ಉಂಟಾಗುತ್ತದೆ ಎಂದು ಆಶಯವಿರುತ್ತದೆ.

॥ समं इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

सत्व अभाव एव अनाश्रयत्वे प्रयोजकः न तु असत्वं प्रयोजकं इति भवत्पक्षेऽपि नियामक नास्ति इति दूषणं इत्यर्थः।

ಅಂದರೆ, ಸತ್ಯತ್ವದ ಅಭಾವತೆಯೆ ಅನಾಶ್ರಯತ್ವಕ್ಕೆ ಪ್ರಯೋಜಕ ಅಸತ್ಯತ್ವ ಪ್ರಯೋಜಕವಲ್ಲ ಎಂಬ ಸಿದ್ಧಾಂತಿಗಳ ಪಕ್ಷಕ್ಕೂ ನಿಯಾಮಕವಿರುವದಿಲ್ಲ ಎಂದು ದೂಷಣವಿರುತ್ತದೆ ಎಂದರ್ಥ.

तथा च सत्वनिषेधेन आश्रय असिद्धि उद्भावनं भवताम् अयुक्तं हृदयम्।

ಅದರಂತೆ, ಸತ್ಯತ್ವ ನಿಷೇಧದಿಂದ ಆಶ್ರಯ ಅಸಿದ್ಧಿಯನ್ನು ಸಿದ್ಧಾಂತಿಗಳ ಹೇಳಿಕೆ ಅಯುಕ್ತವಾಗಿದೆ ಎಂದು ಪರಪಕ್ಷದವರ ಮತವಾಗಿದೆ.

॥ अस्तु तावत् इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

यदि असत्व अभाव आश्रयत्वे प्रयोजकः स्यात् तदा आश्रयत्व अभावरूपे अनाश्रयत्वे असत्व अभाव अभावरूपं असत्वमेव प्रयोजकं स्यात्। न तु एतदस्ति गौरवात्।

ಒಂದು ವೇಳೆ ಅಸತ್ಯತ್ವದ ಅಭಾವ ಆಶ್ರಯತ್ವಕ್ಕೆ ಪ್ರಯೋಜಕವು ಎನ್ನುವದಾದರೆ, ಆಗ ಆಶ್ರಯತ್ವದ ಅಭಾವರೂಪ ಅನಾಶ್ರಯತ್ವವು ಅಸತ್ಯತ್ವದ ಅಭಾವ ಅಭಾವರೂಪ, ಅಸತ್ಯತ್ವವೇ ಪ್ರಯೋಜಕವಾಗುತ್ತದೆ. ಅದು ಹಾಗೆ ಇರುವದಿಲ್ಲ. ಇದು ಹೆಚ್ಚಿಗೆಯೆಳೆದಂತಾಯಿತು.

किन्तु लाघवेन आश्रयत्वे सत्वमेव प्रयोजकम् तथा च अनाश्रयत्वेऽपि सत्व अभाव एव प्रयोजकं इति निश्चितुं शक्यत्वेन निश्चित आश्रयासिद्धिः वक्तुं शक्या।

ಮತ್ತು ಹಗುರತೆಯಿಂದ ಹೇಳುವುದಾದರೆ, ಆಶ್ರಯತ್ವಗೆ ಸತ್ಯತ್ವವೇ ಪ್ರಯೋಜಕವು, ಅದರಂತೆ ಅನಾಶ್ರಯತ್ವವು ಕೂಡ ಸತ್ಯತ್ವದ ಅಭಾವತೆಗೆಯೆ ಪ್ರಯೋಜಕ ಎಂದು ನಿಶ್ಚಯಿಸಲು ಶಕ್ಯವಾದ್ದರಿಂದ, ನಿಶ್ಚಿತ ಆಶ್ರಯಾಸಿದ್ಧಿಯನ್ನು ಹೇಳುವದು ಶಕ್ಯವಾಗಿರುತ್ತದೆ.

तथाऽपि सत्व अभावस्य अनाश्रयत्व प्रयोजकत्व निश्चय अभावं उपेत्य सन्दिग्ध असिद्धिः उच्यत इति तावत् शब्दाभिप्रायः।

ಅದರಂತೆ ಸತ್ಯತ್ವದ ಅಭಾವತೆಯ, ಅನಾಶ್ರಯತ್ವ ಪ್ರಯೋಜಕತ್ವದ ನಿಶ್ಚಿತ ಅಭಾವತೆಯನ್ನು ಒಪ್ಪಿ, ಸಂದಿಗ್ಧ ಅಂದರೆ ಸಂದೇಹದಿಂದ ಕೂಡಿದ ಅಸಿದ್ದಿಯನ್ನು ಹೇಳಲಾಗುತ್ತಿದೆ ಎಂದು ತಾವತ್ ಪದದ ಅಭಿಪ್ರಾಯವಿರುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

सत्व विरहस्य अनाश्रयत्वे प्रयोजकत्व सन्देहः अस्ति इत्यर्थः।



ಅಂದರೆ, ಇಲ್ಲಿ ಸತ್ಯತ್ವದ ವಿರಹತೆಯ ಅನಾಶ್ರಯತ್ವದ ಪ್ರಯೋಜಕತ್ವದಲ್ಲಿ ಸಂದೇಹ ಉಂಟುಮಾಡುತ್ತದೆ ಎಂದರ್ಥ.

॥ सन्देहेऽपि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

यदि त्वत् पक्षे नियामकं स्यात् तदा अनाश्रय असिद्धिः। यदि च अस्मत् पक्षे नियामकं स्यात् तदा स्यात् एव आश्रय असिद्धिः इति आश्रयासिद्ध सन्देहेपि, सन्दिग्ध आश्रयासिद्धैव अनुमानं दुष्टं इति असाधकं इत्यर्थः।

ಒಂದು ವೇಳೆ ತಮ್ಮ(ಪರಪಕ್ಷದವರ) ಪಕ್ಷದಂತೆ ನಿಯಾಮಕವಿದ್ದರೆ ಆಗ ಅನಾಶ್ರಯತ್ವದ ಅಸಿದ್ಧಿ ಉಂಟಾಗುತ್ತದೆ. ಇನ್ನು ಒಂದು ವೇಳೆ, ನಮ್ಮ(ಸಿದ್ಧಾಂತಿಗಳ) ಪಕ್ಷದಂತೆ ನಿಯಾಮಕವಿದ್ದರೆ ಆಗ ಆಶ್ರಯಾಸಿದ್ಧಿ ಉಂಟಾಗುತ್ತದೆ. ಹೀಗೆ ಆಶ್ರಯಾಸಿದ್ಧಿಯ ಸಂದೇಹ ಉಂಟಾಗಿ ಸಂದಿಗ್ಧ ಆಶ್ರಾಯಾಸಿದ್ಧಿ ಎಂಬ ದೋಷ ಮಿಥ್ಯಾತ್ವ ಅನುಮಾನಕ್ಕೆ ಉಂಟಾಗುವದರಿಂದ ಅದು ಅಸಾಧಕವಾಗುತ್ತದೆ ಎಂದರ್ಥವಾಗುತ್ತದೆ.

### ५.५.३.४ व्यावहारिक सत्वस्य आश्रयत्व प्रयोजकत्व शङ्का तत् निरासश्च

## टीका

व्यावहारिक सत्ता स्वीकाराद् आश्रयतोपपत्तिः इति चेत्। केयं व्यावहारुकी सत्ता? यदा व्यवहार निर्वाहहेतुः तदा सिद्धं नः समीहितम्। व्यर्थं च व्यावहारिकि इति विशेषणम्। सत्तां अङ्गीकृत्य पुनः तत् निषेधे परस्य अपसिद्धान्तश्च।

ವ್ಯಾವಹಾರಿಕ ಸತ್ತಾ ಸ್ವೀಕರಿಸದಲ್ಲಿ ಆಶ್ರಯದ ಉಪಪತ್ತಿ ಉಂಟಾಗಬಹುದಲ್ಲ? ಎಂದರೆ ವ್ಯಾವಹಾರಿಕ ಸತ್ತಾ ಅಂದರೆ ಏನು? ವ್ಯವಹಾರ ನಿರ್ವಾಹಕ್ಕಾಗಿ ಅಂಗೀಕರಿಸಿದ ಸತ್ತಾ ಅಂದರೆ ಆಧಾರ ಅಥವಾ ಆಶ್ರಯತ್ವ ಎನ್ನುವುದಾದರೆ, ಆಗ ನಾವು ಕೂಡ ಇಂತಹ ವ್ಯವಹಾರ ಹೇತುಭೂತ ಸತ್ತೆಯನ್ನು ಪ್ರಪಂಚಕ್ಕೆ ಅಂಗೀಕರಿಸಿದ್ದರಿಂದ, ಆಶ್ರಯಾಸಿದ್ಧಿ ಪರಿಹಾರವಾದರೂ, ಈ ಸತ್ತಾ ಪ್ರತಿಷೇಧರೂಪ ಮಿಥ್ಯಾವನ್ನು ಸಾಧಿಸಿವದರಿಂದ ಬಾಧ ಉಂಟಾಗಿ, ಮಿಥ್ಯಾತ್ವ ಅನುಮಾನಕ್ಕೆ ದೋಷ ಉಂಟಾಗುವದರಿಂದ. ಇದು ನಮಗೆ ಬೇಕಾಗಿದ್ದನ್ನೆ ಸಿದ್ಧ ಮಾಡಿದಂತಾಯಿತು. ಮತ್ತು ವ್ಯಾವಹಾರಿಕ ವಿಶೇಷಣವು ವ್ಯರ್ಥವಾಗುವದು. ಹಾಗೂ, ಸತ್ತೆಯನ್ನು ಅಂಗೀಕರಿಸಿ ಪುನಃ ಅದನ್ನು ನಿಷೇಧಿಸಿದಲ್ಲಿ ಪರಪಕ್ಷದವರಿಗೆ ಅಪಸಿದ್ಧಾಂತ ದೋಷ ಕೂಡ ಉಂಟಾಗುವದು.

## टिप्पणीनाम् विशेषार्थानि

### ॥ व्यवहार निर्वाहहेतु इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**किम् व्यवहार निर्वाह हेतुभूता सत्ता, व्यावहारिक सत्ता उत भ्रान्तिसिद्धा सत्ता इति विकल्प्य, आद्यं अनूद्य दूषयति– व्यवहार निर्वाह इति॥**

**घटः अस्ति इत्यादि व्यवहार निर्वाह हेतुभूता सत्ता व्यावहारिक सत्ता इत्यर्थः।**

ವ್ಯವಹಾರ ನಿರ್ವಾಹ ಹೇತುವಿನಿಂದ ಕೂಡಿದ ಸತ್ತಾ ಅಂದರೆ ಏನು? ವ್ಯಾವಹಾರಿಕ ಸತ್ತಾ ಎಂತಲೊ ಅಥವಾ ಭ್ರಾಂತಿಯಿಂದ ಸಿದ್ಧವಾದ ಸತ್ತಾ ಎಂತಲೋ ಎಂದು ವಿಕಲ್ಪಿಸಿ, ಮೊದಲನೆಯದನ್ನು ನಮೂದಿಸಿ ಈ ಟೀಕಾ ವಾಕ್ಯ ದೂಷಿಸುತ್ತದೆ.

ಇಲ್ಲಿ "ಘಟ ಇರುತ್ತದೆ" ಎಂದು ಮುಂತಾಗಿ ವ್ಯವಹಾರ ನಿರ್ವಾಹ ಹೇತುವಿನಿಂದ ಕೂಡಿದ ಸತ್ತಾ ವ್ಯಾವಹಾರಿಕ ಸತ್ತಾ ಎಂದರ್ಥ. ಸತ್ತಾ ಮತ್ತು ವ್ಯಾವಹಾರಿಕ ಸತ್ತಾ ಇವುಗಳ ಪಾರಿಭಾಷಿಕ ಅರ್ಥವನ್ನು ತಿಳಿದುಕೊಳ್ಳುವ ಇಚ್ಛೆವುಳ್ಳ ಓದುಗರು, ಈ ಗ್ರಂಥದ ಕೊನೆಯಲ್ಲಿ ಕೊಟ್ಟ ಪಾರಿಭಾಷಿಕ ಶಬ್ದಾರ್ಥ ಕೋಷವನ್ನು ಪರಿಗಣಿಸಬೇಕು.

### ॥ सिद्धं न इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**व्यवहार हेतुभूत सत्तायाः प्रपञ्च अंगीकारेण आश्रयासिद्ध परिहारेपि, सत्ता प्रतिषेधरूप मिथ्यात्व साधने बाध आपात्या, अनुमानस्य दुष्टत्वेन अस्माकं समीहितं सिद्धं इत्यर्थः।**

ವ್ಯವಹಾರ ಹೇತುವಿನಿಂದ ಕೂಡಿದ ಸತ್ತೆಯನ್ನು ಪ್ರಪಂಚಕ್ಕೆ ನಾವು ಅಂಗೀಕರಿಸಿದ್ದರಿಂದ ಆಶ್ರಯಾಸಿದ್ಧ ದೋಷದ ಪರಿಹಾರವಾದರೂ ಸತ್ತಾ ಪ್ರತಿಷೇಧರೂಪ ಮಿಥ್ಯಾತ್ವ ಸಾಧನೆಯಿಂದ ಬಾಧ ಉಂಟಾಗಿ, ಮಿಥ್ಯಾತ್ವ ಅನುಮಾನವು ದೋಷಕ್ರಾಂತವಾಗುವದರಿಂದ. ನಮಗೆ ಅಭಿಪ್ರೇತವಾದುದೆ ಸಿದ್ಧವಾದಂತಾಯಿತು ಎಂದರ್ಥ.

### ॥ व्यर्थं च इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**व्यवहार निर्वाह हेतु सत्ताया अभावेन व्यावर्त्य अभावात् व्यावहारिक विशेषणं व्यर्थं इत्यर्थः।**

ಇನ್ನು ವ್ಯವಹಾರ ನಿರ್ವಾಹ ಹೇತು ಸತ್ತಾ ಇಲ್ಲದಿರುವದರಿಂದ, ಸತ್ತಾ ಹಾಗೂ ವ್ಯಾವಹಾರಿಕ ಸತ್ತಾ ಇವುಗಳಲ್ಲಿಯ ಪರಸ್ಪರ ಭೇದವೂ ಇಲ್ಲವಾದ್ದರಿಂದ, ಇಲ್ಲಿ ವ್ಯಾವಹಾರಿಕ ವಿಶೇಷಣವು ವ್ಯರ್ಥವಾಗಿರುತ್ತದೆ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**सत्त्वेन व्यवहारमात्रं व्यावहारिकं सत्त्वं इति अङ्गीकारे मिथ्यात्ववादिनः सत्त्वनिषेधलक्षण प्रयोजन सहितं व्यावहारिक पदं स्यात्। तत् तु न अङ्गीकर्तुं शक्यम्। अर्थगत सत्व अभावेन आश्रयासिद्धि तादवस्थ्यात्।**



ಸತ್ಯತ್ವದಿಂದ ವ್ಯವಹಾರ ಮಾತ್ರಕ್ಕೆ ಪ್ರಯೋಜನವು ಅದು ವ್ಯಾವಾಹಾರಿಕ ಸತ್ಯ ಎಂದು ಅಂಗೀಕರಿಸಿದರೆ, ಮಿಥ್ಯಾತ್ವವಾದಿಗಳಿಗೆ ಸತ್ಯತ್ವ ನಿಷೇಧ ಲಕ್ಷಣ ಪ್ರಯೋಜನ ಸಹಿತ, ವ್ಯಾವಹಾರಿಕ ಪದವಿರುತ್ತದೆ ಎಂದು ಹೇಳಬೇಕಾಗುವದು. ಹಾಗೆ ಅವರು ಅಂಗೀಕರಿಸಲು ಅಶಕ್ಯವಾಗಿರುತ್ತದೆ. ವ್ಯಾವಹಾರಿಕ ಸತ್ಯದಲ್ಲಿ ಅರ್ಥಗತ ಸತ್ಯತ್ವದ ಅಭಾವತೆ ಇರುವದರಿಂದ, ಆಶ್ರಾಯಾಸಿದ್ಧಿ ದೋಷ ಹಾಗೆಯೆ ಉಳಿದಂತಾಗುವದು.

**व्यवहार निर्वाहहेतुभूतं सत्वं व्यावहारिकं सत्वं अङ्गीकारे तु अर्थसत्व सम्भवेन आश्रयासिद्धि परिहारेऽपि सत्ताया अभ्युपगतत्वेन सत्तानिषेधलक्षण प्रयोजनरहितं व्यावहारिकत्व विशेषणं व्यर्थ्यं इत्यर्थः।**

ಇನ್ನು ವ್ಯವಹಾರ ನಿರ್ವಾಹಣೆ ಹೇತುದಿಂದ ಕೂಡಿದ ಸತ್ಯತ್ವ ವ್ಯಾವಹಾರಿಕ ಸತ್ಯತ್ವ ವೆಂದು ಅಂಗೀಕರಿಸಿದರೆ, ಅರ್ಥಗತ ಸತ್ಯತ್ವವು ಸಂಭವಿಸುವದರಿಂದ ಆಶ್ರಯಾಸಿದ್ಧಿ ದೋಷದಿಂದ ಪರಿಹಾರ ದೊರೆತರೂ, ಸತ್ತೆಯನ್ನು ಒಪ್ಪಿಕೊಂಡಿದ್ದರಿಂದ, ಸತ್ತಾ ನಿಷೇಧಲಕ್ಷಣ ಪ್ರಯೋಜನವಿಲ್ಲದ ವ್ಯಾವಹಾರಿಕ ವಿಶೇಷಣವು ವ್ಯರ್ಥವೆನಿಸುವದು.

**यद्वा व्यवहार निर्वाह हेतु सत्ताया अभावेन व्यावर्त्य अभावेन निष्प्रयोजनं विशेषणं इत्यर्थः।**

ಅಥವಾ ಕೇವಲ ವ್ಯವಹಾರ ನಿರ್ವಾಹಣ ಹೇತು ಸತ್ತಾ ಎಂಬುದು ಇರುವದಿಲ್ಲ. ಆದ್ದರಿಂದ ಸತ್ತಾ ಹಾಗೂ ವ್ಯವಹಾರ ನಿರ್ವಾಹಣ ಹೇತು ಸತ್ತಾ ಇವುಗಳಲ್ಲಿಯ ಪರಸ್ಪರ ಭೇದವೂ ಇರುವದಿಲ್ಲ. ಆದ್ದರಿಂದ ಇಲ್ಲಿ ವ್ಯಾವಹಾರಿಕ ವಿಶೇಷಣವು ನಿಷ್ಪ್ರಯೋಜಕವಾದುದು ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**सत्वे वा अन्तरवैजाति अभावेन विशेषणं व्यर्थं इत्यर्थः।**

ಸತ್ಯತ್ವದಲ್ಲಿ ಅಂತರೀಯ ವಿಜಾತಿಗಳಿಗೆ ಆಸ್ಪದವಿರುವದಿಲ್ಲ. ಆದ್ದರಿಂದ ಇಲ್ಲಿ ವ್ಯಾವಹಾರಿಕ ವಿಶೇಷಣವು ವ್ಯರ್ಥವಾಗಿರುತ್ತದೆ ಎಂದರ್ಥ.

### ॥ सत्तां इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**आश्रयासिद्धि परिहाराय व्यावहारिक सत्ता अङ्गीकृत्य पुनः तत् प्रतिषेधरूप मिथ्यात्व साधने, न केवलं बाधे न अस्मद् मतसिद्धिः किन्तु अपसिद्धान्तेन अपि इत्याह– सत्तां इति॥**

ಆಶ್ರಯಾಸಿದ್ಧಿ ದೋಷದ ಪರಿಹಾರಕ್ಕಾಗಿ ಪರಪಕ್ಷದವರು ವ್ಯಾವಹಾರಿಕ ಸತ್ತೆಯನ್ನು ಅಂಗೀಕರಿಸಿ ಪುನಃ ಅದನ್ನು ಪ್ರತಿಷೇಧರೂಪ ಮಿಥ್ಯಾತ್ವ ಸಾಧಿಸಿದರೆ, ಅಲ್ಲಿ ಕೇವಲ ಬಾಧ ಉಂಟಾಗಿ ನಮ್ಮ ಮತಸಿದ್ಧವಾಗುವದಲ್ಲದೆ ಪರಪಕ್ಷದವರು ಪ್ರತಿಪಾದಿಸಿದ ಮಿಥ್ಯಾತ್ವ ಅನುಮಾನಕ್ಕೆ ಅಪಸಿದ್ಧಾಂತ ದೋಷಕೂಡ ಒದಗುವದೆಂದು ಈ ಟೀಕಾವಕ್ಯ ಪ್ರತಿಪಾದಿಸುತ್ತದೆ.

### ॥ सत्तां अङ्गीकृत्य इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

यद्वा सत्व अनाश्रयत्व इत्यत्र, किं सत्तामात्रं प्रतिषेध: अभ्युपगम:, किं व्यावहारिक सत्ता अभ्युपगमेन पारमार्थिक सत्ता प्रतिषेध इति विकल्पं मनसि निधाय आद्यं अपसिद्धान्तेन दूषयति– सत्तां अङ्गीकृत्य इति॥

व्याहते: क्वचित् पाठे स्फुट: अर्थ:।

ಅಥವಾ ಮಿಥ್ಯಾ ಎಂದರೆ ಸತ್ಯತ್ವದ ಅನಾಶ್ರಯತ್ವ ಎಂಬ ವಿಕಲ್ಪದಲ್ಲಿ, ಏಕೆ ಪರಪಕ್ಷದವರು ಸತ್ತಾಮಾತ್ರ ಪ್ರತಿಷೇಧ ಎಂದೊಪ್ಪಿರುವರೊ, ಅಥವಾ ಏಕೆ ವ್ಯಾವಹಾರಿಕ ಸತ್ತೆಯನ್ನು ಅಂಗೀಕರಿಸಿ ಪಾರಮಾರ್ಥಿಕ ಸತ್ತೆಯ ಪ್ರತಿಷೇಧಮಾಡುತ್ತಾರೊ? ಎಂಬ ವಿಕಲ್ಪವನ್ನು ಮನಸ್ಸಿನಲ್ಲಿಟ್ಟು, ಟೀಕಾಕೃತ್ಪಾದರು ಈ ಟೀಕಾವಾಕ್ಯದಿಂದ ಮೊದಲಿನ ವಿಕಲ್ಪವನ್ನು ಅಪಸಿದ್ಧಾಂತ ದೋಷದಿಂದ ದೂಷಿಸುತ್ತಾರೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

किंच सत्यता अनाश्रयत्वं इत्यत्र किं सत्तामात्र निषेध: अभिप्रेत:? किं वा व्यावहारिक सत्ता अभ्युपगमेन पारमार्थिक सत्ता निषेध:? इति विकल्पं हृदि निधाय आद्यं दूषयति–सत्तां अङ्गीकृत्य इति॥

ಮತ್ತು ಮಿಥ್ಯಾ ಎಂದರೆ ಸತ್ಯತ್ವದ ಅನಾಶ್ರಯತ್ವ ಎಂಬ ವಿಕಲ್ಪದಲ್ಲಿ, ಏಕೆ ಸತ್ತಾಮಾತ್ರ ನಿಷೇಧ ಅಭಿಪ್ರೇತವಾಗಿದೆಯೋ? ಅಥವಾ ವ್ಯಾವಹಾರಿಕ ಸತ್ತಾ ಅಂಗೀಕರಿಸಿ, ಪಾರಮಾರ್ಥಿಕ ಸತ್ತಾ ನಿಷೇಧಿಸಲಾಗಿದೆಯೊ? ಎಂಬ ವಿಕಲ್ಪವನ್ನು ಹೃದಯದಲ್ಲಿಟ್ಟಕೊಂಡು. ಟೀಕಾಕೃತ್ಪಾದರು ಈ ಟೀಕಾವಾಕ್ಯದಿಂದ ಮೊದಲಿನ ವಿಕಲ್ಪವನ್ನು ದೂಷಿಸುತ್ತಾರೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

सूत्रकारोक्तं शेष:।

ಇಲ್ಲಿ सूत्रकारोक्तं ಎಂಬ ಪದವನ್ನು ಸೇರಿಸಿ ಅರ್ಥಮಾಡಬೇಕು. ಅಂದರೆ ಬ್ರಹ್ಮಸೂತ್ರಕಾರರು ಪ್ರತಿಪಾದಿಸಿದಂತೆ, ಸತ್ತೆಯನ್ನು ಅಂಗೀಕಾರ ಮಾಡಿ, ಎಂದರ್ಥಾಗುವದು ಎಂಬ ಭಾವವಿರುತ್ತದೆ.

एतेन सत्तां अङ्गीकृत्य तत् निषेधे व्याघातस्यैव वक्तव्यत्वेन, अपसिद्धान्त अभिधानं अनुपपन्नं इति परास्तम्।

ಈ ಟೀಕಾವಾಕ್ಯದಿಂದ, ಸತ್ತೆಯನ್ನು ಅಂಗೀಕರಿಸಿ, ಅದರ ನಿಷೇಧ ವ್ಯಾಘಾತವೆಂದೇನಿಸುವದರಿಂದ ಅಪಸಿದ್ಧಾಂತವೆಂದು ದೋಷ ಹೇಳುವದು ಯೋಗ್ಯವಲ್ಲ ಎಂಬುದನ್ನು ನಿರಾಕರಿಸಲಾಯಿತು ಎಂಬ ಭಾವವಿರುತ್ತದೆ.

## टीका

पारमार्थिकत्वमेव निषिध्यते न तु व्यावहारिकी सत्ता इति चेत्। किं इदं पारमार्थिकत्वं ? अव्यावहारिकत्वं चेत् निषिध्यताम्। न नो हानि:। अबाध्यत्वं



इति चेत् अबाध्यत्व निषेधो बाध्यत्वमेव। तच्च सत्तानिषेध इति कुतो व्यावहारिकी सत्तापि? इतरेतराश्रय दोषो वा स्यात्।

ಹಾಗಾದರೆ ನಾವು (ಪರಪಕ್ಷದವರು) ಪಾರಮಾರ್ಥಿಕತ್ವ ಸತ್ತಾ ಮಾತ್ರ ನಿಷೇಧಿಸುತ್ತೇವೆ, ವ್ಯಾವಹಾರಿಕ ಸತ್ತೆಯನ್ನು ಅಲ್ಲ. ಆಗ ಅಪಸಿದ್ಧಾಂತ ದೋಷಕ್ಕೆ ಆಸ್ಪದವಿರುವದಿಲ್ಲ ಎಂದೆನ್ನುತ್ತೇವೆ ಎಂದರೆ. ಇಲ್ಲಿ ಪಾರಮಾರ್ಥಿಕತ್ವ ಎಂದರೆ ಏನು?

ಅವ್ಯವಹಾರಿಕತ್ವ ಎಂದರೆ, ನಾವು (ಸಿದ್ಧಾಂತಿಗಳು) ಕೂಡ ಅದನ್ನು ನಿಷೇಧಿಸುತ್ತೇವೆ. ಇನ್ನು ಪಾರಮಾರ್ಥಿಕತ್ವವನ್ನು ಅವ್ಯವಹಾರಿಕತ್ವವೆಂದು ಪರಿಗಣಿಸಿ ಅಂತಹ ಸತ್ತೆಯನ್ನು ನಿಷೇಧಿಸುವದರಿಂದ ವ್ಯವಹಾರ ನಿರ್ವಾಹಕ ಸತ್ತೆಯೆ ಪ್ರಾಪ್ತವಾಗುವದರಿಂದ ಅದನ್ನು ಪ್ರಪಂಚಕ್ಕೆ ಸಾಧಿಸುವದರಿಂದ, ನಮ್ಮ ಸಿದ್ಧಾಂತಕ್ಕೆ ಯಾವ ಹಾನಿಯು ಆಗುವದಿಲ್ಲ.

ಇನ್ನು ಪಾರಮಾರ್ಥಿಕತ್ವವನ್ನು ಅಬಾಧ್ಯತ್ವ ಎನ್ನುತ್ತೇವೆ, ಅದರಂತೆ ಅದನ್ನು ನಿಷೇಧಿಸಿದಲ್ಲಿ ಬಾಧ್ಯತ್ವವೇ ಉಂಟಾಯಿತು. ಅಂದರೆ ಈಗಾಗಲೆ ಹೇಳಿದಂತೆ, प्रतिपन्न उपाधौ त्रैकालिक सत्ता प्रतिषेध ಎಂದು ಮಿಥ್ಯಾಪದದ ಲಕ್ಷಣವೇ ಬಾಧಕವೆಂದು ಹೇಳಿದಂತಾಯಿತು. ಈ ಬಾಧಕದಲ್ಲಿಯ ಸತ್ತಾ ಪ್ರತಿಷೇಧವೆಂದರೆ, ಸತ್ತಾಪ್ರತಿಷೇಧಮಾತ್ರ ವಿವಕ್ಷಿತವಾಗಿದೆಯೋ ಅಥವಾ ಪಾರಮಾರ್ಥಿಕ ಸತ್ತಾ ನಿಷೇಧವನ್ನೊ? ಇನ್ನು ಸತ್ತಾಪ್ರತಿಷೇಧಮಾತ್ರ ವಿವಕ್ಷಿತವಾಗಿದೆ ಎಂದರೆ, न तु व्यावहारिकी सत्ता इति ಎಂದು ಹೇಳಿದ್ದು ಅಸತ್ಯವೆನಿಸುತ್ತದೆ. ಇನ್ನು ಪಾರಮಾರ್ಥಿಕ ಸತ್ತಾನಿಷೇಧ ವಿವಕ್ಷಿತವಾಗಿದೆ ಎಂದರೆ ಇತರೆತಾಶ್ರಯ ಅಂದರೆ ಅನ್ಯೊನ್ಯಾಶ್ರಯತ್ವ ಉಂಟಾಗುತ್ತದೆ. ಅದನ್ನು ಹೀಗೆ ವಿವರಿಸಬಹುದು: ಪಾರಮಾರ್ಥಿಕ ಪದದ ಅರ್ಥಗಮಕವಾದರೆ ಬಾಧ್ಯತ್ವದ ಅರ್ಥಗಮಕವಾಗಬೇಕು, ಇನ್ನು ಬಾಧ್ಯತ್ವದ ಅರ್ಥಗಮಕವಾದರೆ ಅಬಾಧ್ಯತ್ವ ಲಕ್ಷಣ ಪಾರಮಾರ್ಥಿಕತ್ವದ ಅರ್ಥಗಮಕವಾಗಬೇಕು. ಇದು ಅನ್ಯೋನ್ಯಾಶ್ರಯ ದೋಷ.

## टिप्पणीनाम् विशेषार्थानि

॥ पारमार्थिकत्वमेव इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

द्वितीयं शङ्कते– पारमार्थिकत्वमेव इति॥

ಮೇಲೆ ನಮೂದಿಸಿದ ಎರಡನೆ ವಿಕಲ್ಪವನ್ನು ಈ ಟೀಕಾವಾಕ್ಯ ಆಶಂಕಿಸುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

द्वितीयं शङ्कते– पारमार्थिकत्वमेव इति॥

ಮೇಲೆ ನಮೂದಿಸಿದ ಎರಡನೆ ವಿಕಲ್ಪವನ್ನು ಈ ಟೀಕಾವಾಕ್ಯ ಆಶಂಕಿಸುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**अपसिद्धान्त परिहारं आशङ्कते– पारमार्थिकत्वमेव इति॥**
**सूत्रकाराभिमतं व्यावहारिक सत्वं अङ्गीकृत्य तत् अनभिमतम् पारमार्थिक सत्वं निषिध्यते। अतो न अपसिद्धान्त इति भावः।**

ಈ ಟೀಕಾ ಮೇಲೆ ನಮೂದಿಸಿದ ಅಪಸಿದ್ಧಾಂತ ದೋಷದ ಪರಿಹಾರವನ್ನು ಆಶಂಕಿಸುತ್ತದೆ. ಸೂತ್ರಕಾರರ ಅಭಿಮತದಂತೆ ವ್ಯಾವಹಾರಿಕ ಸತ್ಯವನ್ನು ಅಂಗೀಕರಿಸಿ, ಅವರ ಅಭಿಮತವಲ್ಲದ ಪಾರಮಾರ್ಥಿಕ ಸತ್ಯತ್ವವನ್ನು ನಿಷೇಧಿಸಲಾಗುತ್ತಿದೆ. ಆದ್ದರಿಂದ ಅಪಸಿದ್ಧಾಂತ ದೋಷಕ್ಕೆ ಆಸ್ಪದವಿರುವದಿಲ್ಲ ಎಂಬ ಭಾವ.

## ॥ न तु इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**तथा च न आश्रयासिद्धिः इति भावः।**

ಅದರಂತೆ, ಹೀಗೆ ಹೇಳುವದರಿಂದ ಆಶ್ರಯಾಸಿದ್ಧಿ ದೋಷಕ್ಕೆ ಆಸ್ಪದವಿರುವದಿಲ್ಲ ಎಂಬ ಭಾವ.

## ॥ किं इदं इत्यादिना ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**दूषयति–किं इदं इत्यादिना॥**

ಈ ಟೀಕಾವಾಕ್ಯ ಹಿಂದೆ ಪ್ರತಿಪಾದಿಸಿದ ವಿಕಲ್ಪವನ್ನು ದೂಷಿಸುವ ಪೀಠಿಕೆಯನ್ನು ಹಾಕುತ್ತದೆ.

## ॥ न नो हानि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**व्यवहार निर्वाह हेतुत्वस्यैव प्राप्त्या न अस्माकं काचित् क्षितिः इत्यर्थः।**

ಪಾರಮಾರ್ಥಿಕತ್ವವೆಂದರೆ ಅವ್ಯವಹಾರಿಕತ್ವ ಎಂದು ಪರಿಗಣಿಸಿ, ಅಂತಹ ಸತ್ತೆಯನ್ನು ನಿಷೇಧಿಸಿದಲ್ಲಿ, ವ್ಯವಹಾರ ನಿರ್ವಾಹಕ ಹೇತು ಸತ್ತೆಯೆ ಪ್ರಾಪ್ತವಾದಂತಾಗುವದರಿಂದ ನಮಗೆ (ಸಿದ್ಧಾಂತಿಗಳಿಗೆ) ಏನು ನುಕ್ಸಾನವಾಗಲಿಲ್ಲ ಎಂದರ್ಥ.

## ॥ तच्च इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**प्रतिपन्न उपाधौ सत्ताप्रतिषेधो हि बाधः। तत्र किं सत्ताप्रतिषेधमात्रं विवक्षितं पारमार्थिक सत्ता प्रतिषेधो वा। आद्ये आह– तच्च इति॥**
**तथा च न तु व्यावहारिकी सत्ता निषिध्यत इत्युक्तं असत् इति भावः।**

ಇಲ್ಲಿ ಸತ್ಯತ್ವ ನಿಷೇಧರೂಪ "प्रतिपन्न उपाधौ सत्ताप्रतिषेधो" ಎಂಬ ಬಾಧದಲ್ಲಿ ಸತ್ತಾ ನಿಷೇಧಮಾತ್ರ ವಿವಕ್ಷಿತವಾಗಿದೆಯೋ ಅಥವಾ ಪಾರಮಾರ್ಥಿಕ ಸತ್ತೆಯ ಪ್ರತಿಷೇಧವೊ. ಮೊದಲನೆದನ್ನು ಹೇಳುವದಾದರೆ ಅದು ಹೀಗೆ ಸಾಧ್ಯ ಎಂದು ಈ ಟೀಕಾವಾಕ್ಯ ಪ್ರಶ್ನಿಸುತ್ತದೆ?



ಏಕೆಂದರೆ, ಹಿಂದೆ " न तु व्यावहारिकी सत्ता निषिध्यत" ಎಂದು ಹೇಳಿದ್ದು ಅಸತ್ಯವಾಗುತ್ತದೆ ಎಂಬ ಭಾವ.

## ॥ कुतो व्यावहारिकि इति॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**सत्यता अनाश्रयत्वं इत्यत्र पारमार्थिकत्वमेव निषिध्यते। तच्च पारमार्थिकत्वं अबाध्यत्वं वदता परेण अबाध्यत्व निषेधः सत्यता अनाश्रय इत्युक्तं स्यात्। अबाध्यत्व निषेधो बाध्यत्वमेव। बाधश्च पूर्वोक्त सत्यता निषेधरूपः। तत्र च बाधलक्षणे किं सत्तामात्र निषेधः अभिप्रेतः? पारमार्थिक सत्ता निषेधो वा। तत्र आद्ये व्यावहारिक सत्तापि न स्यात् इत्याह– कुतो व्यावहारिकि इति॥**

ಸತ್ಯತ್ವ ಅನಾಶ್ರಯತ್ವ ಎಂಬಲ್ಲಿ, ಪರಮಾರ್ಥಿಕತ್ವವನ್ನೆ ನಿಷೇಧಿಸುತ್ತೇವೆ, ಅಲ್ಲಿ ಪಾರಮಾರ್ಥಿಕತ್ವ ಎಂದರೆ ಅಬಾಧ್ಯತ್ವ ಎಂದು ಹೇಳುವ ಪರಪಕ್ಷದವರು, ಅಬಾಧ್ಯತ್ವ ನಿಷೇಧ ಎಂದರೆ ಸತ್ಯತ್ವದ ಅನಾಶ್ರಯ ಎಂದು ಹೇಳಿದಂತಾಯಿತು. ಇನ್ನು ಅಬಾಧ್ಯತ್ವ ನಿಷೇಧ ಎಂದರೆ ಬಾಧ್ಯತ್ವವೆಂದು ಹೇಳಿದಂತಾಯಿತು. ಬಾಧವು ಹಿಂದೆ ಹೇಳಿದ ಸತ್ಯತ್ವದ ನಿಷೇಧರೂಪವಾಗಿರುತ್ತದೆ. ಇನ್ನು ಬಾಧ ಲಕ್ಷಣದಲ್ಲಿ, ಏನು ಸತ್ತಾಮಾತ್ರದ ನಿಷೇಧ ಅಭಿಪ್ರೇತವಾಗಿರುತ್ತದೊ? ಅಥವಾ ಪಾರಮಾರ್ಥಿಕ ಸತ್ತಾ ನಿಷೇಧವೊ? ಇನ್ನು ಮೊದಲನೆ ವಿಕಲ್ಪವನ್ನು ತೆಗೆದುಕೊಂಡರೆ, ಅಲ್ಲಿ ವ್ಯಾವಹಾರಿಕ ಸತ್ತಾ ನಾವು ನಿಷೇಧಿಸುವದಿಲ್ಲ ಎಂಬ ಪರಪಕ್ಷದವರ ವಾದವು ಸುಳ್ಳಾಗಬೇಕಾಗುತ್ತದೆ. ಆದನ್ನೇ ಈ ಟೀಕಾವಾಕ್ಯ ಪ್ರತಿಪಾದಿಸುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**अबाध्यत्वं पारमार्थिकत्वं इति पक्षेऽपि बाधलक्षणे किं सत्तामात्र निषेधः अभिप्रेतः, पारमार्थिक निषेधो वा इति विकल्पं मनसि निधाय आद्यं निराचष्टे–कुत इति॥**
**ततश्च न तदाश्रयणेन आश्रयत्वसमर्थनं युज्यत इति भावः।**

ಅಬಾಧ್ಯತ್ವವೆಂದರೆ ಪಾರಮಾರ್ಥಿಕತ್ವವೆಂಬ ವಿಕಲ್ಪದಲ್ಲಿ ಕೂಡ ಬಾಧಲಕ್ಷಣದಲ್ಲಿ, ಏನು, ಸತ್ತಾಮಾತ್ರ ನಿಷೇಧವು ಅಭಿಪ್ರೇತವಾಗಿರುತ್ತದೊ, ಅಥವಾ ಪಾರಮಾರ್ಥಿಕ ನಿಷೇಧವೊ ಎಂಬ ವಿಕಲ್ಪವನ್ನು ಮನಸ್ಸಿನಲ್ಲಿಟ್ಟುಕೊಂಡು ಮೊದಲಿನ ವಿಕಲ್ಪವನ್ನು ಈ ಟೀಕಾವಾಕ್ಯದಿಂದ ನಿರಾಕರಿಸುತ್ತಾರೆ. ಅದರಂತೆ, ಅದರ ಆಶ್ರಯದಿಂದ ಆಶ್ರಯತ್ವದ ಸಮರ್ಥನವು ಸಮಂಜಸವೆನಿಸುವದಿಲ್ಲ ಎಂಬ ಭಾವ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**बाधलक्षण प्रतिपन्न उपाधौ त्रैकालिक सत्ता प्रतिषेधरूपे सत्ता शब्देन सर्वसत्ता विवक्षित इति पक्षे दोषं आह– कुत इति॥**

ಈ ಟೀಕಾವಾಕ್ಯವು प्रतिपन्न उपाधौ त्रैकालिक सत्ता प्रतिषेधरूपे ಎಂಬ ಬಾಧಲಕ್ಷಣದ ಸತ್ತಾ ಶಬ್ದದಿಂದ ಸರ್ವಸತ್ತಾ ವಿವಕ್ಷಿತ ವಿಕಲ್ಪದಲ್ಲಿಯ ದೋಷವನ್ನು ಹೇಳುತ್ತದೆ.

## ॥ इतरेतर इति् ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

द्वितीये आह– इतरेतर इति॥

ಇಲ್ಲಿ ಪಾರಮಾರ್ಥಿಕತ್ವ ನಿಷೇಧರೂಪ ಎರಡನೆ ವಿಕಲ್ಪ ಅಥವಾ ಪಕ್ಷವನ್ನು ದೂಷಿಸುತ್ತಾರೆ.

पारमार्थिकत्व निरुक्तौ बाध्यत्व निरुक्तिः तल्लक्षणान्तः पातित्वात्। बाध्यत्व निरुक्तौ अबाध्यत्व लक्षण पारमार्थिकत्व निरुक्तिः। अभाव निरूपणस्य प्रतियोगिक निरूपण अधीनत्वात् अन्योन्याश्रय इत्यर्थः।

ಪಾರಮಾರ್ಥಿಕತ್ವದ ತಿಳುವಳಿಕೆ ಉಂಟಾದಲ್ಲಿ ಬಾಧ್ಯತ್ವದ ತಿಳುವಳಿಕೆ ಉಂಟಾಗುವದು. ಹಾಗೂ ಪಾರಮಾರ್ಥಿಕತ್ವವು ಭಾಧ್ಯತ್ವಲಕ್ಷಣದಲ್ಲಿ ಅಡಕವಾಗಿರುತ್ತದೆ. ಅದರಂತೆ, ಬಾಧ್ಯತ್ವಲಕ್ಷಣ ತಿಳಿದಲ್ಲಿ ಅಬಾಧ್ಯತ್ವಲಕ್ಷಣರೂಪ ಪಾರಮಾರ್ಥಿಕತ್ವದ ತಿಳುವಳಿಕೆ ಉಂಟಾಗುವದು. ಇಲ್ಲಿ ಅಭಾವತೆಯ ನಿರೂಪಣೆಯು ಪ್ರತಿಯೋಗಿಯ ನಿರೂಪಣದ ಅಧೀನವಾಗಿರುವದರಿಂದ ಅನ್ಯೋನ್ಯಾಶ್ರಯ ದೋಷ ಉಂಟಾಗುತ್ತದೆ ಎಂದರ್ಥ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

द्वितीयं दूषयति– इतरेतर इति॥

ಇಲ್ಲಿ ಪಾರಮಾರ್ಥಿಕತ್ವ ನಿಷೇಧರೂಪ ಎರಡನೆ ವಿಕಲ್ಪ ಅಥವಾ ಪಕ್ಷವನ್ನು ದೂಷಿಸುತ್ತಾರೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

सत्ता शब्देन पारमार्थिकी सत्ता विवक्षिता इति पक्षे दूषं आह– इतरेतराश्रय इति॥

ಬಾಧಲಕ್ಷಣದಲ್ಲಿಯ ಸತ್ತಾ ಶಬ್ದದಿಂದ ಪಾರಮಾರ್ಥಿಕ ಸತ್ತಾ ವಿವಕ್ಷಿತವಾಗಿರುತ್ತದೆ ಎಂಬ ಪಕ್ಷದಲ್ಲಿಯ ದೋಷವನ್ನು ಈ ಟೀಕಾವಾಕ್ಯ ವಿವರಿಸುತ್ತದೆ.

बाध ज्ञाने अबाध्यस्वरूप पारमार्थिक तत्वज्ञान तत् भावने च तन्निषेधरूप बाध ज्ञानं इति इतरेतराश्रय इत्यर्थः।

ಬಾಧದ ಜ್ಞಾನದಿಂದ ಅಬಾಧ್ಯಸ್ವರೂಪ ಪಾರಮಾರ್ಥಿಕ ತತ್ವಜ್ಞಾನವಾಗಬೇಕು. ಇನ್ನು ಪಾರಮಾರ್ಥಿಕತ್ವ ಜ್ಞಾನದಿಂದ ಅದರ ನಿಷೇಧರೂಪ ಬಾಧ ಜ್ಞಾನ ಉಂಟಾಗಬೇಕು. ಹೀಗೆ ಇತರೆತರಾಶ್ರಯ ಅಂದರೆ ಅನ್ಯೊನ್ಯಾಶ್ರಯ ದೋಷ ಉಂಟಾಗುತ್ತದೆ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

द्वितीये, पारमार्थिकत्व ज्ञाने तन्निषेधलक्षण बाध्यत्व ज्ञानं, बाध्यत्व ज्ञाने च अबाध्यत्वरूप पारमार्थिकत्व ज्ञानं इति अन्योन्याश्रय इत्याह–इतरेतराश्रय दोषो वा इति॥

ಪಾರಮಾರ್ಥಿಕತ್ವ ನಿಷೇಧರೂಪ ಎರಡನೆ ವಿಕಲ್ಪದಲ್ಲಿ ಪಾರಮಾರ್ಥಿಕತ್ವ ಜ್ಞಾನವಾದಲ್ಲಿ ಅದರ ನಿಷೇಧಲಕ್ಷಣರೂಪ ಬಾಧ್ಯತ್ವದ ಜ್ಞಾನವಾಗಬೇಕು. ಮತ್ತು ಬಾಧ್ಯತ್ವ ಜ್ಞಾನದಿಂದ ಅಬಾಧ್ಯತ್ವರೂಪ ಪಾರಮಾರ್ಥಿಕತ್ವದ ಜ್ಞಾನವಾಗಬೇಕು. ಹೀಗೆ ಅನ್ಯೊನ್ಯಾಶ್ರಯ ದೋಷ ಉಂಟಾಗುತ್ತದೆ. ಅದನ್ನೆ ಈ ಟೀಕಾವಾಕ್ಯ ಪ್ರತಿಪಾದಿಸುತ್ತದೆ.



यद्यपि सत्यताया एव अद्यापि अनिरूपणात् इत्यत्रापि ग्रन्थे अन्योन्याश्रयः प्राक् उक्तः। अत्रापि स एव उच्यते।

ಈಗಾಗಲೆ ಹಿಂದೆ ಗ್ರಂಥದಲ್ಲಿ "सत्यताया एव अद्यापि अनिरूपणात्" ಎಂಬಲ್ಲಿ ಅನ್ಯೊನ್ಯಶ್ರಯ ದೋಷ ಹೇಳಲಾಯಿತಾದರೂ ಅದನ್ನೇ ಈಗ ಹೇಳಲಾಗುತ್ತಿದೆ.

तथाऽपि, प्राक् सत्यता अनाश्रयत्वं इति लक्षणे–सत्यता पदेन अबाध्यत्व विवक्षायां अन्योन्याश्रय प्रसङ्गात्, तत् अर्थक्रियासामर्थ्यादिकं व्यवहार अतीतत्वं वा विवक्षणीयम्। तत्र आद्ये मूलग्रन्थोक्त एव अपसिद्धान्तः। द्वितीये तु तदुक्तैव सिद्धसाधनता। तथा च सत्यता अनाश्रयत्वं सत्यविवेक इति पक्षोऽपि मूलग्रन्थोक्त दोषं न अतिवर्तते इति वक्तुं तत् उपयोगित्वेन अर्थक्रियासामर्थ्यादि पक्षं परिशेषयितुं पक्षान्तरे अन्योन्याश्रय् उक्तः।

ಹಾಗಿದ್ದರೂ, ಹಿಂದೆ ಸತ್ಯತಾ ಅನಾಶ್ರಯತ್ವ ಎಂಬ ಲಕ್ಷಣದಲ್ಲಿ- ಸತ್ಯತಾ ಪದದಿಂದ ಅಬಾಧ್ಯತ್ವ ವಿವಕ್ಷಿತವಾದ ಅವಸರದಲ್ಲಿ ಅನ್ಯೋನ್ಯಾಶ್ರಯ ಪ್ರಸಂಗ ಉಂಟಾಗುವದರಿಂದ, ಸತ್ಯತಾ ಪದದಿಂದ ಅರ್ಥಕ್ರಿಯಾಸಾಮರ್ಥ್ಯಾದಿಗಳನ್ನು ಅಥವಾ ವ್ಯವಹಾರ ಅತೀತತ್ವವನ್ನು ವಿವಕ್ಷಿಸಲಾಯಿತು. ಅಲ್ಲಿ ಮೊದಲನೆಯದನ್ನು ತೆಗೆದುಕೊಂಡರೆ, ಮೂಲಗ್ರಂಥದಲ್ಲಿ ಹೇಳಿದಂತೆ ಅಪಸಿದ್ಧಾಂತ ದೋಷ ಉಂಟಾಗುತ್ತದೆ. ಎರಡನೆಯದಾದರೆ, ಉಕ್ತಿಯಿಂದಲೇ ಸಿದ್ಧಸಾಧನತಾ ದೋಷ ಉಂಟಾಗುತ್ತದೆ. ಅದರಂತೆ, ಸತ್ಯತಾ ಅನಾಶ್ರಯತ್ವ ಎಂದರೆ ಸತ್ಯವಿವೇಕ ಎಂಬ ಪಕ್ಷದಲ್ಲಿ ಕೂಡ ಮೂಲದಲ್ಲಿ ಹೇಳಿದ ದೋಷವು ಹೋಗುವದಿಲ್ಲ ಎಂದು ತೋರಿಸುವ ಉದ್ದೇಶದಿಂದ ಅರ್ಥಕ್ರಿಯಾಸಾಮರ್ಥ್ಯಾದಿ ಪಕ್ಷವನ್ನು ಪರಿಶೇಷವೆಂದು ಪರಿಗಣಿಸಿ, ಪಕ್ಷಾಂತರ ಮೂಲಕ ಅನ್ಯೊನ್ಯಾಶ್ರಯತ್ವವನ್ನು ಹೇಳಲಾಯಿತು.

इदानीं तु सत्यता अनाश्रयत्वं इति लक्षणे मूलग्रन्थोक्त आश्रयासिद्धिः अपि वक्तुं शक्या इति, "किञ्च एवं इत्यादिना "प्रक्रम्य मध्ये, व्यावहारिक सत्यत्वेन परेण आश्रयत्वे शङ्किते तत् अभाव उपपादनार्थं, सत्यता अनाश्रयत्वं इत्यत्र लक्षणे, पारमार्थिकत्व निषेधे, अन्योन्याश्रय प्रसङ्गात् सत्तामात्र निषेधोऽपि विवक्षणीयः। तथा च व्यावहारिक सत्ताया अपि अभावाद् आश्रयासिद्धिः इत्येवं, आश्रयासिद्धिः वक्तुं तत् उपयोगित्वेन सत्तामात्र निषेध पक्षं परिशेषयितुं पक्षान्तरे अन्योन्याश्रय उच्यत इति फलभेदात् न पौनरुक्त्यम्।

ಆದರೆ ಈಗ, ಸತ್ಯತಾ ಅನಾಶ್ರಯತ್ವದ ಲಕ್ಷಣದಲ್ಲಿ ಮೂಲ ಗ್ರಂಥದಲ್ಲಿ ಹೇಳಿದ ಆಶ್ರಯಾಸಿದ್ಧಿ ಕೂಡ ಹೇಳಲು ಶಕ್ಯವಿದೆ ಎಂದು "किञ्च एवं इत्यादिना" ಎಂಬ ಪ್ರಕ್ರಮದಲ್ಲಿ, ವ್ಯಾವಹಾರಿಕ ಸತ್ಯತ್ವದಿಂದ ಪರಪಕ್ಷದವರು ಪ್ರತಿಪಾದಿಸುವ ಆಶ್ರಯತ್ವವನ್ನು ಶಂಕಿಸಿ, ಅದರ ಅಭಾವತೆಯನ್ನು ಉಪಪಾದಿಸಲು, ಸತ್ಯತ್ವ ಅನಾಶ್ರಯತ್ವದ ಲಕ್ಷಣದಲ್ಲಿ, ಪಾರಮಾರ್ಥಿಕ ನಿಷೇಧದಲ್ಲಿ ಅನ್ಯೊನ್ಯಾಶ್ರಯ ಪ್ರಸಂಗ ಉಂಟಾಗುವದರಿಂದ, ಸತ್ತಾಮಾತ್ರ ನಿಷೇಧ ಕೂಡ ವಿವಕ್ಷಿಸಲ್ಪಟ್ಟಿರುತ್ತದೆ. ಅದರಂತೆ, ವ್ಯವಹಾರಿಕ ಸತ್ತೆ ಕೂಡ ಇಲ್ಲದಾಗಿರುವದರಿಂದ ಆಶ್ರಯಾಸಿದ್ಧಿ ಉಂಟಾಗುತ್ತದೆ. ಹೀಗೆ ಆಶ್ರಯಾಸಿದ್ಧಿ ಹೇಳಲು ಸತ್ತಾಮಾತ್ರ ನಿಷೇಧ ಪಕ್ಷವನ್ನು ಪರಿಶೇಷವೆಂದು ಪರಿಗಣಿಸಲು ಪಕ್ಷಾಂತರದಲ್ಲಿ ಅನ್ಯೊನ್ಯಾಶ್ರಯವನ್ನು ಹೇಳಲಾಗಿದೆ. ಹೀಗೆ

ಎರಡೂ ಪಕ್ಷಗಳಲ್ಲಿ ಫಲದ ಭೇದವಿರುವದರಿಂದ ಇಲ್ಲಿ ಪುನರುಕ್ತಿ ದೋಷಕ್ಕೆ ಆಸ್ಪದವಿರುವದಿಲ್ಲ .

## टीका

**भ्रान्ति सिद्धा सत्ता व्यावहारिकी सत्ता इति चेत्। तथा सति नास्ति सत्ता इति अनाश्रयता एव।**

ಇನ್ನು ಭ್ರಾಂತಿಯಿಂದ ಸಿದ್ಧವಾದ ಸತ್ತಾ ಎಂದರೆ ವ್ಯಾವಹಾರಿಕ ಸತ್ತಾ , ಎಂದೆನ್ನುತ್ತೇವೆ ಎಂದರೆ. ಹಾಗಾದರೆ, ಸತ್ತಾನೆ ಇಲ್ಲದಂತಾಗಿ ಅನಾಶ್ರಯತ್ವ ದೋಷವೇ ಉಂಟಾಗುತ್ತದೆ.

### टिप्पणीनाम् विशेषार्थानि

**॥ भ्रान्ति सिद्धा इति॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु केयं व्यावहारिकी सत्ता इति प्रश्ने व्यवहारनिर्वाह हेतुभूता सत्ता व्यावहारिकी सत्ता न उच्यते। येन भवत् समीहित सिद्ध्यादिकं स्यात्। किन्तु अन्यैव इति आशङ्कते–भ्रान्ति सिद्धा इति॥**

ವ್ಯಾವಹಾರಿಕೀ ಸತ್ತಾ ಎಂದರೆ ಏನು? ಎಂಬ ಪ್ರಶ್ನೆಗೆ ವ್ಯವಹಾರ ನಿರ್ವಾಹ ಹೇತುಭೂತ ಸತ್ತಾ ವ್ಯಾವಹಾರಿಕೀ ಸತ್ತಾ ಎಂದು ನಾವು (ಪರಪಕ್ಷದವರು) ಹೇಳುವದಿಲ್ಲ. ಅದರಿಂದ, ಸಿದ್ಧಾಂತಿಗಳ ಅಭಿಮತದಂತೆ ಅಥವಾ ಸಿದ್ಧಸಾಧನತಾದಿಗಳು ಉಂಟಾಗುತ್ತವೆ. ಪರಂತು ಅದಕ್ಕಿಂತಲೂ ಅನ್ಯವಾದುದನ್ನು ಹೇಳುತ್ತೇವೆ, ಎಂಬ ಪರಪಕ್ಷದವರ ಹೇಳಿಕೆಯನ್ನು ಈ ಟೀಕಾವಾಕ್ಯ ಆಶಂಕಿಸುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**ननु न व्यवहारनिर्वाह हेतुसत्ता व्यावहारिकी सत्ता येन तव समीहित सिद्ध्यादिकं स्यात्। किन्तु अन्यैव इति शङ्कते– भ्रान्ति सिद्धा इति॥**

ವ್ಯವಹಾರ ನಿರ್ವಾಹ ಹೆತುಸತ್ತಾ ವ್ಯಾವಹಾರಿಕ ಸತ್ತಾ ಎಂದು ನಾವು (ಪರಪಕ್ಷದವರು) ಹೇಳುವದಿಲ್ಲ. ಅದರಿಂದ ನಿಮ್ಮ (ಸಿದ್ಧಾಂತಿಗಳ) ಅಭಿಮತದಂತೆಯೆ ಹೇಳಿದಂತಾಗಿ ಸಿದ್ಧಸಾಧನತಾದಿ ದೋಷ ಉಂಟಾಗುತ್ತವೆ. ಪರಂತು ಅದಕ್ಕಿಂತಲೂ ಅನ್ಯವಾದುದನ್ನೆ ಎಂದು ಹೇಳುತ್ತೇವೆ ಎಂಬ ಪರಪಕ್ಷದವರ ಹೇಳಿಕೆಯನ್ನು ಈ ಟೀಕಾ ವಾಕ್ಯ ಶಂಕಿಸುತ್ತದೆ.

**॥ नास्ति सत्ता इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**भ्रान्ति सिद्धस्य अस्तित्वे, भ्रान्तित्वस्यैव अयोगात् इति भावः।**

ಭ್ರಾಂತಿ ಸಿದ್ಧವಾಗಿದ್ದ ಅಸ್ತಿತ್ವದಲ್ಲಿ, ಭ್ರಾಂತಿತ್ವವೇ ಅಯೋಗವಾಗಿದೆ ಎಂಬ ಭಾವ.



ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**भ्रान्ति सिद्धस्य अस्तित्वे, भ्रान्तित्वस्यैव अयोगात् इति भावः।**

ಭ್ರಾಂತಿ ಸಿದ್ಧವಾಗಿದ್ದ ಅಸ್ತಿತ್ವದಲ್ಲಿ, ಭ್ರಾಂತಿತ್ವವೇ ಅಯೋಗವಾಗಿದೆ ಎಂಬ ಭಾವ

**॥ अनाश्रयता एव इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**आश्रयासिद्धैः एव इति।**

ಅನಾಶ್ರಯತಾ ಎಂದರೆ ಆಶ್ರಯಾಸಿದ್ಧಿಯೇ ತಾನೆ.

### ५.५.३.५ सत्ता विना प्रतीतिगोचरत्वस्यैव आश्रयत्वप्रयोजकत्व शङ्का तन्निरासश्च

## टीका

**ननु प्रतीतिगोचरतामात्रेण आश्रयत्व उपपत्तौ किं सत्तया? सुरभितासाधने तु गगनारविन्दस्य न आश्रयता सत्ताविरहात्, अपि तु निरुपाख्यत्वात् इति चेत् न। तथा सति शब्दाद् गगनारविन्दादि सत्ता प्रतीतौ तत्र सुरभिसाधने न आश्रयासिद्धिः उद्भाव्येत्।**

ಪ್ರತೀತಿಯ (ಪರಿಜ್ಞಾನದ) ಗೋಚರಿಸುವಿಕೆಯಿಂದಲೆ ಆಶ್ರಯತ್ವ ಪ್ರಾಪ್ತವಾಗುತ್ತಿರುವಾಗ, ಏಕೆ ಸತ್ತೆಯಿಂದಲೇ ಆಶ್ರಯತ್ವವನ್ನು ಸಾಧಿಸಬೇಕು? ಗಗನಾರವಿಂದದ ಸುರಭಿಯನ್ನು ಸಾಧಿಸುವಲ್ಲಿ ಆಶ್ರಯತಾ ಇಲ್ಲದಿರುವದು ಸತ್ತಾವಿರಹದಿಂದಲ್ಲಾ, ಪರಂತು ಅದು ಕಾಲ್ಪನಿಕ ಅಥವಾ ವಾಸ್ತವಾಗಿಲ್ಲದ ಮೂಲಕ ಎಂದರೆ. ಹಾಗೆ ಹೇಳುವದು ಸರಿಯಲ್ಲ. ಹಾಗೆನಾದರು ಇದ್ದರೆ, ಶಬ್ದದಿಂದ ಗಗನಾರವಿಂದಾದಿಗಳ ಸತ್ತಾ ಪ್ರತೀತಿಗಳಲ್ಲಿ, ಸುರಭಿ ಸಾಧಿಸಿದಲ್ಲಿ ಆಶ್ರಯಾಸಿದ್ಧಿಯು ಉದ್ಭವಿಸಬಾರದು.

### टिप्पणीनाम् विशेषार्थानि

**॥ ननु इति॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु इति अनन्तरं प्रपञ्चस्य इति शेषः।**

ಇಲ್ಲಿ ननु ಶಬ್ದದ ನಂತರ प्रपञ्चस्य ಎಂಬ ಪದವನ್ನು ಸೇರಿಸಿ ಅರ್ಥಹೇಳಬೇಕು.

**॥ सुरभितासाधने इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

ननु अनुमान आश्रयत्वे, प्रतीतिविषयत्वमात्रस्य एव प्रयोजकत्वं अङ्गीकृत्य, सत्ताया अप्रयोजकत्व अङ्गीकारे, "गगनारविन्द सुरभि अरविन्दत्वात् सरोज अरविन्दवत्" इति अनुमाने, गगनारविन्दस्यापि प्रतीतिविषयत्व उपपत्त्या, आश्रयस्य सत्व अभावेन आश्रयासिध्दिः उद्भाव्यते सा न उद्भाव्येत् इति चेत् न। तत्र प्रतीतिविषयत्वस्य अभावेन एव आश्रयासिद्धि उद्भावना सम्भवेन, सत्ताविरहस्य अप्रयोजकत्वात् इत्यत आह–सुरभितासाधन इति॥
ಮಿಥ್ಯಾತ್ವ ಅನುಮಾನದ ಆಶ್ರಯತ್ವದ ವಿಷಯದಲ್ಲಿ, ಪರಿಜ್ಞಾನ ವಿಷಯತ್ವ ಮಾತ್ರ ಪ್ರಯೋಜಕವೆಂದು ಅಂಗೀಕರಿಸಿ, ಸತ್ತೆಯನ್ನು ಅಪ್ರಯೋಜಕವೆಂದು ಅಂಗೀಕರಿಸಿದರೆ, "गगनारविन्द सुरभि अरविन्दत्वात् सरोज अरविन्दवत्" ಎಂಬ ಅನುಮಾನದಲ್ಲಿ, ಗಗನಾರವಿಂದಕ್ಕೂ ಕೂಡ ಪ್ರತೀತಿವಿಷಯತ್ವ ಪ್ರಾಪ್ತವಾಗುವದರಿಂದ, ಅದರ ಆಶ್ರಯಕ್ಕೆ ಸತ್ಯತ್ವ ಇಲ್ಲದ ಮೂಲಕ ಆಶ್ರಯಾಸಿದ್ಧಿ ದೋಷ ಉದ್ಭವಿಸುತಿತ್ತೊ ಅದು ಈಗ ಉದ್ಭವಿಸಬಾರದು ಎಂದರೆ? ಅದು ಹಾಗಿರುವದಿಲ್ಲ, ಅಲ್ಲಿ ಪ್ರತೀತಿ ವಿಷಯತ್ವದ ಅಭಾವತೆಯಿಂದಲೆ ಆಶ್ರಯಾಸಿದ್ಧಿಯ ಉದ್ಭಾವನೆಯ ಸಂಭವವಿರುವದರಿಂದ ಸತ್ತಾವಿರಹವು ಅಪ್ರಯೊಜಕವಾಗಿರುತ್ತದೆ ಎಂಬ ಪರಪಕ್ಷದವರ ಹೇಳಿಕೆಯನ್ನು ಪ್ರಶ್ನಿಸುತ್ತದೆ ಈ ಟೀಕಾ ವಾಕ್ಯ.

॥ निरुपाख्यत्वात् इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

उपाख्या प्रतीति तद्विषयत्व अभावात् इत्यर्थः।
ಉಪಾಖ್ಯಾ ಎಂದರೆ ಪ್ರತೀತಿ ಮತ್ತು ಅದರ ವಿಷಯತ್ವ, ನಿರುಪಾಖ್ಯಾ ಎಂದರೆ ಪ್ರತೀತಿ ಹಾಗೂ ಅದರ ವಿಷಯತ್ವದ ಅಭಾವತೆ ಎಂದರ್ಥ.

## टीका

अस्तु एवं, अङ्गान्तर वैकल्यं तत्र भविष्यति इति चेत् न। काल्पनिक साकल्यस्य सर्वत्र सौलभात्। तथा च न साधन तत् आभास नियमः स्यात्। वाद्यादि उपगमेन नियम इति चेत्। कथाभास प्रसङ्गेन असत् साधन दूषणयोः अपि सत्व प्रसङ्गात्।
किं च एवं सति प्रकृत अनुमानस्यापि न तत्व अवेदकत्वं स्यात्।

ಹಾಗೆ ಆಗಲಿ, ಅಂದರೆ ಮೇಲೆ ಸಿದ್ಧಾಂತಿಗಳು ಹೇಳಿದ ಅರವಿಂದತ್ವದ ಹೇತುವಿನಿಂದ ಕೂಡಿದ ಅನುಮಾನಕ್ಕೆ ಆಶ್ರಯಾಸಿದ್ಧಿ ದೋಷ ಇಲ್ಲದೆ ಇರಲಿ ಎಂದು ನಮ್ಮ (ಪರಪಕ್ಷದವರ) ಮತವಾಗಿರುತ್ತದೆ. ಅದಕ್ಕೆ ಏನು? ಆಗ ಅಲ್ಲಿ ಅಂಗಾಂತರ ವೈಕಲ್ಯ ವೆಂಬ ದೋಷ ಉಂಟಾಗುತ್ತದೆ (ಎಂದು ಸಿದ್ಧಾಂತಿಗಳು) ಎಂದರೆ, ನಾವು (ಪರಪಕ್ಷದವರು)



ಒಪ್ಪುವದಿಲ್ಲ, ಏಕೆಂದರೆ ಕಾಲ್ಪನಿಕ ಅಂಗ ಸಾಕಲ್ಯ ಎಲ್ಲ ಕಡೆಗೆ ಸೌಲಭ್ಯವಾಗಿರುತ್ತದಲ್ಲವೆ. ಹಾಗೆನಾದರು ಪರಪಕ್ಷದವರು ಹೇಳಲು ಹೊರಟರೆ, ಸಾಧನ ಹಾಗೂ ಅದರ ಆಭಾಸತೆಯ ನಿಯಮಗಳೇ ಇಲ್ಲದಂತಾಗುವವು. ಅಲ್ಲಿಕೂಡ ವಾದಿಪ್ರತಿವಾದಿಗಳ ಒಪ್ಪಂದದಿಂದ ನಿಯಮಗಳನ್ನು ಮಾಡಬಹುದಲ್ಲ ಎನ್ನುತ್ತೇವೆ ಎಂದರೆ. ಆಗ ಕಥಾಭಾಸ (ತತ್ವ ನಿರ್ಣಯಕ್ಕಾಗಿ ವಾದಿಪ್ರತಿವಾದಿಗಳಲ್ಲಿ ಜರಗುವ ಸಂಭಾಷಣೆಯ ಆಭಾಸ) ಪ್ರಸಂಗ ಉಂಟಾಗುವದರಿಂದ ಅಸತ್ಯದ ಸಾಧನ ಮತ್ತು ದೂಷಣಗಳಲ್ಲಿ ಕೂಡ ಸತ್ಯತ್ವದ ಪ್ರಸಂಗವದಗುವದು. ಮತ್ತು ಹಾಗೆನಾದರು ಆದರೆ, ಪ್ರಕೃತ ಅನುಮಾನಕ್ಕೂ ಕೂಡ ತತ್ವವನ್ನು ತಿಳಿಸಿಕೋಡುವ ಸಾಮರ್ಥ್ಯ ಇಲ್ಲದಂತಾಗುವದು

## टिप्पणीनाम् विशेषार्थानि

॥ अस्तु इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

अरविन्दत्व हेतौ आश्रयासिद्धि अनुद्भावनम् अस्तु इत्यर्थः। तथा च इष्टापत्तिः इति भावः।
ಮೇಲೆ ಹೇಳಿದ ಅರವಿಂದತ್ವ ಹೇತುವಿನಿಂದ ಕೂಡಿದ ಅನುಮಾನದಲ್ಲಿ ಆಶ್ರಯಾಸಿದ್ಧಿ ಉಂಟಾಗದೆ ಇರಲಿ, ಅದಕ್ಕೆ ಏನಂತೆ ಎಂದರ್ಥ. ಅದನ್ನೆ ಈ ಟೀಕಾವಾಕ್ಯ ವಿಮರ್ಶಿಸುತ್ತದೆ. ಅದರಂತೆ ನಾವು (ಸಿದ್ಧಾಂತಿಗಳು) ಹೇಳಿದ್ದನ್ನೆ ಪರಪಕ್ಷದವರಿಗೆ ಒಪ್ಪಿಗೆಯಾದ್ದರಿಂದ ಇಷ್ಟಾಪತ್ತಿ ಎಂಬ ದೋಷ ಉಂಟಾಗುತ್ತದೆ ಎಂಬ ಭಾವವಿರುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

अरविन्दत्व हेतौ आश्रयासिद्धि अनुद्भावनं अस्तु इत्याह– अस्तु इति॥
ಮೇಲೆ ಹೇಳಿದ ಅರವಿಂದತ್ವ ಹೇತುವಿನಿಂದ ಕೂಡಿದ ಅನುಮಾನದಲ್ಲಿ ಅದಕ್ಕೆ ಏನಂತೆ ಎಂದರ್ಥ. ಅದನ್ನೆ ಈ ಟೀಕಾವಾಕ್ಯ ವಿಮರ್ಶಿಸುತ್ತದೆ

॥ अङ्गान्तर वैकल्यं इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

ननु तर्हि आश्रयासिद्ध्या दुष्टत्व अभावे, अनुमितिः उत्पद्येत इति तत्र आह– अङ्गान्तर इति॥
ಹಾಗಾದರೆ, ಆಶ್ರಯಾಸಿದ್ಧಿಯಿಂದ ಉಂಟಾಗುವ ದೋಷತ್ವದ ಅಭಾವತೆಯಲ್ಲಿ, ಆ ಅನುಮಾನದ ಅನುಮಿತಿ ಉಂಟಾಗಬೇಕು, ಆದರೆ ಅದು ಉಂಟಾಗೊಲ್ಲ ಅದರ ಕಾರಣವನ್ನು ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ.

अनुमानस्य द्वे अङ्गे, व्याप्ति पक्षधर्मता च इति। तथा च अरविन्दत्व हेतोः सुरभित्वं, विनाम्लान अरविन्देपि सद्भावेन अनैकान्तिकतया व्याप्तिरूप अङ्गवैकल्यात् इत्यर्थः।
ಅನುಮಾನಕ್ಕೆ ಎರಡು ಅಂಗಗಳಿರುತ್ತವೆ: ವ್ಯಾಪ್ತಿ ಮತ್ತು ಪಕ್ಷಧರ್ಮತಾ ಎಂದು. ಅದರಂತೆ ಅರವಿಂದ ಹೇತುವಿನಿಂದ ಕೂಡೀದ ಮೇಲಿನ ಅನುಮಾನದಂತೆ ಸುರಭಿತ್ವವು ದೊಡ್ಡ

ಗೋರಂಟಿವಿಲ್ಲದ ಅರವಿಂದದಲ್ಲಿ ಕೂಡ ಕಂಡುಬರುವದರಿಂದ ಹೇತುವಿಗೆ ಅನೈಕಾಂತಿಕ ದೋಷ ಉಂಟಾಗಿ, ವ್ಯಾಪ್ತಿರೂಪ ಅಂಗವಿಕಲತ್ವ ಉಂಟಾಗುವದು ಎಂದರ್ಥ. ವ್ಯಾಪ್ತಿ ಎಂದರೆ ಹೇತು ಮತ್ತು ಸಾಧ್ಯಗಳಲ್ಲಿಯ ಅನ್ಯೋನ್ಯ ಸಂಬಂಧ. ಅನೈಕಾಂತಿಕ, ಇದೊಂದು ಹೇತು ದೋಷ. ಎಂದರೆ, ಸಾಧ್ಯ ಇರುವೆಡೆ ಇದ್ದು, ಸಾಧ್ಯವಿಲ್ಲದೆಡೆಗೂ ಇರುವ ಹೇತು, ಅನೈಕಾಂತಿಕ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**कथं तर्हि तस्य दुष्टत्वम्। इत्यत आह– अङ्गान्तर इति॥**

ಹಾಗಾದರೆ ಅರವಿಂದತ್ವ ಹೇತುವಿನಿಂದ ಕೂಡಿದ ಮೇಲೆ ನಮೂದಿಸಿದ ಅನುಮಾನಕ್ಕೆ ಯಾವ ದೋಷ ಉಂಟಾದಂತಾಯಿತು? ಅದನ್ನೆ ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**अबाधित विषयत्वरूप अङ्गान्तर वैकल्यं तत्र दूषणं भविष्यति इति भावः।**

ಅಂದರೆ, ಅಬಾಧಿತ ವಿಷಯತ್ವರೂಪ ಅಂಗಾಂತರ ವೈಕಲ್ಯವೆಂಬ ದೂಷಣ ಅಲ್ಲಿ ಉಂಟಾಗುತ್ತದೆ ಎಂಬ ಭಾವ.

## ॥ काल्पनिकाङ्ग इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**अकाल्पनिक अङ्गसाकल्यं तु तव कुत्रापि नास्ति इति वाक्य शेषः।**

ಅಕಾಲ್ಪನಿಕ ಅಂಗಸಾಕಲ್ಯವನ್ನು ಪರಪಕ್ಷದವರು ಎಲ್ಲಿಯೂ ತೋರಿಸಲು ಸಾಧ್ಯವಿಲ್ಲ ಎಂಬುದನ್ನು ಈ ಟೀಕಾವಾಕ್ಯದ ನಂತರ ಸೇರಿಸಬೇಕು.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**अकाल्पनिक अङ्गसाकल्यं तु तव कुत्रापि नास्ति इति वाक्य शेषः।**

ಈ ವಾಕ್ಯದ ಅನುವಾದ ಮೇಲಿನಂತೆಯೆ ಇರುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**यदि सत्ता विधुरस्यापि जगतः सत् इति प्रतीतिमात्रेण सत्वापत्या आश्रयत्वलाभः। तर्हि व्याप्त्यादि विधुराणां अपि अनुमानानां व्याप्त्यादिकं अस्ति इति केनचित् उक्तौ तत् शब्दबोधमात्रेण व्याप्त्यादि लाभः स्यात्। ततश्च साधु असाधु भागः न स्यात्।**

ಒಂದು ವೇಳೆ ಸತ್ತೆ ಇಲ್ಲದಾಗೂ, ಜಗತ್ತು ಸತ್ಯ ಎಂದು ಪ್ರತೀತಿಮಾತ್ರದಿಂದ ಸತ್ಯತ್ವ ಬಂದಂತಾಗಿ ಆಶ್ರಯತ್ವದ ಲಾಭವಾಯಿತು ಎಂದು ಎನ್ನುವದಾದರೆ ವ್ಯಾಪ್ತ್ಯಾದಿಗಳು ಇಲ್ಲದ ಅನುಮಾನಗಳಿಗೂ ವ್ಯಾಪ್ತ್ಯಾದಿಗಳು ಇವೆ ಎಂದು ಯಾರದರೂ ಹೇಳಿದರೆ, ಅವರ ಶಬ್ದಬೋಧದಿಂದಲೇ ವ್ಯಾಪ್ತ್ಯಾದಿಗಳ ಲಭಿಸುವವು. ಹೀಗೆ ಸಾಧು-ಅಸಾಧು ಅನುಮಾನ ಎಂಬ ವಿಭಜನೆ ಇಲ್ಲದಂತಾಗುವದು ಎಂಬ ಭಾವ.

## ॥ तथा च इति॥



ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**एवं च सर्वमपि साधनं समीचीनं वा स्यात् आभासो वा न तु किंचित् साधनं समीचीनं किंचित् आभासरूपं इति विभागः स्यात् इत्याह– तथा च इति॥**

ಹೀಗಾದರೆ, ಎಲ್ಲ ಸಾಧನಗಳು ಯಥಾರ್ಥಗಳಾಗುವವು ಅಥವಾ ಆಭಾಸಗಳೆನಿಸುವವು. ವಿನಹಾ, ಕೆಲವೊಂದು ಸಾಧನಗಳು ಯಥಾರ್ಥಗಳು ಮತ್ತು ಕೆಲವೊಂದು ಆಭಾಸರೂಪಗಳು ಎಂಬ ವಿಭಜನೆ ಆಗಲು ಸಾಧ್ಯವಿಲ್ಲ ಎಂದು ಈ ಟೀಕಾ ವಾಕ್ಯ ಸ್ಪಷ್ಟಪಡಿಸುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**एवं च सर्वमपि दुष्टं स्यात् अदुष्टं वा। न तु किंचित् दुष्टं, किंचित् अदुष्टं इति विभागः स्यात इति आह– तथा च इति॥**

ಹೀಗಾದರೆ, ಎಲ್ಲ ಸಾಧನಗಳು ದೋಷಪೂರ್ಣಗಳಾಗುವವು ಅಥವಾ ದೋಷವುಳ್ಳವುಗಳೆನಿಸುವವು. ವಿನಹಾ, ಕೆಲವೊಂದು ಸಾಧನಗಳು ದೋಷಪೂರ್ಣ ಮತ್ತು ಕೆಲವೊಂದು ಅದೋಷವಾದವುಗಳು ಎಂಬ ವಿಭಜನೆ ಆಗಲು ಸಾಧ್ಯವಿಲ್ಲ ಎಂದು ಈ ಟೀಕಾ ವಾಕ್ಯ ಸ್ಪಷ್ಟಪಡಿಸುತ್ತದೆ.

## ॥ वाद्यादि इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**यत्र अङ्गसाकल्यं वाद्यादिना अभ्युपगतं तत् साधनं अदुष्टं अन्यत् आभासरूपं इति नियमो भविष्यति इति आशङ्क्ते–वाद्यादि इति॥**

ಎಲ್ಲಿ ಅಂಗಸಾಕಲ್ಯವನ್ನು ವಾದಿ-ಪ್ರತಿವಾದಿಗಳಿಬ್ಬರು ಒಪ್ಪುತ್ತಾರೊ ಅಂತಹ ಸಾಧನವು ಅದುಷ್ಟ, ಉಳಿದಿದ್ದೆಲ್ಲ ಆಭಾಸರೂಪವಾದದ್ದು ಎಂಬ ನಿಯಮ ಮಾಡಬಹುದಲ್ಲ, ಎಂದು ಈ ಟೀಕಾವಾಕ್ಯ ಆಶಂಕಿಸುತ್ತದೆ.

## ॥ कथाभास इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**भ्रान्त वाद्यादि आरब्ध कथाभासे अङ्गसाकल्यवत्तया, तत् अभ्युपगतस्य वस्तुतः दुष्टस्यापि साधनस्य अदुष्टत्वं स्यात्। अङ्गसाकल्यवत्तया तत् अनभ्युपगतस्य वस्तुतः अदुष्टस्यापि साधनस्य आभासत्वं स्यात् इत्यर्थः।**

ಭ್ರಾಂತಿಯಿಂದಕೂಡಿದ ವಾದಿ-ಪ್ರತಿವಾದಿಗಳು ಆರಂಭಮಾಡಿದ, ಕಥಾಭಾಸದಲ್ಲಿ, ಎರಡೂಕಡೆಯವರು ಒಪ್ಪಿಕೊಂಡಂಥಹ, ಅಂಗಸಾಕಲ್ಯವು ವಸ್ತುತವಾಗಿ ದೋಷಪೂರ್ಣವಾದರೂ, ಆ ದುಷ್ಟ ಸಾಧನವು ಅದುಷ್ಟವೆನಿಸುವದು. ಇನ್ನು ಎರಡೂಪಕ್ಷದವರು ಒಪ್ಪದ, ವಸ್ತುತವಾದ ಅಂಗಸಾಕಲ್ಯದಿಂದ ಕೂಡಿದ ಅದುಷ್ಟ ಸಾಧನವು ಆಭಾಸವೆನಿಸುವದು ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

यदि अङ्गसाकल्यस्य काल्पनिकत्वेऽपि यत्र अङ्गसाकल्यं वादि प्रतिवादि प्राश्निक अभ्युपगतं तत् साधनं सत् साधनं, अन्यत असत् इति नियमः, तदा भ्रान्तवादि आरब्ध कथाभासे अङ्गसाकल्यवत्तया तत् अभुपगतस्य वस्तुतः दुष्टस्य साधनस्य अदुष्टत्वं स्यात्।
ಒಂದು ವೇಳೆ, ಅಂಗಸಾಕಲ್ಯವು ಕಾಲ್ಪನಿಕವಾಗಿದ್ದರೂ, ಎಲ್ಲಿ ಅಂಗಸಾಕಲ್ಯವನ್ನು ವಾದಿ, ಪ್ರತಿವಾದಿ ಹಾಗೂ ಪ್ರಾಶ್ನಿಕರು ಒಪ್ಪಿರುವರೊ ಆ ಸಾಧನವು ಸತ್ಯವಾದ ಸಾಧನವು ಅದರ ಹೊರತಾಗಿದ್ದೆಲ್ಲ ಅಸತ್ಯ ಎಂದು ನಿಯಮಮಾಡಿದರೆ, ಆಗ ಭ್ರಾಂತಿದಿಂದ ಕೂಡಿದ ವಾದಿಗಳು ಆರಂಭಿಸಿದ ಕಥಾಭಾಸದಲ್ಲಿ, ಎರಡೂ ಪಕ್ಷದವರೂ ಒಪ್ಪಿಗೆಯಾದ ಅಂಗಸಾಕಲ್ಯವು ವಸ್ತುತಃ ದೋಷಪೂರ್ಣವಾಗಿದ್ದರೂ ಆ ದುಷ್ಟ ಸಾಧನವು ಅದುಷ್ಟವೆನಿಸುವದು.

अविद्यमान अभ्युपगन्तुः वादित्वमेव नास्ति इति चेत् तर्हि अङ्गसाकल्यस्य काल्पनिकत्वेऽपि वाद्यादि अभ्युपगमेन नियम इति असंगतं स्यात् इति भावः।
एतच्च अन्यत्र अस्माभिः प्रपंचितम्।
ಇನ್ನು ಅವಿದ್ಯಮಾನವಾದುದನ್ನು ಒಪ್ಪುವರು ವಾದಿಗಳೆಂದೇನಿಸುವದಿಲ್ಲ ಎಂದರೆ, ಕಾಲ್ಪನಿಕ ಅಂಗಸಾಕಲ್ಯ ಕೂಡ ವಾದಿ-ಪ್ರತಿವಾದಿಗಳು ಒಪ್ಪಿದ್ದರಿಂದ ನಿಯಮವೆಂದು ಹೇಳುವದು ಕೂಡ ಅಸಂಗತವೆನಿಸುವದು ಎಂಬ ಭಾವ.

ಈ ವಿಷಯವನ್ನು ನಾವು ಬೆರೆಕಡೆ ವಿಸ್ತಾರವಾಗಿ ವಿಮರ್ಶಿಸಿದ್ದೆವೆ.

## ॥ किं च एवं सति इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

वाद्यादि अभ्युपगमेन साधन तत् आभास नियम अङ्गीकारे, प्रकृतस्य प्रपञ्चमिथ्यात्व साधकस्य दृश्यत्व अनुमानस्याऽपि अतत्वावेदकत्वं स्यात्। आभासत्वं स्यात् इति यावत्। वादिना त्वया तत्र अङ्गान्तर साकल्य अङ्गीकारेऽपि प्रतिवादिना मया अङ्गान्तर वैकल्य अङ्गीकारात् इति भावः।
ವಾದಿಗಳ ಒಪ್ಪಂದದಂತೆ ಸಾಧನ, ಅದರ ಆಭಾಸ ನಿಯಮ ಅಂಗೀಕರಿಸಿದರೆ, ಪ್ರಕೃತ ಪ್ರಪಂಚ ಮಿಥ್ಯಾತ್ವ ಸಾಧಕ ದೃಶ್ಯತ್ವ ಅನುಮಾನವು ಕೂಡ ಅತತ್ವವನ್ನು ತಿಳಿಸುವಂತಾಗುತ್ತದೆ. ಅಂದರೆ ಆಭಾಸತ್ವ ಉಂಟುಮಾಡುತ್ತದೆ ಎಂದರ್ಥ. ವಾದಿಗಳಾದ ನೀವು ಅಲ್ಲಿ ಅಂಗಾಂತರ ಸಾಕಲ್ಯ ಅಂಗೀಕರಿಸಿದರೂ ಪ್ರತಿವಾದಿಗಳಾದ ನಾವು ಅಂಗಾಂತರ ವೈಕಲ್ಯವನ್ನು ಅಂಗೀಕರಿಸಿರುತ್ತೇವೆ ಎಂಬ ಭಾವ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

दृश्यत्व अनुमान अङ्गसाकल्ये उभयवादि संमतिश्चेत् तत् प्रामाण्येऽपि उभयवादि संम्मतिः अस्तु। वस्तुतस्तु प्रामाण्यं न स्यात्। वस्तुतः अङ्गसाकल्य अभावात्। अङ्गसाकल्यं च व्यावहारिकं अस्ति इति चेत् तर्हि प्रामाण्यं अपि व्यावहारिकं एव अस्तु। न तत्व अवेदकत्व लक्षणं पारमार्थिकम्। प्रयोजक अनुरोधित्वात् प्रयोजनस्य। अन्यथा प्रातिभासिक अङ्गसाकल्येन व्यवहारिक अवेद्कत्व लक्षणं व्यावहारिकं प्रामाण्यं स्यात् इति भावः।



ದೃಶ್ಯತ್ವ ಅನುಮಾನದ ಅಂಗಸಾಕಲ್ಯದಲ್ಲಿ, ಉಭಯವಾದಿಗಳ ಸಮ್ಮತಿ ಇದೆ ಎಂದರೆ, ಅದರ ಪ್ರಮಾಣ್ಯದಲ್ಲಿ ಕೂಡ ಉಭಯವಾದಿಗಳ ಸಮ್ಮತಿ ಇರಲಿ. ವಸ್ತುತಃ ಅಂತಹ ಪ್ರಾಮಾಣ್ಯ ಇರುವದಿಲ್ಲ. ವಸ್ತುತಃ ಅನುಮಾನದ ಅಂಗಸಾಕಲ್ಯ ಇರುವದಿಲ್ಲ. ಇನ್ನು ಅಂಗಸಾಕಲ್ಯವು ವ್ಯಾವಹಾರಿಕ ಮಟ್ಟಿಗೆ ಇದೆ ಎಂದರೆ, ಆಗ ಪ್ರಮಾಣ ಕೂಡ ವ್ಯಾವಹಾರಿಕ ಆಗಬೇಕು. ಇನ್ನು ತತ್ವವನ್ನು ತೀಳಿಸುವ ಲಕ್ಷಣವು ಪಾರಮಾರ್ಥಿಕ ಎನ್ನಲಾಗದು, ಅದು ಪ್ರಯೋಜನದ ಪ್ರಯೋಜಕದ ಅನುರೋಧವಾಗಿರುತ್ತದೆ. ಅನ್ಯಥಾ ಪ್ರಾತಿಭಾಸಿಕ ಅಂಗಸಾಕಲ್ಯದಿಂದ ವ್ಯವಹಾರಿಕ ತಿಳಿಸುವ ಲಕ್ಷಣವೂ ಕೂಡ ವ್ಯಾವಹಾರಿಕ ಪ್ರಾಮಾಣ್ಯ ಆಗಬೇಕಾಗುತ್ತದೆ ಎಂಬ ಭಾವ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

किंच अङ्गसाकल्यस्य काल्पनिकत्वेऽपि, वादिप्रतिवादिभ्यां अभ्युपगतत्वमात्रेण साधनस्य अदुष्टता व्यवस्थापने, यत्र वादिप्रतिवादिनाः अङ्गसाकल्यता अभ्युपगमः तत्रैव साधनस्य अदुष्टता स्यात्।
ಮತ್ತು, ಅಂಗಸಾಕಲ್ಯವು ಕಾಲ್ಪನಿಕವಾದರೂ, ವಾದಿಪ್ರತಿವಾದಿಗಳು ಒಪ್ಪಿದ ಮಾತ್ರಕ್ಕೆ ಸಾಧನವು ಅದುಷ್ಟ ಎಂಬ ವ್ಯವಸ್ಥೆಯಲ್ಲಿ, ಎಲ್ಲಿ ವಾದಿಪ್ರತಿವಾದಿಗಳು ಅಂಗಸಾಕಲ್ಯವನ್ನು ಒಪ್ಪುತ್ತಾರೊ ಅಲ್ಲಿಯೆ ಸಾಧನವು ಅದುಷ್ಟವಾಗುವದು.

न तु दृश्यत्व अनुमानस्य तत् अङ्गसाकल्यस्य त्वया अभ्युपगमेऽपि मया अनभ्युपगमेन तस्य वादिप्रतिवादि सम्मतत्व अभावात् इति आशयेन आह्–किंच एवं सति।
ಹಾಗೆ ದೃಷ್ಯತ್ವ ಅನುಮಾನಕ್ಕೆ ಉಂಟಾಗಲು ಸಾಧ್ಯವಿಲ್ಲ. ಏಕೆಂದರೆ, ದೃಷ್ಯತ್ವ ಅನುಮಾನದ ಅಂಗಸಾಕಲ್ಯವನ್ನು ತಾವು ಒಪ್ಪಿದ್ದರೂ ನಾವು ಒಪ್ಪಿರುವದಿಲ್ಲ. ಆದ್ದರಿಂದ ಅಲ್ಲಿ ವಾದಿಪ್ರತಿವಾದಿಗಳಲ್ಲಿ ಸಮ್ಮತಿ ಇರುವದಿಲ್ಲ. ಇದನ್ನೆ ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

प्रतिवादिना व्याप्त्यादि अनङ्गीकारात् इति भावः।
ಪ್ರತಿವಾದಿಗಳಾದಿ ನಾವು ಮಿಥ್ಯಾತ್ವ ಅನುಮಾನಕ್ಕೆ ವ್ಯಾಪ್ತ್ಯಾದಿಗಳನ್ನು ಅಂಗೀಕರಿಸಿರುವದಿಲ್ಲ ಎಂಬ ಭಾವ.

## टीका

गगनारविन्दस्य अपरोक्ष प्रतीतिः नास्ति इति चेत्। तथा सति अतीन्द्रिय प्रपञ्च भागस्य अनाश्रत्वं स्यात्।

ಗಗನಾರವಿಂದಕ್ಕೆ ಅಪರೋಕ್ಷ ಪ್ರತೀತಿಯು ಇರುವದಿಲ್ಲ. ಆದ್ದರಿಂದ ಅದು ಅನುಮಾನಕ್ಕೆ ಆಶ್ರಯತ್ವ ಪ್ರಯೋಜಕವಾಗುವದಿಲ್ಲ ಎಂದೆನ್ನುತ್ತೇವೆ ಎಂದರೆ.? ಹಾಗಾದರೆ, ಅತೀಂದ್ರಿಯ ಪ್ರಪಂಚದ ಭಾಗಕ್ಕೂ ಆಶ್ರಯವಿಲ್ಲ ಎನ್ನಬೇಕಾಗುತ್ತದೆ.

### टिप्पणीनाम् विशेषार्थानि

**॥ गगनारविन्दस्य इति॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**शङ्कते – गगनारविन्दस्य इति॥**

ಇನ್ನು ಗಗನಾರವಿಂದ ಅನುಮಾನದ ಆಶ್ರಯತ್ವದ ಬಗ್ಗೆ ಈ ಟೀಕಾವಾಕ್ಯ ಶಂಕಿಸುತ್ತದೆ.

**अपरोक्ष विषयत्वमेव अनुमाने आश्रयत्व प्रयोजकम्। तत् च अस्ति प्रकृते प्रपञ्चस्य अपरोक्ष प्रतीति विषयत्वात्। गगनारविन्दस्य च तत् अभावात् युक्ता तत्र आश्रयासिद्धिः इत्यर्थः।**

ಅಪರೋಕ್ಷ ವಿಷಯತ್ವವೇ ಅನುಮಾನದ ಆಶ್ರಯತ್ವವವನ್ನು ಪ್ರತಿಪಾದಿಸುವದರಲ್ಲಿ ಪ್ರಯೋಜಕ. ಈ ಪ್ರಕೃತದಲ್ಲಿ ಪ್ರಪಂಚವು ಅಪರೋಕ್ಷ ಪ್ರತೀತಿ ವಿಷಯವಾದ್ದರಿಂದ ಮಿಥ್ಯಾತ್ವ ಅನುಮಾನಕ್ಕೆ, ಆಶ್ರಯತ್ವ ಸಿದ್ಧವಾಗುತ್ತದೆ. ಆದರೆ ಗಗನಾರವಿಂದಕ್ಕೆ ಅಪರೋಕ್ಷ ಪ್ರತೀತಿ ಇಲ್ಲವಾದ್ದರಿಂದ, ಸುರಭಿಯನ್ನು ಸಾಧಿಸುವ ಗಗನಾರವಿಂದ ಅನುಮಾನಕ್ಕೆ ಆಶ್ರಯಾಸಿದ್ಧಿ ಉಂಟಾಗುತ್ತದೆ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**प्रतीतिविषयमात्रेण आश्रय उपपत्तिः इति पक्षोक्त दूषणं परिहरति– गगनारविन्दस्य इति॥**

ಪ್ರತೀತಿ ವಿಷಯಮಾತ್ರದಿಂದ ಆಶ್ರಯದ ಉಪಪತ್ತಿಯಾಗುತ್ತದೆ ಎಂಬ ಪಕ್ಷ ಹೇಳಿದ ದೂಷಣವನ್ನು ಈ ಟೀಕಾ ವಾಕ್ಯ ಪರಿಹರಿಸುತ್ತದೆ.

**अपरोक्ष प्रतीतिविषयत्वमेव आश्रयत्वे प्रयोजकत्वं इति अभिमतं इति भावः।**

ಅಂದರೆ ಅಪರೋಕ್ಷ ಪ್ರತೀತಿವಿಷಯತ್ವವೇ ಆಶ್ರಯತ್ವಕ್ಕೆ ಪ್ರಯೋಜಕವೆಂದು ಅಭಿಮತವಿರುತ್ತದೆ ಎಂಬ ಭಾವ.

**॥ अनाश्रत्वं स्यात् इति॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**आश्रयत्व प्रयोजकीभूत अपरोक्षप्रतीति विषयत्वस्य तत्र अभावात् इति भावः।**

ಅಂದರೆ ಆಶ್ರಯತ್ವಕ್ಕೆ ಪ್ರಯೋಜಕವಾದ ಅಪರೋಕ್ಷ ಪ್ರತೀತಿ ವಿಷಯತ್ವವು ಅಲ್ಲಿ ಇರುವದಿಲ್ಲ ಎಂಬ ಭಾವ. ಹೀಗಾಗಿ ಮಿಥ್ಯಾತ್ವ ಅನುಮಾನಕ್ಕೆ ಭಾಗಾಶ್ರಯಾಸಿದ್ಧಿದೋಷ ಉಂಟಾಗುತ್ತದೆ ಎಂಬ ಭಾವ.

### ५.५.३.६ निषेधं प्रति असत् आश्रयत्व निराकरणम्



### टीका

**यद्यपि उक्तं, "निषेधं प्रति असतः अपि आश्रयत्व सम्भवति, यथा वन्ध्यासुतो न वक्ता इति। अन्यथा स्ववचन व्याघातादि दोष प्रसङ्गः। किमु व्यवहार सतः प्रपञ्चस्य "इति।**

**तत् अनुपपन्नं। तथा सति प्रपञ्चस्य व्यावहारिकसत्ता स्वीकार वैयर्थ्य प्रसङ्गात्। निषेधं प्रति आश्रयत्वे विधिं प्रति तत् कस्मात् न स्यात्। न हि विधि निषेधयोः वस्तुत्वे कश्चिद् विशेषः।**

ಇಷ್ಟಾದರೂ ಕೆಲವರು ಹೀಗೆ ಹೇಳುತ್ತಾರೆ: ನಿಷೇಧದ ಪ್ರತಿ ಅಸತ್ಯ ಕೂಡ ಆಶ್ರಯವಾಗ ಬಹುದು, ಹೇಗೆ ಬಂಜೆಯ ಮಗ ಮಾತನಾಡುವದಿಲ್ಲ, ಅದರಂತೆ. ಅಂದರೆ ಉದಾಹರಣದಲ್ಲಿ, ಮಾತನಾಡುವ ನಿಷೇಧದ ಪ್ರತಿ ಅಸತ್ಯವಾದ ಬಂಜೆಯ ಮಗ ಆಶ್ರವಾದಂತೆ ಎಂದರ್ಥ. ಅನ್ಯಥಾ ಸ್ವವಚನ ವ್ಯಾಘತ ಮುಂತಾದ ದೋಷಗಳ ಪ್ರಸಂಗವದಗುವದು. ಹೀಗಿರುವಾಗ ವ್ಯಾವಹಾರಿಕ ಸತ್ಯವಾದ ಪ್ರಪಂಚಕ್ಕೆ ಆಶ್ರಯತ್ವ ಸಂಭವಿಸುವದೆಂದು ಎಂದೇನು ಹೇಳುವದು.

ಹೀಗೆ ಹೇಳುವದು ಸರಿಯಲ್ಲ. ಹಾಗೆನಾದರು ಆದರೆ, ಪ್ರಪಂಚಕ್ಕೆ ವ್ಯಾವಹಾರಿಕ ಸತ್ತಾ ಸ್ವೀಕರಿಸುವದು ವ್ಯರ್ಥವೆನಿಸುವ ಪ್ರಸಂಗವದಗುವದು. ಇನ್ನು ನಿಷೇಧದ ಪ್ರತಿ ಅಸತ ಆಶ್ರಯ ಉಂಟಾಗಬಹುದಾದರೆ, ವಿಧಿ ಪ್ರತಿ ಅಸತ್ ಆಶ್ರಯ ಏಕಾಗಬಾರದು? ವಸ್ತುತಃ ವಿಧಿ ನಿಷೇಧಗಳಲ್ಲಿ ಯಾವ ವಿಶೇಷತೆಯು ಇರುವದಿಲ್ಲ.

### टिप्पणीनाम् विशेषार्थानि

**॥ यद्यपि उक्तं इति॥**

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**स्वग्रन्थ इति शेषः।**

ಈ ಟೀಕಾವಾಕ್ಯದಲ್ಲಿ, यद्यपि उक्तं, ನಂತರ स्वग्रन्थ ಎಂಬ ಪದವನ್ನು ಸೇರಿಸಿ ಅರ್ಥಮಾಡಬೇಕು. ಅಂದರೆ, ಇಷ್ಟಾದರೂ ತಮ್ಮ ಕೆಲವೊಂದು ಗ್ರಂಥಗಳಲ್ಲಿ ಹೀಗೆ ಹೇಳಲಾಗಿದೆ ಎಂದರ್ಥ ಆಗುತ್ತದೆ.

**॥ यथा इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**वक्तृत्व निषेधं प्रति असतोऽपि वन्ध्यासुतस्य आश्रयत्वात् इति भावः।**

ಇಲ್ಲಿ ಮಾತನಾಡುವ ಕ್ರಿಯೆಯ ನಿಷೇಧದ ಪ್ರತಿ ಅಸತ್ಯವಾಗಿದ್ದರೂ ಬಂಜೆಯ ಮಗನ ಆಶ್ರಯತ್ವ ಉಂಟಾಗಿರುತ್ತದೆ ಎಂಬ ಭಾವವಿರುತ್ತದೆ.

## ॥ अन्यथा इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

निषेधरूप धर्मं प्रति असतः आश्रयत्व अनङ्गीकार इत्यर्थः।

ಅಂದರೆ, ನಿಷೇಧರೂಪ ಧರ್ಮದ ಪ್ರತಿ ಅಸತದ ಆಶ್ರಯತ್ವವನ್ನು ಅಂಗೀಕರಿಸದಿದ್ದಲ್ಲಿ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

"निषेधं प्रति असत् न आश्रयः" इति निषेधाश्रयत्वनिषेध प्रति असत् आश्रयत्व अङ्गीकृतं चेत् पुनः तत् निषेधे स्ववचन व्याघातः। न अङ्गीकृतं चेत्, निषेधाश्रयत्व निषेधं प्रति अनाश्रयत्वे निषेधाश्रयत्व आपात इत्यर्थः।

ಇನ್ನು "ನಿಷೇಧದ ಪ್ರತಿ ಅಸತ್ ಆಶ್ರಯವಲ್ಲ" ಎಂಬ, ನಿಷೇಧಾಶ್ರಯತ್ವ ನಿಷೇಧದ ಪ್ರತಿ ಅಸತ್ ಆಶ್ರಯತ್ವವನ್ನು ಅಂಗೀಕರಿಸಿದರೆ, ಪುನಃ ನಿಷೇಧಾಶ್ರಯತ್ವವನ್ನು ನಿಷೇಧಮಾಡಿದಂತಾಗಿ ಸ್ವವಚನ ವ್ಯಾಘಾತವೆನಿಸುವದು. (ಸ್ವವಚನ ವ್ಯಾಘಾತ ವೆಂದರೆ, ತಾವು ಮೊದಲು ಹೇಳಿದ ವಿಷಯವನ್ನೆ ಮುಂದೆ ಅಲ್ಲಗೆಳೆಯುವದು) ಇನ್ನು ಅಸತ್ ಆಶ್ರಯತ್ವವನ್ನು ಅಂಗೀಕರಿಸದಿದ್ದರೆ, ನಿಷೇಧಾಶ್ರಯತ್ವನಿಷೇಧದ ಪ್ರತಿ, ಅಸತ್ ಆಶ್ರಯತ್ವದ ಅನಾಶ್ರಯತ್ವವಾದಂತಾಗಿ, ನಿಷೇಧಾಶ್ರಯತ್ವ ಉಳಿದಂತಾಗುವದು.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

अन्यथा असतो निषेधं प्रति आश्रयत्वं नास्ति इत्युक्तौ स्ववचन व्याघातः।

ಅನ್ಯಥಾ, ಅಸತವು ನಿಷೇಧದ ಪ್ರತಿ ಆಶ್ರಯತ್ವವಾಗುವದಿಲ್ಲ ಎಂದರೆ ಸ್ವವಚನ ವ್ಯಾಘಾತವೆನಿಸುವದು.

## ॥ स्ववचन व्याघातादि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

असतो निषेधं प्रति आश्रयत्वं नास्ति इत्युक्ते, निषेधाश्रयत्वनिषेधं प्रति एव असत् आश्रयत्व प्राप्त्या, पुनः तत् निषेधे, स्ववचन व्याघातः। निषेधाश्रयत्वनिषेधं प्रति असत् आश्रयत्व अनङ्गीकारे निषेधाश्रयत्वमेव आपतितं इति पुनः व्याघात् एव इत्यर्थः। निषेधाश्रयत्व अवगाहि अनुभव विरोधः आदि शब्दार्थः।

ಅಸತ್ತವು ನಿಷೇಧದ ಪ್ರತಿ ಆಶ್ರಯತ್ವವಾಗುವದಿಲ್ಲ ಎಂದು ಹೇಳಿದರೆ, ನಿಷೇಧಾಶ್ರಯತ್ವನಿಷೇಧದ ಪ್ರತಿಯೇ ಅಸತ್ ಆಶ್ರಯತ್ವ ಪ್ರಾಪ್ತವಾಗಿ, ಪುನಃ ನಿಷೇಧಾಶ್ರಯತ್ವವನ್ನು ನಿಷೇಧಿಸುವದು ಸ್ವವಚನ ವ್ಯಾಘಾತವೆನಿಸುವದು. ಇನ್ನು ನಿಷೇಧಾಶ್ರಯತ್ವನಿಷೇಧದ ಪ್ರತಿ ಅಸತ್ ಆಶ್ರಯತ್ವ ಅಂಗೀಕರಿಸದಿದ್ದರೆ ನಿಷೇಧಾಶ್ರಯತ್ವವು ಮತ್ತೆ ಉಂಟಾಗುವದರಿಂದ ಪುನಃ ವ್ಯಾಘಾತ ದೋಷವಾಗುತ್ತದೆ ಎಂದರ್ಥ.



ನಿಷೇಧಾಶ್ರಯತ್ವದ ಅವಗಾಹನೆಯೆ ಅನುಭವ ವಿರುದ್ಧವಾಗಿದೆ, ಇದ ಆದಿ ಪದದ ಶಬ್ದಾರ್ಥವಾಗಿರುತ್ತದೆ.

## ॥ किमु इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

यदि निषेधं प्रति असतोऽपि आश्रयत्वं अस्ति तदा सत्तप्रतिषेधरूप मिथ्यात्वं प्रति व्यावहारिक सत्वोपेत प्रपञ्चस्य आश्रयत्वं भविष्यति इति किमु वक्तव्यम्।

ಇನ್ನು, ನಿಷೇಧದ ಪ್ರತಿ ಅಸತ್ ಕೂಡ ಆಶ್ರಯತ್ವ ಇರುವಾಗ ಸತ್ತೆಯ ಪ್ರತಿಷೇಧರೂಪ ಮಿಥ್ಯಾತ್ವ ಪ್ರತಿ ವ್ಯಾವಹಾರಿಕ ಸತ್ಯವಾದ ಪ್ರಪಂಚ ಆಶ್ರಯವಾಗುತ್ತದೆ ಎಂದು ಮತ್ತೆ ಹೇಳಬೇಕೆ.

## ॥ तथा सति इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

निषेधं प्रति असतोऽपि आश्रयत्व अङ्गीकारे, प्रपञ्चस्यापि असत्वमेव अङ्गीक्रियतां, असतोऽपि प्रपञ्चस्य सत्तानिषेधरूप मिथ्यात्वं प्रति आश्रयत्व सम्भवात्। अत एव आश्रयत्व उपपत्त्यर्थं प्रपञ्चस्य व्यावहारिक सत्ता स्वीकारो व्यर्थ एव आपद्यत इत्यर्थः।

ಇನ್ನು, ನಿಷೇಧದ ಪ್ರತಿ ಅಸತ್ತನ್ನುಕೂಡ ಆಶ್ರಯತ್ವವೆಂದು ಅಂಗೀಕರಿಸಿದರೆ, ಪ್ರಪಂಚವನ್ನು ಕೂಡ ಅಸತ್ಯವೆಂದೆ ಅಂಗೀಕರಿಸಿರಿ, ಏಕೆಂದರೆ ಅಸತ್ ಪ್ರಪಂಚ ಕೂಡ ಸತ್ತಾನಿಷೇಧ ಮಿಥ್ಯಾತ್ವ ಪ್ರತಿ ಆಶ್ರಯತ್ವವಾಗಬಹುದು. ಆದ್ದರಿಂದ ಆಶ್ರಯತ್ವ ಉಂಟಾಗುವಗೋಸ್ಕರ ಪ್ರಪಂಚದ ವ್ಯಾವಹಾರಿಕ ಸತ್ತಾ ಸ್ವೀಕರಿಸುವದು ವ್ಯರ್ಥವೆನಿಸುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

अनुमानाश्रयत्ववत् अर्थक्रियान्तरस्यापि व्यावहारिक सत्तां विना एव उपपत्तेः व्यावहारिक सत्ता व्यर्था स्यात्।

ತಾವು ನಮೂದಿಸಿದ ಅನುಮಾನದ ಆಶ್ರಯತ್ವದಂತೆ, ಅರ್ಥಕ್ರಿಯಾಂತರಗಳು ಕೂಡ ವ್ಯಾವಹಾರಿಕ ಸತ್ತೆಯವಿನಾ ಉಂಟಾಗಬಹುದಾದ್ದರಿಂದ, ಇಲ್ಲಿ ವ್ಯಾವಹರಿಕ ಸತ್ತಾ ಅಂಗೀಕರಿಸುವದು ವ್ಯರ್ಥವೆನಿಸುತ್ತದೆ.

न च वाच्यं, प्रयोजन वशात् न तत् अङ्गीकारः, किन्तु "सन् घटः" इत्यादि प्रमाण बलात् इति। "सद्गन्धर्वनगरम्" इत्यादिवत् तस्य प्रातिभासिक सत्ता विषयत्वेन अपि उपपत्तेः।

ಇಲ್ಲ್, ವ್ಯಾವಹಾರಿಕ ಸತ್ತೆಯನ್ನು ಕೇವಲ ಪ್ರಯೋಜನಕ್ಕಾಗಿ ಅಂಗೀಕರಿಸಿಲ್ಲ ಪರಂತು "ಘಟ ಇದೆ" ಮುಂತಾದ ಪ್ರಮಾಣ ಬಲದಿಂದವೆಂದು ಪರಪಕ್ಷದವರು ಹೇಳುವಂತಿಲ್ಲ. ಏಕೆಂದರೆ, "ಸತ್ಯವಾದ ಗಂಧರ್ವನಗರ" ಇತ್ಯಾದಿಗಳಂತೆ, ಅದು ಪ್ರಾತಿಭಾಸಿಕ ಸತ್ತೆಯ ವಿಷಯತ್ವದಿಂದಲೂ ಉಂಟಾಗುತ್ತದೆ.

**न च वाच्यं, सत्वेन व्यवहारातिरिक्तं व्यावहारिक सत्वमेव मया न स्वीकृतं, कस्य वैयर्थ्यं आपद्यते इति। असञ्जात बाधभ्रमविषय रूप्येऽपि चिरकालं अबाधित सद्व्यवहार सम्भवेन तस्य गगनारोपित नैल्यादेश्च व्यावहारिकता आपातात् इति भावः।**

ಇಲ್ಲ, ಸತ್ಯದಿಂದ, ವ್ಯಾವಹಾರ ಅತಿರಿಕ್ತ ವ್ಯಾವಹಾರಿಕ ಸತ್ಯವನ್ನೆ ನಾವು ಅಂಗೀಕರಿಸಿಲ್ಲದಿರುವಾಗ ಯಾವುದಕ್ಕೆ ವೈಯರ್ಥ್ಯವನ್ನು ತಾವು ಆಪಾದಿಸುತ್ತೀರಿ ಎಂದು ಪರಪಕ್ಷದವರು ಹೇಳುವಂತಿಲ್ಲ. ಏಕೆಂದರೆ, ಅಸತ್ಯವಾದ ಬಾಧಭ್ರಮದ ವಿಷಯವಾದ ಶುಕ್ತಿಯಲ್ಲಿ ಕಾಣುವ ರಜತದಲ್ಲಿ ಕೂಡ ದೀರ್ಘಕಾಲ ಅಬಾಧಿತ ಸತ್ ವ್ಯವಹಾರ ಸಂಭವಿಸುವದರಿಂದ, ಅದರ ಗಗನಾರೋಪಿತ ನೀಲತ್ವಾದಿಗಳ ಜೊತೆ ವ್ಯಾವಹರಿಕತಾ ಉಂಟಾಗುವ ಸಾಧ್ಯತೆ ಇದೆ ಎಂಬ ಭಾವವಿರುತ್ತದೆ.

## ॥ निषेधं प्रति इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**निषेधं प्रति असतोऽपि आश्रयत्वं सम्भवति इति परोक्त प्रसङ्गात् दूषयति– निषेधं प्रति इति॥**

ಇನ್ನು ನಿಷೇಧದ ಪ್ರತಿ ಅಸತ್ ವೂ ಕೂಡ ಆಶ್ರಯತ್ವವಾಗಬಹುದೆಂಬ ಪರರ ಹೇಳಿಕೆಯನ್ನು ಪ್ರಸಂಗೋಕ್ತಿಯಿಂದ ಈ ಟೀಕಾವಾಕ್ಯ ದೂಷಿಸುತ್ತದೆ.

**न च वाच्यं असतो निषेधाश्रयत्वे "वन्ध्यासुतो न वक्ता" इति अनुभव एव प्रमाणम्। "घटः वन्ध्यासुतो न" इति प्रतियोगिरूप विध्याश्रयत्वेपि तद्भावात्। अतो निषेधग्रहणं व्यर्थं इति द्रष्टव्यम्।**

ಅಸತವು ನಿಷೇಧ ಪ್ರತಿ ಆಶ್ರಯತ್ವವಾಗಬಹುದು ಎಂಬುದಕ್ಕೆ "ಬಂಜೆಯಮಗ ಮಾತನಾಡಲಾರ" ಎಂಬ ಅನುಭವವೇ ಪ್ರಮಾಣ ಎಂದು ಪರಪಕ್ಷದವರು ಹೇಳಲಿಕ್ಕಾಗುವದಿಲ್ಲ. ಏಕೆಂದರೆ "ಘಟವು ಬಂಜೆಯಮಗವಲ್ಲ" ಎಂದು ಪ್ರತಿಯೊಗಿರೂಪ ಸತ್ಯವಾದ ಆಶ್ರಯತ್ವವನ್ನು ನಿಷೇಧಪ್ರತಿ ಹೇಳಬಹುದಾಗಿದೆ. ಆದ್ದರಿಂದ ಇಲ್ಲಿ ಹಾಗೆ ನಿಷೇಧವನ್ನು ಗ್ರಹಿಸುವದು ವ್ಯರ್ಥವೇ ಸರಿ.

### ೫.೬ *तत्वप्रदीपिकाकारोक्त मिथ्यात्व निर्वचनस्य निराकरणम्*

## टीका

**एतेन स्व–अत्यन्त–अभाव–समानाधिकरणतया प्रतीयमानत्वं मिथ्यात्वं इति निरस्तम्। तदेतत् अपाकृत असत्त्व–अनिर्वचनीयत्वाभ्याम् न बहिर्भूतं इति, न पृथक् आशङ्क्य दूषितम्।**

ಮೇಲಿನ ಈಗಿನವರೆಗಿನ ಎಲ್ಲ ವಿಕಲ್ಪಗಳ ವಿಮರ್ಷೆಗಳಿಂದ, ಸ್ವತಃ ಅತ್ಯಂತ ಅಭಾವತೆಯ ಸಮಾನಾಧಿಕರಣತೆಯಾಗಿ ಪ್ರತೀಯಮಾನವಾದುದು ಮಿಥ್ಯಾ ಎಂಬ ಮಿಥ್ಯಾತ್ವದ ನಿರೂಪಣೆಯನ್ನು ಅಲ್ಲಗೆಳೆದಂತಾಯಿತು. ಹಾಗೂ ಇಂತಹ ಮಿಥ್ಯಾತ್ವದ ನಿರೂಪಣೆಯು,



ಈಗಾಗಲೆ ಅಲ್ಲಗೆಳೆದ ಅಸತ್ವ, ಅನಿರ್ವಚನೀಯ ಮುಂತದವುಗಳಗಿಂತ ಬೇರೆಯಾಗಿರುವದಿಲ್ಲ ಎಂದು ಅದನ್ನು ಪ್ರತ್ಯೇಕವಾಗಿ ಆಶಂಕಿಸಿ ದೂಷಿಸಿಲ್ಲ.

## टिप्पणीनाम् विशेषार्थानि

## ॥ एतेन इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**तत्वप्रदीपिकाकारोक्त मिथ्यात्व निर्वचनं आशङ्क्य निराकरोति–एतेन इति॥**

ಇಲ್ಲಿ, ಟೀಕಾಕೃತ್ಪಾದರು ತತ್ವಪ್ರದೀಪಿಕಾಕಾರರು ಪ್ರತಿಪಾದಿಸಿದ ಮಿಥ್ಯಾತ್ವದ ನಿರೂಪಣೆಯನ್ನು ಆಶಂಕಿಸಿ ನಿರಾಕರಿಸುತ್ತಾರೆ.

**स्व–अत्यन्त–अभाव–समानाधिकरणत्व इत्येव उक्ते व्याघातः स्यात्। भाव तत् अत्यन्त अभावयोः एकधिकरणत्व अयोगात्। अतः प्रतीयमानत्वं इत्युक्तम्। एवं च न व्याघातः, भाव अधिकरणतया भ्रान्ति सिद्धस्य वस्तुनः अभाव अधिकरणत्व उपपत्तेः।**

ತತ್ವಪ್ರದೀಪಿಕಾಕಾರರ ಮಿಥ್ಯಾತ್ವ ನಿರೂಪಣೆ ಸ್ವಆಶ್ರಯಪರ-ಅತ್ಯಂತ-ಅಭಾವ-ಸಮಾನಾಧಿಕರಣತ್ವ ಎಂದಿಷ್ಟೆ ಇದ್ದಿದ್ದರೆ, ವ್ಯಾಘಾತ ದೋಷ ಉಂಟಾಗುತ್ತಿತ್ತು. ಏಕೆಂದರೆ, ಭಾವ ಮತ್ತು ಅದರ ಅತ್ಯಂತ ಅಭಾವಗಳಲ್ಲಿ ಒಂದೇ ಅಧಿಕರಣವನ್ನು ಹೇಳುವದು ಅಯೋಗ್ಯವೆನಿಸುತ್ತದೆ. ಆದ್ದರಿಂದ ತತ್ವಪ್ರದೀಪಿಕಾಕಾರರು ತಮ್ಮ ಮಿಥ್ಯಾತ್ವದ ನಿರೂಪಣೆಯಲ್ಲಿ "ಪ್ರತೀಯಮಾನತ್ವಾತ್" ಎಂಬ ಪದವನ್ನು ಇಟ್ಟಿದ್ದಾರೆ. ಇದರಿಂದ ವ್ಯಾಘಾತ ದೋಷ ಉಂಟಾಗುವದಿಲ್ಲ. ಏಕೆಂದರೆ, ಭಾವ ಅಧಿಕರಣಪರವಾಗಿ ಭ್ರಾಂತಿ ಸಿದ್ಧವಾದ ವಸ್ತುಗಳಿಗೆ ಅಭಾವ ಅಧಿಕರಣತ್ವ ಉಂಟಾಗುತ್ತದೆ ಎಂಬ ಭಾವವಿರುತ್ತದೆ .

**एवं च स्व–आश्रयतया प्रतीयमान अधिकरणनिष्ठ अत्यन्त अभाव प्रतियोगिकत्वं मिथ्यात्वं इति विवक्षितं इति भावः।**

ಅದರಂತೆ, ಸ್ವ-ಆಶ್ರಯಪರ ಪ್ರತೀಯಮಾನ ಅಧಿಕರಣನಿಷ್ಠ, ಅತ್ಯಂತ ಅಭಾವದ ಪ್ರತಿಯೋಗಿಯು ಮಿಥ್ಯಾತ್ವವು ಎಂದು ವಿವಕ್ಷಿಸಲಾಯಿತು ಎಂಬ ಭಾವವಿರುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**आश्रयासिद्धि प्रसङ्गेन एव तत्वप्रदीपिकाकारोक्त मिथ्यात्व निर्वचनं निरस्तं इत्याह– एतेन इति॥**

ಇಲ್ಲಿ, ಹಿಂದೆ ಪ್ರತಿಪಾದಿಸಿದ ಆಶ್ರಯಾಸಿದ್ಧಿ ಪ್ರಸಂಗದಿಂದಲೇ ತತ್ವಪ್ರದೀಪಿಕಾರರು ಪ್ರತಿಪಾದಿಸಿದ ಮಿಥ್ಯಾತ್ವದ ನಿರೂಪಣೆ ನಿರಾಕರಿಸಲಾಯಿತು, ಎಂದು ಈ ಟೀಕಾವಾಕ್ಯವು ಸ್ಪಷ್ಟಪಡಿಸುತ್ತದೆ.

**स्व–अत्यन्त–अभाव–समानाधिकरणत्वं इत्येव उक्ते व्याघातः स्यात्। भाव तत् अत्यन्त अभावयोः एकाधिकरणत्वं अयोगात्। अतः तथा प्रतीयमानत्वं इत्युक्तम्। एवं च न व्याघातः। भावाधिकरणतया भ्रान्तिसिद्धस्य वस्तुतः अभावाधिकरणत्वस्य उपपत्तेः।**

ತತ್ವಪ್ರದೀಪಿಕಾಕಾರರ ಮಿಥ್ಯಾತ್ವ ನಿರೂಪಣೆ ಸ್ವ-ಅತ್ಯಂತ-ಅಭಾವ-ಸಮಾನಾಧಿಕರಣತ್ವ ಎಂದಿಷ್ಟೆ ಇದ್ದಿದ್ದರೆ, ವ್ಯಾಘಾತ ದೋಷ ಉಂಟಾಗುತ್ತಿತ್ತು. ಏಕೆಂದರೆ, ಭಾವ ಮತ್ತು ಅದರ ಅತ್ಯಂತ ಅಭಾವಗಳಲ್ಲಿ ಒಂದೇ ಅಧಿಕರಣವನ್ನು ಹೇಳುವದು ಅಯೋಗ್ಯವೆನಿಸುತ್ತದೆ. ಆದ್ದರಿಂದ ತತ್ವಪ್ರದೀಪಿಕಾಕಾರರು ತಮ್ಮ ಮಿಥ್ಯಾತ್ವದ ನಿರೂಪಣೆಯಲ್ಲಿ "ಪ್ರತೀಯಮಾನತ್ವಾತ್" ಎಂಬ ಪದವನ್ನು ಇಟ್ಟಿದ್ದಾರೆ. ಇದರಿಂದ ವ್ಯಾಘಾತ ದೋಷ ಉಂಟಾಗುವದಿಲ್ಲ. ಏಕೆಂದರೆ, ಭಾವ ಅಧಿಕರಣಪರವಾಗಿ ಭ್ರಾಂತಿ ಸಿದ್ಧವಾದ ವಸ್ತುಗಳಿಗೆ ಅಭಾವ ಅಧಿಕರಣತ್ವ ಉಂಟಾಗುತ್ತದೆ ಎಂಬ ಭಾವವಿರುತ್ತದೆ

**एवं च स्वाधिकरणतया प्रतीयमान निष्ठ अत्यन्त अभाव प्रतियोगित्वं मिथ्यात्वं इति बोद्धव्यं।**

ಅದರಂತೆ, ಸ್ವ-ಅಧಿಕರಣಪರ ಪ್ರತೀಯಮಾನನಿಷ್ಠ, ಅತ್ಯಂತ ಅಭಾವ ಪ್ರತಿಯೋಗಿತ್ವವು ಮಿಥ್ಯಾತ್ವವೆನಿಸುವದು ಎಂದು ತಿಳಿದುಕೊಳ್ಳಬೇಕು.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**एतेन सिद्धसाधनत्वेन स्व–अत्यन्त–अभाव–समानाधिकरणतया प्रतीयमानत्वं मिथ्यात्वं इति निरस्तम्।**

ಇಲ್ಲಿ, ಹಿಂದೆ ಪ್ರತಿಪಾದಿಸಿದ ಸಿದ್ಧಸಾಧನತಾ ದೋಷದಿಂದಲೇ ಸ್ವ-ಅತ್ಯಂತ- ಅಭಾವ-ಸಮಾನಾಧಿಕರಣ ಪರ ಪ್ರತೀಯಮಾನವಾದದ್ದು ಮಿಥ್ಯಾತ್ವವು ಎಂಬ ನಿರೂಪಣೆ ನಿರಾಕರಿಸಲಾಯಿತು, ಎಂದು ಈ ಟೀಕಾವಾಕ್ಯವು ಸ್ಪಷ್ಟಪಡಿಸುತ್ತದೆ.

**वस्तुतस्तु, स्व–अत्यन्त–अभाव–समानाधिकरणस्यापि जगतः, स्व–अत्यन्तअभाव–समानाधिकरणं जगत् इति मायावादि प्रतीतिविषयत्वस्य अस्माभि अङ्गीकारात्।**

ವಸ್ತುತಃ ಸ್ವ-ಅತ್ಯಂತ-ಅಭಾವ-ಸಮಾನಾಧಿಕರಣಪರವಾದ ಜಗತ್ತು ಎಂದರೆ ಸ್ವಾಶ್ರಯ-ಅತ್ಯಂತ-ಅಭಾವ-ಸಮಾನಾಧಿಕರಣ ಜಗತ್ ಎಂಬ ಮಾಯಾವದಿಗಳ ಪ್ರತೀತಿವಿಷಯವನ್ನು ನಾವು ಕೂಡ ಅಂಗೀಕರಿಸಿರುತ್ತೇವೆ. ಆದ್ದರಿಂದ ಇಲ್ಲಿ ಸಿದ್ಧಸಾಧನತಾ ದೋಷವಿರುತ್ತದೆ ಎಂಬ ಭಾವವಿರುತ್ತದೆ.

**न च स्व–अत्यन्त–अभाव–समानाधिकरणतया प्रतीयमानत्वं मिथ्यात्वं इति विवक्षितं इति वाच्यम्। त्वत् मते जगत् स्वरूपस्य प्रतिपन्न उपाधौ सत्वेन तत्र तत् अत्यन्त अभाव असम्भवात्, भाव–अभावयोः समानाधिकरण्य प्रतीतेः प्रमातृ अयोगात्। योगे च संयोगादिवत् अव्याप्यवृत्तित्व प्रसङ्गेन अर्थान्तरत्वात्।**

ಇನ್ನು ಸ್ವಾಶ್ರಯಪರ-ಅತ್ಯಂತ-ಅಭಾವ-ಸಮಾನಾಧಿಕರಣಪರ ಪ್ರತೀಯಮಾನವಾದುದು ಮಿಥ್ಯಾತ್ವವು ಎಂದು ಇಲ್ಲಿ ವಿವಕ್ಷಿತವಾಗಿದೆ ಎಂದು ಹೇಳಕೂಡದು. ಏಕೆಂದರ ತಮ್ಮ(ಪರಪಕ್ಷದವರ) ಮತದಲ್ಲಿ ಸ್ವರೂಪವು ಪ್ರತಿಪನ್ನ ಉಪಾಧಿಯಲ್ಲಿ ಸತ್ಯವಾದ್ದರಿಂದ ಅಲ್ಲಿ ಅದರ (ಸ್ವರೂಪದ) ಅತ್ಯಂತ ಅಭಾವ ಅಸಂಭವವಾಗಿರುತ್ತದೆ. ಮತ್ತು ಭಾವ-ಅಭಾವಗಳ ಸಮಾನಾಧಿಕರಣದ ಪ್ರತೀತಿಯ ಪ್ರಮಾತೃ ಅಂದರೆ ಜ್ಞಾನ



ಅಯೋಗ್ಯವಾಗಿರುತ್ತದೆ. ಯೋಗ ಮತ್ತು ಸಂಯೋಗದಂತೆ, ಅವ್ಯಾಪಕತ್ವ ವೃತ್ತಿತ್ವ ಪ್ರಸಂಗದಿಂದ ಅರ್ಥವಾಗುವದೇ ಇಲ್ಲ ಎಂಬ ಭಾವ.

**ವಿಶೇಷಃ** ಇಲ್ಲಿ ಶ್ರೀಸತ್ಯನಾಥರ ಉಳಿದ ಟಿಪ್ಪಣಿಕಾರರ ಜೊತೆ ಇರುವ ಭಿನ್ನಾಭಿಪ್ರಾಯವನ್ನು ಓದುಗರು ವಿಶೇಷವಾಗಿ ಗಮನಿಸಬೇಕು.

## ॥ तदेतत् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**एतेन इत्युक्तं विशदयति–तदेतत् इति॥**

ಮೇಲೆ एतेन ಪದದಿಂದ ಹೇಳಿದ್ದನ್ನು ಈ ಟೀಕಾವಾಕ್ಯ ವಿಶದಮಾಡುತ್ತದೆ.

**यदि अत्यन्त अभाव प्रतियोगित्वं स्वरूपेण विवक्षितं तदा असत्वापत्तिः। शशविषाणादेः अपि स्वरूपेण अत्यन्त अभाव प्रतियोगित्व अन्यस्य असत्त्वस्य अभावात्।**

ಒಂದು ವೇಳೆ ಸ್ವರೂಪತಃ ಅತ್ಯಂತ ಅಭಾವ ಪ್ರತಿಯೋಗಿತ್ವವು ಇಲ್ಲಿ ವಿವಕ್ಷಿತವಾಗಿದೆ ಎಂದು ಅನ್ನುವದಾದರೆ, ಆಗ ಅಸತ್ವ ಉಂಟಾಗುತ್ತದೆ. ಶಶವಿಷಾಣಾದಿಗಳಿಗೂ ಕೂಡ ಸ್ವರೂಪತಃ ಅತ್ಯಂತ ಅಭಾವ ಪ್ರತಿಯೊಗಿತ್ವ ಹೊರತಾಗಿ, ಅಸತ್ವ ಇರುವದಿಲ್ಲ.

**यदि च असद्विलक्षण स्वरूप अनुपमर्देन पारमार्थिकत्वाकारेण अत्यन्त अभाव प्रतियोगित्वं विवक्षितं तदा सदसद्वैलक्षण्य प्राप्त्या अनिर्वचनीयता आपत्तिः इत्यर्थः।**

ಇನ್ನು, ಅಸತ್ ವಿಲಕ್ಷಣ ಸ್ವರೂಪ ಮರುಕಳಿಸುವದರಿಂದ ಪಾರಮಾರ್ಥಿಕತ್ವಾಕಾರದಿಂದ ಅತ್ಯಂತ ಅಭಾವ ಪ್ರತಿಯೋಗಿತ್ವವು ಇಲ್ಲಿ ವಿವಕ್ಷಿತವಾಗಿದೆ ಎನ್ನುವದಾದರೆ ಆಗ ಸದಸದ್ವೈಲಕ್ಷಣ್ಯ ಪ್ರಾಪ್ತವಾಗಿ ಅನಿರ್ವಚನೀಯ ಉಂಟಾಗುತ್ತದೆ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**अभाव प्रतियोगित्वं स्वरूपेण यदि तदा असत्त्वापत्तिः। शशविषाणादेः अपि स्वरूपेण अत्यन्त अभाव प्रतियोगित्व अतिरिक्त असत्व अभावात्। यदि तु असद्विलक्षण स्वरूप अनुपमर्देन सत्त्वाकारण तदा अनिर्वचनीय आपत्तिः इत्यर्थः।**

ಅಭಾವ ಪ್ರತಿಯೋಗಿತ್ವವು ಸ್ವರೂಪದಿಂದ ಎಂದು ತೆಗೆದುಕೊಂಡರೆ, ಆಗ ಅಸತ್ವ ಉಂಟಾಗುತ್ತದೆ. ಶಶವಿಷಾಣಾದಿಗಳಿಗು ಕೂಡ ಸ್ವರೂಪದಿಂದ ಅತ್ಯಂತ ಅಭಾವ ಪ್ರತಿಯೋಗಿತ್ವಕ್ಕಿಂತ ಬೇರೆ ಅಸತ್ಯತ್ವ ಇರುವದಿಲ್ಲ. ಒಂದು ವೇಳೆ ಅಸದ್ವಿಲಕ್ಷಣ ಸ್ವರೂಪ ಮರುಕಳಿಸುವದರಿಂದ ಸತ್ವಾಕಾರರೂಪ ಅಭಾವ ಪ್ರತಿಯೋಗಿತ್ವವನ್ನು ತೆಗೆದುಕೊಂಡರೆ, ಅನಿರ್ವಚನೀಯತ್ವ ಉಂಟಾಗುತ್ತದೆ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**ननु मूलकारेण सद्वैलक्षण्य सदसद्वैलक्षण्य पक्षौ एव आशङ्क्यैव दूषितौ, सद्वैलक्षण्येन सह असद्वैलक्षण्यं इत्यादयः पक्षाः अनाशङ्क्यैव दूषिताः। तत् कुतो वैषम्य इत्यत आह– तदेतत् इति॥**

ಮೂಲದಲ್ಲಿ ಶ್ರೀಮದಾಚಾರ್ಯರು, ಸದ್ವೈಲಕ್ಷಣ್ಯ, ಸದಸದ್ವೈಲಕ್ಷಣ್ಯ ವಿಕಲ್ಪಗಳನ್ನು ಆಶಂಕಿಸಿಯೆ ದೂಷಿಸಿದ್ದಾರೆ, ಆದರೆ ಸದ್ವೈಲಕ್ಷಣ್ಯ ಸಹ ಅಸದ್ವೈಲಕ್ಷಣ್ಯ ಇತ್ಯಾದಿ ವಿಕಲ್ಪಗಳನ್ನು ಶಂಕಿಸದೆ ದೂಷಿಸಿದ್ದಾರೆ. ಈ ವೈಷಮ್ಯ ಏಕೆ ಎಂಬ ಕೂತೂಹಲವನ್ನು ಈ ಟೀಕಾವಾಕ್ಯ ಉತ್ತರಿಸುತ್ತದೆ.

### *೫.೭. आश्रयासिद्धेः अदोषत्व शङ्का तन्निरासश्च*

टीका

**ननु आश्रयासिद्धिः अस्माकं न दोषः। परोऽपि तथा अङ्गीकुरुते। "निरुपाख्यं अपि आश्रय एव" इत्युक्तत्वात्। तत् कथं तत् उद्भावनम्। इत्थम्, यद्यपि परो वैयात्यमात्रेण तथागतमतं अनुसृत्य तथाह। तथापि न तत् सिद्धान्तः। तथात्वे निरुपाख्यस्यापि प्रतीति अङ्गीकार प्रसङ्गात्। प्रपञ्चस्य व्यावहारिक सत्ता स्वीकार वैयर्थ्यापत्तेश्च इति।**

ಇಲ್ಲಿ ಶಿಷ್ಯರೊಬ್ಬರು ಹೀಗೆ ಶಂಕಿಸುತ್ತಾರೆ. ಆಶ್ರಯಾಸಿದ್ಧಿಯು ನಮಗೆ ದೋಷವಲ್ಲ. ಇನ್ನು ಪರರು ಕೂಡ ಹಾಗೆಯೆ ಅಂಗೀಕರಿಸಿದ್ದಾರೆ. ಅದರಂತೆಯೆ "ಕಾಲ್ಪನಿಕವಾದದ್ದು ಅಥವಾ ಅಸತ್ಯವಾದದ್ದು ಕೂಡ ಆಶ್ರಯವಾಗುತ್ತದೆ" ಎಂದು ಅವರು ಹೇಳುತ್ತಾರೆ. ಹೀಗಿದ್ದಾಗ ಈ ಆಶ್ರಯಾಸಿದ್ಧಿ ದೋಷವನ್ನು ಏಕೆ ಎತ್ತುತ್ತೀರಿ?

ಅದು ಹೀಗಿರುತ್ತದೆ. ಆದರೂ ಪರಪಕ್ಷದವರು, ಉದ್ಧಟತನಮಾತ್ರದಿಂದ ಬೌದ್ಧಮತವನ್ನು ಅನುಸರಿಸಿ ಹಾಗೆ ಹೇಳಿರುತ್ತಾರೆ. ಹಾಗಿದ್ದರೂ, ಅದು ಅವರ ಸಿದ್ಧಾಂತವಲ್ಲ. ಹಾಗೆನಾದರು ಆದರೆ ಕಾಲ್ಪನಿಕ ಅಥವಾ ನಿರುಪಾಖ್ಯಕ್ಕೂ ಕೂಡ ಪ್ರತೀತಿಯನ್ನು ಅಂಗೀಕರಿಸುವ ಪ್ರಸಂಗ ವದಗುವದು. ಹಾಗೂ ಅವರ ಪ್ರಪಂಚಕ್ಕೆ ವ್ಯಾವಹಾರಿಕ ಸತ್ತಾ ಸ್ವೀಕಾರ ಸಹ ವ್ಯರ್ಥವಾಗುವದು.

टिप्पणीनाम् विशेषार्थानि

**॥ ननु इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**शिष्यः शङ्कते–ननु इति॥**

ಈ ಟೀಕಾವಾಕ್ಯ ಶಿಷ್ಯರ ಆಶ್ರಯಾಸಿದ್ಧಿಯ ಬಗ್ಗೆ ಇರುವ ಶಂಕೆಯನ್ನು ವಿವರಿಸುತ್ತದೆ.

**॥ अस्माकं न दोषः इति॥**



ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**अस्माकं मते न दोष इत्यर्थः।**

**आश्रय साध्य व्यधिकरण असिद्ध्यो न दूषणं इत्युक्तेः इति भावः।**

ನಮ್ಮ ಮತದಂತೆ ಆಶ್ರಯಾಸಿದ್ಧಿ ದೋಷವಲ್ಲ. ಆಶ್ರಯಾಸಿದ್ಧಿ, ಸಾಧ್ಯಧರ್ಮದ ಬೇರೆ ಬೆರೆ ಆಶ್ರಯ, ಇವುಗಳು ದೋಷಗಳಲ್ಲ ಎಂದು ನಮ್ಮ ಮತದಲ್ಲಿ ಹೇಳಲಾಗಿದೆ.

**॥ न दोष इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**आश्रय साध्य व्यधीकरण असिद्ध्यो न दूषणं इति भगवत्पाद वचनात् इति भावः।**

ಆಶ್ರಯಾಸಿದ್ಧಿ, ಸಾಧ್ಯ ಧರ್ಮದ ವಿಭಿನ್ನ ಆಶ್ರಯಗಳು, ಇವುಗಳು ದೋಷಗಳಲ್ಲ ಎಂದು ಭಗವತ್ಪಾದರ ವಚನವಿರುತ್ತದೆ.

**॥ परोऽपि इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**परो मायावादी। तथा अदोषतया।**

ಇಲ್ಲಿ ಪರೋ ಪದದ ಅರ್ಥ ಮಾಯಾವಾದಿ ಎಂದಾಗಿರುತ್ತದೆ. ಹಾಗೆಯೆ ತಥಾ ಪದದ ಅರ್ಥ ಅದೋಷಪರವಾಗಿರುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**ननु निरुपाधिकं अपि आश्रय एव इति परो मनुते किमु सद्वैलक्षण्यस्य आश्रयत्वं मनुते इति वक्तव्यं इति भावेन आह– परोऽपि इति॥**

ಇನ್ನು ವಾಸ್ತವವಲ್ಲದ್ದನ್ನು ಕೂಡ ಆಶ್ರಯ ಎಂದು ಪರಪಕ್ಷದವರು ಮನ್ನಿಸುತ್ತಾರೆ ಎಂದಮೇಲೆ ಸದ್ವೈಲಕ್ಷಣ್ಯಕ್ಕೆ ಆಶ್ರಯತ್ವವನ್ನು ಮನ್ನಿಸುತ್ತಾರೆ ಎಂದು ಮತ್ತೆ ಹೇಳಬೇಕೆ? ಈ ಭಾವವನ್ನೆ ಈ ಟೀಕಾವಾಕ್ಯ ವಿಶದಪಡಿಸುತ್ತದೆ.

**यथात्वस्य आश्रयासिद्धि दोषः न प्राप्नोति तथा अङ्गीकुरुत इत्यर्थः।**

ಯಾವುದರಿಂದ ಆಶ್ರಯಾಸಿದ್ಧಿ ದೋಷ ಉಂಟಾಗುವದಿಲ್ಲವೊ ಅದರಂತೆ ಪರಪಕ್ಷದವರು ಅಂಗೀಕರಿಸಿದ್ದಾರೆ ಎಂದರ್ಥ.

**सद्विलक्षणस्य आश्रयत्व अङ्गीकारात् आश्रयासिद्धि न प्राप्नोति इति भावः।**

ಅದರಂತೆ ಸದ್ವಿಲಕ್ಷಣಕ್ಕೆ ಆಶ್ರಯತ್ವವನ್ನು ಅಂಗೀಕರಿಸಿದ್ದರಿಂದ ಆಶ್ರಯಾಸಿದ್ಧಿ ದೋಷ ಉಂಟಾಗುವದಿಲ್ಲ ಎಂಬ ಭಾವವಿರುತ್ತದೆ.

**॥ निरुपाख्यं अपि इति॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**तत्र तदीयवचनं ज्ञापकं आह– निरुपाख्यं अपि इति॥**

ಅಲ್ಲಿ, ಪರಪಕ್ಷದವರ ವಚನವನ್ನು ಜ್ಞಾಪಿಸಲು ಈ ಟೀಕಾವಾಕ್ಯ ಇರುತ್ತದೆ.

असत् अपि इत्यर्थः। वन्ध्यासुतो न वक्ता इत्यादौ दर्शनात् इति भावः।

ನಿರುಪಾಖ್ಯ ಕೂಡ ಎಂದರೆ ಅಸತ್ ಕೂಡ ಎಂದರ್ಥ. ಇದಕ್ಕೆ ಅನುಗುಣವಾಗಿರುವ " ಬಂಜೆಯ ಮಗ ಮಾತನಾಡಲಾರ" ಎಂಬ ಮುಂತಾದವುಗಳನ್ನು ಈಗಾಗಲೆ ನೋಡಲಾಗಿದೆ ಎಂಬ ಭಾವವಿರುತ್ತದೆ.

## ॥ वैयात्यमात्रेण इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

वैयात्यं औद्धत्यम्। तथागतमतं बौद्धमतं। तन्मते आश्रयासिद्धि अदोषत्वात् इति भावः।

ವೈಯಾತ್ಯಮ್ ಅಂದರೆ ಉದ್ಧಟತನ ಎಂದರ್ಥ. ತಥಾಗತಮತಮ್ ಎಂದರೆ ಬೌದ್ಧಮತ ಎಂದರ್ಥ. ಅದರಂತೆ, ಬೌದ್ಧಮತದಲ್ಲಿ ಆಶ್ರಯಾಸಿದ್ಧಿ ದೋಷವೆನಿಸುವದಿಲ್ಲ ಎಂಬ ಭಾವವಿರುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

वैयात्यमात्रेण धैर्यमात्रेण। तथागतमतं बौद्धमतम् अनुसृत्य तथा आह इत्यर्थः।

ವೈಯಾತ್ಯಮಾತ್ರೇಣ ಎಂದರೆ ಧೈರ್ಯಮಾತ್ರದಿಂದ ಎಂದರ್ಥ. ತಥಾಗತಮತಮ್ ಅಂದರೆ ಬೌದ್ಧಮತವನ್ನು ಅನುಸರಿಸಿ ಹಾಗೆ ಹೇಳಿಲಾಗಿದೆ ಎಂದರ್ಥ.

## ॥ तथागतमतं अनुसृत्य इति॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

परेण निरूपाख्यस्य आश्रयत्वं उपपाद्य स्व-उक्तार्थे तदुक्तं
विधानं प्रतिषेधं च मुक्त्वा शब्दोऽस्ति नापरः।
व्यवहार स च असत्सु न इति प्राप्तात्र मूकता॥ इति।
धर्मकीर्ति सम्मति कथनात् इत्यर्थः।

ಇನ್ನು ನಿರುಪಾಖ್ಯಕ್ಕೆ ಆಶ್ರಯತ್ವವನ್ನು ಉಪಪಾದಿಸಲು ಪರಪಕ್ಷದವರಿಂದ , ಪ್ರತಿಪಾದಿಸಿದ ಅರ್ಥಕ್ಕೆ, " विधान प्रतिषेधं..." ಎಂಬ ಧರ್ಮಕೀರ್ತಿಯ ಈ ವಿಧಾನವು ಸಮ್ಮತಿಯನ್ನು ಸೂಚಿಸುತ್ತದೆ ಎಂದರ್ಥ.

ಧರ್ಮಕೀರ್ತಿಯ ವಿಧಾನದ ಅರ್ಥ ಹೀಗಿರುತ್ತದೆ: ವಿಧಾನ ಮತ್ತು ಪ್ರತಿಷೇಧ ಬಿಟ್ಟು ಬೇರೆ ಯಾವ ಶಬ್ದಗಳು ಇರುವದಿಲ್ಲ. ಇಲ್ಲಿ, ವ್ಯವಹಾರ ಹಾಗೂ ಅಸತ್ ಗಳಿಗೆ ಮೂಕತೆಯು ಪ್ರಾಪ್ತವಾಗುವದಿಲ್ಲ.

## ॥ तथाह इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

आश्रयासिद्धेः अदोषताम् आह इत्यर्थः।

ಅಂದರೆ, ಆಶ್ರಯಾಸಿದ್ಧಿ ಅದೋಷವಾಗಿದೆ ಎಂದು ಹೇಳಲಾಗಿದೆ ಎಂದರ್ಥ.



## ॥ तथात्वे इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

असौ अदोषता-तथात्व इति॥

ಈ ಟೀಕಾವಾಕ್ಯವು ನಿರುಪಾಖ್ಯವು ಆಶ್ರಯಾಸಿದ್ಧಿ ದೋಷಗ್ರಸ್ತವಲ್ಲ ಎಂದು ಅಂಗೀಕರಿಸಿದರೆ ಏನಾಗುತ್ತದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ.

निरुपाख्यरूप असतोऽपि आश्रयत्वं अङ्गीकृत्य आश्रयासिद्धेः अदूषणत्व अङ्गीकारे इत्यर्थः।

ನಿರುಪಾಖ್ಯರೂಪ ಅಸತ್ ಕೂಡ ಆಶ್ರಯತ್ವವನ್ನು ಅಂಗೀಕರಿಸಿ ಆಶ್ರಾಯಾಸಿದ್ಧಿ ದೋಷಕ್ಕೆ ಅದೂಷಣತ್ವವನ್ನು ಅಂಗೀಕರಿಸಿದರೆ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

अप्रतीते धर्मिणि कस्यापि निषेद्धुं अशक्यत्वात् निरुपाख्ये धर्मिणि किञ्चित् निषेधता तत् प्रतीतिर्वाच्या। न च वक्तुं शक्या। निरुपाख्यस्य ख्याति अयोगात् इत्यर्थः।

ಅಪ್ರತೀತವಾದ ಧರ್ಮಿಣಿ ಯಾವುದನ್ನೂ ನಿಷೇಧಿಸಲು ಅಶಕ್ಯವಾಗಿರುವದರಿಂದ ನಿರುಪಾಖ್ಯ ಧರ್ಮಿಣಿಯು ಕಿಂಚಿತ್ ನಿಷೇಧಮಾಡುವದಾದರೆ, ಅದರ ಪ್ರತೀತಿಯನ್ನು ಹೇಳಬೇಕು. ಹಾಗೆ ನಿರುಪಾಖ್ಯಕ್ಕೆ ಹೇಳಲು ಬರುವದಿಲ್ಲ. ಏಕೆಂದರೆ, ನಿರುಪಾಖ್ಯದ ಖ್ಯಾತಿ ಎಂದರೆ ಜ್ಞಾನ ಹೇಳುವದು ಅಯೋಗ್ಯವಾಗಿದೆ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

असतोऽपि आश्रयत्वेन इन्द्रियसन्निकर्ष सम्भवेन अपरोक्ष प्रतीति प्रसङ्गात इत्यर्थः।

ನಿರುಪಾಖ್ಯಕ್ಕೆ ಆಶ್ರಯತ್ವ ಹೇಳಿದರೆ, ಅಸತಕ್ಕು ಕೂಡ ಆಶ್ರಯತ್ವದಿಂದ ಇಂದ್ರಿಯ ಸನ್ನಿಕರ್ಷ ಸಂಭವವಿರುವಾಗ, ಅಪರೊಕ್ಷ ಪರತೀತಿ ಉಂಟಾಗುವ ಪ್ರಸಂಗ ಉಂಟಾಗುವದು ಎಂದರ್ಥ.

## ॥ प्रतीति इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

सद्भ्यां अधिकरण प्रतियोगिभ्यां अभावो निरूप्यत इति वचनात्।

ಸತ್ಯವಾದ ಅಧಿಕರಣ ಪ್ರತಿಯೋಗಿಗಳಿಂದ ಅಭಾವವನ್ನು ನಿರೂಪಿಸಲ್ಪಡುತ್ತದೆ ಎಂದು ವಚನವಿರುತ್ತದೆ.

अप्रतीते धर्मिणि कस्यापि धर्मस्य निषेद्धुं अशक्यत्वेन, निरुपाख्यरूप असद्रुपे धर्मिणि किञ्चित् निषेधतां अवश्यं तत् प्रतीतिः वाच्या। न च सा वक्तुं शक्या, निरुपाख्यस्य ख्याति अयोगात् इत्यर्थः।

ಅಪ್ರತೀತವಾದ ಧರ್ಮಿಣಿಯಲ್ಲಿ ಯಾವ ಧರ್ಮವನ್ನು ನಿಷೇಧಿಸಲು ಅಶಕ್ಯವಾಗಿರುವದರಿಂದ ನಿರುಪಾಖ್ಯರೂಪ ಅಸತ್-ರೂಪ ಧರ್ಮಿಣಿಯಲ್ಲಿ ಕಿಂಚಿತ್ತಾದರೂ ನಿಷೇಧಮಾಡುವದಾದರೆ, ಅವಶ್ಯವಾಗಿ ಅದರ ಪ್ರತೀತಿ ಉಂಟಾಗುತ್ತದೆ ಎಂದು ಹೇಳಬೇಕು.

ಆದರೆ ಹಾಗೆ ಹೇಳಲಿಕ್ಕಾಗುವದಿಲ್ಲ. ಏಕೆಂದರೆ, ನಿರುಪಾಖ್ಯದ ಜ್ಞಾನ ಅಯೋಗವೆನಿಸುತ್ತದೆ ಎಂದರ್ಥ.

**॥ वैयर्थ्यापत्तेश्च इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**आश्रयासिद्धेः अदोषत्वेन, प्रपञ्चस्य असत्वेऽपि आश्रयत्व उपपत्तेः, तत् उपपत्त्यर्थं प्रपञ्चस्य व्यावहारिको सत्ता स्वीकारो व्यर्थ एव आपन्न इत्यर्थः।**

ಇನ್ನು, ಆಶ್ರಯಾಸಿದ್ಧಿಯ ಅದೋಷತ್ವದಿಂದ, ಪ್ರಪಂಚವು ಅಸತ್ಯವಾದರೂ ಅದಕ್ಕೆ ಆಶ್ರಯತ್ವ ಉಂಟಾಗುವದರಿಂದ, ಅದರ ಆಶ್ರಯತ್ವ ಉಂಟಾಗುವದಕ್ಕಾಗಿ ಪ್ರಪಂಚದ ವ್ಯಾವಹಾರಿಕ ಸತ್ತೆಯನ್ನು ಸ್ವೀಕರಿಸುವದು ವ್ಯರ್ಥವೆನಿಸುತ್ತದೆ ಎಂದರ್ಥ.

## ६. मायावदिनोक्त प्रपञ्चमिथ्यात्व अनुमाने हेतु निराकरणम्

### टीका

**प्रतिज्ञानिराकरणान्तरं हेतुनिरास अवसरः। तत्र आदौ लिङ्गदर्शनं ततो व्याप्तिस्मृतिः।**

ಈಗಿನವರೆಗೆ ಪ್ರತಿಜ್ಞಾ ನಿರಾಕರಿಸಲಾಯಿತು. ಅಂದರೆ, ಮಿಥ್ಯಾತ್ವ ಅನುಮಾನದ ಅಂಗಭೂತವಾದ, "ವಿಮತಮ್ ಮಿಥ್ಯಾ ಅಂದರೆ ವಿವಾದಾಸ್ಪದವಾದ ಪ್ರಪಂಚ ಮಿಥ್ಯಾ ಆಗಿದೆ" ಎಂಬ ಪ್ರತಿಜ್ಞೆಯು ಹೇಗೆ ದೋಷಪೂರ್ಣವಾಗಿದೆ ಎಂದು ತೋರಿಸಲಾಯಿತು. ಇನ್ನು ಮಿಥ್ಯಾತ್ವ ಅನುಮಾನದಲ್ಲಿ ಹೇತುವೆನಿಸಿದ "ದೃಶ್ಯತ್ವ" ವನ್ನು ನಿರಾಕರಿಸಲಾಗುವದು, ಅಂದರೆ ಅದು ಕೂಡ ಹೇಗೆ ದೋಷಗ್ರಸ್ತವಾಗಿದೆ ಎಂದು ತೋರಿಸಲಾಗುವದು. ಅದರಲ್ಲಿ, ಮೊದಲಿಗೆ ಹೇತುವಿನ ಜ್ಞಾನದ ದೋಷಗಳನ್ನು, ತದನಂತರ ಹೇತು ಮತ್ತು ಸಾಧ್ಯಗಳಲ್ಲಿರುವ ಸಾಹಚರ್ಯ ಸಂಬಂಧ, ಯಾವುದಕ್ಕೆ ವ್ಯಾಪ್ತಿ ಎನ್ನುತ್ತಾರೊ, ಅದರ ಮೇಲಿನ ದೋಷಗಳನ್ನು ತೋರಿಸಲಾಗುವದು

### *६.१ लिङ्गदर्शनाभास विचारः*

### टीका

**अथ अवसर विचारः, ततः अनुमितिः इति। तेनैव क्रमेण हेतुं आभासिकरिष्यन् असिद्धिं तावत् आह**



ಮೊದಲಿಗೆ ಹೇತುವಿನ ಜ್ಞಾನದ ಬಗ್ಗೆ ಅಂದರೆ ಜಿಜ್ಞಾಸೆಗೆ ಪ್ರತಿಬಂಧಕವಾದುದನ್ನು ಪರಿಹರಿಸುವದರ ಬಗ್ಗೆ ವಿಚಾರ. ತದನಂತರ ಪರಾಮರ್ಶದಿಂದುಂಟಾದ ಜ್ಞಾನ ಅಂದರೆ ವ್ಯಾಪ್ತಿ ಸ್ಮೃತಿ. ಅದೇ ಕ್ರಮವನ್ನು ಅನುಸರಿಸುತ್ತಾ, ಹೇತು ದೋಷಗಳನ್ನು ಪ್ರತಿಪಾದಿಸಲು ಉದ್ಯುಕ್ತರಾದ, ಶ್ರೀಮದಾಚಾರ್ಯರು, ಅಸಿದ್ಧಿ ದೋಷವನ್ನು ಈಗ ಹೇಳುತ್ತಾರೆಃ

### टिप्पणीनाम् विशेषार्थानि

**॥ अथ अवसर विचार इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆಃ

**प्रतिबन्धक जिज्ञास विच्छेदो हि अवसरः। तथा च व्याप्तिस्मृति अनन्तरम्। अनुमिति प्रतिबन्धकीभूत बाध, सत्प्रतिपक्ष अभावरूप अवसरः अपि अनुमित्सता विचार्यत इत्यर्थः।**

**यथा उक्तं मणिकृता, लिङ्गपरामर्श अनन्तरमपि बाध सत्प्रतिपक्ष अवतार शङ्कया मुहूर्तं विलम्ब्य अनुमान अवतार इति।**

ಇಲ್ಲಿ ಅವಸರ ಎಂದರೆ ಜಿಜ್ಞಾಸೆಗೆ ಪ್ರತಿಬಂಧಕವಾದುದನ್ನು ದೂರಸರಿಸುವದು ಎಂದರ್ಥ. ಅದರಂತೆ ಆದಾದನಂತರ ವ್ಯಾಪ್ತಿಸ್ಮೃತಿಯ ಬಗ್ಗೆ ವಿಚಾರ. ಅಂದರೆ, ಸತ್-ಪ್ರತಿಪಕ್ಷ ಅಭಾವರೂಪ ಅನುಮಿತಿಗೆ ಪ್ರತಿಬಂಧಕವಾದ ಬಾಧಕರೂಪ ಅವಸರನ್ನು ಕೂಡ ಊಹಿಸುವ ಅಪೆಕ್ಷೆ ಮೇರೆಗೆ ವಿಚಾರಿಸಲ್ಪಡುತ್ತದೆ ಎಂದರ್ಥ.

ಲಿಂಗಪರಾಮರ್ಶೆಯ ಅಂದರೆ ಜಿಜ್ಞಾಸೆಯ ಸ್ವಲ್ಪ ಸಮಯ ನಂತರ ಕೂಡ, ಪ್ರಬಲ ಬಾಧಕ ಸತ್-ಪ್ರತಿಪಕ್ಷದ (ವಿಪಕ್ಷದಲ್ಲಿಯ ಪ್ರಮಾಣ) ಶಂಕೆಯನ್ನು ಅನುಮಾನದ ಮೇಲೆ ಆಕ್ಷೆಪಿಸಬಹುದೆಂಬ ಮಣಿಕಾರರ ಹೇಳಿಕೆಯಾಗಿರುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**सति प्रतिप्रमाणे अनुमान अनुदयात्, तत् अभाव लक्षण अवसरः अपि अनुमित्सता विचार्यत इत्यर्थः।**

ಅಂದರೆ, ವಿಪಕ್ಷದಲ್ಲಿಯ ಪ್ರಬಲ ಪ್ರಮಾಣದಿಂದ ಅನುಮಾನದ ಜ್ಞಾನ ಉಂಟಾಗುವದಿಲ್ಲ. ಇಂತಹ ಲಕ್ಷಣವಿಲ್ಲದ, ಅನುಮಿತಿಗೆ ಪ್ರತಿಬಂಧಕವಾದ ಬಾಧಕರೂಪ ಅವಸರನ್ನು ಕೂಡ ಊಹಿಸುವ ಅಪೇಕ್ಷೆಮೆರೆಗೆ ವಿಚಾರಿಸಲ್ಪಡುತ್ತದೆ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆಃ

**अभासोद्धार प्रकार चिन्ता इत्यर्थः। जगति परमते सत्य दृश्यत्वस्य अभावात् असिद्धो हेतुः।**

ಇದೊಂದು ಆಭಾಸೊದ್ಧಾರ ಚಿಂತಾ ಎಂದರ್ಥ. ಪ್ರಪಂಚಕ್ಕೆ ಪರಮತದಂತೆ ಸತ್ಯ ದೃಷ್ಯತ್ವದ (ಅನುಭವದ) ಅಭಾವತೆ ಇರುವದರಿಂದ, ಹೇತುವು ಅಸಿದ್ಧ ಏನಿಸುತ್ತದೆ.

### ६.१.१ दृश्यत्वस्य सत्वाभावे असत्वप्रसङ्गेन असिद्धत्व उपपादनम्

## दृश्यत्व अभावात् असिद्धो हेतुः।

**ದೃಶ್ಯತ್ವವೆಂಬ ಧರ್ಮವೇ ಇಲ್ಲವೆಂದಾಗ, ಅನುಮಾನದ ಹೇತುವು ಅಸಿದ್ಧಿ ಎಂಬ ದೋಷದಿಂದ ಗ್ರಸ್ತವಾಗಿರುತ್ತದೆ**

### श्रीपद्मनाभतीर्थीयटीका

**जगन्मिथ्या इति प्रतिज्ञायां दृश्यत्वस्यापि जगदन्तर्भूतत्वेन मिथ्यात्व आपातात् दृश्यत्वं हेतुः असिद्धः स्यात।**

ಜಗತ್ತು ಮಿಥ್ಯಾ ಎಂದು ಪ್ರತಿಜ್ಞೆ ಇರುವಾಗ, ದೃಶ್ಯತ್ವವು ಕೂಡ ಜಗತ್ ಅಂತರ್ಭೂತವಾಗುವದರಿಂದ ಅದಕ್ಕೂ ಮಿಥ್ಯಾತ್ವ ಬರುವದರಿಂದ, ದೃಶ್ಯತ್ವ ಹೇತುವು ಅಸಿದ್ಧವೆನಿಸುತ್ತದೆ.

### टीका

**हेतुः इति तदर्थो लिङ्गं उच्यते। परेण हेतुतया अभिधीयमानत्वं एव अस्य हेतुत्वं न तु वास्तवं इति न व्याघातः।**

ಇಲ್ಲಿ ಹೇತು ಪದವನ್ನು ಲಕ್ಷಣಾಬೀಜಭೂತ ಮುಖ್ಯಾರ್ಥ ಸಂಬಂಧವನ್ನು ಪ್ರತಿಪಾದಿಸುವ ಅರ್ಥದಲ್ಲಿ ಹೇಳಲಾಗಿದೆ. ಇನ್ನು ಇಲ್ಲಿ ಪರಪಕ್ಷದವರು ಹೇತುವೆಂದು ಗ್ರಹಿಸಿ, ದೃಶ್ಯತ್ವದ ಅಭಿದಾನ ಮಾಡಿರುವದರಿಂದ, ಅದನ್ನು ಹೇತುವೆನ್ನಲಾಗಿದೆ ವಿನಹ ಅದರ ಸತ್ಯತೆಯಿಂದಲ್ಲ. ಆದ್ದರಿಂದ ಇಲ್ಲಿ ವ್ಯಾಘಾತ ದೋಷಕ್ಕೆ ಆಸ್ಪದವಿರುವದಿಲ್ಲ.

### टिप्पणीनाम् विशेषार्थानि

**॥ हेतुः इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु लिङ्गं प्रतिपादक वचनं हेतुः, तत् च सिद्धमेव इति कथं असिद्धो हेतुः इति उच्यते इत्यत आह– हेतु इति॥**

ವ್ಯಾಪ್ತಿ ಸಂಬಂಧ ಪೂರ್ವಕ ಸಾಧ್ಯ ಶಬ್ದಾರ್ಥ ಪ್ರತಿಪಾದಕ ವಚನವು ಹೇತುವೆನಿಸುವದು. ಅದು ಇಲ್ಲಿ ಸಿದ್ಧವಾಗಿರುತ್ತದೆ. ಹಾಗಿರುವಾಗ ಶ್ರೀಮದಾಚಾರ್ಯರು ಹೇತುವು ಅಸಿದ್ಧವೆಂದು ಹೇಗೆ ಹೇಳುತ್ತಾರೆ? ಈ ಶಂಕೆಯನ್ನು ನಿವಾರಿಸಲು ಈ ಟೀಕಾವಾಕ್ಯವಿರುತ್ತದೆ.



**लक्षणाबीजभूत मुख्यार्थ सम्बन्ध उपपादनाय तदर्थं इत्युक्तं। वचन प्रतिपाद्यं इत्यर्थः। तथा च प्रतिपाद्य प्रतिपादक भाव सम्बन्ध उपलक्षणाबीजं इत्युक्तं भवति।**

ಇಲ್ಲಿ, ಲಕ್ಷಣಾಬೀಜಭೂತ ಮುಖ್ಯಾರ್ಥ ಸಂಬಂಧವನ್ನು ತಿಳಿಸಲು "ತದರ್ಥಮ್" ಎಂಬ ಪದವನ್ನು ಇಡಲಾಗಿದೆ. ಹಾಗೆಯೆ ಪ್ರತಿಪಾದ್ಯ ಹಾಗೂ ಪ್ರತಿಪಾದಕ ಭಾವ ಸಂಬಂಧವನ್ನು ಉಪಲಕ್ಷಣದಿಂದ ಹೇಳಿದಂತಾಯಿತು.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**लिङ्ग् वचनं हेतुः। तत् च सिद्धमेव इति कथं असिद्धो हेतुः इति आचार्येण उक्तं इति। अत आह– हेतु इति तदर्थं इति॥**

ವ್ಯಾಪ್ತಿ ಸಂಬಂಧ ಪೂರ್ವಕ ಸಾಧ್ಯ ಶಬ್ದಾರ್ಥ ಪ್ರತಿಪಾದಕ ವಚನವು ಹೇತುವೆನಿಸುವದು. ಅದು ಇಲ್ಲಿ ಸಿದ್ಧವಾಗಿರುತ್ತದೆ. ಹಾಗಿರುವಾಗ ಶ್ರೀಮದಾಚಾರ್ಯರು ಹೇತುವು ಅಸಿದ್ಧವೆಂದು ಹೇಗೆ ಹೇಳುತ್ತಾರೆ? ಎಂಬ ಶಂಕೆಯನ್ನು ನಿರಾಕರಿಸಲು ಈ ಟೀಕಾವಾಕ್ಯವಿರುತ್ತದೆ.

**अस्य अर्थ सम्बन्धरूप लक्षणाबीजं उच्यत इति वचन वृत्तिं च कथयतः अयं अभिप्रायः।**

ಇಲ್ಲಿ, ವ್ಯಾಪ್ತಿ ಸಂಬಂಧರೂಪ ಸಾಧ್ಯಧರ್ಮದ ಲಕ್ಷಣವನ್ನು ಹೇಳುವ ವಚನವನ್ನು ಪ್ರತಿಪಾದಿಸುವದು ಎಂಬ ಅಭಿಪ್ರಾಯವಾಗಿರುತ್ತದೆ.

**"धूमो हेतुः" इत्यादि प्रयोग दर्शनात् लिङ्गं हेतु शब्दवाच्यं इति कृत्वा अत्र अपि वचनवृत्त्या लिङ्गं हेतु शब्देन उच्यते।**

ಮತ್ತು, "धूमो हेतुः" ಇತ್ಯಾದಿ ಪ್ರಯೋಗಗಳು ಕಂಡುಬರುವದರಿಂದ ಸಾಧ್ಯಧರ್ಮದ ಜ್ಞಾನವನ್ನು ಹೇತು ಶಬ್ದವಾಚ್ಯವೆಂದು ಮಾಡಿ, ಇಲ್ಲಿ ಕೂಡ ವಚನವೃತ್ತಿಯಿಂದ ಸಾಧ್ಯಧರ್ಮದ ಜ್ಞಾನವನ್ನು ಹೇತು ಶಬ್ದದಿಂದಲೇ ಪ್ರತಿಪಾದಿಸುತ್ತಾರೆ.

**यदि तु कश्चिद् ब्रूयात् "प्रतिज्ञा हेतु उदाहरणानि" इत्यादौ हेतु शब्दस्य लिङ्गवचने प्रयोगात् तदेव हेतु शब्दार्थः "धूमो हेतुः" इत्याद्यपि लक्षणया उपपन्नं इति, तदा प्रकृतेऽपि लक्षणया तद्वत् लिङ्गं प्रतिपाद्यतां इति।**

ಇನ್ನು"ಪ್ರತಿಜ್ಞಾ, ಹೇತು ಉದಾಹರಣಗಳು" ಇತ್ಯಾದಿಗಳಲ್ಲಿ, ಹೇತು ಶಬ್ದದ ಲಕ್ಷಣ ವಚನಗಳನ್ನು ಪ್ರಯೋಗಿಸಲಾಗುತ್ತದೆ ಅದೇ ಹೇತು ಶಬ್ದಾರ್ಥವಾಗಿದೆ, ಅದರಂತೆ "धूमो हेतुः" ಇತ್ಯಾದಿಗಳು ಕೂಡ ಲಕ್ಷಣಪರವಾಗಿಯೇ ಒಡಗೂಡಿರುತ್ತವೆ. ಎಂದು ಕೆಲವರು ಮತವಾಗಿರುತ್ತದೆ, ಎಂದು ಹೇಳುವದಾದರೆ, ಆಗ ಪ್ರಕೃತದಲ್ಲಿ ಕೂಡ ಲಕ್ಷಣಪರವಾಗುವಂತೆ ಸಾಧ್ಯಧರ್ಮದ ಜ್ಞಾನ ಪ್ರತಿಪಾದಿಸಲ್ಪಡುವಂತಾಗಲಿ ಎಂಬ ಭಾವವಿರುತ್ತದೆ

**॥ परेण इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु व्याप्तिबलेन अर्थगमकस्य लिङ्गस्य हेतुत्वेन तस्य अदुष्टतया असिद्धत्वोक्तिः व्याहत इत्यत आह– परेण इति॥**

ವ್ಯಾಪ್ತಿಬಲದಿಂದ ಅರ್ಥವನ್ನು ಹುಟ್ಟಿಸುವ ಸಾಧ್ಯ ಧರ್ಮದ ಜ್ಞಾತೃತ್ವಕ್ಕೆ ಹೇತುವೆಂದು ಹೇಳತಾ, ಅದು ಅದುಷ್ಟವಾಗಿರಲು, ಅದಕ್ಕೆ ಅಸಿದ್ಧತ್ವ ಹೇಳುವದು ವ್ಯಾಹತವೆನಿಸುತ್ತದೆ ಅಂದರೆ ವ್ಯರ್ಥವೆನಿಸುವದು ಎಂದರ್ಥ. ಇದನ್ನು ನಿರಾಕರಿಸಲು ಈ ಟೀಕಾವಾಕ್ಯ ಪ್ರವೃತ್ತವಾಗಿದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

यद्वा उच्यत इति प्रतिपादनमात्रं विवक्षितं न अभिधा वृत्तिः। अथवा तदर्थ इति न लक्षणाबीजं कथ्यते। किं तर्हि? वचनस्य सिद्धत्वेऽपि तदर्थो हेतुः असिद्ध इति असिद्धिः इति। असिद्धस्य हेत्वाभासत्वेन हेतुत्व अभावात् असिद्धः हेतुः इति कथं उक्तं? इत्यत आह– परेण इति॥

ಅಥವಾ ಇಲ್ಲಿ उच्यत इति ಎಂಬುದು ಪ್ರತಿಪಾದನಮಾತ್ರ ವಿವಕ್ಷಿಸುತ್ತದೆ ಅಭಿಮಾನ ವೃತ್ತಿಯಿಂದಲ್ಲ. ಅಥವಾ तदर्थ इति ಎಂಬಲ್ಲಿ ಲಕ್ಷಣಾಬೀಜ ಹೇಳುವದಿಲ್ಲ. ಹಾಗಾದರೆ ವಚನವು ಸಿದ್ಧವಾಗಿದ್ದರೂ ಅದರ ಅರ್ಥದಲ್ಲಿ ಹೇತು ಅಸಿದ್ಧವೆಂದು ಅಸಿದ್ಧಿ. ಇನ್ನು ಅಸಿದ್ಧವು ಹೇತು-ಆಭಾಸವೆನಿಸುವದರಿಂದ , ಹೇತುತ್ವ ಇಲ್ಲದಂತಾಗುವದರಿಂದ ಹೇತುವು ಅಸಿದ್ಧ, ಎಂದು ಹೇಗೆ ಹೇಳುತ್ತೀರಿ? ಈ ಶಂಕೆಯನ್ನೇ ನಿರಾಕರಿಸಲು ಈ ಟೀಕಾವಾಕ್ಯ ಪ್ರವೃತ್ತವಾಗಿದೆ ಎಂಬ ಭಾವ.

॥ अभिधीयमानत्वं एव इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆಃ

आभिमानिकमेव इति यावत् इत्यर्थः।

ಅಭಿಮಾನದಿಂದಲೇ ಎಂದರ್ಥ.

## टीका

**दृश्यत्वं हि परेण वियदादि प्रपंचस्य न तावत् सत्यं अङ्गीकर्तुं शक्यम्। तत्र दृश्यत्वस्य वृत्तौ अनैकान्तिकत्व प्रसङात्, अवृत्तौ अज्ञान असिद्धिः प्रसक्तेः। अतः तत् असत् एव इति वाच्यं। तथा च दृश्यत्व अभावाद् असिद्धो हेतुः।**

ವಿಯದಾದಿ (ಆಕಾಶ ಅಥವಾ ಅಂತರಿಕ್ಷ ದಿಂದ ಕೂಡೀದ) ಪ್ರಪಂಚಕ್ಕೆ ದೃಶ್ಯತ್ವವನ್ನು ಹೇಳುವ ಪರಪಕ್ಷದವರು, ದೃಶ್ಯತ್ವವನ್ನು ಸತ್ಯವೆಂದು ಅಂಗೀಕರಿಸಲು ಸಾಧ್ಯವಿಲ್ಲ. ಏಕೆಂದರೆ ಅಲ್ಲಿ, ದೃಶ್ಯತ್ವಕ್ಕೆ ದೃಶ್ಯತ್ವ ಇರುತ್ತದೆ ಎಂದರೆ, ಇಂತಹ ದೃಶ್ಯತ್ವದಿಂದ ಪ್ರಪಂಚವು ಮಿಥ್ಯಾ ಎಂದು ಹೇಗೆ ಸಾಧಿಸುವದು? ಆದ್ದರಿಂದ ಅನೈಕಾಂತಿಕ (ಸಾಧ್ಯ ಇದ್ದ ಕಡೆ, ಸಾಧ್ಯವಿಲ್ಲದರಲ್ಲಿಯೂ ಕಾಣುವದು) ಎಂಬ ದೋಷ ಉಂಟಾಗುತ್ತದೆ. ಇನ್ನು ದೃಶ್ಯತ್ವಕ್ಕೆ ದೃಶ್ಯತ್ವವಿಲ್ಲ ಎನ್ನುವದಾದರೆ, ದೃಶ್ಯತ್ವದ ಅಜ್ಞಾನ ಉಂಟಾಗಿ, ಅದು ಇಲ್ಲದಂತಾಗುವದರಿಂದ, ದೃಶ್ಯತ್ವಕ್ಕೆ ಅಸಿದ್ಧಿ ಉಂಟಾಗುವ ಪ್ರಸಕ್ತಿ ಬರುತ್ತದೆ. ಆದ್ದರಿಂದ



ದೃಶ್ಯತ್ವವನ್ನು ಅಸತ್ಯವೆಂದೆ ಹೇಳಬೇಕು. ಹೀಗಾಗಿ ದೃಶ್ಯತ್ವವವು ಇಲ್ಲದಂತಾಗಿ, ಹೇತುವು ಅಸಿದ್ಧ ಎಂಬ ದೋಷಗ್ರಸ್ತವಾಗುತ್ತದೆ.

## टिप्पणीनाम् विशेषार्थानि

॥ दृश्यत्वं हि इति ॥

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆಃ

सत्य दृश्यत्व अङ्गीकार पक्षेऽपि दृश्यत्वे दृश्यत्व अङ्गीकारे, अनैकान्तिकत्व प्रसङ्गेन दृश्यत्व अङ्गीकार अयोगात्। अज्ञान सिद्धौ हेतुः इति द्वेधा मूलयोजनां अभिप्रेत्य वादि असिद्धिं उपपादयितुं उपक्रमते– दृश्यत्वं हि इति॥

ದೃಶ್ಯತ್ವ ಸತ್ಯವಾಗಿದೆ ಎಂದು ಅಂಗೀಕರಿಸಿದ ಪಕ್ಷದಲ್ಲಿ ಕೂಡ, ದೃಶ್ಯತ್ವಕ್ಕೆ ದೃಶ್ಯತ್ವವನ್ನು ಅಂಗೀಕರಿಸಿದರೆ, ಅನೈಕಾಂತಿಕತ್ವ ಪ್ರಸಂಗ ಉಂಟಾಗುವದರಿಂದ ದೃಶ್ಯತ್ವವನ್ನು ಸತ್ಯ ಎಂದು ಅಂಗೀಕರಿಸವದು ಅಯೋಗ್ಯವೆನಿಸುತ್ತದೆ. ಇನ್ನು ಎರಡೆನೆ ಪಕ್ಷವಾದ ಅಜ್ಞಾನ ಸಿದ್ಧಿಯಾದ ಹೇತು ಎಂದಾದರೆ, ಶ್ರೀಮದಾಚಾರ್ಯರ ಮೂಲಯೋಜನೆಯ ಅಭಿಪ್ರಾಯದಂತೆ ವಾದಿಪರ ಅಸಿದ್ಧಿಯನ್ನು ಉಪಪಾದಿಸಲು ಈ ಟೀಕಾವಾಕ್ಯ ಪ್ರಾರಂಭಿಸುತ್ತಿದೆ.

॥ तत्र दृश्यत्वस्य इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

दृश्यत्वे दृश्यत्वं अस्ति न वा। आद्ये आह – तत्र इति॥

ದೃಶ್ಯತ್ವದಲ್ಲಿ ದೃಶ್ಯತ್ವ ಇರುತ್ತದೊ ಅಥವಾ ಇಲ್ಲವೊ ಎಂದು ವಿಕಲ್ಪಿಸಿದಲ್ಲಿ, ಮೊದಲನೆ ವಿಕಲ್ಪ ಸ್ವೀಕರಿಸಿದರೆ ಎನಾಗುತ್ತದೆ ಎಂಬುದನ್ನು ಈ ಟೀಕಾವಾಕ್ಯ ವಿವರಿಸುತ್ತದೆ.

दृश्यत्वरूप हेतौ इति॥

ಇಲ್ಲಿ ದೃಶ್ಯತ್ವದಲ್ಲಿ ಎಂದರೆ ದೃಶ್ಯತ್ವರೂಪ ಹೇತುವಿನಲ್ಲಿ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

हेतोः एव साध्यशून्यतया विपक्षत्वेन तत्र हेतु वृत्तौ अनैकान्तिकता इत्यर्थः।

ಹೇತುವಿನಿಂದಲೇ ಸಾಧ್ಯಶೂನ್ಯವೆಂದೆನಿಸಿದ ವಿಪಕ್ಷತ್ವವು. ಅಲ್ಲಿ ಹೇತು ಇದ್ದರೆ ಅದು ಅನೈಕಾಂತಿಕತಾ ಎಂಬ ದೋಷವನ್ನುಂಟು ಮಾಡುತ್ತದೆ ಎಂದರ್ಥ.

॥ अनैकान्तिकत्व इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

सत्यत्व अङ्गीकारेण मिथ्यारूप साध्य अभावात् इत्यर्थः।

ಇನ್ನು, ಹೇತುವಾದ ದೃಶ್ಯತ್ವವನ್ನು ಸತ್ಯತ್ವ ವೆಂದು ಅಂಗೀಕರಿಸಿದರೆ, ಮಿಥ್ಯಾರೂಪ ಸಾಧ್ಯ ಇಲ್ಲದಾಗುತ್ತದೆ ಎಂದರ್ಥ.

॥ अवृत्तौ इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

द्वितीयेऽपि आह– अवृत्तौ इति॥

ಇನ್ನು ಎರಡನೆ ವಿಕಲ್ಪವನ್ನು ತೆಗೆದುಕೊಂಡರೆ ಎನಾಗುತ್ತದೆ ಎಂಬುದನ್ನು ಈ ಟೀಕಾ ವಾಕ್ಯ ವಿವರಿಸುತ್ತದೆ.

दृश्यत्वे दृश्यत्व अवृत्तौ दृश्यत्व हेतोः ज्ञान अविषयत्व प्राप्त्या, अज्ञान, असिद्धि प्रसङ्गात् इत्यर्थः।

ಇನ್ನು ದೃಶ್ಯತ್ವದಲ್ಲಿ ದೃಶ್ಯತ್ವ ಇರುವದಿಲ್ಲವೆಂದರೆ, ದೃಶ್ಯತ್ವ ಹೇತುವಿಗೆ ಜ್ಞಾನದ ಅವಿಯಷತ್ವ ಪ್ರಾಪ್ತವಾಗಿ, ಅದರ ಅಜ್ಞಾನ ಉಂಟಾಗಿ ಅಸಿದ್ಧಿ ಎಂಬ ದೋಷಗ್ರಸ್ತವಾಗುತ್ತದೆ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

दृश्यत्वे दृश्यत्वस्य अवृत्तौ, दृश्यत्व हेतोःअज्ञान विषयतया अज्ञान असिद्धिः स्यात इत्यर्थः।

ಇನ್ನು ದೃಶ್ಯತ್ವದಲ್ಲಿ ದೃಶ್ಯತ್ವ ಇರುವದಿಲ್ಲವೆಂದರೆ, ದೃಶ್ಯತ್ವ ಹೇತುವಿಗೆ ಜ್ಞಾನದ ಅವಿಯಷತ್ವ ಪ್ರಾಪ್ತವಾಗಿ, ಅದರ ಅಜ್ಞಾನ ಉಂಟಾಗಿ ಅಸಿದ್ಧಿ ಎಂಬ ದೋಷಗ್ರಸ್ತವಾಗುತ್ತದೆ ಎಂದರ್ಥ.

### ६.१.२ दृश्यत्वस्य अनिर्वचनीयत्वे अन्यतरासिद्धिः

## टीका

माभूत् सत्यं दृश्यत्वम्। अनिर्वचनीयं तु विद्यत एव। अतो न असिद्धिः इत्यत आह–

ದೃಶ್ಯತ್ವವು ಸತ್ಯವಾಗದಿರಲಿ. ಅನಿರ್ವಚನೀಯ ಪಕ್ಷವಂತು ಇದ್ದೆ ಇದೆಯಲ್ಲ. ಆದ್ದರಿಂದ ಅಸಿದ್ಧಿ ಉಂಟಾಗುವದಿಲ್ಲ. ಅದಕ್ಕೆ ಶ್ರೀಮದಾಚಾರ್ಯರು ಹೇಳುತ್ತಾರೆ:

## टिप्पणीनाम् विशेषार्थानि

॥ माभूत् सत्यं इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

शङ्कते–माभूत् इति।

ದೃಶ್ಯತ್ವವು ಸತ್ಯವಾಗದಿರಲಿ ಎನಂತೆ? ಎಂದು ಶಂಕಿಸುತ್ತಾರೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

सत्यं दृश्यत्वं न मया हेतुत्वेन विवक्षितम्। किन्तु अनिर्वचनीयम्, तत् विद्यत एव इति न असिद्धिः इति शङ्कते–माभूत् सत्य इति॥



ಇಲ್ಲಿ ಸತ್ಯವಾದ ದೃಶ್ಯತ್ವವು ನಮಗೆ ಹೇತುತ್ವದಿಂದ ವಿವಕ್ಷಿತವಲ್ಲ ಎಂದರೆ ಅಪೇಕ್ಷಿತವಲ್ಲ. ಕಿಂತು ದೃಶ್ಯತ್ವವು ಅನಿರ್ವಚನೀಯ ಎಂದು ನಾವು ಹೇಳುತ್ತೇವೆ. ಅದು ಇದ್ದೆ ಇದೆ. ಆದ್ದರಿಂದ ಇಲ್ಲಿ ಅಸಿದ್ಧಿ ದೋಷಕ್ಕೆ ಆಸ್ಪದವಿಲ್ಲ ಇಂತೆಂದು ಶಂಕಿಸುತ್ತಾರೆ.

॥ विद्यत एव इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

पक्ष इति शेषः इति।

ಈ ಟೀಕಾವಾಕ್ಯದಲ್ಲಿ ಪಕ್ಷ ಪದವನ್ನು ಸೇರಿಸಿ ಅರ್ಥಮಾಡಬೇಕು.

प्रपञ्चमिथ्यात्वानुमानखण्डनम्
अनिर्वचनीय असिद्धेः एव।

**ಅನಿರ್ವಚನೀಯ ದೃಶ್ಯತ್ವವು ನಮ್ಮ ಮತದಂತೆ ಅಸಿದ್ಧವೇ ಆಗಿರುವದರಿಂದ ಹೇತುವು ಅಸಿದ್ಧಿ ಎಂಬ ದೋಷದಿಂದ ಗ್ರಸ್ತವಾಗಿರುತ್ತದೆ.**

## टीका

अनिर्वचनीय दृश्यत्वस्य प्रपञ्चे अस्माकं असिद्धेः असिद्धि एव्।

ಪ್ರಪಂಚದಲ್ಲಿ, ಅನಿರ್ವಚನೀಯ ದೃಶ್ಯತ್ವವು ನಮಗೆ ಅಸಿದ್ಧವೇ ಆಗಿರುವದರಿಂದ, ಅಸಿದ್ಧಿ ದೋಷವು ಹಾಗೆಯೆ ಉಳಿಯುತ್ತದೆ.

### ६.१.३ दृश्यत्वसामान्यस्य हेतुत्वे अन्यतरासिद्धि

## टिका

न ब्रूमो वयं सत्यं अनिर्वचनीयं वा दृश्यत्वं हेतुः इति। येन अन्यतर असिद्धिः स्यात्। किं नाम? दृश्यत्व सामान्यम्। तच्च अस्ति एव। वियदादौ वादि प्रतिवादि सम्मतं इति कथं असिद्धिः स्यात्।

ನಾವು ದೃಶ್ಯತ್ವ ಹೇತುವನ್ನು ಸತ್ಯ ಅಥವಾ ಅನಿರ್ವಚನೀಯ ಎಂದು ಹೇಳುವದಿಲ್ಲ. ಅದರಿಂದ ಅನ್ಯತರ ಅಸಿದ್ಧಿ ಎಂಬ ದೋಷ ಉಂಟಾಗುತ್ತದೆ. ಮತ್ತೇನು ನಿಮ್ಮ ಅಭಿಪ್ರಾಯ? ದೃಶ್ಯತ್ವ ಸಾಮಾನ್ಯ ಎಂದೆನ್ನುತ್ತೇವೆ. ಅದಾದರು ಇದ್ದೆ ಇದೆ. ಇಂತಹ ದೃಶ್ಯತ್ವವು

ಆಕಾಶಾದಿಗಳಲ್ಲಿ ವಾದಿ ಪ್ರತಿವಾದಿಗಳಿಬ್ಬರಿಗೂ ಸಮ್ಮತವಾಗಿರುತ್ತದೆ. ಹಾಗಗಿ ಇಲ್ಲಿ ಅಸಿದ್ಧಿ ದೋಷಕ್ಕೆ ಆಸ್ಪದವೆಲ್ಲಿದೆ?

### टिप्पणीनाम् विशेषार्थानि

॥ न ब्रूम इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

पुनः शङ्कते–न ब्रूम इति॥

ದೃಶ್ಯತ್ವ ಹೇತುವನ್ನು ಸತ್ಯ ಅಥವಾ ಅನಿರ್ವಚನೀಯ ಎಂದು ಹೇಳದೆ ದೃಶ್ಯತ್ವ ಸಾಮಾನ್ಯವೆಂದರೆ ಅಸಿದ್ಧಿ ದೋಷವನ್ನು ತೊರೆಯಬಹುದಲ್ಲ ಎಂದು ಪುನಃ ಶಂಕಿಸುತ್ತಾರೆ.

॥ अन्यतर असिद्धि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

सत्यंभूतं दृश्यत्वं मम असिद्धं अनिर्वचनीय दृश्यत्वं भवताम् असिद्धम् इति अन्यतर असिद्धिः इत्यर्थः।

ಇಲ್ಲಿ, ಸತ್ಯಭೂತವಾದ ದೃಶ್ಯತ್ವ ನಮಗೆ (ಪರಪಕ್ಷದವರು) ಅಸಿದ್ಧ, ಅನಿರ್ವಚನೀಯ ದೃಶ್ಯತ್ವ ತಮಗೆ (ಸಿದ್ಧಾಂತಿಗಳಿಗೆ) ಅಸಿದ್ಧ, ಹೀಗೆ ಅನ್ಯತರ ಅಸಿದ್ಧಿ ಎಂದರ್ಥ.

### टीका

**साधारण प्रयुक्त हेतोश्च विशेष विकल्पेन निरासे सर्व अनुमान भङ्गः। तथाच धूमात् धूमध्वज साधनेऽपि, अनेतद्देशकालसंलग्नो धूमो हेतुः? किं वा वैतद्देशकालसंलग्नः? इति विकल्प्य असिद्धिः आद्ये, द्वितीये साधनशून्यं निदर्शनं शक्यते वक्तुम्। तत्र च अविवक्षित विशेष धूममात्र हेतुः इति एव परिहारः। स तु सम इति प्रकृतेऽपि इति।**

ಇನ್ನು ಸಾಧಾರಣವಾಗಿ ಪ್ರಯೋಗಿಸಿದ ಹೇತುವನ್ನು ವಿಶೇಷ ವಿಕಲ್ಪಗಳಿಂದ ಹೊರದೂಡುವದಾದರೆ, ಎಲ್ಲ ಅನುಮಾನಗಳ ಭಂಗವಾಗುವ ಪ್ರಸಂಗ ವದಗುತ್ತದೆ.

ಉದಾಹರೆಣೆಗೆ, ಧೂಮದಿಂದ ಅಗ್ನಿಯನ್ನು ಸಾಧಿಸುವಲ್ಲಿ, ಅನೆತದ್ದೇಶಕಾಲಸಂಲಗ್ನ ಅಂದರೆ, ದೇಶಕಾಲಸಂಬಂಧವಿಲ್ಲದ ಧೂಮವನ್ನು ಹೇತುವೆನ್ನುತ್ತೀರೊ, ಅಥವಾ ಯಜ್ಞಯಾಗಾದಿಗಳದೇಶಕಾಲಸಂಲಗ್ನ ಧೂಮವನ್ನು ಹೇತುವಿನ್ನುತ್ತೀರೊ? ಎಂದು ವಿಶೇಷವಾಗಿ ವಿಕಲ್ಪಿಸಿದರೆ. ಮೊದಲನೆಯ ವಿಕಲ್ಪವನ್ನು ತೆಗೆದುಕೊಂಡರೆ, ದೇಶಕಾಲಸಂಬಂಧದಿಂದ ಕೂಡಿದ ಧೂಮವೇ ಪರ್ವತದಲ್ಲಿ ಸತ್ಯವಾಗಿದ್ದರಿಂದ,



ದೇಶಕಾಲದಿಂದಸಂಲಗ್ನವಲ್ಲದ ಧೂಮ ಅಲ್ಲಿ ಇರುವದಿಲ್ಲವಾದ್ದರಿಂದ, ಹೇತುವು ಅಸಿದ್ಧವಾಗುವದು. ಮತ್ತು ಎರಡನೆ ವಿಕಲ್ಪವನ್ನು ಪರಿಗಣಿಸಿದರೆ, ಪರ್ವತ ದೇಶಾದಿಗಳು ಯಜ್ಞಯಾಗಾದಿ ಮಾಡುವ ಸ್ಥಳದಲ್ಲಿ ಇರುವದಿಲ್ಲವಾದ್ದರಿಂದ, ಅಲ್ಲಿ ಹೇತವು ಸಾಧನಶೂನ್ಯವೆನಿಸಬೇಕಾಗುತ್ತದೆ. ಆದ್ದರಿಂದ ಅಲ್ಲಿ ಯಾವ ವಿಶೇಷ ವಿವಕ್ಷಿತವಲ್ಲದ ಧೂಮವೆ ಹೇತು ಎಂದು ಹೇಳುವದೆ ಪರಿಹಾರವಾಗಿರುತ್ತದೆ.

ಅದರಂತೆ ಈ ಪ್ರಕೃತದಲ್ಲಿ ಕೂಡ ದೃಶ್ಯತ್ವ ಸಾಮನ್ಯವೆ ಹೇತುವೆಂದು ಎನಿಸುತ್ತದೆ ಎಂಬ ಭಾವ.

### टिप्पणीनाम् विशेषार्थानि

॥ असिद्धि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

एतद्देशकालसंलग्न धूमस्यैव पर्वते सत्वेन अनेतद्देशकालसंलग्न धूमस्य पक्षे अभावात् असिद्धिः इत्यर्थः।

ದೇಶಕಾಲಸಂಲಗ್ನ ಧೂಮವೇ ಪರ್ವತದಲ್ಲಿ ಸತ್ಯವಾಗಿರುವದರಿಂದ ದೇಶಕಾಲಸಂಲಗ್ನವಿಲ್ಲದ ಧೂಮವು ಪಕ್ಷದಲ್ಲಿ ಇರುವದಿಲ್ಲ, ಆದ್ದರಿಂದ ಅಸಿದ್ಧಿ ದೋಷ ಎಂದರ್ಥ.

॥ साधन वैकल्यं इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

पर्वते देशादि सम्बन्धस्य महानसे अभावात् इत्यर्थः।

ಪರ್ವತ ದೇಶಾದಿಗಳ ಸಂಬಂಧವು ಮಹಾನಸದಲ್ಲಿ ಅಂದರೆ ಅಡುಗೆಮನೆಯಲ್ಲಿ ಅಥವಾ ಯಜ್ಞಾಶಾಲೆಯಲ್ಲಿ ಇರುವದಿಲ್ಲ ಎಂದರ್ಥ.

### टीका

**तत्र अपि एतदेव उत्तरम्। तथा हि–**

**स्यात् अयं धूम अनुमाने परिहारः, धूमद्वयेऽपि धूमत्व सामान्यस्य वादिप्रतिवादि सम्मतत्वात्। न च सत्य अनिर्वचनीय दृश्यत्वयोः दृश्यत्व सामान्यं वादिप्रतिवादि सम्मतम्। येन अत्र तथा परिहारः स्यात्। अनिर्वचनीयस्य स्वरूपत एव अस्माकं असिद्धेः। न च असिद्ध आश्रयं सामान्यं सिद्धं भवति।**

ಅಲ್ಲಿ ಕೂಡ ನಮ್ಮದು ಇದೇ ಉತ್ತರವಾಗಿರುತ್ತದೆ. ಅದನ್ನು ಹೀಗೆ ವಿವರಿಸಬಹುದು-

ಇರಲಿ, ತಾವು ಹೇಳಿದ ಧೂಮ ಅನುಮಾನದಲ್ಲಿಯ ಪರಿಹಾರ, ಅಲ್ಲಿ ಎರಡು ಧೂಮಗಳಿದ್ದರೂ ಕೂಡ ಧೂಮತ್ವದ ಸಾಮಾನ್ಯತೆಯು ವಾದಿಪ್ರತಿವಾದಿ ಇಬ್ಬರಿಗೂ ಸಮ್ಮತವಾಗಿರುತ್ತದೆ. ಅಂತಹ ಸಾಮನ್ಯತೆ ಪ್ರಕೃತದಲ್ಲಿ, ಸತ್ಯ ದೃಶ್ಯತ್ವ ಮತ್ತು ಅನಿರ್ವಚನೀಯ ದೃಶ್ಯತ್ವಗಳಲ್ಲಿ, ವಾದಿಪ್ರತಿವಾದಿಗಳಿಗೆ ಸಮ್ಮತವಿರುವದಿಲ್ಲ. ಆದ್ದರಿಂದ ಧೂಮ ಅನುಮಾನದ ಪರಿಹಾರ ಇಲ್ಲಿ ಪರಿಹಾರವಾಗುವದಿಲ್ಲ. ಅನಿರ್ವಚನೀಯ ದೃಶ್ಯತ್ವವು ಸ್ವರೂಪತಹವೇ ನಮಗೆ (ಸಿದ್ಧಾಂತಿಗಳಿಗೆ) ಅಸಿದ್ಧವಾಗಿರುತ್ತದೆ. ಹಾಗೂ ಅಸಿದ್ಧ ಆಶ್ರಯವು ಸಾಮಾನ್ಯ ವೆಂದೆನಿಸಲು ಸಾಧ್ಯವಿಲ್ಲ.

## टिप्पणीनाम् विशेषार्थानि

## ॥ तत्र अपि एतदेव उत्तरम् इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**अनिर्वचनीय दृश्यत्वरूप विशेषस्य अत्यन्त अभाव प्रतिपादयता, अनिर्वचनीय असिद्धेः एव इत्यनेन ग्रन्थेन अर्थात् अनुगत सामान्य अभावस्यापि प्रतिपादितत्वात् इत्यर्थः।**

ಇಲ್ಲಿ, ಅನಿರ್ವಚನೀಯ ದೃಶ್ಯತ್ವರೂಪ ವಿಶೇಷವನ್ನು ಅತ್ಯಂತ ಅಭಾವವೆಂದು ಪ್ರತಿಪಾದಿಸುತ್ತಾ, "अनिर्वचनीय असिद्धेः एव" ಎಂಬ ವಾಕ್ಯದಿಂದಲೇ ಅರ್ಥಾತ್ ಅದನ್ನೆ ಅನುಸರಿಸುವ ಸಮಾನ್ಯ ಅಭವತೆಯನ್ನು ಕೂಡ ಪ್ರತಿಪಾದಿಸಲಾಗಿದೆ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**दृश्यत्व सामान्यमेव हेतुः, अतो न असिद्धिः इति शङ्कायां अपि एतदेव, अनिर्वचनीय असिद्धेः एव इति मूलमेव उत्तर इत्यर्थः।**

ಮಿಥ್ಯಾತ್ವ ಅನುಮಾನದಲ್ಲಿ ದೃಶ್ಯತ್ವ ಸಾಮಾನ್ಯವೆ ಹೇತು ಎಂದು ತೆಗೆದುಕೊಂಡರೆ, ಅಸಿದ್ಧಿ ಉಂಟಾಗುವದಿಲ್ಲ ಎಂಬ ಶಂಕೆಯಲ್ಲಿ ಕೂಡ "अनिर्वचनीय असिद्धेः एव" ಎಂಬ ಶ್ರೀಮದಾಚಾರ್ಯರ ಮೂಲವಾಕ್ಯವೇ ಉತ್ತರ ಎಂದರ್ಥ.

## ॥ धूमद्वयेऽपि इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**अनेतद्देशकालसंलग्न् वैतदेशकालसंलग्न धूमद्वयेऽपि इत्यर्थः।**

ಇಲ್ಲಿ ಧೂಮದ್ವಯ ಎಂದರೆ, ಹಿಂದೆ ನಮೂದಿಸಿದ ಅನಿತದ್ದೇಶಕಾಲಸಂಲಗ್ನ ಧೂಮ ಮತ್ತು ವೈತದೇಶಕಾಸಂಲಗ್ನ ಧೂಮದ್ವಯಗಳು ಎಂದರ್ಥ.

## ॥ अनिर्वचनीयस्य इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**अनिर्वचनीयस्य दृश्यत्वस्य इति।**



ಇಲ್ಲಿ ಅನಿರ್ವಚನೀಯಸ್ಯ ಪದದ ನಂತರ್ ದೃಶ್ಯತ್ವಸ್ಯ ಎಂಬ ಪದವನ್ನು ಸೇರಿಸಿ ಅರ್ಥಮಾಡಬೇಕು. ಅಂದರೆ ಇಲ್ಲಿ ಅನಿರ್ವಚನೀಯ ದೃಶ್ಯತ್ವವು ಎಂದರ್ಥ ಸಿಗುತ್ತದೆ.

## ॥ न च असिद्ध आश्रयं सामान्यं सिद्धं भवति इति॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**यदि असिद्ध आश्रयं सामान्यं सिद्ध्येत तदा वन्ध्यासुतेऽपि सुतत्वं, बाष्पारोपित धूमेऽपि धूमत्वं च स्यात्। न च तत् युक्तं। मातृजन्यस्य विशेषस्य अग्निव्याप्यत्व विशेषस्य च तत्र अयोगात्।**

ಒಂದು ವೇಳೆ ಅಸಿದ್ಧ ಆಶ್ರಯವಾದದ್ದು ಸಾಮಾನ್ಯ ಧರ್ಮ ಎಂದು ಸಿದ್ಧವಾದರೆ, ಆಗ ಬಂಜೆಯ ಮಗ ಕೂಡ ಮಗ ಹಾಗೂ ಬಾಷ್ಪಾರೋಪಿತ ಧೂಮ ಕೂಡ ಧೂಮ ಎನಿಸಬೇಕಾಗುತ್ತದೆ. ಆದರೆ ಹಾಗೆ ಹೇಳುವದು ಯುಕ್ತ ವಾಗುವದಿಲ್ಲ. ಏಕೆಂದರೆ ಅಲ್ಲಿ ಮಾತೃಜನ್ಯತ್ವ ವಿಶೇಷದ ಮತ್ತು ಅಗ್ನಿವ್ಯಾಪ್ಯತ್ವ ವಿಶೇಷತೆಯು ಅಯೋಗ್ಯವೆನಿಸುತ್ತವೆ. ಉದಾಹರಣೆಗೆ, ಧೂಮತ್ವ ಅನುಮಾನದಲ್ಲಿ ಇದನ್ನು ಹೀಗೆ ವಿವರಿಸಬಹುದು:

**अथ वन्हिव्यापता विशेषः सत्य धूमत्वम्। धूमत्वमात्रं तु धूमतया प्रतीयमानत्वं तथा व्यवह्रियमाणत्वं वा। तत् च तत्र अपि अस्ति इति चेत्। धूमतया इत्यत्र धूमशब्देन किं वन्हिव्याप्यता उच्यते? किं वा धूमतया प्रतीयमानत्वादिः? आद्ये स एव धूमता स्यात्। द्वितीये, धूमता शब्देन किं वन्हिव्याप्यता इत्यादि पूर्वोक्त विकल्पा पर्यवसानात् अनवस्था स्यात्।**

ಇನ್ನು ವಹ್ನಿವ್ಯಾಪತ್ವದಿಂದ ಕೂಡಿದ ವಿಶೇಷವು ಸತ್ಯ ಧೂಮವಾಗಿರುತ್ತದೆ ಎಂದು ಪ್ರತಿಪಾದಿಸಲಾಯಿತು. ಇಲ್ಲಿ ಧೂಮತ್ವಮಾತ್ರದಲ್ಲಿ ಎರಡು ವಿಕಲ್ಪಗಳು ಇರವ ಸಾಧ್ಯತೆ ಇರುತ್ತದೆ: ಧೂಮದಂತೆ ಪ್ರತಿಮಾನವಾದದ್ದು ಮತ್ತು ವ್ಯವಹರಿಸುವ ಧೂಮವೆಂದು. ಧೂಮವು ಅಲ್ಲಿ ಕೂಡ ಇದೆ ಎಂದರೆ. ಇನ್ನು ಧೂಮದಂತೆ ಎಂಬಲ್ಲಿ, ಧೂಮಶಬ್ದದಿಂದ ವಹ್ನಿವ್ಯಾಪ್ಯತಾ ಎಂದು ಹೇಳುತ್ತೀರೊ? ಅಥವಾ ಧೂಮದಂತೆ ಪ್ರತೀಯಮಾನವಾದದ್ದು ಎಂತಲೋ? ಮೊದಲನೆಯದು ಹೇಳುವದಾದರೆ, ಅದೇ ಧೂಮವಾಗಿರುತ್ತದೆ. ಇನ್ನು ಆಮೇಲಿನ ವಿಕಲ್ಪವನ್ನು ತೆಗೆದುಕೊಂಡರೆ, ಮತ್ತೆ ಧೂಮತಾ ಶಬ್ದದಿಂದ ವಹ್ನಿವ್ಯಾಪ್ಯತಾ ಮುಂತಾಗಿ ಹಿಂದೆ ಹೇಳಿದವಿಕಲ್ಪಗಳಲ್ಲಿ ಪರ್ಯವಸಾನವಾಗಿ ಅನವಸ್ಥಾ ದೋಷ ಉಂಟಾಗುತ್ತದೆ. ಅನವಸ್ಥಾ ಎಂದರೆ, ಉಪಪಾದ್ಯ ಹಾಗೂ ಉಪಪಾದಕಗಳಿಗೆ ಅಥವಾ ಕಾರ್ಯಕಾರಣಗಳಿಗೆ ಕೊನೆಯಿಲ್ಲದಿರುವುದು. ಒಂದರ ಉತ್ಪತ್ತಿ ಜ್ಞಪ್ತಿಗೆ ಮತ್ತೊಂದು, ಅದಕ್ಕೆ ಮಗದೊಂದು,, ಹೀಗೆ ಅನಂತ ಪದಾರ್ಥಗಳ ಪರಂಪರೆ ಒಪ್ಪುವದು ಅನವಸ್ಥಾ ಎಂದರ್ಥ.

**किंच प्रकृतेऽपि तर्हि दृश्यत्वमात्रं तथा व्यवह्रियमाणत्वे वाच्यं। न च वक्तुं शक्यम्। आत्मनोऽपि दृश्यतया मया व्यवह्रियमाणत्वात् इति तात्पर्यम्।**

ಮತ್ತು ಪ್ರಕೃತದಲ್ಲಿ ಕೂಡ, ಹಾಗಾದರೆ, ದೃಶ್ಯತ್ವಮಾತ್ರ ಎಂದರೆ ವ್ಯವಹರಿಸುವಂತಹದು ಎಂದು ಹೇಳಬೇಕು. ಆದರೆ ಹಾಗೆ ಹೇಳಲು ಶಕ್ಯವಿಲ್ಲ. ಏಕೆಂದರೆ ವಿಪಕ್ಷವಾದ ಆತ್ಮನನ್ನು

ಕೂಡ ನಾವು (ಪರಪಕ್ಷದವರು) ವ್ಯವಹರಿಸುವಂತಹದ್ದು ಎಂದು ಒಪ್ಪಿರುತ್ತೇವೆ, ಎಂಬ ತಾತ್ಪರ್ಯವಿರುತ್ತದೆ.

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**असिद्ध आश्रयो यस्य तत् असिद्ध आश्रयं इति बहुव्रीहिः।**

ಇಲ್ಲಿ, ಯವುದರ ಅಸಿದ್ಧ ಆಶ್ರಯವು ಅದು ಅಸಿದ್ಧ ಆಶ್ರಯ ಎಂದು ಬಹುವ್ರೀಹಿ ಸಮಾಸದಂತೆ ಆಗುತ್ತದೆ ಎಂದರ್ಥ

**६.१.४ दृग्जन्यफलाश्रयत्वस्य दृश्यत्वे असिद्ध्यादिदोषाः**

## टीका

**अथवा दृग्जन्यफलाश्रयत्वं दृश्यत्वं परेण वक्तव्यम्। वृत्तिव्याप्यत्वस्य साधारणस्य च दृश्यत्वस्य आत्मनि विपक्षे अपि अङ्गीकृतत्वेन अनैकान्तिकत्व आपातात्।**

ಅಥವಾ, ದೃಗಜನ್ಯಫಲಾಶ್ರಯತ್ವಂ ಎಂದರೆ, ಅಂತಃಕರಣ ಮನೊವೃತ್ತಿರೂಪ ಅಂತರ್ದೃಷ್ಟಿಯ ಫಲರೂಪವಾದದ್ದು, ದೃಶ್ಯತ್ವವೆಂದು ಪರಪಕ್ಷದವರು ಹೇಳಬೇಕು. ಇನ್ನು ವೃತ್ತಿವ್ಯಾಪ್ಯತ್ವ ಸಾಧಾರಣರೂಪ ದೃಶ್ಯತ್ವವು, ವಿಪಕ್ಷವೆನಿಸಿದ ಆತ್ಮನಲ್ಲಿ ಕೂಡ ಅಂಗೀಕರಿಸಿದ್ದರಿಂದ ಅನೈಕಾಂತಿಕತ್ವ ದೋಷ ಬರುತ್ತದೆ.

### टिप्पणीनाम् विशेषार्थानि

**॥ अथवा इति ॥**

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**दृश्यत्व अभावात् असिद्धो हेतुः इति मूलं प्राकान्तरेण योजयति– अथवा इति॥**

"दृश्यत्व अभावात् असिद्धो हेतुः" ಎಂಬ ಶ್ರೀಮದಾಚಾರ್ಯರ ಮೂಲವಾಕ್ಯವನ್ನು ಈ ಟೀಕಾ ವಾಕ್ಯವು ಎರಡನೆ ಪ್ರಕಾರದಿಂದ ಯೋಜಿಸುತ್ತದೆ.

**॥ दृग्जन्यफलाश्रयत्वं इति॥**

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**अन्तःकरण वृत्तिरूप दृग्जन्यज्ञातता शब्दवाच्यं अभिव्यक्त स्फुरण सम्बन्धरूपं यत् फलं तदाश्रयत्वं इत्यर्थः।**

ಇನ್ನು, ದೃಗಜನ್ಯಫಲಾಶ್ರಯತ್ವಂ ಎಂದರೆ, ಅಂತಃಕರಣ ಮನೊವ್ಯಾಪಾರರೂಪ ಅಂತರ್ದೃಷ್ಟಿಜ್ಞಾನಪರ ಶಬ್ದವಾಚ್ಯ ಅಭಿವ್ಯಕ್ತ ಸ್ಫುರಣ ಸಂಬಂಧರೂಪ ನಿಷ್ಪತ್ತಿಯ



ಆಶ್ರಯವಾದದ್ದು ಎಂದರ್ಥ. ಅಂದರೆ ಸ್ವಲ್ಪದರಲ್ಲಿ ಹೇಳುವದಾದರೆ ಸ್ಫುರಣಮಾತ್ರದಿಂದ ಗೋಚರವಾದದ್ದು ಎಂದರ್ಥ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**अन्तःकरण वृत्तिरूप दृग्जन्यफलाश्रयत्वं इत्यर्थः।**

ಇನ್ನು, ದೃಗಜನ್ಯಫಲಾಶ್ರಯತ್ವಂ ಎಂದರೆ, ಅಂತಃಕರಣ ಮನೊವೃತ್ತಿರೂಪ ಅಂತರ್ದೃಷ್ಟಿಯ ಫಲರೂಪವಾದದ್ದು ಎಂದರ್ಥ.

**॥ वृत्तिव्याप्यत्वस्य इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**कुत इत्यत आह– वृत्तिव्याप्यत्वस्य इति॥**

ಇನ್ನು ಅಂತಃಕರಣ ಮನೊವೃತ್ತಿರೂಪ ಅಂತರ್ದೃಷ್ಟಿಯ ಫಲರೂಪವಾದದ್ದು ದೃಶ್ಯತ್ವವೆಂದು ಪರಪಕ್ಷದವರು ಏಕೆ ಹೇಳಬೇಕು, ಎಂಬುದನ್ನು ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ.

**वृत्त्या विशेषेण आप्यत्वं प्राप्यत्वं विषयत्वं इति यावत। तथा च वृत्तिविषयत्वस्य इत्यर्थः।**

ವೃತ್ತಿಯಿಂದ ವಿಶೇಷವಾಗಿ ಪ್ರಾಪ್ತವಾದದ್ದು ವಿಷಯತ್ವವವೆನಿಸುತ್ತದೆ. ಅದರಂತೆ ವೃತ್ತಿವಿಷಯತ್ವದ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**अन्तःकरण वृत्तिविषयत्वस्य इत्यर्थः।**

ಅಂದರೆ, ಅಂತಃಕರಣ ವೃತ್ತಿವಿಷಯತ್ವದ ಎಂದರ್ಥ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**दृश्यत्वस्य वृत्तिव्याप्यत्वमात्ररूपतायाः दृग्विषयत्वमात्ररूपताया अपि सम्भवात् किम् इति, तत् परित्यागेन अत्र दृग्जन्यफलाश्रयत्वपर्यन्तधावनम् इत्यतः तन्मात्रस्य हेतुत्व अनुपपत्तेः इति ताम् उपपादयति– वृत्ति इति॥**

ದೃಶ್ಯತ್ವದ ವೃತ್ತಿವ್ಯಾಪ್ಯತ್ವಮಾತ್ರರೂಪಾದಿಗಳು ದೃಷ್ಟಿವಿಷಯತ್ವಮಾತ್ರರೂಪಪರ ಕೂಡ ಆಗಬಹುದು ತಾನೆ ? ಆದ್ದರಿಂದ ಅದನ್ನು ಬಿಟ್ಟು ಇಲ್ಲಿ ಅಂತಃಕರಣ ಮನೊವೃತ್ತಿರೂಪ ಅಂತರ್ದೃಷ್ಟಿಯ ಫಲರೂಪವಾದದ್ದು ಎಂಬುದನ್ನು ತೆಗೆದುಕೊಳ್ಳಲಾಗಿದೆ. ಹಾಗೂ ಇದನ್ನು ಮಾತ್ರ ಹೆತುತ್ವವೆಂದು ತೆಗೆದುಕೊಳ್ಳುವದು ಸರಿಯಾಗುವದಿಲ್ಲ ಎಂಬುದನ್ನು ಈ ಟೀಕಾವಾಕ್ಯ ವಿವರಿಸುತ್ತದೆ.

**प्रमाणजनित अन्तःकरण परिणामरूप वृत्तिविषयत्वस्य इत्यर्थः।**

ಅಂದರೆ ಪ್ರಮಾಣಜನಿತ ಅಂತಃಕರಣ ಪರಿಣಾಮರೂಪ ವೃತ್ತಿವಿಷಯವಾದದ್ದು ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**वृत्तिव्याप्यत्वरूप विशेषधर्म अवच्छिन्नस्य दृश्यत्वरूप साधारण धर्म अवच्छिन्नस्य च आत्मनि व्यभिचारेण हेतुं कर्तुं अशक्यत्वात् इत्यर्थः।**

ಅಂತಃಕರಣ ವೃತ್ತಿವಿಷಯತ್ವರೂಪ ವಿಶೇಷಧರ್ಮದಿಂದ ಬೇರ್ಪಡಿಸಲ್ಪಟ್ಟ ದೃಶ್ಯತ್ವರೂಪ ಸಾಧಾರಣ ಧರ್ಮ ಭಾಗದ, ಆತ್ಮನಲ್ಲಿ ವ್ಯಭಿಚರಿಸುವದರಿಂದ ಹೇತು ಎಂದು ಹೇಳುವದು ಅಶಕ್ಯವಾದ ಸಂಗತಿ ಎಂದರ್ಥ.

**एतेन आत्मनि वृत्तिव्याप्यत्वस्य साधारणस्य सत्व अभिधानं अयुक्तं, वृत्तिव्याप्यत्व अतिरिक्तस्य साधारणस्य अदर्शनात्, इति निरस्तम्।**

ಇದರಿಂದ, ಆತ್ಮನಲ್ಲಿ ವೃತ್ತಿವ್ಯಾಪ್ಯತ್ವ ಸಾಧಾರಣದ ಸತ್ಯವೆಂದು ಹೇಳುವದು ಅಯುಕ್ತ ಏಕೆಂದರೆ ವೃತ್ತಿವ್ಯಾಪ್ಯತ್ವಕ್ಕಿಂತ ಅತಿರಿಕ್ತವಾದ ಸಾಧರಣತೆಯು ಇರುವದೆ ಇಲ್ಲ, ಎಂಬ ಹೇಳಿಕೆಯನ್ನು ತಳ್ಳಿಹಾಕಿದಂತಾಯಿತು.

## ॥ साधारणस्य इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**दृग्जन्यफलाश्रयत्वं वृत्तिव्याप्यत्व साधारणस्य दृश्यत्वमात्रस्य इत्यर्थः।**

ಅಂದರೆ, ಇಲ್ಲಿ ದೃಗ್ಜನ್ಯಫಲಾಶ್ರಯತ್ವದಿಂದ ಕೂಡಿದ ವೃತ್ತಿವ್ಯಾಪ್ಯತ್ವ ಸಾಧಾರಣರೂಪದ ದೃಶ್ಯತ್ವಮಾತ್ರದ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**फलव्याप्यवृत्ति व्याप्यानुगतस्य व्यवहारविषयता लक्षण सामान्यस्य इत्यर्थः।**

ಅಂದರೆ, ದೃಗ್ಜನ್ಯಫಲವ್ಯಾಪ್ಯವೃತ್ತಿ ವ್ಯಾಪ್ಯತ್ವವನ್ನು ಅನುಸರಿಸಿದ ವ್ಯವಹಾರ ವಿಷಯತೆಯ ಲಕ್ಷಣದಿಂದ ಕೂಡಿದ ಸಾಮಾನ್ಯದ ಎಂದರ್ಥ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**अविवक्षित विशेषस्य दृग् विषयत्वस्य इत्यर्थः।**

ಅಂದರೆ, ಅವಿವಕ್ಷಿತ್ ವಿಶೇಷದ ದೃಗ್ ವಿಷಯತ್ವದಿಂದ ಕೂಡಿದ ಎಂದರ್ಥ.

## ॥ अङ्गीकृतत्वेन इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**अन्यथा वेदान्तानां वैयर्थ्य आपत्तिः इति भावः।**

ಹಾಗೆ ಅಂಗೀಕರಿಸದಿದ್ದರೆ ವೇದಾಂತಗಳಿಗೆ ವೈಯರ್ಥ್ಯ ಉಂಟಾಗುವ ಪ್ರಸಂಗ ವದಗುವದು ಎಂಬ ಭಾವವಿರುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:



**प्रमाण जनित अन्तःकरण वृत्तिव्याप्यत्वेन विषयता अङ्गीकार इति परेण वृत्तिव्याप्यतारूप विशेषस्य अङ्गीकृतत्वात् विशेषस्य सामान्यं विना अयोगात् अर्थान्तरस्य अपि अङ्गीकृतत्वात् इत्यर्थः।**

ಅಂದರೆ, ಪ್ರಮಾಣದಿಂದುಂಟಾದ ಅಂತಃಕರಣ ವೃತ್ತಿವ್ಯಾಪ್ಯತ್ವ ವಿಷಯಾದಿಗಳನ್ನು ಅಂಗೀಕರಿಸಬೇಕು ಎಂದು ಪರಪಕ್ಷದವರು ವೃತ್ತಿವಾಪ್ಯತಾರೂಪ ವಿಶೇಷತೆಯನ್ನು ಅಂಗೀಕರಿಸಿರುವದರಿಂದ, ಆ ವಿಶೇಷವು ಸಾಮನ್ಯವೆನಿಸದೆ ಅಯೋಗ್ಯವಾಗುದೆಂದು ಅರ್ಥಾಂತರವನ್ನು ಕೂಡ ಅಂಗೀಕರಿಸಲಾಗಿದೆ ಎಂದರ್ಥ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**अनुभूतेः प्रमाणजन्य स्फुरणाश्रयतया स्फुरणकर्मतया वा घटादिवत् विषयभाव अभावेऽपि प्रमाणजनित अन्तःकरण वृत्तिव्याप्यत्वे विषयत्व अङ्गीकारेण स्वप्रकाशत्व अविरोधात् इति चित्सुखोक्तेः इति भावः।**

ಅಂದರೆ, ಪ್ರಮಾಣಜನ್ಯ ಅನುಭೂತವಾದ ಸ್ಫುರಣಾಶ್ರಯಮೂಲಕ ಅಥವಾ ಸ್ಫುರಣಕರ್ಮದಮೂಲಕ, ಘಟಾದಿಗಳಂತೆ ವಿಷಯಭಾವದ ಅಭಾವತೆ ಇದ್ದರೂ ಪ್ರಮಾಣಜನಿತ ಅಂತಃಕರಣ ವೃತ್ತಿವ್ಯಾಪ್ಯತ್ವ ವಿಷಯಾದಿಗಳನ್ನು ಅಂಗೀಕರಿಸಿದ್ದರಿಂದ, ಸ್ವಪ್ರಕಾಶತ್ವದ ವಿರೋಧವಿಲ್ಲದಿರುವದರಿಂದ, ಚಿತ್ ಸುಖಾದಿಗಳನ್ನು ಹೇಳಲಾಗಿದೆ ಎಂದರ್ಥ. ಅಂದರೆ ದೃಗ್ ಜನ್ಯಫಲಾಶ್ರಯತ್ವಾದಿಗಳನ್ನು ಆತ್ಮನಲ್ಲಿ ಕೂಡ ಅಂಗೀಕರಿಸಲಾಗಿದೆ ಎಂಬ ಭಾವವಿರುತ್ತದೆ.

**यद्यपि अनेन वृत्तिविषयस्य अङ्गीकारस्येव सिद्धिः न तु दृगविषयत्व अङ्गीकारस्यापि। तथापि वृत्तिविषयत्व अङ्गीकार सिद्धौ ब्रह्मणि अविवक्षित विशेषस्य दृग्विषयत्वस्यापि वृत्तिविषयत्वरूपविशेषं आदाय पर्यवसन्नतया तत् अङ्गीकारस्यापि सिद्धिः इति द्रष्टव्यम्।**

ಆದರೂ, ಮೇಲಿನ ವಿವರಣೆಯಿಂದ ವೃತ್ತಿವಿಷಯದ ಅಂಗೀಕಾರದ ಸಿದ್ಧಿಯಾಯಿತು ವಿನಹಾ ದೃಗ್ ವಿಷಯತ್ವದ ಅಂಗೀಕಾರವಲ್ಲ. ಹಾಗಿದ್ದರೂ ವೃತ್ತಿವಿಷಯತ್ವದ ಅಂಗೀಕಾರ ಸಿದ್ಧವಾದಾಗ, ಬ್ರಹ್ಮನಲ್ಲಿ ಅವಿವಕ್ಷಿತ ವಿಶೇಷದ ದೃಗ್ ವಿಷ್ಯತ್ವಕೂಡ ವೃತ್ತಿವಿಷಯತ್ವರೂಪ ವಿಶೇಷವಾಗುವದರಿಂದ ಪೂರ್ವಾಪಾರ ಆಲೋಚನೆಯಿಂದ ಅದರ ಅಂಗೀಕಾರತೆ ಕೂಡ ಸಿದ್ಧವಾಗುವದು ಎಂದು ತಿಳಿಯಬೇಕು.

## टीका

**ज्ञाततालक्षणफलस्य अन्यत्र निराकृतत्वेन अस्मन्मते दृश्यत्व अभावात् असिद्धो हेतुः स्यात्। ज्ञातता अङ्गीकारेऽपि अतीतादौ अतीन्द्रियेषु च दृश्यत्व अभावात् भाग असिद्धिः।**

**असिद्धो हेतुः इति योग विभागः कर्तव्यः, तेन आश्रयासिद्धि सङ्ग्रहोऽपि भवति। उपपत्तिस्तु पूर्वोक्तैव अनुसन्धेय इति।**

ಮೇಲೆ ಹೇಳಿದ ಜ್ಞಾತತಾಲಕ್ಷಣಫಲವನ್ನು ನಾವು ನಮ್ಮ ಬೇರೆಗ್ರಂಥಗಳಲ್ಲಿ ನಿರಾಕರಿಸಿದ್ದರಿಂದ ನಮ್ಮ ಮತದಂತೆ ದೃಶ್ಯತ್ವ ಇಲ್ಲದಂತಾಗುವದರಿಂದ ಹೇತುವು ಅಸಿದ್ಧವೆನಿಸುತ್ತದೆ. ಇನ್ನು, ಜ್ಞಾತತಾಲಕ್ಷಣಫಲವನ್ನು ಅಂಗೀಕರಿಸಿದರೂ ಕೂಡ ಮುಂದೆ ಒದಗಬಹುದಾದ, ಹಾಗೂ ಇಂದ್ರಿಯಗಳಿಂದ ತಿಳಿಯಲಾಗದ ವಿಷಯಗಳಲ್ಲಿ ದೃಶ್ಯತ್ವ ಇರುವದಿಲ್ಲಾದ್ದರಿಂದ, ಭಾಗ ಅಸಿದ್ಧಿ ಎಂಬ ದೋಷ ಉಂಟಾಗುತ್ತದೆ.

ಇಲ್ಲಿ, ಶ್ರೀಮದಾಚಾರ್ಯರ ಮೂಲವಾಕ್ಯವನ್ನು "ದೃಶ್ಯತ್ವ ಅಭಾವತ್" ಮತ್ತು " ಅಸಿದ್ಧೋ ಹೇತುಃ " ಎಂದು ಎರಡು ವಾಕ್ಯಗಳನ್ನಾಗಿ ವಿಭಜಿಸಿ, " ಅಸಿದ್ಧೋ ಹೇತುಃ " ಎಂಬ ಪ್ರತ್ಯೇಕವಾಕ್ಯವನ್ನು, ಶ್ರೀಮದಾಚಾರ್ಯರ ಮೋದಲಿನ ವಾಕ್ಯವಾದ " ಇತ್ಯುಕ್ತೆ ಜಗತೋಽಭಾವಾತ್ ಆಶ್ರಯಾಸಿದ್ಧಃ ಪಕ್ಷಃ" ಹಿನ್ನೆಲೆಯಲ್ಲಿ ಅರ್ಥಿಸಿದರೆ, ಹೇತುವಿಗೆ ಆಶ್ರಯವೇ ಇಲ್ಲದಂತಾಗಿ ಆಶ್ರಯಾಸಿದ್ಧಿ ದೋಷ ಕೂಡ ಬರುತ್ತದೆ ಎಂಬ ಭಾವ.

## टिप्पणीनाम् विशेषार्थानि

### ॥ ज्ञाततालक्षणफलस्य इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**दृग्जन्यफलाश्रयत्वं दृश्यत्वं परेण वक्तव्यं इति उपपाद्य तत्र दूषणं आह– ज्ञातत्ता इति॥**

ಹಿಂದೆ ದೃಗ್ ಜನ್ಯ ಫಲಾಶ್ರಯತ್ವರೂಪ ದೃಶ್ಯತ್ವ ಎಂದು ಪರಪಕ್ಷದವರು ಹೇಳಬೇಕು ಎಂದು ಸಮರ್ಥಿಸಿ, ಅಲ್ಲಿ ಈ ಟೀಕಾ ವಾಕ್ಯದಿಂದ ದೂಷಣವನ್ನು ಮಾಡುತ್ತಾರೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**अस्तु तर्हि वृत्तिजन्यफलाश्रयत्वं इत्यतः, अत्र फलं किम् मदरीत्या व्यवहारः अभिमतः, भट्टरीत्या ज्ञातता, त्वद्रीत्या वृत्तिप्रतिफलित चैतन्यं वा तद् अभिव्यक्तं विषयाधिष्ठान चैतन्यं वा इति विकल्पात्।**

ವೃತ್ತಿಜನ್ಯಫಲಾಶ್ರಯತ್ವ ದೃಶ್ಯತ್ವಕ್ಕೆ ಇರಲಿ ಎಂದರೆ, ಇಲ್ಲಿ ಫಲ ಎಂದರೆ ಏನು? ನಮ್ಮಂತೆ ವ್ಯವಹಾರವೆಂದು ಅಭಿಮತವೊ, ಭಾಟ್ಟರಂತೆ ಜ್ಞಾತತಾ ಲಕ್ಷಣವೆಂದೊ, ನಿಮ್ಮರೀತಿಯಂತೆ ವೃತ್ತಿಫಲಿತ ಚೈತನ್ಯ ಎಂದೊ ಅಥವಾ ವೃತ್ತಿಫಲಿತದಿಂದ ಅಭಿವ್ಯಕ್ತ ವಿಷಯಾಧಿಷ್ಠಾನ ಚೈತನ್ಯ ಎಂತಲೊ ಎಂಬ ವಿಕಲ್ಪಮಾಡಬೇಕಾಗುವದು.

**न आद्यः। आदानादेः गगनादौ अभावेन भाग असिद्धि आपातात्। अभिलापस्य आत्मनि अपि सद्भावात् अनैकान्त्य आपातात् इति, आद्य पक्ष दूषणं च मनसि निधाय द्वितीयपक्षं दूषयति– ज्ञातता इति॥**

ಮೇಲಿನ ವಿಕಲ್ಪಗಳಲ್ಲಿ ಮೊದಲನೆ ವಿಕಲ್ಪವನ್ನು ಪರಪಕ್ಷದವರು ಅಂಗೀಕರಿಸಲು ಸಾಧ್ಯವಿಲ್ಲ. ಇಲ್ಲಿ ಸ್ವೀಕರಿಸಿದವಿಷಯಾದಿಗಳು ಗಗನಾದಿಗಳಲ್ಲಿ ಇರವದಿಲ್ಲ, ಅದರಿಂದ ಭಾಗ ಅಸಿದ್ಧಿ



ದೋಷ ಬಂದೊದಗುವದು. ಹಾಗೂ ಇಂತಹ ಒಪ್ಪಿಗೆಯು, ಆತ್ಮನಲ್ಲಿ ಕೂಡ ಇರಬೇಕಾಗುವದರಿಂದ ಅನೈಕಾಂತ್ಯ ಎಂಬ ದೋಷ ಬಂದೊದಗುವದು, ಎಂದು, ಮೊದಲಿನ ವಿಕಲ್ಪದ ದೂಷಣವನ್ನು ಮನಸ್ಸಿನಲ್ಲಿರಿಸಿ ಎರಡನೆ ವಿಕಲ್ಪವನ್ನು ದೂಷಿಸಲು ಈ ಟೀಕಾವಾಕ್ಯ ಪ್ರವೃತ್ತವಾಗಿದೆ.

**तृतीय चतुर्थयोः अपि निराकरणार्थं एतदेव वाक्यं–ज्ञाततालक्षणस्य इति॥**

**तत्र ज्ञाततापदं चैतन्यपरम्। ततश्च चैतन्यरूप फलस्य अन्यत्र निराकृतत्वेन अस्मिन् मते वृत्तिफलित चैतन्य प्रति तद् अभिव्यक्त विषय अधिष्ठान चैतन्य प्रति वा विषयत्वस्य प्रपञ्चे अभावात् असिद्धिः स्यात् इत्यर्थः।**

ಇಲ್ಲಿ, ಇದೇ ಟೀಕಾವಾಕ್ಯ ಮೇಲಿನ ಮೂರನೆ ಹಾಗೂ ನಾಲ್ಕನೆ ವಿಕಲ್ಪಗಳನ್ನು ನಿರಾಕರಿಸುತ್ತದೆ. ಅಲ್ಲಿ ಜ್ಞಾತತಾ ಪದವು ಚೈತನ್ಯಪರವಾಗಿರುತ್ತದೆ. ಮತ್ತು ಚೈತನ್ಯರೂಪ ಫಲವನ್ನು ನಮ್ಮ ಬೇರೆ ಗ್ರಂಥಗಳಲ್ಲಿ ನಿರಾಕರಿಸಿಲ್ಪಟ್ಟದ್ದರಿಂದ, ನಮ್ಮ ಮತದಲ್ಲಿ ವೃತ್ತಿಫಲಿತ್ ಚೈತನ್ಯ ಪ್ರತಿ, ಮತ್ತು ಅದರ ಅಭಿವ್ಯಕ್ತ ವಿಷಯ ಅಧಿಷ್ಠಾನ ಚೈತನ್ಯ ಪ್ರತಿ ವಿಷಯತ್ವವು ಪ್ರಪಂಚದಲ್ಲಿ ಇರುವದಿಲ್ಲ. ಆದ್ದರಿಂದ ಹೇತುವು ಅಸಿದ್ಧ ದೋಷಗ್ರಸ್ತವಾಗುತ್ತದೆ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**वृत्तिव्याप्यत्वमेव वृत्तिव्याप्यत्वरूप विशेषधर्म अवच्छिन्नं, दृश्यत्वरूप सामन्यधर्म अवच्छिन्नं भवति। तच्च विपक्षगामि इति द्वयोः अपि हेत्वोः व्यभिचार् इत्याशयात् दृग्जन्यफलं ज्ञातता एव इति पक्षं बाधकं आह– ज्ञाततालक्षणफलस्य इति॥**

ವೃತ್ತಿವ್ಯಾಪ್ಯತ್ವವೇ, ವೃತ್ತಿವ್ಯಾಪ್ಯತ್ವರೂಪ ವಿಶೇಷಧರ್ಮದಿಂದ ಬೇರ್ಪಡಿಸಲ್ಪಟ್ಟ ದೃಶ್ಯತ್ವರೂಪ ಸಾಮಾನ್ಯಧರ್ಮದ ಭಾಗವೆನಿಸುತ್ತದೆ ಎಂಬ ಭಾವವಿರುತ್ತದೆ. ಮತ್ತು ಅದು ವಿಪಕ್ಷದಲ್ಲಿಯೂ ಇರುವದು. ಹೀಗೆ ಪಕ್ಷ ಮತ್ತು ವಿಪಕ್ಷ ಎರಡು ಕಡೆ ಕೂಡ ಇರುವದರಿಂದ ಹೇತುವಿಗೆ ವ್ಯಭಿಚಾರ ದೋಷ ಉಂಟಾಗುವದೆಂದು ಆಶಯದ ಹಿನ್ನೆಲೆಯಲ್ಲಿ, ಕೇವಲ ದೃಗ್ ಜನ್ಯಫಲಜ್ಞಾತತಾ ಪಕ್ಷ ಬಾಧಕವನ್ನು ಈ ಟೀಕಾವಾಕ್ಯದಿಂದ ತೋರಿಸುತ್ತಾರೆ.

### ॥ अन्यत्र इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ज्ञानव्यतिरिक्त ज्ञाततायां प्रमाण अभावात् इत्यादिना प्रमाण लक्षणादौ इत्यर्थः।**

ಜ್ಞಾನವ್ಯತಿರಿಕ್ತ ಜ್ಞಾತತಾಗಳಲ್ಲಿ ಪ್ರಮಾಣದ ಅಭಾವತೆ ಇರುವದರಿಂದ, ಎಂದು ಮುಂತಾಗಿ ಪ್ರಮಾಣ ಲಕ್ಷಣಾದಿ ಗ್ರಂಥಗಳಲ್ಲಿ ಎಂದರ್ಥ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**न च प्रमाणतः अन्या स्यात् प्रमतिः नाम कुत्रचित् इत्यादिना अनुव्याख्यानात् वा इत्यर्थः।**

ಪ್ರಮತಿ ವ್ಯತಿರಿಕ್ತ ಜ್ಞಾತತಾದಿಗಳ ಇರುವಿಕೆಯನ್ನು ಪ್ರಮಾಣದಿಂದ ಪ್ರತಿಪಾದಿಸಲು ಸಾಧ್ಯವಿಲ್ಲ ಎಂದು ಮುಂತಾಗಿ ಅನುವ್ಯಾಖಾನದಲ್ಲಿ ಪ್ರತಿಪಾದಿಸಲಾಗಿದೆ ಎಂದರ್ಥ

## ॥ दृश्यत्व अभावात् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**दृग्जन्यज्ञाततालक्षण फलाश्रयत्व अभावात् इत्यर्थः।**

ಇಲ್ಲಿ ದೃಶ್ಯತ್ವ ಅಭಾವಾತ್ ಎಂದರೆ ದೃಗ್ ಜನ್ಯ ಜ್ಞಾತತಾ ಲಕ್ಷಣ ಫಲಾಶ್ರಯತ್ವದ ಅಭಾವಾತ್ ಎಂದರ್ಥ. ಅಂದರೆ ಜ್ಞಾತತಾ ಲಕ್ಷಣಾಶ್ರಯದ ಅಭಾವತೆ ಎಂದರ್ಥ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**दृग्जन्यज्ञाततारूप फलाश्रयत्व अभावात्।**

ಇಲ್ಲಿ ದೃಶ್ಯತ್ವ ಅಭಾವಾತ್ ಎಂದರೆ ದೃಗ್ ಜನ್ಯಜ್ಞಾತತಾರೂಪ ಫಲಾಶ್ರಯತ್ವದ ಅಭಾವತೆ ಎಂದರ್ಥ.

## ॥ ज्ञातता अङ्गीकारेऽपि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**एवं अनिर्वचनीय दृश्यत्व पक्षे दृग्जन्यज्ञाततारूप फलाश्रयत्वरूप दृश्यत्व पक्षे च अस्मत् मतानुसारेण सम्पूर्ण असिद्धि परत्वेन् मूलं व्याख्याय, अधुना ज्ञातता अङ्गीकुर्वन्तं वादिनां प्रति भागासिद्धो हेतुः इत्येव परत्वं व्याख्याति– ज्ञातता अङ्गीकारेऽपि इति॥**

ಈಗಿನವರೆಗೆ ಅನಿರ್ವಚನೀಯ ದೃಶ್ಯತ್ವ ಪಕ್ಷದಲ್ಲಿ ಮತ್ತು ದೃಗ್ ಜನ್ಯಜ್ಞಾತತಾ ರೂಪ ಫಲಾಶ್ರಯತ್ವರೂಪ ದೃಶ್ಯತ್ವ ಪಕ್ಷದಲ್ಲಿ ನಮ್ಮ ಮತಾನುಸಾರವಾಗಿ ಸಂಪೂರ್ಣ ಅಸಿದ್ಧಿಪರವಾಗಿ ಶ್ರೀಮದಾಚಾರ್ಯರ ಮೂಲ ವಾಕ್ಯವನ್ನು ವ್ಯಾಖ್ಯಾನಿಸಿ, ಈಗ ಜ್ಞಾತತಾ ಅಂಗೀಕರಿಸಿದ ವಾದಿಗಳ ಪ್ರತಿ ಭಾಗ-ಅಸಿದ್ಧಿ ಹೇತುವಾಗುತ್ತದೆಂದು ಈ ಟೀಕಾವಾಕ್ಯದಿಂದ ವ್ಯಾಖ್ಯಾನಿಸುತ್ತಾರೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**ज्ञातता अङ्गीकुर्वतोऽपि वादिनो भागासिद्धो हेतुः इत्येतत् अर्थपरतया दृश्यत्व अभावात् इत्येतत् व्याचष्टे–ज्ञातता अङ्गीकारेऽपि इति॥**

ಜ್ಞಾತತಾ ಅಂಗೀಕಾರಮಾಡುವ ವಾದಿಗಳಿಗೆ ಕೂಡ ಭಾಗ ಅಸಿದ್ಧಿ ಹೇತುವೆನಿಸುವದು ಎಂಬ ಅರ್ಥಪರವಾಗಿ ಶ್ರೀಮದಾಚಾರ್ಯರ "ದೃಶ್ಯತ್ವ ಅಭಾವಾತ್.." ಎಂಬ ವಾಕ್ಯವನ್ನು ಈ ಟೀಕಾವಾಕ್ಯ ವ್ಯಾಖ್ಯಾನಿಸುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**भागासिध्दिपरतया मूलं योजयति–ज्ञातता अङ्गीकारेऽपि इति॥**



ಭಾಗ-ಅಸಿದ್ಧಿ ಪರವಾಗಿ ಶ್ರೀಮದಾಚಾರ್ಯರ ಮೂಲವಾಕ್ಯವನ್ನು ವ್ಯಾಖ್ಯಾನಿಸಲು ಈ ಟೀಕಾವಾಕ್ಯ ಯೋಜಿಸುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**अस्तु तर्हि त्वद्रीत्या एव अयं हेतुः, इत्यतः तथा सति अतीतादौ तत् अभावात् भाग–असिद्धिः स्यात् इत्याह– ज्ञातता अङ्गीकारेऽपि अतीतादौ इति॥**

ಹಾಗಾದರೆ ಆಗಲಿ ತಾವು ಹೇಳಿದ ರೀತಿಯಲ್ಲಿಯೆ ಹೇತು ಇರಲಿ, ಹಾಗೆನಾದರೆ ತೆಗೆದುಕೊಂಡರೆ ಅತೀತಾದಿ ಅಂದರೆ ಈಗಾಗಲೆ ಅತಿಕ್ರಮಿಸಿದ ಆಗಿಹೋದ ವಿಷಯಗಳಲ್ಲಿ, ಹೇತುವಿನ ಅಭಾವತೆ ಇರುವದರಿಂದ, ಹೇತುವು ಭಾಗ-ಅಸಿದ್ಧಿ ದೋಷದಿಂದ ಗ್ರಸ್ತವಾಗುತ್ತದೆ. ಇದನ್ನೇ ಈ ಟೀಕಾವಾಕ್ಯ ಸ್ಪಷಟಪಡಿಸುತ್ತದೆ.

## ॥ अतीतादौ इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**अतीतादौ इत्यादि पदेन अनागत ग्रहणम्। असति धर्मिणि धर्मजनन अयोगात् इति भावः।**

ಅತೀತಾದೌ ಇತ್ಯಾದಿ ಪದದಿಂದ ಅನಾಗತ ಅಂದರೆ ಇನ್ನುವರೆಗೆ ಆಗದ ಅಥವಾ ಬರದ, ಅಥವಾ ಮುಂದೆ ಬರುಬಹುದಾದಗಳನ್ನು ಗ್ರಹಿಸಲಾಗಿದೆ. ಇಲ್ಲಿ ಅಸತ್ಯವಾದ ಧರ್ಮಿಣಿಯಲ್ಲಿ ಧರ್ಮವನ್ನು ಹೇಳುವದು ಅಯೋಗ್ಯವಾಗಿರುತ್ತದೆ ಎಂಬ ಭಾವವಿರುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**असति धर्मिणि धर्मजनन अयोगात् अतीत अनागतयोः दृग्जन्य ज्ञातताश्रयत्व अभावात् भाग–असिद्धिः इत्यर्थः।**

ಅಸತ್ಯವಾದ ಧರ್ಮಿಣಿಯಲ್ಲಿ ಧರ್ಮದ ಜನನ ಅಯೋಗ್ಯವಾಗಿರುವದರಿಂದ, ಅತಿಕ್ರಮಿಸಿದ ಆಗಹೋದ, ಇನ್ನೂ ಉಂಟಾಗದ ಮುಂದೆ ಉಂಟಾಗಬಹುದಾದ ವಿಷಯಗಳಲ್ಲಿ ದೃಗ್ ಜನ್ಯ ಜ್ಞಾತತಾಶ್ರಯತ್ವದ ಅಭಾವತೆ ಇರುವದರಿಂದ, ಇಲ್ಲಿ ಭಾಗ-ಅಸಿದ್ಧಿ ದೋಷದಿಂದ ಹೇತುವು ಗ್ರಸ್ತವಾಗಿದೆ ಎಂದರ್ಥ.

## ॥ अतीन्द्रियेषु च इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ऐन्द्रियकेषु एव पदार्थेषु ज्ञानेन तज्जनन अङ्गीकारात् इति भावः।**

ಇಂದ್ರಿಯಜನ್ಯ ಪದಾರ್ಥಗಳ ಜ್ಞಾನದಿಂದಲೇ ದೃಗ್ ಜನ್ಯ ಜ್ಞಾತತಾ ಫಲಾಶ್ರಯತ್ವ ಉಂಟಾಗುವದೆಂದು ಅಂಗೀಕರಿಸಿದ್ದರಿಂದ ಎಂಬ ಭಾವವಿರುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

ननु अतीतादेः अपि स्वसत्तकाले दृग्जन्यज्ञातताश्रयत्वात् न भाग–असिद्धिः इत्यत आह– अतीन्द्रियेषु च इति॥

ಅತೀತಾದಿ ಅಂದರೆ ಅತಿಕ್ರಮಿಸಿದ ಆಗಿಹೋದ ವಿಷಯಗಳಲ್ಲಿ ಆದರೂ ಸ್ವಸತ್ತಾಕಾಲದಲ್ಲಿ ದೃಗ್ ಜನ್ಯ ಜ್ಞಾತತಾ ಫಲಾಶ್ರಯತ್ವ ಇರುವದರಿಂದ ಇಲ್ಲಿ ಭಾಗ-ಅಸಿದ್ಧಿ ದೋಷ ಉಂಟಾಗುವದಿಲ್ಲ ಎನ್ನುವದಕ್ಕೆ ಉತ್ತಾರವಾಗಿ ಈ ಟೀಕಾವಾಕ್ಯದಲ್ಲಿ "ಅತೀಂದ್ರಿಯೆಷು ಚ" ಎಂಬ ಪದಗಳನ್ನು ಇಡಲಾಗಿದೆ.

तदपि स्वसत्ताकाले फलव्याप्यं इति न असिद्धिः इत्यतः तथापि नित्य अतीन्द्रिये तत् अभावात् असिद्धिः एव इत्याह– अतीन्द्रियेषु इति॥

ಅತೀತಾದಿಗಳಲ್ಲಿ ಕೂಡ ಸ್ವತಃದ ಸತ್ತಾಕಾಲದಲ್ಲಿ ಫಲವ್ಯಾಪ್ಯತ್ವ ಇದ್ದೆ ಇರುವದರಿಂದ ಹೇತುವಿಗೆ ಅಸಿದ್ಧ ದೋಷ ಬರುವದಿಲ್ಲ, ಹಾಗಿದ್ದರೂ ನಿತ್ಯವಾಗಿ ಅತೀಂದ್ರಿಯ ವಿಷಯಗಳಲ್ಲಿ ಫಲವ್ಯಾಪ್ಯತ್ವ ಇಲ್ಲದಾಗಿರುವದರಿಂದ ಹೇತುವಿಗೆ ಅಸಿದ್ಧಿ ದೋಷವಿದೆ ಎಂದು ತೋರಿಸಲು ಈ ಟೀಕಾವಾಕ್ಯದಲ್ಲಿ " ಅತೀಂದ್ರಿಯೆಷು ಚ" ಎಂಬ ಪದಗಳನ್ನು ಇಡಲಾಗಿದೆ.

न च तस्यापि योगिनं प्रति फलव्याप्यत्वात् न असिद्धिः इति वाच्यम्। चित्सुखेन "न च योगिप्रत्यक्षगम्यतया परोक्षत्वं धर्मादीनां चोदनैकप्रमाणगम्यत्वात् " इतुक्तत्वेन तद्विरोध आपातात् इत्याशयात्।

ಹೀಗಿದ್ದರೂ ಯೋಗಿಗಳ ಪ್ರತಿ, ಫಲವ್ಯಾಪ್ಯತ್ವ ಇರುವದರಿಂದ ಹೇತುವಿಗೆ ಅಸಿದ್ಧಿ ದೋಷ ಬರುವದಿಲ್ಲ ಎಂದು ಹೇಳಲಿಕ್ಕಾಗದು. ಏಕೆಂದರೆ, ಚಿತ್ಸುಖದಿಂದ ಯೋಗಿಗೆ ಪ್ರತ್ಯಕ್ಷವಾಗಿ ಗಮ್ಯವಾಗುವ ಪರೋಕ್ಷವಾದ ಧರ್ಮಾದಿಗಳು ಪ್ರೇರಣೇಕ ಪ್ರಮಾಣಗಮ್ಯವಾಗಿವೆ ಎಂದು ಹೇಳಲಾಗುವದಿಲ್ಲ ಎಂದು ಶಾಸ್ತ್ರದಲ್ಲಿ ಹೇಳಿದ್ದರಿಂದ ಫಲವ್ಯಾಪ್ಯತ್ವದ ವಿರೋಧ ಬರುವದು, ಎಂದು ಇಲ್ಲಿ ಆಶಯವಿರುತ್ತದೆ.

## ॥ योगविभाग इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

योगो वाक्यं। दृश्यत्व अभावात् इत्येकं वाक्यं। असिद्धो हेतुः इति अपरं वाक्यं इत्यर्थः।

ಇಲ್ಲಿ ಯೋಗ ಎಂದರೆ ವಾಕ್ಯ ಎಂದರ್ಥ. ಅಂದರೆ ಇಲ್ಲಿ ಶ್ರೀಮದಾಚಾರ್ಯರ ಮೂಲವಾಕ್ಯವನ್ನು ಎರಡು ವಾಕ್ಯಗಳನ್ನಾಗಿ ವಿಭಜಿಸಬೇಕು ಎಂದರ್ಥ. ಆಗ "ದೃಶ್ಯತ್ವ ಅಭಾವಾತ್" ಎಂದು ಒಂದೊ ವಾಕ್ಯವಾದರೆ, "ಅಸಿದ್ಧೊ ಹೇತುಃ" ಎಂದು ಮತ್ತೊಂದು ವಾಕ್ಯವಾಗುತ್ತದೆ ಎಂದರ್ಥ.

## ॥ तेन इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

विभक्तेन असिद्धो हेतुः इति वाक्येन इति।



ಇಲ್ಲಿ ತೆನ ಎಂದರೆ, ಮೇಲೆ ವಿಭಕ್ತ ವಾಕ್ಯಗಳಲ್ಲಿಯ "ಅಸಿದ್ಧೊ ಹೇತು" ಎಂಬ ವಾಕ್ಯದಿಂದ ಎಂದರ್ಥ.

## ॥ तेन आश्रयासिद्धि सङ्ग्रहोऽपि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

एकवाक्यता पक्षे प्राग् असिद्ध संग्रहार्थतया व्याख्यातत्वात् अपि शब्दः।
पूर्वं साध्यधर्मं प्रति आश्रय अभावेन आश्रयासिद्धिः प्रतिज्ञा दूषणत्वेन उक्ता। इदानीं असिद्धाश्रयकत्वं असद् आश्रयकत्वं इति यावत्, हेतु दूषणत्वेन उच्यत इत्यर्थः।

ಇಲ್ಲಿ, ಶ್ರೀಮದಾಚಾರ್ಯರ ಮೂಲವಾಕ್ಯವನ್ನು ವ್ಯಾಖ್ಯಾನಿಸುವಾಗ, "ಆಶ್ರಯಾಸಿದ್ಧಃ ಪಕ್ಷಃ" ಎಂಬ ಶ್ರೀಮದಾಚಾರ್ಯರ ಮುಂಚಿನವಾಕ್ಯದಲ್ಲಿಯ "ಅಸಿದ್ಧ" ಪದವನ್ನು ಸಂಗ್ರಹಾರ್ಥವಾಗಿ ವ್ಯಾಖ್ಯಾನಿಸಿರುವದರಿಂದ, ಅಪಿ ಪದವನ್ನು ಬಳಿಸಲಾಗಿದೆ.

ಪೂರ್ವದಲ್ಲಿ ಸಾಧ್ಯಧರ್ಮ ಪ್ರತಿ ಆಶ್ರಯ ಅಭಾವತೆ ಉಂಟಾಗುವದರಿಂದ ಆಶ್ರಯಾಸಿದ್ಧಿ ಎಂದು ಪ್ರತಿಜ್ಞಾ ದೂಷಣತ್ವದಿಂದ ಹೇಳಲಾಯಿತು. ಈಗ, ಅಸಿದ್ಧಾಶ್ರಯಕತ್ವ ಎಂದರೆ ಅಸದ್ ಆಶ್ರಯಕತ್ವ ಎಂದು ಹೇತು ದೂಷಣತ್ವದಿಂದ ಹೇಳಲಾಗಿದೆ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

आश्रयासिद्धः पक्षः इत्यत्र बाधरूप प्रतिज्ञादोषः उक्तः। अत्र तु आश्रयशून्यतालक्षणं हेतु दूषणं उच्यत इति न पौनरुक्त्यम्।

"ಆಶ್ರಯಾಸಿದ್ಧಃ ಪಕ್ಷಃ" ಎಂಬಲ್ಲಿ ಬಾಧರೂಪ ಪ್ರತಿಜ್ಞಾ ದೋಷವನ್ನು ಹೇಳಲಾಯಿತು. ಇಲ್ಲಿ ಆಶ್ರಯಶೂನ್ಯತಾಲಕ್ಷಣ ಹೇತು ದೂಷಣ ಎಂದು ಹೇಳಲಾಗಿದೆ. ಆದ್ದರಿಂದ ಪೌನರುಕ್ತಿ ದೋಷ (ಅಂದರೆ ಒಂದು ವಾಕ್ಯದಲ್ಲಿ ಹೇಳಿದ ಅರ್ಥವನ್ನು, ಬೇರೆವಾಕ್ಯದಿಂದ ಅದನ್ನೆ ಮತ್ತೆ ಹೇಳುವದು) ಉಂಟಾಗುವದಿಲ್ಲ

## ॥ उपपत्तिस्तु इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

कथं असद् आश्रयकत्वं हेतोः इत्यत आह–उपपत्तिस्तु इति॥
जगतोऽभावात् इत्युक्तेः इत्यर्थः।

ಅಸದ್ ಆಶ್ರಯತ್ವವು ಹೇತುವಿಗೆ ಹೇಗೆ ಉಂಟಾಯಿತು? ಎಂಬ ಶಂಕೆಯನ್ನು ನಿವಾರಿಸಲು ಈ ಟೀಕಾವಾಕ್ಯವಿರುತ್ತದೆ. ಅಂದರೆ, ಹಿಂದೆ " ಜಗತೊಽಭಾವಾತ್" ಎಂದು ಶ್ರೀಮದಾಚಾರ್ಯರ ವಾಕ್ಯವಿರುತ್ತದೆ, ಅದರಂತೆ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

जगतोऽभावात् इति पूर्वोक्तैव उपपत्तिः अनुसन्धेय इत्यर्थः। जगतः सत्वविरह अङ्गीकारात् आश्रयता प्रयोजक सत्ताशून्यस्य आश्रयत्व अयोगात् आश्रयासिद्धो हेतुः इति भावः।

"ಜಗತೋಽಭಾವಾತ್" ಎಂಬ ಪೂರ್ವದಲ್ಲಿಯ ಶ್ರೀಮದಾಚಾರ್ಯರ ವಾಕ್ಯದಲ್ಲಿಯ ಯುಕ್ತಿಯನ್ನು ಇಲ್ಲಿ ಅನುಸಂಧಿಸಬೇಕು ಎಂದರ್ಥ.

ಹಿಂದೆ ಜಗತ್ತನ್ನು ಅಸತ್ಯವೆಂದು ಅಂಗೀಕರಿಸಿದ್ದರಿಂದ ಆಶ್ರಯಕ್ಕೆ ಬೇಕಾಗುವ ಸತ್ತೆ ಇಲ್ಲದಿರುವಾಗ, ಆಶ್ರಯತ್ವ ಅಯೋಗ್ಯವೆನಿಸುವದರಿಂದ ಆಶ್ರಯಾಸಿದ್ಧ ಹೇತು ಎಂದು ಭಾವವಿರುತ್ತದೆ.

## टीका

**ननु दृश्यत्व अभाव अतिरिक्तं न तस्य असिद्धत्वं नाम। अतः कथं हेतुहेतुमद्भावः?**

**मैवम्। समान्य विशेष भावेन वृक्षत्व शिंशुपात्वयोः इव उपपत्तेः। व्यवहारो वा अत्र साध्य इति अदोषः। एवं उत्तरत्रापि वेदितव्यम्।**

ಇಲ್ಲಿ ಒಂದು ಶಂಕೆ: ದೃಶ್ಯತ್ವ ಅಭಾವದ ಅತಿರಿಕ್ತ ದೃಶ್ಯತ್ವದ ಅಸಿದ್ಧತ್ವ ಇರುವದಿಲ್ಲ. ಹಾಗಿದ್ದಾಗ ಹೇತುದೋಷಗಳ ಭಿನ್ನತೆ ಏಕೆ? ಈ ಶಂಕೆಗೆ ಸಮಾಧಾನ ಹೀಗಿರುತ್ತದೆ: ಇದು ಸಮಾನ್ಯ ಹಾಗೂ ವಿಶೇಷ ಭಾವವನ್ನು ಅನುಸರಿಸಿ, ವೃಕ್ಷತ್ವ ಮತ್ತು ಶಿಂಶುಪವೃಕ್ಷದಂತೆ (ಅಂದರೆ, ಅಭಾವರೂಪ ವಿಶೇಷ, ಅಸಿದ್ಧ ಸಾಮಾನ್ಯ ಹೇತುವಾಗಿರುತ್ತದೆ) ಅಥವಾ ವ್ಯವಹಾರವನ್ನು ಅನುಸರಿಸಿ ಆ ದೋಷಗಳನ್ನು ಸಾಧಿಸಿರುವದರಿಂದ, ಇಲ್ಲಿ ಯಾವ ದೋಷಕ್ಕೆ ಆಸ್ಪದವಿರುವದಿಲ್ಲ. ಇದ್ದನ್ನು ಮುಂದೆ ಕೂಡ ತಿಳಿಯತಕ್ಕದ್ದು.

### टिप्पणीनाम् विशेषार्थानि

### ॥ कथं इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

साध्य अविशिष्टत्वात् इति। हेतुमत् साध्यम्।

ಅಂದರೆ ಆ ಹೇತುದೋಷಗಳ ಸಾಧ್ಯತೆಯಲ್ಲಿ ಏನು ವಿಶೇಷತೆ ಇರುವದಿಲ್ಲ ಎಂದರ್ಥ. ಹೇತುಮತ್ ಎಂದರೆ ಸಾಧ್ಯ ಎಂದರ್ಥ.

### ॥ अतः कथं हेतुहेतुमद्भाव इति॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**अभेदे उभयोरपि ज्ञातत्वस्यैव अज्ञातत्वस्यैव वा प्रसङ्गे न हेतुहेतुमद्भाव प्रयोजक ज्ञात अज्ञात विभाग असम्भवात् इति भावः।**



ಎರಡೂ ಹೇತುದೋಷಗಳ ಅಭೆದವಿದ್ದಲ್ಲಿ, ಜ್ಞಾತತ್ವದ ಅಥವಾ ಅಜ್ಞಾತತ್ವದ ಪ್ರಸಂಗದಲ್ಲಿ, ಹೇತುಹೇತುಮದ್ಭಾವದ ಪ್ರಯೋಜಕವಿಲ್ಲದಿದ್ದಲ್ಲಿ ಜ್ಞಾತ ಮತ್ತು ಅಜ್ಞಾತ ವಿಭಾಗ ಅಸಂಭವವೆನಿಸುವದು ಎಂಬ ಭಾವವಿರುತ್ತದೆ.

### ॥ समान्य विशेष भावेन इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

यथा अयं वृक्षः शिंशुपात्वात् इत्यत्र, शिंशुपात्वं वृक्षत्व सामान्य हेतुः तथा दृश्यत्व अभावरूपो विशेषः असिद्धत्व सामान्ये हेतुः इति न साध्य अविशिष्टता इत्यर्थः।

ಹೇಗೆ ಈ ವೃಕ್ಷವು ಶಿಂಶುಪವಾಗಿದೆ ಎಂಬಲ್ಲಿ ಶಿಂಶುಪಾತ್ವವು, ವೃಕ್ಷತ್ವ ಸಮಾನ್ಯಕ್ಕೆ ಹೇತುವಾಗಿರುತ್ತದೆ. ಅದರಂತೆ, ದೃಶ್ಯತ್ವ ಅಭಾವರೂಪ ವಿಶೇಷವು ಅಸಿದ್ಧತ್ವ ಸಾಮಾನ್ಯಕ್ಕೆ ಹೇತುವಾಗಿರುತ್ತದೆ. ಆದ್ದರಿಂದ ಇಲ್ಲಿ ಸಾಧ್ಯ ಅವಿಶಿಷ್ಟತಾ ಇರುವದಿಲ್ಲ ಎಂಬ ಭಾವ.

शब्दोऽनित्यश्च चाक्षुषत्वात् इत्यादौ चाक्षुषत्वादौ अपि असिद्धत्वस्य विद्यमानत्वात् असिद्धत्वं समान्यं दृश्यत्व अभावस्तु तत् विशेषः इति भावः।

ಶಬ್ದವು ಕಣ್ಣಿಗೆ ಕಾಣುವದರಿಂದ ಅನಿತ್ಯವಾಗಿದೆ ಎಂಬ ಮುಂತಾಗಿ ಚಾಕ್ಷುಷತ್ವಾದಿಗಳಲ್ಲಿ ಅಸಿದ್ಧತ್ವ ವಿದ್ಯಮಾನವಾಗಿರುತ್ತದೆ. ಆದ್ದರಿಂದ ಅಸಿದ್ಧತ್ವವು ಸಾಮಾನ್ಯ ದೃಶ್ಯತ್ವ ಅಭಾವವು ಅದರ ವಿಶೇಷ ಎಂಬ ಭಾವವಿರುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**यथा शिंशुपात्वं वृक्षत्व सामान्य हेतुः तेन तत् अनुमान दर्शनात् तथा दृश्यत्व अभावरूपो विशेषः असिद्धत्व सामान्ये हेतुः। सामान्य विशेषभावस्य असिद्धत्वस्य शब्द पक्षीकारेण प्रयुक्त चाक्षुषत्वादौ अपि भावात्। दृश्यत्व अभावस्य तु दृश्यत्वमात्र सम्बन्धित्वात् इति भावः।**

ಹೇಗೆ ಶಿಂಶುಪಾತ್ವವು ವೃಕ್ಷತ್ವ ಸಾಮಾನ್ಯ ಹೇತುವಾಗಿರುತ್ತದೆ. ಅದರಿಂದ ಅದರ ಅನುಮಾನ ಕಾಣಬಹುದಾಗಿದೆ ಹಾಗೆಯೆ ದೃಶ್ಯತ್ವ ಅಭಾವರೂಪ ವಿಶೇಷವು ಅಸಿದ್ಧತ್ವ ಸಾಮಾನ್ಯಕ್ಕೆ ಹೇತುವಾಗಿರುತ್ತದೆ. ಇಂತಹ ಸಾಮಾನ್ಯ ವಿಶೇಷಭಾವದ ಅಸಿದ್ಧತ್ವವು ಶಬ್ದ ಪಕ್ಷಮಾಡಿದ ಪ್ರಯುಕ್ತ ಚಾಕ್ಷುತ್ವಾದಿಗಳಲ್ಲಿ ಕೂಡ ಕಾಣಬಹುದಾಗಿದೆ. ಮತ್ತು ದೃಶ್ಯತ್ವ ಅಭಾವವಾದರೂ ದೃಶ್ಯತ್ವಮಾತ್ರಕ್ಕೆ ಸಂಬಂಧಿತವಾಗಿರುತ್ತದೆ ಎಂಬ ಭಾವವಿರುತ್ತದೆ.

**अन्ये तु दृश्यत्वस्य स्वरूपेण अभावे हेतुः, तस्य हेतुत्वाकारेण अभावो हेतुमान् इति व्याचक्षते।**

ಇನ್ನು ಕೆಲವರು, ದೃಶ್ಯತ್ವವು ಸ್ವರೂಪದಿಂದ ಅಭಾವದಲ್ಲಿ ಹೇತುವಾಗಿರುತ್ತದೆ, ಅದರ ಹೇತುತ್ವಾಕಾರದಿಂದ ಅಭಾವ ಹೇತುವಾಗುತ್ತದೆ ಎಂದು ವ್ಯಾಖ್ಯಾನಿಸುತ್ತಾರೆ.

### ॥ व्यवहार इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

दृश्यत्व अभावात् हेतुः असिद्धः इति व्यवहर्तव्यः इति व्यवहारस्य साध्यत्वात् तयोः भेद इत्यर्थः।

"ದೃಶ್ಯತ್ವ ಇಲ್ಲದಾಗಿರುವದರಿಂದ ಹೇತು ಅಸಿದ್ಧವಾಗಿದೆ ಎಂದು ವ್ಯವಹರಿಸಬೇಕು." ಹೀಗೆ ವ್ಯವಹಾರವನ್ನು ಸಾಧಿಸಬಹುದು, ಇದು ಅಭಾವ ಹಾಗೂ ಅಸಿದ್ಧಗಳಲ್ಲಿಯ ಭೇದವಿರುತ್ತದೆ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**पक्षान्तरं आह–व्यवहार इति॥**
**असिद्धत्वं हेतुः असिद्ध इति व्यवहार साध्य इति तयोः भेद इत्यर्थः।**

ಈ ಟೀಕಾವಾಕ್ಯವು ಪಕ್ಷಾಂತರ ಅರ್ಥವನ್ನು ಸೂಚಿಸುತ್ತದೆ.

ಅಸಿದ್ಧತ್ವ ಹೇತುವು ಅಸಿದ್ಧ ಎಂದು ವ್ಯವಹಾರ ಸಾಧ್ಯವಾದದ್ದು. ಇದು ಅವುಗಳಲ್ಲಿಯ ಭೇದ ಎಂದರ್ಥ.

## ॥ एवं उत्तरत्रापि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**सपक्ष अभावात् विरुद्धः इत्यादौ अपि, सामान्य विशेष भावेन वा व्यवहारस्य साध्यत्वं अङ्गीकृत्य वा हेतुहेतुमद्भावनं समर्थनीयं इत्यर्थः।**

ಹೀಗೆಯೆ ಮುಂದೆ " ಸಪಕ್ಷ ಅಭಾವಾತ್ ವಿರುದ್ಧಃ" ಮುಂತಾದ ಕಡೆಯಲ್ಲಿ ಕೂಡ ಸಾಮಾನ್ಯ ವಿಶೇಷ ಭಾವದಿಂದ ಅಥವಾ ವ್ಯವಹಾರಿಕ ಸಾಧ್ಯತ್ವ ಅಂಗೀಕಾರದ ಹಿನ್ನೆಲೆಯಲ್ಲಿ ಹೇತುಹೇತುಮದ್ಭಾವನವು ಸಮರ್ಥನೀಯವಾಗಿದೆ ಎಂದರ್ಥ.

## ॥ ननु दृश्यत्व....वेदितव्यम् इति ॥

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**इतः परं टीकायां श्रूयमाणानां "ननु दृश्यत्व अभाव अतिरिक्तं न तस्य असिद्धत्वं नाम। अतः कथं हेतुहेतुमद्भावः? मैवम्। समान्य विशेष भावेन वृक्षत्व शिंशुपात्वयोः इव उपपत्तेः। व्यवहारो वा अत्र साध्य इति अदोषः। एवं उत्तरत्रापि वेदितव्यम्।" व्यवहित वाक्यानां अर्थः मया न बुद्धः।**

ಬೇರೆಯವರ ಟಿಪ್ಪಣಿಯಲ್ಲಿ ಕಂಡು ಬರುವ ಮೇಲಿನ್ "ನನು" ದಿಂದ ಪ್ರಾರಂಭವಾಗಿ "ವೇದಿತವ್ಯಮ್" ವರೆಗಿನ ಟೀಕಾವಾಕ್ಯಗಳ ಅರ್ಥ ನಮಗೆ ಬೋಧಿತವಾಗಿರುವದಿಲ್ಲ.

## ೬. ೨ *व्याप्तिभङ्ग विचारः*

ವ್ಯಾಪ್ತಿ ಎಂದರೆ ಅನುಮಾನದ ಸಾಧ್ಯ ಹಾಗೂ ಹೇತುವಿನಲ್ಲಿಯ ಅನ್ಯೋನ್ಯ ಸಂಬಂಧ. ಅಂದರೆ, ಅವುಗಳಲ್ಲಿಯ ಇನ್ನೊಂದನ್ನು ಬಿಟ್ಟಿರಲಾಗದ ಸಂಬಂಧ. ಇನ್ನು ಅನುಮಾನದ ಸಾಧ್ಯದ ವ್ಯಾಪ್ತಿಯು ಹೇತುವಿನಲ್ಲಿ ಇರಬೇಕು. ಅಂತಹ ಹೇತುವೇ ಸಾಧ್ಯಸಾಧಕವಾಗುತ್ತದೆ. ಉದಾಹರಣೆಗೆಃ "पर्वतो वन्हिमान् धूमवत्वात्" ಎಂಬ ಅನುಮಾನದಲ್ಲಿ, ಪರ್ವತದಲ್ಲಿ ಸಾಧಿಸಲಾಗುವ ಧರ್ಮ ಬೆಂಕಿ ಇದು ಸಾಧ್ಯ, ಅದಕ್ಕೆ ಕಾರಣ, ಅದನ್ನೆ ಹೇತು ಎನ್ನುವರು



ಅದು ಧೂಮ. ಅಂದರೆ ಇಲ್ಲಿ ಧೂಮ ಅಥವಾ ಹೊಗೆ ಹೇತುವೆನಿಸುವದು. ಹೊಗೆ ಮತ್ತು ಬೆಂಕಿಯಲ್ಲಿಯ ಅನ್ಯೋನ್ಯ ಸಂಬಂಧ ವ್ಯಾಪ್ತಿ. ಈ ವ್ಯಾಪ್ತಿಯ ಪರಾಮರ್ಶ ಜ್ಞಾನದಿಂದಲೇ ಪರ್ವತದಲ್ಲಿ ಬೆಂಕಿಯನ್ನು ಸಾಧಿಸಲಾಗುತ್ತದೆ.

ಈಗ ಪ್ರಸ್ತುತ ಮಿಥ್ಯಾತ್ವಾನುಮಾನದಲ್ಲಿ, ಮಿಥ್ಯಾ ಸಾಧ್ಯಧರ್ಮ ಮತ್ತು ದೃಶ್ಯತ್ವ ಇದು ಹೇತು. ಹಾಗಾಗಿ ಮಿಥ್ಯಾ ಮತ್ತು ದೃಶ್ಯತ್ವ ಇವುಗಳಲ್ಲಿಯ ಅನ್ಯೋನ್ಯ ಸಂಬಂಧ ವ್ಯಾಪ್ತಿ. ಈಗ ಮಿಥ್ಯಾತ್ವ ಅನುಮಾನದ ವ್ಯಾಪ್ತಿಯನ್ನು ವಿಮರ್ಶಿಸಲಾಗುವದು. ಮೇಲೆ ಹೇಳಿದಂತೆ, ಸಾಧ್ಯಧರ್ಮದ ವ್ಯಾಪ್ತಿಯು ಹೇತುವಿನಲ್ಲಿರಬೇಕು. ಅಂತಹ ಹೇತುವೆ ಸಾಧ್ಯಸಾಧಕವಾಗುವದು. ಇಲ್ಲಿ ಇದನ್ನೆ ವಿಮರ್ಶಿಸಲಾಗುವದು.

ಈಗಾಗಲೆ ಮೇಲಿನ ಪರಿಚ್ಛೇದದಲ್ಲಿ ಹೇತುವಾದ ದೃಶ್ಯತ್ವದ ಲಿಂಗದರ್ಶನದ ಆಭಾಸತೆಯನ್ನು ಪ್ರತಿಪಾದಿಸಲಾಯಿತು. ಈಗ ದೃಶ್ಯತ್ವ ಹೇತುವಿನಲ್ಲಿಯ ಸಾಧ್ಯಧರ್ಮದ ವ್ಯಾಪ್ತಿಸ್ಮೃತಿಯನ್ನು ಪರಾಮರ್ಶಿಸಲಾಗುವದು. ಇನ್ನು ವ್ಯಾಪ್ತಿಸ್ಮೃತಿಯಲ್ಲಿ ದೋಷಗಳೇನಾದರು ಉದ್ಭವಿಸಿದರೆ, ಅದರಿಂದ ವ್ಯಾಪ್ತಿಯ ಜ್ಞಾನ ಬರುವದಿಲ್ಲ. ಇದನ್ನೆ ಶಾಸ್ತ್ರದಲ್ಲಿ ವ್ಯಾಪ್ತಿಭಂಗ ಎಂದೆನ್ನುತ್ತಾರೆ. ಇಂತಹ ದೋಷಗಳೇನಾದರು ಇದ್ದರೆ, ಹೇತುವಿನಲ್ಲಿ ಸಾಧ್ಯಧರ್ಮದ ವ್ಯಾಪ್ತಿ ಇರುವದಿಲ್ಲ. ಈ ವ್ಯಾಪ್ತಿಭಂಗ ದೋಷಗಳಾವವು ಎಂಬುದನ್ನು ಶ್ರೀಜಯತೀರ್ಥರು ತಮ್ಮ ಟೀಕೆಯಲ್ಲಿ ವಿವರಿಸುತ್ತಾರೆ. ಅದೇ ನಮ್ಮ ಮುಂದಿನ ಪರಿಚ್ಛೇದದ ವಿಷಯವಾಗಿರುತ್ತದೆ.

### ೬.೨.೧ व्याप्तिभङ्ग भेदवताम् निरूपणम्

ಈ ಪರಿಚ್ಛೇದದಲ್ಲಿ ಟೀಕಾಕೃತ್ಪಾದರು ವ್ಯಾಪ್ತಿಭಂಗ ಭೇದಗಳನ್ನು ಪ್ರತಿಪಾದಿಸಿ, ಅವುಗಳಲ್ಲಿಯ ದುಷ್ಟತ್ವಕ್ರಮವನ್ನು ನಿರೂಪಿಸುತ್ತಾರೆ.

## टीका

**व्याप्तिभङ्गभेदाः विरुद्ध–अनैकान्तिक–अनध्यवसिताः। तत्र विरुद्धः विपरीत निश्चयं करोति। अनैकान्तिकः सन्देहं उत्पादयति। अनध्यवसितः तु ज्ञानमेव न जनयति। तदेव दुष्टत्वक्रम अनुरोधेन व्याप्ति अभावं उद्भावयिष्यन् विरुद्धं तावत् आह–**

ವ್ಯಾಪ್ತಿಭಂಗ ಭೇದಗಳು ಮೂರು ಪ್ರಕಾರವುಳ್ಳದ್ದಾಗಿರುತ್ತವೆಃ ವಿರುದ್ಧ, ಅನೈಕಾಂತಿಕ ಮತ್ತು ಅನಧ್ಯವಸಿತ ಎಂದು. ಅಂದರೆ ಇವುಗಳಿಗೆ ವ್ಯಾಪ್ತಿಭಂಗ ಹೇತು ದೋಷಗಳೆನ್ನುತ್ತಾರೆ. ಅಲ್ಲಿ,

ವಿರುದ್ಧ ಎಂಬ ಹೇತು ದೋಷವು ಸಾಧ್ಯಧರ್ಮದ ವಿಪರೀತ ಜ್ಞಾನವನ್ನುಂಟು ಮಾಡುತ್ತದೆ. ಅನೈಕಾಂತಿಕ ಎಂಬ ಹೇತು ದೋಷವು ಸಾಧ್ಯಧರ್ಮ ಸಾಧಿಸುವಲ್ಲಿ ಸಂದೇಹವನ್ನು ಹುಟ್ಟಿಸುತ್ತದೆ. ಅನಧ್ಯವಸಿತ ಎಂಬ ದೋಷವು ಸಾಧ್ಯಧರ್ಮದ ವ್ಯಾಪ್ತಿಯ ಜ್ಞಾನವನ್ನೆ ಜನಯಿಸುವದಿಲ್ಲ. ಇವುಗಳಲ್ಲಿ, ವಿರುದ್ಧ ನಿಶ್ಚಯವು ದುಷ್ಟತ್ವ ಕ್ರಮದಲ್ಲಿ ದುಷ್ಟತಮ ಎನಿಸುವದು. ತದನಂತರ ಅನೈಕಾಂತಿಕವು ವ್ಯಾಪ್ತಿಜ್ಞಾನದಲ್ಲಿ ಸಂದೇಹ ಹುಟ್ಟಿಸುವದರಿಂದ ಅದು ದುಷ್ಟತ್ವ ಕ್ರಮದಲ್ಲಿ ದುಷ್ಟತರ ಎಂದೆನಿಸುವದು. ಕೊನೆಯಲ್ಲಿ ಅನಧ್ಯವಸಿತವು ವ್ಯಾಪ್ತಿಯ ಜ್ಞಾನವನ್ನೇ ಜನಿಸುವದಿಲ್ಲವಾದ್ದರಿಂದ ಅದು ದುಷ್ಟತ್ವ ಕ್ರಮದಲ್ಲಿ ದುಷ್ಟಮಾತ್ರ ಎನಿಸುವದು.

ಈ ದುಷ್ಟತ್ವಕ್ರಮವನ್ನನುಸರಿಸಿ ಮಿಥ್ಯಾತ್ವ ಅನುಮಾನ್ದ ವ್ಯಾಪ್ತಿಯ ಅಭಾವತೆಯನ್ನು ಎತ್ತಿ ತೋರಿಸಲು ಶ್ರೀಮದಾಚಾರ್ಯರು ಮೊದಲಿಗೆ ಹೇತುವಿನ ವಿರುದ್ಧ ದೋಷವನ್ನು ಪ್ರತಿಪಾದಿಸುತ್ತಾರೆ-

## टिप्पणीनाम् विशेषार्थानि

### ॥ व्याप्तिभङ्गभेदा इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**साध्य अभाव मात्र सम्बन्ध, साध्य तत् अभाव सम्बन्ध, अनुभय सम्बन्धरूपाणां व्याप्ति भङ्गानां क्रमेव विरुद्धादि निष्ठत्वात्, विरुद्धादयो: व्याप्तिभङ्ग विशेषवन्त इत्यर्थ:।यद्वा विरुद्धादि शब्दानां भावप्रधानत्वात् विरुद्धत्वादयो व्याप्ति भङ्ग विशेषा: इत्यर्थ:।**

ಕೇವಲ ಸಾಧ್ಯ ಅಭಾವದ ಜೊತೆ ಸಂಬಂಧ, ಸಾಧ್ಯ ಮತ್ತು ಅದರ ಅಭಾವತೆ ಎರಡೂಕಡೆ ಸಂಬಂಧ, ಮತ್ತು ಸಾಧ್ಯ ಮತ್ತು ಅದರ ಅಭಾವ ಎರಡೂಕಡೆ ಸಂಬಂಧವಿಲ್ಲದ, ರೂಪಗಳಾದ ವ್ಯಾಪ್ತಿ ಭಂಗಗಳು ಕ್ರಮವಾಗಿ ವಿರುದ್ಧ, ಅನೈಕಾಂತಿಕ ಮತ್ತು ಅನಧ್ಯವಸಿತ ನಿಷ್ಠಗಳಾಗಿರುತ್ತವೆ. ಅದರಂತೆ, ವಿರುದ್ಧಾದಿಗಳು ವ್ಯಾಪ್ತಿಭಂಗದ ವಿಶೇಷಗಳಾಗಿರುತ್ತವೆ ಎಂದರ್ಥ. ಅಥವಾ ವಿರುದ್ಧಾದಿ ಶಬ್ದಗಳು ಭಾವಪ್ರಧಾನಗಳಾಗಿರುವದರಿಂದಲೂ ವಿರುದ್ಧತ್ವಾದಿಗಳು ವ್ಯಾಪ್ತಿಭಂಗದ ವಿಶೇಷಗಳಾಗಿರುತ್ತವೆ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆಃ

**भङ्ग शब्द: अत्र भाव साधन:। व्याप्ते: भङ्ग: अभावो यस्मिन् इति विग्रहवता बहुव्रीहिणा , व्याप्तिभङ्ग शब्देन व्याप्तिशून्यं उच्यते। व्याप्तिशून्यश्च विरुद्ध:, अनैकान्तिक:, अनध्यवसित: च इति त्रिविधो भवति इत्यर्थ:।**

ಇಲ್ಲಿ, ಭಂಗ ಶಬ್ದವು ಭಾವ ಅಂದರೆ ವಿಷಯ ಸಾಧಕವಾಗಿರುತ್ತದೆ. ವ್ಯಾಪ್ತಿಯ ಭಂಗ ಎಂದರೆ ವ್ಯಾಪ್ತಿಯ ಅಭಾವವನ್ನು ಸೂಚಿಸುತ್ತದೊ ಅದು, ಎಂದು ಬಹುವ್ರೀಹಿಯಂತೆ ವಿಗ್ರಹಮಾಡಲ್ಪಟ್ಟ, ವ್ಯಾಪ್ತಿಭಂಗ ಶಬ್ದದಿಂದ ವ್ಯಾಪಿಶೂನ್ಯ ಎಂದು ಹೇಳುತ್ತಾರೆ.



ವ್ಯಾಪ್ತಿಶೂನ್ಯವು ವಿರುದ್ಧ, ಅನೈಕಾಂತಿಕ ಮತ್ತು ಅನಧ್ಯವಸಿತ ಎಂದು ಮೂರುವಿಧ ಆಗಿರುತ್ತದೆ.

### ॥ विरुद्ध् इत्यादि ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**साध्य सम्बन्ध अभावे सति तत् अभावेन एव सम्बन्ध, साध्य तत् अभाव उभय सम्बन्ध, उभय सम्बन्ध अभाव संज्ञा: विरुद्ध अनैकान्तिक अनध्यवसिता इत्यर्थ:।**

ಸಾಧ್ಯಧರ್ಮದ ಸಂಬಂಧ ಇಲ್ಲದಿರುವಾಗ, ಸಾಧ್ಯ ಅಭಾವತೆಯ ಜೊತೆಗೆಯೇ ಸಂಬಂಧ ಇರೋಣ, ಸಾಧ್ಯ ಮತ್ತು ಅದರ ಅಭಾವ ಎರಡೂಗಳ ಜೊತೆ ಸಂಬಂಧ ಇರೋಣ, ಮತ್ತು ಸಾಧ್ಯ ಮತ್ತು ಅದರ ಅಭಾವ ಜೊತೆ ಸಂಬಂಧವಿಲ್ಲದಿರೋಣ ಎಂಬ ಸಂಜ್ಞೆಗಳು ಕ್ರಮವಾಗಿ, ವಿರುದ್ಧ, ಅನೈಕಾಂತಿಕ ಮತ್ತು ಅನಧ್ಯವಸಿತ ಎಂದು ಕರೆಯಲ್ಪಡುತ್ತವೆ ಎಂದರ್ಥ.

### ॥ तत्र विरुद्ध इत्यादिना ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**दुष्टत्वक्रमं उपपादयति– तत्र विरुद्ध इत्यादिना॥**

ಈ ಟೀಕಾ ವಾಕ್ಯ ವ್ಯಾಪ್ತಿಭಂಗ ಭೇದಗಳ ದುಷ್ಟತ್ವಕ್ರಮವನ್ನು ಪ್ರತಿಪಾದಿಸುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**विरुद्धस्य स्वव्यापको य: साध्य–अभाव: तत् निश्चायकत्वात् विपरीत निश्चयजनकत्वम्। अनैकान्तिकस्य स्वसहचरित साध्य तत् अभाव लक्षण कोटि स्मरण द्वारा संशय हेतुत्वम्। अनध्यवसितस्य तु साध्य असहचरितस्य तत् अबोधकत्वं इत्यर्थ:।**

ವಿರುದ್ಧವು, ಎಲ್ಲಿ ಸಾಧ್ಯ ಅಭಾವವಿದೆಯೊ ಅಲ್ಲಿ ಸ್ವವ್ಯಾಪಕ ಹೊಂದಿರುತ್ತದೆ. ಆದ್ದರಿಂದ ಅದು ಸಾಧ್ಯ ಅಭಾವದ ನಿಶ್ಚಾಯಕವಾಗುವದರಿಂದ ವಿಪರೀತ ನಿಶ್ಚಯಜನಕವಾಗುತ್ತದೆ. ಅನೈಕಾಂತಿಕವು ಸ್ವತಃ ಸಾಧ್ಯ ಮತ್ತು ಅದರ ಅಭಾವಗಳ ಜೊತೆ ಸಹಚರಿತವಾಗಿ, ಅವೆರಡೂ ಲಕ್ಷಣಗಳ ಸ್ಮರಣೆಮಾಡುವಂತಾಗಿ ಸಂಶಯಕ್ಕೆ ಕಾರಣವಾಗುತ್ತದೆ. ಇನ್ನು ಅನಧ್ಯವಸಿತವು ಸಾಧ್ಯ ಜೊತೆ ಅಸಹಚರಿತವಾಗಿ, ಅದರ ಬೋಧನವನ್ನೇ ಮಾಡಿಸುವದಿಲ್ಲ.

### ॥ विरुद्ध: इति ॥

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆಃ

**विरुद्धत्व ज्ञान अभावे, विपक्षे साध्यं अस्ति इति भ्रमे, विरुद्धस्य साध्येन व्याप्तिग्रहे विरुद्ध भ्रमरूप अनुमितिं जनयति। विरुद्धत्व ज्ञाने साध्य अभाव निश्चयं जनयति इत्यर्थ:।**

ವಿರುದ್ಧತ್ವದ ಜ್ಞಾನದ ಅಭಾವವಿದ್ದಲ್ಲಿ, ವಿಪಕ್ಷದಲ್ಲಿ ಸಾಧ್ಯ ಧರ್ಮವಿದೆ ಎಂದು ಭ್ರಮವಿರುವಾಗ, ವಿರುದ್ಧದ ಸಾಧ್ಯದಿಂದ ವ್ಯಾಪ್ತಿಯನ್ನು ಗ್ರಹಿಸಿದಾಗ, ವಿರುದ್ಧ ಭ್ರಮರೂಪ ಅನುಮಿತಿಯನ್ನು ಹುಟ್ಟಿಸುತ್ತದೆ. ಇನ್ನು ವಿರುದ್ಧತ್ವದ ಜ್ಞಾನವಿದ್ದಾಗ ಸಾಧ್ಯ ಅಭಾವದ ನಿಶ್ಚಯವನ್ನು ಹುಟ್ಟಿಸುತ್ತದೆ ಎಂದರ್ಥ.

## ॥ सन्देहं उत्पादयति इति ॥

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**अनैकान्तकत्व ज्ञान अभावे, सन्देह हेतुक अनुमितिं उत्पादयति इत्यर्थः। अयं भावः–**

ಅನೈಕಾಂತಿಕತ್ವ ಜ್ಞಾನ ಇಲ್ಲದಾಗ, ಸಂದೇಹ ಕಾರಣರೂಪ ಅನುಮಿತಿಯನ್ನು ಹುಟ್ಟಿಸುತ್ತದೆ ಎಂದರ್ಥ. ಇದರ ಅಭಿಪ್ರಾಯ ಹೀಗಿರುತ್ತದೆ:

**वस्तुतः अनैकान्तिकस्य साध्येन व्याप्तिग्रहे साध्यवति प्रमा अनुमितिः साध्य अभाववति भ्रम अनुमितिः भवति।**

ವಸ್ತುತಃ ಅನೈಕಾಂತಿಕದ ಸಾಧ್ಯದಿಂದ ವ್ಯಾಪ್ತಿಗ್ರಹಸುವಲ್ಲಿ, ಸಾಧ್ಯ ಪ್ರಮಾದ ಅನುಮಿತಿ ಉಂಟಾಗುತ್ತದೆ, ಸಾಧ್ಯ ಅಭಾವದಲ್ಲಿ ಭ್ರಮದ ಅನುಮತಿ ಉಂಟಾಗುತ್ತದೆ.

**इदमेव अनुमित्योः संशयरूपत्वं यत् सम्भूय प्रमा प्रमारुपत्वं अनैकान्तिक ज्ञाने तत् साध्य सन्देहं उत्पादयति इति द्रष्टव्यम्।**

ಇವೇ ಅನುಮಿತಿಗಳಾದ ಸಂಶಯರೂಪತ್ವದಿಂದ ಕೂಡಿದ ಪ್ರಮಾ ಮತ್ತು ಪ್ರಮಾರೂಪತ್ವಗಳು ಅನೈಕಾಂತಿಕ ಜ್ಞಾನವಿದ್ದಾಗ, ಅವು ಸಾಧ್ಯದ ಸಂದೇಹವನ್ನು ಹುಟ್ಟಿಸುತ್ತವೆ ಎಂದು ತಿಳಿಯಬೇಕು.

## ॥ अनध्यवसित इति ॥

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**सर्वस्यापि पक्षत्वेन व्याप्तिग्रहणस्थल अभावात्। व्याप्ति प्रमाभ्रमयोः प्रायशः अभावेन सहकारि विरहात् ज्ञानमेव जनयति इत्यर्थः।**
**एतेन परोपदेशेन व्याप्तिग्रहे भ्रमप्रमान्यतर अनुमिति जनकत्व सद्भावात् ज्ञानमेव न जनयति इति अयुक्तं इति परास्तम्।**
**प्रायशो न अनुमिति जनकत्व इत्यत्र तात्पर्यात्।**

ಇಲ್ಲಿ ಎಲ್ಲವೂ ಪಕ್ಷತ್ವವಾಗುವದರಿಂದ ವ್ಯಾಪ್ತಿಗ್ರಹಣಸ್ಥಲ ಇರುವದಿಲ್ಲ. ಹಾಗು ವ್ಯಾಪ್ತಿಯ ಪ್ರಮಾ ಅಥವಾ ಭ್ರಮಗಳ ಪ್ರಾಯಶಃ ಅಭಾವತೆಯಿಂದಾಗಿ ಮತ್ತು ಸಹಕಾರ ವಿರಹತೆಯಿಂದ ಜ್ಞಾನವೇ ಉದ್ಭವಿಸುವದಿಲ್ಲ ಎಂದರ್ಥ.

ಇದರಿಂದ, ಪರೋಪದೇಶದಿಂದ ವ್ಯಾಪ್ತಿಗ್ರಹಿಸುವಲ್ಲಿ ಭ್ರಮ ಅಥವಾ ಪ್ರಮಾ ಯಾವುದಾದರೊಂದರ ಅನುಮಿತಿ ಉಂಟಾಗುವ ಸಾಧ್ಯತೆ ಇರುವಾಗ, ಜ್ಞಾನವೇ ಜನಿಸುವದಿಲ್ಲ ಎಂದು ಹೇಳುವದು ಅಯುಕ್ತವೆಂಬ ಪ್ರತಿಪಾದನೆಯನ್ನು ತಳ್ಳಿಹಾಕಿದಂತಾಯಿತು. ಇಲ್ಲಿ ಪ್ರಾಯಶಃ ಅನುಮಿತಿಯೇ ಉಂಟಾಗುವದಿಲ್ಲ ಎಂಬುದೆ ತಾತ್ಪರ್ಯವಾಗಿರುತ್ತದೆ.

## ॥ दुष्टत्वक्रम इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**विपरीत निश्चयो दुष्टतमः, संशयो दुष्टतरः, ज्ञान अजननं दुष्टमात्रं इति क्रमो द्रष्टव्यम्।**



ಇಲ್ಲಿ ವ್ಯಾಪ್ತಿಭಂಗ ಹೇತುದೋಷಗಳನ್ನು ಈ ಕ್ರಮದಲ್ಲಿ ಇಡಲಾಗಿದೆ, ಯಾವ ಹೇತು ದೋಷವು ಸಾಧ್ಯದ ವಿಪರೀತ ನಿಶ್ಚಯವನ್ನು ಮಾಡತ್ತದೊ ಅದು ದುಷ್ಟತಮ. ಆದ್ದರಿಂದ ವಿರುದ್ಧ ಹೇತು ದೋಷವು ದುಷ್ಟತಮ ಎನಿಸುವದು. ಇನ್ನು ಯಾವ ಹೇತು ದೋಷವು ಸಾಧ್ಯ(ವ್ಯಾಪ್ತಿ) ಜ್ಞಾನದಲ್ಲಿ ಸಂಶಯವನ್ನು ಹುಟ್ಟಿಸುವದೊ ಅದು ದುಷ್ಟತಮ. ಆದ್ದರಿಂದ ಅನೈಕಾಂತಿಕ ಹೇತು ದೋಷ ದುಷ್ಟತಮ ಎನಿಸುವದು. ಇನ್ನು ಯಾವ ಹೇತು ದೋಷ ಸಾಧ್ಯ (ವ್ಯಾಪ್ತಿಯ) ದ ಜ್ಞಾನವನ್ನೇ ಜನಯಿಸುವದಿಲ್ಲವೊ ಅದು ದುಷ್ಟಮಾತ್ರ. ಆದ್ದರಿಂದ ಅನಧ್ಯವಸಿತ ಹೇತು ದೋಷವು ದುಷ್ಟಮಾತ್ರ ಎನಿಸುವದು.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**लोके हि कर्तव्याकरणं अकर्तव्यकरणं च इति दोषम्। प्रकृते च कर्तव्या साध्यप्रमा। अकर्तव्या च तत् अभावप्रमा।**

ಲೋಕದಲ್ಲಿ ಎರಡು ತರಹದ ದೋಷಗಳಿರುತ್ತವೆ: ಕರ್ತವ್ಯ ಅಕರಣಮ್ ಅಂದರೆ ಕರ್ತವ್ಯಮಾಡದೆ ಇರೋಣ ಮತ್ತು ಅಕರ್ತವ್ಯಕರಣಮ್ ಎಂದು, ಅಂದರೆ, ಅಕರ್ತವ್ಯವಾದುದನ್ನು ಮಾಡುವದು ಎಂದರ್ಥ. ಪ್ರಕೃತದಲ್ಲಿ ಕರ್ತವ್ಯಾ ಎಂಬುದು ಅಂದರೆ ಕರ್ತವ್ಯವಾದುದು ಸಾಧ್ಯಪ್ರಮಾ ಮತ್ತು ಅಕರ್ತವ್ಯಾ ಅಂದರೆ ಅಕರ್ತವ್ಯವಾಗಿರುವದು ಸಾಧ್ಯಧರ್ಮದ ಅಭಾವತೆಯ ಪ್ರಮಾ. ಪ್ರಮಾ ಆಂದರೆ ಜ್ಞಾನ ಎಂದರ್ಥ.

**तत्र अनध्यवसितस्य कर्तव्याकरणमात्रम्। इतरयोश्च अकर्तव्यकरणं विशिष्टम्। तत्र अपि अनैकान्तिक जन्या संशयरूपा च या अप्रमा सा साध्यं अपि अवलम्बते। विरुद्धजन्या साध्य अभाव निश्चयरूपा प्रमा न साध्यगन्धं सहत इति।**

ಅಲ್ಲಿ ಅನಧ್ಯವಸಿತವು ಕರ್ತವ್ಯ ಅಕರಣಮಾತ್ರ ವಾಗಿರುವದು. ಇನ್ನಿತರರು ಅಕರ್ತವ್ಯಕರಣ ವಿಶಿಷ್ಟವಾಗಿರುತ್ತಾರೆ. ಅಲ್ಲಿ ಕೂಡ ಅನೈಕಾಂತಿಕವು ಸಂಶಯರೂಪ ಜನಿಸುವಂತಹದ್ದು ಹಾಗೂ ಸಾಧ್ಯದ ಅಪ್ರಮಾ ಕೂಡ ಅವಲಂಬಿಸುತ್ತದೆ. ವಿರುದ್ಧವು ಸಾಧ್ಯದ ಅಭಾವ ನಿಶ್ಚಯರೂಪ ಪ್ರಮಾ ಜನಯಿಸುವಂತಹದ್ದು ಹಾಗೂ ಅದಕ್ಕೆ ಸಾಧ್ಯದ ಸಹಚರವಿರುವದಿಲ್ಲ.

**विरुद्धस्य अतितरां दुष्टत्वम्, अनैकान्तिकस्य अतिदुष्टत्वं, अनध्यवसितस्य दुष्टत्वमात्रं इति क्रम इति अवगन्तव्यम्।**

ವಿರುದ್ಧವು ಅತಿತರ ದುಷ್ಟವಾಗಿರುತ್ತದೆ, ಅನೈಕಾಂತಿಕವು ಅತಿದುಷ್ಟತ್ವವಾಗಿರುತ್ತದೆ, ಮತ್ತು ಅನಿಧ್ಯವಸಿತವು ದುಷ್ಟತ್ವಮಾತ್ರ ವಾಗಿರುತ್ತದೆ. ಇದೆ ದುಷ್ಟತ್ವ ಕ್ರಮವಾಗಿರುತ್ತದೆ ಎಂದು ಅವಗತಿಸಿಕೊಳ್ಳತಕ್ಕದ್ದು.

**अन्ये तु, विरुद्धो विपरीत निश्चयं इत्यस्य ग्रन्थस्य, विरुद्ध साध्य अभाव व्याप्यत्वात् साध्य अभाववति साध्यविषयक विपर्ययं जनयति इत्यर्थः। अनैकान्तिकस्तु सन्देहं इत्यादेः पूर्वोक्त एव अर्थः इति वदन्तः।**

ಇನ್ನು, ಕೆಲವರು, विपरीत निश्चयं ಎಂಬ ಟೀಕಾ ವಾಕ್ಯವು, ವಿರುದ್ಧವು ಸಾಧ್ಯ ಅಭಾವ ವ್ಯಾಪ್ಯವನ್ನು ಹೊಂದಿದ್ದರಿಂದ, ಸಾಧ್ಯ ಅಭಾವದಲ್ಲಿ ಸಾಧ್ಯವಿಷಯಕ ವಿಪರ್ಯಾಸವನ್ನು

ಜನಯಿಸುತ್ತದೆ ಮತ್ತು अनैकान्तिकस्तु सन्देहं ಇತ್ಯಾದಿ ಟೀಕಾ ವಾಕ್ಯಗಳು ಹಿಂದೆ ಹೇಳಿದ ಅರ್ಥವನ್ನು ಪ್ರತಿಪಾದಿಸುತ್ತವೆ ಎಂದು ಹೇಳುತ್ತಾರೆ.

**तदनुसारेण दुष्टत्वक्रम इत्येतमपि ग्रन्थं विरुद्धस्य विपर्यय जनकत्वात् अतितरां दुष्टत्वं , अनैकान्तिकस्य सन्देहजनकत्वात् अतिदुष्टत्वं, अनध्यवसितस्य ज्ञानमेव जनयति इति तस्य दुष्टतामात्र इति व्याचक्षते।**

ಅದನ್ನನುಸರಿಸಿ दुष्टत्वक्रम इति ಎಂಬ ಟೀಕಾವಾಕ್ಯವು, ವಿರುದ್ಧವು ವಿಪರ್ಯಯವನ್ನು ಜನಯಿಸುವದಾದ್ದರಿಂದ ಅತಿತರ ದುಷ್ಟ ಏನಿಸುವದು, ಅನೈಕಾಂತಿಕವು ಸಂದೇಹ ಜನಕವಾದ್ದರಿಂದ ಅತಿ ದುಷ್ಟ ಏನಿಸುವದು ಮತ್ತು ಅನಿಧ್ಯವಸಿತವು ಜ್ಞಾನವನ್ನೇ ಜನಿಸುವದಿಲ್ಲವಾದ್ದರಿಂದ ಅದನ್ನು ದುಷ್ಟತ್ವಮಾತ್ರ ಎಂದು ವ್ಯಾಖ್ಯಾನಿಸುತ್ತಾರೆ.

## ॥ विरुद्धं तावत् आह इति ॥

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**धर्मविचारं अपहाय हेतुकृत् दृश्यत्वमात्रस्य सत्वात् विरुद्धतां तावत् आह इत्यर्थः।**

ಇಲ್ಲಿ ಧರ್ಮವಿಚಾರವನ್ನು ಬಿಟ್ಟು, ಹೇತುಕೃತ ದೃಶ್ಯತ್ವಮಾತ್ರ ಸತ್ಯವೆಂದು ಪರಿಗಣಿಸಿ, ಅದಕ್ಕೆ ವಿರುದ್ಧ ದೋಷವನ್ನು ಹೇಳುತ್ತಾರೆ ಎಂದರ್ಥ.

**एतेन विरुद्धत्व किम् अनिर्वचनीयं दृश्यत्वस्य उच्यते। उत सत्यं दृश्यत्वस्य। न आद्यः तस्य त्वया सत्व अङ्गीकारेण विरुद्धत्व अभिधान अयोगात्। न हि असत् साध्य अभाव व्याप्यश्च सम्भवति। न द्वितीयः तस्य परेण हेतुत्व अनभिधानात् इति परास्तम्।**

ಇದರಿಂದ, ವಿರುದ್ಧತ್ವವನ್ನು, ಅನಿರ್ವಚನ ದೃಶ್ಯತ್ವಕ್ಕೆ ಹೇಳುತ್ತೀರೊ ಅಥವಾ ಸತ್ಯವಾದ ದೃಶ್ಯತ್ವಕ್ಕೊ? ಮೊದಲನಯದು ಹೇಳಲಾಗುವದಿಲ್ಲ. ಏಕೆಂದರೆ ಸಿದ್ಧಾಂತಿಗಳಾದ ತಾವು ದೃಶ್ಯತ್ವವನ್ನು ಸತ್ಯವೆಂದು ಅಂಗೀಕರಿಸಿರುವದರಿಂದ ಅಲ್ಲಿ ವಿರುದ್ಧತ್ವ ಅಭಿಧಾನವು ಅಯೋಗ್ಯವನಿಸುವದು ಮತ್ತು ಅಸತ್ಯವಾದುದು ಸಾಧ್ಯಾಭಾವದಲ್ಲಿ ವ್ಯಾಪ್ತಿಯನ್ನು ಪಡೆಯುವ ಸಂಭವವಿರುವದಿಲ್ಲ. ಇನ್ನು ಎರಡನೆ ವಿಕಲ್ಪ ಹೇಳಲಾಗುವದಿಲ್ಲ. ಏಕೆಂದರೆ, ಅದನ್ನು ಪರಪಕ್ಷದವರು ಹೇತುವೆಂದು ಪರಿಗಣಿಸಿರುವದಿಲ್ಲ, ಎಂಬ ಪ್ರತಿಪಾದನೆಯನ್ನು ತಳ್ಳಿಹಾಕಿದಂತಾಯಿತು.

### ६.२.२ दृश्यत्वहेतोर्विरुद्धत्व समर्थनम्

ಈ ಪರಿಚ್ಛೇದದಲ್ಲಿ ಮಿಥ್ಯಾತ್ವ ಅನಮಾನದ ದೃಶ್ಯತ್ವ ಹೇತುವಿಗೆ ವಿರುದ್ಧತ್ವವನ್ನು ಸಮರ್ಥಿಸಲಾಗುವದು.

प्रपञ्चमिथ्यात्वानुमानखण्डनम्

## अनिर्वचनीय असिद्धेः एव सपक्ष अभावात् विरुद्धः।



**ಅನಿರ್ವಚನೀಯ ಎಂಬ ವಸ್ತು ಇಲ್ಲ. ಅಂದರೆ ನಮ್ಮ ಮತದಂತೆ ಅದು ಅಸಿದ್ಧವೇ ಆಗಿರುತ್ತದೆ. ಆದ್ದರಿಂದ ಸಪಕ್ಷವಿಲ್ಲ. ಹೀಗಾಗಿ ದೃಶ್ಯತ್ವಹೇತುವು ವಿರುದ್ಧ ಎಂಬ ದೋಷದಿಂದ ಗ್ರಸ್ತವಾಗಿರುತ್ತದೆ.**

## श्रीपद्मनाभतीर्थीयटीका

## अनिर्वचनीय असिद्धेः एव सपक्ष अभावात् विरुद्धः इति।

ಅನಿರ್ವಚನೀಯ ಅಸಿದ್ಧವಾಗಿರುವದರಿಂದಲೇ ಸಪಕ್ಷ ಇಲ್ಲದಾಗುವದರಿಂದ ದೃಶ್ಯತ್ವ ಹೇತುವು ವಿರುದ್ಧ ಎಂಬ ದೋಷದಿಂದ ಗ್ರಸ್ತವಾಗಿರುತ್ತದೆ.

### टीका

हेतु इति सर्वत्र अनुवर्तते। ननु साध्यविपरीत व्याप्तो हेतुः विरुद्धः उच्यते। न तु सपक्ष शून्यः। तथा सति केवल व्यतिरेकिणो हेतोः अनध्यवसित विशेषस्यापि विरुद्धत्व प्राप्तेः। तत् कथं उक्तं "सपक्ष अभावात् विरुद्धः इति। कथं च अनिर्वचनीय असिद्धेः सपक्ष अभावः? न हि अनिर्वचनीयता मिथ्यात्वं इति परेण उक्तम्।

ಇಲ್ಲಿ ವಿರುದ್ಧ ಪದದ ನಂತರ ಹೇತು ಶಬ್ದವನ್ನು ಅನುವರ್ತಿಸಬೇಕು, ಹಾಗೆಯೆ ಮುಂದೆ ಅನೈಕಾಂತಕ, ಅನಧ್ಯವಸಿತ ಮುಂತಾದವುಗಳಲ್ಲಿ ಕೂಡ ಹೇತು ಶಬ್ದವನ್ನು ಅನುವರ್ತಿಸಬೇಕು.

ಇಲ್ಲಿ ಒಂದು ಶಂಕೆ ಆಸ್ಪದವಿದೆ: ಸಾಧ್ಯವಿಪರೀತದಲ್ಲಿ ವ್ಯಾಪ್ತಿಯನ್ನು ಹೊಂದಿದ ಹೇತುವು ವಿರುದ್ಧವೆನಿಸುವದು, ವಿನಹಾ ಸಪಕ್ಷಶೂನ್ಯ ಅಂದರೆ ಸಪಕ್ಷ ಇಲ್ಲದಾಗ ಅಲ್ಲ. ಸಪಕ್ಷ ಅಂದರೆ ಸಾಧ್ಯಸಮಾನ ಧರ್ಮಕ್ಕೆ ಆಶ್ರಯವಾದ ಧರ್ಮಿ ಎಂದರ್ಥ. ಹಾಗೆನಾದರು ಆದರೆ, ಕೇವಲ ವ್ಯತಿರೇಕ ಹೇತುವು ಅನಧ್ಯವಸಿತ ಎಂಬ ದೋಷಗ್ರಸ್ತವಗಿದ್ದರೂ ಅದಕ್ಕೆ ವಿರುದ್ಧತ್ವ ಪ್ರಾಪ್ತವಾಗುವದು. ಏಕೆಂದರೆ ಅನಧ್ಯವಸಿತ ಹೇತುವು ಈಗಾಗಲೆ ವಿವರಿಸಿದಂತೆ ಪಕ್ಷದಲ್ಲಿಯೂ ಹಾಗೂ ವಿಪಕ್ಷದಲ್ಲಿಯೂ ಇರುವದಿಲ್ಲ. ಇನ್ನು ಕೇವಲ ವ್ಯತಿರೇಕಿ ಹೇತುವು ಪಕ್ಷದಲ್ಲಿ ವ್ಯಾಪಿಸಿದ್ದು ಸಪಕ್ಷವಿಲ್ಲದ್ದು ಮತ್ತು ವಿಪಕ್ಷದಲ್ಲಿ ವ್ಯಾಪ್ಯತ್ವ ಹೊಂದಿಲ್ಲದ್ದು ಆಗಿರುತ್ತದೆ. ಇನ್ನು ಕೇವಲ ವ್ಯತಿರೇಕ ಹೇತುವು ಅನಧ್ಯವಸಿತದಿಂದ ದೋಷಗ್ರಸ್ತವಾದಾಗ, ಅದೂ

ಪಕ್ಷದಲ್ಲಿಯೂ ವ್ಯಾಪ್ಯತ್ವವನ್ನು ಹೊಂದುವದಿಲ್ಲ. ಮತ್ತು ಸಪಕ್ಷವಿಲ್ಲ, ಆದ್ದರಿಂದ ಅದು ವಿಪಕ್ಷದಲ್ಲಿ ವ್ಯಾಪ್ಯತ್ವವನ್ನು ಹೊಂದಬೇಕು ಹೀಗಾಗಿ ವಿರುದ್ಧ ಹೇತುವಾಗುತ್ತದೆ ಎಂಬ ಅಭಿಪ್ರಾಯವಿರುತ್ತದೆ.

ಆದ್ದರಿಂದ "ಸಪಕ್ಷ ಅಭಾವಾತ್ ವಿರುದ್ಧಃ" ಎನ್ನುವದು ಹೇಗೆ ಕೂಡುತ್ತದೆ. ಮತ್ತು ಅನಿರ್ವಚನೀಯ ಅಸಿದ್ಧವಾದ್ದರಿಂದ ಸಪಕ್ಷದ ಅಭಾವತೆಯನ್ನು ಹೇಗೆ ಹೇಳಲು ಬರುತ್ತದೆ? ಅನಿರ್ವಚನೀಯತಾ ಎಂದರೆ ಮಿಥ್ಯಾತ್ವ ಎಂದು ಪರಪಕ್ಷದವರ ಅಭಿಪ್ರಾಯವೂ ಆಗಿರುವದಿಲ್ಲ.

### टिप्पणीनाम् विशेषार्थानि

### ॥ सर्वत्र इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**विरुद्ध अनैकान्तिक इत्यादौ उत्तरत्र सर्वत्र इत्यर्थः।**

ಮುಂದೆ, ವಿರುದ್ಧ ಅನೈಕಾಂತಿಕ ಇತ್ಯಾದಿ ಎಲ್ಲಕಡೆ, ಹೇತು ಪದವನ್ನು ಸೇರಿಸಬೇಕು ಎಂದರ್ಥ.

### ॥ तथा सति इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु सपक्षशून्यत्वमेव विरुद्धत्वं किम् न स्यात् इत्यत आह–तथा सति इति॥**

ಈ ಟೀಕಾವಾಕ್ಯ, ಸಪಕ್ಷಶೂನ್ಯತ್ವವೇ ವಿರುದ್ಧ ಎಂದು ಏಕೆ ತೆಗೆದುಕೊಳ್ಳಬಾರದು ಎಂಬ ಸಂಶಯವನ್ನು ನಿವಾರಿಸುತ್ತದೆ.

### ॥ केवल व्यतिरेकि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**जीवच्छरीरं सात्मकं प्राणादिमत्वात् इत्यत्र प्राणादिमत्व हेतोः इत्यर्थः।**

ಇಲ್ಲಿ ಶ್ರೀನಿವಾಸತೀರ್ಥರು ಕೇವಲ ವ್ಯತಿರೇಕಿ ಹೇತುವನ್ನು ಉದಾಹರಣದ ಮೂಲಕ ವಿವರಿಸುತ್ತಾರೆ. ಇದು ಕೇವಲ ವ್ಯತಿರೇಕಿ ಹೇತುವಿನ ಜ್ಞಾನವಿಲ್ಲದೆ ತಿಳಿಯಲು ಸಾಧ್ಯವಿಲ್ಲ. ಆದ್ದರಿಂದ ಇಲ್ಲಿ, ಮೊದಲಿಗೆ ಕೇವಲ ವ್ಯತಿರೇಕಿ ಹೇತುವಿನ ನಿರೂಪಣೆಯನ್ನು ತಿಳಿದುಕೊಳ್ಳೋಣ, ತದನಂತರ ಶ್ರೀನಿವಾಸತೀರ್ಥರು ನಮೂದಿಸಿದ ಉದಾಹರಣೆಯನ್ನು ತಿಳಿದುಕೊಳ್ಳಲು ಪ್ರಯತ್ನಿಸುವ.

ಪಾರಿಭಾಷಿಕವಾಗಿ ಕೇವಲ ವ್ಯತಿರೇಕಿ ಹೇತುವಿನ ನಿರೂಪಣೆ ಹೀಗಿರುತ್ತದೆಃ "पक्षव्यापकं अविद्यमान सपक्षं विपक्षात् व्यावृत्तं केवलव्यतिरेकि।" ಅಂದರೆ ಪಕ್ಷ ವ್ಯಾಪಕವಾಗಿದ್ದು, ಸಪಕ್ಷವಿಲ್ಲದ್ದು ಮತ್ತು ವಿಪಕ್ಷದಲ್ಲಿ ಇಲ್ಲದ್ದು ಹೇತುವು ಕೆವಲ ವ್ಯತಿರೆಕಿ ಏನಿಸುವದು. ಇಲ್ಲಿ,



ಪಕ್ಷ, ಸಪಕ್ಷ ಮತ್ತು ವಿಪಕ್ಷ ಪದಗಳ ಅರ್ಥವಾಗದೆ ಕೇವಲ ವ್ಯತಿರೇಕದ ಅರ್ಥವಾಗುವದಿಲ್ಲ. ಅವುಗಳನ್ನು ಅರ್ಥಮಾಡಿಕೊಳ್ಳೋಣಃ

ಇನ್ನು ಪಕ್ಷ ಎಂದರೆ, "साध्य धर्मवान् धर्मि पक्षः" ಅಂದರೆ ಸಾಧ್ಯರೂಪಧರ್ಮದಿಂದ ಕೂಡಿದ ಧರ್ಮಿಯು (ಧರ್ಮಕ್ಕೆ ಆಶ್ರಯವಾದದ್ದು ಎಂದರ್ಥ) ಪಕ್ಷ ಎನಿಸುವದು. ಉದಾಹರಣೆಗೆ "पर्वतो वन्हिमान् धूमवत्वात्" ಎಂಬಲ್ಲಿ वन्हिमान् पर्वतः ವಹ್ನಿಯುಳ್ಳ ಪರ್ವತವು ಪಕ್ಷವೆನಿಸುವದು.

ಇನ್ನು ಸಪಕ್ಷ ಎಂದರೆ, "साध्य समानधर्मवान् धर्मि सपक्षः" ಅಂದರೆ, ಸಾಧ್ಯಸಮಾನ ಧರ್ಮದಿಂದ ಕೂಡಿದ ಧರ್ಮಿಯು ಸಪಕ್ಷವೆನಿಸುವದು. ಉದಾಃ "पर्वतो वन्हिमान् धूमवत्वात्" ಎಂಬಲ್ಲಿ ಸಾಧ್ಯಧರ್ಮ ಎಂದರೆ ಪರ್ವತದಲ್ಲಿರತಕ್ಕ ವಹ್ನಿಯು. ಇದಕ್ಕೆ ಸಮಾನ ಧರ್ಮ ಎಂದರೆ ಅಡುಗೆ ಮನೆಯಲ್ಲಿರತಕ್ಕ ವಹ್ನಿಯು ಎಂದರ್ಥ. ಅಡುಗೆ ಮನೆಯಲ್ಲಿರತಕ್ಕ ವಹ್ನಿಗೆ ಆಶ್ರಯವಾದದ್ದು ಅಡುಗೆಮನೆ. ಅಂದರೆ ವಹ್ನಿಯುಳ್ಳ ಅಡುಗೆಮನೆಯೆ ಸಪಕ್ಷ.

ಇನ್ನು ವಿಪಕ್ಷವೆಂದರೆ, "साध्य तत् समानधर्म रहितो धर्मि विपक्षः" ಅಂದರೆ ಸಾಧ್ಯ ಮತ್ತು ಅದರ ಸಮಾನ ಧರ್ಮದಿಂದ ರಹಿತ ಅಂದರೆ ಅವುಗಳಿಗೆ ಆಶ್ರಯವಲ್ಲದ ಧರ್ಮಿಯು ವಿಪಕ್ಷವೆನಿಸುವದು. ಉದಾಃ "पर्वतो वन्हिमान् धूमवत्वात्" ಎಂಬಲ್ಲಿ, ಪರ್ವತ ವಹ್ನಿ, ಮತ್ತು ಅದರ ಸಮಾನ ಧರ್ಮವೆಂದರೆ ಮಹಾನಸ ವಹ್ನಿ, ಇವೆರಡರಿಂದ ರಹಿತವಾದ ಧರ್ಮಿ, ಕೆರೆಯು ವಿಪಕ್ಷವೆನಿಸುವದು.

ಇದರಂತೆ, ಕೇವಲ ವ್ಯತಿರೇಕಿ ಹೇತುವು ಮೂರು ಲಕ್ಷಣಗಳನ್ನು ಹೊಂದಿರುತ್ತದೆಃ ಪಕ್ಷದಲ್ಲಿ ವ್ಯಾಪ್ಯತ್ವವನ್ನು ಹೊಂದಿರುತ್ತದೆ, ಸಪಕ್ಷ ಇರುವದಿಲ್ಲ ಮತ್ತು ವಿಪಕ್ಷದಲ್ಲಿ ವ್ಯಾಪ್ತಿಯನ್ನು ಹೊಂದಿರುವದಿಲ್ಲ. ಈಗ ಶ್ರೀನಿವಾಸತೀರ್ಥರು ನಮೂದಿಸಿದ ಉದಾಹರಣೆಯನ್ನು ನೋಡೋಣಃ "जीवच्छरीरं सात्मकं प्राणादिमत्वात्" ಅಂದರೆ ಜೀವ ಶರೀರವು ಆತ್ಮನಿಂದ ಕೂಡಿದ್ದಾಗಿದೆ, ಪ್ರಾಣಾದಿಗಳನ್ನುಹೊಂದಿದ್ದರಿಂದ ಎಂದರ್ಥ. ಇಲ್ಲಿ सात्मकं ಇದು ಸಾಧ್ಯಧರ್ಮ, जीवच्छरीरं ಪಕ್ಷ ಮತ್ತು प्राणादिमत्वात् ಹೇತು. ಇಲ್ಲಿ प्राणादिमत्वात् ಹೇತುವು, ಸರ್ವ ಜೀವಶರೀರದಲ್ಲಿ ಇರುವದರಿಂದ ಪಕ್ಷವ್ಯಾಪಕತ್ವವನ್ನು ಹೊಂದಿದೆ, ಮತ್ತು ಬೇರೆ ಸಪಕ್ಷವೇ ಇಲ್ಲ. ಮತ್ತು ವಿಪಕ್ಷವಾದ ನಿರ್ಜೀವ ವಸ್ತುಗಳಾದ ಘಟಾದಿಗಳಲ್ಲಿ ಇರುವದಿಲ್ಲ. ಆದ್ದರಿಂದ ಇಲ್ಲಿ प्राणादिमत्वात् ಹೇತುವು ಕೇವಲ ವ್ಯತಿರೇಕಿ ಹೇತು ಏನಿಸುವದು.

### ॥ अनध्यवसित विशेषस्य इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**अविद्यमान सपक्षविपक्षस्य "सर्वं अनित्यं सत्वात्" इत्यस्य इत्यर्थः।**

ಇಲ್ಲಿ ಸಪಕ್ಷ ಹಾಗೂ ವಿಪಕ್ಷಗಳಿಲ್ಲದ ಅನಧ್ಯವಸಿತ ಹೇತು ದೋಷಗ್ರಸ್ತ ಅನುಮಾನದ ಉದಾಹರಣೆಯನ್ನು ಕೊಡುತ್ತಾರೆ "सर्वं अनित्यं सत्वात्" (ಅಂದರೆ, ಎಲ್ಲವೂ ಅನಿತ್ಯ ಸತ್ಯವಾದ್ದರಿಂದ) ಎಂದು. ಈ ಅನುಮಾನದಲ್ಲಿ अनित्यं ಸಾಧ್ಯ ಮತ್ತು सत्वात् ಇದು ಹೇತು ಆಗಿರುತ್ತದೆ. ಇಲ್ಲಿ ಅನಿತ್ಯತ್ವ ಮತ್ತು ಸತ್ಯತ್ವಗಳಲ್ಲಿಯ ವ್ಯಾಪ್ತಿಯ ಜ್ಞಾನವೇ ಜನಿಸುವದಿಲ್ಲ. ಇಲ್ಲಿ ಈ ಅನುಮಾನಕ್ಕೆ सर्वं ಎನ್ನುವದರಿಂದ ಸಪಕ್ಷ ಮತ್ತು ವಿಪಕ್ಷವೂ ಇಲ್ಲ. ಇನ್ನು ಸಪಕ್ಷಶೂನ್ಯವಾದುದರಿಂದ ವಿರುದ್ಧ ದೋಷವನ್ನು ಹೇಳುವದಾದರೆ, ಇಲ್ಲಿ ಕೂಡ ವಿರುದ್ಧ ದೋಷವನ್ನು ಹೇಳಬೇಕಾಗುವದು ಎಂಬ ಭಾವವಿರುತ್ತದೆ.

**भूः नित्या गन्धत्वात् इति विद्यमान सपक्ष अनध्यवसित व्युदासाय विशेषस्य इत्युक्तं इति ज्ञातव्यम्।**

ಇಲ್ಲಿ, ಈ ಟೀಕಾವಾಕ್ಯದಲ್ಲಿ " ವಿಶೇಷಸ್ಯ" ಪದವನ್ನು ಏಕೆ ಇಡಲಾಗಿದೆ ಎಂಬುದನ್ನು ವಿವರಿಸುತ್ತಾರೆ. ಕೆಲವೊಂದು ಅನುಮಾನಗಳು ಅನಧ್ಯವಸಿತ ಹೇತುದೋಷದಿಂದ ಗ್ರಸ್ತವಾಗಿದ್ದರೂ, ಅವುಗಳಿಗೆ ಸಪಕ್ಷವಿರುತ್ತದೆ. ಅಂತಹ ಅನುಮಾನಗಳನ್ನು ಇಲ್ಲಿ ವರ್ಜಿಸಲು ಟೀಕಾವಾಕ್ಯದಲ್ಲಿ "ಅನಧ್ಯವಸಿತ" ಪದದ ಜೊತೆ "ವಿಶೇಷಸ್ಯಾಪಿ" ಎಂಬ ಪದವನ್ನು ಇಡಲಾಗಿದೆ ಎಂದು ತಿಳಿಯಬೇಕು. ಉದಾಹರಣೆಗೆಃ "भूः नित्या गन्धत्वात्" ಎಂಬಲ್ಲಿ, ಈ ಅನುಮಾನವು ಅನಧ್ಯವಸಿತ ಹೇತು ದೋಷಗ್ರಸ್ತವಾಗಿದೆ. ಏಕೆಂದರೆ ಇಲ್ಲಿ ನಿತ್ಯತ್ವ ಹಾಗೂ ಗಂಧತ್ವದಲ್ಲಿಯ ವ್ಯಾಪ್ತಿಯ ಜ್ಞಾನವೇ ಆಗುವದಿಲ್ಲ. ಆದರೆ ಈ ಅನುಮಾನಕ್ಕೆ ವಿಯದಾದಿಗಳ ಸಪಕ್ಷವಿದೆ. ಆದ್ದರಿಂದ ಈ ಉದಾಹರಣೆಯು ಪ್ರಕೃತದಲ್ಲಿ ಯೋಗ್ಯವೆನಿಸುವದಿಲ್ಲ ಎಂಬ ಭಾವ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**अविद्यमान सपक्षविपक्षस्य "सर्वं अनित्यं सत्वात्" इत्यादेः।**

ಇಲ್ಲಿ ಸಪಕ್ಷ ಹಾಗೂ ವಿಪಕ್ಷಗಳಿಲ್ಲದ ಅನಧ್ಯವಸಿತ ಹೇತು ದೋಷಗ್ರಸ್ತ ಅನುಮಾನದ ಉದಾಹರಣೆಯನ್ನು ಕೊಡುತ್ತಾರೆ "सर्वं अनित्यं सत्वात्" (ಅಂದರೆ, ಎಲ್ಲವೂ ಅನಿತ್ಯ ಸತ್ಯವಾದ್ದರಿಂದ) ಎಂದು. ಈ ಅನುಮಾನದಲ್ಲಿ अनित्यं ಸಾಧ್ಯ ಮತ್ತು सत्वात् ಇದು ಹೇತು ಆಗಿರುತ್ತದೆ. ಇಲ್ಲಿ ಅನಿತ್ಯತ್ವ ಮತ್ತು ಸತ್ಯತ್ವಗಳಲ್ಲಿಯ ವ್ಯಾಪ್ತಿಯ ಜ್ಞಾನವೇ ಜನಿಸುವದಿಲ್ಲ. ಇಲ್ಲಿ ಈ ಅನುಮಾನಕ್ಕೆ सर्वं ಎನ್ನುವದರಿಂದ ಸಪಕ್ಷ ಮತ್ತು ವಿಪಕ್ಷವೂ ಇಲ್ಲ. ಇನ್ನು ಸಪಕ್ಷಶೂನ್ಯವಾದುದರಿಂದ ವಿರುದ್ಧ ದೋಷವನ್ನು ಹೇಳುವದಾದರೆ, ಇಲ್ಲಿ ಕೂಡ ವಿರುದ್ಧ ದೋಷವನ್ನು ಹೇಳಬೇಕಾಗುವದು ಎಂಬ ಭಾವವಿರುತ್ತದೆ.

**विद्यमान विपक्षस्य, अविद्यमान सपक्षस्य "सर्वं कार्यं प्रधानान्वितं कार्यत्वात्" इत्यादेः।**

ಇಲ್ಲಿ ವಿಪಕ್ಷವಿದ್ದ ಹಾಗೂ ಸಪಕ್ಷವಿಲ್ಲದ ಅನಧ್ಯವಸಿತ ಹೇತು ದೋಷಗ್ರಸ್ತ ಅನುಮಾನದ ಉದಾಹರಣೆಯನ್ನು ಕೊಡುತ್ತಾರೆ "सर्वं कार्यं प्रधानान्वितं कार्यत्वात्" (ಅಂದರೆ, ಎಲ್ಲ



ಕಾರ್ಯಗಳು ಪ್ರಧಾನವಾಗಿರುತ್ತವೆ ಕಾರ್ಯವಾಗಿರುವರಿಂದ) ಎಂದು. ಈ ಅನುಮಾನದಲ್ಲಿ ಸಾಧ್ಯವಾದ प्रधानान्वितं ಮತ್ತು ಹೇತುವಾದ कार्यत्वात् ಇವುಗಳಲ್ಲಿ ಯಾವ ಸಂಬಂಧವಿಲ್ಲದ ಮೂಲಕ ಅವುಗಳಲ್ಲಿಯ ವ್ಯಾಪ್ತಿಯ ಜ್ಞಾನವೇ ಆಗುವದಿಲ್ಲ. ಆದ್ದರಿಂದ ಈ ಅನುಮಾನ ಅನಧ್ಯವಸಿತ ಹೇತು ದೋಷಗ್ರಸ್ತವಾಗಿರುತ್ತದೆ. ಆದರೆ ಇಲ್ಲಿ सर्वं कार्यं ಎಂದದ್ದರಿಂದ ಬೇರೆ ಸಪಕ್ಷವೆಂದೆನು ಇರುವದಿಲ್ಲ. ಮತ್ತು सर्वं अकार्यं ವಿಪಕ್ಷವೆನಿಸುವದು. ಇನ್ನು ಸಪಕ್ಷಶೂನ್ಯವಾದುದರಿಂದ ವಿರುದ್ಧ ದೋಷವನ್ನು ಹೇಳುವದಾದರೆ, ಇಲ್ಲಿ ಕೂಡ ವಿರುದ್ಧ ದೋಷವನ್ನು ಹೇಳಬೇಕಾಗುವದು ಎಂಬ ಭಾವವಿರುತ್ತದೆ.

**"भूः नित्या गन्धत्वात् " इति विद्यमान पक्ष व्युदासाय विशेष ग्रहणम्।**

ಇಲ್ಲಿ, ಈ ಟೀಕಾವಾಕ್ಯದಲ್ಲಿ " ವಿಶೇಷಸ್ಯ" ಪದವನ್ನು ಏಕೆ ಇಡಲಾಗಿದೆ ಎಂಬುದನ್ನು ವಿವರಿಸುತ್ತಾರೆ. ಕೆಲವೊಂದು ಅನುಮಾನಗಳು ಅನಧ್ಯವಸಿತ ಹೇತುದೋಷದಿಂದ ಗ್ರಸ್ತವಾಗಿದ್ದರೂ, ಅವುಗಳಿಗೆ ಸಪಕ್ಷವಿರುತ್ತದೆ. ಅಂತಹ ಅನುಮಾನಗಳನ್ನು ಇಲ್ಲಿ ವರ್ಜಿಸಲು ಟೀಕಾವಾಕ್ಯದಲ್ಲಿ "ಅನಧ್ಯವಸಿತ" ಪದದ ಜೊತೆ "ವಿಶೇಷಸ್ಯಾಪಿ" ಎಂಬ ಪದವನ್ನು ಇಡಲಾಗಿದೆ ಎಂದು ತಿಳಿಯಬೇಕು. ಉದಾಹರಣೆಗೆಃ "भूः नित्या गन्धत्वात्" ಎಂಬಲ್ಲಿ, ಈ ಅನುಮಾನವು ಅನಧ್ಯವಸಿತ ಹೇತು ದೋಷಗ್ರಸ್ತವಾಗಿದೆ. ಏಕೆಂದರೆ ಇಲ್ಲಿ ನಿತ್ಯತ್ವ ಹಾಗೂ ಗಂಧತ್ವದಲ್ಲಿಯ ವ್ಯಾಪ್ತಿಯ ಜ್ಞಾನವೇ ಆಗುವದಿಲ್ಲ. ಆದರೆ ಈ ಅನುಮಾನಕ್ಕೆ ವಿಯದಾದಿಗಳ ಸಪಕ್ಷವಿದೆ. ಆದ್ದರಿಂದ ಈ ಉದಾಹರಣೆಯು ಪ್ರಕೃತದಲ್ಲಿ ಯೋಗ್ಯವೆನಿಸುವದಿಲ್ಲ ಎಂಬ ಭಾವ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**"सर्वं अभिधेयं प्रमेयत्वात्" इत्यादेः अपि विरुद्धत्व प्राप्तेः इत्यर्थः।**

ಮೇಲೆ ನಮೂದಿಸಿದ "सर्वं अभिधेयं प्रमेयत्वात्" (ಅಂದರೆ ಎಲ್ಲವೂ ಅಭಿಧೇಯ ಅಂದರೆ ಅರ್ಥಪೂರ್ಣವಾದದ್ದು ಪ್ರಮೇಯವಾಗಿರುವದರಿಂದ) ಅನುಮಾನದಲ್ಲಿ, प्रमेयत्वात् ಎಂಬ ಹೇತು ಪಕ್ಷವ್ಯಾಪಕತ್ವವನ್ನು ಹೊಂದಿರುತ್ತದೆ. ಹಾಗೂ प्रमेयत्व ದ ಅಭಾವ ಅಪ್ರಸಿದ್ಧವಿದ್ದ ಕಾರಣ ಇಲ್ಲಿ ವಿಪಕ್ಷ ವಿಲ್ಲ ಮತ್ತು ಎಲ್ಲವೂ ಪಕ್ಷವಾದ್ದರಿಂದ ಸಪಕ್ಷವಿಲ್ಲ. ಹಾಗೂ ಸಾಧ್ಯಧರ್ಮವಾದ ಅಭಿದಾವೃತ್ತಿ ಮತ್ತು ಹೇತುವಾದ ಪ್ರಮೆಯತ್ವದ ನಡುವೆ ಯಾವದೆ ಸಂಬಂಧವಿಲ್ಲದ ಕಾರಣ ವ್ಯಾಪ್ತಿ ಜ್ಞಾನ ಜನಿಸುವದಿಲ್ಲ. ಹೀಗಾಗಿ ಈ ಅನುಮಾನವು ಅನಧ್ಯವಸಿತ ಹೇತುದೋಷಗ್ರಸ್ತವಾಗಿರುತ್ತದೆ. ಇನ್ನು ಸಪಕ್ಷಶೂನ್ಯವಾದುದರಿಂದ ವಿರುದ್ಧ ದೋಷವನ್ನು ಹೇಳುವದಾದರೆ, ಇಲ್ಲಿ ಕೂಡ ವಿರುದ್ಧ ದೋಷವನ್ನು ಹೇಳಬೇಕಾಗುವದು ಎಂಬ ಭಾವವಿರುತ್ತದೆ.

## टीका

मैवम्। एवं हि विज्ञायते। यावन्तो हि मिथ्यात्व विकल्पास्ते सर्वे, न असत्त्व–अनिर्वचनीयत्वाभ्यां बहिर्भूता इति उपपादितम्। तत्र असत्यं अपसिद्धान्तादि भयात् न परेण अङ्गीकृतम् इति, (इदं) वाचनिकविन्यास भेदेन अपि अनिर्वचनीयत्वमेव परस्य अभिप्राय व्याप्तम्।

ततः अनिर्वचनीयेन एव सपक्षेण भाव्यम्। तथा च अनिर्वचनीय असिद्धेः अप्रसिद्ध्विशेषणत्वादि उक्तं, एवं तत एव सपक्ष अभावात् वियदादि व्यतिरिक्तं सर्वं विपक्षं इति शुक्तिरजतादौ विपक्षे वर्तमानत्वात् साध्यविपरीत व्याप्त्या विरुद्धो हेतुः इति।

ಅದು ಹಾಗಿರುವದಿಲ್ಲ. ಅದನ್ನು ಹೀಗೆ ತಿಳಿಯತಕ್ಕದ್ದು. ಈಗಾಗಲೆ ನೋಡಿದಂತೆ ಮಿಥ್ಯಾತ್ವದ ಎಲ್ಲ ವಿಕಲ್ಪಗಳನ್ನು ಅವಲೋಕಿಸಿದಾಗ, ಮಿಥ್ಯಾತ್ವವು ಅಸತ್ಯ ಅಥವಾ ಅನಿರ್ವಚನೀಯನೀಯಗಳಿಗಿಂತ ಬೇರೆ ಅಲ್ಲವೆಂದು ತಿಳಿದುಬಂದ ವಿಷಯವಾಗಿರುತ್ತದೆ. ಅಲ್ಲಿ ಮಿಥ್ಯಾತ್ವವನ್ನು ಅಸತ್ಯ ಎಂದು ಅಪಸಿದ್ಧಾಂತಾದಿ ಭಯದಿಂದ ಪರಪಕ್ಷದವರು ಅಂಗೀಕರಿಸಿರುವದಿಲ್ಲ. ಪರಂತು ಕೇವಲ ಮಾತಿನ ರಚನಾಕ್ರಮ ಅಥವಾ ನಿಕ್ಷೇಪ ಭೇದದಿಂದ ಕೂಡ ಮಿಥ್ಯಾತ್ವ ವೆಂದರೆ ಅನಿರ್ವಚನೀಯತ್ವವೆಂದೇ ಅವರ ಅಭಿಪ್ರಾಯವಾಗಿರುತ್ತದೆ.

ಹೀಗಿರುವಾಗ ಅನಿರ್ವಚನೀಯದಿಂದಲೇ ಸಪಕ್ಷವನ್ನು ಭಾವಿಸಬೇಕು. ಹೀಗಿದ್ದರೂ ಅನಿರ್ವಚನೀಯ ಅಸಿದ್ಧ ವೆಂದು ಅಪ್ರಸಿದ್ಧವಿಶೇಷಣಾದಿಗಳಿಂದ ಹೇಳಲಾಗಿರುತ್ತದೆ. ಅದರಂತೆಯೆ ಸಪಕ್ಷ ಇಲ್ಲವೆಂದಂತಾಯಿತು. ಆದ್ದರಿಂದ ವಿಯದಾದಿ ವ್ಯತಿರಿಕ್ತವಾದುದೆಲ್ಲ ಸರ್ವವು ವಿಪಕ್ಷವಾಯಿತು. ಹೀಗಾಗಿ ಶುಕ್ತಿರಜತಾದಿಗಳು ವಿಪಕ್ಷದಲ್ಲಿ ಇವೆ ಎಂದಂತಾಯಿತು. ಅದರಂತೆ, ಇಲ್ಲಿ ಹೇತುವಾದ ದೃಶ್ಯತ್ವವು ಶುಕ್ತಿರಜತಾದಿಗಳಲ್ಲಿ ಇದೆ ಎಂದು ಪರರು ಅಂಗೀಕರಿಸಿದ್ದರಿಂದ, ಹೇತುವು ಸಾಧ್ಯವಿಪರೀತದಲ್ಲಿ ವ್ಯಾಪ್ತಿಯನ್ನು ಹೊಂದಿದೆ ಎಂದಂತಾಯಿತು. ಅದರಂತೆ ದೃಶ್ಯತ್ವ ಹೇತುವು ವಿರುದ್ಧದೋಷಗ್ರಸ್ತವಾಯಿತು.

## टिप्पणीनाम् विशेषार्थानि

### ॥ मैवम् इत्यादिना ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

सपक्ष शून्यत्वं न विरुद्धलक्षणत्वेन अभिप्रेतं, येन उक्त दोषः स्यात्। किम् नाम्? अभिप्रायान्तरं अस्ति इति आशयेन परिहरति– मैवम् इत्यादिना॥

ಸಪಕ್ಷ ಶೂನ್ಯತ್ವವು ವಿರುದ್ಧದೋಷದ ಲಕ್ಷಣವಾಗಿರುತ್ತದೆ ಎಂದು ನಮ್ಮ ಅಭಿಪ್ರಾಯವಲ್ಲ, ಹಾಗೆ ಅಭಿಪ್ರಾಯವಿದ್ದಲ್ಲಿ ಮೇಲೆ ಹೇಳಿದ ದೋಷಗಳಿಗೆ ಆಸ್ಪದವಿರುತ್ತದೆ. ಮತ್ತೇನು? ಬೇರೆ



ಅಭಿಪ್ರಾಯವಿದೆ ಎಂದು ಸೂಚಿಸುತ್ತ ಈ ಟೀಕಾವಾಕ್ಯ ಮೇಲೆ ನಮೂದಿಸಿದ ದೋಷಗಳನ್ನು ಪರಿಹರಿಸುತ್ತದೆ.

### ॥ वाचनिकविन्यास भेदेन इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

इदं मूलवाक्यम्।

ಇಲ್ಲಿ ಇದಂ ಎಂದರೆ, ಮೂಲ ಮಿಥ್ಯಾತ್ವ ಅನುಮಾನ ಎಂದರ್ಥ.

मिथ्यात्वं इति वाचनिका व्यवहार विशेषेण इत्यर्थः।

ಮಿಥ್ಯಾತ್ವ ಎಂದು ಕೇವಲ ಮಾತಿನ ನಿಕ್ಷೇಪ ವ್ಯವಹಾರ ವಿಶೇಷಣ ಭೇದದಿಂದ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

क्वचित् सदसद्विलक्षण शब्देन अनिर्वचनीयं उच्यते। क्वचित् तु सदसत्व अनधिकरण शब्देन, क्वचित् शब्दान्तरेण अनिर्वचनीयं उच्यत इत्यर्थः।

ಕೆಲವೊಮ್ಮೆ ಸದಸದ್ವಿಲಕ್ಷಣ ಶಬ್ದದಿಂದ ಅನಿರ್ವಚನೀಯ ಎಂದು ಹೇಳುತ್ತಾರೆ. ಕೆಲವೊಮ್ಮೆ ಸದಸತ್ವ ಅನಧಿಕರಣ ಶಬ್ದದಿಂದ, ಕೆಲವೋಮ್ಮೆ ಶಬ್ದಾಂತರದಿಂದ ಅನಿರ್ವಚನೀಯ ಎಂದು ಹೇಳುತ್ತಾರೆ ಎಂದರ್ಥ.

### ॥ सपक्ष अभावात् इति ॥

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

ननु सपक्ष अभावात् पक्ष अतिरिक्तं सर्वं विपक्ष एव इति अयुक्तम्। शुक्तिरजतादौ साध्य विप्रतिपत्ति सद्भावेन पक्षत्वस्य औचित्यात्। अत एव परेण विमतिविषयमात्रस्य पक्ष्यत्व लाभाय विमतं इत्येव पक्ष निर्देशः कृतः। यस्य तु शुक्तिरजतादौ साध्य सिद्धं, तं प्रति तस्य सपक्षत्वं इत्यभिप्रेत्य यथा सम्प्रतिपन्नं इत्युक्तम्।

ಸಪಕ್ಷ ಇಲ್ಲವಾದ್ದರಿಂದ ಪಕ್ಷದ ಅತಿರಿಕ್ತವಾದುದೆಲ್ಲ ವಿಪಕ್ಷವೆಂದು ಹೇಳುವದು ಅಯುಕ್ತವಾಗಿದೆ. ಶುಕ್ತಿರಜತಾದಿಗಳಲ್ಲಿ ಸಾಧ್ಯದ ಸಂಶಯ ಇರುವದರಿಂದ ಪಕ್ಷತ್ವವು ಪ್ರಕೃತದಲ್ಲಿ ಯೋಗ್ಯವಾಗಿರುತ್ತದೆ. ಈ ಕಾರಣದಿಂದಲೆ, ಪರಪಕ್ಷದವರು ಸಂಶಯವಿಷಯಮಾತ್ರವು ಪಕ್ಷತ್ವ ಲಭಿಸಲೆಂದು "ವಿಮತಮ್" ಎಂದೇ ಪಕ್ಷ ನಿರ್ದೇಶ ಮಾಡಿದ್ದಾರೆ. ಇದರಿಂದ ಶುಕ್ತಿರಜತಾದಿಗಳಲ್ಲಿ ಸಾಧ್ಯ ಸಿದ್ಧವಾಗಿರುತ್ತದೆ, ಹೀಗಾಗಿ ಅದರ ಪ್ರತಿ ಸಪಕ್ಷವೆಂದು ಅಭಿಪ್ರಾಯ ಪಟ್ಟು " ಯಥಾ ಸಂಪ್ರತಿಪನ್ನಮ್" ಎಂದು ಹೇಳಲಾಗಿದೆ.

यथा वादि–प्रतिवादिनोः साध्यवत्तया संमतः सपक्षः, एवं साध्य–अभाववत्तया द्वयोः संमत एव पक्षविपक्षः।

ಹೇಗೆ ವಾದಿ ಪ್ರತಿವಾದಿಗಳ ಸಾಧ್ಯಪರ ಸಮ್ಮತವು ಸಪಕ್ಷವೆನಿಸುವದೊ, ಹಾಗೆಯೆ ಸಾಧ್ಯ-ಅಭಾವಪರ ಇಬ್ಬರಿಗೂ ಸಮ್ಮತವಾದದ್ದೆ ಪಕ್ಷದ ವಿಪಕ್ಷವೆನಿಸುವದು.

एवं च शुक्तिरजतादौ अनिर्वचनीयत्व अभावस्य, उभय सम्प्रतिपन्नत्व अभावात् न तस्य विपक्षत्वं इति चेत् उच्यते।

ಅದರಂತೆ, ಶುಕ್ತಿರಜತಾದಿಗಳಲ್ಲಿ ಅನಿರ್ವಚನೀಯ ಅಭಾವತೆಯ ಉಭಯ ಪಕ್ಷದವರಿಗೆ ಸಮ್ಮತವಿಲ್ಲದ್ದರಿಂದ ಶುಕ್ತಿರಜತಾದಿಗಳನ್ನು ವಿಪಕ್ಷವೆಂದು ಹೇಳಲು ಬರುವದಿಲ್ಲ ಎಂದರೆ? ಅದಕ್ಕೆ ಹೇಳುತ್ತೇವೆ:

**सत्यत्व-मिथ्यात्वाभ्यां वादिप्रतिवादि विमतिविषयस्यैव पक्षत्वेन शुक्तिरजतादौ च अस्माभिः सत्यत्व अनङ्गीकारेण विप्रतिपत्ति अभावात् न पक्षे अन्तर्भावः उचितः। यद्यपि शुक्तिरजतादिकं अनिर्वचनीयं न इति अस्माभिः अङ्गीकारात्, परेण च अनिर्वचनीयत्वाभ्यां अङ्गीकारात्, अनिर्वचनीयाभ्यां विप्रतिपत्तिः अस्ति तथापि न सापेक्षत्व प्रयोजिका। किन्तु सत्यत्व-अनिर्वचनीयत्वाभ्यां विप्रतिपत्तिः एव पक्षता प्रयोजिका इति न पक्षान्तरभाव सम्भवः।**

ಸತ್ಯತ್ವ-ಮಿಥ್ಯಾತ್ವ ಎಂಬ ವಾದಿಪ್ರತಿವಾದಿಗಳ ವಿವಾದದಲ್ಲಿದ್ದ ವಿಷಯವೇ ಪಕ್ಷವಾಗಿರುವದರಿಂದ, ಶುಕ್ತಿರಜತಾದಿಗಳಲ್ಲಿ ನಾವು ಸತ್ಯತ್ವವನ್ನು ಅನಂಗಿಕರಿಸಿದ ಕಾರಣ, ಯಾವ ಸಂಶಯಕ್ಕೆ ಆಸ್ಪದವಿಲ್ಲವಾದ್ದರಿಂದ ಶುಕ್ತಿರಜತಾದಿಗಳನ್ನು ಪಕ್ಷದಲ್ಲಿ ಅಂತರ್ಭಾವ ಮಾಡುವದು ಉಚಿತವೆನಿಸುವದಿಲ್ಲ. ಹಾಗಿದ್ದರೂ, ಶುಕ್ತಿರಜತಾದಿಗಳನ್ನು ಅನಿರ್ವಚನೀಯವೆಂದು ನಾವು ಅಂಗೀಕರಿಸಿರುವದಿಲ್ಲ, ಮತ್ತು ಪರರು ಅವುಗಳನ್ನು ಅನಿರ್ವಚನೀಯವೆಂದು ಅಂಗೀಕರಿಸಿರುವದರಿಂದ, ಅವುಗಳ ಅನಿರ್ವಚನೀಯತ್ವವಿಷಯದಲ್ಲಿ ಸಂಶಯ ಇರುತ್ತದೆ. ಹಾಗಿದ್ದರೂ ಅದು ಪ್ರಸ್ತುತದಲ್ಲಿ ಪಕ್ಷತ್ವ ದೃಷ್ಟಿಯಿಂದ ಅದು ಅಷ್ಟೇನು ಪ್ರಯೋಜಕವಾಗಿರುವದಿಲ್ಲ. ಪರಂತು, ಸತ್ಯತ್ವ-ಅನಿರ್ವಚನೀಯತ್ವದ ಸಂಶಯವು ಪಕ್ಷತ್ವ ದೃಷ್ಟಿಯಿಂದ ಪ್ರಯೋಜಕವಾಗಿರುತ್ತದೆ. ಆದ್ದರಿಂದ ಶುಕ್ತಿರಜತಾದಿಗಳನ್ನು ಪಕ್ಷದಲ್ಲಿ ಅಂತರ್ಭಾವ ಮಾಡುವದು ಉಚಿತವಲ್ಲ.

**यद्यपि च उक्तं साध्य-अभाववत्तया उभयवादि संमतस्यैव विपक्षत्वेन, शुक्तिरजतादौ तत् अभावात् न विपक्षत्व इति। तदपि न। शुक्तिरजतगतं साध्यं मिथ्या वदता विप्रतिपन्न उपाधौ, तत् अत्यन्त अभावस्य अङ्गीकृतत्वेन साध्य अभाववत्तया उभय संमति अपरिहारात्।**

ಹಾಗಿದ್ದರೂ, ಸಾಧ್ಯ-ಅಭಾವಪರ ಉಭಯವಾದಿಗಳ ಸಮ್ಮತವಾದುದೇ ವಿಪಕ್ಷ, ಮತ್ತು ಶುಕ್ತಿರಜತಾದಿಗಳಿಗೆ ಅದರ ಅಭಾವತೆ ಇರುವದರಿಂದ ಅವುಗಳಿಗೆ ವಿಪಕ್ಷತ್ವವನ್ನು ಇರುವದಿಲ್ಲ. ಹೀಗೆನ್ನುವದು ಸರಿಯಲ್ಲ. ಶುಕ್ತಿರಜತಗತ ಸಾಧ್ಯವು ಮಿಥ್ಯಾ ಎಂದು ಹೇಳತಾ, ಸಂಶಯ ಉಪಾಧಿಯಲ್ಲಿ ಶುಕ್ತಿಗತರಜತವನ್ನು ಅತ್ಯಂತ ಅಸತ್ಯವೆಂದು ಉಭಯಪಕ್ಷದವರು ಅಂಗೀಕರಿಸಿದ್ದರಿಂದ, ಇಲ್ಲಿ ಸಾಧ್ಯ-ಅಭಾವಪರ ಉಭಯ ಸಮ್ಮತಿ ಅಪರಿಹಾರ್ಯವಾಗಿರುತ್ತದೆ.

**असत् एव इदं रजतं प्रत्यभात् इति अनुभव बलेन परेणापि शुक्तिरजतादौ अनिर्वचनीयत्व अभावं अङ्गीकारयिष्यामि इति भावेन विपक्ष अभिधानं इत्येके।**

ಈ ರಜತವು ಅಸತ್ಯವೇ ಆಗಿದೆ ಎಂದು ಪ್ರತಿಭಾಸವಾಗುತ್ತದೆ ಎಂಬ ಅನುಭವ ಬಲದಿಂದಲೇ ಶುಕ್ತಿರಜತಾದಿಗಳಲ್ಲಿ ಅನಿರ್ವಚನೀಯತ್ವದ ಅಭಾವವನ್ನು ಅಂಗೀಕರಿಸುವೆನು ಎಂಬ ಭಾವದಿಂದ ಕೆಲವರು ಶುಕ್ತಿರಜತ ವಿಪಕ್ಷವೆಂದು ಅಭಿಧಾನ ಮಾಡುತ್ತಾರೆ.



### ६.२.२.१ मूले पूर्वापर विरोध शङ्का तत्परिहारश्च

## टीका

**ननु "रजतं दृष्टं इति भ्रममात्रत्वात्" इति शुक्तिरजतादेः दृश्यत्व अभावं वक्ष्यति। अतः कथं न विरोधः? सत्यं, यथा न विरोधः तथा तत्रैव वक्ष्यामः।**

ಮುಂದೆ ಗ್ರಂಥದಲ್ಲಿ ಶ್ರೀಮದಾಚಾರ್ಯರು, "ರಜತವು ಕಾಣಿಸಿದ್ದು ಭ್ರಮಮಾತ್ರವಾಗಿರುತ್ತದೆ" ಎಂದು ಶುಕ್ತಿರಜತಾದಿಗಳಿಗೆ ದೃಶ್ಯತ್ವದ ಅಭಾವತೆಯನ್ನು ಹೇಳುತ್ತಾರೆ. ಆದ್ದರಿಂದ ಪ್ರಸ್ತುತದಲ್ಲಿ ಶುಕ್ತಿರಜತಾದಿಗಳಿಗೆ ದೃಶ್ಯತ್ವ ಹೇಳಿದ್ದು ಅದಕ್ಕೆ ವಿರೋಧ ಹೇಗೆ ಆಗುವದಿಲ್ಲ? ತಾವು ಹೇಳಿದ್ದು ನಿಜ. ಅದಕ್ಕೆ ಹೇಗೆ ವಿರೋಧವೆನಿಸುವದಿಲ್ಲ ಎಂಬುದನ್ನು ನಾವು ಅಲ್ಲಿಯೇ ಹೇಳಲು ಬಯಸುತ್ತೇವೆ.

## टिप्पणीनाम् विशेषार्थानि

### ॥ ननु इत्यादिना ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु दृश्यत्वं हेतोः शुक्तिरजतादौ विपक्षे वर्तमानत्व अङ्गीकृत्य विरुद्धत्व उक्तौ उत्तरग्रंथ विरोध आशंक्य परिहरति-ननु इत्यादिना॥**

ಈ ಟೀಕಾ ವಾಕ್ಯ, ದೃಶ್ಯತ್ವ ಹೇತುವು ಶುಕ್ತಿರಜತಾದಿ ವಿಪಕ್ಷದಲ್ಲಿ ಇದೆ ಎಂದು ಅಂಗೀಕರಿಸಿ ಹೇತುವಿಗೆ ವಿರುದ್ಧತ್ವ ದೋಷ ಹೇಳಿದ್ದಕ್ಕೆ ಮುಂದೆ ಗ್ರಂಥದಲ್ಲಿಯ ಪ್ರತಿಪಾದನೆಯ ವಿರೋಧವನ್ನು ಆಶಂಕಿಸಿ ಅದನ್ನು ಪರಿಹರಿಸುತ್ತದೆ.

### ॥ वक्ष्यति इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**तथा च तेन अस्य शुक्तिरूप्यादेः दृश्यत्वं अङ्गीकृत्य प्रवृत्तस्य विरोध इति शेषः।**

ಇಲ್ಲಿ वक्ष्यति ಪದದ ನಂತರ " तेन अस्य शुक्तिरूप्यादेः दृश्यत्वं अङ्गीकृत्य प्रवृत्तस्य विरोध" (ಅಂದರೆ, ಹಾಗೆ ಹೇಳಿದ್ದಕ್ಕೆ ಈ ಪ್ರಸ್ತುತದಲ್ಲಿ ಶುಕ್ತಿರೂಪ್ಯಾದಿಗಳಿಗೆ ದೃಶ್ಯತ್ವವನ್ನು ಅಂಗೀಕರಸಲು ಪ್ರವೃತ್ತವಾದುದರ ವಿರೋಧ ಬರುತ್ತದೆ) ಎಂಬುದನ್ನು ಸೇರಿಸಿ ಅರ್ಥ ಮಾಡಬೇಕು.

### ॥ तत्रैव इति॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**तत् ग्रन्थ व्याख्यान अवसर एव इत्यर्थः।**

ಅಂದರೆ ಆ ಗ್ರಂಥದ ವ್ಯಾಖ್ಯಾನಾವಸರದ ವೇಳೆಯಲ್ಲಿಯೆ ಎಂದರ್ಥ.

॥ तत्रैव वक्ष्यामः इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

दृग्विषयत्व अभावेऽपि दृग्व्यावर्तकत्वमात्रम् असतोऽपि रजतस्य अस्ति इति, तत् अभ्युपगमेन न विरुद्धादि वाद विरोध इति वक्ष्याम इत्यर्थः।

तत्र इति अनन्तरं अनिर्वचनीय असिद्धेः एव इति पूरणीयम्।

ಶುಕ್ತಿರಜತಕ್ಕೆ ದೃಗ್ ವಿಷಯತ್ವದ ಅಭಾವತೆ ಇದ್ದರೂ, ದೃಗ್ ವ್ಯಾವರ್ತಕಮಾತ್ರ, ಶುಕ್ತಿರಜತ ಅಸತ್ಯವಾಗಿದ್ದರೂ ಅದಕ್ಕೆ ಇದೆ ಎಂದು ಉಭಯ ಪಕ್ಷದವರಿಗೆ ಒಪ್ಪಿಗೆಯಾದುದರಿಂದ, ಮೇಲೆ ನಮೂದಿಸಿದ ವಿರುದ್ಧಾದಿ ವಾದದ ವಿರೋಧ ಬರುವದಿಲ್ಲ ಎಂದು ಆ ಸಂದರ್ಭದಲ್ಲಿ ವ್ಯಾಖ್ಯಾನಿಸುವಾಗ ಹೇಳುತ್ತೇವೆ ಎಂದರ್ಥ.

ಇಲ್ಲಿ "तत्र" ಪದದ ನಂತರ "अनिर्वचनीय असिद्धेः एव" ಎಂಬ ಪೂರಣೆಯನ್ನು ಸೇರಿಸಿ ಅರ್ಥಮಾಡಬೇಕು.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

रजत ज्ञानस्य शुक्ति सन्निकृष्टेन इन्द्रियेण जातत्वात्, शुक्तिविषयत्वेऽपि असता रजतेन इन्द्रियस्य सन्निकर्ष असम्भवेन, रजत सन्निकृष्टेन इन्द्रियेण अजातत्वात्, यत् सन्निकृष्टकरणेन यत् ज्ञानं जन्यते स तस्य विषय, इत्येव रूपं दृग्विषयत्व अभावात् शुक्तिरजतादेः दृश्यत्व अभावः उत्तरग्रन्थार्थः। दृग्विषयत्व अभावेऽपि दृग्व्यावर्तकता मात्रस्य असत्यपि रजते सत्वात् तत् अभ्युपगमेन शुक्तिरजतादेः दृश्यत्व सद्भाव एतत् ग्रन्थार्थः इति न विरोध इति वक्ष्याम इत्यर्थः।

ಇಲ್ಲಿ ಶುಕ್ತಿರಜತದ ಜ್ಞಾನವು, ಶುಕ್ತಿಯ ಇಂದ್ರಿಯ ಸನ್ನಧಿಯಿಂದ ಆಗಿರುವದರಿಂದ, ಅದು ಶುಕ್ತಿ ವಿಷಯವಾಗಿರುತ್ತದೆ. ಇನ್ನು ಅಸತ್ಯವಾದ ಶುಕ್ತಿರಜತಕ್ಕೆ ಇಂದ್ರಿಯದ ಸನ್ನಿಧಿ ಅಸಂಭವಾದ್ದರಿಂದ, ಹಾಗೂ "ಯಾವದು ಇಂದ್ರಿಯ ಸನ್ನಿಧಿಯಿಂದ ಯಾವ ಜ್ಞಾನವು ಹೂಟ್ಟುತ್ತದೋ ಅದು ಇಂದ್ರಿಯದ ವಿಷಯವಾಗಿರುತ್ತದೆ" ಎಂಬ ಹೇಳಿಕೆಯಂತೆ, ಶುಕ್ತಿರಜತಕ್ಕೆ ದೃಗ್ವಿಷಯತ್ವದ ಅಭಾವತೆ ಇದೆ. ಆದ್ದರಿಂದ ಅದಕ್ಕೆ ದೃಶ್ಯತ್ವದ ಅಭಾವತೆ ಇದೆ ಎಂಬುದು, ಮುಂದೆ ಗ್ರಂಥದಲ್ಲಿ ಪ್ರತಿಪಾದಿಸುವ ತಾತ್ಪರ್ಯವಾಗಿದೆ. ಹಾಗೂ ಶುಕ್ತಿರಜತಕ್ಕೆ ದೃಗ್ವಿಷಯತ್ವದ ಅಭಾವತೆ ಇದ್ದರೂ ದೃಗ್ ವ್ಯಾವರ್ತಕಮಾತ್ರ ಸತ್ಯವಾಗಿರುವದರಿಂದ, ಅದನ್ನು ಉಭಯವಾದಿಗಳಿಗೆ ಒಪ್ಪಿಗೆಯಾಗಿರುವದರಿಂದ ಶುಕ್ತಿರಜತಕ್ಕೆ ದೃಶ್ಯತ್ವ ಇದೆ ಎಂದು ಮೇಲಿನ ಗ್ರಂಥದ ತಾತ್ಪರ್ಯವಾಗಿದೆ. ಆದ್ದರಿಂದ ಮೇಲಿನ ವಿರುದ್ಧವಾದಕ್ಕೆ ವಿರೋಧ ಬರುವದಿಲ್ಲ ಎಂದು ಮುಂದೆ ಪ್ರಸ್ಥಾಪಿಸಲ್ಪಡುವದು ಎಂದರ್ಥ.



### ६.२.२.२ दृश्यत्व हेतोः साध्य अभावेन व्याप्तिसमर्थनम्

## टिका

अथ वा "आत्मनोऽपि दृश्यत्वात्" इति वक्ष्यमाणं अत्रापि सिंहावलोकन्यायेन सम्बध्यते। तत्र "सपक्ष अभावात्" इत्यनेन साध्यसम्बन्ध अभाव उपपादितः।

"आत्मनोऽपि दृश्यत्वात्" इत्यनेन तत् अभाव सम्बन्धः समर्थितः। तथा च विपरीत व्याप्तिः एव सिद्धा भवति इति।

ಅಥವಾ "आत्मनोऽपि दृश्यत्वात्" (ಅಂದರೆ ಆತ್ಮನು ಕೂಡ ದೃಶ್ಯನಾಗಿದ್ದಾನೆ) ಎಂದು ಮುಂದೆ ಪ್ರಸ್ಥಾಪ ಮಾಡಲಿರುವ ಶ್ರೀಮದಾಚಾರ್ಯರು ಇಲ್ಲಿ ಕೂಡ ಸಿಂಹಾವಲೋಕನ ನ್ಯಾಯನನುಸರಿಸಿ ಸಂಬಂಧಿಸುತ್ತಾರೆ. ಈಗಾಗಲೆ "सपक्ष अभावात्" (ಅಂದರೆ, ಸಪಕ್ಷ ಇಲ್ಲವಾದ್ದರಿಂದ) ಎಂಬುದರಿಂದ ಸಾಧ್ಯ ಸಂಬಂಧದ ಅಭಾವತೆಯನ್ನು ಪ್ರತಿಪಾದಿಸಿದರು. ಇನ್ನು ಮುಂದೆ "आत्मनोऽपि दृश्यत्वात्" ಎಂಬುದರಿಂದ ಹೇತುವಿನ ಸಾಧ್ಯ ಅಭಾವ ಸಂಬಂಧವನ್ನು ಸಮರ್ಥಿಸುತ್ತಾರೆ. ಅದರಂತೆ ಹೇತುವಿನ ವಿಪರೀತ ವ್ಯಾಪ್ತಿಯೇ ಸಿದ್ಧವಾದಂತಾಯಿತು.

### टिप्पणीनाम् विशेषार्थानि

॥ तथा च इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

तत् असम्बन्धित्वे सति तत् अभाव सम्बन्धिनः तत् अभाव व्याप्ति नियमात्, विपरीत व्याप्ति सिद्धिः इति भावः।

ಸಾಧ್ಯದ ಸಂಬಂಧ ಇಲ್ಲದೆ ಇರುವಾಗ, ಸಾಧ್ಯದ ಅಭಾವದ ಜೊತೆ ಸಂಬಂಧ ಮಾಡುವದಕ್ಕೆ ಸಾಧ್ಯಾಭಾವದ ವ್ಯಾಪ್ತಿಯಾಗುತ್ತದೆ ಎಂಬ ನಿಯಮದಂತೆ, ಇಲ್ಲಿ ವಿಪರೀತ ವ್ಯಾಪ್ತಿ ಸಿದ್ಧವಾಯಿತು ಎಂಬ ಅಭಿಪ್ರಾಯವಿರುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

तत् असम्बन्धित्वे सति तत् अभाव सम्बन्धिनः तत् अभाव व्याप्ति नियमात्, विपरीत व्याप्ति सिद्धिः इति भावः।

ಸಾಧ್ಯದ ಸಂಬಂಧ ಇಲ್ಲದೆ ಇರುವಾಗ, ಸಾಧ್ಯದ ಅಭಾವದ ಜೊತೆ ಸಂಬಂಧ ಮಾಡುವದಕ್ಕೆ ಸಾಧ್ಯಾಭಾವದ ವ್ಯಾಪ್ತಿಯಾಗುತ್ತದೆ ಎಂಬ ನಿಯಮದಂತೆ, ಇಲ್ಲಿ ವಿಪರೀತ ವ್ಯಾಪ್ತಿ ಸಿದ್ಧವಾಯಿತು ಎಂಬ ಅಭಿಪ್ರಾಯವಿರುತ್ತದೆ.

### ६.२.३ दृश्यत्व हेतोः अनैकान्तिकत्व समर्थनम्

ಈ ಪರಿಚ್ಛೇದದಲ್ಲಿ ಮಿಥ್ಯಾತ್ವ ಅನಮಾನದ ದೃಶ್ಯತ್ವ ಹೇತುವಿಗೆ ಅನೈಕಾಂತಿಕತ್ವವನ್ನು ಸಮರ್ಥಿಸಲಾಗುವದು.

प्रपञ्चमिथ्यात्वानुमानखण्डनम्

**आत्मनोऽपि दृश्यत्वात् अनैकान्तिकः।**

**ಮಿಥ್ಯಾ ವಸ್ತುಗಳಂತೆ ಸತ್ಯನಾದ ಆತ್ಮನೂ ಕೂಡ ದೃಶ್ಯನಾಗಿರುವದರಿಂದ ದೃಶ್ಯತ್ವ ಹೇತುವಿಗೆ ಅನೈಕಾಂತಿಕ ಎಂಬ ದೋಷ ಉಂಟಾಯಿತು.**

**श्रीपद्मनाभतीर्थीयटीका**

**विमतं मिथ्या दृश्यत्वात् शुक्तिरजतवत् इति मायि प्रयुक्त दृश्यत्व हेतोः आत्मन्यपि वर्तमानत्वात् असौ अनैकान्तिक इत्याह- आत्मनोऽपि दृश्यत्वात् अनैकान्तिक इति॥**

विमतं मिथ्या दृश्यत्वात् शुक्तिरजतवत् ಎಂದು ಮಾಯಿಗಳು ಪ್ರಯೋಗಿಸಿದ ದೃಶ್ಯತ್ವ ಹೇತುವು ಆತ್ಮನಲ್ಲಿಯೂ ಇರುವದರಿಂದ, ಅದು ಅನೈಕಾಂತಿಕ ದೋಷಗ್ರಸ್ತವಾಗುತ್ತದೆ ಎಂದು ಶ್ರೀಮದಾಚಾರ್ಯರ ಮೂಲ ವಾಕ್ಯ ಪ್ರತಿಪಾದಿಸುತ್ತದೆ.

#### ६.२.३.१ अभ्युपगमवादोयं सपक्ष सद्भावात् दृश्यत्व हेतोः वाद्यनैकान्तिकत्वम्

**टीका**

न केवलं सपक्षस्य शुक्तिरजतादेः किन्तु विपक्षस्य आत्मनोऽपि इति योजना। ननु एतत् विरुद्धम्। प्राग् अनिर्वचनीय अभावात् सपक्ष अभावः उक्तः। इदानीं तु तत् भावः। न हि तत् अभावे तत् दृश्यत्वस्य वृत्तिः सम्भवति इति।

सत्यं, अभ्युपगम वादोयं इति अदोषः। वादि अनैकान्तिको वा। आत्मनि दृश्यत्वस्य तं प्रति समर्थनात्।



ಇಲ್ಲಿ, ಕೇವಲ ಸಪಕ್ಷವಾದ ಶುಕ್ತಿರಜತಾದಿಗಳಿಗೆ ದೃಶ್ಯತ್ವವಿದೆಯಂತಲ್ಲ ಪರಂತು ವಿಪಕ್ಷನಾದ ಆತ್ಮನೂ ಕೂಡ ದೃಶ್ಯನಾಗಿದ್ದಾನೆ ಎಂಬ ಯೋಜನೆ ಇರುತ್ತದೆ. ಹಾಗಾದರೆ ಇದು ತಮ್ಮ ಹಿಂದಿನ ವ್ಯಾಖ್ಯಾನದ ವಿರುದ್ಧವಾಯಿತಲ್ಲ? ಹಿಂದೆ, ಜಗತ್ತಿನಲ್ಲಿ ಅನಿರ್ವಚನೀಯ ವಸ್ತುವೇ ಇಲ್ಲವೆಂದು ಪ್ರತಿಪಾದಿಸಿ ಮಿಥ್ಯಾತ್ವ ಅನುಮಾನಕ್ಕೆ ಸಪಕ್ಷವೇ ಇಲ್ಲವೆಂದು ಸಾಧಿಸಲಾಯಿತು. ಈಗ ಸಪಕ್ಷವಿದೆ ಎನ್ನುತ್ತಿದ್ದೀರಿ? ಇನ್ನು ಸಪಕ್ಷ ಇಲ್ಲವೆಂದಾಗ ದೃಶ್ಯತ್ವದ ವೃತ್ತಿಯೇ ಸಂಭವಿಸುವದಿಲ್ಲವಲ್ಲವೆ?

ಹೌದು ಸತ್ಯ, ಈತರಹದ ಸಂಶಯಕ್ಕೆ ಇಲ್ಲಿ ಆಸ್ಪದವಿದೆ, ಆದರೂ ಇಲ್ಲಿ ವಾದಿಗಳು ಸಪಕ್ಷವಿದೆಯಂದು ಅಂಗೀಕರಿಸಲ್ಪಟ್ಟದ್ದರಿಂದ ಅದರ ಪರವಾಗಿ ಈ ಹೇಳಿಕೆ ಇರುವದರಿಂದ ಇಲ್ಲಿ ಯಾವ ದೋಷಕ್ಕೆ ಆಸ್ಪದವಿರುವದಿಲ್ಲ. ಹಾಗೂ ಆತ್ಮನಲ್ಲಿ ದೃಶ್ಯತ್ವವಿದೆ ಎಂಬುದನ್ನು ಇಲ್ಲಿ ಸಮರ್ಥಿಸಲಾಗುವದು.

**टिप्पणीनाम् विशेषार्थानि**

**॥ शुक्तिरजतादेः इति॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**दृश्यत्वं इति शेषः।**

ಇಲ್ಲಿ, शुक्तिरजतादेः ಪದದ ನಂತರ दृश्यत्वं ಪದವನ್ನು ಸೇರಿಸಿ ಅರ್ಥಮಾಡಬೇಕು. ಆಗ, ಕೇವಲ ಸಪಕ್ಷವೆನಿಸಿದ ಶುಕ್ತಿರಜತಗಳಿಗೆ ದೃಶ್ಯತ್ವ ಮಾತ್ರವಲ್ಲ.. ಎಂಬ ಅರ್ಥ ಸಿಗುತ್ತದೆ.

**॥ इदानीं इति ॥**

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**आत्मनोऽपि इति अपि शब्देन न केवलं सपक्षस्य शुक्तिरजतादेः किन्तु आत्मनोऽपि इति, समुच्चय परेण उक्तं तत् भावः उक्तप्राय इत्यर्थः।**

ಶ್ರೀಮದಾಚಾರ್ಯರ ಮೂಲವಾಕ್ಯದ आत्मनोऽपि ಎಂಬಲ್ಲಿ, अपि ಶಬ್ದದಿಂದ ಕೇವಲ ಸಪಕ್ಷವಾದ ಶುಕ್ತಿರಜತಾದಿಗಳಿಗೆ ಪರಂತು ಆತ್ಮನಿಗೂ ಕೂಡ ಎಂದು ಪರಪಕ್ಷದವರು ಹೇಳಿದಂತೆ, ಸಪಕ್ಷ ಇದೆ ವೆಂಬ ಅಭಿಪ್ರಾಯ ಮೇರೆಗೆ ಎಂದರ್ಥ.

**॥ तत् भाव इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**सपक्ष सद्भाव अपि पदेन उपपादित इत्यर्थः।**

ಇಲ್ಲಿ ಸಪಕ್ಷವಿದೆ ಎಂಬುದನ್ನು ಶ್ರೀಮದಾಚಾರ್ಯರ ಮೂಲವಾಕ್ಯದಲ್ಲಿ अपि ಪದದಿಂದ ತೋರಿಸಲಾಗಿದೆ ಎಂದರ್ಥ.

**॥ न हि इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

कथं इति तत् उपपादयति–न हि इति॥

ಸಪಕ್ಷವಿದೆ ಎಂದು ಹೇಗೆ ಹೇಳುತ್ತೀರಿ? ಅದನ್ನೇ ಈ ಟೀಕಾವಾಕ್ಯದಿಂದ ತೋರಿಸುತ್ತಾರೆ.

तद् अभावे सपक्ष अभावे।

ಈ ಟೀಕಾವಾಕ್ಯದಲ್ಲಿಯ ತದ್ ಅಭಾವೆ ಅಂದರೆ ಸಪಕ್ಷ ಇಲ್ಲವಾದರೆ ಎಂದರ್ಥ.

॥ अभ्युपगम वादोयं इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

सपक्ष सद्भावं अङ्गीकृत्य आत्मनोऽपि इत्युक्तं इत्यर्थः।

ಇಲ್ಲಿ ಸಪಕ್ಷವಿದೆ ಎಂದು ಅಂಗೀಕರಿಸಿ ಆತ್ಮನು ಕೂಡ ಎಂದು ಹೇಳಲಾಗಿದೆ ಎಂದರ್ಥ.

॥ वादि अनैकान्तिको वा इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

वस्तुतः सपक्ष अभावेऽपि परेण सपक्षस्य अङीकृतत्वात्, न केवलं शुक्तिरजतादेः सपक्षस्य दृश्यत्वं किन्तु विपक्षभूतस्य आत्मनोऽपि दृश्यत्वात् वादि अनैकान्तिकः इत्यर्थः।

ಇಲ್ಲಿ ವಸ್ತುತಃ ಸಪಕ್ಷ ಇಲ್ಲದಿದ್ದರೂ, ಪರಪಕ್ಷದವರು ಸಪಕ್ಷವನ್ನು ಅಂಗೀಕರಿಸಿದ್ದರಿಂದ, ಕೇವಲ ಸಪಕ್ಷವೆನಿಸಿದ ಶುಕ್ತಿರಜತಾದಿಗಳಿಗೆ ದೃಶ್ಯತ್ವವಿದೆ ಪರಂತು ಆತ್ಮನು ಕೂಡ ದೃಶ್ಯನಾಗಿದ್ದಾನೆ. ಆದ್ದರಿಂದ ಹೇತುವಾದ ದೃಶ್ಯತ್ವವು ವಾದಿ ಅನೈಕಾಂತಿಕ ಎಂಬ ದೋಷಗ್ರಸ್ತವಾಗಿದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

वस्तुतः सपक्ष अभावेऽपि परेण सपक्षस्य तस्मिंश्च हेतुवर्तनस्य च अङ्गीकृतत्वात् इत्यर्थः।

ಇಲ್ಲಿ ವಸ್ತುತಃ ಸಪಕ್ಷ ಇಲ್ಲವಾದರೂ, ಪರಪಕ್ಷದವರು ಸಪಕ್ಷ ಮತ್ತು ಅದರಲ್ಲಿ ಹೇತುವಿನ ಇರುವಿಕೆಯನ್ನು ಅಂಗೀಕರಿಸಿದ್ದಾರೆ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

न वस्तुगत्या हेतुः अनैकान्तिकः, किन्तु वादिना सपक्ष अङ्गीकारात् तत् रीत्या एव अयं हेतुः अनैकान्तिक इत्यर्थः।

ಇಲ್ಲಿ ವಸ್ತುತಃ ಹೇತುವಿಗೆ ಅನೈಕಾಂತಕ ದೋಷವಿಲ್ಲ, ಪರಂತು ವಾದಿಗಳು ಸಪಕ್ಷವನ್ನು ಅಂಗೀಕರಿಸಿದ್ದರಿಂದ ಅದರಂತೆಯೇ ಈ ಹೇತುವಿಗೆ ಅನೈಕಾಂತಿಕ ಎಂದರ್ಥ.

॥ आत्मनि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

ननु परेण विपक्षभूतस्य आत्मनो दृश्यत्व अनङ्गीकारेण हेतोः एव अभावात् न व्यभिचार इत्यत आह– आत्मनि इति॥



ಇಲ್ಲಿ ಪರಪಕ್ಷದವರು ವಿಪಕ್ಷಭೂತನಾದ ಆತ್ಮನು ದೃಶ್ಯನಾಗಿದ್ದಾನೆ ಎಂದು ಅಂಗೀಕರಿಸಿಲ್ಲ, ಅದರಂತೆ ಆತ್ಮನಲ್ಲಿ ಹೇತುವು ಇಲ್ಲದಿರುವಾಗ, ಅಲ್ಲಿ ವ್ಯಭಿಚಾರ ಉಂಟಾಗಲು ಸಾಧ್ಯವಿಲ್ಲ, ಅದಕ್ಕೆ ಉತ್ತರರೂಪವಾಗಿ ಈ ಟೀಕಾವಾಕ್ಯ ಇರುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

तर्हि परेण विपक्षवृत्तित्वस्य अनङ्गीकारात् न तद्रीत्या अनैकान्तिकत्वं इति आशंक्य युक्ति बलात् तत् अङ्गीकार्यं इत्याह– आत्मनि इति॥

ಹಾಗಿದ್ದರೂ ಪರಪಕ್ಷದವರು ದೃಶ್ಯತ್ವ ಹೇತುವಿನ ವಿಪಕ್ಷವೃತ್ತಿತ್ವವನ್ನು ಅಂಗೀರಿಸಿಲ್ಲವಾದ್ದರಿಂದ ಅವರಂತೆ ಅನೈಕಾಂತಿಕತ್ವ ಉಂಟಾಗುವದಿಲ್ಲ ಎಂದು ಆಶಂಕಿಸಿ, ಯುಕ್ತಿಬಲದಿಂದ ಪರಪಕ್ಷದವರು ವಿಪಕ್ಷಭೂತ ಆತ್ಮನಲ್ಲಿ ದೃಶ್ಯತ್ವವನ್ನು ಅಂಗೀಕರಿಸಬೇಕು ಎಂದು ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

वादिना आत्मनि दृश्यत्व अनङ्गीकारात् कथं वादि अनैकान्तिक इत्यत आह– आत्मनि इति॥

ವಾದಿಗಳು ಆತ್ಮನಲ್ಲಿ ದೃಶ್ಯತ್ವವನ್ನು ಅಂಗೀಕರಿಸಿರುವದಿಲ್ಲ. ಆದ್ದರಿಂದ ತಾವು ಹೇಗೆ ಹೇತುವಾದ ದೃಶ್ಯತ್ವಕ್ಕೆ ವಾದಿ ಅನೈಕಾಂತಿಕ ದೋಷವನ್ನು ಹೇಳುತ್ತೀರಿ ಎಂಬುದನ್ನು ಆಶಂಕೆಯನ್ನು ಈ ಟೀಕಾವಾಕ್ಯ ನಿರಾಕರಿಸುತ್ತದೆ.

॥ समर्थनात् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

ब्रह्मज्ञानाय प्रवृत्तानां वेदान्तानां वैयर्थ्यापत्तयादिरूप युक्तिभिः इत्यर्थः।

ಬ್ರಹ್ಮಜ್ಞಾನಕ್ಕಾಗಿ ಪ್ರವೃತ್ತವಾದ ವೇದಾಂತಗಳಿಗೆ ವೈಯರ್ಥ್ಯ ಉಂಟಾಗಬೇಕಾಗುತ್ತದೆ, ಎಂಬ ಮುಂತಾಗಿ ಯುಕ್ತಿಗಳಿಂದ ಸಮರ್ಥಿಸಲಾಗುವದು ಎಂದರ್ಥ

**६.२.३.२ असत्वसद्विविक्तयोः साध्ये दृश्यत्व हेतोः अनैकान्तिकत्वम्**

## टीका

**अथ वा मिथ्यात्वं नाम असत्वं वा अनिर्वचनीयत्वं वा सद्विविक्तं वा वक्तव्यं। तत्र अनिर्वचनीयत्व साध्ये विरुद्धत्व उक्त्वा, असत्व–सद्विविक्तयोः अनैकान्तिकत्वं अनेन उच्यते। एतेन लक्षण विरोधोऽपि परिहृतः।**

ಅಥವಾ: ಮಿಥ್ಯಾತ್ವವೆಂದರೆ ಅಸತ್ಯತ್ವ, ಅನಿರ್ವಚನೀಯತ್ವ ಅಥವಾ ಸತ್ಯಕ್ಕಿಂತ ಭಿನ್ನವಾದದ್ದು ಎಂದು ಹೇಳಬೇಕು. ಅಲ್ಲಿ ಮಿಥ್ಯಾತ್ವ ಎಂದರೆ ಅನಿರ್ವಚನೀಯತ್ವ ಎಂದು ಪರಿಗಣಿಸಿ ಅದನ್ನು ಸಾಧಿಸಿದಲ್ಲಿ ಹೇತುವಿಗೆ ವಿರುದ್ಧತ್ವವನ್ನು ಹೇಳಿ, ಈಗ ಮಿಥ್ಯಾ ಎಂದರೆ

ಅಸತ್ಯತ್ವ ಹಾಗೂ ಸತ್ಯಕ್ಕಿಂತ ಭಿನ್ನ ಎಂದು ಪರಿಗಣಿಸಿ ಅದನ್ನು ಸಾಧಿಸಿದಲ್ಲಿ ಹೇತುವಿಗೆ ಅನೈಕಾಂತಿಕ ದೋಷ ಉಂಟಾಗುತ್ತದೆಂದು ಹೇಳಲಾಗುತ್ತಿದೆ. ಇದರಿಂದ ಲಕ್ಷಣದಲ್ಲಿ ಬರುವ ವಿರೋಧವನ್ನು ಕೂಡ ಪರಿಹರಿಸಿದಂತಾಯಿತು.

## टिप्पणीनाम् विशेषार्थानि

### ॥ उक्त्वा इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

सपक्ष अभावेन इति शेषः।

ಇಲ್ಲಿ ಸಾಧ್ಯೇ ಶಬ್ದದನಂತರ सपक्ष अभावेन (ಸಪಕ್ಷ ಇಲ್ಲವಾದ್ದರಿಂದ) ಎಂಬ ಪದಗಳನ್ನು ಸೇರಿಸಿ ಅರ್ಥಮಾಡಬೇಕು.

### ॥ असत्व-सद्विविक्तयोः इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

साध्यत्व पक्ष इत्यर्थः।

ಇಲ್ಲಿ, ಮಿಥ್ಯಾ ಎಂದರೆ ಅಸತ್ಯತ್ವ ಹಾಗೂ ಸತ್ಯಕ್ಕಿಂತ ಭಿನ್ನ ಎಂದು ಪರಿಗಣಿಸಿ ಅದನ್ನು ಸಾಧಿಸುವದು ಎಂದರ್ಥ.

### ॥ एतेन इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

ननु एकस्यैव दृश्यत्व हेतोः विरुद्धत्व-अनैकान्तिकत्वे विरुद्धे तथा हि-
साध्य सम्बन्ध अभावे सति तत् अभावेन एव सम्बन्धवान् विरुद्धः। साध्य तत् अभाव उभय सम्बन्धवान् अनैकान्तिक इति विरुद्ध अनैकान्तिक लक्षणयोः परस्परं विरुद्धत्वात् इत्यत आह- एतेन इति॥

ಹೇತುವಿನ ದೋಷಗಳಾದ ವಿರುದ್ಧತ್ವ ಮತ್ತು ಅನೈಕಾಂತಿಕ ದೋಷಗಳು ವಿರುದ್ಧ ಹೇಗೆ, ಅದರ ವಿವರಣೆ ಹೀಗಿರುತ್ತದೆಃ ಸಾಧ್ಯ ಸಂಬಂಧವಿಲ್ಲದೆ ಇರುವಾಗ ಅದರ ಅಭಾವದ ಜೊತೆಗೆ ಮಾತ್ರ ಸಂಬಂಧವುಳ್ಳದ್ದು ವಿರುದ್ಧವೆನಿಸುವದು. ಮತ್ತು ಸಾಧ್ಯ ಧರ್ಮ ಮತ್ತು ಅದರ ಅಭಾವ ಇಬ್ಬರೂ ಜೊತೆ ಸಂಬಂಧವುಳ್ಳದ್ದು ಅನೈಕಾಂತಿಕ ಏನಿಸುವದು. ಹೀಗೆ ವಿರುದ್ಧ ಹಾಗೂ ಅನೈಕಾಂತಿಕ ಲಕ್ಷಣಗಳಲ್ಲಿಯ ಪರಸ್ಪರ ವಿರುದ್ಧ ಸಂಬಂಧವಿರುತ್ತದೆ. ಹೀಗಿರುವಾಗ, ಒಂದೇ ದೃಶ್ಯತ್ವ ಹೇತುವಿಗೆ ವಿರುದ್ಧತ್ವ ಮತ್ತು ಅನೈಕಾಂತಿಕತ್ವ ವಿರುದ್ಧವಾದ ದೋಷಗಳು ಹೇಗೆ ಉಂಟಾಗುತ್ತವೆ? ಇದನ್ನೆ ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ.

यदा अनिर्वचनीयत्व साध्यं तदा सपक्ष अभावेन विरुद्धत्वं, यदा च असत्वं सद्विविक्तं वा साध्यं तदा अनैकान्तिकत्वं इत्येवं विरुद्ध-अनैकान्तिकत्वयोः पक्षभेदेन व्यवस्थितत्वात् लक्षण विरोधोऽपि परिहृत इत्यर्थः।



ಯಾವಾಗ ಅನಿರ್ವಚನೀಯತ್ವ ಸಾಧ್ಯಧರ್ಮವಾಗುತ್ತದೊ ಆಗ ಸಪಕ್ಷ ಇಲ್ಲದಾಗಿ ಹೇತುವಿಗೆ ವಿರುದ್ಧತ್ವ ದೋಷ ಉಂಟಾಗುತ್ತದೆ. ಮತ್ತು ಯಾವಗ ಅಸತ್ವ ಅಥವಾ ಸದ್ವಿವಿಕ್ತತ್ವ (ಸತ್ಯತ್ವಕ್ಕಿಂತ ಭಿನ್ನವಾದದ್ದು) ಸಾಧ್ಯಧರ್ಮವಾಗುತ್ತದೊ ಆಗ ಅನೈಕಾಂತಿಕತ್ವ ಉಂಟಾಗುತ್ತದೆ. ಹೀಗೆ ಪಕ್ಷಭೇದದಿಂದ ವ್ಯವಸ್ಥೆಯನ್ನು ಮಾಡಿದ್ದರಿಂದ ಲಕ್ಷಣಗಳಲ್ಲಿಯ ವಿರೋಧವನ್ನು ಕೂಡ ಪರಿಹರಿಸಲಾಗಿದೆ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

विरुद्ध-अनैकान्तिकत्वयोः पक्षभेदेन व्यवस्थितत्वेन लक्षणविरोधः साध्य तत् अभाव सम्बन्ध, तत् अभावमात्र सम्बन्धगर्भयोः अनैकान्तिक-विरुद्ध लक्षणयोः विरोधः परिहृत इत्यर्थः।

ವಿರುದ್ಧ - ಅನೈಕಾಂತಿಕತ್ವಗಳಲ್ಲಿ ಪಕ್ಷಭೇದದಿಂದ ವ್ಯವಸ್ಥೆಯನ್ನು ಮಾಡಿದ್ದರಿಂದ ಸಾಧ್ಯ ಮತ್ತು ಅದರ ಅಭಾವ ಜೊತೆ ಸಂಬಂಧರೂಪ, ಹಾಗೂ ಕೇವಲ ಸಾಧ್ಯ ಅಭಾವ ಜೊತೆ ಸಂಬಂಧರೂಪ, ಅನೈಕಾಂತಿಕ ಮತ್ತು ವಿರುದ್ಧ ಲಕ್ಷಣಗಳ ವಿರೋಧವನ್ನು ಪರಿಹರಿಸಲಾಯಿತು ಎಂದು ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

साध्य भेदेन विरुद्धत्वं अनैकान्तिकत्वं च भवति प्रतिपादनेन विरुद्धस्यैव अनैकान्तिकत्व अभिधाने पक्षत्रय वृत्तिः अनैकान्तिक इति लक्षणविरोधः। सपक्षशून्यस्य पक्षाश्रयवृत्तित्व अभावात् इति परस्तं इत्यर्थः।

ಇಲ್ಲಿ ಸಾಧ್ಯಭೇದದಿಂದ ವಿರುದ್ಧತ್ವ ಮತ್ತು ಅನೈಕಾಂತಿಕತ್ವ ಉಂಟಾಗುತ್ತದೆ ಎಂದು ಪ್ರತಿಪಾದನೆಯಿಂದ, ವಿರುದ್ಧವನ್ನೇ, ಅನೈಕಾಂತಿಕತ್ವವೆಂಬ ಅಭಿಧಾನದ ಮೂಲಕ, ಪಕ್ಷತ್ರಯ ವೃತ್ತಿ ಅನೈಕಾಂತಿಕ ಎಂದು ಲಕ್ಷಣವಿರೋಧ ಬರುತ್ತದೆ. ಇದರಿಂದ ಸಪಕ್ಷಶೂನ್ಯವಾದುದಕ್ಕೆ ಪಕ್ಷಾಶ್ರಯ ವೃತ್ತಿತ್ವ ಇಲ್ಲದಾಗುವದು ಎಂಬುದನ್ನು ನಿರಾಕರಿಸಲಾಯಿತು ಎಂದರ್ಥ.

### ६.२.३.३ आत्मनः स्वप्रकाशत्वेन दृश्यत्वाभाव शङ्का

## टीका

आह, न आत्मनो दृश्यत्वं युक्तम्। तस्य अपराधीन प्रकाशत्वात्। तथा हि- मम इदं अनुकूलं प्रतिकूलं इति वा विज्ञानस्य अवच्छिन्न प्रकाशत्वेन, अवच्छेदक आत्मप्रकाश, न आन्तरीयकत्वात्, अवश्यं आत्मा प्रकाशत इति अङीकार्यम्।

तस्य च मानसवेदनीयतायां वृत्तिविरोधात्, संवित्कर्मताम् अन्तरेण अपरोक्षस्य संवित् अधीनप्रकाशता विरोधात्, परिशेषतः स्वप्रकाशता सिद्धिः इति।

ಹೀಗೆ ಹೇಳಲಾಗುತ್ತಿದೆ, ಆತ್ಮನಿಗೆ ದೃಶ್ಯತ್ವವನ್ನು ಹೇಳುವದು ಯುಕ್ತವಲ್ಲ. ಏಕೆಂದರೆ ಆತ್ಮನು ಅಪರಾಧೀನ ಪ್ರಕಾಶನಾಗಿದ್ದಾನೆ. ಅದನ್ನು ಹೀಗೆ ವಿವರಿಸಬಹದು: ನನಗೆ ಇದು ಅನೂಕೂಲವಾದದ್ದು, ಇದು ಪ್ರತಿಕೂಲವಾದದ್ದು ಎಂಬ ವಿಜ್ಞಾನದಿಂದ ಬೇರ್ಪಡಿಸಲ್ಪಟ್ಟ ಪ್ರಕಾಶದಿಂದ, ವಿಶೇಷಣೀಭೂತ ಆತ್ಮಪ್ರಕಾಶವು, ಅಂತಹ ನಿಯತಕ್ಕೆ ವಳಗಾಗದ್ದರಿಂದ, ಅವಶ್ಯವಾಗಿ ಆತ್ಮಾ ಪ್ರಕಾಶಮಾತ್ರನಾಗಿದ್ದಾನೆ ಎಂದು ಅಂಗೀಕರಿಸಬೇಕು.

ಅಂಥಹ ಆತ್ಮಪ್ರಕಾಶವು ನೈಯಾಯಿಕರ ಮತದಂತೆ ಅಂತಃಕರಣವೃತ್ತಿರೂಪವಾದದ್ದು ಎಂದು ಹೇಳಲೂ ಆಗುವದಿಲ್ಲ ಅಲ್ಲಿ ವೃತ್ತಿ ವಿರೋಧ ಉಂಟಾಗುತ್ತದೆ. ಅಂದರೆ ಕರ್ತಾ ಕ್ರಿಯಾವಿಷಯ ಮತ್ತು ಕರ್ಮ ಕರ್ತೃತ್ವ ಒಬ್ಬ ಆತ್ಮನಲ್ಲೆ ಇರೋಣ, ಇದು ವೃತ್ತಿವಿರುದ್ಧ ಎಂದರ್ಥ. ಇನ್ನು ಜ್ಞಾನಕರ್ಮಗಳ ಹೊರತಾಗಿ ಆತ್ಮನ ಅಪರೋಕ್ಷ ಉಂಟಾಗುತ್ತಿರುವಾಗ, ಅದು, ಪ್ರಭಾಕರ ಅಥವಾ ಭಾಸ್ಕರರ ಮತದಂತೆ ಆತ್ಮನು ಜ್ಞಾನಾಧೀನ ಪ್ರಕಾಶ ಎಂದಂತಾಗಿ ಹೇಳುವದಕ್ಕೆ ವಿರೋಧ ಉಂಟುಮಾಡುತ್ತದೆ. ಹೀಗೆ ಪರಿಶೇಷತಃ ಅಂದರೆ ಉಳಿದದ್ದು ಪ್ರಕಾಶ ಅದು ಸ್ವಪ್ರಕಾಶ. ಹೀಗೆ ಆತ್ಮಪ್ರಕಾಶವು ಸ್ವಪ್ರಕಾಶವಾದದ್ದು ಎಂದು ಸಿದ್ಧವಾಗುತ್ತದೆ.

## टिप्पणीनाम् विशेषार्थानि

### ॥ आह इति ॥

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**अनैकान्त्य परिहारं शङ्कते– आह इति॥**

ಇಲ್ಲಿ, ಶ್ರೀಮದಾಚಾರ್ಯರು ಮಿಥ್ಯಾತ್ವ ಅನುಮಾನಕ್ಕೆ ಪ್ರತಿಪಾದಿಸಿದ ಅನೈಕಾಂತಿಕ ಹೇತು ದೋಷವನ್ನು, ಪರಪಕ್ಷದವರು ಪ್ರತಿಪಾದಿಸುವ ಪರಿಹಾರರೂಪ ಆತ್ಮನ ಸ್ವಪ್ರಕಾಶತ್ವವನ್ನು ಶಂಕಿಸುತ್ತಾರೆ.

### ॥ न आत्मन इति॥

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

ಇಲ್ಲಿ ಶ್ರೀಸತ್ಯನಾಥರು, ಆತ್ಮನು ಸ್ವಪ್ರಾಕಾಶನಾದುದರಿಂದ ಅನುಮಾನದಿಂದ ಆತ್ಮನ ದೃಶ್ಯತ್ವವನ್ನು ಸಾಧಿಸಲಾಗುವದಿಲ್ಲ ಎಂಬ ಪರಪಕ್ಷದವರ ಪ್ರತಿಪಾದನೆಯನ್ನು ನಿರಾಕರಿಸಿ, ಆತ್ಮನು ಸ್ವಪ್ರಕಾಶನಾದರೂ, ಅವನಲ್ಲಿ ದೃಶ್ಯತ್ವವನ್ನು ಪ್ರತಿಪಾದಿಸಲು ಅನುಮಾನವನ್ನು ಪ್ರಯೋಗಿಸಬಹುದು ಎಂದು ತೋರಿಸುತ್ತಾರೆ. ಇಂತಹ ಜ್ಞಾನದೂಟಕ್ಕೆ ಎಲ್ಲಿಯಾದರೂ ಸಾರಿ ಉಂಟೆ?

**ननु आत्म दृश्यत्व अभाव व्युत्पादनाय अनुमान प्रयोगः अनुपपन्नः। अस्य अनुमानस्य तत् असाधकत्वात्। तत् साधकत्व अङ्गीकारे आत्मन एतत् जन्य ज्ञानविषयत्वेन दृश्यत्व आपातात्। न**



**हि अनुमानं स्वजन्यज्ञानविषयकत्व चिदर्थस्य साधकं वा भवति। अन्यथा अतिप्रसङ्गात्। अपराधीन प्रकाशत्वेऽपि बाधक अभावेन दृश्यत्व सम्भवात्, अप्रयोजकं च अनुमानं इति चेत्।**

ಆತ್ಮನ ದೃಶ್ಯತ್ವದ ಅಭಾವತೆಯನ್ನು ತೋರಿಸಲು ಅನುಮಾನದ ಪ್ರಯೋಗವು ಯುಕ್ತವೆನಿಸುವದಿಲ್ಲ. ಅನುಮಾನವು ಅದರ ಅಸಾಧಕವಾಗಿರುತ್ತದೆ. ಒಂದು ವೇಳೆಅ ಅನುಮಾನವು ಅದರ ಸಾಧಕವಾಗುತ್ತದೆ ಎಂದು ಅಂಗೀಕರಿಸಿದರೆ ಆತ್ಮನು ಈ ಅನುಮಾನ ಜನ್ಯ ಜ್ಞಾನವಿಷಯತ್ವವನ್ನು ಹೊಂದುವನಾದ್ದರಿಂದ ಅವನಲ್ಲಿ ದೃಶ್ಯತ್ವ ಉಂಟಾಗುತ್ತದೆ ಎಂದು ಹೇಳಬೇಕಾಗುತ್ತದೆ. ಹಾಗೂ ಅನುಮಾನವು ಸ್ವಜನ್ಯ ಜ್ಞಾನವಿಷಯಕತ್ವ ಚಿತ್ ಅರ್ಥದ ಸಾಧಕವಾಗಲು ಸಾಧ್ಯವಿಲ್ಲ. ಅನ್ಯಥಾ ಅತಿಪ್ರಸಂಗ ಉಂಟಾಗುತ್ತದೆ. ಇನ್ನು ಆತ್ಮನು ಅಪರಾಧೀನ ಪ್ರಕಾಶನಾದರೂ ಯಾವದೆ ಬಾಧಕವಿಲ್ಲದ ಕಾರಣ ದೃಶ್ಯತ್ವ ಸಂಭವಿಸಬಹುದು, ಹೀಗಾಗಿಯೂ ಅನುಮಾನವು ಅಪ್ರಯೋಜಕವೇ ಆಗುತ್ತದೆ ಎನ್ನುತ್ತೇವೆ ಅಂದರೆ?

**उच्यते। एवं परो मन्यते, न आत्मा एतत् अनुमानजन्य ज्ञानविषयः। येन उक्त दोषः स्यात्। किं नाम, एतत् अनुमान अभिव्यक्त आत्मरूप प्रकाश विषयः वृत्तिविषये प्रयुज्यमानं अनुमानं वृत्तिजनकम्। तत् अविषये प्रयुज्यमानं स्वरूपज्ञान अभिव्यञ्जकम्। एवं च दृश्यत्व व्यतिरेक साधकत्वात् अनुमान प्रयोग उपपन्नः। न च अप्रयोजकता।**

ಅದಕ್ಕೆ ಹೇಳುತ್ತೇವೆ. ಆತ್ಮಾ ಅನುಮಾನಜನ್ಯ ಜ್ಞಾನದ ವಿಷಯನಾಗಲಾರಾ ಎಂದು ಪರಪಕ್ಷದರು ಮನ್ನಿಸುತ್ತಾರೆ. ಅದರಿಂದ ಮೇಲಿನ ದೋಷಗಳಿಗೆ ಆಸ್ಪದವಿದೆ. ಅಂದರೆ ತಮ್ಮ ಅಭಿಪ್ರಾಯವೇನು? ಈ ಅನುಮಾನದಿಂದ ಅಭಿವ್ಯಕ್ತವಾದ ಆತ್ಮರೂಪ ಪ್ರಕಾಶ ವಿಷಯವು, ವೃತ್ತಿವಿಷಯದಲ್ಲಿ ಪ್ರಯೋಗಿಸಲ್ಪಟ್ಟ ಅನುಮಾನವು, ಅದು ವೃತ್ತಿಜನಕವಾಗುತ್ತದೆ. ಹಾಗೆಯೆ, ಆತ್ಮನ ಅವಿಷಯದಲ್ಲಿ ಪ್ರಯೋಗಿಸಿದ ಅನುಮಾನವು ಆತ್ಮನ ಸ್ವರೂಪಜ್ಞಾನದ ಅಭಿವ್ಯಂಜಕವಾಗುತ್ತದೆ. ಹೀಗೆ ದೃಶ್ಯತ್ವ ವ್ಯತಿರೇಕ ಸಾಧಕವಾಗುವದರಿಂದ, ಅನುಮಾನ ಪ್ರಯೋಗ ಸಾರ್ಥಕವಾಗುತ್ತದೆ ವಿನಹ ಅಪ್ರಯೋಜಕವೆನ್ನಲು ಬರುವದಿಲ್ಲ.

**यत् स्वप्रकाशत्वं तत् न दृश्यं इति व्याप्तेः। स्वरूप प्रकाशेन एव सिद्ध्या हेतुं अङ्गीकृत्य, साध्य अनङ्गीकारे हेतुछेदस्यैव बाधकत्वात्, न हि व्यापक अभावे व्याप्तं सम्भवति इति।**

ಇನ್ನು ಯಾವದು ಸ್ವಪ್ರಕಾಶವಾದುದೊ ಅದು ದೃಶ್ಯವಲ್ಲ ಎಂಬ ವ್ಯಾಪ್ತಿಯಲ್ಲಿ, ಸ್ವರೂಪವು ಪ್ರಕಾಶದಿಂದಲೇ ಸಿದ್ಧಿಸುವದು ಎಂಬ ಹೇತುವನ್ನು ಅಂಗೀಕರಿಸಿ ದೃಶ್ಯತ್ವ ಎಂಬ ಸಾಧ್ಯವನ್ನು ಅನಂಗೀಕರಿಸಿದಲ್ಲಿ, ಹೇತುಛೆದವೇ ಬಾಧಕವಾಗುವದರಿಂದ , ವ್ಯಾಪಕದ ಅಭಾವತೆಯಲ್ಲಿ ವ್ಯಾಪ್ತಿ ಸಂಭವಿಸಲು ಸಾಧ್ಯವೆ ಇಲ್ಲ.

### ॥ दृश्यत्वं इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**वृत्ति अधीन प्रकाशत्वरूप वृत्तिविषयत्वाख्य दृश्यत्वं इत्यर्थः।**

ಇಲ್ಲಿ दृश्यत्वं ಎಂದರೆ ವೃತ್ತಿ ಅಧೀನ ಪ್ರಕಾಶತ್ವರೂಪ ವೃತ್ತಿವಿಷಯದಿಂದ ಕೂಡಿದ, ಅಂದರೆ ವೃತ್ತಿವಿಷಯಾತ್ಮಕವಾದದ್ದು ಎಂದರ್ಥ.

## ॥ तस्य इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**कुत इत्यत आह– तस्य इति॥**
**अपराधीन प्रकाशत्वात्, पराधीन प्रकाशत्व अभावात् स्वप्रकाशत्वात् इत्यर्थः।**

ಇಲ್ಲಿ, ಆತ್ಮನಿಗೆ ದೃಶ್ಯತ್ವ ಹೇಳುವದು ಯುಕ್ತವಲ್ಲವೆಂದು ಹೇಗೆ ಹೇಳಲಾಗುತ್ತಿದೆ? ಇದಕ್ಕೆ ಉತ್ತರರೂಪವಾಗಿ ಈ ಟೀಕಾವಾಕ್ಯ ಹೊರಟಿರುತ್ತದೆ.

अपराधीन प्रकाशत्वात् ಅಂದರೆ, ಬೇರೆ ಪ್ರಕಾಶವನ್ನವಲಂಬಿಸಿ ಪ್ರಕಾಶವಾಗುವದಲ್ಲ, ಅಂದರೆ ಸ್ವಪ್ರಕಾಶವಾದುದು ಎಂದರ್ಥ.

## ॥ मम इत्यादिना अङीकार्यम् इत्यन्तेन ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**आत्मनः स्वप्रकाशत्वं उपपादयितुं प्रकाशमात्रं तावत् उपपादयति–मम इत्यादिना अङ्गीकार्यं इत्यन्तेन॥**

ಇಲ್ಲಿ मम ದಿಂದ ಪ್ರಾರಂಭಗೊಂಡು अङ्गीकार्यं ಎಂಬ ಪದದಿಂದ ಮುಕ್ತಾಯವಾಗುವ ಟೀಕಾವಾಕ್ಯಗಳು, ಆತ್ಮನು ಸ್ವಪ್ರಕಾಶನು ಎಂದು ಯುಕ್ತಿಯಿಂದ ಸಮರ್ಥಿಸಲು ಅವನು प्रकाशमात्र ಎಂದು ಪ್ರತಿಪಾದಿಸುತ್ತವೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**आत्मनः स्वप्रकाशतां उपपादयितुं प्रकाशमात्रं तावत् उपपादयति–मम इदं इति॥**
**"मम इदं अनुकूलं" इत्यादि ज्ञानस्य अहं अर्थविशिष्ट अनुकूलादि वस्तु प्रकाशत्वेन अवच्छेदक आत्मप्रकाशः अङ्गीकार्यः। दण्ड्यादिलक्षण अवच्छिन्न प्रकशस्य दण्डादिलक्षण अवच्छेदक प्रकाश साहित्यनियम दर्शनात् इत्यर्थः।**

ಆತ್ಮನು ಸ್ವಪ್ರಕಾಶನು ಎಂದು ಯುಕ್ತಿಯಿಂದ ಪ್ರತಿಪಾದಿಸಲು ಅವನು प्रकाशमात्र ಎಂದು ಈ ಟೀಕಾವಾಕ್ಯ ಪ್ರತಿಪಾದಿಸುತ್ತದೆ. ಇಲ್ಲಿ "मम इदं अनुकूलं"(ಇದು ನನಗೆ ಅನುಕೂಲವಾದದ್ದು) ಎಂಬ ಮುಂತಾದ ಜ್ಞಾನವು, अहं (ನಾನು) ಪದದ ಅರ್ಥವಿಶಿಷ್ಟ ಅನುಕೂಲಾದಿ ವಸ್ತುವಿನ ಪ್ರಕಾಶದಿಂದ ಉಂಟಾದ, ಅವಚ್ಛೆದಕ ಅಂದರೆ ವಿಶೇಷಣೀಭೂತ ಆತ್ಮಪ್ರಕಾಶವೆಂದು ಅಂಗೀಕರಿಸಬೇಕು.

ದಂಡ್ಯಾದಿಲಕ್ಷಣದಿಂದ ಬೇಪಡಿಸಲ್ಪಟ್ಟ ಪ್ರಕಾಶವು, ದಂಡ್ಯಾದಿಲಕ್ಷಣದಿಂದ ವಿಶೇಷಣೀಭೂತವಾದ ಪ್ರಕಾಶದಿಂದ ಕೂಡಿದ್ದಾಗಿರುತ್ತದೆ ಎಂಬ ನಿಯಮ ಇಲ್ಲಿ ಕಂಡುಬರುತ್ತದೆ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:



**ननु परिशेषेण स्वप्रकाशत्व साधनाय, मम इदं अनुकूलं प्रतिकूलं इति अवच्छिन्न प्रकाश उपन्यासो न युक्तः, परिशेष अभाव प्रसङ्गात्।**

ಇಲ್ಲಿ ಒಂದು ಶಂಕೆ, ಅದನ್ನು ಹೀಗೆ ವಿವರಿಸಬಹುದುಃ ಪರಿಶೇಷ ನ್ಯಾಯದಿಂದ ಸ್ವಪ್ರಕಾಶತ್ವವನ್ನು ಸಾಧಿಸಲು मम इदं अनुकूलं प्रतिकूलं इति ಎಂಬ ಅವಚ್ಛಿನ್ನ ಪ್ರಕಾಶದಿಂದ ಕೂಡಿದ ವಿಮರ್ಶೆ ಯುಕ್ತವಲ್ಲ. ಏಕೆಂದರೆ ಅಲ್ಲಿ ಪರಿಶೇಷವಾಗಿ ಏನು ಇಲ್ಲದಿರುವ ಪ್ರಸಂಗ ಉಂಟಾಗುತ್ತದೆ.

**न हि मम इदं अनुकूलं प्रतिकूलं इति मानसज्ञानविषयत्वं अभ्युपगम्य तस्य मानसवेदनीयताया वृत्तिविरोधात् इति तत् निषेधो युज्यते। किंच मम इदं अनुकूलं प्रतिकूलं इति वृत्तिविषयत्वरूप दृश्यत्वस्य अवर्जनीयत्वात् स्वप्रकाशसाधन वैयर्थ्यम्।**

ಇಲ್ಲಿ मम इदं अनुकूलं प्रतिकूलं इति ಎಂದು, ಮಾನಸವಿಷಯತ್ವವನ್ನು ಅಂಗೀಕರಿಸಿ, ಅದನ್ನು ಮಾನಸವೇದನೀಯ ಎಂದೆನ್ನುತ್ತ ವೃತ್ತಿ ವಿರೋಧ ಬರುವದರಿಂದ ಅದನ್ನು ನಿಷೇಧಿಸುವದು ಯುಕ್ತವೆನಿಸುವದಿಲ್ಲ. ಮತ್ತು मम इदं अनुकूलं प्रतिकूलं इति ಎಂಬ ವೃತ್ತಿವಿಷಯತ್ವರೂಪ ದೃಶ್ಯತ್ವವನ್ನು ವರ್ಜಿಸಲು ಸಾಧ್ಯವಿಲ್ಲವಾದ್ದರಿಂದ, ಅದು ಸ್ವಪ್ರಕಾಶ ಸಾಧನವೆನ್ನುವದು ವ್ಯರ್ಥವೇ ಸರಿ.

**न हि वृत्तिविषयत्वं उपजीव्य सिद्धं स्वप्रकाशत्वं, वृत्तिविषयत्व प्रतिक्षेपाय अलं, यतः स्वप्रकाशसाधनं सार्थक स्यात इति चेत् उच्यते।**

ಇನ್ನು ವೃತ್ತಿವಿಷಯತ್ವ ಉಪಜೀವ್ಯದಿಂದ ಸಿದ್ಧವಾದ ಸ್ವಪ್ರಕಾಶತ್ವವು ವೃತ್ತಿವಿಷ್ಯತ್ವವನ್ನು ತ್ಯಜಿಸಲು ಅಥವಾ ಪೂರ್ಣತಃ ವರ್ಜಿಸಲು ಸಮರ್ಥವಾಗಿರುತ್ತದೆ, ಆದ್ದರಿಂದ ವೃತ್ತಿವಿಷಯವು ಸ್ವಪ್ರಕಾಶ ಸಾಧಕವಾಗುತ್ತದೆ ಎಂದು ಅನ್ನಲ್ಲಿಕ್ಕೆ ಆಗುವದಿಲ್ಲ ಎಂದರೆ, ಅದಕ್ಕೆ ಹೇಳುತ್ತೇವೆ.

**एवं हि पूर्वपक्षी मन्यते। विषयविशिष्टज्ञानं विशिष्टैव दृश्यत्वापादकम्। न विशेषणस्य विशिष्ट ज्ञानत्वात्। अन्यथा पटज्ञान प्रयुक्तं दृश्यत्वं घटस्यापि स्यात्। न च विशिष्ट ज्ञानं विशेषणस्यापि ज्ञानं विशिष्टज्ञानं इति प्रसिद्धिवत् विशेषणज्ञानं इत्यपि प्रसिद्धि प्रसङ्गात्। कथं तर्हि विशिष्टज्ञाने विशेषणस्य प्रकाशप्रवाद इति चेत्।**

ಪೂರ್ವಪಕ್ಷದವರು ಹೀಗೆ ಮನ್ನಿಸುತ್ತಾರೆ. ವಿಷಯವಿಶಿಷ್ಟಜ್ಞಾನವು ವಿಶಿಷ್ಟವನ್ನೇ ದೃಶ್ಯತ್ವವನ್ನುಂಟುಮಾಡುತ್ತದೆ. ವಿನಹಾ ವಿಶೇಷಣದ ವಿಶಿಷ್ಟ ಜ್ಞಾನವನ್ನಲ್ಲ. ಅನ್ಯಥಾ ಪಟದ ಜ್ಞಾನ ಪ್ರಯುಕ್ತವಾದ ದೃಶ್ಯತ್ವವು ಘಟದ ಜ್ಞಾನವುಂಟು ಮಾಡುತ್ತದೆ ಎಂದು ಹೇಳಬೇಕಾದೀತು. ಹಾಗೂ ವಿಶಿಷ್ಟದ ಜ್ಞಾನವು ವಿಶೇಷಣದ ಜ್ಞಾನವನ್ನು ಕೂಡ ಮಾಡಿಕೊಡುತ್ತದೆಂದು ವಿಶಿಷ್ಟಜ್ಞಾನವೆಂದು ಪ್ರಸಿದ್ಧವಿರುವಂತೆ, ಅದರಂತೆಯೇ ವಿಶೇಷಣಜ್ಞಾನ ಕೂಡ (ವಿಶಿಷ್ಟ ಜ್ಞಾನ ಮಾಡಿಕೊಡುತ್ತದೆ) ಹಾಗೆ ಪ್ರಸಿದ್ಧಿ ಹೊಂದವ ಪ್ರಸಂಗವದು ಎಂದರೆ, ಅದು ಹಾಗಾಗಲು ಸಾಧ್ಯವಿಲ್ಲ. ಹೀಗಿದ್ದಾಗ ವಿಶಿಷ್ಟ ಜ್ಞಾನವಾದಾಗ ವಿಶೇಷಣದ ಪ್ರಕಾಶದ ಪ್ರವಾದವೇಕೆ? ಎಂದು ಎನ್ನುವದಾದರೆ,

**उच्यते। विशिष्टज्ञानं विशेषणज्ञानं न आन्तरीयकं इति, ज्ञानयोः विवेकाग्रहात्। विशिष्ट ज्ञाने विशेषण भासत इति प्रवादः। न च एवं सति, मानसवेद्यत्व अनुपपत्तिः भवति। मानसविशिष्ट ज्ञानविषयत्व अनङ्गीकारात्।**

ಹೇಳುತ್ತೇವೆ, ವಿಶಿಷ್ಟಜ್ಞಾನ ಮತ್ತು ವಿಶೇಷಣ ಜ್ಞಾನ, ಇವುಗಳು ವಸ್ತುಗೆ ಆಂತರಿಕವಲ್ಲ, ಎಂದು ಆ ಜ್ಞಾನಗಳನ್ನು ವಿವೇಕದಿಂದ ಗ್ರಹಿಸಲಾಗಿದೆ. ಇನ್ನು ವಿಶಿಷ್ಟ ಜ್ಞಾನವಾದಾಗ ವಿಶೇಷಣ ಕೂಡ ಪ್ರಕಾಶಿಸುತ್ತದೆ ಎಂಬ ಪ್ರವಾದವಿರುತ್ತದೆ. ಹೀಗಾಗದಿದ್ದಲ್ಲಿ ಮಾನಸ ತಿಳುವಳಿಕೆಯನ್ನು ಕೂಡ ಯೋಗ್ಯವಲ್ಲವೆನ್ನಬೇಕಾಗುತ್ತದೆ. ಆತ್ಮನಲ್ಲಿ ಮಾನಸವಿಶಿಷ್ಟ ಜ್ಞಾನವಿಷಯತ್ವವನ್ನು ನಾವು (ಪರಪಕ್ಷದವರು) ಅಂಗೀಕರಿಸಿರುವದಿಲ್ಲ.

**तदिदं उक्तं –अवच्छेदक आत्मप्रकाश न आन्तरीयकत्वात् इति॥**

ಇದನ್ನು ಸ್ಪಷ್ಟ ಪಡಿಸಲೆಂದೇ ಹೇಳಿದ್ದು ಅವಚ್ಛೆದಕ (ವಿಶೇಷಣೀಭೂತ) ಆತ್ಮಪ್ರಕಾಶ ನಿಯತಕಾಲಿಕವಲ್ಲ.

**अत एव न स्वप्रकाशत्व साधन वैयर्थ्यं। तस्य दृश्यत्वं उपजीव्य अप्रवृत्तत्वेन तत् प्रतिक्षेपत्व सम्भवात्।**

ಆದ್ದರಿಂದ ವೃತ್ತಿವಿಷಯತ್ವ ದೃಶ್ಯತ್ವವು ಸ್ವಪ್ರಕಾಶತ್ವವನ್ನು ಸಾಧಿಸಲು ವೈಯರ್ಥವಾಗುವದಿಲ್ಲ. ಅಂತಹ ದೃಶ್ಯತ್ವವು ಉಪಜೀವ್ಯ ಅಪ್ರವೃತ್ತತ್ವವಾದ್ದರಿಂದ ಅದನ್ನು ತ್ಯಜಿಸುವ ಸಂಭವವನ್ನು ಅಲ್ಲಗೆಳೆಯಲು ಬರುವದಿಲ್ಲ.

## ॥ इति वा विज्ञानस्य इति ॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**अनेन विप्रतिपन्नं विज्ञानं अवच्छेदकीभूत आत्मप्रकाश पूर्वकं तत् अवच्छिन्न विषयक ज्ञानत्वात्। यत् यत् अवच्छिन्न विषयकं विज्ञानं तत् तत् अवच्छेदक प्रकाशपूर्वकम्। यथा दण्डी देवदत्त इति दण्ड अवच्छिन्न देवदत्त विषयकं विज्ञानं अवच्छेदक दण्ड प्रकाशपूर्वकं इति अनुमानं उक्तं भवति।**

ಇದರಿಂದ, ವಿವಾದಾಸ್ಪದವಾದ ವಿಜ್ಞಾನವು, ಅವಚ್ಛೇದಕದಿಂದ ಕೂಡಿದ ಆತ್ಮಪ್ರಕಾಶಪೂರ್ವಕವಾದದ್ದು, ಅದು ಅದರ ಅವಚ್ಛಿನ್ನ (ಬೇರ್ಪಡಿಸಲ್ಪಡುವ) ವಿಷಯಕ ಜ್ಞಾನವಾಗಿರುತ್ತದೆ ಎಂದು ತಿಳಿದುಬರುತ್ತದೆ. ಅಂದರೆ ಯಾವ ಯಾವ ಅವಚ್ಛಿನ್ನ (ಒಂದು ವಸ್ತುವಿನಿಂದ ಬೇರ್ಪಡಿಸಲ್ಪಟ್ಟ ತುಂಡು ) ವಿಷಯಕ ವಿಜ್ಞಾನವೋ ಅದೆಲ್ಲ ಆ ಆ ಅವಚ್ಛೆದಕ್ ( ಒಂದು ವಸ್ತುವನ್ನು ಭಾಗಗಳನ್ನಾಗಿ ಬೇರ್ಪಡಿಸುವ ವಸ್ತು) ಪ್ರಕಾಶ ಪೂರ್ವಕ ವಾದದ್ದಾಗಿರುತ್ತದೆ. ಉದಾಃ ದಂಡವನ್ನು ಹಿಡಿದ ದೇವದತ್ತ.

ಅಂದರೆ, ದಂಡದಿಂದ ಅವಚ್ಛಿನ್ನ ದೇವದತ್ತ ವಿಷಯಕ ವಿಜ್ಞಾನವು, ಅವಚ್ಛೇದಕ ದಂಡದ ಪ್ರಕಾಶಪೂರ್ವಕವಾದದ್ದು. ಎಂಬ ಅನುಮಾನವನ್ನು ಇಲ್ಲಿ ಹೇಳಿದಂತಾಯಿತು.



**न च उक्तरूप ज्ञान सद्भावे मान अभावात् आश्रयासिद्धिः अनुकूल विषयक प्रवृत्तेः, प्रतिकूल निवृत्तेश्च उक्तरूप ज्ञान साध्यतया तत् अभावे असम्भवेन तत् अन्यथा अनुपपत्त्यैव तत् सिद्धेः इति भावः।**

ಮತ್ತು, ಪರಪಕ್ಷದವರು ಪ್ರತಿಪಾದಿಸಿದಂತಹ ಸ್ವಪ್ರಕಾಶತ್ವರೂಪ ಜ್ಞಾನ ಇರುವದಕ್ಕೆ ಯಾವ ಪ್ರಮಾಣವಿಲ್ಲದಾಗ ಆಶ್ರಯಾಸಿದ್ಧಿ ದೋಷವಿದೆ ಎಂದು ಹೇಳಲಿಕ್ಕಾಗುವದಿಲ್ಲ. ಏಕೆಂದರೆ, ಅನುಕೂಲ ವಿಷಯಕ ಪ್ರವೃತ್ತಿ, ಮತ್ತು ಪ್ರತಿಕೂಲ ನಿವೃತ್ತಿ ಮುಂತಾದ ಹೇಳಿದಂತಹ ಜ್ಞಾನ ಸಾಧಿಸುತ್ತ, ಅವುಗಳ ಜ್ಞಾನ ಇಲ್ಲವೆಂದಾಗಲು ಅಸಂಭವಾದ್ದರಿಂದ, ಅದರ ಹೊರತಾಗಿ ಎಲ್ಲವೂ ಅಸಂಗತವೆನಿಸುವದರಿಂದ, ಸ್ವಪ್ರಕಾಶತ್ವ ಜ್ಞಾನವು ಸಿದ್ಧವಾಗುವದು ಎಂಬ ಭಾವವಿರುತ್ತದೆ.

## ॥ अवच्छिन्न प्रकाशत्वेन इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**अहं अर्थ विशेषणक अनुकूलादि वस्तु विशेष्यक विशिष्ट ज्ञानत्वेन इत्यर्थः।**

ನಾನು ಅನ್ವರ್ಥ ವಿಶೇಷಣಕ ಅಂದರೆ ನನ್ನ ಪ್ರತಿ ಸಂಬಂಧಿಸಿದ, ಅನುಕೂಲಾದಿ ವಸ್ತು ವಿಶೇಷ್ಯಕ ವಿಶಿಷ್ಟ ಜ್ಞಾನತ್ವದಿಂದ ಎಂದರ್ಥ.

## ॥ अवच्छेदक इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**विशेषणीभूत इत्यर्थः।**

ಇಲ್ಲಿ ಅವಚ್ಛೆದಕ ಎಂದರೆ ವಿಶೇಷಣದಿಂದ ಕೂಡಿದ್ದು ಎಂದರ್ಥ.

## ॥ न आन्तरीयकत्वात् इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**नियतत्वात्। दण्डि इत्यादि विशिष्ट ज्ञानस्य दण्डादिरूप विशेषण ज्ञान सापेक्षत्व दर्शनात् इत्यर्थः।**

ಎರಡನೆ ಜ್ಞಾನದ ಜೊತೆ ನಿಯತವಾಗಿರುತ್ತದೆ ಎಂದರ್ಥ. ಉದಾಃ ದಂಡಿ (ದಂಡವನ್ನು ಹಿಡಿದುಕೊಂಡ ಮನುಶ್ಯ) ಇತ್ಯಾದಿ ವಿಶಿಷ್ಟ ಜ್ಞಾನವು, ದಂಡಾದಿರೂಪ ವಿಶೇಷಣ ಜ್ಞಾನ ಸಾಪೇಕ್ಷತ್ವವಾಗಿರುತ್ತದೆ ಎಂದು ಕಾಣಬಹುದಾಗಿದೆ ಎಂದರ್ಥ.

## ॥ तस्य च मानसवेदनीयतायां इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**एवं आत्मनः प्रकाशमात्र उपपाद्य, तस्य अपराधीन प्रकाशत्वरूप स्वप्रकाशत्व सिद्धये, पराधीन प्रकाशत्व पक्षे, किम् नैयायिकरीत्या मानसवेद्यत्वं अङ्गीक्रियते उत प्राभाकररीत्या स्वप्रकाशज्ञानाश्रयतया आत्मप्रकाश इति विकल्प्य आद्यं निषेधति– तस्य इति॥**

ಈವರೆಗೆ ಆತ್ಮನು ಪ್ರಕಾಶಮಾತ್ರನಾಗಿದ್ದಾನೆ ಎಂದು ಸಮರ್ಥಿಸಿ, ಅವನ ಅಪರಾಧೀನ ಪ್ರಕಾಶತ್ವರೂಪ ಸ್ವಪ್ರಕಾಶತ್ವವನ್ನು ಸಿದ್ಧಮಾಡಲು, ಪರಾಧೀನ ಪ್ರಕಾಶತ್ವ ಪಕ್ಷದಲ್ಲಿ, ಏಕೆ ನೈಯಾಯಿಕರಂತೆ ಮಾನಸ ವೇದ್ಯತ್ವವನ್ನು (ತಿಳುವಳಿಕೆಯನ್ನು) ಅಂಗೀಕರಿಸುತ್ತೀರೊ? ಅಥವಾ ಪ್ರಾಭಾಕರಂತೆ ಸ್ವಪ್ರಕಾಶ ಜ್ಞಾನಾಶ್ರಯರೂಪ ಆತ್ಮಪ್ರಕಾಶ ವನ್ನೊ? ಎಂದು ವಿಕಲ್ಪಿಸಿ ಮೊದಲನೆ ಪಕ್ಷವಾದ ನೈಯಾಯಿಕ ಪಕ್ಷವನ್ನು ಈ ಟೀಕಾವಾಕ್ಯ ನಿಷೇಧಿಸುತ್ತದೆ.

**अहं इति मानसवेद्यत्वं अङ्गीकार इत्यर्थः।**

ಅಂದರೆ ಇಲ್ಲಿ, ನಾನು ಎಂದು ಮಾನಸತಿಳುವಳಿಕೆಯನ್ನು ಅಂಗೀಕಾರ ಮಾಡಲಾಗಿದೆ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**एवं आत्मनः प्रकाशमात्रं उपपाद्य तस्य अपराधीन प्रकाशत्व सिद्धये नैयायिका अंगीकृतां मानसवेद्यतां तावत् निषेधति– तस्य इति॥**

ಹೀಗೆ ಆತ್ಮನು ಪ್ರಕಾಶಮಾತ್ರ ಎಂದು ಸಮರ್ಥಿಸಿ, ಅವನ ಅಪರಾಧೀನ ಪ್ರಕಾಶತ್ವವನ್ನು ಸಿದ್ಧಿಸಲು ನೈಯಾಯಿಕರು ಅಂಗೀಕರಿಸಿದ ಮಾನಸ ವೆದ್ಯತ್ವವವನ್ನು ಈ ಟೀಕಾ ವಾಕ್ಯವು ನಿರಾಕರಿಸುತ್ತದೆ.

**आत्मनो मनोजन्य स्वनिष्ठज्ञानवेद्यत्वे स्वनिष्ठक्रियायाः स्वस्मिन विषये वृत्तिः आपद्येत। सा च अयुक्ता। देवदत्तगताया गतेः तद्विषयत्व अदर्शनात् इत्यर्थः।**

ಆತ್ಮನು ಮನೊಜನ್ಯ ಸ್ವನಿಷ್ಠ ಜ್ಞಾನದಿಂದ ತಿಳಿಯಲ್ಪಟ್ಟಿದ್ದಾನೆ ಎಂದರೆ, ಅವನಿಗೆ ಸ್ವನಿಷ್ಠ ಕ್ರಿಯೆಗಳ ತನ್ನ ವಿಷಯಗಳಲ್ಲಿ ವೃತ್ತಿ ಉಂಟಾಗುತ್ತದೆ ಎಂದೆನ್ನಬೇಕಾಗುತ್ತದೆ. ಹಾಗೆ ಹೇಳುವದು ಅಯುಕ್ತವೆನಿಸುತ್ತದೆ. ದೇವದತ್ತಗತ ಕ್ರಿಯೆಗಳ ವಿಷಯತ್ವ ಆತ್ಮನಲ್ಲಿ ಕಂಡುಬರುವದಿಲ್ಲ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**मानसवेदनीयताम् मानस ज्ञानस्य आत्मनिष्ठत्वं न स्यात्। न हि स्वविषयक क्रियायाः स्वनिष्ठत्वं (स्ववृत्तित्वं) सम्भवति। देवदत्त निष्ठायाः गमनादि क्रियायाः अन्यविषयत्वस्य नियमेन दर्शनात् इत्यर्थः। घटं अहं जानामि इत्यादि ज्ञानं आत्मांश, वेद्यांश स्वात्मांशानां प्रकाशरूपम्।**

ಮಾನಸವೇದನೀಯತಾಮ್ ಎಂದರೆ ಮಾನಸ ಜ್ಞಾನವು ಆತ್ಮನಿಷ್ಠತ್ವವಾಗುವದಿಲ್ಲ. ಸ್ವತಃವಿಷಯಕ ಕ್ರಿಯೆಗಳ ಸ್ವನಿಷ್ಠತ್ವ ಅಥವಾ ಸ್ವವೃತ್ತಿತ್ವವಾಗಲು ಸಾಧ್ಯವಿಲ್ಲ. ದೇವದತ್ತ ನಿಷ್ಠ ಓಡಾಡುವ ಕ್ರಿಯೆಗಳು ಅನ್ಯವಿಷಯತ್ವವುಳ್ಳವು ಆಗಿರುತ್ತವೆ ಎಂದು ನಿಯಮದಿಂದ ಕಂಡುಬಂದಿರುತ್ತದೆ ಎಂದರ್ಥ. ಈ ಘಟವನ್ನು ನಾನು ತಿಳಿದಿರುತ್ತೇನೆ ಮುಂತಾದವುಗಳ ಜ್ಞಾನ, ಆತ್ಮಾಂಶ, ವೆದ್ಯಾಂಶ ಮತ್ತು ಸ್ವಾತ್ಮಾಂಶಗಳ ಪ್ರಕಾಶರೂಪವಾಗಿರುತ್ತದೆ.

## ॥ वृत्तिविरोधात् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:



**स्वनिष्ठयाः क्रियायाः स्वविषयत्वे विरोधात्। क्रियाश्रयः कर्ता क्रियाविषयः कर्म तथा च कर्तृत्व कर्मत्वयोः एकत्र वृत्ति विरोधात् इत्यर्थः। तथा हि–**

**मनोजन्य ज्ञानं आत्मनिष्ठं। तथा च आत्मनो मनोजन्य स्वनिष्ठज्ञान वेद्यत्वे स्वनिष्ठक्रियायाः स्वस्मिन् विषये वृत्तिः आपद्येत। न च सा युक्ता। ग्रामादिरूप गम्यविषयक देवदत्तगतेः देवदत्त विषयत्व अदर्शनात् इत्यर्थः।**

ಸ್ವನಿಷ್ಠ ಕ್ರಿಯೆಗಳು ಸ್ವವಿಷಯದಲ್ಲಿ ವಿರುದ್ಧಗಳಾಗಿರುತ್ತವೆ. ಕ್ರಿಯಾಶ್ರಯ ಕರ್ತಾ ಕ್ರಿಯಾವಿಷಯ ಕರ್ಮ ಹಾಗೂ ಕರ್ತೃತ್ವ ಕರ್ಮತ್ವ ಗಳ ಒಂದೆಕಡೆ ಇರೋಣವು ವೃತ್ತಿ ವಿರೋಧವಾಗಿರುತ್ತದೆ ಎಂದರ್ಥ. ಅದನ್ನು ಹೀಗೆ ವಿವರಿಸಬಹುದು:

ಮನೊಜನ್ಯ ಜ್ಞಾನವು ಆತ್ಮನಿಷ್ಠವಾಗಿರುತ್ತದೆ. ಹಾಗೆಯೆ ಆತ್ಮನು ಮನೊಜನ್ಯ ಸ್ವನಿಷ್ಠ ಜ್ಞಾನ ವೇದ್ಯನಾದರೆ ಸ್ವನಿಷ್ಠ ಕ್ರಿಯೆಗಳ ಸ್ವವಿಷಯದಲ್ಲಿ ವೃತ್ತಿಯನ್ನು ಉಂಟುಮಾಡಬೇಕು. ಹಾಗಿರುವದು ಯುಕ್ತವೆನಿಸುವದಿಲ್ಲ. ಉದಾಹರೆಣೆಗೆ ಗ್ರಾಮಾದಿರೂಪ ದೇವದತ್ತಗತ ಗಮ್ಯವಿಷಯಗಳು, ದೇವದತ್ತ ವಿಷಯತ್ವವಾಗುವದು ಎಲ್ಲೂ ಕಂಡುಬಂದಿಲ್ಲ ಎಂದರ್ಥ.

## ॥ संवित्कर्मताम् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**द्वितीयं प्रतिषेधति– संवित्कर्मताम् इति॥**

ಮೇಲೆ ನಮೂದಿಸಿದ ವಿಕಲ್ಪಗಳಲ್ಲಿ ಎರಡನೆ ವಿಕಲ್ಪವಾದ ಪ್ರಾಭಾಕರ ಮತವನ್ನು ಈ ಟೀಕಾವಾಕ್ಯ ನಿಷೇಧಿಸುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**ननु अस्तु आत्मनो मनसोवेदनीयत्व अभावः। तथाऽपि अपराधीन आत्मप्रकाशस्य कुतः? ज्ञानाश्रयत्वेन अपि आत्मनः प्रकाश उपपत्तेः इति भास्करस्य शङ्का निरस्यति–संवित्कर्मताम् इति॥**

ಇರಲಿ, ಆತ್ಮನು ಮಾನಸವೇದನೀಯನಲ್ಲ ಎಂದು, ಹಾಗಿದ್ದರೂ ಅವನು ಅಪರಾಧೀನ ಪ್ರಕಾಶನು ಎಂದು ಹೇಗೆ ಹೇಳುತ್ತೀರಿ? ಜ್ಞಾನಶ್ರಯತ್ವದಿಂದ ಕೂಡ ಆತ್ಮನು ಪ್ರಕಾಶನಾಗಿದ್ದಾನೆ ಎಂದು ಸಮರ್ಥಿಸಬಹುದಾಗಿದೆ ಎಂಬ ಭಾಸ್ಕರರ ಶಂಕೆಯನ್ನು ಈ ಟೀಕಾ ಉತ್ತರಿಸುತ್ತದೆ.

**अयं अर्थः, आत्मा न संवित् अधीन प्रकाशः संवित् कर्मताम् अन्तरेण अपरोक्षत्वात् संवेदनवत्। घटादौ धर्माधर्मादौ च व्यभिचार परिहारार्थं हेतुगतं विशेषण द्वयं। न च नैयायिकान् प्रति विशेषण असिद्धिः। संवित्कर्मत्वे वृत्तिविरोधस्य उक्तत्वात्। न च निदर्शनस्य साध्यवैकल्यम्। संविदः संवित् अन्तराधीन प्रकाशत्वे अनवस्थानात्।**

ಇದರ ಅರ್ಥ ಹೀಗಿರುತ್ತದೆಃ ಆತ್ಮಾ ಜ್ಞಾನಾಧೀನ ಪ್ರಕಾಶನಲ್ಲ, ಅವನು ಜ್ಞಾನ ಕರ್ಮಗಳ ವಿನಾ ಪ್ರತ್ಯಕ್ಷನಾಗುತ್ತದೆ, ಸಂವೆದನಶೀಲದಂತೆ ಅಥವಾ ಸುಷುಪ್ತಿ ಅವಸ್ಥೆಯಂತೆ. ಘಟಾದಿಗಳಲ್ಲಿ ಮತ್ತು ಧರ್ಮಾಧರ್ಮಗಳಲ್ಲಿ ಉಂಟಾಗುವ ವ್ಯಭಿಚಾರವನ್ನು ಪರಿಹರಿಸಲು ಹೇತುವಿಗೆ ಕರ್ಮ ಹಾಗೂ ಪ್ರತ್ಯಕ್ಷ ಎಂಬ ಎರಡು ವಿಶೇಷಣಗಳನ್ನು ಇಡಲಾಗಿದೆ. ಹಾಗೂ

ಈ ವಿಶೇಷಣಗಳು ನೈಯಾಯಿಕರ ಪ್ರತಿ ಅಸಿದ್ಧಿಯನ್ನು ಹೊಂದುವದಿಲ್ಲ. ಜ್ಞಾನಕರ್ಮಗಳಲ್ಲಿ ವೃತ್ತಿ ವಿರೋಧತೆಯನ್ನು ಈಗಾಗಲೆ ಪ್ರತಿಪಾದಿಸಲಾಗಿದೆ. ಮತ್ತು ಈ ನಿದರ್ಶನವು ಸಾಧ್ಯವೈಕಲ್ಯ ಕೂಡ ಎನಿಸುವದಿಲ್ಲ. ಏಕೆಂದರೆ ಜ್ಞಾನವು ಜ್ಞಾನಾಂತರಧೀನ ಪ್ರಕಾಶ ಎಂದು ಹೇಳಿದರೆ, ಅದು ಅನವಸ್ಥಾ ದೋಷವನ್ನುಂಟು ಮಾಡುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**एवं च घटादि सर्वज्ञानेषु आत्मा प्रकाशते। न तु स्वप्रकाश इति मतं दूषयति– संवित् इति॥**

ಈಗ ಘಟಾದಿ ಸರ್ವಜ್ಞಾನಗಳಲ್ಲಿ ಆತ್ಮಾ ಪ್ರಕಾಶಿಸುತ್ತಾನೆ, ವಿನಾ ಸ್ವಪ್ರಕಾಶನಲ್ಲ ಎಂಬ ಮತವನ್ನು ಈ ಟೀಕಾವಾಕ್ಯ ದೂಷಿಸುತ್ತದೆ.

**कस्यापि संवित् कर्मताम् अन्तरेण सुषुप्तिकाल इति शेषः। सुषुप्तिकाले कस्यापि संवित् कर्मतां अन्तरेण घटादिविषयक वृत्ति ज्ञान अभावेऽपि इति यावत्। स्वप्रकाशमानस्य आत्मनः वृत्तिज्ञानाश्रयतया प्रकाशाभिधानं न युज्यते। वैयर्थ्याख्या विरोध अपातात् इत्यर्थः।**

ಇಲ್ಲಿ संवित् कर्मताम् अन्तरेण ಪದಗಳನಂತರ सुषुप्तिकाल ಎಂಬ ಪದವನ್ನು ಸೇರಿಸಿ ಅರ್ಥಮಾಡಬೇಕು. ಸಷುಪ್ತಿಕಾಲದಲ್ಲಿ ಯಾವದೂ ಜ್ಞಾನ ಕರ್ಮಗಳ ವಿನಾ ಘಟಾದಿವಿಷಯಕ ವೃತ್ತಿ ಜ್ಞಾನದ ಅಭಾವದಲ್ಲಿ ಕೂಡ ಅಪರೋಕ್ಷ ಜ್ಞಾನವಿರುವಂತೆ. ಸ್ವಪ್ರಕಾಶನಾದ ಆತ್ಮನಿಗೆ ವೃತ್ತಿಜ್ಞಾನಾಶ್ರಯರೂಪ ಪ್ರಕಾಶವನ್ನು ಹೇಳುವದು ಯುಕ್ತವೆನಿಸುವದಿಲ್ಲ. ಹಾಗೂ ಇದು ವೈಯರ್ಥಾಖ್ಯ ವಿರೋಧವನ್ನುಂಟು ಮಾಡುತ್ತದೆ ಎಂದರ್ಥ.

## ॥ संवित् अधीन इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**संवित् आश्रयतया इत्यर्थः। तथा हि–**

ಆತ್ಮಾ ಜ್ಞಾನಾಶ್ರಯವಾಗಿ ಪ್ರಕಾಶಿಸುತ್ತಾನೆ ಎಂದರ್ಥ.

**आत्मांश–स्वात्मांश–वेद्यांशरूप त्रिपुटि प्रत्यक्षवादि हि प्राभाकरः। तन्मते "घटं अहं जानामि" इति ज्ञानाकारः। तत्र घटं इति वेद्यांशो भासते, अहं इति आत्मांशः, जानामि इति स्वात्मांशः।**

ಆತ್ಮಾಂಶ, ಸ್ವಾತ್ಮಾಂಶ ಮತ್ತು ವೇದ್ಯಾಂಶರೂಪ ಮೂರು ತರಹದ ಪ್ರತ್ಯಕ್ಷವನ್ನು ಪ್ರತಿಪಾದಿಸುವ ವಾದಿಗಳು ಪ್ರಾಭಾಕರ ಮತೀಯರು. ಅವರ ಮತದಲ್ಲಿ, " ಘಟವನ್ನು ನಾನು ತಿಳಿದಿರುತ್ತೇನೆ" ಎಂಬ ಜ್ಞಾನಾಕಾರದಲ್ಲಿ, ಘಟ ಎಂದು ವೇದ್ಯಾಂಶ ಗ್ರಹಿಸುತ್ತದೆ, ನಾನು ಎಂದು ಆತ್ಮಾಂಶ ಗ್ರಹಿಸುತ್ತದೆ ಮತ್ತು ತಿಳಿದಿರುತ್ತೇನೆ ಎಂದು ಸ್ವಾತ್ಮಾಂಶ ಗ್ರಹಿಸುತ್ತದೆ.

**तत्र च आत्मा स्वप्रकाश ज्ञानाश्रयतया प्रकाशत् इतुच्यते तत् अयुक्तम्। आत्मा संवित् आश्रयतया न संवित् अधीनप्रकाशः। संवित् कर्मतां अन्तरेण अपरोक्षत्वात् संवेदनवत् इति अनुमान विरोधात् इत्यर्थः।**

ಅವರ ಮತದಲ್ಲಿ ಆತ್ಮಾ ಸ್ವಪ್ರಕಾಶ ಜ್ಞಾನಾಶ್ರಯನಾಗಿ ಪ್ರಕಾಶಿಸುತ್ತಾನೆ ಎಂದು ಹೇಳುತ್ತಾರೆ. ಅದು ಅಯುಕ್ತವಾಗಿದೆ. ಏಕೆಂದರೆ, "ಆತ್ಮಾ ಜ್ಞಾನಾಶ್ರಯನಾಗಿ ಜ್ಞಾನದ ಅಧೀನಪ್ರಕಾಶನಲ್ಲ,



ಏಕೆಂದರೆ, ಜ್ಞಾನ ಕರ್ಮಗಳ ವಿನಾ ಅಪರೋಕ್ಷನೆನಿಸಿದ್ದಾನೆ ಸಂವೇದನದಂತ್" ಎಂಬ ಅನುಮಾನದ ವಿರೋಧ ಉಂಟಾಗುತ್ತದೆ ಎಂದರ್ಥ.

**संवित् कर्मत्वेन अपरोक्षस्यैव घटादेः संवित् अधीन प्रकाशत्व दृष्टम्। आत्मनश्च संवित् कर्मत्व अभावेऽपि अपरोक्षत्वात् संवित् अधीन प्रकाशत्वं नास्ति इत्यर्थः। अत्र घटादौ व्यभिचारवारणाय संवित् कर्मतां अन्तरेण इत्युक्तम्। संवित् कर्मत्व शून्यत्वात् इत्येव उक्तौ धर्मादौ व्यभिचारस्यात् अतो अपरोक्षत्वात् इत्युक्तम्।**

ಅಂದರೆ, ಜ್ಞಾನಕರ್ಮತ್ವದಿಂದ ಅಪರೋಕ್ಷವಾದ ಘಟಾದಿಗಳಿಗೆ ಜ್ಞಾನಾಧೀನ ಪ್ರಕಾಶತ್ವವು ಕಂಡುಬಂದರೂ, ಆತ್ಮನು ಜ್ಞಾನಕರ್ಮತ್ವದ ಅಭಾವತೆಯಲ್ಲಿ ಕೂಡ ಅಪರೋಕ್ಷನಾದ್ದರಿಂದ ಅವನಲ್ಲಿ ಜ್ಞಾನಾಶ್ರಯ ಅಧೀನ ಪ್ರಕಾಶತ್ವವಿರುವದಿಲ್ಲ ಎಂದರ್ಥ. ಇನ್ನು ಮೇಲೆ ನಮೂದಿಸಿದ ಅನುಮಾನದಲ್ಲಿ, ಘಟಾದಿಗಳಲ್ಲಿ ಉಂಟಾಗುವ ವ್ಯಭಿಚಾರವನ್ನು ಪರಿಹರಿಸಲು संवित् कर्मतां अन्तरेण ಎಂಬ ವಿಶೇಷಣವನ್ನು ಇಡಲಾಗಿದೆ. ಇನ್ನು संवित् कर्मत्व शून्यत्वात् ಎಂದಿಷ್ಟೆ ಹೇಳಿದ್ದರೆ, ಧರ್ಮಾದಿಗಳಲ್ಲಿ ವ್ಯಭಿಚಾರ ಉಂಟಾಗುತಿತ್ತು ಅದ್ದರಿಂದ अपरोक्षत्वात् ಎಂಬ ವಿಶೇಷಣವನ್ನು ಇಡಲಾಗಿದೆ.

**न च नैयायिकादीन् प्रति विशेषण असिद्धिः इति वाच्यम्। मनोजन्याया आत्मनिष्ठयाः संवित् आत्मकर्मकत्वे वृति विरोधस्यैव उक्तत्वात्। न च दृष्टान्तस्य साध्यवैकल्यं शङ्क्यम्। संविदः संवित् अन्तराधीनत्वं अनवस्थापत्तेः इति। इति आह इति सम्बन्धः।**

ಇನ್ನು ನೈಯಾಯಿಕರ ಪ್ರತಿ ಈ ವಿಶೇಷಣಗಳ ಅಸಿದ್ಧಿಯಾಗುತ್ತದೆ ಎಂದು ಹೇಳುವದು ಸರಿಯಲ್ಲ. ಮನೋಜನ್ಯ ಆತ್ಮನಿಷ್ಠಗಳಾದ, ಜ್ಞಾನಾತ್ಮಕರ್ಮಕತ್ವ ವೃತ್ತಿವಿರೋಧಗಳಾಗಿವೆ ಎಂದು ಈಗಾಗಲೆ ಹೇಳಲಾಗಿದೆ. ಇನ್ನು ಅನುಮಾನದ ದೃಷ್ಟಾಂತವು ಸಾಧ್ಯವೈಕಲ್ಯವೆಂಬ ದೋಷಗ್ರಸ್ತವಾಗಿದೆಂಬ ಶಂಕೆಗೆ ಆಸ್ಪದವಿರುವದಿಲ್ಲ. ಸಂವಿತ ಸಂವಿತ್ ಅಂತರಾಧೀನತ್ವವು ಅನವಸ್ಥಾದೋಷವನ್ನುಂಟು ಮಾಡುವದು. ಇವೆಲ್ಲವು ಟೀಕಾ ದಲ್ಲಿಯ आह ಪದದ ಜೊತೆ ಸಂಬಂಧವನ್ನು ಸೂಚಿಸುತ್ತವೆ.

## ॥ परिशेषत इति ॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**प्रसक्त प्रतिषेध अन्यत्र प्रसङ्गात् परिशिष्यमाणे सम्प्रत्ययः परिशेषः।**

**एतदुक्तं भवति, विद्यते तावत् आत्मप्रकाशः। अन्यथा मम इदं अनुकूलं इत्यादि विशिष्ट ज्ञान असम्भवात्। स च न मानसप्रत्यक्षः। नापि विषय संवित् निबन्धनः। न च अनुमानिकः अपरोक्षभाव सत्वात्। न च भ्रान्त्या, बाधक अभावात्। न च अन्यद गत्यन्तर अस्ति, स्वत एव वाच्य इति।**

ಪ್ರಸಕ್ತ ಪ್ರತಿಷೇಧದ ಬೇರೆಕಡೆ ಅನುಷಂಗವಿದ್ದಾಗ ಉಳಿದದ್ದೆಲ್ಲ ಪರಿಶೇಷ.

ಇಲ್ಲಿ ಹೀಗೆ ಹೇಳಿದಂತಾಯಿತು: ಆತ್ಮ ಪ್ರಕಾಶವು ವಿದ್ದೆ ಇದೆ. ಹಾಗಿಲ್ಲದಿದ್ದಲ್ಲಿ, ನನಗೆ ಇದು ಅನುಕೂಲ ಇತ್ಯಾದಿ ವಿಶಿಷ್ಟ ಜ್ಞಾನ ಅಸಂಭವವೆನಿಸುತ್ತದೆ. ಇನ್ನು ಆತ್ಮಪ್ರಕಾಶವನ್ನು

ಮಾನಸಪ್ರತ್ಯಕ್ಷ ಎಂದೆನ್ನಲಾಗುವದಿಲ್ಲ. ಹಾಗೂ ಅದನ್ನು ಜ್ಞಾನ ವಿಷಯಗಳ ಬಂಧನಕ್ಕೊಳಮಾಡಲಾಗುವದಿಲ್ಲ. ಮತ್ತು ಅದರ ಅಪರೋಕ್ಷಭಾವ ಸತ್ಯವಿರುವಾಗ, ಅದನ್ನು ಅನುಮಾನಿಕವೆಂದು ಗಣಿಸಲಾಗುವದಿಲ್ಲ. ಮತ್ತು ಅದನ್ನು, ಯಾವ ಬಾಧಕ ಇರದಾಗ ಅದನ್ನು ಭ್ರಾಂತಿ ಎಂತಲೂ ಅನ್ನುವ ಹಾಗಿಲ್ಲ. ಮತ್ತು ಅನ್ಯ ಯಾವದೆ ಗತ್ಯಂತರ ಇರುವದಿಲ್ಲ, ಹಾಗಾಗಿ ಅದನ್ನು ಸ್ವಪ್ರಕಾಶವೆಂದೆ ಹೇಳಬೇಕು.

### ६.२.३.४ आत्मनः दृश्यत्व समर्थनम्

ಈ ಪರಿಚ್ಛೇದದಲ್ಲಿ, ಆತ್ಮನೂ ದೃಶ್ಯನಾಗಿದ್ದಾನೆ ಎಂದು ಸಮರ್ಥಿಸಲಾಗುವದು

## टीका

**तत्र इदं वक्तव्यं, किम् आत्मनो निरुपाधिकरूपम् अपराधीन प्रकाशं उत सोपाधिकम् अपि। आद्ये किम् अनेन अनुकूल प्रतिकूल सम्बन्धिनः सोपाधिकस्य अपराधीन प्रकाशता प्रतिपादनेन। द्वितीये तु ज्ञानमात्रस्य आत्मनि अवृत्ति प्रसङ्गात्। "सर्वप्रत्ययवेद्ये च ब्रह्मरूपे व्यवस्थिते।" इत्यादि स्ववचनविरोधश्च स्यात्।**

**किंच " आत्मा न पराधीन प्रकाशः" इति वृत्तिविषयो न वा? आद्ये दृश्यत्व आपत्तिः। मूकः अहं इतिवत् स्वक्रियाविरोधश्च। द्वितीये व्यतिरेक असिद्ध्या सन्दिग्ध अनैकान्तिकः।**

ಅಲ್ಲಿ ಇದನ್ನು ಹೇಳಬೇಕುಃ ಏಕೆ, ನಿರುಪಾಧಿಕರೂಪ ಅಂದರೆ, ದೇಹೆಂದ್ರಿಯ ಅಂತಃಕರಣರೂಪ ವಿಶೇಷಗುಣಧರ್ಮಗಳಿಂದ ವಿಶಿಷ್ಟವಲ್ಲದ, ಶುದ್ಧ ಆತ್ಮಾ ಅಪರಾಧೀನ ಪ್ರಕಾಶನೆಂದೆನ್ನುತ್ತೀರೊ? ಅಥವಾ ನಿರುಪಾಧಿಕರೂಪ ಆತ್ಮಾ ಮತ್ತು ಸೋಪಾಧಿಕರೂಪ, ಅಂದರೆ, ದೇಹೆಂದ್ರಿಯ ಅಂತಃಕರಣರೂಪ ವಿಶೇಷಗುಣಗಳಿಂದ ವಿಶಿಷ್ಟನಾದ ಆತ್ಮಾ, ಉಭಯರು ಕೂಡ ಅಪರಾಧೀನ ಪ್ರಕಾಶವೆಂದೆನ್ನುತ್ತೀರೊ? ಎಂಬುದಕ್ಕೆ,

- ಇನ್ನು, ಮೊದಲನೆಯ ವಿಕಲ್ಪದಂತೆ ಕೇವಲ ನಿರುಪಾಧಿಕ ಮಾತ್ರ ಅಪರಾಧೀನ ಪ್ರಕಾಶ ಎನ್ನುವುದಾದರೆ, मम इदं ಎಂದು ಮುಂತಾಗಿ, ಅನುಕೂಲಾದಿ ವಿಶಿಷ್ಟ ಅಂತಃಕರಣ ಸಂಬಂಧಿ ಚೈತನ್ಯರೂಪದ ನಾನು ಎಂಬರ್ಥದ, ಸ್ವಪ್ರಕಾಶತ್ವ ಸಾಧನವು, ಅಸಂಗತವೆನಿಸುತ್ತದೆ.



- ಇನ್ನು ಎರಡನೆಯ ವಿಕಲ್ಪದಂತೆ ನಿರುಪಾಧಿಕರೂಪ ಮತ್ತು ಸೋಪಾಧಿಕರೂಪ, ಉಭಯರೂಪಗಳು ಕೂಡ ಸ್ವಪ್ರಕಾಶತ್ವದಿಂದ, ಅವುಗಳ ಜ್ಞಾನಗಳ ಮಧ್ಯೆ ಯಾವುದರ ಜ್ಞಾನವೇ ಉಂಟಾಗುವದಿಲ್ಲ. ಅದರಂತೆ, "सर्वप्रत्ययवेद्ये च ब्रह्मरूपे व्यवस्थिते" ಎಂಬ ಮುಂತಾದ ಸ್ವವಚನಗಳ ವಿರೋಧ ಕೂಡ ಉಂಟಾಗುತ್ತದೆ ಅಂದರೆ ಸ್ವವಚನವಿರೋಧ ಉಂಟಾಗುತ್ತದೆ ಎಂಬ ಭಾವ.

ಮತ್ತು "ಆತ್ಮಾ ಪರಾಧೀನ ಪ್ರಕಾಶನಲ್ಲ" ಎಂಬುದು ಆತ್ಮನ ವೃತ್ತಿವಿಷಯವಾಗಿದೆಯೋ ಅಥವಾ ಇಲ್ಲವೋ? ಎಂಬ ಪ್ರಶ್ನೆಗೆ

- ಮೊದಲನೆಯ ವಿಕಲ್ಪವೆಂದು ಹೇಳುವದಾದರೆ, ಆತ್ಮನು ವೃತ್ತಿವಿಷಯೀಕರಣ ಹೊಂದುವದರಿಂದ ಆತ್ಮನಲ್ಲಿ ದೃಶ್ಯತ್ವ ಉಂಟಾಗುವ ಪ್ರಸಂಗ ಒದಗುವದು. ಇದರಿಂದ ಅನೈಕಾಂತಿಕ ದೋಷವನ್ನು ಅಲ್ಲಗೆಳೆಯಲು ಸಾಧ್ಯವಿಲ್ಲ.
- ಇನ್ನು ಎರಡನೆ ವಿಕಲ್ಪದಂತೆ ಆತ್ಮನಲ್ಲಿ ವೃತ್ತಿವಿಷಯತ್ವ ಇಲ್ಲವೆಂದರೆ.

  ಇಲ್ಲಿ ದೃಶ್ಯತ್ವ ಹೇತುವಿಗೆ ವ್ಯತಿರೇಕ ವ್ಯಾಪ್ತಿ ಇದೆಯೋ ಇಲ್ಲವೊ ಎಂಬ ಪ್ರಶ್ನೆ ಉದ್ಭವಿಸುವದು, ಅದಕ್ಕೆ,

  - ಇನ್ನು ವ್ಯತಿರೇಕ ವ್ಯಾಪ್ತಿ ಇದೆ ಎನ್ನುವುದಾದರೆ, ಅದನ್ನು ಆತ್ಮನಲ್ಲಿಯೇ ತೋರಿಸಬೇಕು, ಹಾಗೆ ತೋರಿಸಲು ಸಾಧ್ಯವಿಲ್ಲ ಏಕೆಂದರೆ, ಆತ್ಮನಲ್ಲಿ ವೃತ್ತಿವಿಷಯತ್ವವಿಲ್ಲ ಎಂಬ ವೃತ್ತಿವಿಷಯತ್ವರೂಪ ದೃಶ್ಯತ್ವವನ್ನು ಅಲ್ಲಗೆಳೆಯಲು ಸಾಧ್ಯವಿಲ್ಲ. ಅದರಂತೆ, ದೃಶ್ಯತ್ವ ಹೇತುವಿಗೆ ವ್ಯತಿರೇಕ ವ್ಯಾಪ್ತಿ ಇದೆಯೆಂದು ಸಿದ್ಧಮಾಡಲಾಗುವದಿಲ್ಲ.
  - ಇನ್ನು ದೃಶ್ಯತ್ವ ಹೇತುವಿಗೆ ವ್ಯತಿರೇಕ ವ್ಯಾಪ್ತಿ ಇಲ್ಲವಾದಾಗ, ಮಿಥ್ಯಾತ್ವ ಅನುಮಾನಕ್ಕೆ ನಿಶ್ಚಿತ ಸಾಧ್ಯವಿಲ್ಲದಂತಾಗಿ, ಸಾಧನ ಅಭಾವ ನಿಯಮ ಅನಿಶ್ಚತತೆಯಿಂದ, ಅಲ್ಲಿ ಸಾಧನವು ಸಂದೇಹಾಸ್ಪದವೆನಿಸುತ್ತದೆ.

ಆದ್ದರಿಂದ ಸಂದಿಗ್ಧ ಅನೈಕಾಂತಿಕ ದೋಷ ಉಂಟಾಗುತ್ತದೆ ಎಂಬ ಭಾವ.

## टिप्पणीनाम् विशेषार्थानि

### ॥ तत्र इदं इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**परिहरति– तत्र इदं इति॥**

ಮೇಲಿನ ಪ್ರತಿಪಾದಿಸಿದ ಆತ್ಮನು ಸ್ವಪ್ರಕಾಶನಾದ್ದರಿಂದ ದೃಶ್ಯನಲ್ಲ ಎಂಬ ಶಂಕೆಯನ್ನು ಇಲ್ಲಿ ಪರಿಹರಿಸಲಾಗುವದು ಎಂದು ಈ ಟೀಕಾವಾಕ್ಯ ಉಪಕ್ರಮಿಸುತ್ತದೆ.

**निरुपाधिकं देहेन्द्रिय अन्तःकरणरूप उपाधि अविशिष्टं शुद्धम्।**

ನಿರುಪಾಧಿಕ ಎಂದರೆ ದೇಹೇಂದ್ರಿಯ ಅಂತಃಕರಣರುಪ ಉಪಾಧಿಯಿಂದ (ಅಂದರೆ ವಿಶೇಷಣ ಅಥವಾ ಗುಣಧರ್ಮದಿಂದ ) ವಿಶಿಷ್ಟವಲ್ಲದ್ದು, ಅಂದರೆ ಶುದ್ಧವಾದದ್ದು ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**परिहरति– तत्र इदं इति॥**

ಮೇಲಿನ ಪ್ರತಿಪಾದಿಸಿದ ಆತ್ಮನು ಸ್ವಪ್ರಕಾಶನಾದ್ದರಿಂದ ದೃಶ್ಯನಲ್ಲ ಎಂಬ ಶಂಕೆಯನ್ನು ಇಲ್ಲಿ ಪರಿಹರಿಸಲಾಗುವದು ಎಂದು ಈ ಟೀಕಾವಾಕ್ಯ ಉಪಕ್ರಮಿಸುತ್ತದೆ.

## ॥ सोपाधिकम् अपि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**निरुपाधिकं सोपाधिकं च इति उभयमपि अपराधीन प्रकाशं इत्यर्थः।**

ಅಂದರೆ, ನಿರುಪಾಧಿಕ ಆತ್ಮಾ ಮತ್ತು ಸೊಪಾಧಿಕ ಆತ್ಮಾ ಉಭಯರು ಕೂಡ ಅಪರಾಧೀನ ಪ್ರಕಶವುಳ್ಳವರು ಎಂದರ್ಥ.

## ॥ आद्ये इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**निरुपाधिकस्यैव अपराधीन प्रकाशत्वे, अनुकूलादि सम्बन्धिनः चिदचित् संवलनात्मक अहं अर्थ विशिष्टस्य, मम इदं इत्यादिना अपराधीन स्वप्रकाशत्वरूप साधनं असंगतम् इत्यर्थः।**

ಇನ್ನು ಕೇವಲ ನಿರುಪಾಧಿಕ ಮಾತ್ರ ಅಪರಾಧೀನ ಪ್ರಕಾಶ ಎನ್ನುವುದಾದರೆ, ಅನುಕೂಲಾದಿ ಸಂಬಂಧವನ್ನು ಹೊಂದಿದ, ಚಿತ್-ಅಚಿತದಿಂದ ಕೂಡಿದ ನಾನು ಎಂಬಂರ್ಥ ವಿಶಿಷ್ಟ ಮಮ इदं ಇತ್ಯಾದಿಗಳಿಂದ, ಅಪರಾಧೀನ ಸ್ವಪ್ರಕಾಶತ್ವರೂಪ ಸಾಧನವು ಅಸಂಗತ ಎನಿಸುತ್ತದೆ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**आद्यं दूषयति– आद्ये इति॥**

ಇಲ್ಲಿ ಮೊದಲಿನ ವಿಕಲ್ಪವನ್ನು ದೂಷಿಸುತ್ತಾರೆ.

**निरुपाधिकस्यैव अपराधीन प्रकाशत्वे, मम इदं इत्यादिना अनुकूलादि विशिष्टस्य अन्तःकरण सम्बन्धि चैतन्यरूपस्य अहं अर्थस्य स्वयंप्रकाशत्व साधनं असंगतं इत्यर्थः।**

ಇನ್ನು ಕೇವಲ ನಿರುಪಾಧಿಕ ಮಾತ್ರ ಅಪರಾಧೀನ ಪ್ರಕಾಶ ಎನ್ನುವುದಾದರೆ, मम इदं ಎಂದು ಮುಂತಾಗಿ, ಅನುಕೂಲಾದಿ ವಿಶಿಷ್ಟ ಅಂತಃಕರಣ ಸಂಬಂಧಿ ಚೈತನ್ಯರೂಪದ ನಾನು ಎಂಬರ್ಥದ ಸ್ವಪ್ರಕಾಶತ್ವ ಸಾಧನವು ಅಸಂಗತವಾಗಿದೆ ಎಂದರ್ಥ.

## ॥ किम् अनेन इति॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:



**आत्मनोऽपि निरुपाधिकरूपमेव अपराधीन प्रकाशं इत्येतत् कल्पार्थः। अत एव उत सोपाधिकमपि इति उभयोः अपि स्वप्रकाशत्व द्योतकः अपि शब्दः सङ्गच्छते। अन्यथा उत सोपाधिकं इत्येव वक्ष्यत इति द्रष्टव्यम्। आद्य इत्यादिको ग्रन्थः चिरन्तन टिकायां स्पष्टः।**

ಇಲ್ಲಿ, ನಿರುಪಾಧಿಕರೂಪ ಆತ್ಮನೆ ಅಪರಾಧೀನ ಪ್ರಕಾಶನೆಂದು ವಿಕಲ್ಪಾರ್ಥವಾಗಿರುತ್ತದೆ. ಆದ್ದರಿಂದ, उत सोपाधिकमपि इति ಎಂದು ನಿರುಪಾಧಿಕ ಮತ್ತು ಸೊಪಾಧಿಕ ಉಭಯರೂಪಗಳಿಗು ಕೂಡ ಸ್ವಪ್ರಕಾಶತ್ವ ದ್ಯೊತಕ अपि ಶಬ್ದವನ್ನು ಜೋಡಿಸಲಾಗಿದೆ. ಇಲ್ಲವಾದರೆ, उत सोपाधिकं इति ಎಂದಿಷ್ಟೆ ಹೇಳಬಹುದಾಗಿತ್ತು ಎಂದು ತಿಳಿಯತಕ್ಕದ್ದು. ಇನ್ನು आद्य ಮುಂತಾದ ಗ್ರಂಥವು ಚಿರಂತನ ಟೀಕೆಯಲ್ಲಿ ಸ್ಪಷ್ಟವಾಗಿ ವಿವರಿಸಲಾಗಿದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**निरुपाधिकस्य स्वप्रकाशता सिद्ध्यर्थं प्रयतमानस्य, तत् असाधकेन सोपाधिकस्य तत् साधकेन किम् प्रयोजनम् इत्यर्थः।**

ಇನ್ನು ನಿರುಪಾಧಿಕದ ಸ್ವಪ್ರಕಾಶತಾ ಸಿದ್ಧಿಸುವಗೋಸ್ಕರ ಪ್ರಯತ್ನಿಸುವಾಗ, ಅದರ ಅಸಾಧಕವಾದ ಸೊಪಾಧಿಕರೂಪಕ್ಕೆ ಸ್ವಪ್ರಕಾಶವನ್ನು ಸಾಧಿಸುವದರಿಂದ ಏನು ಪ್ರಯೋಜನ ಎಂದರ್ಥ.

## ॥ द्वितीये तु इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**द्वितीयं दूषयति– द्वितीय इति॥**

ಇಲ್ಲಿ ಎರಡನೆ ವಿಕಲ್ಪವನ್ನು ದೂಷಿಸುತ್ತಾರೆ.

**निरुपाधिकरूपवत् सोपाधिकरूपस्यापि अपराधीन प्रकाशत्व अङ्गीकारे आत्मनि ज्ञानमात्रं निशिद्धं स्यात्। तथा च अपसिद्धान्तः स्यात्।**
**"सर्वप्रत्ययवेद्ये च ब्रह्मरूपे व्यवस्थिते। प्रपञ्चस्य प्रविलयः शब्देन प्रतिपाद्यते॥" इति मण्डनमिश्रादिभिः तस्य वेद्यता अभिधानात् इत्यर्थः।**

ನಿರುಪಾಧಿಕರೂಪದಂತೆ ಸೋಪಾಧಿಕರೂಪ ಕೂಡ ಅಪರಾಧೀನ ಪ್ರಕಾಶತ್ವವೆಂದು ಅಂಗೀಕರಿಸಿದರೆ ಆತ್ಮನಲ್ಲಿ ಜ್ಞಾನಮಾತ್ರವೇ ನಿಶಿದ್ಧ ಎನ್ನಬೇಕಾಗುತ್ತದೆ. ಹಾಗೆಯೆ ಅದು ಅಪಸಿದ್ಧಾಂತ ದೋಷಕೂಡ ತಂದೊಡ್ಡುತ್ತದೆ. ಏಕೆಂದರೆ " ಸರ್ವಪ್ರತ್ಯಯ ವೇದ್ಯತ್ವವು ಬ್ರಹ್ಮನಲ್ಲಿ ಇರುತ್ತದೆ. ಮತ್ತು ಪ್ರಪಂಚವನ್ನು ಪ್ರವಿಲಯ ಶಬ್ದದಿಂದ ಪ್ರತಿಪಾದಿಸಲಾಗುತ್ತದೆ" ಎಂದು ಮಂಡನಮಿಶ್ರಾದಿಗಳು ಆತ್ಮನ ವೇದ್ಯತ್ವವನ್ನು ಹೇಳಿದ್ದಾರೆ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**उभयोरपि स्वप्रकाशत्वेन ज्ञानानां मध्ये कस्यापि ज्ञानत्व नस्यात्। ततश्च वचनविरोधः स्यात् इति भावः।**

ನಿರುಪಾಧಿಕರೂಪ ಮತ್ತು ಸೋಪಾಧಿಕರೂಪ, ಉಭಯರೂಪಗಳ ಕೂಡ ಸ್ವಪ್ರಕಾಶತ್ವದಿಂದ, ಅವುಗಳ ಜ್ಞಾನಗಳ ಮಧ್ಯೆ ಯಾವುದರ ಜ್ಞಾನತ್ವವೇ ಉಂಟಾಗುವದಿಲ್ಲ. ಅದರಿಂದ

"सर्वप्रत्ययवेद्ये च ब्रह्मरूपे व्यवस्थिते" ಎಂಬ ಮುಂತಾದ ಸ್ವವಚನಗಳ ವಿರೋಧ ಉಂಟಾಗುತ್ತದೆ ಅಂದರೆ ಸ್ವವಚನವಿರೋಧ ಉಂಟಾಗುತ್ತದೆ ಎಂಬ ಭಾವ.

**उपलक्षणं एतत्। दृश्यत्वस्य निरुपाधिके ब्रह्मणि व्यभिचारे चोदिते, दृश्यत्व निरासाय तस्यैव स्वप्रकाशत्वस्य समर्थनीयत्वेन, तद्विहाय विशिष्टस्य स्वप्रकाशत्व समर्थनम् असंगतम् इत्यपि द्रष्टव्यम्।**

ಇಲ್ಲಿ, ಉಪಲಕ್ಷಣದಿಂದ ಹೀಗೆ ಹೇಳಬಹುದು. ದೃಶ್ಯತ್ವವು ನಿರುಪಾಧಿಕ ಬ್ರಹ್ಮನಲ್ಲಿ ವ್ಯಭಿಚಾರಮಾಡುತ್ತದೆ ಎಂಬ ಶಂಕೆ ಉದ್ಭವಿಸಲು, ದೃಶ್ಯತ್ವವನ್ನು ಬ್ರಹ್ಮನಲ್ಲಿ ನಿರಾಕರಿಸಲು, ನಿರುಪಾಧಿಕ ಬ್ರಹ್ಮನನ್ನು ಮಾತ್ರ ಸ್ವಪ್ರಕಾಶತ್ವ ಸಮರ್ಥನೀಯವಿರಲು ಅದನ್ನು ಬಿಟ್ಟು ಸೋಪಾಧಿಕ ಅಥವಾ ವಿಶಿಷ್ಟ ಬ್ರಹ್ಮನಿಗೆ ಸ್ವಪ್ರಕಾಶತ್ವ ಸಮರ್ಥನವು ಅಂಸಗತ ಕೂಡ ಎನಿಸುತ್ತದೆ ಎಂದು ತಿಳಿಯತಕ್ಕದ್ದು.

## ॥ आत्मनि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**विषय सप्तमी इयम्। तथा च निरुपाधिकरूपवत सोपाधिकरूपस्यापि अपराधीन प्रकाशत्व अङ्गीकारे आत्मनि ज्ञानमात्रं निषिद्धं स्यात्। आत्मनो ज्ञानविषयत्वमेव निषिद्धं स्यात् इति यावत्।**

ಇಲ್ಲಿ आत्मनि ವಿಷಯ ಸಪ್ತಮಿಯಲ್ಲಿರುತ್ತದೆ. ಅದರಂತೆ, ನಿರುಪಾಧಿಕರೂಪದಂತೆ ಸೋಪಾಧಿಕರೂಪವು ಕೂಡ ಅಪರಾಧೀನ ಪ್ರಕಾಶ ಎಂದು ಅಂಗೀಕಾರಮಾಡಿದರೆ, ಆತ್ಮನಲ್ಲಿ ಜ್ಞಾನಮಾತ್ರವೇ ನಿಷಿದ್ಧವಾಗುವದು. ಅಂದರೆ ಆತ್ಮನ ಜ್ಞಾನವಿಷಯತ್ವವೇ ನಿಷಿದ್ಧವಾಗುವದು ಎಂದರ್ಥ.

## ॥ सर्व इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**अस्तु को दोष इति चेत्, तत्र आह– सर्व इति॥**

ಆತ್ಮನು ಜ್ಞಾನವಿಷಯತ್ವನಾಗದೆ ಇರಲಿ. ಹಾಗಾದರೆ ಏನಂತೆ, ಯಾವ ದೋಷ ಉಂಟಾಯಿತು? ಅದಕ್ಕೆ ಅಲ್ಲಿ ಟೀಕಾಕೃತ್ಪಾದರು ಮಂಡನಮಿಶ್ರರ ಅಭಿಧಾನವನ್ನೇ ಪ್ರತಿಪಾದಿಸುತ್ತಾರೆ.

**प्रपञ्चस्य प्रविलयः शब्देन प्रतिपाद्यत इति वाक्य शेषो द्रष्टव्यः। तथा च मण्डनमिश्रेण तस्य वेद्यत्व अभिधानात् तत् अनङ्गीकारे अपसिद्धान्तः स्यात् इति भावः।**

ಇಲ್ಲಿ "सर्वप्रत्ययवेद्ये च ब्रह्मरूपे व्यवस्थिते" ನಂತರ "प्रपञ्चस्य प्रविलयः शब्देन प्रतिपाद्यत" ಎಂಬ ವಾಕ್ಯಶೇಷವಿರುತ್ತದೆ ಎಂದು ತಿಳಿಯತಕ್ಕದ್ದು. ಅದರಂತೆ, ಮಂಡನಮಿಶ್ರರು ಆತ್ಮನ ವೇದ್ಯತ್ವವನ್ನು ಪ್ರತಿಪಾದಿಸಿದ್ದಾರೆ, ಅದನ್ನು ಅಂಗೀಕರಿಸದಿದ್ದಲ್ಲಿ ಅಪಸಿದ್ಧಾಂತವೆಂಬ ದೋಷ ಉಂಟಾಗುತ್ತದೆ ಎಂಬ ಭಾವವಿರುತ್ತದೆ.

## ॥ किंच इति ॥



ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**दोषान्तरं आह– किंच इति॥**

ಇಲ್ಲಿ ಮತ್ತು ಕೆಲವೊಂದು ದೋಷಗಳನ್ನು ಹೇಳುತ್ತಾರೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**दोषान्तरं आह– किंच इति॥**

ಇಲ್ಲಿ ಮತ್ತು ಕೆಲವೊಂದು ದೋಷಗಳನ್ನು ಹೇಳುತ್ತಾರೆ.

**"आत्मा न पराधीन प्रकाशः" इत्येवं प्रकार वृत्तिविषयो न वा इति विकल्पार्थः।**

"ಆತ್ಮನು ಪರಾಧೀನ ಪ್ರಕಾಶನಲ್ಲ" ಎಂದು ಇಂತಹ ಪ್ರಕಾರದ ವೃತ್ತಿವಿಷಯವಿದೆಯೊ ಅಥವಾ ಇಲ್ಲವೊ? ಎಂದು ವಿಕಲ್ಪಾರ್ಥವಿರುತ್ತದೆ.

## ॥ वृत्तिविषयो न वा इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**आत्मा न पराधीन प्रकाशः इति वाक्यजन्य ज्ञानविषयो न वा इत्यर्थः।**

ಅಂದರೆ, ಆತ್ಮಾ, "ಆತ್ಮಾ ಪರಾಧೀನ ಪ್ರಕಾಶನಲ್ಲ ಎಂಬ, ವಾಕ್ಯಜನಿತ ಜ್ಞಾನವಿಷಯವಾಗುತ್ತಾನೊ ಅಥವಾ ಇಲ್ಲವೊ ಎಂದರ್ಥ.

## ॥ दृश्यत्व आपत्तिः इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**तथा च व्यभिचार इति भावः।**

ಮೊದಲನೆ ವಿಕಲ್ಪದಂತೆ, ಆತ್ಮಾ "ಆತ್ಮನು ಪರಾಧೀನ ಪ್ರಕಾಶನಲ್ಲ" ಎಂಬ ವಾಕ್ಯಜನಿತ ಜ್ಞಾನವಿಷಯನಾಗುತ್ತಾನೆ ಎಂದರೆ, ಆತ್ಮನಲ್ಲಿ ದೃಶ್ಯತ್ವ ಉಂಟಾಗ ಬೇಕಾದುದರಿಂದ ವ್ಯಭಿಚಾರ ದೋಷ ಬರುವದು ಎಂಬ ಭಾವ.

## ॥ मूकः अहं इतिवत् इति ॥

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**यथा मूकोऽहं इति वचनक्रियया मूक पदोक्त वचनाभावो विरुद्ध्यते। एवं आत्मवृत्ति विषयेन इति वृत्तेः आत्मविषयीकरण व्यापारेण नञर्थो बाध्यते इत्यर्थः।**

ಹೇಗೆ "ನಾನು ಮೂಕನಾಗಿದ್ದೇನೆ" ಎಂಬ ವಚನಕ್ರಿಯೆಯಿಂದಲೆ, ಮೂಕ ಪದೋಕ್ತ ವಚನದ ಭಾವವನ್ನು ವಿರೋಧಿಸಲ್ಪಡುತ್ತದೊ ಅದರಂತೆ, ಆತ್ಮಾ ವೃತ್ತಿವಿಷಯನಾಗಿದ್ದಾನೆ ಎಂಬ ವೃತ್ತಿಯಿಂದ, ಆತ್ಮವಿಷಯಿಕರಣ ವ್ಯಾಪಾರದಿಂದ नञ ವ್ಯಾಕರಣ ನಿಯಮದ ಅರ್ಥದಲ್ಲಿ ಬಾಧಿಸುತ್ತದೆ ಎಂದರ್ಥ.

## ॥ स्वक्रियाविरोधश्च इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**मूक इति वचनक्रियाभाव विधत्ते, मूकोऽहम् इति वचनक्रियांच करोति। तथा च यथा मूकोऽहम् इति वचनक्रियया मूकपदोक्तवचन विरुध्यते तथा आत्मा पराधीन प्रकाश न इति, आत्मा सम्बन्धित्वेन, पराधीनप्रकाशत्व निषेधक आत्मविषयक ज्ञानक्रियया न इति पदोक्तः तन्निषेधो विरुध्यते इत्यर्थः।**

ಮೂಕ ಎಂಬ ವಚನಕ್ರಿಯಾಭಾವವನ್ನನುಸರಿಸಿ "ನಾನು ಮೂಕ" ಎಂದು ವಚನಕ್ರಿಯೆಯನ್ನು ಮಾಡಲಾಗುತ್ತದೆ. ಅದರಂತೆ, ಹೇಗೆ "ನಾನು ಮೂಕ" ಎಂಬ ವಚನಕ್ರಿಯೆಯು, ಮೂಕ ಪದೊಕ್ತವಚನವನ್ನು ವಿರೋಧಿಸಲಾಗುತ್ತದೊ, ಅದರಂತೆಯೆ ಆತ್ಮಾ ಪ್ರಕಾಶನಲ್ಲ ಎಂಬ ಆತ್ಮಸಂಬಂಧಿತ, ಪರಾಧೀನ ಪ್ರಕಾಶತ್ವ ನಿಷೆಧಕ ಆತ್ಮವಿಷಯಕ ಜ್ಞಾನಕ್ರಿಯೆಯು, न इति ಎಂಬ ಪದೋಕ್ತ ನಿಷೆಧವನ್ನು ವಿರೋಧಿಸುತ್ತದೆ ಎಂದರ್ಥ.

<u>ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:</u>

**न क्रियया मूक पदोक्त वचन निषेधो विरुद्ध्यते तथा "आत्मा पराधीन प्रकाशो न" इति आत्म सम्बन्धित्वेन पराधीन प्रकाशक निषेधक आत्मविषयक ज्ञानक्रियया न इति पदोक्तः तन्निषेधो विरुद्ध्यत इत्यर्थः।**

"न" ಕ್ರಿಯೆಯಮೂಲಕ ಮೂಕ ಪದೋಕ್ತ ವಚನ ನಿಷೇಧ, ವಿರೋಧಿಸುತ್ತದೊ, ಅದರಂತೆ, "ಆತ್ಮಾ ಪರಾಧೀನ ಪ್ರಕಾಶನಲ್ಲ" ಎಂದು ಆತ್ಮಸಂಬಂಧಿತ ಪರಾಧೀನ ಪ್ರಕಾಶಕ ನಿಷೇಧಕ ಆತ್ಮವಿಷಯಕ ಜ್ಞಾನಕ್ರಿಯೆಯು न इति ಪದೊಕ್ತ ನಿಷೇಧವನ್ನು ವಿರೋಧಿಸುತ್ತದೆ ಎಂದರ್ಥ.

## ॥ द्वितीये व्यतिरेक असिद्ध्या इति ॥

<u>ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:</u>

**दृश्यत्व हेतौ, यत्र मिथ्यात्व अभावः तत्र दृश्यत्व अभावः इति व्यतिरेक व्याप्तिः तावत् अस्ति न वा? आद्ये, सा न अत्यन्त असति प्रदर्शयितुं शक्या। तत्र सद्विविक्तत्वरूप मिथ्यात्वस्य पराधीन प्रकाशत्वरूप दृश्यत्वस्य च सद्भावेन, तत्र व्यतिरेक असम्भवात्। तस्मात् आत्मनि एव सा दर्शयितव्या। न तत्र दर्शयितुं शक्या। तथा हि–**

ದೃಶ್ಯತ್ವ ಹೇತುವಿನಲ್ಲಿ, ಎಲ್ಲಿ ಮಿಥ್ಯಾತ್ವ ಇಲ್ಲವೊ ಅಲ್ಲಿ ದೃಶ್ಯತ್ವ ಇರುವದಿಲ್ಲ ಎಂಬ ವ್ಯತಿರೇಕ ವ್ಯಾಪ್ತಿ ಇದೆಯೊ ಅಥವಾ ಇಲ್ಲವೊ?

ಮೊದಲನೆಯದಾದರೆ, ಅದನ್ನು ಅತ್ಯಂತ ಅಸತ್ಯದಲ್ಲಿ ಪ್ರದರ್ಶಿಸಲು ಸಾಧ್ಯವಿಲ್ಲ. ಅಲ್ಲಿ, ಸದ್ವಿವಿಕ್ತತ್ವರೂಪ ಮಿಥ್ಯಾತ್ವದ ಪರಾಧೀನ ಪ್ರಕಾಶರೂಪ ದೃಶ್ಯತ್ವವು ಇರುವದರಿಂದ, ಅಲ್ಲಿ ವ್ಯತಿರೇಕ ಅಸಂಭವವಗಿರುತ್ತದೆ. ಆದ್ದರಿಂದ ವ್ಯತಿರೇಕ ವ್ಯಾಪ್ತಿಯನ್ನು ಆತ್ಮನಲ್ಲೇ ತೋರಿಸಬೇಕು. ಆದರೆ ವ್ಯತಿರೇಕ ವ್ಯಾಪ್ತಿಯನ್ನು ಅಲ್ಲಿ ತೋರಿಸಲು ಶಕ್ಯವಿಲ್ಲ. ಅದನ್ನು ಹೀಗೆ (ಕೆಳಗಿನಂತೆ) ವಿವರಿಸಬಹುದು:

**पराधीन प्रकाशत्वरूपं यत् दृश्यत्वं तत् रूपं यत् साधनं तत् अभाव विषयकं यत् ज्ञानं आत्मा न पराधीन प्रकाश इति वृत्तिरूपं ज्ञानं तत् प्रत्यय आत्मनो विषयत्व अनङ्गीकारेण अधिकरण ज्ञान अभावेन तन्निष्ठया व्यतिरेकस्य ज्ञातुं अशक्यत्वात्।**



ಪರಾಧೀನ ಪ್ರಕಾಶತ್ವರೂಪ, ಯಾವದು ದೃಶ್ಯತ್ವವನ್ನು ಹೊಂದಿದೆಯೊ ಅದರ ರೂಪ, ಅಂತಹುದರ ಸಾಧನ, ಅದರ ಅಭಾವ ವಿಷಯಕ ಅಂತಹ ಜ್ಞಾನ, ದೃಶ್ಯತ್ವ ವ್ಯತಿರೇಕ ಜ್ಞಾನವೆನಿಸುವದು. ಇನ್ನು ಆತ್ಮಾ ಪರಾಧೀನ ಪ್ರಕಾಶನಲ್ಲ ಎಂಬ ವೃತ್ತಿರೂಪ ಜ್ಞಾನ, ಅದರ ಪ್ರತ್ಯಯ, ಆತ್ಮನ ವಿಷಯತ್ವವನ್ನು ಅಂಗೀಕರಿಸಿಲ್ಲದ್ದರಿಂದ, ಅಧಿಕರಣ ಜ್ಞಾನ ಆಗುವದಿಲ್ಲ. ಆದ್ದರಿಂದ ಅದಕ್ಕೆ ನಿಷ್ಠವಾದ ವ್ಯತಿರೇಕವನ್ನು ತಿಳಿಯಲು ಅಶಕ್ಯವಾಗಿರುತ್ತದೆ

**द्वितीये सन्दिग्ध अनैकान्तिकता, निश्चित साध्य अभाववति आत्मनि हेतोः सन्दिग्धत्वात् इत्यर्थः।**

ಇನ್ನು ಎರಡನೆಯದಾದರೆ, ಅಂದರೆ, ದೃಶ್ಯತ್ವ ಹೇತುವಿನಲ್ಲಿ ವ್ಯತಿರೇಕ ವ್ಯಾಪ್ತಿ ಇಲ್ಲವೆಂದಾಗ ಮಿಥ್ಯಾತ್ವ ಅನುಮಾನಕ್ಕೆ ನಿಶ್ಚಿತ ಸಾಧ್ಯದ ಅಭಾವತೆ ಇರುವಾಗ ಆತ್ಮನಲ್ಲಿ ಹೇತುವಿನ ಸಂದಿಗ್ಧವಾದ ವ್ಯಾಪ್ತಿ ಇದೆ ಎನ್ನಬೇಕಾಗುತ್ತದೆ ಎಂದರ್ಥ.
ಹೀಗಾಗಿ ಇಲ್ಲಿ ಸಂದಿಗ್ಧ ಅನೈಕಾಂತಿಕ ದೋಷವಿದೆ ಎಂದರ್ಥ.

<u>ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:</u>

**यत्र मिथ्यात्व अभावः तत्र दृश्यत्व अभाव इति व्यतिरेकः अस्ति न वा? आद्ये, आत्मनि एव स दर्शयित्व्या। अत्यन्त असति, सद्विविक्तरूप मिथ्यात्वस्य पराधीनप्रकाशत्वरूप दृश्यतवस्य च सद्भावेन तत्र व्यतिरेक असम्भवात्। न च आत्मनि स शक्यो दर्शयितुम्।**

ಎಲ್ಲಿ ಮಿಥ್ಯಾತ್ವದ ಅಭಾವತೆವಿದೆಯೊ ಅಲ್ಲಿ ದೃಶ್ಯತ್ವದ ಅಭಾವತೆವಿರುತ್ತದೆ ಎಂಬ ದೃಶ್ಯತ್ವ ಹೇತುವಿಗೆ ವ್ಯತಿರೇಕ ವ್ಯಾಪ್ತಿ ಇದೆಯೊ ಅಥವಾ ಇಲ್ಲವೋ? ಎಂಬುದಕ್ಕೆ, ಮೊದಲನೆಯ ವಿಕಲ್ಪವನ್ನು ಪರಿಗಣಿಸಿದರೆ, ಆತ್ಮನಲ್ಲಿಯೇ ಅದನ್ನು ತೋರಿಸಬೇಕು. ಏಕೆಂದರೆ ಅತ್ಯಂತ ಅಸತ್ಯದಲ್ಲಿ, ಸದ್ವಿವಿಕ್ತತ್ವರೋಪ ಮಿಥ್ಯಾತ್ವದ ಪರಾಧೀನ ಪ್ರಕಾಶತ್ವರೂಪ ದೃಶ್ಯತ್ವ ಇರುವದರಿಂದ ಅಲ್ಲಿ ದೃಶ್ಯತ್ವದ ವ್ಯತಿರೇಕ ವ್ಯಾಪ್ತಿಯು ಅಸಂಭವವಾಗಿರುತ್ತದೆ. ಆದರೆ ದೃಶ್ಯತ್ವದ ವ್ಯತಿರೇಕ ವ್ಯಾಪ್ತಿಯನ್ನು ತೋರಿಸಲು ಸಾಧ್ಯವಿಲ್ಲ. ಇದನ್ನು ಕೆಳಗಿನಂತೆ ವಿವರಿಸಬಹುದು.

**"आत्मा न पराधीन प्रकाशः" इति पराधीनप्रकाशत्वरूप दृश्यत्वाख्य साधन अभाव विषयक ज्ञानं प्रत्यात्मनो विषयत्व अभावेन तन्निष्ठतया व्यतिरेकस्य ज्ञातुं अश्क्यत्वात्।**

ಆತ್ಮಾ ಪರಾಧೀನ ಪ್ರಕಾಶನಲ್ಲ, ಎಂದು ಪರಾಧೀನಪ್ರಕಾಶತ್ವರೂಪ ದೃಶ್ಯತ್ವದ ಸಾಧನ ಅಭಾವ ವಿಷಯಕ ಜ್ಞಾನದ ಪ್ರತಿ, ಆತ್ಮನ ವಿಷಯತ್ವ ಇಲ್ಲದಿರುವಾಗ, ಅದಕ್ಕೆ ನಿಷ್ಠವಾದ ವ್ಯತಿರೇಕದ ವ್ಯಾಪ್ತಿಯನ್ನು ತಿಳಿಯಲು ಅಶಕ್ಯಪ್ರಾಯವೆ ಸರಿ.

**द्वितीये सन्दिग्ध अनैकान्तिकता, निश्चित साध्य अभाववति साधन अभाव नियम अनिश्चयेन तत्र साधन सन्देहात् इत्यर्थः।**

ಇನ್ನು ಎರಡನೆ ವಿಕಲ್ಪದಂತೆ ದೃಶ್ಯತ್ವದ ವ್ಯತಿರೇಕವ್ಯಾಪ್ತಿ ಸಿದ್ಧವಾಗಿಲ್ಲ ಎನ್ನುವುದಾದರೆ ಇಲ್ಲಿ ಮಿಥ್ಯಾತ್ವ ಅನುಮಾನಕ್ಕೆ ನಿಶ್ಚಿತ ಸಾಧ್ಯವಿಲ್ಲದಂತಾಗಿ, ಸಾಧನ ಅಭಾವ ನಿಯಮದ ಅನಿಶ್ಚತತೆಯಿಂದ ಅಲ್ಲಿ ಸಾಧನವು ಸಂದೇಹಾಸ್ಪದವೆನಿಸುತ್ತದೆ ಎಂದರ್ಥ.

ಹೀಗಾಗಿ ಇಲ್ಲಿ ಸಂದಿಗ್ಧ ಅನ್ಯೆಕಾಂತಿಕ ದೋಷವಿದೆ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**ननु व्यतिरेक असिद्ध्या सन्दिग्ध अनैकान्तिक इत्युक्तम्। व्यतिरेक सन्देहस्यैव सन्दिग्ध अनैकान्त्य प्रयोजनकत्वेन, असिद्धिमात्रस्य तत् अप्रयोजकत्वात्, न च व्यतिरेक सन्देहः अस्तु इति वाच्यम्। सन्देह प्रयुक्त, दृश्यत्वस्य अवर्जनीयत्वेन अनैकान्त्यस्यैव, दृश्यत्वापातात्।**

ಇಲ್ಲಿ, ದೃಶ್ಯತ್ವ ಹೇತುವಿನ ವ್ಯತಿರೇಕ ವ್ಯಾಪ್ತಿಯ ಅಸಿದ್ಧಿಯಿಂದ ಸಂದಿಗ್ಧ ಅನ್ಯೆಕಾಂತಿಕ ದೋಷ ಉಂಟಾಗುತ್ತದೆ ಎಂದು ಹೇಳಲಾಯಿತು. ವ್ಯತಿರೇಕ ವ್ಯಾಪ್ತಿಯ ಸಂದೇಹವೇ ಸಂದಿಗ್ಧ ಅನ್ಯೆಕಾಂತಿಕ ದೋಷಕ್ಕೆ ಪ್ರಯೋಜಕವಾದ್ದರಿಂದ, ಅಸಿದ್ಧಿಮಾತ್ರ ಅದಕ್ಕೆ ಅಪ್ರಯೋಜಕವೆನಿಸುವದು, ಅದರಂತೆ ದೃಶ್ಯತ್ವ ಹೇತುವಿನ ವ್ಯತಿರೇಕ ವ್ಯಾಪ್ತಿಯ ಬಗ್ಗೆ ಸಂದೇಹವಿದೆ ಎಂದು ಹೇಳಬಾರದು. ಸಂದೇಹವಿದೆ ಎನ್ನುವುದಾದರೆ ಅದರ ಪ್ರಯುಕ್ತ ದೃಶ್ಯತ್ವವನ್ನು ವರ್ಜಿಸಲು ಸಾಧ್ಯವಾಗದಮೂಲಕ ದೃಶ್ಯತ್ವಕ್ಕೆ ಅನ್ಯೆಕಾಂತ್ಯ ದೋಷವೇ ಉಂಟಾಗುತ್ತದೆ.

**किंच न पराधीनप्रकाश इति, वृत्तिविषयत्व अभावे, घटादिवत् पराधीन प्रकाशं स्यात्। पराधीन प्रकाशविषयत्वं अन्तराधीन प्रकाशविषयो न इति वृत्तिविषयत्व निषेध अयोगात्। अपि च आत्मा न पराधीनप्रकाश इति वृत्तिविषयो न इति, वृत्तिविषयत्वेन एव दृश्यत्वं अवर्जनीयम्। अपि च साध्य अभाववत्तया निश्चयेन एव दृश्यत्वं प्राप्तं इति सन्दिग्ध अनैकान्त्य चोदनम् अयुक्तं इति चेत् उच्यते।**

ಮತ್ತು "ಆತ್ಮಾ ಪರಾಧೀನಪ್ರಕಾಶನಲ್ಲ" ಎಂಬ ವೃತ್ತಿವಿಷಯತ್ವ ಇಲ್ಲದಾಗ, ಆತ್ಮಾ ಘಟಾದಿಗಳಂತೆ ಪರಾಧೀನ ಪ್ರಕಾಶವುಳ್ಳವನಾಗುತ್ತಾನೆ. ಈ ಪ್ರಕಾಶವಿಷಯತ್ವವು ಅಂತರಾಧೀನ ಪ್ರಕಾಶವಿಷಯವಲ್ಲ ಎಂದು ವೃತ್ತಿವೀಷಯತ್ವವನ್ನು ನಿಷೇಧಿಸುವದು ಅಯೋಗ್ಯವೆನಿಸುವದು. ಮತ್ತು "ಆತ್ಮಾ ಪರಾಧೀನಪ್ರಕಾಶನಲ್ಲ" ಎಂಬುದು ಆತ್ಮನ ವೃತ್ತಿವಿಷಯವಲ್ಲ, ಎಂದು ತಿಳುವಳಿಕೆಯಿಂದಲೇ, ಅದು ಆತ್ಮನ ವೃತ್ತಿವಿಷಯವಾಗುವದರಿಂದ ಅಲ್ಲಿ ದೃಶ್ಯತ್ವ ಅವರ್ಜನೀಯವಾಗುವದು ಎಂದರ್ಥ.

**अपि च साध्य अभाववत्तया निश्चयेन एव दृश्यत्वं प्राप्तं इति सन्दिग्ध अनैकान्त्य चोदनम् अयुक्तं इति चेत् उच्यते।**

ಮತ್ತು, ಆತ್ಮನಲ್ಲಿ, ಮಿಥ್ಯಾತ್ವ ಅನುಮಾನದ ಸಾಧ್ಯವೆನಿಸಿದ ಮಿಥ್ಯಾತ್ವವು, ನಿಶ್ಚಿತವಾಗಿ ಇಲ್ಲದಿರುವಿಕೆಯಿಂದಲೇ, ಅಲ್ಲಿ ದೃಶ್ಯತ್ವ ಪ್ರಾಪ್ತವಾಗುವದರಿಂದ ಸಂದಿಗ್ಧ ಅನ್ಯೆಕಾಂತಿಕ ಎಂಬ ದೋಷವನ್ನು ಹೇಳುವದು ಅಯುಕ್ತವಾಗಿದೆ ಎಂದರೆ, ಅದಕ್ಕೆ ಹೇಳುತ್ತೇವೆ:

**न ब्रूमो वयं सन्दिग्ध अनैकान्त्यमेव इति। येन उक्त दोषः स्यात्, किन्तु सन्दिग्ध अनैकान्त्यमपि। तथा हि–**

ನಾವು ಇಲ್ಲಿ ಕೇವಲ ಸಂದಿಗ್ಧ ಅನ್ಯೆಕಾಂತಿಕ ಎಂದು ಹೇಳುತ್ತಿಲ್ಲ. ಅದರಿಂದ ತಾವು ಹೇಳಿದ ದೋಷ ಉಂಟಾಗುತ್ತದೆ ನಿಜ, ಆದರೆ ಅನ್ಯೆಕಾಂತಿಕ ಜೊತೆಗೆ ಸಂದಿಗ್ಧ ಅನ್ಯೆಕಾಂತಿಕ ದೋಷವೂ ಉಂಟಾಗುತ್ತದೆ ಎಂದು ಹೇಳುತ್ತೇವೆ. ಅದನ್ನು ಈಕೆಳಗಿನಂತೆ ವಿವರಿಸಬಹುದು:



**पूर्वं आत्मनि दृश्यत्वं नास्ति इत्युक्तम्। पश्चात् आत्मा वृत्तिविषयो न इति वृत्तिविषयत्वं निशिद्धम्। तद्वाक्य श्राविणाम् अज्ञानीनां निर्णायक अभावात् संशयो भवति। किम् आत्मनि दृश्यत्वं अस्ति न वा इति। ततश्च सन्दिग्ध अनैकान्त्यम्। प्राज्ञानां तु त्वत् उक्तरीत्या दृश्यत्व निश्चय सम्भवेन निश्चित अनैकान्त्यं इति।**

ಪೂರ್ವದಲ್ಲಿ ತಾವು (ಪರಪಕ್ಷದವರು) ಆತ್ಮನಲ್ಲಿ ದೃಶ್ಯತ್ವ ಇಲ್ಲ ಎಂದು ವಕ್ತವ್ಯಮಾಡಿದ್ದೀರಿ. ಆಮೇಲೆ ತಾವು ಆತ್ಮಾ ವೃತ್ತಿವಿಷಯನಲ್ಲ ಎಂದು ಅವನಲ್ಲಿ ವೃತ್ತಿವಿಷಯತ್ವವನ್ನು ನಿರಾಕರಿಸಿದಿರಿ. ಈ ವಾಕ್ಯವನ್ನು ಕೇಳಿದ ಅಜ್ಞಾನಿಗಳಿಗೆ ನಿರ್ಣಾಯಕ ನಿಯಮದ ಅಭಾವತೆಯಿಂದ, ಆತ್ಮನು ದೃಶ್ಯತ್ವನಾಗಿದ್ದಾನೋ ಅಥವಾ ಇಲ್ಲವೊ ಎಂಬ ಸಂಶಯ ಉಂಟಾಯಿತು. ಇದು ಸಂದಿಗ್ಧ ಅನ್ಯೆಕಾಂತಿಕ ದೋಷಕ್ಕೆ ಆಸ್ಪದ ಕೊಟ್ಟಿತು. ಇನ್ನು ಪ್ರಾಜ್ಞರಿಗೆ, ತಾವು (ಪರಪಕ್ಷದವರು) ಪ್ರತಿಪಾದಿಸುವ ರೀತಿಯಂತೆ, ಆತ್ನನಲ್ಲಿ ದೃಶ್ಯತ್ವ ನಿಶ್ಚಯವಾಗಿ ಸಂಭವಿಸುವದೆಂದು ಖಚಿತ್ ಜ್ಞಾನವಾಗುವದರಿಂದ ಅವರಂತೆ ಅಲ್ಲಿ ನಿಶ್ಚಿತವಾಗಿ ಅನ್ಯೆಕಾಂತಿಕ ದೋಷವಿದೆ ಎಂಬ ಭಾವವಿರುತ್ತದೆ.

### ६.२.३.५ सोपाधिक दृश्यत्वव्यतिरेकावच्छिन्नस्य दृश्यत्वं स्यादेव आनन्दबोधोक्ति निरासः

## टीका

**ननु आत्मनो निरुपाधिकं रूपमेव अपराधीनप्रकाशम्। सोपाधिकं तु पराधीन प्रकाशमपि, तेन स्वप्रकाशत्वेऽपि व्यतिरेक व्यतिरेक अवच्छिन्नस्य स्यात् एव दृश्यता इति चेत् न। व्यतिरेक अवच्छिन्नस्य सत्यत्वे अनैकान्त्य तादवस्थात्। मिथ्यात्वे किम् अनेन सिद्धेन अपि व्यतिरेकेण। प्रत्युत तस्य पक्षतया भाग–असिद्धिश्च स्यात्।**

**दृश्यत्व व्यतिरेक अवच्छिन्नं दृश्यं इति विप्रतिषिद्धं च। अत एव "यतो वाचः" इत्यादि श्रुतयोऽपि अन्यथा योजनीयाः। निरूपाधिकरूपे पुनः तदवस्थो व्यतिरेक अनिश्चयः।**

ಆತ್ಮನ ನಿರುಪಾಧಿಕರೂಪವೇ ಅಪರಾಧೀನ ಪ್ರಕಾಶವಾಗಿರುತ್ತದೆ. ಇನ್ನು ಸೋಪಾಧಿಕರೂಪವು ಪರಾಧೀನ ಪ್ರಕಾಶವಾಗಿದ್ದರೂ, ನಿರುಪಾಧಿಕರೂಪ, ಸ್ವಪ್ರಕಾಶನಾಗಿದ್ದರೂ, ಸೋಪಾಧಿಕನ ವ್ಯತಿರೇಕ ಅವಚ್ಛಿನ್ನನಾಗಿ, ಅವನಲ್ಲಿ ದೃಶ್ಯತ್ವ ಉಂಟು ಎಂದರೆ, ಅದು ಸಾಧ್ಯವೇಇಲ್ಲ. ಅದನ್ನು ಹೀಗೆ ವಿವರಿಸಬಹುದು:

ಸೋಪಾಧಿಕನ ವ್ಯತಿರೇಕ ಅವಚ್ಛಿನ್ನವು ಸತ್ಯವಾದರೆ, ಅನ್ಯೆಕಾಂತಿಕ ದೋಷವು ಹಾಗೆಯೆ ಉಳಿಯುವದು. ಇನ್ನು ಸೋಪಾಧಿಕ ವ್ಯತಿರೇಕವು ಮಿಥ್ಯಾ ಎಂದರೆ, ಇಂತಹ ದೃಶ್ಯತ್ವ

ವ್ಯತಿರೇಕ ಸಾಧನದಿಂದ ಏನು ಪ್ರಯೋಜನ? ಏನೂ ಇಲ್ಲ. ಹಾಗೂ ಅಲ್ಲಿ ಮಿಥ್ಯಾತ್ವರೂಪ ಸಾಧ್ಯ ವ್ಯತಿರೇಕ ಅಭಾವತೆಯಿಂದ ದೃಶ್ಯತ್ವ ಹೇತುವಿನ ವ್ಯತಿರೇಕವ್ಯಾಪ್ತಿಯನ್ನೆ ಪ್ರದರ್ಶಿಸಲು ಶಕ್ಯವಾಗುವದಿಲ್ಲ. ಮತ್ತು ಸೋಪಾಧಿಕನ ವ್ಯತಿರೇಕ ಅವಚ್ಛಿನ್ನವು ಮಿಥ್ಯಾ ಆದಲ್ಲಿ, ಅದನ್ನು ಕೂಡ ಮಿಥ್ಯಾತ್ವ ಅನುಮಾನದ ಪಕ್ಷದಲ್ಲಿ ಸೇರಿಸಬೇಕಾಗುವದು. ಆದರೂ, ದೃಶ್ಯತ್ವವನ್ನು ಅಲ್ಲಿ ಹೇಳಲಾಗುವದಿಲ್ಲ. ಹೀಗಾಗಿ ಪಕ್ಷದ ಒಂದು ಭಾಗದಲ್ಲಿ ದೃಶ್ಯತ್ವ ಹೇತುವಿಗೆ ಅಧಿಕರಣ ಇರುವದಿಲ್ಲ. ಆದ್ದರಿಂದ ಇಲ್ಲಿ ಭಾಗ-ಅಸಿದ್ಧಿ ದೋಷ ಉಂಟಾಗುತ್ತದೆ ಎಂದರ್ಥ.

ಮತ್ತು ದೃಶ್ಯತ್ವ ವ್ಯತಿರೇಕ ಅವಚ್ಛಿನ್ನ ದೃಶ್ಯ ಎಂದು ಹೇಳಿದಲ್ಲಿ ವ್ಯಾಘಾತ ಅಥವಾ ಪರಸ್ಪರ ವಿರುದ್ಧವಾದುದಕ್ಕೆ ಒಂದೇ ಅಧಿಕರಣ ಉಂಟಾದ್ದರಿಂದ ವಿಪ್ರತಿಷಿದ್ಧ ಎಂಬ ದೋಷ ಉಂಟಾಗುವದು.

ಆದ್ದರಿಂದ "यतो वाच:" ಮುಂತಾದ ಶ್ರುತಿವಾಕ್ಯದ ಅರ್ಥವನ್ನು ಸಾಕಲ್ಯದಿಂದ ಅಜ್ಞೆಯತ್ವಪರವಾಗಿ ಯೋಜಿಸಬೇಕು.

ಮತ್ತು ನಿರುಪಾಧಿಕ ಆತ್ಮನು, ಸತ್ಯನಾದ್ದರಿಂದ ಅಲ್ಲಿ ಸಾಧ್ಯವ್ಯತಿರೇಕದ, ಮತ್ತು ಅದೃಶ್ಯನಾದ್ದರಿಂದ ಸಾಧನವ್ಯತಿರೇಕದ, ಇರುವಿಕೆ ಸತ್ಯವಾಗಿದ್ದರೂ, ಅದರ ಜ್ಞಾನಕ್ಕಾಗಿ ಅಧಿಕರಣಭೂತನಾದ ಆತ್ಮನ ಜ್ಞಾನವ್ಯತ್ವದಿಂದಲೇ ದೃಶ್ಯತ್ವ ಪ್ರಾಪ್ತವಾಗಿದ್ದರಿಂದ, ಅನೈಕಾಂತಿಕತ್ವ ದೋಷ ಹಾಗೆಯೆ ಉಳಿಯುತ್ತದೆ ಎಂದರ್ಥ.

## टिप्पणीनाम् विशेषार्थानि

### ॥ ननु इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु आत्मा न पराधीन प्रकाश इति वाक्यजन्य वृत्तिविषय इति आद्य पक्ष एव अङ्गीक्रियते, तर्हि दृश्यत्व स्यात इति चेत्। किम् निरुपाधिकस्य स्यात् इत्युच्यते उत सोपाधिकस्य। न आद्यः। अपराधीन प्रकाशस्य विशिष्टस्य तस्यां वृत्तौ स्फुरणेन निरुपाधिकस्य तत्र अस्फुरणात्। न द्वितीयः। इष्टापत्तेः। सोपाधिकस्य दृश्यत्व अनङ्गीकारात् इति शङ्कते– ननु इति ॥**

ಇನ್ನು "ಆತ್ಮಾ ಪರಾಧೀನ ಪ್ರಕಾಶನಲ್ಲ" ಎಂದು, ಆತ್ಮಾ, ವಾಕ್ಯಜನ್ಯ ವೃತ್ತಿವಿಷಯನಾಗಿದ್ದಾನೆ ಎಂಬ ಮೇಲೆ ನಮೂದಿಸಿದ ಮೊದಲನೆ ಪಕ್ಷವನ್ನೇ ನಾವು (ಹಾಗೆ ಪರಪಕ್ಷದವರು ಅನ್ನುತ್ತಾರೆ) ಅಂಗೀಕರಿಸುತ್ತೇವೆ, ಎಂದರೆ ಆತ್ಮನಲ್ಲಿ ದೃಶ್ಯತ್ವ ಉಂಟಾಯಿತು ಎಂದರೆ, ಏಕೆ, ನಿರುಪಾಧಿಕಕ್ಕೆ ಉಂಟಾಯಿತು ಎಂದೆನ್ನುತ್ತೀರೊ ಅಥವಾ ಸೋಪಾಧಿಕಕ್ಕೊ? ಮೊದಲನೆಯ ವಿಕಲ್ಪವನ್ನು ಹೇಳಲಾಗುವದಿಲ್ಲ. ಏಕೆಂದರೆ ಇಲ್ಲಿ ಅಪರಾಧೀನ ಪ್ರಕಾಶವಿಶೀಷ್ಟ ಆತ್ಮನು ಸ್ಫುರಣದಿಂದ ತೀಳಿಯಲ್ಪಡುತ್ತಾನೆ ವಿನಹಾ ನಿರುಪಾಧಿಕನು ಅಲ್ಲಿ ಸ್ಫುರಿಸುವದಿಲ್ಲ. ಇನ್ನು ಎರಡನೆ ವಿಕಲ್ಪವನ್ನೂ ಹೇಳಲಾಗುವದಿಲ್ಲ. ಏಕೆಂದರೆ ಅಲ್ಲಿ ಇಷ್ಟಾಪತ್ತಿ ಎಂದರೆ ಸಿದ್ಧಾಂತಿಗಳಿಗೆ ಒಪ್ಪಿಗೆಯಾದುದನ್ನು ಒಪ್ಪಿಕೊಂಡಂತಾಗುವದು.



ಆದ್ದರಿಂದ ಸೋಪಾಧಿಕಕ್ಕೆ ದೃಶ್ಯತ್ವವನ್ನು ಅಂಗೀಕರಿಸಬಾರದು ಎಂದು ಮುಂತಾಗಿ ಈ ಟೀಕಾವಾಕ್ಯ ಶಂಕಿಸುತ್ತದೆ.

**निरुपाधिक स्वरूपमेव अपराधीन प्रकाशं सोपाधिकन्तु तदेवस्वरूपं पराधीन प्रकाशमपि इति योज्यम्।**

ಇಲ್ಲಿ, ನಿರೂಪಾಧಿಕರೂಪವೇ ಅಪರಾಧೀನ ಪ್ರಕಾಶ, ಸೋಪಾಧಿಕರೂಪವು ಆತ್ಮನ ಸ್ವರೂಪವೇ ಆದರು ಪರಾಧೀನ ಪ್ರಕಾಶ ಕೂಡ ಎಂಬಂರ್ಥದಲ್ಲಿ अपि ಶಬ್ದವನ್ನು ಯೋಜಿಸಬೇಕು.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**ननु "आत्मा न पराधीन प्रकाशः" इति वृत्तिविषय इति आद्यः पक्षः अङ्गीक्रियते। तर्हि दृश्यत्वं स्यात् इति चेत्, किम् निरुपाधिकस्य? किंवा सोपाधिकस्य? न आद्यः अपराधीन प्रकाशत्व विशिष्टस्यैव तत्र स्फुरणात् निरुपाधिकस्य तत्र अस्फुरणात्। न द्वितीयः सोपाधिकस्य दृश्यत्व अङ्गीकारात् इति चोदयति–ननु इति॥**

ಇಲ್ಲಿ ನಾವು (ಪರಪಕ್ಷದವರು) "ಆತ್ಮಾ ಪರಾಧೀನ ಪ್ರಕಾಶನಲ್ಲ" ಎಂದು ಆತ್ಮನು ವೃತ್ತಿವಿಷಯತ್ವವನ್ನು ಹೊಂದಿದ್ದಾನೆ ಎಂಬ ಮೇಲೆ ನಮೂದಿಸಿದ ವಿಕಲ್ಪಗಳಲ್ಲಿ ಮೊದಲನೆ ಪಕ್ಷವನ್ನು ಅಂಗೀಕರಿಸುತ್ತೇವೆ. ಹಾಗಾದರೆ ಆತ್ಮನಲ್ಲಿ ದೃಶ್ಯತ್ವ ಇದೆ ಎಂದು ಒಪ್ಪಬೇಕಾಗುತ್ತದೆ ಎಂದರೆ, ಏಕೆ, ನಿರುಪಾಧಿಕಕ್ಕೆ ದೃಶ್ಯತ್ವವನ್ನು ಹೇಳಬೇಕೊ? ಅಥವಾ ಸೋಪಾಧಿಕಕ್ಕೊ? ಮೊದಲನೆಯದಕ್ಕೆ ಹೇಳಲಾಗುವದಿಲ್ಲ. ಏಕೆಂದರೆ ಅಲ್ಲಿ ಅಪರಾಧೀನ ಪ್ರಕಾಶತ್ವ ವಿಶಿಷ್ಟದ ಮಾತ್ರ ಅಲ್ಲಿ ಸ್ಫುರಣವಾಗುತ್ತದೆ, ನಿರುಪಾಧಿಕದ ಅಲ್ಲಿ ಸ್ಫುರಣವೇ ಆಗುವದಿಲ್ಲ.

**निरुपाधिकरूपमेव अपराधीन प्रकाशं सोपाधिकं तु तदेवरूपं पराधीन प्रकाशम् अपि, इति अपि शब्दो योज्यः।**

ಇಲ್ಲಿ ನಿರುಪಾಧಿಕರೂಪವೇ ಅಪರಾಧೀನ ಪ್ರಕಾಶ, ಸೋಪಾಧಿಕವಾದರು ಆತ್ಮನರೂಪವೇ ಅದು ಪರಾಧೀನ ಪ್ರಕಾಶವಾದರೂ ಕೂಡ ಎಂದು ಮುಂತಾಗಿ अपि ಶಬ್ದವನ್ನು ಯೋಜಿಸಬೇಕು.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**निश्चित अनैकान्त्ये वक्तव्ये यत् सन्दिग्ध अनैकान्त्यवचनं तत् अज्ञानमपि पर अनुमाने दोषस्फूर्तिः भवति। किमु ज्ञानं इति सूचनाय इति बोध्यम्। निरुपाधिकस्य, आत्मनः न पराधीन प्रकाशः इत्येवं आकारक वृत्तिवीषयत्व अभावेऽपि, न निरुपाधिकनिष्ठ दृश्यत्व व्यतिरेक असिद्धिः। व्यतिरेक अवच्छिन्नस्य पूर्वोक्त विषयत्वेन तयैव शुद्धनिष्ठ दृश्यत्व व्यतिरेक विषयीकरणात् तत् यथा प्रथमलक्षण अवच्छिन्नस्य निरूपस्य अचाक्षुषत्वेऽपि रूप अवच्छिन्नस्य चाक्षुषत्वात्। तेनैव निरूपगत घटत्व असिद्धिः इति भावेन शङ्कते– ननु इति॥**

ಇನ್ನು, ನಿಶ್ಚಿತ ಅನೈಕಾಂತ್ಯವನ್ನು ಹೇಳುವಲ್ಲಿ ಸಂದಿಗ್ಧ ಅನೈಕಾಂತಿವಚನ ಹೇಳುವದು, ಅದರ ಅಜ್ಞಾನವಿದ್ದರೂ ಪರರ ಮಿಥ್ಯಾತ್ವ ಅನುಮಾನಕ್ಕೆ ದೋಷಸ್ಫೂರ್ತಿ ಉಂಟಾಗುತ್ತದೆ.

ಯಾವುದು ಜ್ಞಾನ ಎಂದು ಸೂಚಿಸಲು ಎಂದು ಅದರ ಬೋಧಕವಾಗಬೇಕು. ಇನ್ನು ನಿರುಪಾಧಿಕನ, "ಆತ್ಮನು ಪರಾಧೀನ ಪ್ರಕಾಶನಲ್ಲ" ಎಂಬ ಆಕಾರಕ ವೃತ್ತಿವಿಷಯವಿಲ್ಲದಿದ್ದರೂ, ನಿರುಪಾಧಿಕನಿಷ್ಠ ದೃಷ್ಯತ್ವ ವ್ಯತಿರೇಕದ ಅಸಿದ್ಧಿ ಉಂಟಾಗುವದಿಲ್ಲ. ಏಕೆಂದರೆ ಅಲ್ಲಿ ವ್ಯತಿರೇಕ ಅವಚ್ಛಿನ್ನದ ಪೂರ್ವೋಕ್ತ ವಿಷಯದಿಂದ, ಅಲ್ಲಿಯೆ ಶುದ್ಧನಿಷ್ಠ ದೃಶ್ಯತ್ವ ವ್ಯತಿರೇಕದ ವಿಷಯೀಕರಣವಾಗುವದು. ಅದು, ಹೇಗೆ ಪ್ರಥಮಲಕ್ಷಣ ಅವಚ್ಛಿನ್ನದ ನಿರೂಪವು ಕಾಣದೆ ಇದ್ದರೂ ರೂಪ ಅವಚ್ಛಿನ್ನವು ಕಾಣಿಸುತ್ತದೊ ಹಾಗೆ. ಆದರೆ ಅದರಿಂದಲೇ ನಿರೂಪಗತ ಘಟತ್ವ ಅಸಿದ್ಧವಾಗುತ್ತದಲ್ಲ ಎಂಬ ಭಾವದಿಂದ ಈ ಟೀಕಾವಾಕ್ಯ ಶಂಕಿಸುತ್ತದೆ.

## ॥ तेन इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**एवं च निरुपाधिकस्य अपराधीन प्रकाशत्वेऽपि, दृश्यत्वाभाव अवच्छिन्नस्य दृश्यत्व निषेधो व्यतिरेक इत्याह– तेन इति॥**

ಈ ರೀತಿಯಾಗಿ, ನಿರುಪಾಧಿಕರೂಪನು ಅಪರಾಧೀನ ಪ್ರಕಾಶನಾದರೂ, ದೃಶ್ಯತ್ವಾಭಾವ ಅವಚ್ಛಿನ್ನದ ದೃಶ್ಯತ್ವದ ನಿಷೇಧವೇ ದೃಶ್ಯತ್ವದ ವ್ಯತಿರೇಕ ವ್ಯಾಪ್ತಿ ಎನಿಸುವದು, ಎಂಬುದನ್ನು ಈ ಟೀಕಾವಾಕ್ಯ ನಿರಾಕರಿಸುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**एवं च निरुपाधिकस्य अपराधीन प्रकाशत्वेऽपि दृश्यत्वाभाव अवच्छिन्नस्य दृश्यत्व सिद्धौ सिद्धो व्यतिरेक इत्याह– तेन इति॥**

ಈ ರೀತಿಯಾಗಿ ನಿರುಪಾಧಿಕರೂಪನು ಅಪರಾಧೀನ ಪ್ರಕಾಶನಾದರೂ ದೃಶ್ಯತ್ವಭಾವ ಅವಚ್ಛಿನ್ನದ ದೃಶ್ಯತ್ವ ಸಿದ್ಧವಾದಾಗ, ದೃಶ್ಯತ್ವ ವ್ಯತಿರೇಕ ಸಿದ್ಧವಾಗಬೇಕು, ಎಂಬ ಯುಕ್ತಿಯಂತೆ, ಪರಪಕ್ಷದವರು ಪ್ರತಿಪಾದಿಸುವ ದೃಶ್ಯತ್ವದ ವ್ಯತಿರೇಕ ವ್ಯಾಪ್ತಿಯನ್ನು ಈ ಟೀಕಾವಾಕ್ಯ ನಿರಾಕರಿಸುತ್ತದೆ.

## ॥ व्यतिरेक अवच्छिन्नस्य इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**दृश्यत्व व्यतिरेक अवच्छेदेन इत्यर्थः।**

ನಿರುಪಾಧಿಕರೂಪನು ಅಪರಾಧೀನ ಪ್ರಕಾಶನಾಗಿದ್ದರೂ, ದೃಶ್ಯತ್ವ ವ್ಯತಿರೇಕ ಧರ್ಮದಿಂದ ಅವಚ್ಛೇದಿಸಲ್ಪಟ್ಟ ಅಂದರೆ ಬೇರ್ಪಡಿಸಲ್ಪಟ್ಟ ಎಂದರ್ಥ.

**अयं अभिसन्धिः– यथा हि, स्वरूपेण अपरिच्छिन्न यद्गतं तदेव घटादि अवच्छेदेन परिच्छिन्नं उच्यते। एवं स्वरूपेण अपराधीन प्रकाशं यत् निरुपाधिकं रूपं तस्यैव दृश्यत्व व्यतिरेक अवच्छेदेन दृश्यत्वात् अधिकरण ज्ञान सम्भवेन युक्तः तत्र व्याप्तिग्रहः।**



ಇಲ್ಲಿ ಈ ಅಭಿಪ್ರಾಯ ವಿರುತ್ತದೆಃ ಹೇಗೆ ಸ್ವರೂಪದಿಂದ ಅವಧಿಯಿಲ್ಲದ, ಅದೇ, ಘಟಾದಿ ಅವಚ್ಛೇದದಿಂದ ಅದರೊಳಗಿದ್ದದ್ದನ್ನು ಅವಧಿ ಎನ್ನುತೇವೆ. ಅದರಂತೆಯೆ, ಸ್ವರೂಪದಿಂದ ಅಪರಾಧೀನ ಪ್ರಕಾಶ ಯಾವ ನಿರುಪಾಧಿಕ ರೂಪವೊ ಅದೇ ದೃಶ್ಯತ್ವ ವ್ಯತಿರೇಕ ಅವಚ್ಛೇದದಿಂದ ದೃಶ್ಯವಾಗುತ್ತದೆ. ಅದರಿಂದ ಅಧಿಕರಣ ಅಥವಾ ಆಶ್ರಯ ಜ್ಞಾನ ಸಂಭವಿಸುವದರಿಂದ , ಅಲ್ಲಿ ದೃಶ್ಯತ್ವ ವ್ಯತಿರೇಕದ ವ್ಯಾಪ್ತಿಯನ್ನು ಗ್ರಹಿಸುವದು ಯುಕ್ತವಾಗಿದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**तत्र इदं वक्तव्यं, किम् सोपाधिके व्यतिरेक प्रदर्श्यते? किम् वा निरुपाधिके? आद्ये सोपाधिकं सत्यं मिथ्या वा? आद्यं दूषयति– न व्यतिरेक अवच्छिन्नस्य इति॥**
**व्यतिरेक अवच्छिन्नस्य अदृश्यत्वे तन्निष्ठतया व्यतिरेकस्य ज्ञातुं अशक्यत्वात् सत्यस्य दृश्यत्वं अवश्यंभावात् व्यभिचार इत्यर्थः।**

ಅಲ್ಲಿ, ಇದನ್ನು ಹೇಳಬೇಕು, ಏಕೆ ಸೋಪಾಧಿಕ ವ್ಯತಿರೇಕ ಪ್ರದರ್ಶಿಸುತ್ತದೊ? ಅಥವಾ ನಿರುಪಾಧಿಕ ವ್ಯತಿರೇಕವೊ? ಮೊದಲ್ನೆಯದಾದರೆ. ಸೋಪಾಧಿಕವು ಸತ್ಯವಾಗಿದೆಯೋ ಅಥವಾ ಮಿಥ್ಯಾ ಆಗಿದೆಯೊ? ಎಂಬುದಕ್ಕೆ ಈ ಟೀಕಾವಾಕ್ಯ ಮೊದಲನೆಯ ವಿಕಲ್ಪವನ್ನು ದೂಷಿಸುತ್ತದೆ. ಅದನ್ನು ಈ ಕೆಳಗಿನಂತೆ ವಿವರಿಸಬಹುದುಃ

ಇಲ್ಲಿ, ವ್ಯತಿರೇಕ ಅವಚ್ಛೇದದಿಂದ ಉಂಟಾದ ವ್ಯತಿರೇಕ ಅವಚ್ಛಿನ್ನವು (ನಿರುಪಾಧಿಕರೂಪ) ದೃಶ್ಯವಾಗುವುದಿಲ್ಲ ಎನ್ನುವುದಾದರೆ, ಅದರ ಅದೃಶ್ಯತ್ವದಿಂದ, ಅದರನಿಷ್ಠವಾದ ದೃಶ್ಯತ್ವ ವ್ಯತಿರೇಕವನ್ನು ತಿಳಿಯಲು ಅಶಕ್ಯವೇ ಸರಿ. ಆದುದರಿಂದ, ಸತ್ಯವಾದ ಸೋಪಾಧಿಕದ ದೃಶ್ಯತ್ವ ಆವಶ್ಯಕವಾಗುತ್ತದೆ. ಅದರಿಂದ ದೃಶ್ಯತ್ವ ಹೇತು ಆತ್ಮನಲ್ಲಿ ವ್ಯಭಿಚರಿಸುತ್ತದೆ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆಃ

**यत् निष्ठतया व्यतिरेकस्य सिद्धिः भवति, तस्य सत्यत्व दृश्यत्व व्यतिरेक निश्चयार्थं दृश्यत्वस्य अङ्गीकर्तव्यत्वेन अनैकान्त्य तादवस्थ्यम् इत्यर्थः।**

ಯಾವುದರ ನಿಷ್ಠತೆಯನ್ನನುಸರಿಸಿ, ವ್ಯತಿರೇಕವು ಸಿದ್ಧವಾಗುತ್ತದೊ, ಅದರ ಸತ್ಯತ್ವದ, ದೃಶ್ಯತ್ವ ವ್ಯತಿರೇಕವನ್ನು ನಿಶ್ಚಯಿಸುವಗೋಸ್ಕರ, ದೃಶ್ಯತ್ವವನ್ನು ಅಂಗೀಕರಿಸಬೇಕಾಗುವದರಿಂದ ಅನೈಕಾಂತ್ಯ ದೋಷವು ಹಾಗೆಯೆ ಉಳಿಯುತ್ತದೆ ಎಂದರ್ಥ.

## ॥ व्यतिरेक अवच्छिन्नस्य सत्यत्वे इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**तत्र इदं वक्तव्यं, किम् सोपाधिके व्यतिरेकः प्रदर्श्यते किं वा निरुपाधिके। आद्ये, तत् सोपाधिक सत्यं मिथ्या वा। आद्यं दूषयति– व्यतिरेक अवच्छिन्नस्य सत्यत्व इति॥**
**व्यतिरेक अवच्छिन्नस्य अदृश्यत्वे अधिकरण ज्ञान अभावेन तन्निष्ठतया व्यतिरेकस्य ज्ञातुं अशक्यत्वेन तदर्थं सत्यस्य तस्य दृश्यत्व अवश्यम्भावात् व्यभिचार इत्यर्थः।**

ಅಲ್ಲಿ ಇದನ್ನು ಹೇಳಬೇಕು. ಏಕೆ, ಸೋಪಾಧಿಕ ವ್ಯತಿರೇಕ ಪ್ರದರ್ಶಿಸುತ್ತದೊ? ಅಥವಾ ನಿರುಪಾಧಿಕದ್ದೊ? ಮೊದಲನೆ ವಿಕಲ್ಪವೆಂದರೆ, ಅದು ಸೋಪಾಧಿಕ ಸತ್ಯವಾದದ್ದೊ ಅಥವಾ ಮಿಥ್ಯಾನೊ? ಇಲ್ಲಿಯ ಮೊದಲ್ನೆ ವಿಕಲ್ಪವನ್ನು ಈ ಟೀಕಾವಾಕ್ಯ ದೂಷಿಸುತ್ತದೆ.

ಅಂದರೆ, ವ್ಯತಿರೇಕ ಅವಚ್ಛೇದದಿಂದ ಉಂಟಾದ ವ್ಯತಿರೇಕ ಅವಚ್ಛಿನ್ನವು ದೃಶ್ಯತ್ವವಾಗದಿದ್ದರೆ, ಅಧಿಕರಣದ ಜ್ಞಾನವಿಲ್ಲದಕಾರಣ ಅದಕ್ಕೆನಿಷ್ಠವಾದ ದೃಶ್ಯತ್ವ ವ್ಯತಿರೇಕವನ್ನು ತಿಳಿಯುವದು ಅಶಕ್ಯವಾದ್ದರಿಂದ, ತದರ್ಥವಾದ ಸೋಪಾಧಿಕ ಸತ್ಯತ್ವದ ದೃಶ್ಯತ್ವ ಆವಶ್ಯಕವಾಗುವದರಿಂದ, ದೃಶ್ಯತ್ವ ಹೇತುವಿನ ಆತ್ಮನಲ್ಲಿ ವ್ಯಭಿಚಾರ ಉಂಟಾಗುತ್ತದೆ ಎಂದರ್ಥ.

## ॥ मिथ्यात्व इति ॥

<u>ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ</u>

**द्वितीयं दूषयति– मिथ्यात्व इति।**
**अनेन दृश्यत्व साधन व्यतिरेकेण सिद्धेन किम् प्रयोजनम्, न किमपि। तत्र मिथ्यात्वरूप साध्य व्यतिरेक अभावेन, व्यतिरेकव्याप्तेः प्रदर्शयितुम् अशक्यत्वात् इत्यर्थः।**

ಇಲ್ಲಿ, ಮೇಲೆ ನಮೂದಿಸಿದ ಸೋಪಾಧಿಕ ವ್ಯತಿರೇಕದ ಎರಡನೆ ವಿಕಲ್ಪವಾದ ಮಿಥ್ಯಾತ್ವವನ್ನು ಈ ಟೀಕಾವಾಕ್ಯ ದೂಷಿಸುತ್ತದೆ.

ಇಂತಹ ದೃಶ್ಯತ್ವ ವ್ಯತಿರೇಕ ಸಾಧನದಿಂದ ಏನು ಪ್ರಯೋಜನ? ಏನೂ ಇಲ್ಲ. ಅಲ್ಲಿ ಮಿಥ್ಯಾತ್ವರೂಪ ಸಾಧ್ಯ ವ್ಯತಿರೇಕ ಅಭಾವತೆಯಿಂದ ದೃಶ್ಯತ್ವ ಹೇತುವಿನ ವ್ಯತಿರೇಕವ್ಯಾಪ್ತಿಯನ್ನೆ ಪ್ರದರ್ಶಿಸಲು ಶಕ್ಯವಾಗುವದಿಲ್ಲ ಎಂದರ್ಥ.

<u>ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:</u>

**द्वितीयं दूषयति– मिथ्यात्व इति॥**
**अनेन दृश्यत्वरूप साधनस्य व्यतिरेकेण किमपि। मिथ्यात्वरूप साध्य व्यतिरेक अभावेन व्यतिरेक व्याप्तेः अदर्शितत्वात् इत्यर्थः।**

ಇಲ್ಲಿ, ಮೇಲೆ ನಮೂದಿಸಿದ ಸೋಪಾಧಿಕ ವ್ಯತಿರೇಕದ ಎರಡನೆ ವಿಕಲ್ಪವಾದ ಮಿಥ್ಯಾತ್ವವನ್ನು ಈ ಟೀಕಾವಾಕ್ಯ ದೂಷಿಸುತ್ತದೆ.

ಇಂತಹ ದೃಶ್ಯತ್ವ ವ್ಯತಿರೇಕ ಸಾಧನದಿಂದ ಏನು ಪ್ರಯೋಜನ? ಏನೂ ಇಲ್ಲ. ಅಲ್ಲಿ ಮಿಥ್ಯಾತ್ವರೂಪ ಸಾಧ್ಯವ್ಯತಿರೇಕ ಇಲ್ಲದ ಕಾರಣ ವ್ಯತಿರೇಕವ್ಯಾಪ್ತಿಯನ್ನೆ ತೋರಿಸಲು ಸಾಧ್ಯವಾಗುವದಿಲ್ಲ ಎಂದರ್ಥ.

## ॥ किम् अनेन इति ॥

<u>ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:</u>

**सत्ये व्यभिचार परिहारार्थं दृश्यत्व व्यतिरेकस्य व्युत्पादनीयत्वेन मिथ्याभूते तत् व्युत्पादने न किमपि प्रयोजनं इत्यर्थः।**



ಸತ್ಯ ಸೋಪಾಧಿಕವನ್ನು ತೆಗೆದುಕೊಂಡರೆ, ಅಲ್ಲಿ ಉಂಟಾಗುವ ವ್ಯಭಿಚಾರ ಪರಹಾರಕ್ಕಾಗಿ, ದೃಶ್ಯತ್ವ ವ್ಯತಿರೇಕದ ವ್ಯುತ್ಪಾದಕವೇ ಮಿಥ್ಯಾಭೂತವಾದಲ್ಲಿ, ಅದರ ವ್ಯೂತ್ಪಾದನದಿಂದ ಏನು ಪ್ರಯೋಜನ? ಏನು ಪ್ರಯೋಜನವಿಲ್ಲ ಎಂದರ್ಥ.

## ॥ भाग–असिद्धिः इति ॥

<u>ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:</u>

**सोपाधिकस्य मिथ्यात्वे, तस्यापि पक्षिकाकर्तव्यतया, दृश्यत्वस्य तत्र अवृत्तौ भाग असिद्धिः इत्यर्थः।**

ಸೋಪಾಧಿಕವು ಮಿಥ್ಯಾ ಆದಲ್ಲಿ, ಅದನ್ನು ಕೂಡ ಮಿಥ್ಯಾತ್ವ ಅನುಮಾನದ್ ಪಕ್ಷದಲ್ಲಿ ಸೇರಿಸಬೇಕಾಗುವದು. ಆದರೂ, ದೃಶ್ಯತ್ವವನ್ನು ಅಲ್ಲಿ ಹೇಳಲಾಗುವದಿಲ್ಲ. ಹೀಗಾಗಿ ಪಕ್ಷದ ಒಂದು ಭಾಗದಲ್ಲಿ ದೃಶ್ಯತ್ವ ಹೇತುವಿಗೆ ಅಧಿಕರಣ ಇರುವದಿಲ್ಲ. ಆದ್ದರಿಂದ ಇಲ್ಲಿ ಭಾಗ-ಅಸಿದ್ಧಿ ದೋಷ ಉಂಟಾಗುತ್ತದೆ ಎಂದರ್ಥ.

<u>ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:</u>

**सोपाधिकस्य मिथ्यात्वे, तस्यापि पक्षिकाकर्तव्यतया, दृश्यत्वस्य तत्र अवृत्तौ भाग असिद्धिः इत्यर्थ।**

ಸೋಪಾಧಿಕವು ಮಿಥ್ಯಾ ಆದಲ್ಲಿ, ಅದನ್ನು ಕೂಡ ಮಿಥ್ಯಾತ್ವ ಅನುಮಾನದ ಪಕ್ಷದಲ್ಲಿ ಸೇರಿಸಬೇಕಾಗುವದು. ಆದರೂ, ದೃಶ್ಯತ್ವವನ್ನು ಅಲ್ಲಿ ಹೇಳಲಾಗುವದಿಲ್ಲ. ಹೀಗಾಗಿ ಪಕ್ಷದ ಒಂದು ಭಾಗದಲ್ಲಿ ದೃಶ್ಯತ್ವ ಹೇತುವಿಗೆ ಅಧಿಕರಣ ಇರುವದಿಲ್ಲ. ಆದ್ದರಿಂದ ಇಲ್ಲಿ ಭಾಗ-ಅಸಿದ್ಧಿ ದೋಷ ಉಂಟಾಗುತ್ತದೆ ಎಂದರ್ಥ.

## ॥ दृश्यत्व व्यतिरेक इति॥

<u>ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:</u>

**एवं विशिष्टस्य मिथ्यात्वे, विशिष्टे साध्य व्यतिरेको नास्ति इत्युक्तम्। इदानीं साधन व्यतिरेको वा तत् ज्ञानं वा त्याज्यम्। साधनव्यतिरेको हि सोपाधिकस्य दृश्यत्व व्यतिरेक अवच्छिन्नत्वं अपेक्षते। सोपाधिक अवच्छिन्नतया साधनव्यतिरेक ज्ञानं तु सोपाधिकस्य दृश्यत्वं अपेक्षते। न च दृश्यत्व व्यतिरेक अवच्छिन्नत्वयोः एकत्र अवस्थानं युक्तं विरिधात्।**

ಈ ರೀತಿಯಾಗಿ ವಿಶಿಷ್ಟವು ಮಿಥ್ಯಾ ಎಂದಾಗ ವಿಶಿಷ್ಟದಲ್ಲಿ ಸಾಧ್ಯ ವ್ಯತಿರೇಕವಿರಲು ಸಾಧ್ಯವಿಲ್ಲ ಎಂದು ಹೇಳಲಾಯಿತು. ಈಗ ಸಾಧನ ವ್ಯತಿರೇಕ ಅಥವಾ ಅದರ ಜ್ಞಾನವನ್ನಾದರು ತ್ಯಜಿಸಬೇಕಾಗುವದು ಎಂಬುದನ್ನು ಪ್ರತಿಪಾದಿಸಲಾಗುವದು. ಇಲ್ಲಿ ಸಾಧನವ್ಯತಿರೇಕವು ಸೋಪಾಧಿಕದ ದೃಶ್ಯತ್ವ ವ್ಯತಿರೇಕದ ಅವಚ್ಛಿನ್ನತ್ವವನ್ನು ಅಪೇಕ್ಷಿಸುತ್ತದೆ. ಇನ್ನು ಸೋಪಾಧಿಕ ಅವಚ್ಛಿನ್ನಮೂಲಕ ಸಾಧನ ವ್ಯತಿರೇಕ ಜ್ಞಾನವು ಸೋಪಾಧಿಕದ ದೃಶ್ಯತ್ವವನ್ನು ಅಪೇಕ್ಷಿಸುತ್ತದೆ. ದೃಶ್ಯತ್ವ ಮತ್ತು ವ್ಯತಿರೇಕ ಅವಚ್ಛಿನ್ನತ್ವಗಳನ್ನು ಒಂದೆಕಡೆ ಅವಸ್ಥಾನವನ್ನು ಹೇಳುವದು ಯುಕ್ತವಲ್ಲ, ಅದರಿಂದ ವಿರೋಧ ದೋಷ ಉಂಟಾಗುತ್ತದೆ.

**एवं च "व्यतिरेक अवच्छिन्नस्य स्यात् एव दृश्यता" इति आनन्दबोधोक्ति व्याहत् इत्याह– दृश्यत्व व्यतिरेक इति॥**

ಈ ರೀತಿಯಾಗಿ "व्यतिरेक अवच्छिन्नस्य स्यात् एव दृश्यता" ಎಂಬ ಆನಂದಬೋಧೋಕ್ತಿಯು ವ್ಯಾಹತಿ ಎಂಬ ದೋಷವನ್ನುಂಟು ಮಾಡುತ್ತದೆ ಎಂದು ಈ ಟೀಕಾವಾಕ್ಯ ಪ್ರತಿಪಾದಿಸುತ್ತದೆ.

**ननु भाव–अभावयोः सामानाधिकरण्ये हि विप्रतिषेधः स्यात्। न तु एतदस्ति। स्वरूपमात्रे दृश्यत्व अभावः, स्वरूपमात्रात् भिन्ने दृश्यत्व व्यतिरेक अवच्छिन्ने दृश्यत्वं इति अधिकरण भेद अङ्गीकारात् इति चेत्।**

ಇಲ್ಲಿ ಒಂದು ಶಂಕೆಗೆ ಆಸ್ಪದವಿದೆ. ಅದನ್ನು ಹೀಗೆ ವಿವರಿಸಬಹುದುಃ ಭಾವ ಮತ್ತು ಅಭಾವಗಳಿಗೆ ಸಾಮಾನಾಧಿಕರಣ ಅಥವಾ ಒಂದೇ ಅಧಿಕರಣವೇ ಇರುವುದಾದರೆ ವಿಪ್ರತಿಷೇಧ ಅಂದರೆ ಪರಸ್ಪರ ವಿರೋಧ ಉಂಟಾಗುತ್ತದೆ. ಆತರಹದ ಅವಸ್ಥೆ ಇಲ್ಲಿ ಇಲ್ಲ. ನಾವು (ಪರಪಕ್ಷದವರು) ಹೇಳುವದು ಇಷ್ಟೆ, ಸ್ವರೂಪಮಾತ್ರಕ್ಕೆ ದೃಶ್ಯತ್ವ ಇಲ್ಲವೆಂದು ಹಾಗೂ ಸ್ವರೂಪಮಾತ್ರಕ್ಕಿಂತ ಭಿನ್ನವಾದ ದೃಶ್ಯತ್ವ ವ್ಯತಿರೇಕ ಅವಚ್ಛಿನ್ನದಲ್ಲಿ ದೃಶ್ಯತ್ವ ಇದೆ, ಹೀಗೆ ಅಧಿಕರಣ ಭೇದವಿದೆ ಎಂದು ಅಂಗೀಕರಿಸಬೇಕು ಎಂದು, ಎಂದರೆ

**मैवम्। दृश्यत्व व्यतिरेकाश्रयस्य दृश्यत्व व्यतिरेक अवच्छिन्नतया दृश्यता सिद्ध्यर्थं दृश्यत्वव्यतिरेक–दृश्यत्वयोः सामानाधिकरण्यस्य आवश्यकत्वात्।**

ಅದು ಹಾಗಲ್ಲ. ದೃಶ್ಯತ್ವ ವ್ಯತಿರೇಕಾಶ್ರಯದ ದೃಶ್ಯತ್ವ ವ್ಯತಿರೇಕ ಅವಚ್ಛಿನ್ನವಾಗಿ ದೃಶ್ಯತಾ ಸಿದ್ಧಿಸಲು ದೃಶ್ಯತ್ವ ವ್ಯತಿರೇಕ ಮತ್ತು ದೃಶ್ಯತ್ವಗಳಲ್ಲಿ ಸಾಮಾನಾಧಿಕರಣವು ಆವಶ್ಯಕವಾಗುತ್ತದೆ.

**अन्यथा एकत्र व्यतिरेकः अपरत्र दृश्यत्व व्यतिरेक अभावः इत्युक्तौ, यत्र व्यतिरेकमात्रं तत्र स्वरूपमात्र सिद्धौ अपि, तत् अवच्छिन्नतया व्यतिरेक ज्ञान असम्भवः।**

ಅನ್ಯಥಾ, ಒಂದು ಕಡೆ ವ್ಯತಿರೇಕ ಇನ್ನೊಂದು ಕಡೆ ದೃಶ್ಯತ್ವ ವ್ಯತಿರೇಕ ಅಭಾವ ವೆಂದು ಹೇಳಿದರೆ, ಎಲ್ಲಿ ವ್ಯತಿರೇಕಮಾತ್ರವಿದೆಯೊ ಅಲ್ಲಿ ಸ್ವರೂಪಮಾತ್ರ ಸಿದ್ಧವಾದರೂ, ಸ್ವರೂಪದ ಅವಚ್ಛಿನ್ನನನುಸಾರವಾಗಿ ವ್ಯತಿರೇಕದ ಜ್ಞಾನ ಅಸಂಭವವೆನಿಸುತ್ತದೆ.

**न हि तस्य अज्ञाने तत् अवच्छिन्नतया किञ्चित् ज्ञातुं शक्यम्। यत्र दृश्यत्वमात्रं तत्र तत् व्यतिरेकस्यैव असम्भव इति, दूरे तत् अवधारणम् इति।**

ಮತ್ತು ಸ್ವರೂಪದ ಅಜ್ಞಾನವಿದ್ದಲ್ಲಿ, ಅದನ್ನು ಅವಚ್ಛಿನ್ನನನುಸಾರವಾಗಿ ಕಿಂಚಿತಾಗಿ ತೀಳಿಯಲು ಸಾಧ್ಯವಿಲ್ಲ. ಎಲ್ಲಿ ದೃಶ್ಯತ್ವಮಾತ್ರವಿದೆಯೊ ಅಲ್ಲಿ ಅದರ ವ್ಯತಿರೇಕವೇ ಇರಲು ಸಾಧ್ಯವಿಲ್ಲವಂತಿರುವಾಗ, ಅದರ ಅವಧಾರಣವಂತೂ ದೂರಿನ ಸಂಗತಿ.

**श्रुतिभिः अपि सर्वथा दृश्यत्वं निषिद्ध्यते चेत्, ब्रह्मसम्बन्धित्वेन एव तत् निषेद्धव्यम्। न च ब्रह्मणः अज्ञाने तत्र दृश्यत्वं निषेद्धुं शक्यम्। अज्ञाते धर्मिणि धर्म निषेध अयोगात्।**

ಇನ್ನು ಶ್ರುತಿಗಳು ಕೂಡ ಆತ್ಮನಲ್ಲಿ ಅಥವಾ ಬ್ರಹ್ಮನಲ್ಲಿ ದೃಶ್ಯತ್ವವನ್ನು ನಿಷೇಧಿಸುತ್ತವೆ ಎಂದರೆ, ಬ್ರಹ್ಮ ಸಂಬಂಧದಿಂದಲೇ ಅದನ್ನು ನಿಷೇಧಿಸಬೇಕು, ವಿನಹಾ, ಬ್ರಹ್ಮನ



ಅಜ್ಞಾನವಿದ್ದಲ್ಲಿ ದೃಶ್ಯತ್ವವನ್ನು ನಿಷೇಧಿಸುವದು ಅಶಕ್ಯಪ್ರಾಯವೆ ಸರಿ. ಮತ್ತು ಅಜ್ಞಾತವಾದ ಧರ್ಮಿಣಿಯಲ್ಲಿ ಧರ್ಮ ನಿಷೇಧವು ಅಯೋಗ್ಯವೆನಿಸುವದು.

## ॥ विप्रतिषिद्धं इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु भाव–अभावयोः सामानाधिकरण्ये हि विरोधः स्यात्। न च एतदस्ति। स्वरूपमात्रे दृश्यत्व अभावः। स्वरूपमात्रात् भिन्ने दृश्यत्व व्यतिरेक अवच्छिन्ने सोपाधिके दृश्यत्वं इति अधिकरण भेद अङ्गीकारात् इति चेत्।**

**मैवम्। स्वरूपस्यैव दृश्यत्व व्यतिरेक अवच्छिन्नत्वेन दृश्यत्व उक्तौ तत् अवच्छेदेन तस्यैव दृश्यत्व व्यतिरेक दृश्यत्वयोः एकाधिकरण प्राप्त्या विरोधः स्यात् एव इति आशयात्।**

ಭಾವ-ಅಭಾವಗಳಲ್ಲಿಯ ಸಾಮಾನಾಧಿಕರಣ್ಯವೆ ವಿರೋಧ ದೋಷವನ್ನು ಉಂಟುಮಾಡುತ್ತದೆ. ಆದರೆ ಇಲ್ಲಿ ಆತರಹದ ಅವಸ್ಥೆ ಇರುವದಿಲ್ಲ. ಇಲ್ಲಿ ಸ್ವರೂಪಮಾತ್ರದಲ್ಲಿ ದೃಶ್ಯತ್ವ ಇರುವದಿಲ್ಲ. ಸ್ವರೂಪಮಾತ್ರಕ್ಕಿಂತ ಭಿನ್ನದಲ್ಲಿ ದೃಶ್ಯತ್ವದ ವ್ಯತಿರೇಕ ಅವಚ್ಛಿನ್ನ ಸೋಪಾಧಿಕದಲ್ಲಿ ದೃಶ್ಯತ್ವವಿದೆ. ಹೀಗೆ ಅಧಿಕರಣ ಭೇದವನ್ನು ಅಂಗೀಕರಿಸಲಾಗಿದೆ, ಎಂತೆಂದರೆ,

ಅದು ಹಾಗಿರುವದಿಲ್ಲ. ಸ್ವರೂಪವನ್ನೇ ದೃಶ್ಯತ್ವ ವ್ಯತಿರೇಕ ಅವಚ್ಛಿನ್ನತ್ವದಿಂದ ದೃಶ್ಯತ್ವ ಹೇಳಲಾಗಿರುವದರಿಂದ, ಅದರ ಅವಚ್ಛೆದದಿಂದಲೇ ಅದರ ದೃಶ್ಯತ್ವ ಮತ್ತು ವ್ಯತಿರೇಕ ದೃಶ್ಯತ್ವಗಳಲ್ಲಿ ಒಂದೆ ಅಧಿಕರಣ ಪ್ರಾಪ್ತವಾದಂತಾಗಿ ಇಲ್ಲಿ ವಿರೋಧವೇ ಉಂಟಾಗುತ್ತದೆ ಎಂಬ ಆಶಯವಿರುತ್ತದೆ.

## ॥ अत एव इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु आत्मनो दृश्यत्व अङ्गीकारे, "यतो वाचो निवर्तन्ते, यत् तत् अद्रेश्यं" इत्यादि वेदादि अज्ञेयत्व प्रतिपादक श्रुति विरोधः स्यात् इति चेत् तत्र आह– अत एव इति॥**

ಆತ್ಮನಿಗೆ ದೃಶ್ಯತ್ವವನ್ನು ಅಂಗೀಕರಿಸಿದರೆ "यतो वाचो निवर्तन्ते" ಅಂದರೆ ಅಲ್ಲಿ ನಮ್ಮ ವಾಚಾ ಮುಟ್ಟುವದಿಲ್ಲ., "यत् तत् अद्रेश्यं" ಅಂದರೆ ಯವುದು ನಮಗೆ ಕಾಣಲಾರದ್ದು, ಎಂಬ ಮುಂತಾದ ವೇದಾದಿಗಳಿಗೆ ಅಜ್ಞೆಯತ್ವ ಪ್ರತಿಪಾದಕ ಶ್ರುತಿಗಳ ವಿರೋಧ ಬರುವದು ಎಂಬ ಹೇಳಿಕೆಯನ್ನು ತಳ್ಳಿಹಾಕಲು ಈ ಟೀಕಾವಾಕ್ಯವಿರುತ್ತದೆ.

**श्रुतिभिः अपि ब्रह्मसम्बन्धित्वेन एव दृश्यत्वं निषेद्धव्यम् न च अधिकरणभूतस्य ब्रह्मणः अज्ञाने तत्र दृश्यत्वं निषेद्धुं शक्यम्। अज्ञाते धर्मिणि धर्म निषेध अयोगात्। सद्वयाम् अधिकरण प्रतियोगिभ्यां अभावो निरूप्यते इत्युक्तत्वात्।**

**एवं च सर्वथा दृश्यत्व निषेधे व्याघात प्रसङ्गात् एव साकल्येन अज्ञेयत्वपरतया श्रुतयो योज्या इत्यर्थः।**

ಈ ಶೃತಿಗಳನ್ನು ಕೂಡ ಬ್ರಹ್ಮಸಂಬಂಧದಿಂದಲೇ ದೃಶ್ಯತ್ವವನ್ನು ನಿಷೇಧಿಸಬೇಕು. ಮತ್ತು ಅಧಿಕರಣಭೂತ ಬ್ರಹ್ಮನ ಅಜ್ಞಾನವಿದ್ದಾಗ ಅಲ್ಲಿ ದೃಶ್ಯತ್ವವನ್ನು ನಿಷೇಧಿಸಲು ಶಕ್ಯವಾಗುವದಿಲ್ಲ. ಮತ್ತು ಧರ್ಮಿಣಿಯ ಜ್ಞಾನವಿಲ್ಲದಾಗ, ಅಲ್ಲಿ ಧರ್ಮವನ್ನು ನಿಷೇಧಿಸುವದು ಅಯೋಗ್ಯವಾಗುತ್ತದೆ. ಸತ್ಯವಾದ ಅಧಿಕರಣ, ಪ್ರತಿಯೋಗಿಗಳ ಅಭಾವವನ್ನು ನಿರೂಪಿಸಲಾಗುತ್ತದೆ ಎಂದು ಹೇಳಲಾಗಿದೆ.

ಈ ರೀತಿಯಾಗಿ ಆತ್ಮನಲ್ಲಿ ಸರ್ವಥಾ ದೃಶ್ಯತ್ವವನ್ನು ನಿಷೇಧಿಸಿದಲ್ಲಿ ವ್ಯಾಘಾತ ಪ್ರಸಂಗ ಉಂಟಾಗುವದರಿಂದ ಸಾಕಲ್ಯದಿಂದ ಅಜ್ಞೆಯತ್ವಪರವಾಗಿ ಶೃತಿಗಳನ್ನು ಯೋಜಿಸಬೇಕು ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**एवं च सर्वथा दृश्यत्व निषेधे व्याघातात् एव अन्यत्वपरं तासां इत्याह– अत एव इति।**

ಈ ರೀತಿಯಾಗಿ ಆತ್ಮನಲ್ಲಿ ಸರ್ವಥಾ ದೃಶ್ಯತ್ವವನ್ನು ನಿಷೇಧಿಸಿದಲ್ಲಿ ವ್ಯಾಘಾತ ಉಂಟಾಗುವದರಿಂದ ಶ್ರುತಿಗಳನ್ನು ಅನ್ಯತ್ವಪರ ಯೋಜಿಸಬೇಕು ಎಂದು ಈ ಟೀಕಾವಾಕ್ಯ ತಿಳಿಸುತ್ತದೊ

**एवं तावत् अवच्छिन्नस्य दृश्यत्वेन तन्निष्ठतया व्यतिरेकस्य शक्य ज्ञानत्वेऽपि अवच्छिन्नस्य मिथ्यात्वात् दृश्यत्वात् च साध्यसाधनयोः व्यतिरेकस्वरूपमेव तत्र न सम्भवति इति सोपाधिक व्यतिरेकः प्रदर्श्यत इति पक्षः दूषितः।**

ಈ ರೀತಿಯಾಗಿ, ಅವಚ್ಛಿನ್ನದ ದೃಶ್ಯತ್ವದಿಂದ ಅದಕ್ಕೆ ನಿಷ್ಠವಾಗಿ ವ್ಯತಿರೇಕದ ಜ್ಞಾನತ್ವ ಶಕ್ಯವಿದ್ದರೂ, ಅವಚ್ಛಿನ್ನದ ಮಿಥ್ಯಾತ್ವದಿಂದ ಹಾಗೂ ದೃಶ್ಯತ್ವದಿಂದ , ಸಾಧ್ಯಸಾಧನಗಳಲ್ಲಿ ವ್ಯತಿರೇಕ ಸ್ವರೂಪವೇ ಅಲ್ಲಿ ಸಂಭವಿಸಲಾರದ ಕಾರಣ ಸೋಪಾಧಿಕ ವ್ಯತಿರೇಕ ಪ್ರದರ್ಶಿಸುವ ಪಕ್ಷವನ್ನು ದೂಷಿಸಲಾಯಿತು.

## ॥ निरूपाधिकरूप इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**एवं साध्यसाधनयोः व्यतिरेकस्य सोपाधिके असम्भवात् सोपाधिक व्यतिरेकः प्रदर्श्यत इति पक्षः दूषितः। इदानी निरुपाधिक व्यतिरेकः प्रदर्श्यत इति पक्ष दूषयति॥**

ಈ ರೀತಿಯಾಗಿ ಸಾಧ್ಯಸಾಧನಗಳ ವ್ಯತಿರೇಕ ಸೋಪಾಧಿಕದಲ್ಲಿ ಅಸಂಭವಾದ್ದರಿಂದ ಸೋಪಾಧಿಕ ವ್ಯತಿರೇಕ ಪ್ರದರ್ಶನದ ಪಕ್ಷವನ್ನು ದೂಷಿಸಲಾಯಿತು. ಈಗ ನಿರುಪಾಧಿಕ ವ್ಯತಿರೇಕ ಪ್ರದರ್ಶಿಸುವ ಪಕ್ಷವನ್ನು ದೂಷಿಸುತ್ತಾರೆ.

**निरुपाधिक आत्मनः सत्यत्वेन तत्र साध्यव्यतिरेकस्य, अदृश्यत्वे सद्भावेन साधन व्यतिरेकस्य च स्वरूपतः सद्भावेऽपि तत् ज्ञानार्थं तत् अधिकरणभूतस्य ज्ञातव्यत्वेन दृश्यत्व प्राप्त्या अनैकान्तिकत्वं इत्यर्थः।**



ನಿರುಪಾಧಿಕ ಆತ್ಮನು, ಸತ್ಯನಾದ್ದರಿಂದ ಅಲ್ಲಿ ಸಾಧ್ಯವ್ಯತಿರೇಕದ, ಮತ್ತು ಅದೃಶ್ಯನಾದ್ದರಿಂದ ಸಾಧನವ್ಯತಿರೇಕದ, ಇರುವಿಕೆ ಸತ್ಯವಾಗಿದ್ದರೂ, ಅದರ ಜ್ಞಾನಕ್ಕಾಗಿ ಅಧಿಕರಣಭೂತನಾದ ಆತ್ಮನ ಜ್ಞಾನವ್ಯತ್ವದಿಂದಲೇ ದೃಶ್ಯತ್ವ ಪ್ರಾಪ್ತವಾಗಿದ್ದರಿಂದ, ಅನೈಕಾಂತಿಕತ್ವ ದೋಷ ಉಂಟಾಗುತ್ತದೆ ಎಂದರ್ಥ

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**इदानीं निरुपाधिक व्यतिरेक प्रदर्श्यत इति पक्षं दूषयति– निरुपाधिक इति॥**

ಈಗ ನಿರುಪಾಧಿಕ ವ್ಯತಿರೇಕ ಪ್ರದರ್ಶನ ಪಕ್ಷವನ್ನು ಈ ಟೀಕಾವಾಕ್ಯ ದೂಷಿಸುತ್ತದೆ.

**निरुपाधिकस्य आत्मनः सत्यत्वेन साध्य व्यतिरेकस्य अदृश्यत्वेन साधन व्यतिरेकस्य च स्वरूपतः सद्भावेऽपि निरुपाधिकस्य अदृश्यता तन्निष्ठत्वेन व्यतरेक निश्चयो न सम्भवति इति तत्र तन्निश्चयं वदता तस्य दृश्यत्वं वक्तव्यं इति अनैकान्तिकत्वं इत्यर्थः।**

ನಿರುಪಾಧಿಕ ಆತ್ಮನು, ಸತ್ಯನಾದ್ದರಿಂದ ಸಾಧ್ಯವ್ಯತಿರೇಕದ ಮತ್ತು ಅದೃಶ್ಯನಾದ್ದರಿಂದ ಸಾಧನ ವ್ಯತಿರೇಕದ ಸ್ವರೂಪತಃ ಇರುವಿಕೆ ಸತ್ಯವಾಗಿದ್ದರೂ, ನಿರುಪಾಧಿಕನ ಅದೃಶ್ಯತಾ ಮತ್ತು ಅದರನಿಷ್ಠತ್ವದಿಂದ ವ್ಯತಿರೇಕದ ನಿಶ್ಚಯ ಸಂಭವಿಸುವದಿಲ್ಲ ಎಂದು ಅಲ್ಲಿ ಅದರ ನಿಶ್ಚಯಕ್ಕಾಗಿ ಆತ್ಮನ ದೃಶ್ಯತ್ವವನ್ನು ಹೇಳಲೇಬೇಕು. ಅದರಿಂದ ಅನೈಕಾಂತಿಕ ದೋಷ ಉಂಟಾಗುತ್ತದೆ ಎಂದರ್ಥ.

**अत्र केनचित् प्रलपितं, स्वयंप्रकाशत्वेन प्रकाशमाने आत्मने "यतो वाचो निवर्तन्ते" इत्यादि वाक्यात् अदृश्यत्वाकारा बुद्धिः उत्पद्यते। तस्यां च अभिव्यक्तो दृगात्मा स्वाध्यस्तं दृश्यत्वाभाव वैशिष्ट्यं साधयति। एवं च आत्मस्वरूपे अदृश्येऽपि दृश्यत्वाभाव वैशिष्ट्यं दृश्यं भविष्यति।**

ಇಲ್ಲಿ ಕೆಲವರು ಹಗುರವಾಗಿ ಹೀಗೆ ಮಾತಾನಾಡುತ್ತಾರೆ, ಸ್ವಯಂಪ್ರಕಾಶತ್ವದಿಂದ ಪ್ರಕಾಶಮಾನನಾದ ಆತ್ಮನಲ್ಲಿ "यतो वाचो निवर्तन्ते" ಇತ್ಯಾದಿ ವಾಕ್ಯಗಳಿಂದ ಅದೃಶ್ಯಾಕಾರ ಬುದ್ಧಿ ಹುಟ್ಟುತ್ತದೆ. ಅದನ್ನು ಅಭಿವ್ಯಕ್ತ ಮಾಡಲು ಪ್ರಕಾಶಮಾನ ಆತ್ಮಾ ಸ್ವ-ಅಧ್ಯಸ್ತ ಅಂದರೆ ಸ್ವ-ಆರೋಪಿತ ದೃಶ್ಯತ್ವಾಭಾವ ವೈಶಿಷ್ಟ್ಯವನ್ನು ಹೊಂದುತ್ತದೆ. ಈ ರೀತಿಯಾಗಿ ಆತ್ಮಸ್ವರೂಪವು ಅದೃಶ್ಯವಾದರೂ ದೃಶ್ಯತ್ವಾಭಾವ ವೈಶಿಷ್ಟ್ಯ ದೃಶ್ಯವಾಗುತ್ತದೆ.

**न च वाच्यं दृश्यत्वाभाव वैशिष्टस्य मिथ्यात्वे दृश्यत्वं वास्तवं स्यात् इति। स्वप्ने भाव तद्विपर्यययोः अध्यस्तना दर्शनात्।**

ಹಾಗೆಯೆ ದೃಶ್ಯತ್ವಾಭಾವ ವೈಶಿಷ್ಟ್ಯವು ಮಿಥ್ಯಾತ್ವವಾಗಿರುವದರಿಂದ ಈ ದೃಶ್ಯತ್ವವು ವಾಸ್ತವ ಎಂದು ಹೇಳಬಾರದು. ಸ್ವಪ್ನದಲ್ಲಿ ಭಾವ ಮತ್ತು ಅದರ ವಿಪರ್ಯಯಗಳು ಆರೋಪಿತವಾಗಿ ಕಂಡುಬರುತ್ತವಲ್ಲವೆ. ಅದರಂತೆ ಎಂದು ತಿಳಿಯತಕ್ಕದ್ದು.

**तत् तुच्छम्। तथा हि–**

ಇದು ತಿರಸ್ಕಾರಕ್ಕೆ ಯೋಗ್ಯವಾದದ್ದಾಗಿದೆ. ಅದನ್ನು ಹೀಗೆ ವಿವರಿಸಬಹುದು:

**अदृश्याकार बुद्धिः किम् आत्मा अवच्छिन्नं अदृश्यं बोधयति? उत अनवच्छिन्नम्? आद्ये, अवच्छेदक आत्मनोऽपि ज्ञानं स्यात्। द्वितीये, कथं दृश्यत्वाभावविशिष्टस्य आत्मीयता सिद्धिः? वाक्यात् उत्पन्नायाश्च वृत्तेः अध्यस्त दृश्यत्व विषयकत्वेन कथं वाक्याप्रामाण्यापातः। किंच एवं**

अरोपितो दृश्यत्व व्यतिरेकः आत्मनीव प्रपञ्चेऽपि अस्ति इति असिद्धिः। प्रपञ्चे दृश्यत्वाभावस्य अध्यस्तत्वे तत् अभावरूपेण दृश्यत्वेन बाधगोचरेण भवितव्यम्। बाधविषयस्य च अध्यस्तत्वे बाधस्य अप्रामाण्य प्रसङ्गात् सत्यतासिद्धिः। अत एव स्वप्न दृष्टान्तोऽपि असम्प्रतिपन्नं इति अलं दुर्बलहिंसया।

ಇಲ್ಲಿ ಅದೃಶ್ಯಾಕಾರ ಬುದ್ಧಿಯು, ಏಕೆ, ಆತ್ಮನ ಅದೃಶ್ಯವಾದ ಅವಚ್ಛಿನ್ನರೂಪವನ್ನು ಬೋಧಿಸುತ್ತದೊ? ಅಥವಾ ಅವಚ್ಛಿನ್ನವಾಗದದ್ದನ್ನೊ?

ಮೊದಲನೆಯದಾದರೆ, ಅವಚ್ಛೆದಕ ಆತ್ಮನ ಕೂಡ ಜ್ಞಾನವಾಗುತ್ತದೆ. ಎರಡನೆಯದಾದರೆ, ಹೇಗೆ ದೃಶ್ಯತ್ವಾಭಾವ ವಿಶಿಷ್ಟದ ಆತ್ಮೀಯತೆ ಸಿದ್ಧವಾಗುತ್ತದೆ? ವಾಕ್ಯದಿಂದ ಉತ್ಪನ್ನವಾದ ವೃತ್ತಿಯಲ್ಲಿ ಅಧ್ಯಸ್ತವಾದ ಅಥವಾ ಆರೋಪಿತವಾದ ದೃಶ್ಯತ್ವದ ವಿಷಯಕವಾಗುವದರಿಂದ ಅದು ವಾಕ್ಯ ಹೇಗೆ ಪ್ರಮಾಣವೆಂದೆನುಸುತ್ತದೆ? ಮತ್ತು ಆರೋಪಿತ ದೃಶ್ಯತ್ವವು ವ್ಯತಿರೇಕ ಆತ್ಮನಲ್ಲಿರುವಂತೆ ಪ್ರಪಂಚದಲ್ಲಿ ಕೂಡ ಇರುವದರಿಂದ, ಅದು ಅಸಿದ್ಧ ಎಂದು ಎನ್ನ ಬೇಕಾಗುತ್ತದೆ. ಪ್ರಪಂಚದಲ್ಲಿ, ದೃಶ್ಯತ್ವಾಭಾವವು ಆರೊಪಿತವಾದ್ದರಿಂದ ಅದು ಅಭಾವರೂಪದಿಂದ ದೃಶ್ಯತ್ವವಾಗುತ್ತದೆ. ಆದ್ದರಿಂದ ಅದು ಬಾಧದಿಂದಲೆ ಗೋಚರಿಸುತ್ತದೆ. ಇನು ಬಾಧವಿಷಯವು ಆರೋಪಿತವೆನಿಸಿದಲ್ಲಿ ಬಾಧವು ಅಪ್ರಾಮಾಣ್ಯವಾಗುವ ಪ್ರಸಂಗ ಉಂಟಾಗಿ, ದೃಶ್ಯತ್ವವು ಸತ್ಯ ಎಂದು ಸಿದ್ಧವಾಗುತ್ತದೆ. ಆದ್ದರಿಂದಲೆ ಪರಪಕ್ಷದವರು ಪ್ರತಿಪಾದಿಸಿದ ಸ್ವಪ್ನ ದೃಷ್ಟಾಂತವು ನಮಗೆ ಒಪ್ಪಿಗೆಯಾಗಿರುವದಿಲ್ಲ. ಇಲ್ಲಿಗೆ ಸಾಕು ಈ ದುರ್ಬಲಹಿಂಸೆ.

<u>ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:</u>

उपसंहरति– निरुपाधिकरूप इति॥

ಇಲ್ಲಿನ ಈವರೆಗಿನ ಆತ್ಮನಲ್ಲಿ ದೃಶ್ಯತ್ವದ ಬಗ್ಗೆಯ ವಿಷಯವನ್ನು ಈ ಟೀಕಾವಾಕ್ಯ ಉಪಸಂಹರಿಸುತ್ತದೆ.

### ६.२.३.६ प्रकारान्तरेण आत्मनो दृश्यत्व समर्थनम्

## टीका

एवं आत्मैकत्व ज्ञानमपि सोपाधिकविषयं चेत् न मोक्षसाधनं स्यात्। निरुपाधिक विषयत्वे दृश्यत्वापत्तिः। किंच यथा दण्डिनो दर्शने देवदत्तोऽपि दृष्ट एव, एवं अवच्छिन्न आत्मनो दृश्यत्वेऽपि आत्मा दृष्ट एव इति किम् अनेन? तथापि शुद्धेन रूपेण न दृश्यत इति चेत् मा दर्शि। सत्येऽपि आत्मनि गतं दृश्यत्वम्। अनैकान्तिकं स्थितं एव। सोऽपि मिथ्या इति चेत् तर्हि किमत्र व्यतिरेकग्रहणेन?



इत्युक्तम्। अपि च एवं घटोऽपि अपराधीन प्रकाश इति भागासिद्धित्वं स्यात्।

ಈ ರೀತಿಯಾಗಿ, ಆತ್ಮೈಕತ್ವ ಜ್ಞಾನಕೂಡ ಸೋಪಾಧಿಕವಿಷಯ ಎಂದು ಹೇಳುವೂದಾದರೆ, ಮಿಥ್ಯಾಭೂತ ಸೋಪಾಧಿಕ ವಿಷಯಕ ಜ್ಞಾನವು ಭ್ರಮವಾಗಿರುವದರಿಂದ, ಅದರಿಂದ ಅವಿದ್ಯಾ ನಿವೃತ್ತಿಯು ಅಯೋಗ್ಯವಾಗುವದರಿಂದ, ಅದು ಮೋಕ್ಷಾರ್ಥ ಸಾಧನವಾಗಲಾರದು. ಇನ್ನು ಆತ್ಮೈಕತ್ವ ಜ್ಞಾನ, ನಿರುಪಾಧಿಕರೂಪದ ವಿಷಯವಾದಲ್ಲಿ, ಅಲ್ಲಿ ದೃಶ್ಯತ್ವ ಉಂಟಾಗುವ ಪ್ರಸಂಗವದಗುತ್ತದೆ. ಮತ್ತು ತಮ್ಮ "व्यतिरेक अवच्छिन्नस्य स्यात् एव दृश्यता" ಎಂಬ ವಚನದಂತೆ, ವ್ಯತಿರೇಕ ಅವಚ್ಛಿನ್ನ ಆತ್ಮನ ದೃಶ್ಯನಾದ್ದರಿಂದ ಆತ್ಮಾ ಕೂಡ ದೃಶ್ಯನಾಗಿದ್ದಾನೆ, ಹೇಗೆ ದಂಡ ದರ್ಶನವಾದಲ್ಲಿ ದಂಡ ಹಿಡಿದುಕೊಂಡ ದೇವದತ್ತನೂ ಕೂಡ ದೃಶ್ಯನಾಗುತ್ತಾನೊ ಹಾಗೆ.

ಶುದ್ಧರೂಪದಿಂದ ಆತ್ಮನು ದೃಶ್ಯನಲ್ಲ ಎಂತೆಂದರೆ, ಇಲ್ಲಿ ಇದನ್ನು ಸ್ಪಷ್ಟಪಡಿಸಬೇಕು. ದೃಶ್ಯತ್ವವು ಕೇವಲ ಜ್ಞಾನವಿಷಯವಾಗಿರುವದು ಎಂತಲೊ? ಅಥವಾ ಶುದ್ಧರೂಪನು ಜ್ಞಾನವಿಷಯತ್ವವಾದ್ದರಿಂದಲೊ? ಮೊದಲನೆಯದು ಎನ್ನುವದಾದರೆ. ಶುದ್ಧರೂಪವು ಜ್ಞಾನವಿಷಯವಾಗದೆ ಇರಲಿ. ಅಂದರೆ, ವಿಶೇಷಣದಿಂದ ಅವಚ್ಛಿನ್ನನಾಗದ ಆತ್ಮನಲ್ಲಿ ಎಂದರ್ಥ. ಆದರೆ ಅಂತಹ ಆತ್ಮನಿಗೆ ವಿಶೇಷಣ ಅವಚ್ಛಿನ್ನ ಸ್ವರೂಪದಿಂದ, ಅವನಿಗೆ ದೃಶ್ಯತ್ವ ಪ್ರಾಪ್ತವಾಗುತ್ತದೆ ಎಂದು ಪರಪಕ್ಷದವರ ಅಭಿಪ್ರಾಯವಾಗಿರುತ್ತದೆ . ಅದರಿಂದ ದೃಶ್ಯತ್ವ ಹೇತುವಿಗೆ ಅನೈಕಾಂತಿಕತ್ವ ಹಾಗೆಯೆ ಉಳಿಯುತ್ತದೆ.

ಇನ್ನು ವಿಶೇಷಣ ಅವಚ್ಛಿನ್ನ ಸ್ವರೂಪ ಆತ್ಮಾ ಮಿಥ್ಯಾ ಎಂತಾದರೆ, ಅಲ್ಲಿ ಸಾಧ್ಯವ್ಯತಿರೇಕ ಇಲ್ಲದಂತಾಗಿ, ಶುದ್ಧರೂಪದಿಂದ ಆತ್ಮಾ ದೃಶ್ಯನಲ್ಲ ಎಂದು ದೃಶ್ಯತ್ವರೂಪ ಹೇತುವಿನ ವ್ಯತಿರೇಕ ಅವಧಾರಣೆ ವ್ಯರ್ಥವಾಗುವದು. ಇನ್ನು ಸಾಧ್ಯವ್ಯತಿರೇಕ ಇಲ್ಲವಾದಲ್ಲಿ ಹೇತುವಿನ ವ್ಯತಿರೇಕಮಾತ್ರದಿಂದ ವ್ಯತಿರೇಕ ವ್ಯಾಪ್ತಿ ಅಸಿದ್ಧವಾಗುತ್ತದೆ ಎಂದರ್ಥ.

ಘಟಕ್ಕು ಕೂಡ ಘಟತ್ವದ ಅವಚ್ಛೇದ ವಿಶಿಷ್ಟರೂಪದಿಂದಲೇ ದೃಶ್ಯತ್ವವನ್ನು ಅಂಗೀಕಾರಮಾಡಲಾಗಿದೆ. ಇನ್ನು ಈ ವಿಕಲ್ಪದಂತೆ, ಘಟಕ್ಕೂ ಶುದ್ಧರೂಪದಿಂದ ಅಂದರೆ ಜ್ಞಾನವಿಷಯರೂಪ ದೃಶ್ಯತ್ವ ಹೇಳಬಹುದಾಗಿರುವದರಿಂದ ಭಾಗ ಅಸಿದ್ಧಿ ದೋಷ ದೃಶ್ಯತ್ವ ಹೇತುವಿಗೆ ಉಂಟಾಗುತ್ತದೆ ಎಂದರ್ಥ

<u>टिप्पणीनाम् विशेषार्थानि</u>

॥ एवं इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

प्रकारान्तरेण अपि आत्मनो दृश्यत्वं उपपादयति– एवं इति॥

ಇನ್ನು ಬೇರೆ ಪ್ರಕಾರದಿಂದಲೂ ಕೂಡ ಆತ್ಮನಲ್ಲಿ ದೃಶ್ಯತ್ವವನ್ನು ಸಮರ್ಥಿಸುತ್ತಾರೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

प्रकारान्तरेण अपि आत्मनो दृश्यत्वं उपपादयति– एवं इति॥

ಈ ಟೀಕಾವಾಕ್ಯವು ಬೇರೆ ಪ್ರಕಾರದಿಂದಲೂ ಕೂಡ ಆತ್ಮನಲ್ಲಿ ದೃಶ್ಯತ್ವವನ್ನು ಪ್ರತಿಪಾದಿಸುತ್ತದೆ.

## ॥ सोपाधिक इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

मिथ्याभूत सोपाधिक विषय भ्रान्ति ज्ञानस्य अविद्या निवर्तकत्व अयोगात् इत्यर्थः।

ಅಂದರೆ, ಮಿಥ್ಯಾಭೂತವಾದ ಸೋಪಾಧಿಕವಿಷಯ ಭ್ರಾಂತಿ ಜ್ಞಾನವು ಅವಿದ್ಯೆಯನ್ನು ನಿವರ್ತಿಸುತ್ತದೆ ಎಂಬುದು ಅಯೋಗ್ಯವಾಗಿರುತ್ತದೆ ಎಂದರ್ಥ.

## ॥ न मोक्षसाधनं स्यात् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

मिथ्याभूत सोपाधिक विषयक ज्ञानस्य भ्रमत्वेन अविद्या निवृत्ति अयोगात् इति भावः।

ಅಂದರೆ, ಮಿಥ್ಯಾಭೂತ ಸೋಪಾಧಿಕ ವಿಷಯಕ ಜ್ಞಾನವು ಭ್ರಮವಾಗಿರುವದರಿಂದ, ಅದರಿಂದ ಅವಿದ್ಯಾ ನಿವೃತ್ತಿಯು ಅಯೋಗ್ಯವಾಗಿರುತ್ತದೆ ಎಂಬ ಭಾವವಿರುತ್ತದೆ.

निरुपाधिक विषयत्वे इत्यत्र आत्मैकत्व ज्ञानस्य इति विभक्ति विपरिणामेन अनुवर्तते।

निरुपाधिक विषयत्वे ಎಂಬಲ್ಲಿ आत्मैकत्व ज्ञानस्य ಎಂದು ವಿಭಕ್ತಿಯನ್ನು ವಿಪರ್ಯಯಿಸಿ ಅನುವರ್ತಿಸಿ ಅರ್ಥಮಾಡಬೇಕು.

## ॥ किंच इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

व्यतिरेक अवच्छिन्नस्य स्यात् एव दृश्यता इति परोक्तैव विशेष्यभूत आत्मनो दृश्यत्वं प्राप्तं इति सदृष्टान्तं उपपादयति– किंच इति॥

ಈ ಟೀಕಾವಾಕ್ಯ, "व्यतिरेक अवच्छिन्नस्य स्यात् एव दृश्यता" ಅಂದರೆ ವ್ಯತಿರೇಕ ಅವಚ್ಛಿನ್ನನಿಗೆ ದೃಶ್ಯತಾ ಇದ್ದೆ ಇದೆ, ಎಂದು ಪರಪಕ್ಷದವರೇ ಹೇಳಿದಂತೆ ವಿಶೇಷ್ಯಭೂತ ಆತ್ಮನಿಗೆ ದೃಶ್ಯತ್ವ ಪ್ರಾಪ್ತವಾಗಿದೆ ಎಂದು ದೃಷ್ಟಾಂತಪೂರ್ವಕ ಸಮರ್ಥಿಸುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

व्यतिरेक अवच्छिन्नस्य स्यात् एव दृश्यता इति परोक्तैव अवच्छेदस्य आत्मनोऽपि दृश्यतां उपपादयति– किंच इति॥



ಈ ಟೀಕಾವಾಕ್ಯ, "व्यतिरेक अवच्छिन्नस्य स्यात् एव दृश्यता" ಅಂದರೆ ವ್ಯತಿರೇಕ ಅವಚ್ಛಿನ್ನನಿಗೆ ದೃಶ್ಯತಾ ಇದ್ದೆ ಇದೆ, ಎಂದು ಪರಪಕ್ಷದವರೇ ಹೇಳಿದಂತೆ ಅವಚ್ಛೇದನಾದ ಆತ್ಮನಿಗೆ ದೃಶ್ಯತ್ವ ಪ್ರಾಪ್ತವಾಗಿದೆ ಎಂದು ಸಮರ್ಥಿಸುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

निरुपाधिकस्य दृश्यत्वं उपपादयति– किंच इति॥

ಈ ಟೀಕಾವಾಕ್ಯ ನಿರುಪಾಧಿಕನಿಗೂ ದೃಶ್ಯತ್ವವನ್ನು ಸಮರ್ಥಿಸುತ್ತದೆ

## ॥ किम् अनेन इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

व्यतिरेक अवच्छिन्नस्य दृश्यत्ववचनेन किम् इत्यर्थः।

ಅಂದರೆ, ವ್ಯತಿರೇಕ ಅವಚ್ಛಿನ್ನದ ದೃಶ್ಯತ್ವವಚನದಿಂದೇನು ಎಂದರ್ಥ.

## ॥ शुद्धेन रूपेण इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

विशेषण अनवच्छिन्न स्वरूपेण इत्यर्थः। तथा च स्वरूपेण दृश्यत्वमेव हेतुत्वेन विवक्षितम् इत्यर्थः।

ಅಂದರೆ, ವಿಶೇಷಣ ಅವಚ್ಛಿನ್ನವಲ್ಲದ ಸ್ವರೂಪದಿಂದ ಎಂದರ್ಥ. ಅದರಂತೆ, ಸ್ವರೂಪದಿಂದಲೆ ದೃಶ್ಯತ್ವವೆಂಬ ಹೇತುತ್ವದಿಂದ ಎಂಬುದು ವಿವಕ್ಷಿತವಾಗಿರುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

विशेषण अनवच्छिन्न स्वरूपेण इत्यर्थः।

ಅಂದರೆ, ವಿಶೇಷಣ ಅವಚ್ಛಿನ್ನವಲ್ಲದ ಸ್ವರೂಪದಿಂದ ಎಂದರ್ಥ.

## ॥मा दर्शि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

अत्र प्रष्टव्यं, किम् ज्ञानविषयत्वमात्र दृश्यत्वं, शुद्धेनरूपेण ज्ञानविषयत्वं वा। आद्यं दूषयति– मा दर्शि इति॥

शुद्धेन रूपेण ज्ञानविषयं मा अस्तु इत्यर्थः।

ಇಲ್ಲಿ ಇದನ್ನು ಸ್ಪಷ್ಟಪಡಿಸಬೇಕು. ಶುದ್ಧರೂಪದಿಂದ ಆತ್ಮನು ದೃಶ್ಯನಲ್ಲ ಎಂತೆಂದರೆ, ಇಲ್ಲಿ ಇದನ್ನು ಸ್ಪಷ್ಟಪಡಿಸಬೇಕು. ದೃಶ್ಯತ್ವವು ಕೇವಲ ಜ್ಞಾನವಿಷಯವಾಗಿರುವದು ಎಂತಲೊ? ಅಥವಾ ಶುದ್ಧರೂಪನು ಜ್ಞಾನವಿಷಯತ್ವವಾದ್ದರಿಂದಲೊ? ಈ ಟೀಕಾವಾಕ್ಯ ಮೊದಲನೆಯದನ್ನು ದೂಶಿಸುತ್ತದೆ. ಅಂದರೆ, ಶುದ್ಧರೂಪವು ಜ್ಞಾನವಿಷಯವಾಗದೆ ಇರಲಿ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

अत्र प्रष्टव्यं, किम् ज्ञानविषयत्वमात्रं दृश्यत्वं? किं वा शुद्धेनरूपेण ज्ञानविषयत्वम्?। आद्यं दूषयति– मा दर्शि इति॥

ಇಲ್ಲಿ ಇದನ್ನು ಸ್ಪಷ್ಟಪಡಿಸಬೇಕು. ಶುದ್ಧರೂಪದಿಂದ ಆತ್ಮನು ದೃಶ್ಯನಲ್ಲ ಎಂತೆಂದರೆ, ಇಲ್ಲಿ ಇದನ್ನು ಸ್ಪಷ್ಟಪಡಿಸಬೇಕು. ದೃಶ್ಯತ್ವವು ಕೇವಲ ಜ್ಞಾನವಿಷಯವಾಗಿರುವದು ಎಂತಲೊ? ಅಥವಾ ಶುದ್ಧರೂಪನು ಜ್ಞಾನವಿಷಯತ್ವವಾದ್ದರಿಂದಲೊ? ಈ ಟೀಕಾವಾಕ್ಯ ಮೊದಲನೆಯದನ್ನು ದೂಷಿಸುತ್ತದೆ.

## ॥ आत्मनि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

विशेषण अनवच्छिन्न आत्मनि इत्यर्थः।
विशेषण अवच्छिन्न स्वरूपेण तावत् दृश्यत्वं प्राप्तमेव इत्यर्थः।

ಅಂದರೆ, ವಿಶೇಷಣದಿಂದ ಅವಚ್ಛಿನ್ನನಾಗದ ಆತ್ಮನಲ್ಲಿ ಎಂದರ್ಥ. ಆದರೆ ಅಂತಹ ಆತ್ಮನಿಗೆ ವಿಶೇಷಣ ಅವಚ್ಛಿನ್ನ ಸ್ವರೂಪದಿಂದ, ಅವನಿಗೆ ದೃಶ್ಯತ್ವ ಪ್ರಾಪ್ತವಾಗುತ್ತದೆ ಎಂದು ಪರಪಕ್ಷದವರ ಅಭಿಪ್ರಾಯವಾಗಿರುತ್ತದೆ ಎಂಬ ಭಾವ. ಅದರಿಂದ ದೃಶ್ಯತ್ವ ಹೇತುವಿಗೆ ಅನೈಕಾಂತಿಕತ್ವ ಹಾಗೆಯೆ ಉಳಿಯುತ್ತದೆ.

## ॥ सोऽपि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

विशेषण अवच्छिन्न स्वरूपात्मा इत्यर्थः। तथा च सत्येऽपि आत्मनि इत्युक्तं असत् इति, न अनैकान्तिक इति भावः।

ಅಂದರೆ, ವಿಶೇಷಣ ಅವಚ್ಛಿನ್ನ ಸ್ವರೂಪ ಆತ್ಮಾ ಎಂದರ್ಥ. ಅದರಂತೆ ಹಿಂದಿನ ವಾಕ್ಯದಲ್ಲಿ ಹೇಳಿದಂತೆ, ಸತ್ಯನಾದ ಆತ್ಮನಲ್ಲಿ ಕೂಡ ಎಂದು ಹೇಳಿದ್ದು ಅಸತ್ಯವಾಗಿರುವದರಿಂದ , ಅನೈಕಾಂತ ದೋಷ ಉಂಟಾಗುವದಿಲ್ಲ ಎಂಬ ಭಾವವಿರುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

यद्यपि अवच्छेदस्य आत्मस्वरूपस्य परेण सत्यत्वं अङ्गीक्रियते, अन्यथा शून्यवाद प्रसङ्गात्। तथापि अनैकान्तिकता परिहाराभिनिष्ट चेतसः, विस्मृत सिद्धान्तस्य इदं चोद्यं इति बोद्धव्यम्।

ಹಾಗಿದ್ದರೂ, ಅವಚ್ಛೇದಕ ಆತ್ಮಸ್ವರೂಪವನ್ನು ಪರಪಕ್ಷದವರು ಸತ್ಯ ಎಂದು ಅಂಗೀಕರಿಸುತ್ತಾರೆ, ಅನ್ಯಥಾ ಶೂನ್ಯವಾದ ಪ್ರಸಂಗ ಉಂಟಾಗುತ್ತದೆ. ಹಾಗಿದ್ದರೂ ಅನೈಕಾಂತಿಕತಾ ದೋಷವನ್ನು ಪರಿಹರಿಸಲು ಉದ್ಯುಕ್ತರಾದವರು ತಮ್ಮ ಸಿದ್ಧಾಂತವನ್ನೆ ವಿಸ್ಮರಿತರಾಗಿ, ಈತರಹದ ವಿಕಲ್ಪಗಳನ್ನು ಪ್ರೇರಿಸುತ್ತಿದ್ದಾರೆ ಎಂದು ತಿಳಿಯತಕ್ಕದ್ದು.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

यत्र दृश्यत्वं गतं सोऽपि मिथ्या इति न व्यभिचार इत्यर्थः।



ಎಲ್ಲಿ ದೃಶ್ಯತ್ವ ಮುಟ್ಟುತ್ತದೊ ಅಥವಾ ಉಂಟಾಗುತ್ತದೋ ಅದು ಮಿಥ್ಯಾ ಎಂಬ ವ್ಯಾಪ್ತಿವಾಕ್ಯದಂತೆ, ಇಲ್ಲಿ ವ್ಯಭಿಚಾರ ಉಂಟಾಗುವದಿಲ್ಲ ಎಂದರ್ಥ.

## ॥ तर्हि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

सोऽपि मिथ्या इति। तर्हि तत्र साध्यव्यतिरेक अभावेन शुद्धेनरूपेण न दृश्यत इति दृश्यत्व रूप हेतु व्यतिरेक अवधारणं व्यर्थम्। साध्य व्यतिरेक अभावे हेतु व्यतिरेकमात्रेण व्यतिरेक व्याप्तिः असिद्धेः इत्यर्थः।

ಅಂದರೆ, ವಿಶೇಷಣ ಅವಚ್ಛಿನ್ನ ಸ್ವರೂಪ ಆತ್ಮಾ ಮಿಥ್ಯಾ ಎಂತಾದರೆ, ಅಲ್ಲಿ ಸಾಧ್ಯವ್ಯತಿರೇಕ ಇಲ್ಲದಂತಾಗಿ, ಶುದ್ಧರೂಪದಿಂದ ಆತ್ಮಾ ದೃಶ್ಯನಲ್ಲ ಎಂದು ದೃಶ್ಯತ್ವರೂಪ ಹೇತುವಿನ ವ್ಯತಿರೇಕ ಅವಧಾರಣೆ ವ್ಯರ್ಥವಾಗುವದು. ಇನ್ನು ಸಾಧ್ಯವ್ಯತಿರೇಕ ಇಲ್ಲವಾದಲ್ಲಿ ಹೇತುವಿನ ವ್ಯತಿರೇಕಮಾತ್ರದ ವ್ಯತಿರೇಕ ವ್ಯಾಪ್ತಿ ಅಸಿದ್ಧವಾಗುತ್ತದೆ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

सोऽपि चेत्, साध्य व्यतिरेक अभावेन तथापि शुद्धरूपेण न दृश्यते इति वाक्यप्रतिपादनम् दृश्यत्व व्यतिरेक अवधारणं निष्प्रयोजनं इत्याह– तर्हि इति॥

ಅಂದರೆ, , ವಿಶೇಷಣ ಅವಚ್ಛಿನ್ನ ಸ್ವರೂಪ ಆತ್ಮಾ ಮಿಥ್ಯಾ ಎಂತಾದರೆ, ಸಾಧ್ಯವ್ಯತಿರೇಕ ಇಲ್ಲದಂತಾಗಿ, ಅದರಿಂದ ಶುದ್ಧರೂಪದಿಂದ ಆತ್ಮನು ದೃಶ್ಯನಲ್ಲ ಎಂಬ ವಾಕ್ಯ ಪ್ರತಿಪಾದನ ಮತ್ತು ದೃಶ್ಯತ್ವ ವ್ಯತಿರೇಕ ಅವಧಾರಣೆಯು ನಿಷಪ್ರಯೋಜಕವಾಗುವದು ಎಂದು ಈ ಟೀಕಾವಾಕ್ಯ ತಿಳಿಸುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

यदि सोऽपि मिथ्या इति न व्यभिचारः तर्हि दृश्यत्वस्य व्यभिचार परिहाराय दृश्यत्व अतिरेक ग्रहणार्थं त्वदीय प्रयत्नस्य वैयर्थ्यं स्यात् इत्यर्थः।

ಒಂದು ವೇಳೆ, ವಿಶೇಷಣ ಅವಚ್ಛಿನ್ನ ಸ್ವರೂಪ ಆತ್ಮಾ ಮಿಥ್ಯಾ ಎಂತಾಗಿ, ಅಲ್ಲಿ ವ್ಯಭಿಚಾರ ಉಂಟಾಗುವದಿಲ್ಲ, ಆಗ ದೃಶ್ಯತ್ವದ ವ್ಯಭಿಚಾರ ಪರಿಹಾರಕ್ಕಾಗಿ, ದೃಶ್ಯತ್ವದ ವ್ಯತಿರೇಕ ಗ್ರಹಣಗೋಸ್ಕರ ತಾವು ಮಾಡಿದ ಪ್ರಯತ್ನವೆಲ್ಲ ವ್ಯರ್ಥವಾಗುತ್ತದೆ ಎಂದರ್ಥ.

## ॥ अपि च इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

द्वितीयं दूषयति– अपि च इति॥

ಶುದ್ಧರೂಪ ಆತ್ಮನು ಕೇವಲ ಜ್ಞಾನವಿಷಯತ್ವನಾದ್ದರಿಂದ, ಅವನು ಶುದ್ಧರೂಪದಿಂದ ದೃಶ್ಯನಲ್ಲ ಎಂಬ ಮೇಲೆ ಹೇಳಲ್ಪಟ್ಟ ಎರಡನೆ ವಿಕಲ್ಪವನ್ನು ಈ ಟೀಕಾವಾಕ್ಯ ದೂಷಿಸುತ್ತದೆ.

एवं अपि च, बुद्धिस्थ द्वितीय अङ्गीकारेऽपि इत्यर्थः।

ಈ ರೀತಿಯಾಗಿ ಇಲ್ಲಿ अपि च ಎಂದರೆ, ಬುದ್ಧಿಸ್ಥ ಎಂಬ ಎರಡನೆ ವಿಕಲ್ಪವನ್ನು ಅಂಗೀಕರಿಸಿದರೂ ಕೂಡ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**द्वितीयं दूषयति– अपि च इति॥**

ಶುದ್ಧರೂಪ ಆತ್ಮನು ಕೇವಲ ಜ್ಞಾನವಿಷಯತ್ವನಾದ್ದರಿಂದ, ಅವನು ಶುದ್ಧರೂಪದಿಂದ ದೃಶ್ಯನಲ್ಲ ಎಂದು ಮೇಲೆ ಹೇಳಲ್ಪಟ್ಟ ಎರಡನೆ ವಿಕಲ್ಪವನ್ನು ಈ ಟೀಕಾವಾಕ್ಯ ದೂಷಿಸುತ್ತದೆ.

**एवं अपि बुद्धिस्थ द्वितीयपक्ष अङ्गीकारेपि च।**

ಈ ರೀತಿಯಾಗಿ ಇಲ್ಲಿ अपि च ಎಂದರೆ, ಬುದ್ಧಿಸ್ಥ ಎಂಬ ಎರಡನೆ ವಿಕಲ್ಪವನ್ನು ಅಂಗೀಕರಿಸಿದರೂ ಕೂಡ ಎಂದರ್ಥ.

**घटादेः अपि, घटत्वादि अवच्छेदेन दृश्यत्वादि अङ्गीकारात् स्वरूपेण एव दृश्यत्वं भाग असिद्धं इत्यर्थः।**

ಘಟಾದಿಗಳಿಗೂ ಕೂಡ ಘಟತ್ವಾದಿ ಅವಚ್ಛೇದದಿಂದಲೆ ದೃಶ್ಯತ್ವಾದಿಗಳನ್ನು ಅಂಗೀಕಾರಮಾಡಲಾಗಿದೆ. ಇನ್ನು, ಈ ವಿಕಲ್ಪದಂತೆ ಅವುಗಳಿಗೂ ಕೂಡ ಸ್ವರೂಪದಿಂದಲೇ ಅಂದರೆ ಜ್ಞಾನವಿಷಯತ್ವದಿಂದಲೇ ದೃಶ್ಯತ್ವವನ್ನು ಹೇಳಬಹುದು. ಆದ್ದರಿಂದ ಮಿಥ್ಯಾತ್ವ ಅನುಮಾನದ ದೃಶ್ಯತ್ವ ಹೇತುವಿಗೆ ಭಾಗ ಅಸಿದ್ಧಿ ದೋಷ ಉಂಟಾಗುವದು ಎಂದರ್ಥ.

**ननु घटादेः सर्वस्यापि यत् किञ्चित् विशेषेण अवच्छेदेन एव प्रतीयमानतया सम्पूर्ण असिद्धि सम्भवे किम् भाग असिद्धिः उक्ता?**

**न च एवं घटत्वादेः अवच्छेदकस्यापि अवच्छेदकान्तर अवच्छेदेन प्रतीतौ अनवस्था प्रसङ्गः। घटादि अवच्छेदकं घटत्वादिकं प्रति तत् अवच्छेदस्य घटादेः एव अवच्छेदकतया अवच्छेदकान्तर अनपेक्षणात्।**

ಇಲ್ಲಿ, ಒಂದು ಶಂಕೆ: ಘಟಾದಿಗಳಲ್ಲಿ ಸರ್ವ ಅಂದರೆ ಯಾವುದೆಲ್ಲ ಕಿಂಚಿತ್ ವಿಶೇಷಣ ದಿಂದ ಅವಚ್ಛೇದದಿಂದಲೇನೆ ಪ್ರತೀತಿಯಾಗಿರುವ ಸಂದರ್ಭದಲ್ಲಿ ಸಂಪೂರ್ಣ ಅಸಿದ್ಧಿ ಸಂಭವಿಸುವಾಗ ಕೇವಲ ಭಾಗ ಅಸಿದ್ಧಿ ಎಂದು ಏಕೆ ಹೇಳುತ್ತೀರಿ?

ಈ ರೀತಿಯಾಗಿ ಘಟತ್ವಾದಿಗಳಲ್ಲಿ ಅವಚ್ಛೇದಕ ಕೂಡ ಮತ್ತೊಂದು ಅವಚ್ಛೇದಕದಿಂದ ಅವಚ್ಛೇದನದಿಂದ ಪ್ರತೀತಿ ಉಂಟಾದಲ್ಲಿ ಅನವಸ್ಥಾ ಪ್ರಸಂಗ ಉಂಟಾಗಿ ಸಂಪೂರ್ಣ ಅಸಿದ್ಧಿ ಉಂಟಾಗಬಹುದೆಂದರೆ, ಇದು ಸರಿಯಲ್ಲ. ಘಟಾದಿ ಅವಚ್ಛೇದಕವು, ಘಟತ್ವಾದಿಕ ಪ್ರತಿ, ಅದರ ಅವಚ್ಛೇದವಾದ ಘಟಾದಿಗಳಿಗೆಯೆ ಅವಚ್ಛೇದಕವಾಗಿರುವದರಿಂದ ಇಲ್ಲಿ ಅದು ಅವಚ್ಛೇದಕಾಂತರ ಮತ್ತೆ ಅವಚ್ಛೇದಗಳ ಪರಂಪರೆ ಅಪೇಕ್ಷಿಸುವದಿಲ್ಲ.

**विशिष्ट ज्ञाने हि विशेषण विशिष्ये परस्पर अवच्छिन्ने एव प्रतीयते इति चेत्, सत्यं तथापि निर्विकल्पक वादे गोत्वादेः एकदापि विशेषणान्तर अवच्छेदेन अप्रतीतेः तत् अभ्युपगमेन भाग–असिद्धिः उक्त इति अदोषः।**



ಮತ್ತು ವಿಶಿಷ್ಟದ ಜ್ಞಾನದಿಂದಲೇನೆ ವಿಶೇಷಣ ಮತ್ತು ವಿಶೇಷ್ಯಗಳು ಪರಸ್ಪರ ಅವಚ್ಛಿನ್ನಗಳಂತೆ ಅಂದರೆ ಬೇರ್ಪಡಿಸಲ್ಪಟ್ಟಂತೆಯೇ ತೋರುತ್ತವೆ ಎಂದರೆ. ತಾವು ಹೇಳುವದು ನಿಜ, ಹಾಗಿದ್ದರೂ ನಿರ್ವಿಕಲ್ಪಕ ವಾದದಲ್ಲಿ ಗೋತ್ವಾದಿಗಳಲ್ಲಿ ಒಮ್ಮೆಯಾದರೂ ವಿಶೇಷಣಾಂತರ ಅವಚ್ಛೇದದಿಂದ ಅವುಗಳ ಪ್ರತೀತಿಯನ್ನು ಪ್ರತಿಪಾದಿಸುವದಿಲ್ಲ ಎಂದು ವಾದಿ ಪ್ರತಿವಾದಿಗಳಿಬ್ಬರುಗೂ ಒಪ್ಪಿಗೆಯಾದ್ದರಿಂದ, ಇಲ್ಲಿ ಭಾಗ ಅಸಿದ್ಧಿ ಎಂದು ಹೇಳಲಾಗಿದೆ. ಆದ್ದರಿಂದ ಇಲ್ಲಿ ನಮ್ಮ ಹೇಳಿಕೆಗೆ ಯಾವ ದೋಷವಿರುವದಿಲ್ಲ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**निर्विकल्पक अभावात् पराधीन प्रकाशे च विशिष्टस्यैवाभावेन विशिष्ट एव दृश्यत्वम्, न शुद्ध घट आपातेन, भाग–असिद्धो हेतुः स्यात्।**

ಇಲ್ಲಿ ಘಟವು, ನಿರ್ವಿಕಲ್ಪಕ ಇಲ್ಲದಾಗ, ಮತ್ತು ಪರಾಧೀನ ಪ್ರಕಾಶದಾಗಿರುವಾಗ ವಿಶಿಷ್ಟತ್ವಭಾವದಿಂದ ವಿಶಿಷ್ಟದಿಂದಲೆ ದೃಶ್ಯತ್ವವನ್ನು ಪಡೆದಿರುತ್ತದೆ, ಇನ್ನು ಅದಕ್ಕೂ ಕೂಡ ಸ್ವರೂಪದಿಂದ ಅಂದರೆ ಜ್ಞಾನವಿಷಯತ್ವರೂಪದಿಂದ ದೃಶ್ಯತ್ವ ಉಂಟಾಗುವದು ಎಂದು ಹೇಳಬಹುದಾದ್ದರಿಂದ ಭಾಗ ಅಸಿದ್ಧಿ ದೋಷ ಉಂಟಾಗುತ್ತದೆ.

## ॥ घटोऽपि इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**घटस्यापि घटत्व अवच्छेदेन विशिष्टरूपेण एव दृश्यत्व अङ्गीकारात्। शुद्धेन् रूपेण ज्ञानविषयत्वरूपं दृश्यत्वं भाग–असिद्धिः इत्यर्थः। यद्यपि निर्विकल्पक अङ्गीकारेण घटादौ भाग–असिद्धि परिहर्तु शक्या। तथापि निर्विकल्पक अनङ्गीकार अभिप्रायेण इदं इति अवगन्तव्यम्। तत् अङ्गीकारे तु धर्मादि अतीन्द्रिय पदार्थेषु भाग–असिद्धिः द्रष्टव्या। तत्र निर्विकल्पकस्य अप्रवृत्या विशिष्टरूपेण एव तेषां दृश्यत्वेन शुद्धेन रूपेण दृश्यत्व अभावात् इति।**

ಘಟಕ್ಕು ಕೂಡ ಘಟತ್ವದ ಅವಚ್ಛೇದ ವಿಶಿಷ್ಟರೂಪದಿಂದಲೇ ದೃಶ್ಯತ್ವವನ್ನು ಅಂಗೀಕಾರಮಾಡಲಾಗಿದೆ. ಇನ್ನು ಈ ವಿಕಲ್ಪದಂತೆ, ಘಟಕ್ಕೂ ಶುದ್ಧರೂಪದಿಂದ ಅಂದರೆ ಜ್ಞಾನವಿಷಯರೂಪ ದೃಶ್ಯತ್ವ ಹೇಳಬಹುದಾಗಿರುವದರಿಂದ ಭಾಗ ಅಸಿದ್ಧಿ ದೋಷ ದೃಶ್ಯತ್ವ ಹೇತುವಿಗೆ ಉಂಟಾಗುತ್ತದೆ ಎಂದರ್ಥ. ಹಾಗಿದ್ದರೂ, ನಿರ್ವಿಕಲ್ಪಕವನ್ನು ಅಂಗೀಕರಿಸಿದಲ್ಲಿ ಘಟಾದಿಗಳಲ್ಲಿಯ ಈ ಭಾಗ ಅಸಿದ್ಧಿ ದೋಷವನ್ನು ಪರಿಹರಿಸಲು ಶಕ್ಯವಾದರೂ, ಇಲ್ಲಿ ನಿರ್ವಿಕಲ್ಪಕ ವನ್ನು ಅಂಗೀಕರಿಸದಿದ್ದ ಪಕ್ಷದ ಅಭಿಪ್ರಾಯದಿಂದಲೇ ಈ ವಕ್ತವ್ಯವನ್ನು ಮಾಡಲಾಗಿದೆ ಎಂದು ಅವಶ್ಯವಾಗಿ ತಿಳಿಯತಕ್ಕದ್ದು. ಹಾಗೇನಾದರು ನಿರ್ವಿಕಲ್ಪವನ್ನು ಅಂಗೀಕರಿಸಿದರೆ, ಧರ್ಮಾದಿ ಅತೀಂದ್ರಿಯ ಪದಾರ್ಥಗಳಲ್ಲಿ , ದೃಶ್ಯತ್ವ ಹೇತುವಿಗೆ ಭಾಗ ಅಸಿದ್ಧಿ ದೋಷ ಉಂಟಾಗುತ್ತದೆ. ಅಲ್ಲಿ ಧರ್ಮಾದಿಗಳಿಗೆ ನಿರ್ವಿಕಲ್ಪದಲ್ಲಿ ಪ್ರವೃತ್ತಿ

ಇಲ್ಲವಾದ್ದರಿಂದ, ಮತ್ತು ವಿಶಿಷ್ಟರೂಪದಿಂದಲೆ ಅವುಗಳಿಗೆ ದೃಶ್ಯತ್ವವಿರುವದರಿಂದ, ಶುದ್ಧರೂಪದಿಂದ ಅವುಗಳಿಗೆ ದೃಶ್ಯತ್ವ ಇರುವದಿಲ್ಲ ಎಂದರ್ಥ.

### ६.२.३.७ आत्मनो वृत्तिविषयत्वेऽपि दृश्यत्व अभाव इति वादं निराकरोति

ಇನ್ನು ಆತ್ಮನಲ್ಲಿ ವೃತ್ತಿವಿಷಯತ್ವವಿದ್ದರೂ, ಅವನಲ್ಲಿ ದೃಶ್ಯತ್ವವಿಲ್ಲ, ಆದ್ದರಿಂದ ದೃಶ್ಯತ್ವ ಹೇತುವಿಗೆ ಅನೈಕಾಂತಿಕ ದೋಷ ಸಲ್ಲದು ಎಂದು, ಇನ್ನೂ ಕೆಲವರು ಪ್ರತಿಪಾದಿಸುತ್ತಾರೆ. ಈ ವಾದವನ್ನು ಈ ಪರಿಚ್ಛೇದದಲ್ಲಿ ನಿರಾಕರಿಸಲಾಗಿದೆ.

**टीका**

**अपर आह, आत्मनः वृत्तिविषयत्वेऽपि न दृश्यत्वं अनैकान्तिकम्। न हि दर्शनप्रतियोगितामात्रं दृश्यत्वं हेतुः। अपि तु स्वव्यवहारे स्वातिरेकिदर्शन अपेक्षा नियतिः। न च आत्मनि स्वप्रकाशे सा अस्ति इति।**

**तत् अपि असत्। स्वप्रकाशत्व अद्वितीयादिरूपेण आत्मव्यवहारस्य स्व–अतिरेकि संवित् सापेक्षता नियमात्। औपाधिकात्म विकल्पे तदुपनायक प्रमाण अपेक्षा नियमेऽपि, न स्वरूपमात्र व्यवहृतौ तत् अपेक्षा इति चेत्, तर्हि समं एतत् घटादौ इति, भागासिद्धिः स्यात् इत्युक्तम्। अथ घटे, विशिष्ट व्यवहार अतिरिक्तो व्यवहार एव नास्ति इति चेत्, तुल्यं आत्मनि। सुषुप्त्यादौ अस्ति इति चेत्, कुतः सिद्धः? "एतावन्तं कालं सुखमहं सुप्तोस्मि" इति उत्तरकाल परामर्शात् इति चेत्, तर्हि तत एव विशिष्ट व्यवहार सिद्धिः इति तूष्णीमास्व।**

ಇನ್ನೂ ಕೆಲವರು ಹೀಗೆ ಹೇಳುತ್ತಾರೆ: ಆತ್ಮನು ವೃತ್ತಿವಿಷಯನಾದರೂ, ದೃಶ್ಯತ್ವ ಅನೈಕಾಂತಿಕ ದೋಷವು ಉಂಟಾಗುವದಿಲ್ಲ. ದೃಶ್ಯತ್ವ ಹೇತುವು ಕೇವಲ ದರ್ಶನಪ್ರತಿಯೋಗಿಮಾತ್ರ (ಅಂದರೆ, ದೃಶ್ಯತ್ವ ಹೇತುವು ಕೇವಲ ವೃತ್ತಿಜ್ಞಾನ ಪ್ರಾಪ್ತವಿಷಯ ಸಂಬಂಧಿತವಾದ ಎಂದರ್ಥ.) ಆಗಿರುವದಿಲ್ಲ. ಇಂತಹ (ದರ್ಶನಪ್ರತಿಯೋಗಿಮಾತ್ರ) ದೃಶ್ಯತ್ವ ಹೇತುವು ಸ್ವವ್ಯವಹಾರದಲ್ಲಿ ಸ್ವವ್ಯತಿರಿಕ್ತ ಸಾಪೇಕ್ಷ ಜ್ಞಾನದ ನಿಯತದಲ್ಲಿರುತ್ತದೆ. ಹಾಗೂ ಇದು ಘಟಾದಿ ಪ್ರಪಂಚದಲ್ಲಿರುತ್ತದೆ ವಿನಹಾ ಸ್ವಪ್ರಕಾಶನಾದ ಆತ್ಮನಲ್ಲಿ ಇರುವದಿಲ್ಲ.
ಹಾಗೆ ಹೇಳುವದು ಅಸತ್ಯವಾಗಿದೆ. ಏಕೆಂದರೆ:



- ಸ್ವಪ್ರಕಾಶತ್ವ ಮತ್ತು ಅದ್ವಿತೀಯಾದಿ ರೂಪಗಳನ್ನೊಳಗೊಂಡ ಆತ್ಮ ವ್ಯವಹಾರವು ಸ್ವ-ಅತಿರಿಕ್ತ ಜ್ಞಾನದ ಸಾಪೇಕ್ಷತೆಯನ್ನು ಅಪೇಕ್ಷಿಸುತ್ತದೆ ಎಂಬ ನಿಯಮವಿರುತ್ತದೆ. ಅದರಿಂದ ದೃಶ್ಯತ್ವ ಹೇತುವಿಗೆ ಅನೈಕಾಂತಿಕ ದೋಷ ಹಾಗೆಯೆ ಉಳಿಯಿತು.
- ಇನ್ನು ಔಪಾಧಿಕಾತ್ಮ ವಿಕಲ್ಪದಲ್ಲಿ, ಅದರ ಉಪನಾಯಕ ಅಂದರೆ ಧೃಡಿಕರಣರೂಪ ಪ್ರಮಾಣದ ಅಪೇಕ್ಷೆಯ ನಿಯಮವಿದ್ದರೂ, ಸ್ವರೂಪಮಾತ್ರ ವ್ಯವಹಾರದಲ್ಲಿ ಅಂತಹ ಪ್ರಮಾಣದ ಅಪೇಕ್ಷೆಯ ನಿಯಮವಿರುವದಿಲ್ಲ ಎನ್ನುವುದಾದರೆ, ಘಟಾದಿ ಪ್ರಪಂಚದಲ್ಲಿ ಕೂಡ ಈ ತರಹದ ವ್ಯವಹಾರವನ್ನು ಹೇಳಲು ಸಾಧ್ಯವಿರುವದರಿಂದ ದೃಶ್ಯತ್ವ ಹೇತುವಿಗೆ ಭಾಗ ಅಸಿದ್ಧಿ ದೋಷ ಉಂಟಾಗುತ್ತದೆ, ಎಂದು ಹಿಂದೆ अपि च ಎಂಬ ವಾಕ್ಯದಿಂದ ಸ್ಪಷ್ಟಪಡಿಸಲಾಗಿದೆ.
- ಇನ್ನು, ಘಟಾದಿ ಪ್ರಪಂಚದಲ್ಲಿ ವಿಷಿಷ್ಟ ವ್ಯವಹಾರದ ಹೊರತಾಗಿ ಸ್ವರೂಪ ವ್ಯವಹಾರವೆಂಬುದು ಇಲ್ಲವೇ ಇಲ್ಲ ಎಂದರೆ, ಆತ್ಮನಲ್ಲಿ ಕೂಡ ಹೀಗೆಯೆ ಇರುತ್ತದೆ ಎಂದು ಹೇಳಲು ಸಾಧ್ಯವಿದೆ, ಏಕೆಂದರೆ ಸ್ವರೂಪಮಾತ್ರ ವ್ಯವಹಾರಕ್ಕೆ ಯಾವ ಪ್ರಮಾಣದ ಅಗತ್ಯವಿಲ್ಲ ಎಂದು ಪರಪಕ್ಷದವರ ಮತವಾಗಿದೆ.
- ಇನ್ನು ಸ್ವರೂಪಮಾತ್ರ ವ್ಯವಹಾರ ಸುಷುಪ್ತ್ಯಾದಿಗಳಿಂದ ತಿಳಿಯಬಹುದಾಗಿದೆ ಎನ್ನುವುದಾದರೆ, ಅದನ್ನು ಹೇಗೆ ಸಿದ್ಧಮಾಡುತ್ತೀರಿ? " ಇಷ್ಟೋತ್ತು ಕಾಲ ನಾನು ಸುಖವಾಗಿ ನಿದ್ರಿಸುತ್ತಿದ್ದೆ" ಎಂಬ ನಿದ್ರೆಯಿಂದ ಎದ್ದಮೇಲಿನ ಪರಮರ್ಶೆಯಿಂದ ತಿಳಿದುಬರುತ್ತದಲ್ಲಾ ಎಂದರೆ, ಹಾಗಾದರೆ ಅಲ್ಲಿಯೆ ವಿಶಿಷ್ಟ ವ್ಯವಹಾರ ಸಿದ್ಧವಾಯಿತಲ್ಲಾ!!

ಹೀಗಾಗಿ ದೃಶ್ಯತ್ವ ಹೇತುವಿಗೆ ವ್ಯಭಿಚಾರ ಅಥವಾ ಅನೈಕಾಂತಿಕ ದೋಷ ಧೃಡವಾಗುತ್ತದೆ.
ಆದ್ದರಿಂದ ಪರಪಕ್ಷದವರು ಇಲ್ಲಿಯೆ ಸುಮ್ಮನಾಗಬೇಕು.

**<u>टिप्पणीनाम् विशेषार्थानि</u>**

**॥ दर्शनप्रतियोगितामात्रं इति ॥**

<u>ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:</u>

**वृत्तिज्ञानं प्राप्तविषयतया सम्बन्धित मात्रं इत्यर्थः। येन आत्मानः अपि वृत्तिज्ञानविषयत्वरूप दृश्यत्व सद्भावेन हेतुः अनैकान्तिकः स्यात् इति भावः।**
ಕೇವಲ ವೃತ್ತಿಜ್ಞಾನ ಪ್ರಾಪ್ತವಿಷಯವಂತಾಗಿ ಸಂಬಂಧಿತವಾದ ಎಂದರ್ಥ. ಇದರಿಂದ ಆತ್ಮನಿಗೆ ಕೂಡ ವೃತ್ತಿಜ್ಞಾನವಿಷಯತ್ವ ರೂಪ ದೃಶ್ಯತ್ವ ಉಂಟಾಗುವದರಿಂದ ಹೇತು ಅನೈಕಾಂತಿಕ ದೋಷದಿಂದ ಗ್ರಸ್ತವಾಗುತ್ತದೆ ಎಂಬ ಭಾವವಿರುತ್ತದೆ.

<u>ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:</u>

**वृत्तिज्ञान प्रतिविषयतया सम्बन्धित्वमात्रं इत्यर्थः।**
ಕೇವಲ ವೃತ್ತಿಜ್ಞಾನ ಪ್ರತಿವಿಷಯವಂತಾಗಿ ಸಂಬಂಧಿತವಾದ ಎಂದರ್ಥ

## ॥ स्वव्यवहारे इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**घटादि प्रपञ्चे अस्ति इदम्। घटादि व्यवहारे, घटादि व्यतिरिक्त संवित् सापेक्षत्व नियमात्। न अस्ति च आत्मनि। आत्मनः स्वप्रकाशत्वेन तत् व्यवहारे स्वातिरिक्त संवित् सापेक्षत्व नियम अभावात् इति ज्ञातव्यम्।**
**अत्र स्वातिरिक्त पद अभावे, आत्मनि अतिव्याप्तिः, अतः उक्तं स्वातिरिक्त इति। नियति पद अभावे, पुनः आत्मनि अतिव्याप्तिः स्यात्।**
**कदाचित् तस्यैव अद्वितीयत्वादि विशिष्टव्यवहारे स्वातिरिक्त विशेषणोपनायक मान अपेक्षा सद्भावेऽपि स्वरूप व्यवहारे तत् अभावात् नियति ग्रहणेन तत् व्यावृत्तिः इति पद कृत्यं द्रष्टव्यम्।**
ಅಂದರೆ, ಪ್ರತಿಯೋಗಿಮಾತ್ರ ದೃಶ್ಯತ್ವ ಹೇತುವು ಘಟಾದಿ ಪ್ರಪಂಚದಲ್ಲಿ ಇರುತ್ತದೆ. ಘಟಾದಿ ವ್ಯವಹಾರದಲ್ಲಿ, ಘಟಾದಿ ವ್ಯತಿರಿಕ್ತ ಜ್ಞಾನ ಸಾಪೆಕ್ಷತ್ವ ನಿಯಮದಿಂದುರತ್ತದೆ. ಇದು ಆತ್ಮನಲ್ಲಿ ಇರುವದಿಲ್ಲ. ಆತ್ಮನು ಸ್ವಪ್ರಕಾಶನಾದುದರಿಂದ ಅವನ ವ್ಯವಹಾರದಲ್ಲಿ, ಸ್ವಾತಿರಿಕ್ತ ಜ್ಞಾನಸಾಪೇಕ್ಷತ್ವದ ನಿಯಮ ಇರುವದಿಲ್ಲ ಎಂದು ತಿಳಿಯಬೇಕು.

ಈ ಟೀಕಾವಾಕ್ಯದಲ್ಲಿ, स्वातिरिक्त ಪದ ಇಲ್ಲದಿದ್ದಲ್ಲಿ, ಆತ್ಮನಲ್ಲಿ ಅತಿವ್ಯಾಪ್ತಿ ಉಂಟಾಗುವದರಿಂದ, स्वातिरिक्त ಪದವನ್ನು ಇಡಲಾಗಿದೆ. नियति ಪದ ಇಲ್ಲದಿದ್ದಲ್ಲಿ ಕೂಡ ಪುನಃ ಆತ್ಮನಲ್ಲಿ ಅತಿವ್ಯಾಪ್ತಿ ಉಂಟಾಗುತ್ತದೆ.

ಕದಾಚಿತ್ ತನ್ನ (ಆತ್ಮನ) ಅದ್ವಿತೀಯತ್ವಾದಿ ವಿಶಿಷ್ಟ ವ್ಯವಹಾರದಲ್ಲಿ स्वातिरिक्त ವಿಶೇಷಣನ್ನೊಳಗೊಂಡ ಪ್ರಮಾಣದ ಅಪೇಕ್ಷೆ ಇದ್ದರೂ, ಸ್ವರೂಪದ ವ್ಯವಹಾರದಲ್ಲಿ, ಅದು ಇರುವದಿಲ್ಲ, ಹಾಗಾಗಿ ಈ नियति ಪದಗ್ರಹಿಸಿದ್ದರಿಂದ ಅದನ್ನೆಲ್ಲ (ವಿಶಿಷ್ಟರೂಪದ) ತ್ಯಜಿಸಲಾಗಿದೆ, ಎಂದೆಲ್ಲ ಪದ ಕೃತ್ಯವನ್ನು ಕಂಡುಕೊಳ್ಳಬೇಕು.

## ॥ स्व–अतिरेकि इति॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**आत्मनोऽपि स्वव्यवहारे स्वरूप संवित् अपेक्षा नियत इत्यत उक्तं – स्वातिरेकि इति॥**
ಆತ್ಮನು ಕೂಡ ಸ್ವವ್ಯವಹಾರದಲ್ಲಿ ಸ್ವರೂಪ ಜ್ಞಾನವನ್ನು ನಿಯತವಾಗಿ ಅಪೇಕ್ಷಿಸುತ್ತದೆ, ಆದ್ದರಿಂದ स्वातिरेकि ಪದವನ್ನು ಇಡಲಾಗಿದೆ.

**कदाचित् तस्यैव अद्वितीयत्वादि व्यवहारे "एकमेवाद्वितीयं" इत्यादि वाक्यजन्य वृत्ति सापेक्षत्वात् नियतिग्रहणम्।**
ಕದಾಚಿತ್ ತನ್ನಸಲುವಾಗಿಯೆ ಅದ್ವಿತೀಯತ್ವಾದಿ ವ್ಯವಹಾರದಲ್ಲಿ "एकमेवाद्वितीयं" ಎಂದು ಮುಂತಾಗಿ ವಾಕ್ಯಜನ್ಯ ವೃತ್ತಿ ಸಾಪೇಕ್ಷತ್ವ ಬೇಕಾಗುವದರಿಂದ, ಇಲ್ಲಿ नियति ಪದವನ್ನು ಇಡಲಾಗಿದೆ.



## ॥ न च आत्मनि इति ॥

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**स्वरूपं संवित् आत्मव्यवहार दशायां स्वातिरेकि संवित् अपेक्षा अभावात्, आत्मनि स्वातिरेकि संज्ञापेक्षा नियतिः नास्ति इति भावः।**
ಆತ್ಮಸ್ವರೂಪವು ತನ್ನ ಆತ್ಮವ್ಯವಹಾರದ ದಶೆಯಲ್ಲಿ, ತನ್ನಕ್ಕಿಂತ ಬೇರೆ ಜ್ಞಾನದ ಅಪಕ್ಷೆ ಇಡುವದಿಲ್ಲ. ಹೀಗಾಗಿ ಆತ್ಮನಲ್ಲಿ, ತನ್ನಕ್ಕಿಂತ ಬೇರೆ ಸಂಜ್ಞೆಯ ಅಪೇಕ್ಷಾ ನಿಯಮವಿರುವದಿಲ್ಲ ಎಂಬ ಭಾವವಿರುತ್ತದೆ.

## ॥ सा इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**स्वातिरिक्त संवित् सापेक्ष इत्यर्थः। अत्र व्यवहार शब्देन विशिष्ट व्यवहार विवक्षितः, स्वरूप मात्र व्यवहरो वा इति विकल्पं हृदि निधाय आद्यं निराकरोति।**
ಇಲ್ಲಿ सा ಎಂದರೆ, ಸ್ವ-ಅತಿರಿಕ್ತ ಜ್ಞಾನದ ಸಾಪೆಕ್ಷ ಎಂದರ್ಥ. ಇಲ್ಲಿ ವ್ಯವಹಾರ ಶಬ್ದದಿಂದ ವಿಶಿಷ್ಟ ವ್ಯವಹಾರ ವಿವಕ್ಷಿತವಾಗಿರುತ್ತದೆ. ಇಲ್ಲಿ ಈ ವಿಶಿಷ್ಟ ವ್ಯವಹಾರವೊ ಅಥವಾ ಸ್ವರೂಪಮಾತ್ರ ವ್ಯವಹಾರವೋ ಎಂಬ ವಿಕಲ್ಪಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಮೊದಲಿನ ವಿಕಲ್ಪವನ್ನು, ಈ ಟೀಕಾವಾಕ್ಯದಿಂದ ನಿರಾಕರಿಸುತ್ತಾರೆ.

## ॥ स्वप्रकाशत्व अद्वितीयेति इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**स्वप्रकाशत्वादि विशिष्ट व्यवहार स्वस्वप्रकाशत्वादि विशेषणोपनायक "अत्र अयं पुरुषः स्वयं ज्योतिः" इत्यादि वेदान्तवाक्यजन्य वृत्ति सापेक्षत्व नियमात्, अनैकान्तिक इत्यर्थः।**
ಆತ್ಮನ ಸ್ವಪ್ರಕಾಶತ್ವಾದಿ ವಿಶಿಷ್ಟ ವ್ಯವಹಾರವು, ಸ್ವಸ್ವಪ್ರಕಾಶತ್ವಾದಿ ವಿಶೇಷಣಗಳನ್ನೊಳಗೊಂಡ "अत्र अयं पुरुषः स्वयं ज्योतिः" ಎಂಬ ಮುಂತಾದ ವೇದಾಂತಜನ್ಯ ವೃತ್ತಿ ಸಾಪೇಕ್ಷವಾಗಿರುತ್ತದೆ ಎಂಬ ನಿಯಮವಿರುತ್ತದೆ. ಅದರಂತೆ ಅನ್ಯೈಕಾಂತಿಕ ದೋಷ ಹಾಗೆಯೆ ಉಳಿಯಿತು ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**किम् व्यवहार शब्देन विशिष्ट व्यवहारो विवक्षितः? स्वरूपमात्र व्यवहारो वा? इति विकल्पे हृदि निधाय आद्यं प्रति आह– स्वप्रकाशत्व इति॥**
ಇಲ್ಲಿ ಏಕೆ ವ್ಯವಹಾರ ಶಬ್ದದಿಂದ ವಿಶಿಷ್ಟ ವ್ಯವಹಾರ ವಿವಕ್ಷಿತವಾಗಿದೆಯೊ? ಸ್ವರೂಪಮಾತ್ರ ವ್ಯವಹಾರವೊ? ಎಂಬ ವಿಕಲ್ಪಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಮೊದಲನೆ ವಿಕಲ್ಪದ ಪ್ರತಿ ಈ ಟೀಕಾವಾಕ್ಯವಿರುತ್ತದೆ.

**स्वप्रकाशत्वादि व्यवहारे " अत्र अयं पुरुषः स्वयं ज्योतिः" इत्यादि वाक्यजन्य वृत्ति सापेक्षत्वात् अनैकान्तिकता इत्यर्थः।**

ಸ್ವಪ್ರಕಾಶತ್ವಾದಿ ವ್ಯವಹಾರದಲ್ಲಿ " अत्र अयं पुरुषः स्वयं ज्योतिः" ಎಂದು ಮುಂತಾದ ವಾಕ್ಯಜನ್ಯ ವೃತ್ತಿ ಸಾಪೇಕ್ಷವಾಗಿರುತ್ತದೆ. ಅದರಂತೆ ಅನೈಕಾಂತಿಕತಾ ದೋಷ ಹಾಗೆಯೆ ಉಳಿಯುತ್ತದೆ ಎಂಬ ಭಾವ ವಿರುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**अस्तु आत्मप्रकाशः तथापि न स्वरूप संविदा आत्मव्यवहारो भवति, आत्मव्यवहार मात्रस्य विशिष्टव्यवहारत्वेन विशेषणोपनायक प्रमाणेन विना अयोगात्। तथा च स्वव्यवहार स्वव्यतिरेकि संवित् अपेक्षारूप दृश्यत्वं अवर्जनीयं इति भावः।**

ಆತ್ಮಪ್ರಕಾಶವಾಗಿರಲಿ, ಹಾಗಿದ್ದರೂ ಅದು ಸ್ವರೂಪ ಜ್ಞಾನದ ಆತ್ಮವ್ಯವಹಾರವಾಗಲು ಸಾಧ್ಯವಿಲ್ಲ. ಆತ್ಮವ್ಯವಹಾರಮಾತ್ರವು ವಿಶಿಷ್ಟವ್ಯವಹಾರತ್ವ ದಿಂದ ವಿಶೇಷಣನ್ನೊಳಗೊಂಡ ಪ್ರಮಾಣದ ವಿನಾ ಅಯೋಗ್ಯವಾಗಿದೆ. ಅದರಂತೆ, ಸ್ವವ್ಯವಹಾರ ಸ್ವವ್ಯತಿರೆಕಿ ಜ್ಞಾನದ ಅಪೇಕ್ಷರೂಪ ದೃಶ್ಯತ್ವವು ಅವರ್ಜನೀಯವಾಗಿದೆ ಎಂಬ ಭಾವ ವಿರುತ್ತದೆ.

## ॥ औपाधिकात्म विकल्पक इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**सोपाधिकात्म विषयक विशिष्ट व्यवहारे उपाध्युन्नायक प्रमाणापेक्षा नियमेपि न स्वरूपमात्र व्यवहारे तदपेक्ष इति द्वितीयं आशङ्कते–औपाधिक इति॥**

ಇನ್ನು ಸೋಪಾಧಿಕಾತ್ಮ ವಿಷಯಕ ವಿಶಿಷ್ಟ ವ್ಯವಹಾರದಲ್ಲಿ ಉಪಾಧಿಗಳನ್ನೊಳಗೊಂಡ ಪ್ರಮಾಣದ ಅಪೇಕ್ಷೆಯ ನಿಯಮವಿದ್ದರೂ, ಸ್ವರೂಪಮಾತ್ರ ವ್ಯವಹಾರದಲ್ಲಿ ಅವುಗಳ ಅಪೇಕ್ಷ ಇರುವದಿಲ್ಲ ಎಂದು ದ್ವಿತೀಯ ವಿಕಲ್ಪವನ್ನು ಈ ಟೀಕಾವಾಕ್ಯದಿಂದ ಆಶಂಕಿಸುತ್ತಾರೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**सोपाधिकात्म विषय विशिष्ट व्यवहारे उपाध्युपनायक प्रमाणापेक्षा नियमोऽपि, न स्वरूपमात्र व्यवहार इति द्वितीयं शङ्कते– औपाधिक इति॥**

ಸೋಪಾಧಿಕಾತ್ಮ ವಿಷಯ ವಿಶಿಷ್ಟ ವ್ಯವಹಾರದಲ್ಲಿ ಉಪಾಧಿನ್ನೊಳಗೊಂಡ ಪ್ರಮಾಣದ ಅಪೇಕ್ಷೆಯ ನಿಯಮವಿದ್ದರೂ, ಸ್ವರೂಪಮಾತ್ರ ವ್ಯವಹಾರದಲ್ಲಿ ಇರುವದಿಲ್ಲ, ಎಂದು ದ್ವಿತೀಯ ವಿಕಲ್ಪವನ್ನು ಈ ಟೀಕಾವಾಕ್ಯ ಆಶಂಕಿಸುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**स्वप्रकाशत्वं नाम प्रकाशाभावोधिकं रूपम्। अद्वितीयत्वं नाम द्वैताभावोधिकं रूपम्। तत् प्रतिभासे तत् समर्पकस्य "अत्र अयं पुरुषः स्वयं ज्योतिः इति एकमेवद्वितीयं" इति प्रमाण सापेक्षस्य अपेक्षायामपि, तादृश प्रमाण व्यतिरेकिणामपि स्वरूपमात्रस्य स्फुरणात्, न स्फुरणमात्र व्यवहृतौ अपेक्षत्वं इत्यर्थः।**

ಆತ್ಮನ ಸ್ವಪ್ರಕಾಶತ್ವವು ಪ್ರಕಾಶಾಭಾವದ ಅಧಿಕ ರೂಪವಾಗಿದೆ. ಆತ್ಮನ ಅದ್ವಿತೀಯತ್ವವು ದ್ವೈತಾಭಾವದ ಅಧಿಕ ರೂಪವಾಗಿದೆ. ಅವುಗಳ ಪ್ರತಿಭಾಸ ಅವುಗಳ ಸಮರ್ಪಕವು "अत्र



अयं पुरुषः स्वयं ज्योतिः इति एकमेवद्वितीयं" ಎಂಬ ಮುಂತಾದ ಪ್ರಮಾಣಗಳ ಸಾಪೇಕ್ಷವನ್ನು ಅಪೇಕ್ಷಿಸಿದರೂ, ಆತರಹದ ಪ್ರಮಾಣ ಇಲ್ಲದಾಗಿದ್ದರೂ ಸ್ವರೂಪಮಾತ್ರದ ಸ್ಫುರಣದಿಂದ ಅವುಗಳ ಪ್ರತಿಭಾಸವಾಗುತ್ತವೆ, ಮತ್ತು ಇದು ಸ್ಫುರಣಮಾತ್ರ, ಇಲ್ಲಿ ವ್ಯವಹಾರದ ಅಪೇಕ್ಷೆ ಇರುವದಿಲ್ಲ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**स्वरूपमात्र व्यवहारोऽपि आत्मनो (आत्मनोऽपि असिद्ध) इति भावेन शङ्कते– औपाधिकात्म विकल्प इति॥**

ಇಲ್ಲಿ ಆತ್ಮನ ಸ್ವರೂಪಮಾತ್ರ ವ್ಯವಹಾರದ ಭಾವನೆಯಿಂದ, ಈ ಟೀಕಾವಾಕ್ಯ ಮೂಲಕ ಆಶಂಕಿಸುತ್ತಾರೆ.

## ॥ तर्हि इति ॥

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**यदि विना प्रमाणं आत्मनि स्वरूपमात्र व्यवहारः स च स्वरूप ज्ञानेन एव भवति इति अङ्गीक्रियते तर्हि घटादौ अपि स्वरूप व्यवहारः अस्ति। न च घटाद्यात्मक प्रकाशे न एतत् साध्य इति अङ्गीक्रियताम्। अप्रमाणिक कल्पनाय निरङ्कुशत्वात इति भावः।**

ಒಂದು ವೇಳೆ ಏನೂ ಪ್ರಮಾಣವಿಲ್ಲದೆ, ಆತ್ಮನಲ್ಲಿಯ ಸ್ವರೂಪವ್ಯವಹಾರ ಆಗುವುದಾದರೆ, ಮತ್ತು ಅದು ಸ್ವರೂಪ ಜ್ಞಾನದಿಂದಲೇ ಆಗುತ್ತದೆ ಎಂದು ಅಂಗೀಕರಿಸಿದರೆ, ಘಟಾದಿಗಳಲ್ಲಿ ಕೂಡ ಸ್ವರೂಪ ವ್ಯವಹಾರವಿದೆ ಎಂದು ಒಪ್ಪಬೇಕಾಗುತ್ತದೆ. ಘಟಾದಿಗಳಲ್ಲಿ ಆತ್ಮಪ್ರಕಾಶ ಇರುವದಿಲ್ಲ, ಆದರಿಂದ ಇದು ಸಾಧ್ಯವಲ್ಲ ಎಂದು ಅಂಗೀಕರಿಸಬೇಕು ಎಂದು ಪ್ರತಿಪಾದಿಸುವದು ಸರಿಯಲ್ಲ. ಅಪ್ರಮಾಣಿಕ ಕಲ್ಪನೆಯು ನಿರಂಕುಶವಾಗಿರುತ್ತದೆಯಲ್ಲವೆ, ಎಂಬ ಭಾವ ಇಲ್ಲಿ ಇರುತ್ತದೆ.

## ॥ समं एतत् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**घटादि प्रपञ्चेऽपि घटत्वादि विशिष्ट व्यवहार एव विशेषणोपनायक मानापेक्षा नियमेऽपि, न घटस्वरूपमात्रे तदपेक्ष इत्यपि वक्तुं शक्यत्वेन भागासिद्धिः स्यात् इत्यर्थः।**

ಘಟಾದಿ ಪ್ರಪಂಚದಲ್ಲಿ ಕೂಡ ಘಟತ್ವಾದಿ ವಿಶಿಷ್ಟ ವ್ಯವಹಾರದಾಗ ಮಾತ್ರ ವಿಶೇಷಣನ್ನೊಳಗೊಂಡ ಪ್ರಮಾಣದ ಅಪೇಕ್ಷೆಯ ನಿಯಮವಿದ್ದರೂ, ಘಟಸ್ವರೂಪಮಾತ್ರದಲ್ಲಿ ಅದರ ಅಪೇಕ್ಷೆ ಇರುವದಿಲ್ಲ ಎಂದು ಹೇಳಲು ಶಕ್ಯವಿರುವದರಿಂದ, ಭಾಗ-ಅಸಿದ್ಧಿ ದೋಷ ಉಂಟಾಗುತ್ತದೆ ಎಂದರ್ಥ.

## ॥ उक्तम् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**अपि च इत्यादिना उक्तं इत्यर्थः।**

ಅಂದರೆ, ಹಿಂದೆ, अपि च ಎಂಬ ವಾಕ್ಯದಿಂದ ಹೇಳಿದ್ದು ಎಂದರ್ಥ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**उक्त प्रायं इत्यर्थः।**

ಅಂದರೆ, ಹಿಂದೆ, अपि च ಎಂಬ ವಾಕ್ಯದಿಂದ ಹೇಳಿದ್ದು ಎಂದರ್ಥ.

## ॥ व्यवहार इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**व्यवहार स्वरूपमात्र व्यवहारः।**

ಇಲ್ಲಿ व्यवहार ಎಂದರೆ, ಸ್ವರೂಪಮಾತ್ರ ವ್ಯವಹಾರ ಎಂದರ್ಥ.

**तथा च विशिष्ट व्यवहारे स्वातिरिक्त संवित् सापेक्षत्व नियति सद्भावात् न भाग–असिद्धिः इति भावः।**

ಅದರಂತೆ ವಿಶಿಷ್ಟ ವ್ಯವಹಾರದಲ್ಲಿ ಸ್ವ-ಅತಿರಿಕ್ತ ಜ್ಞಾನ ಸಾಪೇಕ್ಷತ್ವ ನಿಯಮ ಇರುವದರಿಂದ, ಭಾಗ-ಅಸಿದ್ಧಿ ದೋಷ ಉಂಟಾಗುವದಿಲ್ಲ ಎಂಬ ಭಾವ ವಿರುತ್ತದೆ.

## ॥ तुल्यं इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**तथा च आत्मनि अपि विशिष्ट व्यवहार अतिरिक्त स्वरूपमात्र व्यवहार अभावेन उक्तरूप दृश्यत्व सद्भावात् व्यभिचार इति भावः।**

ಅದರಂತೆ, ಆತ್ಮನಲ್ಲಿ ಕೂಡ ವಿಶಿಷ್ಟ ವ್ಯವಹಾರ ಅತಿರಿಕ್ತ ಸ್ವರೂಪಮಾತ್ರ ವ್ಯವಹಾರ ಇಲ್ಲದಿರುವಾಗ ಈಗಾಗಲೆ ಹೇಳಿದ್ದರೂಪದಲ್ಲಿ ದೃಶ್ಯತ್ವ ಇರುವಾಗ, ವ್ಯಭಿಚಾರ ಅಥವಾ ಅನೈಕಾಂತಿಕ ದೋಷ ಹಾಗೆಯೆ ಉಳಿಯುತ್ತದೆ ಎಂಬ ಭಾವವಿರುತ್ತದೆ.

## ॥ सुषुप्त्यादौ इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**सुषुप्तौ स्वरूपमात्र स्फुरणापरपर्याय अभिज्ञारूपः व्यवहारः अस्ति इत्यर्थः। सुषुप्त्यादौ इति पाठे आदिपदेन मूर्छाग्रहणम्।**

ಸುಷುಪ್ತಿಯಲ್ಲಿ ಸ್ವರೂಪಮಾತ್ರ ಸ್ಫುರಣಪರ ಪರ್ಯಾಯ ಸ್ಮರಣರೂಪ ವ್ಯವಹಾರ ಇರುತ್ತದೆ ಎಂದರ್ಥ. सुषुप्त्यादौ ಎಂದು ಪಾಠದಲ್ಲಿ आदि ಪದದಿಂದ ಮೂರ್ಛೆಯನ್ನು ಗ್ರಹಿಸಲಾಗಿದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**सुषुप्ति मूर्छादौ स्वरूपमात्र स्फुरणापरपर्याय अभिज्ञारूपः व्यवहारः अस्ति इत्यर्थः।**

ಸುಷುಪ್ತಿ, ಮೂರ್ಛಾದಿಗಳಲ್ಲಿ ಸ್ವರೂಪಮಾತ್ರ ಸ್ಫುರಣಪರ ಪರ್ಯಾಯ ಸ್ಮರಣರೂಪ ವ್ಯವಹಾರ ಇರುತ್ತದೆ ಎಂದರ್ಥ.



## ॥ कुत इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**सुषुप्तौ स्वरूपमात्र व्यवहारः अस्ति इति कुतः प्रमाणात् सिद्धं इत्यर्थः।**

ಸುಷುಪ್ತಿಅಯಲ್ಲಿ ಸ್ವರೂಪಮಾತ್ರ ವ್ಯವಹಾರ ಇರುತ್ತದೆ ಎಂದು ಯಾವ ಪ್ರಮಾಣದಿಂದ ಸಿದ್ಧವಾಗಿದೆ ಎಂದರ್ಥ.

## ॥ उत्तरकाले परामर्शात् इति ॥

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**उत्तरकालीन अनुभवः सुषुप्तिकालीनार्थं विषयीकरणात्, तस्य च अपनायकान्तर अयोगे तत् अपनायक स्वरूप प्रत्ययसिद्धिः। प्रत्ययस्य व्यवहार जनकत्व नियमात्। तत् जन्य स्वरूपमात्र व्यवहार सिद्धिः इति भावः।**

ಅಂದರೆ, ಉತ್ತರಕಾಲದಲ್ಲಿಯ ಅನುಭವ, ಸುಷುಪ್ತಿಕಾಲದಲ್ಲಿಯ ಅರ್ಥ ವಿಷಯೀಕರಣವಾಗಿರುವದರಿಂದ ಅದನ್ನು ಬೇರೆಯದೆಂದು ಪರಿಗಣಿಸುವದು ಅಯೋಗ್ಯವಾದ್ದರಿಂದ, ಅದು ಅದರ ಬೇರೆತರಹದ ಸ್ವರೂಪದ ಪರಿಜ್ಞಾನವೆಂದು ಸಿದ್ಧವಾಯಿತು. ಈ ಪ್ರತ್ಯಯವು ವ್ಯವಹಾರದ ಜನಕವಾಗಿರುತ್ತದೆ ಎಂದು ನಿಯಮವಿರುತ್ತದೆ . ಹೀಗಾಗಿ ಸ್ವರೂಪಮಾತ್ರ ವ್ಯವಹಾರ ಸಿದ್ಧವಾಯಿತು ಎಂಬ ಭಾವವಿರುತ್ತದೆ,

## ॥ परामर्श इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**परामर्शः स्मरणम् ।**

ಇಲ್ಲಿ परामर्शः ಎಂದರೆ ಸ್ಮರಣ ಎಂದರ್ಥ.

## ॥ तर्हि तत एव इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**तत् एव परामर्श बलात् एव।**

ಇಲ್ಲಿ तत् एव ಎಂದರೆ ಪರಾಮರ್ಶ ಬಲದಿಂದಲೇ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**परामर्शस्य सुखकालादि विशिष्ट विषयतया तन्मूलाभिज्ञाया अपि तद्विषयकत्वं वाच्यम्। तयोः समानविषयकत्व नियमात् इत्यर्थः।**

ಪರಾಮರ್ಶದ ಸುಖಕಾಲಾದಿ ವಿಶಿಷ್ಟ ವಿಷಯವಾಗಿ ಅದರ ಮೂಲ ಸ್ಮರಣೆ ಕೂಡ ಮೂಲದ ವಿಷಯಕವೆಂದು ಹೇಳಬೇಕು. ಅವುಗಳು ಸಮಾನವಿಷಯಕಗಳಾಗಿರುತ್ತವೆ ಎಂದು ನಿಯಮವಿರುತ್ತದೆ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**उत्तरकालीन परामर्श विशिष्टार्थ उल्लेखात् सुषुप्तिकाले विशिष्ट अनुभवः विशिष्ट व्यवहाराश्च सिद्ध्येत्, न स्वरूपमात्र व्यवहारः इति भावः।**

ಉತ್ತರಕಾಲೀನ ಪರಮರ್ಶ ವಿಶಿಷ್ಟಾರ್ಥ ಉಲ್ಲೇಖದಿಂದ, ಸುಷುಪ್ತಿಕಾಲದಲ್ಲಿಯ ವಿಶಿಷ್ಟ ಅನುಭವ ಹಾಗೂ ವಿಶಿಷ್ಟ ವ್ಯವಹಾರವೇ ಸಿದ್ಧವಾಯಿತು, ಸ್ವರೂಪಮಾತ್ರ ವ್ಯವಹಾರವಲ್ಲ ಎಂಬ ಭಾವವಿರುತ್ತದೆ.

**ननु अस्ति सुषुप्तिकालीनो विशिष्ट व्यवहारः, तथापि तत्र वृत्तिरूप ज्ञान अभावेन वृत्तिरूपज्ञानं विना एव स व्यवहारः भवति इति वाच्यम्। ततश्च स्वातिरेकि संवित् अपेक्षा नियतिरूप दृश्यत्व अभावः प्राप्तः इति चेत् न। सुषुप्तिकाले स्वरूपानुभव एव अस्ति न तु स्वरूप व्यवहारः इति, अत्र तात्पर्यात्।**

ಸುಷುಪ್ತಿ ಕಾಲದಲ್ಲಿ ವಿಶಿಷ್ಟ ವ್ಯವಹಾರ ಇರಲಿ, ಹಾಗಿದ್ದರೂ ಅಲ್ಲಿ ವೃತ್ತಿರೂಪ ಜ್ಞಾನ ಇರುವದಿಲ್ಲ, ಹೀಗಾಗಿ ಅಲ್ಲಿ ವೃತ್ತಿರೂಪ ಜ್ಞಾನವಿಲ್ಲದೆಯೆ ಆ ವ್ಯವಹಾರ ಆಗುತ್ತದೆ ಎಂದು ಹೇಳಬೇಕು. ಅದರಂತೆ, ಸ್ವಾತಿರೇಕ ಜ್ಞಾನ ಅಪೇಕ್ಷಾ ನಿಯಮರೂಪ ದೃಶ್ಯತ್ವದ ಅಭಾವತೆ ಎಂದು ಪ್ರಾಪ್ತವಾಯಿತು ಎಂತೆಂದರೆ. ಅದು ಸರಿಯಲ್ಲ. ಸುಷುಪ್ತಿಕಾಲದಲ್ಲಿ, ಸ್ವರೂಪ ಅನುಭವ ಮಾತ್ರ ಇರುತ್ತದೆ ವಿನಹಾ ಸ್ವರೂಪ ವ್ಯವಹಾರವಲ್ಲ ಎಂದು ಇಲ್ಲಿ ತಾತ್ಪರ್ಯವಿರುತ್ತದೆ.

### ॥ विशिष्ट इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**तथा च परामर्शस्य सुखकालादि विशिष्ट विषयकतया तन्मूलाभिज्ञया अपि तद्विषयकत्वं वाच्यम्। तयोः समानविषयकत्व नियमात् इत्यर्थः।**

ಅದರಂತೆ, ಪರಾಮರ್ಶದ ಸುಖಕಾಲಾದಿ ವಿಶಿಷ್ಟ ವಿಷಯವಾಗಿ ಅದರ ಮೂಲ ಸ್ಮರಣೆ ಕೂಡ ಮೂಲದ ವಿಷಯಕವೆಂದು ಹೇಳಬೇಕು. ಅವುಗಳು ಸಮಾನವಿಷಯಕಗಳಾಗಿರುತ್ತವೆ ಎಂದು ನಿಯಮವಿರುತ್ತದೆ ಎಂದರ್ಥ.

### ॥ तूष्णीमास्व इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**हेतोः व्यभिचारस्य दृढत्वात् इति भावः।**

ಈ ಎಲ್ಲೆ ವಿವೇಚನೆಯಿಂದ ದೃಶ್ಯತ್ವ ಹೇತುವಿನಲ್ಲಿ ವ್ಯಭಿಚಾರವು ಧೃಡವಾಯಿತು ಎಂಬ ಭಾವ ವಿರುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु आत्मनि विशिष्ट व्यवहारेऽपि न विशेष्यांशे स्वातिरिक्त संवित् अपेक्षा, स्वप्रकाशत्वात्। घटादौ तु घटांशेऽपि इति, न अनैकान्त्यं, नापि भाग–असिद्धिः इत्यतः तथा सति नियतपद वैयर्थ्यं स्यात् इत्याशयेन आह– तूष्णीमास्व इति॥**



ಇಲ್ಲಿ, ಆತ್ಮನು ಸ್ವಪ್ರಕಾಶನಾದ್ದರಿಂದ, ಆತ್ಮನಲ್ಲಿ ವಿಶಿಷ್ಟ ವ್ಯವಹಾರವಿದ್ದರೂ, ವಿಶೇಷ್ಯಾಂಶದಲ್ಲಿ ಸ್ವಾತಿರಿಕ್ತ ಜ್ಞಾನದ ಅಪೇಕ್ಷೆ ಇರುವದಿಲ್ಲ. ಇನ್ನು ಘಟಾದಿಗಳಲ್ಲಿ ಯಾದರೂ ಘಟಾಂಶ ವಿಶೇಷ್ಯಾಂಶವಿದ್ದರೂ, ಅಲ್ಲಿ ಸ್ವಾತಿರಿಕ್ತ ಜ್ಞಾನದ ಅಪೇಕ್ಷೆ ಇರುತ್ತದೆ, ಅದರಿಂದ ಅನೈಕಾಂತ್ಯ ಅಥವಾ ಭಾಗ-ಅಸಿದ್ಧ್ಯಾದಿ ದೋಷಗಳಿಗೆ ಆಸ್ಪದವಿಲ್ಲ ಎನ್ನುವುದಾದರೆ, "स्वव्यवहारे स्वातिरेकि दर्शन अपेक्षा नियतिः" ಎಂಬಲ್ಲಿಯ नियति ಪದ ವ್ಯರ್ಥವೆಂದು ಹೇಳಬೇಕಾಗುವ ಪ್ರಸಂಗವದಗುವದು, ಎಂಬ ಆಶಯದಿಂದ तूष्णीमास्व ಎಂದರೆ ಪರಪಕ್ಷದವರು ಸುಮ್ಮನಾಗಬೇಕು ಎಂದು ಟೀಕಾ ಕೃತ್ಪಾದರು ಹೇಳಿರುತ್ತಾರೆ.

## ६.२.३.८ फलव्याप्यत्व अभावेन आत्मनो न दृश्यं इति मतं निराकरोति

### टीका

**अन्यः तु आह, वृत्तिविषयस्याऽपि आत्मनः अनाधेयातिशयत्वात् प्रकाशरूपे प्रकाशान्तर अनुदयात् फलव्याप्यत्व अभावेन न दृश्यत्वं अनैकान्तिकं इति। तत् एतत् असिद्धि प्रसङ्गेन प्रागेव निरस्तं इति अलम्।**

ಮತ್ತೆ ಕೆಲವರು ಹೀಗೆ ಹೇಳುತ್ತಾರೆ: ವೃತ್ತಿವಿಷಯಗಳಿದ್ದರೂ ಆತ್ಮನು ಅನಾಧೆಯಾತಿಶಯನದ್ದರಿಂದ ಅಥವಾ ಅವುಗಳ ಧಾರಕನಾಗಲಾರಾ. ಆದ್ದರಿಂದ ಪ್ರಕಾಶರೂಪದಲ್ಲಿ ಪ್ರಕಾಶಂತರ ಉಂಟಾಗದ ಕಾರಣ ಅಲ್ಲಿ ಫಲವ್ಯಾಪ್ಯತ್ವ ಅಭಾವತೆಯಿಂದ, ಅಲ್ಲಿ ದೃಶ್ಯತ್ವ ಅನೈಕಾಂತಿಕ ದೋಷ ಉಂಟಾಗಲು ಸಾಧ್ಯವಿಲ್ಲ. ಇಲ್ಲಿ ಕೂಡ ಅಸಿದ್ಧಿ ಪ್ರಸಂಗ ಒದಗುವದರಿಂದ, ಹಿಂದೆಯೆ ನಿರಾಕರಿಸಲಾಗಿದೆ. ಇನ್ನು ಸಾಕು ಈ ವಾದ.

### टिप्पणीनाम् विशेषार्थानि

### ॥ अन्यः तु आह इति॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**फलव्याप्यत्व अभावे हेतुः अनाधेयातिशयत्वात् इति। तत्र हेतुः प्रकाशरूप इति। यथा घटादौ तदाकार वृत्त्या स्फुरणरूपोऽतिशय आधीयते न एवं आत्मनि। तस्यैव स्फुरणरूपत्वात् इत्यर्थः।**

ಇಲ್ಲಿ, ಫಲವ್ಯಾಪ್ಯತ್ವ ಇಲ್ಲದಾಗ ಹೇತು ಆಧಾರವಿಲ್ಲದ್ದಾಗುತ್ತದೆ. ಅಲ್ಲಿ ಹೇತುವು ಪ್ರಕಾಶರೂಪದ್ದಾಗಿರುತ್ತದೆ. ಹೇಗೆ ಘಟಾದಿಗಳಲ್ಲಿ ಅವುಗಳ ಆಕಾರದ ವೃತ್ತಿಯಿಂದ ಸ್ಫುರಣರೂಪಾತಿಶಯವಾಗಿ ಧರಿಸುತ್ತದೆ ಹೀಗೆ ಆತ್ಮನಲ್ಲಿ ಇರುವದಿಲ್ಲ. ಏಕೆಂದರೆ ಅದುವೇ ಸ್ಫುರಣರೂಪದ್ದಾಗಿರುತ್ತದೆ ಎಂದರ್ಥ.

## ॥ वृत्तिविषयस्याऽपि इत्यादि ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

अत्र इयं परप्रक्रिया। यथा तटाक उदकं कुल्यात्मना बहिर्निर्गत्य केदारान् प्रविश्य तदाकारं भवति। एवं सावयवं तैजसं अन्तःकरणं चक्षुरादिद्वारा बहिर्निरगत्य विषयं व्याप्य तदाकारं भवति। स इयं वृत्तिः।

ಇಲ್ಲಿ ಪರಪಕ್ಷದವರ ಪ್ರಕ್ರಿಯಾ ಹೀಗಿರುತ್ತದೆ: ಹೇಗೆ ಜಲಾಶಯ ನೀರು ಅಗೆಯುವ ಅಥವಾ ತೋಡಿಯುವದರ ಮೂಲಕ, ಗದ್ದೆಗಳನ್ನು ಪ್ರವೇಶಿಸಿ ಅವುಗಳ ಆಕಾರವನ್ನು ಹೊಂದುತ್ತದೆ. ಅದೇರೀತಿಯಾಗಿ ಅವಯವದಿಂದ ಕೂಡಿದ ಅಂತಃಕರಣದ ಕಾಂತಿಯು ಚಕ್ಷುರಾದಿದ್ವಾರಾ ಹೊರಗೆಬಿದ್ದು ವಿಷಯಗಳನ್ನು ವ್ಯಾಪಿಸಿ ಅವುಗಳ ಆಕಾರವನ್ನು ಹೊಂದುತ್ತದೆ. ಇದನ್ನೆ ವೃತ್ತಿ ಎನ್ನುತ್ತಾರೆ.

अस्यां च वृत्तौ ज्ञातृ चैतन्यं प्रतिफलति। चैतन्य प्रतिफलन अभावे, केवलया वृत्या विषयाधिष्ठान चैतन्यगत अज्ञान निवृत्ति अयोगात्। केवलया वृत्तेः केवलस्य चैतन्यस्य वा अज्ञान अनिवर्तकत्वेन, वृत्ति उपारूढ चैतनस्य तथात्वात्। अयं पिंडसमारूढाग्रेः रोग निवर्तकत्ववत्। उक्तं च। तृणादेः भासिकापि एषा सूर्यदीप्तिः तृणं दहेत्। सूर्यकान्तं उपारुह्य तत् न्यायं च इति योजयेत् इति।

ಇಂತಹ ವೃತ್ತಿ, ಜ್ಞಾತೃ ಚೈತನ್ಯ ಪ್ರತಿ ಫಲಿಸುತ್ತದೆ. ಇನ್ನು ಚೈತನ್ಯ ಪ್ರತಿ ಫಲದ ಅಭಾವತೆಯಲ್ಲಿ, ಕೇವಲ ವೃತ್ತಿಯಿಂದ ವಿಷಯಾಧಿಷ್ಠಾನ ಚೈತನ್ಯನಲ್ಲಿಯ ಅಜ್ಞಾನದ ನಿವೃತ್ತಿ ಅಯೋಗ್ಯವೆನಿಸುತ್ತದೆ. ಕೇವಲ ವೃತ್ತಿಯಿಂದಾಗಲಿ ,ಅಥವಾ ಕೇವಲ ಚೈತನ್ಯನಿಂದಾಗಲಿ ಅಜ್ಞಾನದ ನಿವರ್ತನೆ ಆಗಲು ಸಾಧ್ಯವಿಲ್ಲ, ವೃತ್ತಿನ್ನೊಳಗೊಂಡ ಚೈತನ್ಯನಿಂದಲೇ ಚೈತನ್ಯನಲ್ಲಿಯ ಅಜ್ಞಾನ ನಿವರ್ತನೆಯಾಗಲು ಸಾಧ್ಯ.

तथा च वृत्ति प्रतिबिम्बित चैतन्येन, घटाधिष्ठान चैतन्यगत अज्ञाने निरस्ते, अधिष्ठान चैतन्यं अभिव्यक्तं सत् वृत्ति उपारूढ चैतन्येन एकीभूतं भवति। अनन्तरं मया ज्ञातोयं घट इति ज्ञानं उत्पद्यते। तत्र वृत्तिः ज्ञायते अनया चैतन्यं इति करणव्युत्पत्या ज्ञानं इति उच्यते।

ಅದರಂತೆ, ವೃತ್ತಿ ಪ್ರತಿಬಿಂಬದಿಂದ ಕೂಡಿದ ಚೈತನ್ಯನಿಂದ, ಘಟಾಧಿಷ್ಠಾನ ಚೈತನ್ಯನಲ್ಲಿಯ ಅಜ್ಞಾನ ನಿವರ್ತಿಸಿದಲ್ಲಿ, ಅಧಿಷ್ಠಾನ ಚೈತನ್ಯ,ಅಭಿವ್ಯಕ್ತ ಸತ್ ವೃತ್ತಿನ್ನೊಳಗೊಂಡ ಚೈತನ್ಯನೊಂದಿಗೆ ಕೂಡಿಕೊಂಡು ಒಂದೇ ಆಗುತ್ತಾನೆ. ಅನಂತರ ನಾನು ಘಟವನ್ನು ತಿಳಿದಿರುತ್ತೇನೆ ಎಂಬ ಜ್ಞಾನ ಉಂಟಾಗುತ್ತದೆ. ಅಲ್ಲಿ ಹೀಗೆ ಚೈತನ್ಯನು ವೃತ್ತಿಯನ್ನು ತಿಳಿದುಕೊಳ್ಳುತ್ತಾನೆ ಎಂಬುದನ್ನು ಕರಣವ್ಯುತ್ಪತ್ತಿದ್ವಾರಾ, ಜ್ಞಾನ ಎಂದು ಹೇಳುತ್ತಾರೆ.

वृत्ति प्रतिबिम्बित चैतन्य अभिव्यक्त अधिष्ठान चैतन्यमेव च ज्ञप्तिः ज्ञानं इति, भाव व्युत्पत्या मुख्यतो ज्ञान शब्दवाच्यम्।

ಅಂದರೆ, ವೃತ್ತಿ ಪ್ರತಿಬಿಂಬಿತ ಚೈತನ್ಯ, ಮತ್ತು ಅಭಿವ್ಯಕ್ತ ಅಧಿಷ್ಠಾನ ಚೈತನನೇ ತಿಳಿಯಲ್ಪಡುವದು, ಜ್ಞಾನ ಎಂದು, ಭಾವ ವ್ಯುತ್ಪತ್ತಿಯಂತೆ ಮುಖ್ಯತಃ, ಜ್ಞಾನ ಶಬ್ದವಾಚ್ಯವಾಗಿರುತ್ತದೆ.

तत् एतत् सर्वं संगृह्य उक्तं कारिकायां वेदान्तिभिः।



ಮೇಲೆ ಹೇಳಿದ್ದನ್ನೆಲ್ಲ ಸಂಗ್ರಹಿಸಿ ವೇದಾಂತಿಗಳು ಕೂಡ ಕಾರಿಕಾ ಗ್ರಂಥದಲ್ಲಿ ಕೆಳಗಿನಂತೆ ಹೇಳಿರುತ್ತಾರೆ:

स्वच्छेन्तःकरणेऽशनिप्रसुमरे नेत्रादि मार्गोद्गते
ततद्वाह्य चयात्मना परिणते बिम्बीभवन्ती चितिः।
एकाप्यर्थमनोविशेषक वशाद् द्वैतं प्रपन्ना हरत्यज्ञानं
प्रकटीकरोति विषयान् ज्ञातं मया इदं तु इति॥, इति

## ॥ अनाधेयातिशयत्वात् इति ॥

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

ज्ञाततास्वरूपातिशयेन तद्विवक्षया न फलाव्यर्थत्वं सम्भवति इति भावः।

ಅಂದರೆ, ಜ್ಞಾತತಾಸ್ವರೂಪ ಲಕ್ಷಣದ ವಿವಕ್ಷೆಯಂತೆ ವೃತ್ತಿಯ ಫಲವ್ಯಾಪ್ಯತ್ವ ಸಂಭವಿಸುವದಿಲ್ಲ ಎಂಬ ಭಾವವಿರುತ್ತದೆ.

## ॥ प्रकाशरूपे इति ॥

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

ननु मा भूत् ज्ञाततया फलव्याप्यत्वम्। वृत्तिफलित चैतन्य अभिव्यक्त विषय अधिष्ठान चैतन्यरूप फलेन फलव्याप्यत्वं भविष्यति इत्यत आह– प्रकाशरूप इति॥

ಇನ್ನು, ಜ್ಞಾನವಾಗುವದರ ಮೂಲಕ ಫಲವ್ಯಾಪ್ಯತ್ವವು ಆಗದೆ ಇರಲಿ. ವೃತ್ತಿ ಫಲಿತ ಚೈತನ್ಯ ಅಭಿವ್ಯಕ್ತ ವಿಷಯ ಅಧಿಷ್ಠಾನ ಚೈತನ್ಯರೂಪ ಫಲದಿಂದ ಫಲವ್ಯಾಪ್ಯತ್ವ ಆಗುತ್ತದಲ್ಲ, ಎಂಬುದನ್ನು ನಿರಾಕರಿಸಲು ಇಲ್ಲಿ ಪ್ರಕಾಶರೂಪ ಎಂದು ಹೇಳಲಾಗಿದೆ.

भवेद् घटादीनां अप्रकाशरूपाणि प्रकाशस्य वृत्तिमात्रेण अयोगात्, तदर्थं वृत्तिफलित चैतन्यं तत् अधिष्ठानं चैतन्यं च अभ्युपगन्तव्यम् इति। तल्लक्षणफलेन फलव्याप्यत्वम् न तु आत्मनः, तस्य प्रकाशरूपत्वेन वृत्तिमात्रेण तत् प्रकाशसम्भवे वृत्तिप्रतिफलित चैतन्यरूप प्रकाशान्तरस्य तद् अभिव्यक्त विषयाधिष्ठानं चैतन्यस्य च अकल्पत्वेन न तेनापि फलेन फलव्याप्यत्वं इति भावः।

ಇನ್ನು ಅಪ್ರಕಾಶರೂಪಗಳಾದ, ಘಟಾದಿಗಳಿಗೆ ವೃತ್ತಿ ಮಾತ್ರದಿಂದ ಪ್ರಕಾಶವಿದೆ ಎನ್ನುವುದು ಅಯೋಗ್ಯವಾಗಿದೆ. ಆದ್ದರಿಂದ, ಅದರ ಅರ್ಥ ವೃತ್ತಿಫಲಿತ ಚೈತನ್ಯ ಮತ್ತು ಅದರ ಅಧಿಷ್ಠಾನ ಚೈತನ್ಯ ಎಂದು ಒಪ್ಪಬೇಕು. ಅಂತಹ ಲಕ್ಷಣದ ಫಲದಿಂದ ಫಲವ್ಯಾಪ್ಯತ್ವವು ಘಟಾದಿ ಪ್ರಪಂಚಕ್ಕೆ ಇರುತ್ತದೆ ವಿನಹಾ ಆತ್ಮನಲ್ಲಿ ಇಲ್ಲ. ಏಕೆಂದರೆ, ಆತ್ಮನು ಪ್ರಕಾಶರೂಪನಾದ್ದರಿಂದ ವೃತ್ತಿಮಾತ್ರದಿಂದ ಅವನಲ್ಲಿ ಪ್ರಕಾಶ ಸಂಭವವಿರುವಾಗ, ವೃತ್ತಿ ಫಲಿತ ಪ್ರಕಾಶಾಂತರ ಚೈತನ್ಯರೂಪ ಮತ್ತು ಅದರ ಅಭಿವ್ಯಕ್ತ ವಿಷಯಾಧಿಷ್ಠಾನ ಚೈತನ್ಯನನ್ನು ಕಲ್ಪಿಸಲು ಸಾಧ್ಯವಿಲ್ಲದಾಗ, ಅದರ ಫಲದಿಂದ ಕೂಡ ಫಲವ್ಯಾಪ್ಯತ್ವ ಉಂಟಾಗಲು ಸಾಧ್ಯವಿಲ್ಲ, ಎಂಬ ಭಾವ.

## ॥ प्रकाशान्तर इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

स्फुरणरूप चैतन्य विषयत्वरूप इत्यर्थः।
ಸ್ಫುರಣರೂಪ ಚೈತನ್ಯ ವಿಷಯತ್ವರೂಪ ಎಂದರ್ಥ.

## ॥ फलव्याप्यत्व इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

वृत्तिप्रतिबिम्बित चैतन्य अभिव्यक्त अधिष्ठान चैतन्य फलम्। तद्वयाप्यत्वं नाम तद्विषयत्वं तत् अभावेन इत्यर्थः।
ಅಂದರೆ, ವೃತ್ತಿ ಪ್ರತಿಬಿಂಬಿತ ಚೈತನ್ಯ ಅಭಿವ್ಯಕ್ತ ಅಧಿಷ್ಠಾನ ಚೈತನ್ಯ ಫಲ ಎಂದರ್ಥ. ಅದರ ವ್ಯಾಪ್ಯತ್ವ ಅಂದರೆ ಅದರ ವಿಷಯತ್ವ, ಅದರ ಅಭಾವತೆಯಿಂದ ಎಂದರ್ಥ,

फलव्याप्यत्व अभावे हेतु अनाधेयातिशयत्वातत् इति। यथा घटादौ तदाकार वृत्या तत् अधिष्ठान चैतन्येन अज्ञान निरस्ते, चैतन्य विषयत्वरूपः अतिशय आधीयते। एवं वृत्या आत्मनि आधेयोतिशयो नास्ति इत्यर्थः।
ಇನ್ನು ಇಂತಹ ಫಲವ್ಯಾಪ್ಯತ್ವವು ಇಲ್ಲದಾಗ ಹೇತು ಆಧಾರವಿಲ್ಲದ್ದಾಗುತ್ತದೆ ಅಥವಾ ವಿಷಯೀಕರದಿಲ್ಲದಾಗುತ್ತದೆ. ಹೇಗೆ ಘಟಾದಿಗಳಲ್ಲಿ ಅವುಗಳ ಆಕಾರದ ವೃತ್ತಿಯಿಂದ ಅಧಿಷ್ಠಾನ ಚೈತನ್ಯದಿಂದ ಅಜ್ಞಾನದ ನಿವರ್ತನೆಯಾಗಿ, ಚೈತನ್ಯ ವಿಷಯತ್ವರೂಪ ಅತಿಶಯವಾಗಿ ಆಶ್ರಯಿಸುತ್ತದೆ. ಈ ರೀತಿಯಾಗಿ ವೃತ್ತಿಯಿಂದ ಆತ್ಮನಲ್ಲಿ ವಿಷಯತ್ವರೂಪ ಆಶ್ರಯಧಾರ ಇರುವದಿಲ್ಲ ಎಂದರ್ಥ.

तत्र हेतुः प्रकाशरूप इति स्फुरणरूप इत्यर्थः।
ಅಲ್ಲಿ ಹೇತುವು ಪ್ರಕಾಶರೂಪದ್ದಾಗಿರುತ್ತದೆ ಅಂದರೆ, ಸ್ಫುರಣರೂಪದ್ದಾಗಿರುತ್ತದೆ.

## ॥ तत् एतत् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

अत्र फलं किम् ज्ञातता चैतन्यं वा। न आद्यः। तस्य अन्यत्र निराकृतत्वात्। भावेऽपि अतीतादौ अतीन्द्रियेषु च तत् अभावेन भागासिद्धिः।
न द्वितीयः। तथा हि–
ಇಲ್ಲಿ ಫಲ ಎಂದರೆ, ಜ್ಞಾನವಾಗುವ ಫಲವೆಂತಲೊ ಅಥವಾ ಸ್ಫುರಣರೂಪ ಚೈತನ್ಯ ಫಲವೆಂತಲೊ? ಮೊದಲನೆಯದಾದರೆ ಶಕ್ಯವಿಲ್ಲ. ಅದನ್ನು ಮತ್ತೆಡೆ ನಿರಾಕರಿಸಲಾಗಿದೆ. ಅದು ಇದ್ದರೂ, ಅತೀಂದ್ರಿಯಾದಿ ವಿಷಯಗಳಲ್ಲಿ, ಅದರ ಅಭಾವತೆಯಿಂದ ಭಾಗ ಅಸಿದ್ಧಿ ದೋಷ ಉಂಟಾಗುತ್ತದೆ. ಎರಡನೆ ವಿಕಲ್ಪವನ್ನು ಹೇಳುವುದಾದರೆ, ಅದೂ ಕೂಡ ಸರಿಯಲ್ಲ ಅದನ್ನು ಈ ಕೆಳಗಿನಂತೆ ವಿವರಿಸ ಬಹುದುঃ

परेणापि परोक्षवृतौ न तत् आधेयं स्फुरणरूपं चैतन्य अङ्गीकृतम्। परोक्षवृत्तेः एव तत्र ज्ञानत्व अभ्युपगमात्। अन्यथा स्फुरणरूप चैतन्यस्य अपरोक्षैकर सत्वेन अभिव्यक्त अपरोक्ष चित्सम्बन्धेन परोक्षवृत्ति विषयस्य अपि अतीतादेः धर्मादेः च अपरोक्षत्व प्रसङ्गः।



ಪರಪಕ್ಷದವರು ಕೂಡ ಪರೋಕ್ಷವೃತ್ತಿಯಲ್ಲಿ ಸ್ಫುರಣರೂಪ ಚೈತನ್ಯದ ಧಾರಕತ್ವವನ್ನು ಅಂಗೀಕರಿಸಿಲ್ಲ. ಇನ್ನು ಪರೋಕ್ಷವೃತ್ತಿಯಿಂದಲೇ ಅಲ್ಲಿ ಜ್ಞಾನತ್ವವನ್ನು ಒಪ್ಪಬೇಕು. ಅನ್ಯಥಾ, ಸ್ಫುರಣರೂಪ ಚೈತನ್ಯದ ಅಪರೋಕ್ಷತೆಯ ಸತ್ಯತ್ವದಿಂದ, ಅಭಿವ್ಯಕ್ತ ಅಪರೋಕ್ಷ ಚಿತ್ ಸಂಬಂಧಮೂಲಕ, ಪರೋಕ್ಷವೃತ್ತಿ ವಿಷಯಗಳಾದ ಅತೀಂದ್ರಯಗಳಿಗೆ ಮತ್ತು ಧರ್ಮಾದಿಗಳಿಗೆ ಕೂಡ ಅಪರೋಕ್ಷತ್ವವೆನ್ನುವ ಪ್ರಸಂಗ ಒದಗುವದು.

एवं च परोक्षवृत्तेः इव अपरोक्ष वृत्तेः एव ज्ञानत्व उपपत्तौ तत् आधेय स्फुरणरूप चैतन्यस्य अप्रामाणिकत्वेन हेतोः असिद्धत्वात् इति भावः।
ಈ ರೀತಿಯಾಗಿ ಪರೋಕ್ಷವೃತ್ತಿಗಳಂತೆ ಅಪರೋಕ್ಷ ವೃತ್ತಿಗಳಿಗೂ ಕೂಡ ಜ್ಞಾನತ್ವ ಪ್ರಾಪ್ತವಾಗಿ ಅವುಗಳ ಧಾರಕವಾದ ಸ್ಫುರಣರೂಪ ಚೈತನ್ಯಕ್ಕೆ ಅಪ್ರಮಾಣಿಕತ್ವ ಉಂಟಾಗಿ, ಹೇತುವು ಅಸಿದ್ಧವೆನಿಸುತ್ತದೆ ಎಂಬ ಭಾವ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

परेणापि परोक्ष वृतौ न तत् आधेयं स्फुरणं अङ्गीकृतम्। परोक्षवृत्तेः एव तत्र ज्ञानत्व अभ्युपगमात्।
ಪರಪಕ್ಷದವರು ಕೂಡ ಪರೋಕ್ಷವೃತ್ತಿಯಲ್ಲಿ ಸ್ಫುರಣರೂಪ ಚೈತನ್ಯದ ಧಾರಕತ್ವವನ್ನು ಅಂಗೀಕರಿಸಿಲ್ಲ. ಇನ್ನು ಪರೋಕ್ಷವೃತ್ತಿಯಿಂದಲೇ ಅಲ್ಲಿ ಜ್ಞಾನತ್ವವನ್ನು ಒಪ್ಪಬೇಕು.

अन्यथा स्फुरणस्य अपरोक्षैकर सत्वेन अभिव्यक्त अपरोक्षैकर स्फुरणसम्बन्धेन परोक्ष वृत्तिविषयस्यापि अतीतादेः अपरोक्षत्व प्रसङ्गः।
ಅನ್ಯಥಾ, ಸ್ಫುರಣರೂಪ ಚೈತನ್ಯದ ಅಪರೋಕ್ಷತೆಯ ಸತ್ಯತ್ವದಿಂದ, ಅಭಿವ್ಯಕ್ತ ಅಪರೋಕ್ಷರೂಪ ಸ್ಫುರಣ ಸಂಬಂಧದಮೂಲಕ ಪರೋಕ್ಷವೃತ್ತಿ ವಿಷಯಗಳಾಗಿದ್ದರೂ ಅತೀಂದ್ರಯಗಳಿಗೆ ಅಪರೋಕ್ಷತ್ವವೆನ್ನುವ ಪ್ರಸಂಗ ಒದಗುವದು.

एवं च परोक्षवृत्तेः इव अपरोक्ष वृत्तेः एव ज्ञानत्व उपपत्तौ तत् आधेय स्फुरणं अप्रामाणिकं इति असिद्धो हेतुः इति भावेन आह –तत् एतत् इति॥
ಈ ರೀತಿಯಾಗಿ ಪರೋಕ್ಷವೃತ್ತಿಗಳಂತೆ ಅಪರೋಕ್ಷ ವೃತ್ತಿಗಳಿಗೂ ಕೂಡ ಜ್ಞಾನತ್ವ ಪ್ರಾಪ್ತವಾಗಿ ಅವುಗಳ ಧಾರಕವಾದ ಸ್ಫುರಣರೂಪ ಚೈತನ್ಯಕ್ಕೆ ಅಪ್ರಮಾಣಿಕತ್ವ ಉಂಟಾಗಿ, ಹೇತುವು ಅಸಿದ್ಧವೆನಿಸುತ್ತದೆ ಎಂಬ ಭಾವವಿರುತ್ತದೆ ಎಂದು ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ.

## ॥ असिद्धि प्रसङ्गेन इति ॥

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

अस्मिन् मते घटादौ अपि फलव्याप्यत्व अभावेन इति भावः।
ನಮ್ಮ ಮತದಲ್ಲಿ, ಘಟಾದಿಗಳಿಗೂ ಕೂಡ ಫಲವ್ಯಾಪ್ಯತ್ವ ಇರುವದಿಲ್ಲ ಎಂಬ ಭಾವ ವಿರುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

घटादौ तदाकार वृत्त्या चैतन्यरूप अतिशयाघातस्य मम असम्मतत्वेन वृत्तिजन्य चैतन्यरूप फलव्याप्यत्वस्य तत्र अभावात् इत्यर्थ:।

ಘಟಾದಿಗಳಲ್ಲಿ ಅವುಗಳ ಆಕಾರ ವೃತ್ತಿಯಿಂದ ಚೈತನ್ಯರೂಪ ಧಾರಕತ್ವವು ನಮಗೆ ಅಸಮ್ಮತವಾದ್ದರಿಂದ ವೃತ್ತಿಅಜನ್ಯ ಚೈತನ್ಯರೂಪ ಫಲವ್ಯಾಪ್ಯತ್ವದ ಅಲ್ಲಿ ಅಭಾವವಿರುತ್ತದೆ ಎಂದರ್ಥ.

## ॥ अलम् इति ॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

ननु एवं घटादे: प्रकाश एव न स्यात्। अपरोक्ष्य वृत्ति उपरागादिमत: चैतन्यस्यैव तत् प्रकाशत्वात्, त्वया च तत् अनभ्युपगमात् विषय अपरोक्ष्यं च सिध्येत। अभिव्यक्त अपरोक्षैकर स चैतन्य सम्बन्धस्यैव तत् सम्पादकत्वात् इत्यत आह– अलं इति॥

ಈ ರೀತಿಯಾಗಿ ಘಟಾದಿಗಳಿಗೆ ಪ್ರಕಾಶವೇ ಉಂಟಾಗುವದಿಲ್ಲ. ಅಪರೋಕ್ಷ ವೃತ್ತಿಯ ಸಂಕ್ರಮಿಸುವದು ಚೈತನ್ಯವನ್ನೇ ಪ್ರಕಾಶಿಸುವದು, ಮತ್ತು ತಮಗೆ ಇದು ಸಮ್ಮತವಲ್ಲದ ಕಾರಣ ವಿಷಯ ಅಪರೋಕ್ಷ್ಯ ಸಿದ್ಧವಾಗಬೇಕು. ಮತ್ತು ಅಭಿವ್ಯಕ್ತ ಅದರ ಅಪರೋಕ್ಷಕರತೆಯನ್ನು ಚೈತನ್ಯ ಸಂಬಂಧದಿಂದಲೇ ಸಂಪಾದಿಸಬೇಕಾಗುವದರಿಂದ, ಸಾಕು ಈ ತರಹದ ಕುತರ್ಕ ವಿಚಾರಗೋಷ್ಟಿ ಎಂದು ಈ ಟೀಕಾವಾಕ್ಯದ ಅಭಿಪ್ರಾಯವಾಗಿರುತ್ತದೆ.

अयं भाव:–

ಇಲ್ಲಿ ಈ ಭಾವವಿರುತ್ತದೆ:

तत् तत् आकार परोक्ष वृत्ते: एव घटादिप्रकाशत्वात् उपपत्तौ अपरोक्ष्यवृत्ति उपरागादिमत: चैतन्यस्य तत् प्रकाशत्व कल्पना अयोगात्।

ಆ ಆ ಆಕಾರ ಪರೋಕ್ಷ ವೃತ್ತಿಯಿಂದಲೇ ಘಟಾದಿಗಳಿಗೆ ಪ್ರಕಾಶತ್ವ ಪ್ರಾಪ್ತವಾಗುವದರಿಂದ ಅಪರೋಕ್ಷ್ಯ ವೃತ್ತಿ ಸಂಕ್ರಮಿಸುವ ಚೈತನ್ಯನಿಗೆ ಅದರ ಪ್ರಕಾಶತ್ವ ಕಲ್ಪನೆಯು ಅಯೋಗ್ಯವಾಗಿದೆ.

न च परोक्ष्य वृत्ते: एव न तद्विषयकत्वं किन्तु तद् अभिव्यक्त चैतन्यस्यैव इति, न अयं दृष्टान्त इति वाच्यम्। तथा सति चैतन्यस्य अपरोक्षैकर सत्वेन अभिव्यक्त अपरोक्षैकर स चित् उपरागेण परोक्षवृत्तिविषयस्यापि अपरोक्ष प्रसङ्गेन तत्र वृत्तिमात्रस्यैव प्रकाशताया वाच्यत्वात्। नापि अपरोक्षत्व अनुपपत्ति:।

ಪರೋಕ್ಷ್ಯ ವೃತ್ತಿಯಿಂದಲೇ ಘಟಾದಿಗಳ ವಿಷಯಕತ್ವ ಪರಂತು ಅದು ಅಭಿವ್ಯಕ್ತ ಚೈತನ್ಯದಿಂದಲೇ ಆಗುವದರಿಂದ, ಇದು ದೃಷ್ಟಾಂತವೆಂದು ಹೇಳಬಾರದು. ಹಾಗೆನಾದರೆ, ಚೈತನ್ಯನ ಅಪರೋಕ್ಶತೆಯ ಸತ್ಯತೆಯಿಂದ, ಅಭಿವ್ಯಕ್ತ ಅಪರೋಕ್ಷಕತೆಯ ಅವನ ಚಿತ್ ಸಂಕ್ರಮತೆಯಿಂದ, ಪರೋಕ್ಷ್ಯವೃತ್ತಿ ವಿಷಯಾದಿಗಳಿಗೂ ಕೂಡ ಅಪರೋಕ್ಷತ್ವ ಪ್ರಸಂಗ ಉಂಟಾಗಿ ಅಲ್ಲಿ ವೃತ್ತಿಮಾತ್ರ ಪ್ರಕಾಶತೆಪರವಾಗಿ ಹೇಳಬೇಕಾಗುತ್ತದೆ. ಹಾಗೂ ಅಲ್ಲಿ ಅಪರೋಕ್ಷತ್ವವನ್ನು ಅಲ್ಲಗೆಳೆಯಲು ಬರುವದಿಲ್ಲ.



चैतन्य अभिव्यञ्जनार्थं आवश्यकत्वेन इन्द्रिय जन्यत्व प्रयुक्तेन वृत्तिगतेन साक्षात्कारत्वरूप विशेषेण एव चैतन्य अविषयस्यापि घटादे: अपरोक्ष्य सम्भवात् इति।

ಇನ್ನು ಚೈತನ್ಯ ಅಭಿವ್ಯಂಜನಕ್ಕಾಗಿ ಆವಶ್ಯಕವಾಗಿರುವದರಿಂದ ಇಂದ್ರಿಯ ಜನ್ಯತ್ವ ಪ್ರಯುಕ್ತವಾಗಿ ವೃತ್ತಿಗತ ಸಾಕ್ಷಾತ್ಕಾರರೂಪ ವಿಶೇಷಣದಿಂದಲೇ, ಚೈತನ್ಯನ ಅವಿಷಯವಾಗಿದ್ದರೂ ಘಟಾದಿಗಳ, ಕೂಡ ಅಪರೋಕ್ಷ್ಯ ಸಂಭವಿಸುತ್ತದೆ.

### ६.२.४ दृश्यत्व हेतो: अनध्यवसितत्व समर्थनम्

ಈ ಪರಿಚ್ಛೇದದಲ್ಲಿ, ದೃಶ್ಯತ್ವ ಹೇತು ಮತ್ತು ಸಾಧ್ಯಧರ್ಮವಾದ ಮಿಥ್ಯಾ ಇವುಗಳಲ್ಲಿಯ ವ್ಯಾಪ್ತಿ ಭಂಗ ಪ್ರಕಾರಗಳಲ್ಲಿಯ ಮೂರನೆ ಪ್ರಕಾರವಾದ ದುಷ್ಟಮಾತ್ರ ಏನಿಸಿದ, ಅನಧ್ಯವಸಿತ ಎಂಬ ವ್ಯಾಪ್ತಿ ದೋಷವನ್ನು ಪರಿಶೀಲಿಸಲಾಗುವದು.

प्रपञ्चमिथ्यात्वानुमानखण्डनम्
जगतोऽभावे अनुमानस्यापि अभाव इति,
तर्कबाधितत्वेन अनध्यवसित:।

**ಜಗತ್ತು ಅಸತ್ಯವಾದರೆ ಜಗತ್ತಿನಲ್ಲೆ ಸೇರಿದ ಈ ಮಿಥ್ಯಾತ್ವ ಅನುಮಾನವು ಕೂಡ ಅಸತ್ಯವಾಗುತ್ತದೆ. ಹೀಗೆ ಈ ತರ್ಕದ ವಿರೋಧ ಬರುವದರಿಂದ, ದೃಶ್ಯತ್ವ ಹೇತುವು ಸಾಧ್ಯ ನಿಶ್ಚಯವನ್ನು ಉಂಟುಮಾಡುವದಿಲ್ಲ. ಆದ್ದರಿಂದ ಅದು ಅನಧ್ಯವಸಿತ ಎಂಬ ದೋಷದಿಂದ ಗ್ರಸ್ತವಾಗಿದೆ.**

### श्रीपद्मनाभतीर्थीयटीका

**प्रतिज्ञा उदाहरणादे: अपि दृश्यत्वेन मिथ्यात्व आपादकत्वात् तर्कबाधित इति न दृश्यत्व हेतुः जगन्मिथ्या अध्यवसायक इत्याह- जगतोऽभावे अनुमानस्यापि अभाव इति तर्क बाधितत्वेन अनध्यवसित इति॥**

ಪ್ರತಿಜ್ಞಾ ಉದಾಹರಣಗಳು ಕೂಡ ದೃಷ್ಟಿಗೋಚರವಾದ್ದರಿಂದ, ಅವುಗಳಿಗೂ ಮಿಥ್ಯಾತ್ವ ಒದಗುತ್ತದೆ. ಹೀಗೆ ತರ್ಕದ ವಿರೋಧ ಬರುತ್ತದೆ ಎಂದು, ದೃಶ್ಯತ್ವ ಹೇತುವು ಜಗತ್ತು ಮಿಥ್ಯಾ ಎಂದು ನಿಶ್ಚಾಯಕವೆನಿಸುವದಿಲ್ಲ. ಅದನ್ನೆ ಶ್ರೀಮದಾಚಾರ್ಯರ ಮೂಲವಾಕ್ಯ ಸ್ಪಷ್ಟ ಪಡಿಸುತ್ತದೆ.

६.२.४.१ जगतोऽभाव इति जगतः सत्व अभावः इति अनुवादस्य अनुमोदनम्

## टीका

**ननु अत्र जगतः अनिर्वचनीयत्वं सद्विविक्तं वा साध्यम्। तत् कथं जगतः अभाव इति अनुवादः? सत्यं, तथापि अनिर्वचनीयस्य अप्रसिद्धत्वात्, सद्विविक्तस्य अनिर्वचनीय असत् अन्यतरत्व अनिस्तारात्, असत्वमेव सिद्धवत् कृत्य अयं अनुवादः इति अदोषः। जगतः सत्व अभाव इति वा व्याख्यातव्यम्।**

ಈ ಮಿಥ್ಯಾತ್ವ ಅನುಮಾನದಲ್ಲಿ ಜಗತ್ತನ್ನು ಅನಿರ್ವಚನೀಯವೆಂದೊ ಅಥವಾ ಸದ್ವಿವಿಕ್ತವೆಂತಲೊ ಸಾಧಿಸಲಾಗುತ್ತಿದೆ. ಹಾಗಿದ್ದಾಗ "ಜಗತ್ತು ಅಸತ್ಯವಾದರೆ" ಎಂದು ಮುಂತಾಗಿ ಹೇಗೆ ಅನುವಾದಿಸುತ್ತೀರಿ?

ನಿಜ, ಹಾಗಿದ್ದರೂ, ಅನಿರ್ವಚನೀಯವು ಅಪ್ರಸಿದ್ಧವಾಗಿರುವದರಿಂದ, ಮತ್ತು ಸದ್ವಿವಿಕ್ತವನ್ನು ಅನಿರ್ವಚನೀಯ, ಅಸತ್ಯಗಳಲ್ಲಿ ಒಂದಿಲ್ಲೊಂದನ್ನು ಹೇಳಬೇಕು ಎಂಬುದನ್ನು ಅಲ್ಲಗೆಳೆಯಲು ಬರುವದಿಲ್ಲ. ಅದರಿಂದ ಅಸತ್ಯವೆ ಸಿದ್ಧವಾದಂತಾಗುವದರಿಂದ, ಅದಕ್ಕೆ ಅನುಗುಣವಾಗಿಯೆ ಈ ಅನುವಾದವನ್ನು ಮಾಡಲಾಗಿದೆ. ಅದರಿಂದ ಇಲ್ಲಿ ಯಾವ ದೋಷವು ಉಂಟಾಗುವದಿಲ್ಲ. ಅಥವಾ, ಜಗತ್ತು ಸತ್ಯವಲ್ಲ ಎಂದು ವ್ಯಾಖ್ಯಾನಿಸಬೇಕು.

### टिप्पणीनाम् विशेषार्थानि

**॥ साध्यम् इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**साध्यं अनन्तरं परस्य अभिमतं न असत्वं इति शेषः।**
**तथा च जगतः अनिर्वचनीयत्वे सद्विविक्तत्वे वा अनुमानस्य अपि अभावः इति अनुवादः कर्तव्या इति भावः।**
**तथा च आपदक असिद्धिः इति हृदयम्।**

ಇಲ್ಲಿ, ಸಾಧ್ಯಂ ಪದದ ಅನಂತರ परस्य अभिमतं न असत्वं ಎಂಬ ಪದಗಳನ್ನು ಸೇರಿಸಿ ಅರ್ಥಮಾಡಬೇಕು. ಅಂದರೆ, ಅಸತ್ವವು ಪರಪಕ್ಷದವರ ಅಭಿಮತವಲ್ಲ ಎಂಬ ಅರ್ಥ ಸಿಗುತ್ತದೆ.

ಅದರಂತೆ, ಶ್ರೀಮದಾಚಾರ್ಯರ ಮೂಲವಾಕ್ಯವನ್ನು, ಜಗತ್ತು ಅನಿರ್ವಚನೀಯ ಅಥವಾ ಸದ್ವಿವಿಕ್ತತ್ವವೆನಿಸಿರುವಾಗ ಅನುಮಾನ ಕೂಡ ಅಸತ್ಯವೆನಿಸುತ್ತದೆ ಎಂದು ಅನುವಾದಿಸಬೇಕು



ಎಂಬ ಭಾವವಿರುತ್ತದೆ. ಅದರಿಂದ ಶ್ರೀಮದಾಚಾರ್ಯರು ಮಾಡುವ ಈ ಆಪಾದಕವು ಅಸಿದ್ಧವಾಗಿರುತ್ತದೆ ಎಂಬ ಅಭಿಪ್ರಾಯವಿರುತ್ತದೆ.

**॥ तत् कथं इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**तथा च असद् अनुवादः अयम्। अभाव शब्दस्य असत्त्व अर्थकत्वात् इति भावः।**

ಅದರಂತೆ, ಈ ಅನುವಾದವು ಅಸತ್ಯವಾಗಿದೆ. ಇಲ್ಲಿ अभाव ಶಬ್ದವು ಅಸತ್ವದ ಅರ್ಥದಲ್ಲಿರುತ್ತದೆ ಎಂಬ ಭಾವವಿರುತ್ತದೆ.

**॥ सद्विविक्तस्य इत्यादि ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**असद्विलक्षण स्वरूप अनुपमर्दन यदि सद्विविक्तत्वं साध्यते तदा अनिर्वचनीयत्वम्। यदि च सद्विविक्तमात्रं साध्यते तदा असत्त्वं इत्यर्थः।**

ಯಾವಾಗ ಅಸದ್ವಿಲಕ್ಷಣ ಸ್ವರೂಪದ ಮರುಕಳಿಸುವಂತೆ, ಸದ್ವಿವಿಕ್ತತ್ವವನ್ನು ಸಾಧಿಸುತ್ತೀರೊ ಆಗ ಅದನ್ನು ಅನಿರ್ವಚನಿಯತ್ವ ಎನ್ನಬೇಕಾಗುತ್ತದೆ. ಮತ್ತು ಯಾವಾಗ ಸದ್ವಿವಿಕ್ತತ್ವಮಾತ್ರ ಸಾಧಿಸುತ್ತೀರೊ ಆಗ ಅದನ್ನು ಅಸತ್ವವೆಂದೆನ್ನ ಬೇಕಾಗುತ್ತದೆ ಎಂದರ್ಥ.

**॥ अनिर्वचनीय असत् अन्यतरत्व अनिस्तारात् इति ॥**

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**सद्विविक्तस्य असद्विविक्तत्वेन विशेषित्व विवक्षायां सद्विविक्तत्वं अनिर्वचनीयत्वे अन्तर्भवति।अन्यथा तु असत्व इत्यर्थः।**

ಸದ್ವಿವಿಕ್ತವನ್ನು, ಅಸದ್ವಿವಿಕ್ತತ್ವದ ವಿಶೇಷಿತವೆಂದು ವಿವಕ್ಷಿಸಿದಲ್ಲಿ, ಸದ್ವಿವಿಕ್ತವು ಅನಿರ್ವಚನೀಯತ್ವದಲ್ಲಿ ಅಂತರ್ಭಾವವಾಗುತ್ತದೆ. ಅನ್ಯಥಾ ಅದು ಅಸತ್ವ ಎಂದೆನಿಸುತ್ತದೆ ಎಂದರ್ಥ.

**॥ सत्व अभाव इति ॥**

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**सत्वस्य साधकता अप्रयोजकत्वेन, असाधकत्वं अत्यन्त असत्त्व इव, सत्व अभावेऽपि आपतति इति भावः।**

ಇಲ್ಲಿ ಜಗತ್ತಿನ ಸತ್ಯತ್ವವನ್ನು ಸಾಧಿಸುವದು ಅಪ್ರಯೋಜಕ ಆಗಿರುವದರಿಂದ, ಅಸಾಧಕತ್ವವು ಅತ್ಯಂತ ಅಸತ್ವದಂತೆ, ಸತ್ವ ಅಭಾವ ಕೂಡ ಉಂಟಾಗುತ್ತದೆ ಎಂಬ ಭಾವವಿರುತ್ತದೆ.

**॥ व्याख्यातव्यम् इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

जगतोऽभाव इत्यत्र अभाव पदं इत्यर्थः। तथा च जगतः अभावस्य अनिर्वचनीयत्व वादिना परेण अपि अङ्गीकारात् न असत् अनुवादः अयं इति भावः। तथा च न आपादक असिद्धिः इति भावः।

ಮೂಲವಾಕ್ಯವಾದ ಜಗತೋऽಭಾವ ಎಂಬಲ್ಲಿಯ ಅಭಾವ ಪದ ಎಂದರ್ಥ. ಅದರಂತೆ ಜಗತೋऽಭಾವದ, ಜಗತ:ಸತ್ವ ಅಭಾವ ಎಂಬ ಅನುವಾದವನ್ನು ಅನಿರ್ವಚನೀಯ ವಾದಿಗಳು ಮತ್ತೆಲ್ಲರೂ ಕೂಡ ಅಂಗೀಕರಿಸಿದ್ದರಿಂದ, ಇದು ಅಸತ್ ಅನುವಾದವಲ್ಲ ಎಂಬ ಭಾವವಿರುತ್ತದೆ. ಅದರಂತೆ ಆಪಾದಕ ಅಸಿದ್ಧಿಕೂಡ ಆಗುವದಿಲ್ಲ ಎಂದರ್ಥ.

## ॥ मूलम् इति ॥

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆಃ

अत्र मूलं जगतः अभावे अनुमानस्यापि अभावः इति तर्कबाधितत्वेन अनध्यवसित इति।

ಇಲ್ಲಿ ಶ್ರೀಮದಾಚಾರ್ಯರ ಮೂಲವಾಕ್ಯದ ಅರ್ಥ ಹೀಗಾಗುತ್ತದೆಃ ಜಗತ್ತು ಇಲ್ಲವಾದರೆ, ಅದರಲ್ಲಿರುವ ಅನುಮಾನವು ಕೂಡ ಇಲ್ಲದಾಗುತ್ತದೆ ಎಂಬ ತರ್ಕದಿಂದ ಮಿಥ್ಯಾತ್ವ ಅನುಮಾನ ಬಾಧಿತ ಆಗುವದರಿಂದ, ದೃಶ್ಯತ್ವ ಹೇತುವು ಅನಧ್ಯವಸಿತ ಎಂಬ ದೋಷಗ್ರಸ್ತವಾಗುತ್ತದೆ.

अस्य यदि जगत् अभावः स्यात्, जगतः सत्वं न स्यात्, तर्हि अनुमानस्यापि, अनुमानकल्पित् ब्रह्मणोऽपि अभावः स्यात्। दृश्यत्व अविशेषात् इति। तर्कबाधितत्वेन तर्क प्रतिरुद्धत्वेन। न विद्यते अध्यवसायो यस्मात् अनध्यवसितः साध्य असाधक इत्यर्थः।

ಒಂದು ವೇಳೆ ಈ ಜಗತ್ತು ಇಲ್ಲವಾದರೆ, ಜಗತ್ತು ಸತ್ಯವಾಗುವದಿಲ್ಲ ಆಗ ಅನುಮಾನ ಕೂಡ ಸತ್ಯವಾಗುವದಿಲ್ಲ, ಹಾಗೆಯೆ ಅನುಮಾನ ಕಲ್ಪಿತ ಬ್ರಹ್ಮನು ಕೂಡ ಇಲ್ಲದಾಗುತ್ತಾನೆ. ಹೀಗಾಗಿ ಹೇತುವಾದ ದೃಶ್ಯತ್ವವು ಅವಿಶೇಷವಾಗುತ್ತದೆ.

ಇನ್ನು तर्कबाधितत्वेन ಎಂದರೆ, ತರ್ಕದ ಪ್ರತಿರೋಧದಿಂದ ಎಂದರ್ಥ. ಯಾವುದಕ್ಕೆ ನಿಶ್ಚಿತತೆ ಇರುವದಿಲ್ಲವೊ ಅದು ಅನಧ್ಯವಸಿತ ಎಂದರ್ಥ, ಅಂದರೆ ಸಾಧ್ಯ ಅಸಾಧಕ ಎಂದರ್ಥ.

अत्र ब्रह्मण इति वक्तव्या। अनुमानस्य इति वचनं ब्रह्मणो दृश्यत्व सूचनाय इति बोध्यम्। अयं अर्थः शिष्यबुद्धि परीक्षार्थं टीककारैः न उक्तः।

ಇಲ್ಲಿ ಬ್ರಹ್ಮಣ ಎಂದು ಹೇಳಬೇಕು. अनुमानस्य ಇತಿ ಎಂಬ ವಚನವು ಬ್ರಹ್ಮನಿಗೆ ದೃಶ್ಯತ್ವ ಸೂಚಿಸಲು ಇರುತ್ತದೆ ಎಂದು ತಿಳಿಯಬೇಕು. ಈ ಅರ್ಥವನ್ನು ಶೀಷ್ಯರ ಬುದ್ಧಿ ಪರಿಕ್ಷೆಗೋಸ್ಕರ ಟೀಕಾಕಾರರು ಹೇಳಲಿಲ್ಲ.

## ॥ ननु अत्र जगत इति ॥

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆಃ

मूलकारेण जगतः अभाव इत्यनेन जगतः असत्वं इत्युक्तं इति मन्यमानः शङ्कते– ननु अत्र जगत इति॥



ಮೂಲಕಾರರು ಜಗತ:ಅಭಾವ, ಎಂಬುದರಿಂದ ಜಗತ್ತು ಅಸತ್ಯವಾಗಿದೆ ಎಂದು ಹೇಳಿದ್ದಾರೆ ಎಂದು ಮನ್ನಿಸುವರು ಹೀಗೆ ಶಂಕಿಸುತ್ತಾರೆ ಎಂದು ಈ ಟೀಕಾ ವಾಕ್ಯ ಪ್ರತಿಪಾದಿಸುತ್ತದೆ.

कस्यचित् मते, अनिर्वचनीयत्व साध्यम्, कस्यचित् मते सद्विविक्तं साध्यम् इति भावः। एतेन द्वयोः अन्यतर साध्यं स्यात्। कथं अनिर्वचनीयत्वं सद्विविक्तत्वं वा साध्यं इति अनिश्चयेन साध्य अभिधानम् इति परास्तम्।

ಕೆಲವರ ಮತದಂತೆ, ಅನಿರ್ವಚನೀಯತ್ವವು ಸಾಧ್ಯವೆನಿಸುತ್ತದೆ, ಮತ್ತೆ ಕೆಲವರ ಮತದಂತೆ ಸದ್ವಿವಿಕ್ತತ್ವವು ಸಾಧ್ಯಧರ್ಮವೆನಿಸುತ್ತದೆ ಎಂಬ ಭಾವ ವಿರುತ್ತದೆ. ಇದರಿಂದ ಎರಡರಲ್ಲಿ ಒಂದಲ್ಲೊಂದು ಸಾಧ್ಯಧರ್ಮ ಎಂದಂತಾಯಿತು. ಇದರಿಂದ ಅನಿರ್ವಚನೀಯತ್ವವೊ ಅಥವಾ ಸದ್ವಿವಿಕ್ತತ್ವವೊ ಸಾಧ್ಯವೆಂದು ಅನಿಶ್ಚತತೆಯಿಂದ ಸಾಧ್ಯ ಅಭಿಧಾನಮಾಡುವದನ್ನು ಇಲ್ಲಿ ತಳ್ಳಿಹಾಕಲಾಯಿತು.

इतः परं टिकायां श्रूयमाणं "सत्यं, तथापि अनिर्वचनीयत्वस्य अप्रसिद्धत्वात्, सद्विविक्तस्य अनिर्वचनीय असत् अन्यतरत्व अनिस्तारात् असत्वमेव सिद्धवत् कृत्य अयं अनुवादः इति अदोषः। जगतः सत्व अभाव इति वा व्याख्यातव्यम्" इति वाक्यद्वयं प्रक्षिप्तं न टीकावाक्यम्।

ಇಲ್ಲಿ, ಪರ ಟೀಕೆಗಳಲ್ಲಿ ಕಂಡುಬರುವ "सत्यं..ದಿಂದ....व्याख्यातव्यम्" ವರೆಗಿನ ವಾಕ್ಯದ್ವಯಗಳು ಬೇರೆಯವರಿಂದ ಸೇರಿಸಲ್ಪಟ್ಟವುಗಳು, ಅವುಗಳು ಟೀಕಾವಾಕ್ಯಗಳಲ್ಲ.

मैवम्, अभाव शब्देन सत्व अभाव अभिधानात्। अवश्यं च एतदेव विज्ञेयम्। मिथ्यापदेन असत्पदेन असत् परेण उक्तं इति सिद्धवत् कृत्य जगतः अभाव इति तत् अनुवादेऽपि अन्यथा अनुवाद अपरिहारात्। अनूदितस्य परेण अनभिधानात्। अनिर्वचनीयत्वपक्षवत् सद्विविक्तत्वपक्षवत् च, असत्व पक्षे दूषण सद्भावेऽपि, न असत्वं परेण उक्तं इति सिद्धवत्कार अयोगात् च।

ಇಲ್ಲಿ, ಮೂಲದಲ್ಲಿಯ ಅಭಾವ ಶಬ್ದದಿಂದ ಸತ್ವ ಅಭಾವ ಸತ್ಯವಾಗಿಲ್ಲ ವೆಂದೆ ತೆಗೆದು ಕೊಳ್ಳಬೇಕು. ಇದನ್ನು ಅವಶ್ಯವಾಗಿ ಹೀಗೆಯೆ ಎಂದು ತಿಳಿಯಬೇಕು. ಏಕೆಂದರೆ, ಮಿಥ್ಯಾ ಪದದಿಂದ ಅಥವಾ ಅಸತ್ ಪದದಿಂದ ಅಸತ್ವನ್ನೆ ಪರಪಕ್ಷದವರು ಹೇಳಿರುತ್ತಾರೆ ಎಂದು ಸಿದ್ಧವಾದ ಸಂಗತಿಯನ್ನು ಅನುಸರಿಸಿಯೆ ಜಗತ:ಅಭಾವ ಅಂದರೆ ಜಗತ್ತು ಅಸತ್ಯವಾಗಿದೆ ಎಂದು ಮೂಲವಾಕ್ಯದ ಅನುವಾದ ಮಾಡಿದರೂ, ಅನ್ಯಥಾ ಅನುವಾದದ ದೋಷವನ್ನು ಪರಿಹರಿಸಲಾಗುವದಿಲ್ಲ. ಹಾಗೂ ಹಾಗೆ ಅನುವಾದ ಮಾಡಿದ್ದು ಪರರ ಅಭಿಧಾನವನ್ನು ಅನುಮೋದಿಸುವದಿಲ್ಲ. ಇನ್ನು, ಅನಿರ್ವಚನೀಯತ್ವ ಪಕ್ಷದಂತೆ, ಮತ್ತು ಸದ್ವಿವಿಕ್ತತ್ವ ಪಕ್ಷದಂತೆ, ಅಸತ ಪಕ್ಷದಲ್ಲಿ ದೂಷಣ ಇದ್ದರೂ, ಅಸತ್ ಎಂದು ಪರಪಕ್ಷದವರು ಹೇಳಿಲ್ಲವಾದ್ದರಿಂದ, ಸಿದ್ಧವತ್ಕರ ಎಂದೆನ್ನುವದು ಕೂಡ ಅಯೋಗ್ಯವೆನಿಸುತ್ತದೆ.

केनचित् स्वग्रन्थपरेण मिथ्यात्वं नाम अनिर्वचनीयत्वं अपरेण सद्विविक्तं इति व्याख्याततत्वेन अनिर्वचनीयं उक्तं, सद्विविक्तत्वं उक्तं इति निश्चयस्यैव उचितत्वात् च्। जगतः सत्व अभाव इति व्याख्यातव्यं इत्यस्य अनन्वयात् च।

ಮತ್ತು ಕೆಲವರು ತಮ್ಮ ಗ್ರಂಥದಲ್ಲಿ ಮಿಥ್ಯಾತ್ವವೆಂದರೆ ಅನಿರ್ವಚನೀಯತ್ವವೆಂದು, ಮತ್ತೆ ಕೆಲವರು ಸದ್ವಿವಿಕ್ತವೆಂದು ವ್ಯಾಖ್ಯಾನಿಸುತ್ತಿರಲು, ಅನಿರ್ವಚನೀಯ ಎಂದು ಹೇಳಲಾಯಿತು, ಸದ್ವಿವಿಕ್ತತ್ವವೆಂದು ಹೇಳಲಾಯಿತು ಎಂದು ನಿಶ್ಚಯವಾಗಿ ಹೇಳುತ್ತಿರಲು, जगतः सत्व अभाव इति व्याख्यातव्यं ಎಂಬ ವಾಕ್ಯದ ಅನ್ವಯವೇ ಸಿಗುವದಿಲ್ಲ.

**ವಿಶೇಷ:** ಇಲ್ಲಿ ಓದುಗರು ಶ್ರೀಸತ್ಯನಾಥರ ಅನ್ಯೋನ್ಯ ವಿಚಾರಧಾರೆಯನ್ನು ಗಮನಿಸ ಬೇಕು. ಅಬ್ಬಾ ! ಅವರ ಪ್ರತಿಭೆಯ ಔತಣಕ್ಕೆ ನಾವು ಏನೆಂದು ಪ್ರತ್ಯುಪಕಾರ ಮಾಡಲು ಸಾಧ್ಯ ! ಭಕ್ತಿವಶ ಸಾಶ್ಟಾಂಗ ಪ್ರಣಾಮವನ್ನುಮಾಡುವ ಹೊರತಾಗಿ ನಮ್ಮಿಂದ ಮತ್ತೇನು ಸಾಧ್ಯವಿಲ್ಲ.

### ६.२.४.२ जगतोऽभावे अनुमानस्य अभाव इति तर्के व्याप्त्युपपादनम्

## टीका

**तथापि व्याप्ति अभावात् कथं आपादनम् इति चेत्, न। "यदि जगन्मिथ्या स्यात् तदा तदन्तर्गत अनुमानमपि मिथ्या स्यात्। गन्धर्वनगरान्तर्गत भवनवत्।" इति, वा " यदि दृश्यत्वं जगति वर्तमानम् तत् मिथ्यात्वं प्रतिपादयेत् तदा अनुमानस्यापि मिथ्यात्वं प्रतिपादयेत् अविशेषात्" अन्यथा व्यभिचारापत्तेः इति वा आपादनात्।**

ಹಾಗಿದ್ದರೂ, "ಎಲ್ಲಿ ಜಗತ್ತು ಇಲ್ಲವೋ ಅಲ್ಲಿ ಅನುಮಾನವು ಕೂಡ ಇರುವದಿಲ್ಲ" ಎಂಬಲ್ಲಿ ದೃಷ್ಟಾಂತ ಇರುವದಿಲ್ಲ, ಆದ್ದರಿಂದ ವ್ಯಾಪ್ತಿಯು ಇರುವದಿಲ್ಲ. ಅದರಿಂದ ಆಪಾದನವನ್ನು ಹೇಗೆ ಮಾಡುತ್ತೀರಿ? ಎಂತೆಂದರೆ. ಅದು ಹಾಗಿರುವದಿಲ್ಲ. "ಜಗತ್ತು ಮಿಥ್ಯಾ ಆದರೆ, ಆಗ ಅದರ ಅಂತರ್ಗತವಾದ ಅನುಮಾನ ಕೂಡ ಮಿಥ್ಯಾ ಆಗುತ್ತದೆ. ಉದಾ: ಗಂಧರ್ವನಗರದೊಳಗಿನ ಭವನದಂತೆ", ಎಂಬ ಸಾಮಾನ್ಯ ವ್ಯಾಪ್ತಿಯನ್ನು ಹೇಳಬಹುದಾಗಿದೆ. ಅಥವಾ " ಜಗತ್ತಿನಲ್ಲಿ ದೃಶ್ಯತ್ವವಿದೆ ಎಂದು ಅದನ್ನು ಮಿಥ್ಯಾ ಎಂದು ಪ್ರತಿಪಾದಿಸಿದರೆ, ಆಗ ಅನುಮಾನವನ್ನು ಕೂಡ ಮಿಥ್ಯಾ ಎಂದು ಪ್ರತಿಪಾದಿಸಬೇಕು, ಏಕೆಂದರೆ, ಆಗ ದೃಶ್ಯತ್ವ ಅಧಿಕರಣಕ್ಕೆ ಯಾವ ವಿಶೇಷತೆಯನ್ನು ಹೇಳಲು ಬರುವದಿಲ್ಲ. ಅನ್ಯಥಾ, ದೃಶ್ಯತ್ವ ಹೇತುವಿಗೆ ಸ್ವತಃದಲ್ಲಿಯೆ ವ್ಯಭಿಚಾರ ದೋಷವುಂಟಾಗುವದರಿಂದ ಪ್ರಕಾರಂತರದಿಂದ ಆಪಾದನ ಹೇಳಬೇಕಾಗುತ್ತದೆ.

### टिप्पणीनाम् विशेषार्थानि

**॥ तथापि इति ॥**

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:



**अन्यथा अनुवाद अभावेऽपि, आपादनं इदं अयुक्तम्। व्याप्ति अभावात्। न हि सर्वैः भावैः एकविधैः भाव्यं इति नियमः अस्ति। अन्यथा घटादीनाम् अचेतनत्वात् आत्मापि तथा स्यात् इति भावः।**

ಮೇಲೆ ನಮೂದಿಸಿದ ಅನುವಾದದ ಅಭಾವತೆ ಇದ್ದರೂ, ಮೂಲವಾಕ್ಯದಲ್ಲಿಯ ಆಪಾದನವು ಅಯುಕ್ತವಾಗಿದೆ. ಏಕೆಂದರೆ ಆ ಆಪಾದನೆಗೆ ವ್ಯಾಪ್ತಿ ಇರುವದಿಲ್ಲ. ಎಲ್ಲ ಭಾವಗಳು ಒಂದೆ ವಿಧವಾಗಿರುತ್ತವೆ ಎಂಬ ನಿಯಮವಿರುವದಿಲ್ಲ ತಾನೆ. ಹಾಗೆನಾದರು ಇದ್ದರೆ, ಘಟಾದಿಗಳು ಅಚೇತನಗಳಾಗಿದ್ದರಿಂದ ಆತ್ಮನು ಕೂಡ ಹಾಗೆಯೆ ಇರಲಿ ಎಂದೆನ್ನಬೇಕಾಗುತ್ತದೆ ಎಂಬ ಭಾವವಿರುತ್ತದೆ.

**॥ व्याप्ति अभावात् इति॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**"यत्र जगतः अभावः तत्र अनुमानस्यापि अभावः" इत्यत्र दृष्टान्त अभावेन व्याप्ति अयोगात् इत्यर्थः।**

"ಎಲ್ಲಿ ಜಗತ್ತು ಇಲ್ಲವೊ ಅಲ್ಲಿ ಅನುಮಾನವು ಕೂಡ ಇರುವದಿಲ್ಲ" ಎಂಬಲ್ಲಿ ದೃಷ್ಟಾಂತ ಇರುವದಿಲ್ಲ, ಆದ್ದರಿಂದ ವ್ಯಾಪ್ತಿಯು ಅಯೋಗ್ಯವಾಗಿದೆ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**"यत्र जगतः अभावः तत्र अनुमान अभावः" इत्यत्र निदर्शन अदर्शनात् इत्यर्थः।**

"ಎಲ್ಲಿ ಜಗತ್ತು ಇಲ್ಲವೊ ಅಲ್ಲಿ ಅನುಮಾನವು ಕೂಡ ಇರುವದಿಲ್ಲ" ಎಂಬಲ್ಲಿ ಉದಾಹರಣೆಯು ಕಂಡುಬರುವದಿಲ್ಲ ಎಂದರ್ಥ.

**॥ न यदि जगत् इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**तथा च, यत् मिथ्या तत् समान योगक्षेमं तदन्तर्गतमपि मिथ्या। यथा गन्धर्वनगरगत भवनम् इति, सामान्य व्याप्ति सम्भवात् इति भावः।**

**सायंकाले मेघादिकं रक्तवर्णं सत् नगराकारेण भ्रान्त्या प्रतीयते तत् गन्धर्वनगरम् इत्युच्यते।**

ಅದರಂತೆ, ಯಾವದು ಮಿಥ್ಯಾ ಅದರ ಸಮಾನ ಯೋಗಕ್ಷೇಮವನ್ನು ಹೊಂದಿದ ಅದರ ಅಂತರ್ಗತವಾದದ್ದು ಕೂಡ ಮಿಥ್ಯಾ, ಗಂಧರ್ವನಗರಗತ ಭವನದಂತೆ, ಎಂಬ ಸಾಮಾನ್ಯ ವ್ಯಾಪ್ತಿಯ ಸಂಭವವಿರುತ್ತದೆ ಎಂಬ ಭಾವ.

ಸಾಯಂಕಾಲದಲ್ಲಿ ಮೇಘಾದಿಗಳು ರಕ್ತವರ್ಣದ ಹಿನ್ನೆಲೆಯಲ್ಲಿ, ಸತ್ಯವಾದ ನಗರಾಕಾರವಾಗಿ ಭ್ರಾಂತಿಯಿಂದ ಕಾಣುತ್ತವೆ, ಇದನ್ನು ಗಂಧರ್ವನಗರ ಎಂದು ಕರೆಯಲಾಗುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**"यत् मिथ्या तत् समानयोगक्षेमं तदन्तर्गतमपि मिथ्या यथा सम्प्रतिपन्नम्" इति व्याप्तिः अस्ति इति परिहरति–न यदि जगत् इति॥**

ಯಾವದು ಮಿಥ್ಯಾ ಅದರ ಸಮಾನ ಯೋಗಕ್ಷೇಮವನ್ನು ಹೊಂದಿದ ಅದರ ಅಂತರ್ಗತವಾದದ್ದು ಕೂಡ ಮಿಥ್ಯಾ, ವಾದಿಪ್ರತಿವಾದಿಗಳಿಗೆ ಸಮ್ಮತವಿಷಯದಂತೆ, ಎಂಬ ಸಾಮಾನ್ಯ ವ್ಯಾಪ್ತಿಯ ಇರುತ್ತದೆ ಎಂದು ವ್ಯಾಪ್ತಿಯ ಇರುವಿಕೆಯ ಬಗೆಗಿನ ಸಂಶಯವನ್ನು ದೂರಮಾಡುತ್ತಾರೆ.

### ॥ यदि दृश्यत्वं इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**प्रकारान्तरं अपि आह– यदि दृश्यत्वं इति ॥**

ಈ ಟೀಕಾವಾಕ್ಯವು ಇನ್ನೊಂದು ರೀತಿಯಿಂದಲೂ ವ್ಯಾಪ್ತಿಯನ್ನು ತೋರಿಸುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**पक्षान्तरं आह– यदि दृश्यत्वं इति॥**

ಈ ಟೀಕಾವಾಕ್ಯವು ಇನ್ನೊಂದು ರೀತಿಯಿಂದಲೂ ವ್ಯಾಪ್ತಿಯನ್ನು ತೋರಿಸುತ್ತದೆ.

### ॥ अनुमानस्यापि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**स्वस्य अपि इत्यर्थः।**

ಸ್ವತಃ ಕೂಡ ಎಂದರ್ಥ.

### ॥ अविशेषात् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु अथापि व्याप्ति अभावः तदवस्थः। यत्र जगद् मिथ्यात्वं प्रतिपादकत्वं तत्र अनुमानस्य मिथ्यात्व प्रतिपादकत्वं इत्यत्र दृष्टान्त अभावात् इत्यत उक्तं –अविशेषात् इति॥**

ಇಷ್ಟಾದರೂ ವ್ಯಾಪ್ತಿ ಅಭಾವವು ಹಾಗೆಯೆ ಉಳಿಯಿತಲ್ಲ. ಎಲ್ಲಿ ಜಗತ್ತನ್ನು ಮಿಥ್ಯಾತ್ವವೆಂದು ಪ್ರತಿಪಾದಿಸಲಾಗುತ್ತದೊ ಅಲ್ಲಿ ಅನುಮಾನದ ಮಿಥ್ಯಾತ್ವವು ಪ್ರತಿಪಾದಿಸಲ್ಪಡುತ್ತದೆ, ಎಂಬಲ್ಲಿ ದೃಷ್ಟಾಂತ ಇರುವದಿಲ್ಲ ಎಂಬುವದಕ್ಕೆ ಟೀಕಾಕೃತ್ಪಾದರು ಅವಿಶೇಷಾತ್ ಎಂದು ಹೇಳುತ್ತಾರೆ.

**दृश्यत्व अधिकरणत्व अविशेषात्। स्वात्मनि वर्तमानं दृश्यत्वं, स्वस्यापि मिथ्यात्वं प्रतिपादयेत् साधयेत् इत्यर्थः।**

ಅಂದರೆ ದೃಶ್ಯತ್ವ ಅಧಿರಣತ್ವವು ಅವಿಶೇಷವಾಗಿರುತ್ತದೆ. ಸ್ವಾತ್ಮನಲ್ಲಿ  ಅನುಭವವಿದೆ, ಅಂದಮೇಲೆ ಸ್ವತಃನಿಗೂ ಕೂಡ ಮಿಥ್ಯಾತ್ವವನ್ನು ಪ್ರತಿಪಾದಿಸಬೇಕು ಅಥವಾ ಸಾಧಿಸಬೇಕು ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**ननु व्याप्ति अभावः तदवस्थः। यत्र जगत् मिथ्यात्व प्रतिपादकत्वं तत्र अनुमान मिथ्यात्व प्रतिपादकत्वम्" इत्यत्र निदर्शन अभावात् इत्यत आह– अविशेषात् ॥**



ಇಲ್ಲಿಯೂ ವ್ಯಾಪ್ತಿಯ ಅಭಾವವು ಹಾಗೆಯೆ ಉಳಿಯುತ್ತದಲ್ಲಾ. "ಎಲ್ಲಿ ಜಗತ್ತನ್ನು ಮಿಥ್ಯಾತ್ವವೆಂದು ಪ್ರತಿಪಾದಿಸಲಾಗುತ್ತದೊ ಅಲ್ಲಿ ಅನುಮಾನ ಮಿಥ್ಯಾತ್ವವು ಪ್ರತಿಪಾದಿಸಲ್ಪಡುತ್ತದೆ" ಎಂಬಲ್ಲಿ ಯಾವ ನಿದರ್ಶನವನ್ನು ಹೇಳಲು ಬರುವದಿಲ್ಲ, ಎಂಬ ಶಂಕೆಯನ್ನು ನಿರಾಕರಿಸಲು ಟೀಕಾಕೃತ್ಪಾದರು ಅವಿಶೇಷಾತ್ ಎಂದು ಹೇಳಿದ್ದಾರೆ.

**"यत् यत् साधन प्रयोजक विशिष्टं सति अत्र अस्ति तत् तत्र तत् साधयति यथा संमतम्" इति सामान्य व्याप्तिः अस्ति। ततश्च जगति वर्तमानमात्रेण तन्मिथ्यात्व प्रतिपादकं दृश्यत्वं स्वात्मनि वर्तमानं स्वमिथ्यात्वं साधयेत् इत्यर्थः**

"ಯಾವ ಯಾವ ಸಾಧನ ಪ್ರಯೋಜಕ ವಿಶಿಷ್ಟವಾಗಿರುತ್ತದೊ, ಇಲ್ಲಿ ಇರುವದನ್ನೆಲ್ಲ ಅಲ್ಲಿ ಅದನ್ನು ಸಾಧಿಸಲಾಗುತ್ತದೆ, ಸಂಮತಿ ಸೂಚಿಸಿದಂತೆ, ಎಂಬ ಸಾಮಾನ್ಯ ವ್ಯಾಪ್ತಿಯು ಇರುತ್ತದೆ. ಅದರಂತೆ, ಜಗತ್ತಿನ ಇರುವಿಕೆಮಾತ್ರದಿಂದ ಅದನ್ನು ಮಿಥ್ಯತ್ವವೆಂದು ಪ್ರತಿಪಾದಿಸಿದರೆ, ಸ್ವಾತ್ಮನಲ್ಲಿಯೂ ದೃಶ್ಯತ್ವ ಇರುವದರಿಂದ ಸ್ವಮಿಥ್ಯಾತ್ವವನ್ನು ಸಾಧಿಸಬೇಕಾಗುತ್ತದೆ ಎಂದರ್ಥ.

### ॥ अन्यथा इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु दृश्यत्वं स्वात्मनि विद्यमानमपि स्वमिथ्यात्वं तु न साधयति इति चेत्, तत्र आह –अन्यथा इति॥**

ಇನ್ನು ದೃಶ್ಯತ್ವವು ಸ್ವಾತ್ಮನಲ್ಲಿ ಇದ್ದರೂ ಕೂಡ ಸ್ವಮಿಥ್ಯಾತ್ವವನ್ನು ಸಾಧಿಸುವದಿಲ್ಲ ಎಂದರೆ, ಆಗ ವ್ಯಭಿಚಾರ ದೋಷ ಉಂಟಾಗುತ್ತದೆ ಎಂದು ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ.

**दृश्यत्वे दृश्यत्वं तावत् अस्ति। अन्यथा हेतु अज्ञान असिद्धेः। तत्र च मिथ्यात्वं नास्ति, इति दृश्यत्व हेतोः स्वस्मिन्नेव व्यभिचारः स्यात् इत्यर्थः।**
**तथा च स्वस्मिन्नेव भग्नव्याप्तिकत्वात् न जगतो मिथ्यात्वं साधयेत् इति भावः।**

ಇನ್ನು, ದೃಶ್ಯತ್ವದಲ್ಲಿ ದೃಶ್ಯತ್ವವಿರುತ್ತದೆ. ಅನ್ಯಥಾ ಹೇತುವಿನ ಅಜ್ಞಾನ ಸಿದ್ಧಿಸುವದಿಲ್ಲ. ಅಲ್ಲಿ ಮಿಥ್ಯಾತ್ವ ಇಲ್ಲ ಎನ್ನುವುದಾದರೆ, ದೃಶ್ಯತ್ವ ಹೇತುವಿಗೆ ಸ್ವತಃ ದಲ್ಲಿಯೆ  ವ್ಯಭಿಚಾರ ದೋಷ ಉಂಟಾಗುತ್ತದೆ ಎಂದರ್ಥ. ಅದರಂತೆ, ಸ್ವತಃದಲ್ಲೆ ಭಗ್ನವ್ಯಾಪ್ತಿಕತ್ವ ಉಂಟಾಗುವದರಿಂದ, ಅದು ಜಗತ್ತಿಗೆ ಮಿಥ್ಯಾತ್ವವನ್ನು ಸಾಧಿಸಲಾರದು ಎಂಬ ಭಾವವಿರುತ್ತದೆ.

### ६.२.४.३ मूलस्य असिद्ध्यादिपरत्वेन पुनरुक्ति शङ्का निराकरणम्

## टीका

**ननु अनेन असिद्धिः एव उक्ता स्यात्। सा प्राग् एव उक्ता इति किम् अनेन। न च वाच्यं लिङ्ग अभावमात्रं असिद्धिः। साध्य लिङ्ग व्याप्तिनाम् अनुमान**

अज्ञानाम् अभावः इति भेद इति। तथात्वेऽपि व्याप्यत्व असिद्ध्यादि अनिस्तारात् इति।

मैवम्, अनुमान अज्ञानाम् असत्त्व आपादनमुखेन असाधकत्वस्य अत्र आपाद्यमानत्वात्। तदिदं उक्तं "इति तर्कबाधितत्वेन अनध्यवसितः" इति। न विद्यते अध्यवसितं अध्यवसायः साध्य सिद्धिः यस्मात् स तथा उक्त इति।

एतेन अनुमान मिथ्यात्वं परस्य इष्टमेव। तत् कथं आपादनम् इत्यपि निरस्तम्।

ಇನ್ನು, ಜಗತ್ತು ಇಲ್ಲವಾದ್ದರಿಂದ ಅನುಮಾನವು ಕೂಡ ಇಲ್ಲಾದಾಗಿದೆ ಎಂದು, ದೃಶ್ಯತ್ವ ಹೇತುವು ಇಲ್ಲದಾಗುವದೆಂಬ ಆಪಾದನೆಯಿಂದ ಅಸಿದ್ಧಿಯನ್ನೆ ಅಂದರೆ ಸ್ವರೂಪ ಸಿದ್ಧಿಯನ್ನೆ ಹೇಳಿದಂತಾಯಿತು. ಇದನ್ನು "दृश्यत्व अभावात् असिद्धः हेतुः" ಎಂದು ಹಿಂದೆಯೆ ಹೇಳಲಾಗಿದೆ. ಅದಕ್ಕಿಂತ ಹೆಚ್ಚಿನದು ಇಲ್ಲಿ ಏನು ಹೇಳಿದಂತಾಯಿತು? ಏನೂ ಇಲ್ಲ ತಾನೆ. ಆದ್ದರಿಂದ ಇಲ್ಲಿ ಪುನರುಕ್ತಿ ದೋಷ ಉಂಟಾಗುತ್ತದೆ.

ಇನ್ನು ಕೇವಲ ಶಬ್ದಾರ್ಥ ಅಭಾವಮಾತ್ರವು ಅಸಿದ್ಧಿ ದೋಷದ ದ್ಯೋತಕ ಎಂದೇನು ಇಲ್ಲವಲ್ಲ. ಇಲ್ಲಿ ಜಗತ್ತು ಇಲ್ಲದಾಗ ಅದರ ಅಂತರ್ಗತ ಅನುಮಾನದ ಅಂಗಗಳಾದ ಸಾಧ್ಯ,ಲಿಂಗ ಮತ್ತು ವ್ಯಾಪ್ತಿಗಳು ಇಲ್ಲಾದಾಗುವವು ಎಂದು ಹೇಳುತ್ತೇವೆ ಎಂಬ ಭೇದವಿದೆ ಎಂದರೆ. ಹಾಗಾದರೂ ಕೂಡ ಹಿಂದೆ ಪ್ರತಿಪಾದಿಸಿದ ವ್ಯಾಪ್ಯತ್ವ ಅಸಿದ್ಧ್ಯಾದಿ ದೋಷಗಳನ್ನೇ ಮತ್ತೆ ಹೇಳಿದಂತಾಯಿತಲ್ಲ. ಆದ್ದರಿಂದ ಪುನರಿಕ್ತಿ ದೋಷ ಹಾಗೆಯೆ ಉಳಿಯಿತು ಎಂಬ ಭಾವ.

ಅದು ಹಾಗಿರುವದಿಲ್ಲ. ಹಿಂದೆ, ವ್ಯಾಪ್ಯಾದಿಗಳ ಇಲ್ಲದಿರುವಿಕೆಯನ್ನು ಹೇಳುವದು ಮಾತ್ರ ತಾತ್ಪರ್ಯವಾಗಿರುತ್ತದೆ. ಆದರೆ ಇಲ್ಲಿ ಜಗತ್ತು ಇಲ್ಲದಂತಾದರೆ, ಅನುಮಾನದ ಅಭಾವತೆಯನ್ನು ಕೂಡ ಪ್ರಾಪ್ತವಾದಂತಾಗಿ ಸಾಧ್ಯದ ಅಸಾಧಕತ್ವ ಉಂಟಾಗುತ್ತದೆ ಎಂದು, ಈ ರೀತಿಯಾಗಿ ಅನುಮಾನ ಅಂಗಗಳಿಗೆ ಅಸತ್ವ ಆಪಾದನ ದ್ವಾರಾ ಸಾಧ್ಯದ ಅಸಾಧಕತ್ವವನ್ನು ಹೇಳಿದ್ದರಿಂದ, ಹಿಂದಿನಗಿಂತ ಇಲ್ಲಿ ಅಧಿಕವಾಗಿ, ಆಪಾದನೆಮಾಡಲ್ಪಟ್ಟದ್ದರಿಂದ ಪುನರುಕ್ತಿ ದೋಷವನ್ನು ಹೇಳಲು ಬರುವದಿಲ್ಲ ಎಂದರ್ಥ. ಇದನ್ನು ಅಂದರೆ ಸಾಧ್ಯದ ಅಸಾಧಕತ್ವವನ್ನು ಅಧಿಕವಾಗಿ ಆಪಾದಿಸಲಾಗುತ್ತಿದೆ ಎಂಬುದನ್ನು ಜ್ಞಾಪಿಸಲು ಶ್ರೀಮದಾಚಾರ್ಯರು "इति तर्कबाधितत्वेन अनध्यवसितः" ಎಂಬ ವಾಕ್ಯವನ್ನು ಇಟ್ಟಿದ್ದಾರೆ. ಮತ್ತು ಯಾವುದರಿಂದ ಅಂದರೆ ಅನುಮಾನದ ಹೇತುವಿನಿಂದ ನಿಶ್ಚಿತವಾಗಿ ಸಾಧ್ಯಸಿದ್ಧಿಯನ್ನು ನಿಶ್ಚಯಿಸಲ್ಪಡುವದಿಲ್ಲವೊ ಅದು ಅನಧ್ಯವಸಿತ ಎಂದು ಹೇಳಲ್ಪಡುತ್ತದೆ.



ಅಂದರೆ, ಮಿಥ್ಯಾತ್ವ ಅನುಮಾನವು ಜಗತ್ತು ಮಿಥ್ಯಾ ಎಂದು ಸಾಧಿಸಲು ಅಸಮರ್ಥವಾಗಿದೆ ಎಂದರ್ಥ.

ಇದರಿಂದ, ಅಂದರೆ, ಜಗತ್ತಿನ ಮಿಥ್ಯಾತ್ವದ ಅಸಾಧನೆಯಿಂದ,

ಬ್ರಹ್ಮಾತಿರಿಕ್ತವಾದುದೆಲ್ಲ ಈ ಜಗತ್ತು ಮಿಥ್ಯಾ ಆಗಿರುವದರಿಂದ ಅನುಮಾನವು ಕೂಡ ಅದರ ಅಂತರ್ಗತವಾಗಿರುವದರಿಂದ ಅನುಮಾನದ ಅಭಾವತೆಯ ಆಪಾದನವು ಪರಪಕ್ಷದವರಿಗೆ ಇಷ್ಟವಾದುದನ್ನೆ ಹೇಳಿದಂತಾಯಿತು ಎಂಬುದನ್ನು ನಿರಾಕರಿಸಲಾಯಿತು. ಇಲ್ಲಿ ಮಿಥ್ಯಾತ್ವ ಅನುಮಾನವು ಮಿಥ್ಯಾ ಸಾಧಕವಲ್ಲ ಎಂದು ಅಧಿಕವಾಗಿ ಆಪಾದಿಸಿದ್ದರಿಂದ ಅದು ಪರಪಕ್ಷದವರಿಗೆ ಅನಿಷ್ಟವೇ ಆಗುತ್ತದೆ ಎಂದರ್ಥ.

## टिप्पणीनाम् विशेषार्थानि

### ॥ ननु अनेन इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

जगतः अभावेन अनुमानस्यापि अभावः इति दृश्यत्व हेतु अभाव आपादनेन इत्यर्थः। असिद्धिः स्वरूप असिद्धिः।

ಅಂದರೆ, ಜಗತ್ತು ಇಲ್ಲವಾದ್ದರಿಂದ ಅನುಮಾನವು ಕೂಡ ಇಲ್ಲಾದಾಗಿದೆ ಎಂದು ದೃಶ್ಯತ್ವ ಹೇತುವು ಇಲ್ಲದಾಗುವದೆಂಬ ಆಪಾದನೆಯಿಂದ ಎಂದರ್ಥ. ಇಲ್ಲಿ ಅಸಿದ್ಧಿ ಎಂದರೆ ಸ್ವರೂಪದ ಅಸಿದ್ಧಿ ಎಂದರ್ಥ.

### ॥ प्राग् एव उक्ता इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

"दृश्यत्व अभावात् असिद्धः हेतुः" इति मूलवाक्येन इत्यर्थः।

ಅಂದರೆ, "दृश्यत्व अभावात् असिद्धः हेतुः" ಎಂಬ ಶ್ರೀಮದಾಚಾರ್ಯರ ವಾಕ್ಯದಮೂಲಕ ಎಂದರ್ಥ.

### ॥ किम् अनेन इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

जगतः अभावात् इति मूलवाक्येन किम् अधिकं उच्यते न किमपि। तथा च पुनरुक्तिः इति भावः।

ಇಲ್ಲಿ "जगतः अभावात्" ಎಂಬ ಶ್ರೀಮದಾಚಾರ್ಯರ ಮೂಲವಾಕ್ಯಕ್ಕಿಂತಲು ಏನು ಹೆಚ್ಚಿನದು ಹೇಳಿದಂತಾಯಿತು? ಏನೂಇಲ್ಲ ತಾನೆ. ಹಾಗಿರುವಾಗ ಇಲ್ಲಿ ಪುನರುಕ್ತಿ ದೋಷ ಬರುತ್ತದೆ ಎಂಬ ಭಾವವಿರುತ್ತದೆ.

### ॥ असिद्धि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

सा पूर्वं दृश्यत्व अभावात् इति मूलवाक्येन इत्यर्थः। अत्र जगतः अभावात् मूलवाक्ये। तथा च अनुमानस्यापि अभाव इत्यत्र, अनुमानपदं उपलक्षितं इति ज्ञातव्यम्।

ಪೂರ್ವದಲ್ಲಿ दृश्यत्व अभावात् ಎಂಬ ಮೂಲವಾಕ್ಯದಿಂದ ಅಸಿದ್ಧಿಯನ್ನು ಹೇಳಲಾಯಿತು. ಇಲ್ಲಿ जगतः अभावात् ಎಂಬ ಮೂಲವಾಕ್ಯದಿಂದ ಅಸಿದ್ಧಿ ಹೇಳಲಾಗುತ್ತಿದೆ. ಅದರಂತೆ, अनुमानस्यापि अभाव ಎಂಬಲ್ಲಿ ಅನುಮಾನ ಪದವು ಉಪಲಕ್ಷಣವಾಗಿ ಗ್ರಹಿಸಲಾಗಿದೆ ಎಂದು ತಿಳಿಯತಕ್ಕದ್ದು.

## ॥ भेद इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

तथा च जगद् अभावे तदन्तर्गत साध्यलिङ्ग व्याप्तिनां अनुमान अङ्गानां अभावः, अत्र आपाद्यत इति प्रमेय भेदात् न पुनरुक्तिः इत्यर्थः।

ಅದರಂತೆ, ಜಗತ್ತು ಇಲ್ಲದಾಗ ಅದರ ಅಂತರ್ಗತ ಅನುಮಾನದ ಅಂಗಗಳಾದ ಸಾಧ್ಯ,ಲಿಂಗ ಮತ್ತು ವ್ಯಾಪ್ತಿಗಳು ಇಲ್ಲಾದಾಗುವವು ಎಂದು ಇಲ್ಲಿ ಆಪಾದಿಸುತ್ತೇವೆ ಎಂಬ ಪ್ರಮೇಯದ ಭೇದವಿರುವದರಿಂದ ಪುನರುಕ್ತಿ ದೋಷ ಉಂಟಾಗುವದಿಲ್ಲ ಎಂದರ್ಥ.

## ॥ व्याप्यत्व असिद्ध्यादि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

आदि पदेन स्वरूप असिद्धि बाध ग्रहणम्। लिङ्ग अभावेन स्वरूप असिद्धिः प्राग् उक्ता। व्याप्ति अभावेन व्याप्यत्व असिद्धिः, विरुद्ध अनैकान्तिकयोः उक्त्या, प्राग् उक्तैव। साध्य अभाव उक्त्या बाध उक्तः। स च वक्ष्यत इति पुनरुक्त एव इत्यर्थः।

ಇಲ್ಲಿ, ಆದಿ ಪದದಿಂದ ಸ್ವರೂಪ ಅಸಿದ್ಧಿ ಹಾಗೂ ಬಾಧವನ್ನು ಗ್ರಹಿಸಲಾಗಿದೆ. ಶಬ್ದರೂಪಾರ್ಥದ ಅಭಾವತೆಯಿಂದ ಸ್ವರೂಪ ಅಸಿದ್ಧಿ ದೋಷವನ್ನು ಹಿಂದೆ ಹೇಳಲಾಯಿತು. ವ್ಯಾಪ್ತಿಯ ಅಭಾವತೆಯಿಂದ ವ್ಯಾಪ್ಯತ್ವ ಅಸಿದ್ಧಿಯನ್ನು ವಿರುದ್ಧ ಅನೈಕಾಂತಿಗಳನ್ನು ಹೇಳಿದ್ದಮೂಲಕ ಹಿಂದೆಯೆ ಹೇಳಲಾಯಿತು. ಇನ್ನು ಸಾಧ್ಯದ ಅಭಾವ ಹೇಳಿದ್ದರಿಂದ ಬಾಧವನ್ನು ಹೇಳಲಾಯಿತು. ಮತ್ತು ಅದನ್ನೆ ಹೇಳುತ್ತೇವೆ ಎಂದು ಪುನಃ ಹೇಳಲಾಗುತ್ತಿದೆ ಎಂದರ್ಥ.

## ॥ असाधकत्वस्य इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

साध्य असाधकत्वस्य इत्यर्थः। तथा च व्याप्त्यादि अभाव कथनमात्रे तात्पर्यम्। अत्र तु जगतः अभावे अनुमानस्यापि अभाव अवाप्त्या साध्य असाधकत्वं स्यात् इत्येवं अनुमान अङ्गानाम् असत्त्वापादन मुखेन साध्य असाधकत्वस्य अधिकस्य अत्र आपाद्यमान्त्वात् अपुनरुक्तिः इत्यर्थः।

ಸಾಧ್ಯದ ಅಸಾಧಕತ್ವದ ಎಂದರ್ಥ. ಅದರಂತೆ ಹಿಂದೆ ವ್ಯಾಪ್ತ್ಯಾದಿಗಳ ಇಲ್ಲದಿರುವಿಕೆಯನ್ನು ಹೇಳುವದು ಮಾತ್ರ ತಾತ್ಪರ್ಯವಾಗಿರುತ್ತದೆ. ಆದರೆ ಇಲ್ಲಿ ಜಗತ್ತು ಇಲ್ಲದಂತಾದರೆ,



ಅನುಮಾನದ ಅಭಾವತೆಯನ್ನು ಕೂಡ ಪ್ರಾಪ್ತವಾದಂತಾಗಿ ಸಾಧ್ಯದ ಅಸಾಧಕತ್ವ ಉಂಟಾಗುತ್ತದೆ ಎಂದು, ಈ ರೀತಿಯಾಗಿ ಅನುಮಾನ ಅಂಗಗಳಿಗೆ ಅಸತ್ವ ಆಪಾದನ ದ್ವಾರಾ ಸಾಧ್ಯದ ಅಸಾಧಕತ್ವವನ್ನು ಹೇಳಿದ್ದರಿಂದ ಹಿಂದಿನಗಿಂತ ಅಧಿಕವಾಗಿ ಅಧಿಕವಾಗಿ, ಇಲ್ಲಿ ಆಪಾದಿಸಲ್ಪಟ್ಟದ್ದರಿಂದ ಪುನರುಕ್ತಿ ದೋಷವನ್ನು ಹೇಳಲು ಬರುವದಿಲ್ಲ ಎಂದರ್ಥ.

## ॥ तदिदं उक्तं "इति तर्कबाधितत्वेन अनध्यवसितः" इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

ननु साध्य असाधकत्वं अत्र अधिकं आपाद्यत इत्येतत् जगतोऽभाव इति मूले न प्रतीयत इति इत्यतः अत्र ज्ञापकं आह– तदिदं उक्तं "इति तर्कबाधितत्वेन अनध्यवसितः" इति॥

ಸಾಧ್ಯದ ಅಸಾಧಕತ್ವವು ಇಲ್ಲಿ ಅಧಿಕವಾಗಿ ಆಪಾದಿಸಲಾಗುತ್ತಿದೆ ಎಂದು जगतोऽभाव ಎಂಬ ಮೂಲವಾಕ್ಯದಲ್ಲಿ ಸ್ಪಷ್ಟವಾಗಿ ಪ್ರತೀತವಾಗುವದಿಲ್ಲ, ಇಲ್ಲಿ ಅದನ್ನು ಜ್ಞಾಪಿಸಲು "इति तर्कबाधितत्वेन अनध्यवसितः" ಎಂದು ಹೇಳಲಾಗಿದೆ.

तृतीयया व्याप्त्यादि अभावस्य असाधकत्वे द्वारत्वं कथयता न व्याप्त्यादि अभावमात्र पर्यवसानं इति सूचितं इत्यर्थः।

ಮತ್ತು ಮೂರನೆ ರೀತಿಯಾಗಿ ವ್ಯಾಪ್ತ್ಯಾದಿಗಳ ಅಭಾವತೆಯನ್ನು, ಅಸಾಧಕತ್ವ ದ್ವಾರಾ ಹೇಳಿದ್ದರಿಂದ, ವ್ಯಾಪ್ತ್ಯಾದಿ ಅಭಾವದಲ್ಲಿ ಮಾತ್ರ ಪರ್ಯವಸಾನವಿರುವದಿಲ್ಲ ಎಂದು ಸೂಚಿಸಲಾಗಿದೆ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

बाधितत्वेन इति तृतीयया व्याप्त्यादि अभावस्य साधकत्वे द्वारत्वं कथयता न व्याप्त्यादि अभाव मात्र पर्यवसानं इति सूचितं इत्यर्थः।

बाधितत्वेन ಎಂದು, ಮೂರನೆ ರೀತಿಯಾಗಿ ವ್ಯಾಪ್ತ್ಯಾದಿಗಳ ಅಭಾವತೆಯನ್ನು, ಅಸಾಧಕತ್ವ ದ್ವಾರಾ ಹೇಳಿದ್ದರಿಂದ, ವ್ಯಾಪ್ತ್ಯಾದಿ ಅಭಾವದಲ್ಲಿ ಮಾತ್ರ ಪರ್ಯವಸಾನವಿರುವದಿಲ್ಲ ಎಂದು ಸೂಚಿಸಲಾಗಿದೆ ಎಂದರ್ಥ.

## ॥ न विद्यते इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

कथं अनध्यवसित शब्देन अयं अर्थः लब्धः इत्यत आह– न विद्यत इति॥

भाव उक्त इत्यभिप्रायेण अध्यवसाय इत्युक्तं यस्मात् हेतोः।

ಇನ್ನು ಅನಧ್ಯವಸಿತ ಶಬ್ದದಿಂದ ಈ ಅರ್ಥ ಹೇಗೆ ಸಿಗುತ್ತದೆ? ಎಂಬುದನ್ನು ಈ ಟೀಕಾ ವಾಕ್ಯ ಸ್ಪಷ್ಟ ಪಡಿಸುತ್ತದೆ. ಇಲ್ಲಿ ಭಾವ ಹೇಳುವ ಅಭಿಪ್ರಾಯದಿಂದ ಅಧ್ಯವಸಾಯ ಅಂದರೆ ನಿಶ್ಚಿತವಾದ ಜ್ಞಾನ, ಎಂದು ಹೇಳಲಾಗಿದೆ, ಯಾವ ಹೇತುವಿನ ಎಂದರ್ಥ

## ॥ तथा उक्त इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**अनध्यवसित इत्युक्त इत्यर्थः। साध्य असाधक इति यावत्।**

ಅಂದರೆ, ಅನಧ್ಯವಸಿತ ಎಂದು ಹೇಳಿದ್ದರಿಂದ ಎಂದರ್ಥ. ಹಾಗೂ ಸಾಧ್ಯ ಅಸಾಧಕವಾಗಿದೆ ಎಂದರ್ಥ.

### ॥ एतेन इति ॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**मिथ्यात्व असाधनत्व आपादनेन इत्यर्थः।**

ಅಂದರೆ, ಜಗತ್ತಿನ ಮಿಥ್ಯಾತ್ವದ ಅಸಾಧನತ್ವದಿಂದ ಎಂದರ್ಥ.

### ॥ परस्य इष्टमेव इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ब्रह्मातिरिक्तस्य सर्वस्यापि जगतो मिथ्यात्वेन अनुमानस्यापि तदन्तर्गतत्वात् तत् अभाव आपादनं परस्य इष्टमेव इत्येतदपि एतेन निरस्तम्। असाधकत्वस्य अधिकस्य अत्र आपाद्यमानत्वात् तच्च परस्य अनिष्टं इत्यर्थः।**

ಅಂದರೆ, ಬ್ರಹ್ಮಾತಿರಿಕ್ತವಾದುದೆಲ್ಲ ಈ ಜಗತ್ತು ಮಿಥ್ಯಾ ಆಗಿರುವದರಿಂದ ಅನುಮಾನವು ಕೂಡ ಅದರ ಅಂತರ್ಗತವಾಗಿರುವದರಿಂದ ಅನುಮಾನದ ಅಭಾವತೆಯ ಆಪಾದನವು ಪರಪಕ್ಷದವರಿಗೆ ಇಷ್ಟವಾದುದನ್ನೆ ಹೇಳಿದಂತಾಯಿತು ಎಂಬುದನ್ನು ನಿರಾಕರಿಸಲಾಯಿತು. ಇಲ್ಲಿ ಮಿಥ್ಯಾತ್ವ ಅನುಮಾನವು ಮಿಥ್ಯಾ ಸಾಧಕವಲ್ಲ ಎಂದು ಅಧಿಕವಾಗಿ ಆಪಾದಿಸಿದ್ದರಿಂದ ಅದು ಪರಪಕ್ಷದವರಿಗೆ ಅನಿಷ್ಟವೇ ಆಗುತ್ತದೆ ಎಂದರ್ಥ.

## ६.२.४.४ तर्कबाधितत्वेन प्राप्त कालात्ययापदिष्टत्व शङ्का निराकरणम्

### टीका

**ननु एवं व्याख्याने हेतोः को दोष उक्तः स्यात्। अनध्यवसित इति ब्रूमः। तदर्थं "इति अनध्यवसितः" इत्यस्य आवृत्तिः व्याख्यायते। तर्हि "तर्कबाधितत्वेन" इति कथं। तथात्वे कालात्ययाप्यदिष्टः इति चेत् न। बाधित शब्दस्य विरुद्धार्थत्वात्।**

ಈ ರೀತಿಯಾಗಿ ಅನಧ್ಯವಸಿತ ಪದವನ್ನು ಸಾಧ್ಯ ಅಸಾಧಕತ್ವಪರವಾಗಿ ವ್ಯಾಖ್ಯಾನ ಮಾಡಿದರೆ, ದೃಶ್ಯತ್ವ ಹೇತುವಿಗೆ ಹೇತ್ವಾಭಾಸ ದೋಷಗಳಲ್ಲಿ ಯಾವ ದೋಷವನ್ನು ಹೇಳಿದಂತಾಯಿತು? ಅನಧ್ಯವಸಿತರೂಪ ಹೇತ್ವಾಭಾಸ ದೋಷವೆಂದು ನಾವು ಹೇಳುತ್ತೇವೆ.



ಆ ಅರ್ಥದಲ್ಲಿ ಶ್ರೀಮದಾಚಾರ್ಯರು"इति अनध्यवसित:" ಎಂದು ಆವೃತ್ತಿರೂಪ ವ್ಯಾಖ್ಯಾನವನ್ನು ಮಾಡಿರುತ್ತಾರೆ. ಹಾಗಾದರೆ, "तर्कबाधितत्वेन" ಎಂಬುದರಿಂದ ಅದು ಹೇಗೆ ಕೂಡುತ್ತದೆ? ಅದರಿಂದ ತರ್ಕರೂಪ ಬಲವತ್ ಪ್ರಮಾಣದ ಬಾಧಕವುಂಟಾಗಿ ಕಾಲಾತ್ಯಯಾಪದಿಷ್ಟ ದೋಷ ಉಂಟಾಗುತ್ತದೆ ವಿನಹಾ ಅನಧ್ಯವಸಿತವಲ್ಲ್?

ಅದು ಹಾಗಲ್ಲ, ಇಲ್ಲಿ तर्कबाधितत्वेन ಎಂಬ ಪದದಿಂದ ತರ್ಕರೂಪ ಬಲವಾದ ಪ್ರಮಾಣದಿಂದ ಬಾಧಿತವಾದುದು ಎಂಬ ಅರ್ಥವನ್ನು ತೆಗೆದು ಕೊಳ್ಳದೆ, ತರ್ಕದ ಬಲವತ್ವವನ್ನು ಅಂಗೀಕರಿಸದೆ ಮತ್ತು ಬಾಧಿತ ಪದವನ್ನು ವಿರುದ್ಧ ಅರ್ಥದಲ್ಲಿ ಅಂಗೀಕರಿಸಿ, ತರ್ಕದ ವಿರೋಧ ಬರುವದೆಂಬ ಅರ್ಥವನ್ನು ಇಟ್ಟುಕೊಂಡು, ಅನಧ್ಯವಸಿತರೂಪ ಹೇತ್ವಾಭಾಸವನ್ನು ಹೇಳಲಾಗಿದೆ ಎಂದರ್ಥ.

### टिप्पणीनाम् विशेषार्थानि

### ॥ एवं व्याख्यान इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ

**अनध्यवसित पदस्य साध्य असाधकत्वपरतया व्याख्याने सति इत्यर्थः।**

ಅಂದರೆ, ಅನಧ್ಯವಸಿತ ಪದವನ್ನು ಸಾಧ್ಯ ಅಸಾಧಕತ್ವದ ಪರವಾಗಿ ವ್ಯಾಖ್ಯಾನ ಮಾಡಲಾಗಿ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**अनध्यवसित पदस्य साध्य असाधकत्व परतया व्याख्याने दोषवाचकपद अभावेन को दोष उक्तः स्यात् न कोऽपि इत्यर्थः।**

ಅನಧ್ಯವಸಿತ ಪದವನ್ನು ಸಾಧ್ಯ ಅಸಾಧಕತ್ವ ಪರವಾಗಿ ವ್ಯಾಖ್ಯಾನದಲ್ಲಿ ದೋಷವಾಚಕ ಪದ ಇಲ್ಲದಾಗಿರುವದರಿಂದ, ಇಲ್ಲಿ ಯಾವ ದೋಷ ಹೇಳಲಾಯಿತು? ಅಂದರೆ ಯಾವದು ಇಲ್ಲ ಎಂದರ್ಥ.

### ॥ को दोष इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**हेतु अभासानां मध्ये को हेत्वाभास दोष उक्त इत्यर्थः।**

ಅಂದರೆ, ಹೇತು ಆಭಾಸಗಳ ಮಧ್ಯದಲ್ಲಿ ಯಾವ ಹೇತು ಆಭಾಸ ದೋಷವನ್ನು ಹೇಳಲಾಯಿತು ಎಂದರ್ಥ.

### ॥ अनध्यवसित इति इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**उत्तरं आह– अनध्यवसित इति॥**
**अनध्यवसितरूप हेत्वाभास इत्यर्थः।**

ಹಿಂದಿನ ವಾಕ್ಯದ ಪ್ರಶ್ನೆಗೆ ಉತ್ತರವಾಗಿ ಈ ಟೀಕಾವಾಕ್ಯ ಇರುತ್ತದೆ. ಅಂದರೆ ಅನಧ್ಯವಸಿತರೂಪ ಹೇತ್ವಾಭಾಸ ಎಂದರ್ಥ.

## ॥ तदर्थं इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु अनध्यवसित शब्दस्य उक्तरीत्या अन्य अर्थत्वात्, कथं अनध्यवसितरूप हेत्वाभास अर्थकत्वं तस्य इत्यत आह – तदर्थम् इति॥**
**अनध्यवसितरूप हेत्वाभास कथनार्थं इत्यर्थः।**

ಹಿಂದೆ ಹೇಳಿದಂತೆ, ಅನಧ್ಯವಸಿತ ಶಬ್ದಕ್ಕೆ ಅನ್ಯ ಅರ್ಥಗಳಿರುತ್ತವೆ. ಹಾಗಿರುವಾಗ ಅನಧ್ಯವಸಿತರೂಪ ಹೇತ್ವಾಭಾಸ ಅರ್ಥಕತ್ವ ರೂಪ ಹೇಗೆ ಕೂಡುತ್ತದೆ ಎಂಬ ಶಂಕೆಯನ್ನು ನಿವಾರಿಸಲು ಈ ಟೀಕಾವಾಕ್ಯವಿರುತ್ತದೆ. ಇಲ್ಲಿ ತದರ್ಥಮ್ ಎಂದರೆ, ಅನಧ್ಯವಸಿತರೂಪ ಹೇತ್ವಾಭಾಸ ಹೇಳುವಗೋಸ್ಕರ ಎಂದರ್ಥ.

## ॥ आवृत्तिः व्याख्यायते इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**तर्कबाधितत्वेन अनध्यवसितः साध्य असाधक इति कृत्वा अनध्यवसितः अनध्यवसित नामा हेत्वाभास इत्येवं योगरूढिम् आश्रित्य आवृत्तिरूपं व्याख्यानं क्रियत इत्यर्थः।**

ತರ್ಕದ ಬಾಧಕ ಬರುವದರಿಂದ ಅನಧ್ಯವಸಿತ, ಅದನ್ನು ಸಾಧ್ಯ ಅಸಾಧಕವನ್ನಾಗಿ ಮಾಡಿ, ಅನಧ್ಯವಸಿತ ಎಂದರೆ ಅನಧ್ಯವಸಿತ ಹೆಸರಿನ ಹೇತ್ವಾಭಾಸ ಎಂದು ಯೋಗರೂಢಿ (ಎಂದರೆ, ಶಬ್ದದ ಅವಯವ ಶಕ್ತಿಯಿಂದ ಕೂಡಿದ ಸಮುದಾಯ ಶಕ್ತಿ) ಯನ್ನು ಆಶ್ರಯಿಸಿ, ಶ್ರೀಮದಾಚಾರ್ಯರು ಆವೃತ್ತಿರೂಪ ವ್ಯಾಖ್ಯಾನವನ್ನು ಮಾಡಿರುತ್ತಾರೆ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**तर्कबाधितत्वेन अनध्यवसितः साध्य असाधकः इति कृत्वा अनध्यवसितो नाम हेत्वाभास इति व्याख्यायत इत्यर्थः।**

ತರ್ಕದ ಬಾಧಕ ಬರುವದರಿಂದ ಅನಧ್ಯವಸಿತ, ಅದನ್ನು ಸಾಧ್ಯ ಅಸಾಧಕವನ್ನಾಗಿ ಮಾಡಿ, ಅನಧ್ಯವಸಿತ ಎಂದರೆ ಅನಧ್ಯವಸಿತ ಹೆಸರಿನ ಹೇತ್ವಾಭಾಸ ಎಂದು ವ್ಯಾಖ್ಯಾನ ಮಾಡಲಾಗಿದೆ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**अनध्यवसित पदस्य आवृत्तिः मूलाभिप्रेत इति अस्माभिः साध्यत इत्यर्थः।**

ಮೂಲಾಭಿಪ್ರೇತ ಅನಧ್ಯವಸಿತ ಪದದ ಆವೃತ್ತಿಯು ನಮ್ಮಿಂದ ಸಾಧಿಸಲ್ಪಡುತ್ತದೆ ಎಂದರ್ಥ.

## ॥ तर्हि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**आवृत्या अनध्यवसितरूप हेत्वाभास कथनपरत्व इत्यर्थः।**



ಅಂದರೆ, ಅನಧ್ಯವಸಿತ ಪದದ ಆವೃತ್ತಿಮೂಲಕ, ಅನಧ್ಯವಸಿತರೂಪ ಹೇತ್ವಾಭಾಸ ಪರವಾದ ಹೇಳಿಕೆ ಎಂದರ್ಥ.

## ॥ तथात्व इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु तर्कबाधितत्वेन इत्युक्ते को दोष उक्तः स्यात् इत्यत आह– तथात्व इति॥**

ಇನ್ನು ತರ್ಕದ ಬಾಧಕತ್ವವೆಂದು ಹೇಳಿದ್ದ ಮೂಲಕ ಏನು ದೋಷ ಹೇಳಿದಂತಾಯಿತು?, ಅದಕ್ಕೆ ಪರಪಕ್ಷದವರ ಕಾಲಾತ್ಯಯಾಪದಿಷ್ಟ ಎಂಬ ದೋಷ ಉಂಟಾಗುವದೆಂಬ ಹೇಳಿಕೆಯನ್ನು ಈ ಟೀಕಾವಾಕ್ಯ ನಿರಾಕರಿಸುತ್ತದೆ.

**तथा च तर्करूप बलवत् प्रमाण बाधितत्व उक्त्या कालात्ययापदिष्टत्वाख्य बाधित विषयत्वरूप हेत्वाभास उक्तः स्यात् न अनध्यवसितरूपो हेत्वाभासः। कालातीतः बलवता प्रमाणेन प्रबाधित इति वचनात् इत्यर्थः। तथाच प्रत्यक्षादि विरुद्धत्वात् इत्यनेन कालात्ययापदिष्टत्वस्य उत्तरत्र वक्ष्यमाणत्वात् पुनरुक्तिः इति भावः।**

ಪರಪಕ್ಷದವರಂತೆ, ತರ್ಕರೂಪ ಬಲವಾದ ಪ್ರಮಾಣದ ಬಾಧಕವನ್ನು ಹೇಳಿರುವದರಿಂದ ಕಾಲಾತ್ಯಯಾಪದಿಷ್ಟ ಎಂಬ ಬಾಧಿತ ವಿಷಯತ್ವರೂಪ ಹೇತ್ವಾಭಾಸವನ್ನು ಹೇಳಿದಂತಾಯಿತು, ಅನಧ್ಯವಸಿತರೂಪ ಹೇತ್ವಾಭಾಸವನ್ನು ಅಲ್ಲವಲ್ಲ. ಹಾಗೂ ಕಾಲಾತ್ಯಯಾಪದಿಷ್ಟ ಎಂದರೆ "कालातीतः बलवता प्रमाणेन प्रबाधित" (ಅಂದರೆ, ಬಲವಾದ ಪ್ರಮಾಣದಿಂದ ಬಾಧಿತವಾಗಿರುವದು) ಎಂಬ ವಚನವಿರುತ್ತದೆ ಎಂದರ್ಥ. ಅದರಂತೆ, प्रत्यक्षादि विरुद्धत्वात् ಎಂದು ಮುಂತಾಗಿ ಕಾಲಾತ್ಯಯಾಪದಿಷ್ಟತ್ವವು ಮುಂದೆ ಹೇಳಲ್ಪಟ್ಟಿರುವದಾದ್ದರಿಂದ, ಇಲ್ಲಿ ಪುನರುಕ್ತಿ ದೋಷ ಕೂಡ ಬರುತ್ತದೆ ಎಂಬ ಭಾವವಿರುತ್ತದೆ.

## ॥ विरुद्धार्थत्वात् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**तथा च तर्कबाधितत्वेन इत्यस्य बलवत् प्रमाण बाधितत्वं अर्थतया न अभिप्रेतम्। येन कालात्ययापदिष्टत्व प्रसङ्ग इति परिचोदना स्यात्। किन्तु तर्कस्य बलवत्त्वं अनङ्गीकृत्य बाधित शब्दस्य विरुद्धार्थं च अङ्गीकृत्य तर्क विरुद्धत्वेन अनध्यवसितोरूप हेत्वाभास कथ्यत इत्यर्थः।**

ಪರಪಕ್ಷದವರ ಕಾಲಾತ್ಯಯಾಪದಿಷ್ಟದ ಶಂಕೆಯನ್ನು ಈ ಟೀಕಾವಾಕ್ಯ ದೂರಮಾಡುತ್ತದೆ. ಅದರಂತೆ, ಇಲ್ಲಿ तर्कबाधितत्वेन ಎಂಬ ಪದವು ತರ್ಕರೂಪ ಬಲವಾದ ಪ್ರಮಾಣದಿಂದ ಬಾಧಿತವಾದುದು, ಎಂಬಂರ್ಥದಲ್ಲಿ ಅಭಿಪ್ರೇತವಾಗಿರುವದಿಲ್ಲ. ಹಾಗೇನಾದರು ಇದ್ದಲ್ಲಿ ಪರರು ಸೂಚಿಸುವ ಕಾಲಾತ್ಯಯಾಪದಿಷ್ಟತ್ವ ಪ್ರಸಂಗ ಉಂಟಾಗುತ್ತಿತ್ತು. ಪರಂತು, ಇಲ್ಲಿ ತರ್ಕದ ಬಲವತ್ವವನ್ನು ಅಂಗೀಕರಿಸದೆ, ಮತ್ತು ಬಾಧಿತ ಶಬ್ದವನ್ನು ವಿರುದ್ಧ ಎಂಬರ್ಥದಲ್ಲಿ

ಅಂಗೀಕರಿಸಿ, ಆ ಪದದ ಅರ್ಥವನ್ನು, ತರ್ಕದ ವಿರೋಧ ಬರುವದರಿಂದ ಎಂದು ಇಟ್ಟುಕೊಂಡು, ಅನಧ್ಯವಸಿತರೂಪ ಹೇತ್ವಾಭಾಸವನ್ನು ಹೇಳಲಾಗಿದೆ ಎಂದರ್ಥ.

ವಿಶೇಷ: ಇಲ್ಲಿ ಶ್ರೀಶ್ರೀನಿವಾಸತೀರ್ಥರ ದುರ್ಗಮಾರ್ಥ ವ್ಯಾಖ್ಯಾನದ ವಿನಾ ಟೀಕಾಕೃತ್ಪಾದರ ವಾಕ್ಯಗಳನ್ನು ಅರ್ಥಮಾಡುವದು ಎಷ್ಟು ಕಠಿನವೆಂದು ಅಧ್ಯಯನಶೀಲರು ಗಮನಿಸಬೇಕು. ಅದಕ್ಕೆ ನಾವು ಚಿರಋಣಿ, ಅದನ್ನು ಸ್ಮರಿಸುವದೆಂದರೆ, ನಮ್ಮ ಶಿರಸಾಸ್ಟಾಂಗ ಪ್ರಣಾಮಗಳನ್ನು ಅರ್ಪಿಸುವದೊಂದೆ ನಮ್ಮಿಂದ ಸಾಧ್ಯ.

### ६.२.४.५ अनध्यवसितलक्षणस्य दृश्यत्व हेतोः समर्थनम्

## टीका

**ननु साध्य असाधकः पक्षः एव वर्तमानः अनध्यवसितः। न च अयं इति ब्रूमः। कथं अनध्यवसितः। इति चेत् न। तथा सति (तथात्वे) बाधिते सत्प्रतिपक्षे च केवलव्यतिरेकिणि अतिप्रसङ्गात्।**

ಸಾಧ್ಯ ಅಸಾಧಕ ಪಕ್ಷದಲ್ಲಿಯೇ ಇರುವ ಹೇತುವು ಅನಧ್ಯವಸಿತ ದೋಷಗ್ರಸ್ತ ಹೇತು ಎಂದೆನಿಸುವದು. ಆದರೆ, ದೃಶ್ಯತ್ವ ಹೇತುವು ಹಾಗಿರುವದಿಲ್ಲ. ಅದು ಹೇಗೆ ಅನಧ್ಯವಸಿತ ಏನಿಸುವದು? ಎಂತೆಂದರೆ, ಅದು ಸರಿಯಲ್ಲ. ಹಾಗೆನಾದರು ಆದರೆ, ಬಾಧಿತ ಮತ್ತು ಸತ್ಪ್ರತಿಪಕ್ಷನ್ನು ಹೊಂದಿದ ಕೇವಲವ್ಯತಿರೇಕಿಣಿ ಲಕ್ಷಣದಲ್ಲಿ ಅತಿಪ್ರಸಂಗ ಅಂದರೆ ಅತಿವ್ಯಾಪ್ತಿ ಉಂಟಾಗುತ್ತದೆ.

### टिप्पणीनाम् विशेषार्थानि

**॥ ननु साध्य असाधक इति ॥**

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**अनध्यवसित लक्षण अभावात् न अयं अनध्यवसित इत्याशयेन शङ्कते– ननु साध्य असाधक इति॥**

ಇಲ್ಲಿ, ಅನಧ್ಯವಸಿತ ಲಕ್ಷಣವೇ ಇಲ್ಲದಿರುವಾಗ, ಮಿಥ್ಯಾತ್ವ ಅನುಮಾನದ ಹೇತುವಿಗೆ ಅನಧ್ಯವಸಿತವೆಂಬ ದೋಷವು ಹೇಗೆ ಕೂಡುತ್ತದೆ? ಎಂದು ಈ ಟೀಕಾವಾಕ್ಯ ಶಂಕಿಸುತ್ತದೆ.

**॥ वर्तमान इति॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**वर्तमान इति अनन्तरं हेतुः इति शेषः।**



ಇಲ್ಲಿ, ವರ್ತಮಾನ ಪದದ ನಂತರ ಹೇತು ಎಂಬ ಪದವನ್ನು ಸೇರಿಸಿ ಅರ್ಥಮಾಡಬೇಕು. ಅಂದರೆ " साध्य असाधकः पक्षः एव वर्तमानः हेतुः अनध्यवसितः" ಎಂಬ ಅರ್ಥ ಸಿಗುತ್ತದೆ. ಅಂದರೆ, ಸಾಧ್ಯ ಅಸಾಧಕ ಪಕ್ಷವೇ ಹೇತುವಿನ ಇರೊಣವಾಗಬೇಕು, ಅಂದರೆ ಸಾಧ್ಯ ಅಸಾಧಕ ಪಕ್ಷದಲ್ಲಿಯೇ ಇರುವ ಹೇತುವು ಎಂದರ್ಥ, ಅಂತಹ ಹೇತುವೇ ಅನಧ್ಯವಸಿತ ಏನಿಸುವದು.

**॥ न च अयं इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**अयं दृश्यत्व हेतुः। तथा पक्ष एव वर्तमानो न भवति। मायिरीत्या सपक्षे शुक्तिरजतेऽपि सत्वात्। सिद्धान्तिरीत्या विपक्षेऽपि सत्त्वात् इत्यर्थ।**

ಇಲ್ಲಿ ಅಯಂ ಅಂದರೆ ದೃಶ್ಯತ್ವ ಹೇತುವು ಎಂದರ್ಥ. ಈ ದೃಶ್ಯತ್ವ ಹೇತುವಿಗೆ ಮೇಲೆ ನಮೂದಿಸಿದ ಅನಧ್ಯವಸಿತ ಲಕ್ಷಣದಲ್ಲಿಯ ಪಕ್ಷವೇ ಇರುವಿಕೆಯಂತಾಗುವದಿಲ್ಲ. ಏಕೆಂದರೆ, ದೃಶ್ಯತ್ವ ಹೇತುವು, ಮಾಯಿಗಳ ರೀತಿಯಲ್ಲಿ ಸಪಕ್ಷವಾದ ಶುಕ್ತಿರಜತದಲ್ಲಿ ಕೂಡ ಇರುತ್ತದೆ. ಹಾಗೂ ಸಿದ್ಧಾಂತಿಗಳಂತೆ ವಿಪಕ್ಷವಾದ ಬ್ರಹ್ಮನಲ್ಲಿಯೂ ಇರುತ್ತದೆ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**पक्षमात्र वृति न इत्यर्थः। विपक्षे दृश्यत्वस्य त्वया अनङ्गीकारात्। शुक्तिरजतादौ अस्माकं साध्य संमति अभावात्।**

ಇಲ್ಲಿ ಮೇಲೆ ನಮೂದಿಸಿದ ಅನಧ್ಯವಸಿತ ಲಕ್ಷಣದಲ್ಲಿಯ ಪಕ್ಷಮಾತ್ರದ ವೃತ್ತಿತ್ವ ಮಿಥ್ಯಾತ್ವ ಅನುಮಾನದ ದೃಶ್ಯತ್ವ ಹೇತುವಿಗೆ ಇರುವದಿಲ್ಲ ಎಂದರ್ಥ. ಏಕೆಂದರೆ, ವಿಪಕ್ಷವಾದ ಬ್ರಹ್ಮನಲ್ಲಿ ದೃಶ್ಯತ್ವವನ್ನು ತಾವು ಅಂಗೀಕರಿಸಿಲ್ಲ. ಮತ್ತು ಶುಕ್ತಿರಜತಾದಿಗಳಲ್ಲಿ ನಮಗೆ ಸಾಧ್ಯ ಸಮ್ಮತಿ ಇರುವದಿಲ್ಲ.

**॥ न इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**अस्य लक्षणस्य निष्कृष्टं अर्थं उक्त्वा स च समो दृश्यत्व हेतौ अपि इति अनध्यवसित एव इति वक्तुं त्वदुक्तं यथावस्थितं एव एतत् न अनध्यवसित लक्षणं आह– न इति॥**

ಈಗಾಗಲೆ ಮೇಲೆ, ಅನಧ್ಯವಸಿತ ಲಕ್ಷಣದ ನಿಷ್ಕರಿಸಲ್ಪಟ್ಟ ಅರ್ಥವನ್ನು ಹೇಳಿ, ಅದಕ್ಕೆ ಸಮನಾದ ಲಕ್ಷಣ ದೃಶ್ಯತ್ವ ಹೇತುವಿನಲ್ಲಿ ಕೂಡ ಇದೆ ಎಂದು, ಅದು ಅನಧ್ಯವಸಿತಗ್ರಸ್ತ ಆಗಿದೆ ಎಂದು ಪ್ರತಿಪಾದಿಸಲು, ಪರಪಕ್ಷದವರು ಯಥಾವಸ್ಥಿತವಾಗಿ ಪ್ರತಿಪಾದಿಸಿದ ಅನಧ್ಯವಸಿತ ಲಕ್ಷಣವನ್ನು ಟೀಕಾಕೃತ್ಪಾದರು ನಿರಾಕರಿಸುತ್ತಾರೆ.

**॥ तथात्व (तथा सति) इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

कुतो न इदं लक्षणं इति चेत् न। तथात्वे केवल व्यतिरेकि अनुमाने अतिव्याप्ति प्रसङ्गात् इति आह– तथात्व इति॥

ಏಕೆ ಪರರು ಪ್ರತಿಪಾದಿಸಿದ ಅನಧ್ಯವಸಿತ ಲಕ್ಷಣ ಸ್ವೀಕರಿಸಬಾರದು? ಅದು ಹಾಗಲ್ಲ. ಪರರು ಪ್ರತಿಪಾದಿಸಿದ ಲಕ್ಷಣವನ್ನು ಸ್ವೀಕರಿಸಿದರೆ ಕೇವಲ ವ್ಯತಿರೇಕ ಅನುಮಾನದಲ್ಲಿ ಅತಿವ್ಯಾಪ್ತಿ ಉಂಟಾಗುವ ಪ್ರಸಂಗ ಬರುತ್ತದೆ ಎಂದು ಈ ಟೀಕಾವಾಕ್ಯ ಹೇಳುತ್ತದೆ.

असपक्षं विपक्षेभ्यो व्यावृतं पक्षभूमिषु। सर्वासु वर्तमानं यत् केवल व्यतिरेकि तत् इति वचनात्, केवल व्यतिरेकिणि इत्यनेने एव, पक्ष एव वर्तमानत्वे सिद्धे साध्य असाधकत्वरूप विशेषण उपपादनाय बाधिते सत्प्रतिपक्षिते च केवल व्यतिरेकिणि इति केवलव्यतिरेकिणो विशेषण द्वयं उक्तं इति ज्ञातव्यम्।

ಯಾವ ಅನುಮಾನದ ಹೇತುವಿಗೆ ಸಪಕ್ಷವಿಲ್ಲ ಮತ್ತು ವಿಪಕ್ಷವ್ಯಾಪಕ ವಿಲ್ಲದ್ದು ಪಕ್ಷದಲ್ಲಿ ಯಾವಗಲೂ ಇರುವಂತಹದ್ದು, ಅಂತಹ ಹೇತುವು ಕೇವಲ ವ್ಯತಿರೇಕಿ ಎನಿಸುತ್ತದೆ ಎಂಬ ವಚನವಿರುತ್ತದೆ. ಇಲ್ಲಿ ಕೇವಲ ವ್ಯತಿರೇಕಿಣಿ ಹೇತು ಎಂಬುದರಿಂದಲೇ ಅನಧ್ಯವಸಿತ ಲಕ್ಷಣದಲ್ಲಿಯ , पक्ष एव वर्तमानत्वे ಎಂಬುದು ಸಿದ್ಧಿಸುತ್ತಿರಲು, ಸಾಧ್ಯ ಅಸಾಧಕತ್ವರೂಪ ವಿಶೇಷಣ ಪ್ರತಿಪಾದಿಸಲು, बाधिते सत्प्रतिपक्षिते च ಎಂಬ ವಿಶೇಷಣ ದ್ವಯಗಳನ್ನು केवलव्यतिरेकिणि ಹೇತುವಿಗೆ ಹೇಳಲಾಗಿದೆ ಎಂದು ತಿಳಿಯಬೇಕು.

<u>ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:</u>

तस्य पक्षे विपक्षे वा अवश्यं भावेन हेतोः पक्षमात्र वृत्तित्वात् अनध्यवसित लक्षणं अस्ति एव इति, समाधानं शिष्यैः एव उह्यतां इति भावेन समाधानान्तरं आह– तथात्वे बाधिते सत्प्रतिपक्षे वा इत्यादिना इति आस्तां इत्यन्तेन तदा अनध्यवसित इति भेद इति॥

ದೃಶ್ಯತ್ವ ಹೇತುವು ಪಕ್ಷದಲ್ಲಿ ಅಥವಾ ವಿಪಕ್ಷದಲ್ಲಿ ಅವಶ್ಯವಾಗಿ ಇರಬೇಕಾದ್ದರಿಂದ, ದೃಶ್ಯತ್ವ ಹೇತುವಿಗೆ ಪಕ್ಷಮಾತ್ರ ವೃತ್ತಿತ್ವ ಉಂಟಾಗುವದರಿಂದ ಅನಧ್ಯವಸಿತ ಲಕ್ಷಣ ಇದೆ ಎಂದು ಸಮಾಧಾನ ಶಿಷ್ಯರು ಉಹಿಸುತ್ತಾರೊ ಏನೊ ಎಂಬ ಭಾವದಿಂದ ಸಮಾಧಾನಾಂತರವನ್ನು तथात्वे बाधिते ದಿಂದ तदा अनध्यवसित इति भेदः ವರೆಗಿನ ಟೀಕಾವಾಕ್ಯಗಳು ಪ್ರತಿಪಾದಿಸುತ್ತವೆ.

## ॥ बाधिते सत्प्रतिपक्षे च इति ॥

<u>ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:</u>

केवल व्यतिरेकिणि इत्यनेन एव पक्ष एव वर्तमानत्वे सिद्धे, साध्य असाधकता सिद्ध्यर्थं केवल व्यतिरेकिणं विशेषण द्वयेन् विशिनष्टि–बाधिते सत्प्रतिपक्षे च इति॥

ಇಲ್ಲಿ ಕೇವಲ ವ್ಯತಿರೇಕಿಣಿ ಎಂಬುದರಿಂದಲೇ पक्ष एव वर्तमानत्वे ಸಿದ್ಧಿಸುತ್ತಿರಲು, ಸಾಧ್ಯ ಅಸಾಧಕತ್ವದ ಸಿದ್ಧಿಗೋಸ್ಕರ बाधिते सत्प्रतिपक्षे च ಎಂಬ ಎರಡು ವಿಶೇಷಣಗಳನ್ನು केवल व्यतिरेकिण ಗೆ ವಿಶೇಷಿಸಿದ್ದಾರೆ, ಎಂದು ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ.



## टीका

साध्य असाधकत्वं नाम तत् प्रतीति अजनकत्वम्। बाधित सत्प्रतिपक्षौ तु विपर्यय सन्देह जनकौ इति चेत्। तथासति विरुद्धादि व्युदासस्य तत एव सिद्धेः "पक्ष एव वर्तमानः" इत्यस्य वैयर्थ्य प्रसङ्गात्। असिद्धि परिहारार्थं इति चेत् न। एवकार वैयर्थ्यात्। तथा च असिद्ध अतिरिक्तः साध्य असाधक लक्षणार्थः स्यात्। स च समः प्रकृतेऽपि इति कथं न अन्ध्यवसितः।

ಇನ್ನು, ಸಾಧ್ಯ ಅಸಾಧಕತ್ವವೆಂದರೆ ಸಾಧ್ಯ ಪ್ರತೀತಿ ಉಂಟಾಗದಿರುವಿಕೆ. ಆದರೆ, ಬಾಧಿತ ಮತ್ತು ಸತ್-ಪ್ರತಿಪಕ್ಷಗಳು ಸಾಧ್ಯದ ವಿರುದ್ಧ ಮತ್ತು ಸಂದೇಹ ಜನಕ ಪ್ರತೀತಿ ಉಂಟುಮಾಡುತ್ತವೆ, ಹೀಗಾಗಿ ನಾವು (ಪ್ರತಿಪಕ್ಷದವರು) ಪ್ರತಿಪಾದಿಸಿದ ಅನಧ್ಯವಸಿತ ಲಕ್ಷಣ ಅವುಗಳಲ್ಲಿ ಅತಿವ್ಯಾಪ್ತಿಯನ್ನು ಹೇಗೆ ಉಂಟುಮಾಡುತ್ತದೆ ಎಂದರೆ? ಹಾಗೇನಾದರು ಆದರೆ, ವಿರುದ್ಧಾದಿಗಳಲ್ಲಿಯ ಅತಿವಾಪ್ತಿಯನ್ನು "
साध्य असाधकत्वं" ಎಂಬುದರಿಂದಲೇ ಸಿದ್ಧವಾಗುವದರಿಂದ, ಪರಪಕ್ಷದವರು ಪ್ರತಿಪಾದಿಸಿದ ಅನಧ್ಯವಸಿತ ಲಕ್ಷಣದಲ್ಲಿಯ पक्ष एव वर्तमानः ವಿಶೇಷಣ ವ್ಯರ್ಥವೆನಿಸುವ ಪ್ರಸಂಗ ಒದಗುವದು. ಇಲ್ಲ, ಆ ವಿಶೇಷಣವನ್ನು ಅಸಿದ್ಧಿಯಲ್ಲಿಯ ಅತಿವ್ಯಾಪ್ತಿಯನ್ನು ನಿವಾರಿಸಲು ಇಡಲಾಗಿದೆ ಎಂದರೆ. ಅದು ಸರಿಯಲ್ಲ, ಅಸಿದ್ಧಿಯಲ್ಲಿಯ ಅತಿವ್ಯಾಪ್ತಿಯನ್ನು पक्ष वर्तमानः ಎಂಬುದರಿಂದಲೇ ನಿವಾರಿಸಲು ಶಕ್ಯವಾಗಿರುವದರಿಂದ ಅಲ್ಲಿ एव ಪದವು ವ್ಯರ್ಥವೆನಿಸುವದು. ಹಾಗಾದರೆ एव ಪದವನ್ನು ತೆಗೆದುಬಿಟ್ಟರೆ ಸರಿಹೋಯಿತಲ್ಲ ಎಂದರೆ. ಈಗ ಅಸಿದ್ಧ ಅತಿರಿಕ್ತವಾದ ಸಾಧ್ಯ ಅಸಾಧಕವು ಅನಧ್ಯವಸಿತದ ಲಕ್ಷಣವಾಯಿತು. ಇದು ಪ್ರಕೃತ ದೃಶ್ಯತ್ವ ಹೇತುವಿನಲ್ಲಿ ಇದೆ. ಆದ್ದರಿಂದ ತಾವು (ಪರಪಕ್ಷದವರು) ಹೇಗೆ ದೃಶ್ಯತ್ವ ಹೇತುವು ಅನಧ್ಯವಸಿತ ದೋಷಗ್ರಸ್ತವಲ್ಲ ಎಂದು ಹೇಳಿತ್ತೀರಿ?

### <u>टिप्पणीनाम् विशेषार्थानि</u>

## ॥ साध्य असाधकत्वं नाम इति ॥

<u>ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:</u>

ननु साध्य असाधकत्व अभावात् न बाधिते सत्प्रतिपक्षिते च केवल व्यतिरेकिणि अतिव्याप्तिः इति अभिप्रेत्य साध्य असाधकत्वं निर्वक्ति– साध्य असाधकत्वं नाम इति॥

ಇನ್ನು ಸಾಧ್ಯ ಅಸಾಧಕತ್ವವು ಇಲ್ಲದಾಗ बाधिते सत्प्रतिपक्षिते च केवल व्यतिरेकिणि ಎಂಬಲ್ಲಿ ಅತಿವ್ಯಾಪ್ತಿ ಉಂಟಾಗುವದಿಲ್ಲ ಎಂದು ತಿಳಿದು ಸಾಧ್ಯ ಅಸಾಧಕತ್ವ ಇಲ್ಲಿ ಹೇಗೆ

ಉಂಟಾಗುತ್ತದೆ ಎಂಬುದನ್ನು ಈ ಟೀಕಾವಾಕ್ಯ ದಿಂದ ಹಿಡಿದು ಮುಂದಿನ ಕೆಲವು ಟೀಕಾ ವಾಕ್ಯಗಳು ಸ್ಪಷ್ಟಪಡಿಸುತ್ತವೆ.

## ॥ तत् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

साध्य इत्यर्थः।
ಇಲ್ಲಿ ತತ್ ಪದದ ಅರ್ಥ ಸಾಧ್ಯ ಎಂದರ್ಥ.

## ॥ विपर्यय इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

बाधितं विपर्ययजनकं सत्प्रतिपक्षितं च विरुद्ध उभयपरामर्शरूपत्वात् सन्देह जनकं इत्यर्थ।
ಬಾಧಕವು ವ್ಯತ್ಯಾಸಾರ್ಥವನ್ನು ಉದ್ಭವಿಸುತ್ತದೆ ಮತ್ತು ಸತ್ ಪ್ರತಿಪಕ್ಷಿತವು ಪಕ್ಷವಿಪಕ್ಷಗಳ ವಿರುದ್ಧ ಉಭಯ ಪರಾಮರ್ಶರೂಪವಾದ್ದರಿಂದ ಸಂದೇಹವನ್ನು ಹುಟ್ಟಿಸುತ್ತದೆ ಎಂದರ್ಥ.

## ॥ तथासति इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

विरुद्धादेः साध्य अभाव प्रतीत्यादि जनकत्वेन प्रतीति अजनकत्वरूप साध्य असाधकत्व विशेषणेन एव तत् व्युदास सिद्धेः इत्यर्थः।
ಆದರೆ, ವಿರುದ್ಧಾದಿಗಳು ಸಾಧ್ಯ ಅಭಾವ ಪ್ರತೀತಿ ಜನಕಗಳಾಗಿರುತ್ತವೆ. ಇದರಿಂದ ಪ್ರತೀತಿ ಅಜನಕತ್ವರೂಪ ಸಾಧ್ಯ ಅಸಾಧಕತ್ವ ವಿಶೇಷಣದಿಂದಲೇ ಅವುಗಳ ನಿವಾರಣೆ ಸಿದ್ಧವಾಗಿರುತ್ತದೆ ಎಂದರ್ಥ

## ॥ विरुद्धादि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

आदि पदेन अनैकान्तिक बाध सत्प्रतिपक्ष ग्रहणम्। अयं अर्थः।
ಇಲ್ಲಿ ಆದಿ ಪದದಿಂದ ಅನೈಕಾಂತಿಕ, ಬಾಧ ಮತ್ತು ಸತ್-ಪ್ರತಿಪಕ್ಷ ದೋಷಗಳನ್ನು ಗ್ರಹಿಸಲಾಗಿದೆ. ಈ ಟೀಕಾವಾಕ್ಯದ ಅರ್ಥ ಹೀಗಾಗುತ್ತದೆ.

साध्य असाधकः पक्ष एव वर्तमानो हेतुः अनध्यवसितः इति अनध्यवसित लक्षणे, साध्य असाधकः अनध्यवसितः इत्युक्ते विरुद्धादौ अतिव्याप्तिः स्यात्। तत् परिहारार्थं पक्ष एव वर्तमान इत्युक्तम्। विरुद्धादीनां पक्ष एव वर्तमानत्व अभावात् न अतिव्याप्तिः इति पदकृत्यं वाच्यम्।
ಇನ್ನು "साध्य असाधकः पक्ष एव वर्तमानो हेतुः अनध्यवसितः" ಎಂದು ಪರಪಕ್ಷದವರು ಪ್ರತಿಪಾದಿಸಿದ ಅನಧ್ಯವಸಿತ ಲಕ್ಷಣದಲ್ಲಿ, "साध्य असाधकः अनध्यवसितः" ಎಂದಿಷ್ಟೆ ಹೇಳಿದ್ದಲ್ಲಿ, ವಿರುದ್ಧಾದಿಗಳಲ್ಲಿ ಅತಿವ್ಯಾಪ್ತಿ ಉಂಟಾಗುತ್ತಿತ್ತು. ಅದರ ಪರಹಾರಾರ್ಥಕ್ಕಾಗಿ "पक्ष एव वर्तमान" ಎಂದು ಹೇಳಲಾಗಿದೆ. ವಿರುದ್ಧಾದಿಗಳಲ್ಲಿ पक्ष एव वर्तमानत्व ಎಂಬುದರ



ಅಭಾವತೆ ಇರುವದರಿಂದ ಅಲ್ಲಿ ಅತಿವ್ಯಾಪ್ತಿ ಉಂಟಾಗುವದಿಲ್ಲ, ಎಂದು ಪದಕೃತ್ಯವನ್ನು ಹೇಳಬೇಕು.

तत् न सम्भवति तथा हि–
ಆದರೆ ಹಾಗೆ ಪದಕೃತ್ಯವನ್ನು ಹೇಳಲು ಬರುವದಿಲ್ಲ. ಆದನ್ನು ಈಕೆಳಗಿನಂತೆ ವಿವರಿಸಬಹುದು:

यदि साध्य असाधकत्वं नाम साध्य प्रतीति अजनकत्वं विवक्षितं स्यात् तदा विरुद्धादौ अतिव्याप्ति प्रसक्ति एव नास्ति।
ಒಂದು ವೇಳೆ ಸಾಧ್ಯ ಅಸಾಧಕತ್ವವೆಂದರೆ ಸಾಧ್ಯ ಪ್ರತೀತಿಯೇ ಉಂಟಾಗಬಾರದು ಎಂಬರ್ಥ ವಿವಕ್ಷಿತವಾದಾಗ ವಿರುದ್ಧಾದಿಗಳಲ್ಲಿ ಅತಿವ್ಯಾಪ್ತಿ ಪ್ರಸಕ್ತಿಯೇ ಬರುವದಿಲ್ಲ.

विरुद्ध बाधितयोः विपरीत प्रतीति जनकत्वात् अनैकान्तिक सत्प्रतिपक्षयोः सन्देहरूप प्रतीति जनकत्वेन साध्य असाधक पदेन एव विरुद्धादौ अनिव्याप्ति व्युदासस्य सिद्धत्वात् "पक्ष एव वर्तमान " इति विशेषणस्य वैयर्थ्यमेव स्यात्।
ವಿರುದ್ಧ ಬಾಧಕಗಳು ವಿಪರೀತ ಪ್ರತೀತಿಯನ್ನು ಉಂಟುಮಾಡುತ್ತವೆ, ಮತ್ತು ಅನೈಕಾಂತಿಕ ಸತ್-ಪ್ರತಿಪಕ್ಷಗಳು ಸಂದೇಹರೂಪ ಪ್ರತೀತಿಯನ್ನುಂಟು ಮಾಡುತ್ತವೆ. ಇದರಿಂದ ಇವುಗಳನ್ನು साध्य असाधक ಪದಗಳಿಂದಲೇ ವಿರುದ್ಧಾದಿಗಳಲ್ಲಿ ಬರುವ ಅತಿವ್ಯಾಪ್ತಿಯನ್ನು ನಿವಾರಿಸವದು ಶಕ್ಯವಾಗುವದರಿಂದ, "पक्ष एव वर्तमान " ಎಂಬ ವಿಶೇಷಣವು ವೈಯರ್ಥ್ಯವೇ ಆಗುವದು.

## ॥ असिद्धि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

ननु "पक्ष एव वर्तमानस्य" इति विशेषणस्य न वैयर्थ्यम्। साध्य असाधकत्व इत्युक्ते असिद्धे चाक्षुषत्व हेतौ अतिव्याप्तिः। तस्य शब्दे नित्यत्वरूप साध्यप्रतीति अजनकत्वेन साध्य असाधकत्वात्।
ಇಲ್ಲಿ, "पक्ष एव वर्तमानस्य" ಎಂಬ ವಿಶೇಷಣವು ವೈಯರ್ಥವೆನಿಸುವದಿಲ್ಲ. ಕೇವಲ साध्य असाधकत्व ಇಷ್ಟೆ ಹೇಳಿದ್ದರೆ, ಚಾಕ್ಷುಷತ್ವ ಅಸಿದ್ಧವಾದ ಅಂದರೆ ಕಣ್ಣಿಗೆ ಅಸಿದ್ಧವಾದ ಅಂದರೆ ಕಾಣದ ಹೇತುವಿನಲ್ಲಿ ಅತಿವ್ಯಾಪ್ತಿ ಉಂಟಾಗುತ್ತದೆ. ಉದಾಃ ಶಬ್ದದಲ್ಲಿ ನಿತ್ಯತ್ವರೂಪ ಸಾಧ್ಯ ಪ್ರತೀತಿ ಉಂಟಾಗದ ಕಾರಣ ಸಾಧ್ಯ ಅಸಾಧಕವಾಗುತ್ತದೆ.

अतः पक्ष एव वर्तमान इत्युक्तं इति आशङ्कते– असिद्धि इति॥
ಆದ್ದರಿಂದ, पक्ष एव वर्तमान ಎಂದು ಅನಧ್ಯವಸಿತ ಲಕ್ಷಣ ದಲ್ಲಿ ಇಡಲಾಗಿದೆ.

## ॥ एवकार इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

तर्हि पक्षे वर्तमान इत्यनेन एव असिद्धेः अतिव्याप्ति परिहृतत्वात्, एवकार व्यर्थः स्यात् इत्याह – एवकार् इति॥

ಹಾಗಾದರೆ, पक्षे वर्तमान ಎಂದಿಷ್ಟರಿಂದಲೆ ಅತಿವ್ಯಾಪ್ತಿ ಪರಿಹೃತವಾಗುವಾಗ್, ಅನಧ್ಯವಸಿತ ಲಕ್ಷಣದಲ್ಲಿಯ एवकार ವ್ಯರ್ಥವೆನಿಸುತ್ತದೆ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**पक्षे वर्तमान ग्रहणेन एव असिद्धौ अतिव्याप्ति परिहारात् इत्यर्थः।**

ಅಂದರೆ, पक्षे वर्तमान ಗ್ರಹಿಸಿದರಿಂದಲೇ ಅಸಿದ್ಧಿಯಲ್ಲಿಯ ಅತಿವ್ಯಾಪ್ತಿ ಪರಿಹೃತವಾಗುತ್ತದೆ ಎಂದರ್ಥ.

## ॥ तथा च इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**तर्हि एवकारः त्यज्यताम् इति चेत् तत्र आह– तथा च इति॥**

ಹಾಗಾದರೆ, एवकार ವನ್ನು ತ್ಯಜಿಸಿದರಾಯಿತು, ಅಂದರೆ ಅಲ್ಲಿ ಅಸಿದ್ಧಿಕ್ಕಿಂತ ಅತಿರಿಕ್ತವಾದ ಸಾಧ್ಯ ಅಸಾಧಕ ಹೇತು ಎಂದು ಅನಧ್ಯವಸಿತದ ಲಕ್ಷಣವಾಯಿತು ಎಂದು ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**तर्हि एवकारः त्यज्यताम् इत्यत आह – तथा च इति॥**

ಹಾಗಾದರೆ, एवकार ವನ್ನು ತ್ಯಜಿಸಿದರಾಯಿತು, ಅಂದರೆ ಅಲ್ಲಿ ಅಸಿದ್ಧಿಕ್ಕಿಂತ ಅತಿರಿಕ್ತವಾದ ಸಾಧ್ಯ ಅಸಾಧಕ ಹೇತು ಎಂದು ಅನಧ್ಯವಸಿತದ ಲಕ್ಷಣವಾಯಿತು ಎಂದು ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ.

## ॥ स च इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**पक्षे वर्तमान इत्यनेन असिद्धस्य व्यावर्तित्वात्, तत् अभिप्राय कथनं असिद्ध अतिरिक्त इति –स च इति॥**

ಇನ್ನು पक्षे वर्तमान ಎಂಬುದರಿಂದ ಅಸಿದ್ಧದಲ್ಲಿಯ ಅತಿವ್ಯಾಪ್ತಿಯನ್ನು ನಿರಾಕರಿಸಲಾಯಿತು, ಅದರ ಅಭಿಪ್ರಾಯವೇ ಅಸಿದ್ಧಕ್ಕಿಂತ ಅತಿರಿಕ್ತ ವಾದುದು ಎಂದು ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ.

**अनध्यवसित लक्षणार्थ इत्यर्थः। प्रकृते दृश्यत्व हेतौ।**

ಅಂದರೆ ಅನಧ್ಯವಸಿತ ಲಕ್ಷಣಾರ್ಥ ಅಸಿದ್ಧಕ್ಕಿಂತ ಅತಿರಿಕ್ತವಾದದ್ದು ಎಂದರ್ಥ. ಇಲ್ಲಿ प्रकृते ಪದದ ಅರ್ಥ ದೃಶ್ಯತ್ವ ಹೇತುವಿನಲ್ಲಿ ಎಂದರ್ಥ.

**अयं भावः–**

**सर्वं अनित्यं सत्त्वात् इति हि अनध्यवसितस्य उदाहरणम्। तत्र सर्वस्यापि पक्षत्वेन निदर्शन अभावेन साध्य असहचरितत्वात् सत्व हेतोः प्रतीति अजनकत्वम्। दृश्यत्वस्य तु असत्वात् प्रतीति अजनकत्वम्। तथा च एवं उपपादक भेदेऽपि प्रतीति अजनकत्वं सत्व दृश्यत्व हेतोः समम्।**



**दृश्यत्व हेतोः असिद्ध् अतिरिक्तत्वं त्वया एव अभ्युपेतं इत्येवं असिद्ध अतिरिक्तत्वे सति प्रतीति अजनकत्वरूप साध्य असाधकत्वरूप अनध्यवसितलक्षणं प्रकृते दृश्यत्व हेतौ अपि अस्ति इति अनध्यवसितो भवति एव इति।**

ಇಲ್ಲಿ ಈ ಭಾವ ವಿರುತ್ತದೆ:

"सर्वं अनित्यं सत्त्वात्" ಎಂದು, ಒಂದು ಅನಧ್ಯವಸಿತ ದೋಷಗ್ರಸ್ತ ಹೇತುವಿನ ಉದಾಹರಣೆ. ಅಲ್ಲಿ ಎಲ್ಲವೂ ಪಕ್ಷ ವಾಗಿರುವದರಿಂದ, ನಿದರ್ಶನ ಇಲ್ಲದಾಗಿದೆ. ಅದರಂತೆ ಸಾಧ್ಯದ ಅಸಹಚರಿತವಾದ್ದರಿಂದ ಸತ್ವ ಹೇತುವು ಪ್ರತೀತಿ ಜನಕವಾಗುವದಿಲ್ಲ. ಹಾಗೆಯೆ ಪ್ರಸ್ತುತ ಮಿಥ್ಯಾತ್ವ ಅನುಮಾನದ ದೃಶ್ಯತ್ವ ಹೇತುವು ಅಸತ್ವವಾಗಿರುವದರಿಂದ ಸಾಧ್ಯದ ಪ್ರತೀತಿ ಜನಕ ವಾಗುವದಿಲ್ಲ. ಅದರಂತೆ, ಈ ರೀತಿಯಾಗಿ, ಸಮರ್ಥಿಸುವ ಪ್ರಕಾರದಲ್ಲಿ ಬೇಧವಿದ್ದರೂ, ಪ್ರತೀತಿ ಅಜನಕತ್ವವು ಸತ್ವ ಹಾಗೂ ದೃಶ್ಯತ್ವ ಹೇತುಗಳಿಗೆ ಸಮವಾಗಿದೆ. ಮತ್ತು ದೃಶ್ಯತ್ವ ಹೇತುವನ್ನು ,ಈಗಾಗಲೆ ಅಸಿದ್ಧಕ್ಕಿಂತ ಅತಿರಿಕ್ತವೆಂದು ತಾವೆ ಅಂದರೆ ಪರಪಕ್ಷದವರು ಒಪ್ಪೊಕೊಂಡಿರುತ್ತಾರೆ. ಅದರಂತೆ, ಅಸಿದ್ಧಿ ಅತಿರಿಕ್ತವಾಗಿದ್ದು ಪ್ರತೀತಿ ಅಜನಕತ್ವರೂಪ ಸಾಧ್ಯ ಅಸಾಧಕತ್ವರೂಪ ಅನಧ್ಯವಸಿತ ಲಕ್ಷಣವು ಪ್ರಕೃತ ದೃಶ್ಯತ್ವ ಹೇತುವಿನಲ್ಲಿ ಕೂಡ ಇದೆ. ಆದ್ದರಿಂದ ದೃಶ್ಯತ್ವ ಹೇತುವು ಅನಧ್ಯವಸಿತ ದೋಷಗ್ರಸ್ತವಾಯಿತು ತಾನೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**"सर्वं अनित्यं सत्त्वात्" इत्यादेः हेतोः साध्य असहचरितत्वात् प्रतीति अजनकत्वम्। दृश्यत्व तु असत्त्वात्। तथा च उपपादक भेदेऽपि प्रतीति अजनकत्वं समम्। दृश्यत्वस्य असिद्ध अतिरिक्तत्वं तु त्वया एव अभ्युपेतं इति अनध्यवसित लक्षणं प्रकृतेऽपि विद्यत इत्यर्थः।**

"सर्वं अनित्यं सत्त्वात्" ಎಂಬ ಮುಂತಾದ ಹೇತುಗಳಲ್ಲಿ ಸಾಧ್ಯ ಅಸಹಚರಿದಮೂಲಕ ಪ್ರತೀತಿ ಉಂಟಾಗುವದಿಲ್ಲ. ದೃಶ್ಯತ್ವ ಹೇತುವು ಅಸತ್ವವಾಗಿರುವದರಿಂದ ಅದು ಸಾಧ್ಯದ ಪ್ರತೀತಿ ಜನಕವಾಗುವದಿಲ್ಲ. ಅದರಂತೆ ಈ ಅನುಮಾನಗಳಲ್ಲಿ ಹೇತುವಿನ ಪ್ರತಿಪಾದಿಸುವ ಭೇದವಿದ್ದರೂ ಸಾಧ್ಯ ಪ್ರತೀತಿ ಅಜನಕತ್ವವು ಸಮಾವಾಗಿದೆ. ಹಾಗೂ ದೃಶ್ಯತ್ವ ಹೇತುವಿನ ಅಸಿದ್ಧ ಅತಿರಿಕ್ತತ್ವವನ್ನು ತಾವು ಈಗಾಗಲೆ ಒಪ್ಪೊಕೊಂಡಿದ್ದೀರಿ, ಹೀಗಾಗಿ ಪ್ರಕೃತ ದೃಶ್ಯತ್ವ ಹೇತುವಿನಲ್ಲಿ ಅನಧ್ಯವಸಿತ ಲಕ್ಷಣ ಇದ್ದೆ ಇದೆ ಎಂದರ್ಥ.

### ६.२.४.६ असिद्ध् अनध्यवसित लक्षणयोः भेदस्य समर्थनम्

## टीका

**असिद्धि बहिर्भावः अस्य कथं इति चेत्। इत्थं, यदा वादिप्रतिवादिनोः अन्यतररीत्या लिङ्ग अभावः तदा असिद्धिः। यदा सामर्थ्यं विघटनं तदा**

**अनध्यवसितः इति भेदः। प्रकृते तर्कस्य असिद्धि पुरस्कारेण प्रवृत्तेः दोषद्वयमपि। न च एवं सर्वत्र इति असङ्कीर्णता च सिद्ध इति।**

ಅನಧ್ಯವಸಿತ ದೋಷವು, ಅಸಿದ್ಧಿ ದೋಷಕ್ಕಿಂತ ಬೇರೆ ಅಥವಾ ಅತಿರಿಕ್ತವಾದ ದೋಷವೆಂದು ಹೇಗೆ ಹೇಳುತ್ತೀರಿ? ಅದು ಹೀಗಿರುತ್ತದೆ. ಯಾವಾಗ ವಾದಿಪ್ರತಿವಾದಿಗಳಲ್ಲಿ ಅನ್ಯತರರೀತ್ಯ ಒಬ್ಬರಲ್ಲೊಬ್ಬರಂತೆ ಲಿಂಗದ ಅಭಾವತೆ (ಅರ್ಥ ಅಥವಾ ಜ್ಞಾನ) ಇರುವದೋ ಅದು ಅಸಿದ್ಧಿ ಎನಿಸುತ್ತದೆ. ಯಾವಾಗ, ಸತ್ಯವಾದ ಲಿಂಗವಿದ್ದು ವ್ಯಾಪ್ತಿ ಸಿದ್ಧವಾಗದಿರೋಣ ಅಥವಾ ಇಲ್ಲದಿರುವದು ಅನಧ್ಯವಸಿತ. ಹೀಗೆ ಅಸಿದ್ಧಿ ಮತ್ತು ಅನಧ್ಯವಸಿತ ದೋಷಗಳಲ್ಲಿ ಭೇದವಿರುತ್ತದೆ.

ಪ್ರಕೃತದಲ್ಲಿ, ತರ್ಕದ ಅಸಿದ್ಧಿ ಪುರಸ್ಕಾರದ ಪ್ರವೃತಿಯಿಂದ, ದೃಶ್ಯತ್ವ ಹೇತುವಿಗೆ ಅಸಿದ್ಧಿ ಹಾಗೂ ಅನಧ್ಯವಸಿತ ಎಂದು ದೋಷದ್ವಯಗಳೆರಡೂ ಉಂಟಾದರೂ, ಎಲ್ಲ ಕಡೆಗೂ ಹೀಗೆ ಇರುವದಿಲ್ಲ. ಅದರಿಂದ ದೋಷದ್ವಯಗಳಲ್ಲಿಯ ಅಸಂಕೀರ್ಣತಾ (ಬೇರೆತನಾ ಅಥವಾ ಸಾಂಕರ್ಯವಲ್ಲದ್ದು) ಸಿದ್ಧವಾಗುತ್ತದೆ.

## टिप्पणीनाम् विशेषार्थानि

### ॥ असिद्धि इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**शङ्कते – असिद्धि इति॥**

ಅನಧ್ಯವಸಿತ ದೋಷವು, ಅಸಿದ್ಧಿ ದೋಷಕ್ಕಿಂತ ಬೇರೆ ಅಥವಾ ಅತಿರಿಕ್ತವಾದ ದೋಷವೆಂದು ಹೇಗೆ ಹೇಳುತ್ತೀರಿ? ಎಂದು ಈ ಟೀಕಾವಾಕ್ಯ ಶಂಕಿಸುತ್ತದೆ.

### ॥ अस्य इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**अनध्यवसितत्वरूप दोषस्य इत्यर्थः।**

**असिद्धे चाक्षुषत्व हेतौ, अनध्यवसिते सत्व हेतौ च उभयत्रापि साध्य प्रतीति अजनकत्वरूप साध्य असाधकत्वरूप साम्यात्, न अयं अनध्यवसितरूपः दोषः असिद्धे पृथग् वाच्य इत्याशयः।**

ಅಂದರೆ, ಇಲ್ಲಿ, ಅಸ್ಯ ಪದದ ಅರ್ಥ, ಅನಧ್ಯವಸಿತತ್ವರೂಪ ದೋಷದ ಎಂದರ್ಥ.

"शब्दं नित्यं चाक्षुषत्वात्" ಎಂಬ ಅನುಮಾನದ ಅಸಿದ್ಧ ದೋಷಗ್ರಸ್ತ ಚಾಕ್ಷುಷತ್ವಾತ್ ಹೇತುವಿನಲ್ಲಿ, ಮತ್ತು "सर्वं अनित्यं सत्त्वात्" ಎಂಬ ಅನುಮಾನದ ಅನಧ್ಯವಸಿತ ದೋಷಗ್ರಸ್ತ ಸತ್ತ್ವಾತ್ ಹೇತುವಿನಲ್ಲಿ, ಉಭಯರುಗಳಲ್ಲಿ, ಸಾಧ್ಯ ಪ್ರತೀತಿ ಅಜನಕತ್ವರೂಪ ಸಾಧ್ಯ ಅಸಾಧತ್ವರೂಪದ ಸಾಮ್ಯತೆ ಇರುವದರಿಂದ, ಈ ಅನಧ್ಯವಸಿತರೂಪ ದೋಷವನ್ನು ಅಸಿದ್ಧ ದೋಷಕ್ಕಿಂತ ಬೇರೆ ಹೇಳಬಾರದು, ಎಂದು ಆಶಯವಿರುತ್ತದೆ.



### ॥ असिद्धि बहिर्भावः अस्य कथं इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**ननु यद्यपि मया असिद्ध अतिरिक्त्या इष्यते। तथाऽपि असाधकत्वं तु इष्यते। त्वया तु असाधकत्व अङ्गीकारेऽपि असिद्धि बहिर्भावः न इष्यते।**

**तथा च कथं अनध्यवसितता इति शङ्कते – असिद्धि बहिर्भावः अस्य कथं इति॥**

ಇನ್ನು, ಅನಧ್ಯವಸಿತ ದೋಷವು ಅಸಿದ್ಧದೋಷಕ್ಕಿಂತ ಅತಿರಿಕ್ತ ಎಂದೂ ಮತ್ತು ಸಾಧ್ಯ ಅಸಾಧಕ ಎಂದು ನಮ್ಮ ಅನ್ನಿಸಿಕೆ. ತಾವಾದರೂ, ಅನಧ್ಯವಸಿತ ದೋಷವು ಸಾಧ್ಯ ಅಸಾಧಕವೆಂದು ಅಂಗೀಕರಿಸಿದರೂ, ಅದು ಅಸಿದ್ಧಿಕ್ಕಿಂತ ಬೇರೆ ಎಂದು ತಮ್ಮ ಅನಿಸಿಕೆಯಾಗಿರುವದಿಲ್ಲ.

ಇದರ ಹಿನ್ನೆಲೆಯಲ್ಲಿ, ಅನಧ್ಯವಸಿತವು ಅಸಿದ್ಧಿಕ್ಕಿಂತ ಬೇರೆ ಎಂದು ಹೇಗೆ ಹೇಳುವದು? ಎಂದು ಈ ಟೀಕಾವಾಕ್ಯ ಶಂಕಿಸುತ್ತದೆ.

**यद्वा, ननु असिद्धि बहिर्भावः अस्य कथं इत्यादेः ग्रन्थस्य अयं अर्थः–**

ಅಥವಾ "असिद्धि बहिर्भावः अस्य कथं" ಎಂಬ ಟೀಕಾವಾಕ್ಯದ ಅರ್ಥ ಹೀಗಿರುತ್ತದೆ:

**ननु पक्ष एव वर्तमानः साध्य असाधकः अनध्यवसितः इति लक्षणे, अनध्यवसितस्य असिद्धि दूषकता बीजात्, पक्षे अवर्तमानत्वात् भिन्नं, पक्षात् अन्यत्र अवर्तमानत्वं दूषकता बीजं सिद्ध्यति। एवकार त्यागे तु न सिद्ध्यति। तथा हि–**

ಇನ್ನು "पक्ष एव वर्तमानः साध्य असाधकः अनध्यवसितः" ಎಂದು ಅನಧ್ಯವಸಿತದ ಲಕ್ಷಣದಲ್ಲಿ, ಅನಧ್ಯವಸಿತದ ಅಸಿದ್ಧಿ ದೂಷಣೆಯ ಮೂಲಕಾರಣ, ಪಕ್ಷದಲ್ಲಿ ಇಲ್ಲದಾದ್ದರಿಂದ ಭಿನ್ನ ಎಂದು, ಇದು ಪಕ್ಷಬಿಟ್ಟು ಅನ್ಯದಲ್ಲಿ ಇರದೆ ಇರುವದು, ಎಂಬುದರಿಂದ ದೂಷಣೆಯ ಮೂಲಕಾರಣವನ್ನು ಸಿದ್ಧಿಸುತ್ತದೆ. ಆದರೆ, एवकार ವನ್ನು ತ್ಯಜಿಸಿದಲ್ಲಿ ಅದು ಸಿದ್ಧವಾಗುವದಿಲ್ಲ. ಇದನ್ನು ಹೀಗೆ ವಿವರಿಸ ಬಹುದು:

**अनध्यवसितस्य किम् पक्षे वर्तमानत्व दूषकता बीजम्? किम् वा प्रतीति अजनकत्वरूपं साध्य असाधकत्वम्? यद्वा पक्षे वर्तमानत्व विशिष्टं साध्य असाधकत्वम्?**

ಇಲ್ಲಿ, ಅನಧ್ಯವಸಿತದ ಪಕ್ಷದಲ್ಲಿ ಇರೋಣವು ದೂಷಣೆಯ ಮೂಲ ಕಾರಣವೊ? ಅಥವಾ ಪ್ರತೀತಿ ಅಜನಕತ್ವರೂಪ ಸಾಧ್ಯದ ಅಸಾಧಕತ್ವವೊ? ಅಥವಾ ಪಕ್ಷದಲ್ಲಿ ಇರಬೇಕೆಂಬ ವಿಶಿಷ್ಟ ಸಾಧ್ಯ ಅಸಾಧಕತ್ವವೊ?

**न आद्यः। तस्य सत् अनुमान साधारणतया गुणत्वेन दूषकता बीजत्व अभावात्। न द्वितीयः तस्य असिद्ध साधारण्यात्। न तृतीयः "इदं साध्य प्रमितिजनकत्वं न भवति, पक्षे वर्तमानत्वे सति साध्य प्रतीति अजनकत्वात्" इति असाधकता अनुमाने व्यर्थविशेषणत्वात्। तस्मात् एवकारत्यागे दूषकता भेद असिद्धिः।**

ಇನ್ನು ಮೊದಲನೆಯ ವಿಕಲ್ಪವನ್ನು ಹೇಳುವದು ಸರಿಯಲ್ಲ. ಅದು ಸತ್ಯವಾದ ಅನುಮಾನದ ಸಾಧಾರಣವಾದ ಗುಣತ್ವವಾಗುವದರಿಂದ ಅದು ದೂಷಣದ ಮೂಲಕಾರಣವೆನಿಸಲಾರದು. ಇನ್ನು ಎರಡನೆ ವಿಕಲ್ಪವನ್ನು ಹೇಳುವದು ಸರಿಯಲ್ಲ. ಏಕೆಂದರೆ ಅದು ಕೂಡ ಅಸಿದ್ಧಿಯ

ಸಾಧಾರಣ ಲಕ್ಷಣವಾಗಿರುತ್ತದೆ. ಇನ್ನು ಮೂರನೆ ವಿಕಲ್ಪಕೂಡ ಸರಿ ಎನಿಸುವದಿಲ್ಲ. ಏಕೆಂದರೆ "ಇದು ಸಾಧ್ಯದ ಪ್ರಮಿತಿಯನ್ನು ಹುಟ್ಟಿಸುವದಿಲ್ಲ, ಪಕ್ಷದಲ್ಲಿದ್ದರೂ ಸಾಧ್ಯ ಪ್ರತೀತಿಯನ್ನುಂಟು ಮಾಡಲಾರದು" ಎಂದು ಸಾಧ್ಯ ಅಸಾಧಕ ಅನುಮಾನದಲ್ಲಿ, ಇದು ವ್ಯರ್ಥವಿಶೇಷಣವಾಗುವದು. ಆದ್ದರಿಂದ एवकार ವನ್ನು ತ್ಯಜಿಸಿದಲ್ಲಿ ದೂಷಣದ ಭೇದ ಸಿದ್ಧಿಸುವದಿಲ್ಲ.

**न च दूषकता बीजभेदं विना हेत्वाभास भेद सिद्धिः इति अनध्यवसितस्य असिद्धि बहिर्भावः न युक्त इति एवकारः कर्तव्यः। तथा च दृश्यत्वस्य न अनध्यवसितता। विपक्षेऽपि वर्तमानत्वस्य तथा उक्तत्वात् इति शङ्कते–असिद्धिबहिर्भावोऽस्य इति॥**

ಹೀಗೆ ದೂಷಣದ ಮೂಲಕಾರಣದ ಭೇದವಿಲ್ಲದೆ, ಇಲ್ಲಿ ಹೇತ್ವಾಭಾಸದ ಭೇದ ಸಿದ್ಧಿಸುವದಿಲ್ಲ. ಆದ್ದರಿಂದ ಅನಧ್ಯವಸಿತದ ಅಸಿದ್ಧಿಕ್ಕಿಂತ ಬೇರೆಯದು ಎಂದು ಹೇಳುವದು ಸರಿಯಲ್ಲ. ಅದಕ್ಕೆ ಅನಧ್ಯವಸಿತ ಲಕ್ಷಣದಲ್ಲಿ एवकार ವನ್ನು ಇಡಲೇ ಬೇಕು. ಅದರಂತೆ, ದೃಶ್ಯತ್ವಕ್ಕೆ ಅನಧ್ಯವಸಿತ ದೋಷವನ್ನು ಹೇಳಲು ಬರುವದಿಲ್ಲ. ಏಕೆಂದರೆ, ವಿಪಕ್ಷದಲ್ಲಿಯೂ ದೃಶ್ಯತ್ವವಿದೆ ಎಂಬ ಸಿದ್ಧಾಂತಿಗಳು ಹೇಳಿರುತ್ತಾರೆ. ಈ ಹಿನ್ನೆಲೆಯಲ್ಲಿ ಟೀಕಾವಾಕ್ಯ ಅಸಿದ್ಧಕ್ಕಿಂತ ಅನಧ್ಯವಸಿತ ಬೇರೆ ಎನ್ನುವದು ಹೇಗೆ? ಎಂದು ಶಂಕಿಸುತ್ತದೆ.

## ॥ इत्थं इति ॥

<u>ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:</u>

**किम्, दृश्यत्व हेतोः असिद्धि बहिर्भावः नास्ति इत्युच्यते। किं वा सामान्यतः अनध्यवसितमात्रस्य।**

ಹಾಗೆಂದರೆ, ತಾವು (ಪರಪಕ್ಷದವರು) ದೃಶ್ಯತ್ವ ಹೇತುವಿಗೆ ಅಸಿದ್ಧಿ ದೋಷಕ್ಕಿಂತ ಬೇರೆಯಾದ ಅನಧ್ಯವಸಿತ ಎಂಬ ದೋಷ ಇರುವದಿಲ್ಲ ಎಂದು ಹೇಳುತ್ತೀರೊ? ಅಥವಾ ಸಾಮಾನ್ಯವಾಗಿಯೆ ಅನಧ್ಯವಸಿತ ಮತ್ತು ಅಸಿದ್ಧಿ ದೋಷಗಳಲ್ಲಿ ಭೇದ ಇರುವದಿಲ್ಲವೆಂದು ತಮ್ಮ ಅಭಿಪ್ರಾಯವೊ?

**न आद्यः, त्वया तस्य तत्र अंङ्गीकृतत्वेन त्वत् अङ्गीकारे कारणस्य परीत्या दूषणं अभिधता, त्वया वक्तव्यत्वेन मां प्रति तत्प्रश्न अयोगात्।**

ಮೊದಲನೆಯದಾದರೆ ಅದು ಸರಿಯಲ್ಲ. ತಾವೇ ಅಲ್ಲಿ ಅಂದರೆ ದೃಶ್ಯತ್ವ ಹೇತುವಿನಲ್ಲಿ ಅಸಿದ್ಧಿದೋಷವನ್ನು ಅಂಗೀಕರಿಸಿಲ್ಲ. ಆದ್ದರಿಂದ ತಾವು ಅಂಗೀಕರಿಸಿದ ಕಾರಣ, ಪರಪಕ್ಷದವರಂತೆ ದೂಷಣವನ್ನು ಹೇಳುವದನ್ನು, ತಾವೆ ಹೇಳಿರುವದರಿಂದ, ಅಂತಹದನ್ನು ನಮ್ಮ ಪ್ರತಿ ಕೇಳುವದು ಅಯೋಗ್ಯವಾಗಿರುತ್ತದೆ.

**असाधकत्वस्य च त्वां प्रति साधनात् द्वितीयेऽपि, किम् लक्षण भेदो नास्ति इति उच्यते, किं वा उदाहरण भेदो नास्ति इति विकल्पं हृदि निधाय आद्यं दूषयति– इत्थं इति॥**

ಇನ್ನು, ಸಾಧ್ಯ ಅಸಾಧಕತ್ವವನ್ನು ತಮ್ಮ (ಪರಪಕ್ಷದವರ) ಪ್ರತಿ ಸಾಧಿಸುತ್ತಿರುವಾಗ, ಏಕೆ ಅನಧ್ಯವಸಿತ ಹಾಗೂ ಅಸಿದ್ಧಿ ದೋಷಗಳಲ್ಲಿ ಭೇದವೇ ಇಲ್ಲವೋ ಅಥವಾ ದೃಶ್ಯತ್ವ



ಹೇತುವಿನಲ್ಲಿ ಮಾತ್ರ ಭೇದವಿಲ್ಲವೆಂದೊ? ಎಂಬ ವಿಕಲ್ಪಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಇಲ್ಲಿ ಮೊದಲನೆಯ ವಿಕಲ್ಪವನ್ನು ಟೀಕಾಕೃತ್ಪಾದರು ದೂಷಿಸುತ್ತಾರೆ.

**यद्वा, परिहरति– इत्थं इति॥**

ಅಥವಾ ಮೇಲಿನ ಶಂಕೆಯ ಪರಿಹಾರ ಈ ಟೀಕಾವಾಕ್ಯ ಹೀಗೆ ಮಾಡುತ್ತದೆ.

**वादिप्रतिवादिनोः अन्यतररीत्या हेतुस्वरूप अभावः असिद्धस्य दूषकता बीजम्। साध्य प्रतीति जनन सामर्थ्य अभावः तु अनध्यवसितस्य दूषकता बीजम् इति भेद सिद्धिः इति। अन्यतर असिद्ध्यादौ अपि दूषकता बीज अनुगत्यर्थं वादिप्रतिवादिनोः अन्यतररीत्या इत्युक्तम्।**

ವಾದಿಪ್ರತಿವಾದಿಗಳ ಪರಸ್ಪರ ಅನ್ಯತರರೀತಿಯಾಗಿ ಹೇತುಸ್ವರೂಪದ ಅಭಾವತೆಯನ್ನು ಪ್ರತಿಪಾದಿಸುವದು, ಅಸಿದ್ಧದ ದೂಷಣದ ಮೂಲಕಾರಣವಾದರೆ, ಸಾಧ್ಯದ ಪ್ರತೀತಿ ಉಂಟಾಗುವ ಸಾಮರ್ಥ್ಯ ಅಭಾವತೆಯು ಅನಧ್ಯವಸಿತದ ದೂಷಣದ ಮೂಲಕಾರಣವಗಿರುತ್ತದೆ, ಎಂಬ ಅಸಿದ್ಧಿ ಮತ್ತು ಅನಧ್ಯವಸಿತಗಳಲ್ಲಿಯ ಭೇದವಿರುತ್ತದೆ. ಇಲ್ಲಿ ಅನ್ಯತರ ಅಸಿದ್ಧ್ಯಾದಿಗಳಲ್ಲಿ ಕೂಡ ದೂಷಣದ ಮೂಲಕಾರಣ ಅಂತರ್ಗತ ಮಾಡಿಕೊಳ್ಳಲು वादिप्रतिवादिनोः अन्यतररीत्या ಎಂದು ಹೇಳಲಾಗಿದೆ

## ॥ यदा इति ॥

<u>ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:</u>

**असति लिङ्गे ज्ञानजनकता लक्षण सामर्थ्यं वैधुर्यं असिद्ध लक्षणं इत्याह इति–यदा इति॥**

ಅಸತ್ಯವಾದ ಲಿಂಗದಲ್ಲಿ ಜ್ಞಾನಜನಕ ಲಕ್ಷಣ ಸಾಮರ್ಥ್ಯ ಇಲ್ಲದಿರುವಿಕೆ ಅದು ಅಸಿದ್ಧಿ ಲಕ್ಷಣವೆಂದು ಪ್ರತಿಪಾದಿಸಲು ಈ ಟೀಕಾವಾಕ್ಯವಿರುತ್ತದೆ.

## ॥ अन्यतररीत्या इति ॥

<u>ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:</u>

**अन्यतर असिद्धि संग्रहाय वादिप्रतिवादिनोः अन्यतररीत्या इत्युक्तम्। तथा च वादिप्रतिवादिनोः उभयोरपि रीत्या लिङ्ग अभावः तयोः अन्यतररीत्या च लिङ्ग अभाव इति व्याख्येयम्।**

ಇಲ್ಲಿ ಅನ್ಯತರ (ಒಂದರಲ್ಲೊಂದು) ಅಸಿದ್ಧಿಯನ್ನು ಸಂಗ್ರಹಿಸಲು वादिप्रतिवादिनोः अन्यतररीत्या ಎಂದು ಹೇಳಲಾಗಿದೆ. ಅದರಂತೆ, ವಾದಿಪ್ರತಿವಾಗಿಗಳಿಗೆ ಉಭಯರಿಗೂ ಅವರ ರೀತಿಯಲ್ಲಿ ಲಿಂಗ ಅಭಾವವು, ಅವರಲ್ಲಿಯ ಅನ್ಯತರರೀತ್ಯಾ ಲಿಂಗ ಅಭಾವ ಎಂದರ್ಥ.

## ॥ यदा सामर्थ्यं विघटनं इति ॥

<u>ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:</u>

**सामर्थ्यं व्याप्तिः। सत्यपि लिङ्गे व्याप्ति विघटनं इत्यर्थः। सत्वहेतोः पक्षीभूते सर्वस्मिन् विद्यमानत्वेऽपि निदर्शन अभावेन व्याप्ति विघटनं अस्ति इति द्रष्टव्यम्।**

**तथा च पक्षधर्मताया अभावेन प्रतीति अजनकत्वं असिद्धिः। सत्यपि लिङ्गे व्याप्ति अभावेन प्रतीति अजनकतायां अनध्यवसितत्वम् इति परिहार अभिप्रायः।**

ಇಲ್ಲಿ सामर्थ्य ಪದದ ಅರ್ಥ ವ್ಯಾಪ್ತಿ ಎಂದು ತೆಗೆದುಕೊಳ್ಳಬೇಕು. ಸತ್ಯವಾದ ಲಿಂಗ (ಅರ್ಥ ಅಥವಾ ಜ್ಞಾನ) ದಲ್ಲಿ ವ್ಯಾಪ್ತಿ ಸಿದ್ಧವಾಗದಿರೋಣ ಎಂದರ್ಥ. ಇನ್ನು "सर्वं अनित्यं सत्त्वात्" ಎಂಬ ಅನುಮಾನದ ಸತ್ವ ಹೇತುವಿನ ಪಕ್ಷದಲ್ಲಿ ಎಲ್ಲವೂ ಇದ್ದರೂ ಕೂಡ ನಿದರ್ಶನ ಅಭಾವತೆಯಿಂದ ಅಲ್ಲಿ ವ್ಯಾಪ್ತಿ ವಿಘಟನೆ ಇದ್ದೆ ಇದೆ ಅಂದರೆ ವ್ಯಾಪ್ತಿಯನ್ನು ಸಿದ್ಧಿಸಲು ಬರುವದಿಲ್ಲ ಎಂದು ತಿಳಿಯಬೇಕು. ಹಾಗೆಯೆ, "शब्दं नित्यं चाक्षुषत्वात्" ಎಂಬ ಅನುಮಾನದ ಚಾಕ್ಷುಶತ್ವ ಹೇತುವಿನ ಪಕ್ಷಧರ್ಮದ ಅಭಾವತೆಯಿಂದ ಪ್ರತೀತಿ ಅಜನಕತ್ವವಾಗುವದೆಂದು ಅಲ್ಲಿ ಅಸಿದ್ಧಿ ಎಂದು ತಿಳಿಯಬೇಕು.

ಅಂದರೆ ಇಲ್ಲಿ ಸತ್ಯವಾದ ಲಿಂಗದಲ್ಲಿ ವ್ಯಾಪ್ತಿ ಅಭಾವತೆಯಿಂದ ಪ್ರತೀತಿ ಅಜನಕತ್ವವಾಗುವದನ್ನು ಅನಧ್ಯವಸಿತ ಎಂದು ಪರಿಹಾರ ಅಭಿಪ್ರಾಯವಿರುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**सत्यपि लिङ्गे ज्ञानजनकता लक्षण सामर्थ्य वैधुर्यं अनध्यवसित लक्षणं इत्याह–यदा सामर्थ्य इति॥**

ಸತ್ಯವಾದ ಲಿಂಗದಲ್ಲಿ ಜ್ಞಾನ ಹುಟ್ಟಿಸುವ ಲಕ್ಷಣ ಸಾಮರ್ಥ್ಯವಿಲ್ಲದ್ದು ಅನಧ್ಯವಸಿತ ಲಕ್ಷಣ ಎಂದು ಪ್ರತಿಪಾದಿಸಲು ಈ ಟೀಕಾವಾಕ್ಯವಿರುತ್ತದೆ.

## ॥ भेद इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु एवं अपि असिद्धे दृश्यत्व हेतौ, असिद्ध अतिरिक्तत्वगर्भोक्त अनध्यवसित लक्षण अभावात् कथं अनध्यवसितत्वं तस्य इति चेत् न।**

**असिद्ध अतिरिक्तः साध्य असाधक इति लक्षणस्य, असिद्ध प्रयुक्त उक्त असाधकता भिन्न असाधकता यस्य हेतोः सः अनध्यवसित इत्यत्र तात्पर्यात् – भेद इति॥**

**अनध्यवसितत्वरूप दोषस्य असिद्धेः भेदः बहिर्भाव इत्यर्थः। तथा च पृथग् वाच्य एव इति भाव इति सम्प्रदायः।**

ಹೀಗಿದ್ದರೂ ಅಸಿದ್ಧವಾದ ದೃಶ್ಯತ್ವ ಹೇತುವಿನಲ್ಲಿ, ಅಸಿದ್ಧ ಅತಿರಿಕ್ತತ್ವವಾದ ಅನಧ್ಯವಸಿತ ಲಕ್ಷಣ ಇಲ್ಲವಾದ್ದರಿಂದ ಅದಕ್ಕೆ ಅನಧ್ಯವಸಿತತ್ವವು ಹೇಗೆ ಉಂಟಾಗುತ್ತದೆ? ಹೀಗೆ ಹೇಳುವದು ಸರಿಯಲ್ಲ.

ಇಲ್ಲಿ, ಅಸಿದ್ಧ ಅತಿರಿಕ್ತ ಸಾಧ್ಯ ಅಸಾಧಕ ಎಂಬ ಲಕ್ಷಣದ, ಅಸಿದ್ಧ ಪ್ರಯುಕ್ತ ಹೇಳಿದ ಸಾಧ್ಯ ಅಸಾಧಕತಾ, ಭಿನ್ನ ಸಾಧ್ಯ ಸಾಧಕತಾ ಯಾವ ಹೇತುವಿಗೆ ಇದೆಯೊ ಅದು ಅನಧ್ಯವಸಿತ ಎಂದು ತಾತ್ಪರ್ಯವಾಗಿರುತ್ತದೆ ಎಂಬ ಭೇದವನ್ನು ಈ ಟೀಕಾವಾಕ್ಯ ತಿಳಿಸುತ್ತದೆ.

ಅನಧ್ಯವಸಿತತ್ವರೂಪ ದೋಷದ ಅಸಿದ್ಧಕ್ಕಿಂತ ಭೇದವೇ ಅಸಿದ್ಧದ ಬಹಿರ್ಭಾವ ಎಂದರ್ಥ. ಅದರಂತೆ, ಅನಧ್ಯವಸಿತ ಮತ್ತು ಅಸಿದ್ಧಿ ದೋಷಗಳನ್ನು ಪ್ರತ್ಯೇಕವಾಗಿ ಪ್ರತಿಪಾದಿಸುವದೇ ಸಂಪ್ರದಾಯವಿರುತ್ತದೆ.



## ॥ प्रकृते तर्कस्य इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**प्रकृते इति–प्रकृते दृश्यत्व हेतौ इति ।**

ಇಲ್ಲಿ ಪ್ರಕೃತದಲ್ಲಿ ಅಂದರೆ ದೃಶ್ಯತ್ವ ಹೇತುವಿನಲ್ಲಿ ಎಂದರ್ಥ.

**दोषद्वयम् इति–असिद्धिः अनध्यवसितश्च इति दोषद्वयम्।**

ಇಲ್ಲಿ, ದೋಷದ್ವಯ ಎಂದರೆ ಅಸಿದ್ಧಿ ಮತ್ತು ಅನಧ್ಯವಸಿತ ಎಂದರ್ಥ.

**जगतोऽभावे अनुमानस्य दृश्यत्वस्य तदङ्गभूताया व्याप्तेः च अभावः इति तर्कस्य असिद्धि पुरस्कारेण प्रवृत्तेः लिङ्ग अभावेन असिद्धि प्रयुक्ता असाधकता अस्ति। व्याप्ति अभाव प्रयुक्ता च असाधकता अस्ति इति दोषद्वयम्।**

ಇಲ್ಲಿ, ಜಗತೋऽಭಾವೆ ಅನುಮಾನದ ದೃಶ್ಯತ್ವವು ಅದರ ಅಂಗಭೂತವಾದ ವ್ಯಾಪ್ತಿಯಂತೆ ಅದೂ ಕೂಡ ಇಲ್ಲದಾಗುತ್ತದೆ ಎಂಬ ತರ್ಕದ ಅಸಿದ್ಧಿ ಪುರಸ್ಸರವಾಗಿ ಪ್ರವೃತ್ತವಾದ ಲಿಂಗದ ಅಭಾವತೆಯಿಂದ, ಅಸಿದ್ಧ ಪ್ರಯುಕ್ತವಾಗಿ ಸಾಧ್ಯದ ಅಸಾಧಕತೆ ಇರುತ್ತದೆ. ಇದು ಅಸಿದ್ಧದೋಷವೆನಿಸುವದು. ಇನ್ನು ಸಾಧ್ಯ ಮತ್ತು ಹೇತುವಿನಲ್ಲಿಯ ವ್ಯಾಪ್ತಿಯ ಅಭಾವತೆಯ ಪ್ರಯುಕ್ತ ಕೂಡ ಸಾಧ್ಯ ಅಸಾಧಕತೆ ಇರುತ್ತದೆ. ಇದು ಅನಧ್ಯವಸಿತದೋಷವೆನಿಸುತ್ತದೆ. ಹೀಗೆ ದೋಷದ್ವಯಗಳಿರುತ್ತವೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**न द्वितीयं इत्याह– प्रकृते तर्कस्य इति॥**

ಇಲ್ಲಿ ಮೇಲೆ ನಮೂದಿಸಿದ ವಿಕಲ್ಪಗಳಲ್ಲಿಯ ಎರಡನೆ ವಿಕಲ್ಪವನ್ನು ಈ ಟೀಕಾವಾಕ್ಯ ನಿರಾಕರಿಸುತ್ತದೆ.

**दृश्यत्व अनुमान असाधकता साधक तर्कस्य असिद्धि पुरस्कारेण प्रवृत्तेः दोषद्वयम्।**
**"सर्वं अनित्यं सत्वात्" इत्यादौ तु असाधकत्वं न असिद्धि पुरस्कारेण प्रवर्तत इति तत्र अनध्यवसितत्वमेव अस्ति न तु असिद्धिः इति उदाहरण भेद सिद्धिः इत्यर्थः।**

ಇಲ್ಲಿ, ದೃಶ್ಯತ್ವ ಅನುಮಾನದ ಅಸಾಧಕತೆಯು ಸಾಧಕ ತರ್ಕದ ಅಸಿದ್ಧಿ ಪುರಸ್ಕಾರದ್ವಾರಾ ಪ್ರವೃತ್ತವಾಗಿದೆ. ಆದ್ದರಿಂದ ಇಲ್ಲಿ ಅಸಿದ್ಧಿ ಹಾಗೂ ಅನಧ್ಯವಸಿತ ಎರಡೂ ದೋಷಗಳಿರುತ್ತವೆ. ಇನ್ನು "सर्वं अनित्यं सत्वात्" ಎಂದು ಮುಂತಾದವುಗಳಲ್ಲಿ ಸಾಧ್ಯದ ಅಸಾಧಕತ್ವವು ಅಸಿದ್ಧಿ ಪುರಸ್ಕಾರದ ಮೂಲಕ ಪ್ರವರ್ತವಾಗಿರುವದಿಲ್ಲ. ಆದ್ದರಿಂದ ಅಲ್ಲಿ ಅಸಿಧ್ಯವಸಿತ ಮಾತ್ರ ಇರುತ್ತದೆ, ಅಸಿದ್ಧಿ ಇಲ್ಲ. ಹೀಗೆ ಉದಾಹರಣ ಭೇದ ಸಿದ್ಧವಾಗುತ್ತದೆ ಎಂದರ್ಥ.

**यद्वा, ननु अनध्यवसित दूषकता बीजं हेतुस्वरूप असत्त्व विनापि सिद्ध्यति न वा। आद्ये प्रकृतेऽपि तथैव सिद्धिः उपपत्तेः अनध्यवसित एव स्यात्। न तु असिद्ध इति दोषद्वय अनुपपत्तिः।**

ಅಥವಾ, ಅನಧ್ಯವಸಿತ ದೂಷಣದ ಮೂಲಕಾರಣ, ಹೇತುಸ್ವರೂಪದ ಅಸತ್ಯತೆಯ ವಿನಾ ಕೂಡ ಸಿದ್ಧಿಸುತ್ತದೊ ಅಥವ ಇಲ್ಲವೊ?

ಮೊದಲನೆಯದಾದರೆ, ಪ್ರಕೃತದಲ್ಲಿ ಕೂಡ ಅಲ್ಲಿಯೆ ಸಿದ್ಧಿ ಉಂಟಾಗುತ್ತಿರುವಾಗ, ಅಲ್ಲಿ ಅನಧ್ಯವಸಿತವೇ ಉಂಟಾಗುತ್ತದೆ ವಿನಹಾ ಅಸಿದ್ಧಿ ಅಲ್ಲಿ. ಆದ್ದರಿಂದ ಇಲ್ಲಿ ದೋಷದ್ವಯಗಳಿಗೆ ಆಸ್ಪದವಿರುವದಿಲ್ಲ.

**द्वितीये असिद्धि रहितस्य अनध्यवसित उदाहरणस्य अभावात् साङ्कर्यं इत्यत आह–प्रकृत इति॥**

ಎರಡನೆ ವಿಕಲ್ಪದಲ್ಲಿ, ಅಸಿದ್ಧವಲ್ಲದ ಅನಧ್ಯವಸಿತದ ಉದಾಹರಣದ ಅಭಾವತೆಯಲ್ಲಿ ಸಾಂಕರ್ಯಕ್ಕೆ ಆಸ್ಪದ ಉಂಟಾಗುತ್ತದಲ್ಲ ಎಂಬ ಶಂಕೆಯನ್ನು ನಿರಾಕರಿಸಲು ಈ ಟೀಕಾವಾಕ್ಯವಿರುತ್ತದೆ.

**प्रकृत अनुमाने अनध्यवसित दूषकता बीजं हेतु स्वरूप असत्त्वं विना न सिद्ध्यति इति दोषद्वयम्। "सर्वं अनित्यं सत्त्वात्" इत्यादौ न तथा इति न सङ्कीर्णता इति।**

ಪ್ರಕೃತ ಅನುಮಾನದಲ್ಲಿ ಅನಧ್ಯವಸಿತ ದೂಷಣದ ಮೂಲಕಾರಣ ಹೇತುಸ್ವರೂಪದ ಅಸತ್ಯತ್ವವಿನಾ ಸಿದ್ಧವಾಗುವದಿಲ್ಲ ಆದ್ದರಿಂದ ಇಲ್ಲಿ ದೋಷದ್ವಯಗಳು ಸಂಭವಿಸುತ್ತವೆ. ಆದರೆ, "सर्वं अनित्यं सत्त्वात्" ಮುಂತಾದವುಗಳಲ್ಲಿ, ಹಾಗೆ ಇರುವದಿಲ್ಲ. ಆದ್ದರಿಂದ ಸಾಂಕರ್ಯಕ್ಕೆ ಆಸ್ಪದ ವಿರುವದಿಲ್ಲ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**उदाहरण भेदो नास्ति इति प्रश्न अभिप्रायः इत्यत आह– प्रकृत इति॥**

ಅಸಿದ್ಧಿ ಹಾಗೂ ಅನಧ್ಯವಸಿತಗಳಲ್ಲಿ ಉದಾಹರಣದ ಭೇದ ಇರುವದಿಲ್ಲ ಎಂಬ ಅಭಿಪ್ರಾಯದ ಉತ್ತರರೂಪವಾಗಿ ಈ ಟೀಕಾವಾಕ್ಯವಿರುತ್ತದೆ.

**यद्यपि प्रकृते तर्क पुरस्कारेण प्रवृत्तेः दोषद्वयम्। तथापि सर्वत्र तर्कपुरस्कारेण अनध्यवसितस्य अप्रवृत्त्या तत्र अनध्यवसितमात्र प्राप्त्या असङ्कीर्ण उदाहरणता च सिद्ध इति।
यद्यपि तथापि इति अध्याहारेण योजनीयम्।**

ಪ್ರಕೃತದಲ್ಲಿ ತರ್ಕ ಪುರಸ್ಕಾರದ ಮೂಲಕ ಪ್ರವೃತ್ತಿ ಇರುವದರಿಂದ ದೃಶ್ಯತ್ವ ಅನುಮಾನದಲ್ಲಿ ದೋಷದ್ವಯಗಳು ಕಂಡುಬಂದರೂ, ಎಲ್ಲಕಡೆ ತರ್ಕ ಪುರಸ್ಕಾರದ ಮೇರೆಗೆ ಅನಧ್ಯವಸಿತ ದೋಷದ ಪ್ರವೃತ್ತಿ ಇಲ್ಲವಾದ್ದರಿಂದ ಅಲ್ಲಿ ಅನಧ್ಯವಸಿತ ಮಾತ್ರ ಪ್ರಾಪ್ತವಾಗುವದರಿಂದ ಅಸಿದ್ಧ ಮತ್ತು ಅನಧ್ಯವಸಿತದ ಅಸಂಕೀರ್ಣದ ಉದಾಹಣತೆ ಸಿದ್ಧವಾಗುತ್ತದೆ. ಇಲ್ಲಿ ಟೀಕಾವಾಕ್ಯಗಳಲ್ಲಿ  यद्यपि ಮತ್ತು तथापि ಎಂಬ ಪದಗಳನ್ನು ಅಧ್ಯಾಹಾರಮಾಡಿಕೊಂಡು ಅರ್ಥಮಾಡಬೇಕು.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**इतः परं टीकायां श्रूयमाणं "प्रकृते तर्कस्य असिद्धि पुरस्कारेण प्रवृत्तेः दोषद्वयमपि। न च एवं सर्वत्र इति असङ्कीर्णता च सिद्ध इति।" वाक्यद्वयं प्रक्षिप्तं, न टीकावाक्यम्।
प्रकृते तर्कस्य असिद्ध्या आपादन पुरस्कारेण प्रवृत्ते न दृश्यत्व हेतोः असिद्धिः। किं तु अनध्यवसितत्वमेव इति वाक्यं उच्छिन्नम्। अवश्यं च इदं विज्ञेयम्। असिद्ध अतिरिक्तः साध्य**



**असाधकः अनध्यवसितः इति अनध्यवसित लक्षण्स्य उक्तत्वेन दृश्यत्व हेतुः असिद्धः अनध्यवसितश्च इत्युक्तेः व्याहतत्वात्।**

ಇತರ ವ್ಯಾಖ್ಯಾನಗಳಲ್ಲಿ ಕಂಡುಬರುವ "प्रकृते तर्कस्य असिद्धि पुरस्कारेण प्रवृत्तेः दोषद्वयमपि। न च एवं सर्वत्र इति असङ्कीर्णता च सिद्ध इति" ಎಂಬ ವಾಕ್ಯದ್ವಯಗಳು ಟೀಕಾವಾಕ್ಯಗಳಲ್ಲ. ಬೇರೆಯವರಿಂದ ಸೇರಿಸಲ್ಪಟ್ಟಿರುತ್ತವೆ. ಪ್ರಕೃತದಲ್ಲಿ, ತರ್ಕದ ಅಸಿದ್ಧಿ ಆಪಾದನ ಪುರಸ್ಕಾರಮೂಲಕ ಪ್ರವೃತ್ತವಾಗಿರುವದರಿಂದ  ದೃಶ್ಯತ್ವ ಹೇತುವಿಗೆ ಅಸಿದ್ಧಿ ದೋಷ ಉಂಟಾಗುವದಿಲ್ಲ ಪರಂತು ಅದು ಅನಧ್ಯವಸಿತವೇ ಆಗಿರುತ್ತದೆ. ಎಂಬ ವಾಕ್ಯವು ಮೇಲಿನ ವಾಕ್ಯದ್ವಯಗಳನ್ನು ಬುಡ ಸಮೇತ ಕಿತ್ತಿ ಹಾಕುತ್ತದೆ. ಅವಶ್ಯವಾಗಿ ಇದನ್ನು ತಿಳಿದುಕೊಳ್ಳಬೇಕು. ಅಸಿದ್ಧ ಅತಿರಿಕ್ತ ಸಾಧ್ಯ ಅಸಾಧಕವಾದುದು ಅನಧ್ಯವಸಿತ ಎಂದು ಅನಧ್ಯವಸಿತದ ಲಕ್ಷಣವನ್ನು ಹೇಳಿ, ಮತ್ತೆ ದೃಶ್ಯತ್ವ ಹೇತುವಿಗೆ ಅಸಿದ್ಧ ಮತ್ತು ಅನಧ್ಯವಸಿತ ಹೀಗೆ ದೋಷದ್ವಯಗಳನ್ನು ಹೇಳುವದು, ವ್ಯಾಹತಿ ದೋಷಕ್ಕೊಳಗಾಗುತ್ತದೆ.

### ६.२.४.७ असत्यस्य असाधकत्वोपयोगिता समर्थनम्

## टीका

ननु कथं असत्यस्य असाधकत्वं। तथा सति धूमाभासस्यापि साधकत्व प्रसङ्गात् इति ब्रूमः।
अथ धूमाभासस्य असाधकता न असत्वात्, अपि तु अव्याप्तत्वात्। बहुलोर्ध्वतादिवत् आभास विवेकस्यापि व्याप्ति उपयोगात् इति मन्येत।
तदा वक्तव्यं, किम् एवं लोकानुभवात् कल्प्यते। उत असतोऽपि साधकत्व अभिमानात्।
न प्रथमः। तत् अभावात्। लौकिका हि "महाह्रदः अग्निमान् धूमवत्वात्" इति प्रयुक्ते असिद्धं उद्भावयन्ति।
न द्वितीयः। निर्मूलत्वात्। असत्यस्य अपि प्रतिबिम्बादेः, बिम्बादिसिद्धौ अङ्गत उपलम्भात् न इति चेत् न। प्रतिबिम्बादि असत्यता असिद्धेः अन्यत्र उपपादितम्।

ಅಸತ್ಯವಾದ ದೃಶ್ಯತ್ವ ಅನುಮಾನವು ಅಸಾಧಕ ಹೇಗೆ ಆಗುತ್ತದೆ?  ಹಾಗಾದರೆ, ಧೂಮಾಭಾಸವು ಕೂಡ ಅಗ್ನಿ ಸಾಧಕವಾಗುವ ಪ್ರಸಂಗವದಗುವದು ಎಂದು ಹೇಳಬೇಕಾಗುತ್ತದೆ. ಧೂಮಾಭಾಸದ ಅಸಾಧಕತ್ವವು ಅದು ಅಸತ್ಯವಾಗಿರುವ ಮೂಲಕ ಅಲ್ಲ, ಪರಂತು ವ್ಯಾಪ್ತಿ ಶೂನ್ಯತ್ವ ಮೂಲಕ ಆಗಿರುತ್ತದೆ. ಬಹುಲೋರ್ಧ್ವತಾದಿ ವಿಶಿಷ್ಟವಾದ

ಧೂಮ ಅಗ್ನಿಯನ್ನು ಸಾಧಿಸುವ ಹಾಗೆ, ಆಭಾಸ ವಿವೇಕವು ಕೂಡ ವ್ಯಾಪ್ತಿ ಜ್ಞಾನದ ಉಪಯೋಗಿ ಆಗುತ್ತದೆ ಎಂದು ನಾವು (ಪರಪಕ್ಷದವರು) ಮನ್ನಿಸುತ್ತೇವೆ.

ಆಗ ತಾವು ಹೇಳಬೇಕು; ನೀವು ಈ ರೀತಿಯಾಗಿ ಲೋಕಾನುಭವದಿಂದ ಕಲ್ಪಿಸುತ್ತೀರೊ? ಅಥವಾ ಅಸತ್ಯ ಕೂಡ ಸಾಧಕವಾಗುತ್ತದೆಂದು ಅಭಿಮಾನದಿಂದಲೊ?

ಮೊದಲನೆಯದನ್ನು ಹೇಳಲಿಕ್ಕಾಗುವದಿಲ್ಲ. ಏಕೆಂದರೆ ಹಾಗೆ ಲೋಕಾನುಭವ ಇರುವದಿಲ್ಲ. ಲೌಕಿಕರೇ "महाह्रदः अग्निमान् धूमवत्वात्" ಎಂಬ ಅನುಮಾನ ಪ್ರಯೋಗಿಸಿದಲ್ಲಿ, ಅಲ್ಲಿ ಅಸಿದ್ಧಿ ದೋಷವನ್ನು ಎತ್ತುತ್ತಾರೆ.

ಇನ್ನು ಎರಡನೆಯದನ್ನು ಹೇಳುವದು ಸರಿಯಲ್ಲ. ಆ ಅಭಿಮಾನಕ್ಕೆ ಯಾವ ಮೂಲ ಕಾರಣ ಇರುವದಿಲ್ಲ. ಅಲ್ಲ, ಅಸತ್ಯವಾದ ಪ್ರತಿಬಿಂಬಾದಿಗಳು, ಬಿಂಬಾದಿಗಳನ್ನು ಸಿದ್ಧವಾದಾಗ, ಅವುಗಳ ಅಂಗ ಪ್ರಾಪ್ತವಾಗುವಂತೆ, ಅಸತ್ಯವಾದ ದೃಶ್ಯತ್ವ ಅನುಮಾನವು ಅಸಾಧಕವೆಂದು ಹೇಳುವದು ಸರಿಯಲ್ಲ ಎಂದು ಎನ್ನುತ್ತೇವೆ ಎಂದರೆ? ಹಾಗೆ ಹೇಳುವದು ಸರಿಯಲ್ಲ. ಏಕೆಂದರೆ ಪ್ರತಿಬಿಂಬಾದಿಗಳ ಅಸತ್ಯತೆಯು ಅಸಿದ್ಧವಾಗಿದೆ ಎಂದು ಬೇರೆ ಗ್ರಂಥಗಳಲ್ಲಿ ಶ್ರೀಮದಾಚಾರ್ಯರು ಸಮರ್ಥಿಸಿದ್ದಾರೆ.

## टिप्पणीनाम् विशेषार्थानि

### ॥ ननु कथं असत्यस्य इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**जगतः अभाव इति वाक्येन दृश्यत्व हेतोः असत्व आपादन मुखेन असाधकत्वं आपाद्यत इति उक्तम्। तदुपर्या शङ्कते– ननु कथं असत्यस्य इति॥**

**तथा च दृश्यत्व हेतोः असत्यस्यापि मिथ्यात्व साधकत्वं तु अस्ति इति भावः।**

ಶ್ರೀಮದಾಚಾರ್ಯರ ಮೂಲವಾಕ್ಯವಾದ"जगतः अभाव" ಎಂಬ ವಾಕ್ಯದಿಂದ ದೃಶ್ಯತ್ವ ಹೇತುವಿನ ಅಸತ್ಯತ್ವದ ಆಪಾದನ ದ್ವಾರಾ ಅನುಮಾನದ ಸಾಧ್ಯ ಅಸಾಧಕತ್ವವನ್ನು ಆಪಾದಿಸಲಾಗಿದೆ ಎಂದು ಹೇಳಲಾಯಿತು. ತದನಂತರ ಈ ಟೀಕಾವಾಕ್ಯ ಶಂಕಿಸುತ್ತದೆ. ಅದರಂತೆ ದೃಶ್ಯತ್ವ ಹೇತುವು ಅಸತ್ಯವಾದರೂ ಮಿಥ್ಯಾತ್ವದ ಸಾಧಕವಾಗುತ್ತದೆ ಎಂಬ ಭಾವವಿರುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**यदि च अनुमानं मिथ्या स्यात् तदा साधकं न स्यात् इति तर्के मिथ्यात्वं अस्तु असाधकत्वं मा अस्तु इति अप्रयोजकत्वं आशङ्कते– ननु इति॥**



ಒಂದು ವೇಳೆ ಅನುಮಾನ ಮಿಥ್ಯಾ ಆಗಿದ್ದರೆ ಆಗ ಅದು ಸಾಧಕ ವಾಗಲಾರದು ಎಂಬ ತರ್ಕದಲ್ಲಿ, ಮಿಥ್ಯಾತ್ವವು ಅಸಾಧಕವಾಗಲಿ, ಅಥವಾ ಅಸಾಧಕವಾಗದೆ ಇರಲಿ ಎಂದು ಅದರ ಅಪ್ರಯೋಜಕತ್ವವನ್ನು ಈ ಟೀಕಾವಾಕ್ಯ ಶಂಕಿಸುತ್ತದೆ.

### ॥ तथा सति इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**सिद्धान्ति शङ्कते– तथा सति इति॥**

ಪರಪಕ್ಷದವರ, ಅಸತ್ಯವು ಹೇಗೆ ಅಸಾಧಕವಾಗುತ್ತದೆ? ಎಂಬ ಶಂಕೆಗೆ, ಸಿದ್ಧಾಂತಿಗಳ ಪ್ರತಿಶಂಕೆಯನ್ನು ಈ ಟೀಕಾವಾಕ್ಯ ಪ್ರತಿಪಾದಿಸುತ್ತದೆ.

**असत्यस्य अपि साधकत्वे सति इत्यर्थः।**

ಹಾಗಾದರೆ ಅಂದರೆ, ಅಸತ್ಯವು ಕೂಡ ಸಾಧಕವಾದರೆ ಎಂದರ್ಥ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**किम् अत्र असत्यस्यापि साधकत्वे बाधक अभावात् अप्रयोजकत्वं इत्यत्र तात्पर्यम्। किं वा सतः साधकत्वे साधक अभावात् असत्यस्यापि साधकत्वं अस्तु इति, विकल्प द्वयं मनसि निधाय, न आद्यः, यदि मिथ्याभूतस्य अपि अनुमानस्य साधकं स्यात् तदा धूमाभासस्य अपि तत् स्यात् इति विपक्ष बाधक तर्क सद्भावात् न अप्रयोजकत्वम् इत्याशयेन आह– तथा सति॥**

ಪರಪಕ್ಷದವರ, ಅಸತ್ಯವು ಹೇಗೆ ಅಸಾಧಕವಾಗುತ್ತದೆ? ಎಂಬ ಶಂಕೆಗೆ, ಏಕೆ ಇಲ್ಲಿ, ಅಸತ್ಯವೂ ಕೂಡ ಸಾಧಕವಾದಲ್ಲಿ, ಯಾವ ಬಾಧಕ ಇಲ್ಲದಾದ್ದರಿಂದ ಅದು ಅಪ್ರಯೋಜಕ ಎಂಬ ತಾತ್ಪರ್ಯವೊ? ಅಥವಾ ಸತ್ಯ ಸಾಧಕತ್ವದಲ್ಲಿ ಸಾಧಕ ಇಲ್ಲದಾದ್ದರಿಂದ ಅಸತ್ಯವು ಕೂಡ ಸಾಧಕವಾಗಲಿ, ಎಂದು ವಿಕಲ್ಪದ್ವಯಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಮೊದಲನೆ ವಿಕಲ್ಪ ಸರಿಯಲ್ಲ, ಒಂದು ವೇಳೆ ಮಿಥ್ಯಾಭೂತವಾದುದು ಕೂಡ ಅನುಮಾನದ ಸಾಧಕವಾಗುತ್ತದೆಂದು ಎನ್ನುವದಾದರೆ, ಆಗ ಧೂಮ ಆಭಾಸವೂ ಕೂಡ ಅಗ್ನಿ ಸಾಧಕವಾಗುತ್ತದೆ ಎಂಬ ವಿಪಕ್ಷ ತರ್ಕಕ್ಕೆ ಆಸ್ಪದವಿರುವದರಿಂದ, ಅದು ಅಪ್ರಯೋಜಕವಾಗಲಾರದೆಂಬ ಆಶಯದಿಂದ, ಸಿದ್ಧಾಂತಿಗಳ ಪ್ರತಿಶಂಕೆಯನ್ನು ಈ ಟೀಕಾವಾಕ್ಯ ಪ್ರತಿಪಾದಿಸುತ್ತದೆ.

### ॥ धूमाभासस्यापि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ

**बाष्पारोपित धूमस्य अपि इत्यर्थः।**

ಅಂದರೆ, ಬಾಷ್ಪಾರೋಪಿತ ಧೂಮ ಕೂಡ ಎಂದರ್ಥ.

### ॥ साधकत्व इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

ह्रदे वन्हिसाधकत्व प्रसङ्गात् इत्यर्थः।
ಅಂದರೆ, ನೀರಿನ ಹೌದಿನಲ್ಲಿ, ಅಗ್ನಿಯನ್ನು ಸಾಧಿಸುವ ಪ್ರಸಂಗವದಗುವದು ಎಂದರ್ಥ.

## ॥ अथ इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

पूर्वपक्षी उत्तरं आह– अथ इति॥
ಮೇಲಿನ ಸಿದ್ಧಾಂತಿಗಳ ಪ್ರತಿಶಂಕೆಗೆ ಪೂರ್ವಪಕ್ಷದವರ ಉತ್ತರವನ್ನು ಈ ಟೀಕಾವಾಕ್ಯ ಪ್ರತಿಪಾದಿಸುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

ननु अत्र दृष्टान्त अभावात् न विशेष व्याप्तिः सम्भवति। व्याप्ति भाव–अभावाभ्यां विशेषात् न अविशेषलक्षणापि स इति व्याप्ति विकल्पत्वेन तर्क आभासत्वात् न इदं विपक्षे बाधकं इति अभिप्रेत्य धूम आभासस्य अव्याप्ततया असाधकत्वं शङ्कते– अथ इति॥
ಇಲ್ಲಿ ದೃಷ್ಟಾಂತದ ಅಭಾವತೆಯ ಕಾರಣ, ವಿಶೇಷ ವ್ಯಾಪ್ತಿಯು ಸಂಭವಿಸುವದಿಲ್ಲ. ವ್ಯಾಪ್ತಿಯ ಭಾವ ಅಥವಾ ಅಭಾವತೆಯ ವಿಶೇಷತೆಯಿಂದ, ಅದು ಅವಿಶೇಷಲಕ್ಷಣ ಕೂಡ ಅಲ್ಲ ಎಂದು, ವ್ಯಾಪ್ತಿಯ ವಿಕಲತ್ವದಿಂದ ತರ್ಕದ ಆಭಾಸತೆ ಇರುವದರಿಂದ, ಇದು ವಿಪಕ್ಷದಲ್ಲಿ ಬಾಧಕವಲ್ಲ ಎಂದು ಅಭಿಪ್ರಾಯಪಟ್ಟು, ಧೂಮ ಆಭಾಸತೆಯ ವ್ಯಾಪ್ತಿ ಶೂನ್ಯಮೂಲಕ ಅಗ್ನಿ ಅಸಾಧಕತ್ವವೆಂದು, ಪರಪಕ್ಷದವರ ಸಿದ್ಧಾಂತಿಗಳ ಪ್ರತಿಶಂಕೆಗೆ ಉತ್ತರರೂಪವಾಗಿ ಈ ಟೀಕಾವಾಕ್ಯ ವಿರುತ್ತದೆ.

## ॥ अव्याप्तत्वात् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

व्याप्ति शून्यत्वात् इत्यर्थः।
ಇಲ್ಲಿ ಅವ್ಯಾಪ್ತಿ ಎಂದರೆ, ವ್ಯಾಪ್ತಿ ಶೂನ್ಯ ಅಥವಾ ಇಲ್ಲದಿರುವದು ಎಂದರ್ಥ.

## ॥ बहुलोर्ध्वतादिवत् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

तत् उपपादयति– बहुल इति॥
ಮೇಲೆ ನಮೂದಿಸಿದನ್ನು ಈ ಟೀಕಾವಾಕ್ಯ ಸಮರ್ಥಿಸುತ್ತದೆ.

ऊर्ध्वता इति–अविच्छिन्न मूलाभ्रंलिह इत्यर्थः।
ಊರ್ಧ್ವತಾ ಅಂದರೆ, ಅಖಂಡವಾದ ಅಥವಾ ಎಡಬಿಡದ ಮೂಲಾಭ್ರದಿಂದ ಕೂಡಿದ ವಾಯು. ಇದು ಅಗ್ನಿಯಲ್ಲಿಯ ಹೊಗೆಯ ಅಥವಾ ಧೂಮದ ಲಕ್ಷಣವನ್ನು ಪ್ರತಿಪಾದಿಸುತ್ತದೆ.

यथा धूममात्रस्य शान्ताग्नौ अपि सत्वेन वन्हिसाधकत्व अभावात्, बहुलोर्ध्वतादि विशिष्टो धूमः यत्र तत्र अग्निः इत्येवं बहुलोर्ध्वतादि व्याप्ति उपयोगी, तथा धूम आभासस्य ह्रदेपि सत्वेन व्यभिचारात् वन्हिसाधकत्वं नास्ति।



ಹೇಗೆ ಧೂಮಮಾತ್ರವು ಶಾಂತಾಗ್ನಿಯಲ್ಲಿ ಕೂಡ ಸತ್ಯವಾಗಿದ್ದರೂ ಅದು ಅಗ್ನಿಯ ಸಾಧಕವಾಗುವದಿಲ್ಲ, ಆದರೆ ಬಹುಲೋರ್ಧ್ವತಾದಿ ವಿಶಿಷ್ಟ ಧೂಮವು ಎಲ್ಲಿ ಇರುತ್ತದೊ ಅಲ್ಲಿ ಅಗ್ನಿ ಇರುತ್ತದೆ ಎಂದು, ಈ ರೀತಿಯಾಗಿ ಬಹುಲೋರ್ಧ್ವತಾದಿಗಳು ವ್ಯಾಪ್ತಿ ಉಪಯೋಗಿ ಆಗಿರುತ್ತವೆ, ಅದರಂತೆ, ಧೂಮ ಆಭಾಸವು ಕೂಡ ಆಳವಾದ ಜಲಾಶಯದಲ್ಲಿ ಸತ್ಯವಾಗಿರುವದರಿಂದ ವ್ಯಭಿಚಾರ ಉಂಟಾಗಿ ಅಗ್ನಿ ಸಾಧಕವಾಗುವದಿಲ್ಲ.

अतो यत्र अनाभासो धूमः तत्र अग्निः इत्येवं आभासविविक्तत्वस्यापि व्याप्ति उपयोगित्वं अस्ति एव इत्यर्थः।
ಆದ್ದರಿಂದ ಎಲ್ಲಿ ಆಭಾಸವಿಲ್ಲದ ಧೂಮವಿದೆಯೊ ಅಲ್ಲಿ ಅಗ್ನಿ ಇದೆ ಎಂದು, ಈ ರೀತಿಯಾಗಿ ಆಭಾಸವಿಲ್ಲದಿರುವಿಕೆಯು ಕೂಡ ವ್ಯಾಪ್ತಿ ಉಪಯೋಗಿ ಆಗಿಯೆ ಆಗುತ್ತದೆ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

यथा धूममात्रस्य शान्ताग्नौ अपि विद्यमानत्वेन बहुलतादिः व्याप्ति उपयोगी तथा आभास साधारण धूमस्य ह्रदे व्यभिचारात् "यत्र अनाभासो धूमः तत्र अग्निः" इति व्याप्ति उपयोग्येन अभास विवेक इत्यर्थः।
ಹೇಗೆ, ಧೂಮಮಾತ್ರವು ಶಾಂತಾಗ್ನಿಯಲ್ಲಿ ಕೂಡ ಇರುವದರಿಂದ ಬಹುಲತಾದಿಗಳು ವ್ಯಾಪ್ತಿ ಉಪಯೋಗಿ ಆಗಿರುತ್ತವೆಯೊ, ಹಾಗೆಯೆ ಆಭಾಸ ಸಾಧಾರಣ ಧೂಮವು ಆಳವಾದ ಜಲಾಶಯದಲ್ಲಿ ವ್ಯಭಿಚರಿಸುವದರಿಂದ, "ಎಲ್ಲಿ ಆಭಾಸವಿಲ್ಲದ ಧೂಮ ಇರುವದೊ ಅಲ್ಲಿ ಅಗ್ನಿ ಇರುತ್ತದೆ" ಎಂಬ ವ್ಯಾಪ್ತಿ ಉಪಯೋಗಿ ಆಭಾಸ ಜ್ಞಾನವಾಗಿರುತ್ತದೆ ಎಂದರ್ಥ.

धूमादि अनुमाने आभासविवेकस्य् न व्याप्ति उपयोगिता समर्थनम्

अभास विवेकस्य व्याप्ति उपयोगित्वेऽपि आरोपित आभास विवेक धूमवति ह्रदे व्यभिचारो दुर्वारः। आभास विविक्त एव आभासविवेको व्याप्ति उपयोगि इति चेत् न। आभास विवेकतोऽपि आभासविवेकस्य आरोपितस्य तत्र वक्तुं शक्यत्वात् व्यभिचार अपरिहारात्। आभास विवेक विशेषणीभूत आभासविवेकेन अपि आभास विविक्तेन भाव्यं इति चेत् एवं तर्हि आभासविवेक विशेषण परम्परया अपर्यवसितत्वेन जन्मशतेनापि हेतुः अनिरूपितः स्यात्।
ಆಭಾಸ ವಿವೇಕವು ವ್ಯಾಪ್ತಿ ಉಪಯೋಗಿತ್ವವೆನಿಸಿದರೂ, ಆರೋಪಿತ ಆಭಾಸ ವಿವೇಕ ಧೂಮವು ಆಳವಾದ ಜಲಾಶಯದಲ್ಲಿ ವ್ಯಭಿಚರಿಸುವದನ್ನು ಪರಿಹರಿಸಲು ಬರುವದಿಲ್ಲ. ಆಭಾಸ ಇಲ್ಲದಿರುವಿಕೆಯೇ ಆಭಾಸ ವಿವೇಕದ ವಾಪ್ತಿ ಉಪಯೋಗಿವೆನಿಸುತ್ತದೆ ಎಂದರೆ, ಅದು ಸರಿಯೆನಿಸುವದಿಲ್ಲ. ಆಭಾಸ ವಿವೇಕತೆಯನ್ನು ಕೂಡ ಆಭಾಸವಿವೇಕದ ಆರೋಪಿತ ಎಂದು ಅಲ್ಲಿ ಹೇಳಲು ಶಕ್ಯವಿದೆ. ಆದ್ದರಿಂದ ವ್ಯಭಿಚಾರವನ್ನು ಪರಿಹರಿಸಲಾಗುವದಿಲ್ಲ. ಇನ್ನು, ಆಭಾಸ ವಿಶೇಷಣದಿಂದ ಕೂಡಿದ ಆಭಾಸ ವಿವೇಕವು ಕೂಡ ಆಭಾಸ ಇಲ್ಲದಿರುವಿಕೆಯನ್ನು ಭಾವಿಸುತ್ತದೆ ಎಂದರೆ, ಈ ರೀತಿಯಾಗಿ ಆಭಾಸ ವಿಶೇಷಣ ಪರಂಪರೆಯು ಎಂದೂ ಮುಗಿಯದ ಕಥೆಯಾದ್ದರಿಂದ ಶತಜನ್ಮಗಳಿಂದಲೂ ಹೇತು ಅನಿರೂಪಿತವಾಗಿಯೇ ಉಳಿಯುತ್ತದೆ,

किं च ह्रदे धूममात्रं अपि अस्ति। किं तु तद्गतस्य बाष्पस्य तथा प्रतीतिः एव। न च भ्रान्ति अनुसारेण अर्थ अङ्गीकारो युक्तः। भ्रान्तेः प्रमाणत्व आपातात्। न च अस्माभिः धूमवत्तया प्रतीयमानत्वं हेतुकृतम्। किं तु धूमवत्त्वम्। ततो न आभास विवेको व्याप्ति उपयोगि इति।
ಮತ್ತು, ಆಳವಾದ ಜಲಾಶಯದಲ್ಲಿ ಧೂಮಮಾತ್ರ ಇದ್ದರೂ ಕೂಡ ಅದಂತರ್ಗತ ಬಾಷ್ಪದ ಹಾಗೆ ಪ್ರತೀತಿ ಇದ್ದೇ ಇರುತ್ತದೆ. ಇನ್ನು ಭ್ರಾಂತಿಯನ್ನು ಅನುಸರಿಸಿ ಅರ್ಥ ಅಂಗೀಕರಿಸುವದು ಯುಕ್ತವೆನಿಸಲಾರದು, ಹಾಗೆನಾದರೆ, ಭ್ರಾಂತಿಗೂ ಕೂಡ ಪ್ರಮಾಣತ್ವ ಉಂಟಾಗುತ್ತದೆ. ನಾವುಗಳು ಧೂಮದಂತೆ ಕಾಣುವದನ್ನು ಹೇತುಮಾಡಿಲ್ಲ, ಪರಂತು ಧೂಮವನ್ನು ಮಾಡಿದ್ದು. ಹೀಗಾಗಿ ಆಭಾಸ ವಿವೇಕವು ವ್ಯಾಪ್ತಿ ಉಪಯೋಗಿ ಆಗಲು ಸಾಧ್ಯವಿಲ್ಲ.

## ॥ तदा वक्तव्यं इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

किंच आरोपित दृश्यत्वस्य ब्रह्मणि अपि सम्भवात् दृश्यत्वेऽपि व्याप्ति उपयोगितया एव आभास विवेकः अङ्गीकार्य इति परिहारे स्थितेऽपि परिहारन्तरं आह– तदा वक्तव्यम् इति॥
ಮತ್ತು ಆರೋಪಿತ ದೃಶ್ಯತ್ವವು ಬ್ರಹ್ಮನಲ್ಲಿಯೂ ಕೂಡ ಸಂಭವಿಸುವದರಿಂದ ದೃಶ್ಯತ್ವದಲ್ಲಿ ಕೂಡ ವ್ಯಾಪ್ತಿ ಉಪಯೋಗಿದಂತೆಯೇ ಆಭಾಸ ವಿವೇಕವನ್ನು ಅಂಗೀಕಾರಮಾಡಬೇಕು ಎಂದು ಪರರ ಮತದ ಪರಿಹಾರ ಮಾಡಬಹುದಾಗಿದ್ದರೂ, ಇಲ್ಲಿ ಎರಡನೆ ಪ್ರಕಾರದಿಂದಲೂ ಪರರ ಮತದ ಪರಿಹಾರ ಮಾಡಬಹುದು ಎಂದು ಈ ಟೀಕಾವಾಕ್ಯ ಪ್ರತಿಪಾದಿಸುತ್ತದೆ.

## ॥ एवं इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

आभास विवेकस्यापि व्याप्ति उपयोगित्वे इत्यर्थः।
ಇಲ್ಲಿ ಏವಂ ಎಂದರೆ, ಆಭಾಸ ವಿವೇಕವು ಕೂಡ ವ್ಯಾಪ್ತಿ ಉಪಯೋಗಿ ಎನ್ನುವದಾದರೆ ಎಂದರ್ಥ.

## ॥ तत् अभावात् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

लोकानुभव अभावात् इत्यर्थः।
ಅಂದರೆ, ಹಾಗೆ ಲೋಕಾನುಭವ ಇರುವದಿಲ್ಲ ಎಂದರ್ಥ.

## ॥ लौकिका हि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ

लोकानुभवमेव प्रतिपादयति– लौकिक हि इति॥
ಆ ಲೋಕಾನುಭವವನ್ನೆ ಈ ಟೀಕಾವಾಕ್ಯ ಪ್ರತಿಪಾದಿಸುತ್ತದೆ.

## ॥ असिद्धं इति ॥



ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

धूम एव असौ न भवति इति प्रतिवक्तारो भवन्ति न तु आभासविवेकस्यापि व्याप्ति उपयोगित्वेन, तत् अभावात् इत्यर्थः।
ಇದು ಧೂಮವೇ ಅಲ್ಲ ಎಂದು ಪ್ರತಿ ವಕ್ತವ್ಯ ಮಾಡುವವರು ಸಿಗುತ್ತಾರೆ ವಿನಹಾ ಆಭಾಸ ವಿವೇಕವು ಕೂಡ ವ್ಯಾಪ್ತಿ ಉಪಯೋಗಿ ಆಗಿರುತ್ತದೆ ಎಂದು ಹೇಳುವವರು. ಹಾಗೆ ಲೋಕಾನುಭವ ಕೂಡ ಇರುವದಿಲ್ಲ ಎಂದರ್ಥ.

## ॥ निर्मूलत्वात् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

असतः साधकत्व अभिमानस्यैव निर्मूलत्वात् इत्यर्थः।
ಅಂದರೆ, ಅಸತ್ಯ ಸಾಧಕತ್ವದ ಅಭಿಮಾನವೇ ನಿರ್ಮೂಲವಾಗುತ್ತದೆ ಎಂದರ್ಥ.

तथा च असतः साधकत्व सिद्धे तर्हि धूमाभासस्यापि साधकत्व प्रसङ्गे चोदिते आभासत्व विशेषणस्य व्याप्ति उपयोगित्व सिद्धिः। तत् सिद्धौ धूमाभासस्य साधकत्व आपादनरूप अतिप्रसङ्ग अभावेन असतः साधकत्व सिद्धिः इति अन्योन्याश्रयता इत्यर्थः।
ಹಾಗೆಯೆ, ಅಸತ್ಯದ ಸಾಧಕತ್ವವು ಸಿದ್ಧವಾದರೆ, ಧೂಮಾಭಾಸದ ಕೂಡ ಸಾಧಕತ್ವ ಪ್ರಸಂಗದಿಂದ ಪ್ರೇರಿಸಲ್ಪಟ್ಟ ಆಭಾಸತ್ವ ವಿಶೇಷಣದ ವ್ಯಾಪ್ತಿ ಉಪಯೋಗಿತ್ವದ ಸಿದ್ಧಿಯಾಗುತ್ತದೆ. ಮತ್ತು ಇದು ಸಿದ್ಧವಾದರೆ, ಧೂಮಾಭಾಸದ ಸಾಧಕತ್ವ ಆಪಾದನರೂಪ ಅತಿಪ್ರಸಂಗದ ಅಭಾವತೆಯಿಂದ ಅಸತ್ಯದ ಸಾಧಕತ್ವ ಸಿದ್ಧಿಯಾಗುತದೆ. ಹೀಗೆ ಅನ್ಯೊನ್ಯಾಶ್ರಯ ದೋಷ ಉಂಟಾಗುತ್ತದೆ ಎಂದರ್ಥ.

यथा उक्तं न्यायामृते, अस्याः कल्पनायाः असतः साधकत्व सिद्धि सापेक्षत्वेन अन्योन्याश्रयात् इति॥
ಅದರಂತೆ ನ್ಯಾಯಾಮೃತದಲ್ಲಿ ಹೀಗೆ ಹೇಳಲಾಗಿದೆ: ಇಂತಹ ಕಲ್ಪನೆಗಳ ಸಾಪೇಕ್ಷತೆಯಿಂದಲೇ ಅಸತ್ಯ ಸಾಧಕತ್ವದ ಸಿದ್ಧಿಯಾಗುವದರಿಂದ ಅನ್ಯೋನ್ಯಾಶ್ರಯತಾ ದೋಷ ಉಂಟಾಗುತ್ತದೆ.

## ॥ असत्यस्य अपि प्रतिबिम्बादेः इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

शङ्कते– असत्यस्यापि इति॥
ಅಸತ್ಯವಾದ ಪ್ರತಿಬಿಂಬಗಳು ಬಿಂಬ ಸಾಧಕಗಳಾಗುತ್ತವೆ, ನಿಜವಾಗಿ ಪ್ರತಿಬಿಂಬಗಳು ಪ್ರಾಪ್ತವಾಗುವದಿಲ್ಲ, ಎಂಬ ಪರಪಕ್ಷದವರ ಪ್ರತಿಪಾದನೆಯನ್ನು ಈ ಟೀಕಾವಾಕ್ಯ ಶಂಕಿಸಿ, ನಿರಾಕರಿಸುತ್ತದೆ.

प्रतिबिम्बादेः इत्यादि पदेन स्वप्नार्थ ग्रहणम्। बिम्बादि इत्यादि पदेन शुभाशुभ ग्रहणम्।

ಇಲ್ಲಿ प्रतिबिम्बादेः ಪದದಲ್ಲಿಯ इत्यादि ಪದದಿಂದ ಸ್ವಪ್ನಾರ್ಥವನ್ನು ಗ್ರಹಿಸಲಾಗಿದೆ. बिम्बादि ಪದದಲ್ಲಿಯ इत्यादि ಪದದಿಂದ ಶುಭಾಶುಭವನ್ನು ಗ್ರಹಿಸಲಾಗಿದೆ.

**तथा च अयं प्रदेशो बिम्बवान् प्रतिबिम्बवत्त्वात् इत्येवं असत्यमपि प्रतिबिम्ब बिम्ब साधकं असत्योऽपि स्वाप्नार्थः शुभाशुभ साधको दृष्टः इत्यर्थ।**

ಅದರಂತೆ, अयं प्रदेशो बिम्बवान् प्रतिबिम्बवत्त्वात् (ಈ ಪ್ರದೇಶವು ಪ್ರಕಾಶಮಾನವಾಗಿರುತ್ತದೆ, ಸೂರ್ಯನಪ್ರತಿಬಿಂಬದಿಂದ ಕೂಡಿರುವದರಿಂದ್)ಎಂದು, ಈ ರೀತಿಯಾಗಿ ಅಸತ್ಯವಾದ ಪ್ರತಿಬಿಂಬವು ಬಿಂಬ ಸಾಧಕವಾಗುತ್ತದೆ., ಅಸತ್ಯವಾದ ಸ್ವಪ್ನಾರ್ಥಗಳು ಶುಭಾಶುಭದ ಸಾಧಕಗಳಾಗುವದು ಕಂಡುಬಂದಿರುತ್ತದೆ ಎಂದರ್ಥ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ

**प्रतिबिम्बादौ व्यभिचारेण, यत् मिथ्या तत् न साधकत्वं इति तर्कमूलभूत व्याप्तेः अभावात् तत् उपजीवनेन दृश्यत्व अनुमानस्य असाधकत्वं आपादनं सम्भवति इति अभिप्रायेण शङ्कते– असत्यस्यापि प्रतिबिम्बादेः इति॥**

ಇಲ್ಲಿ, ಪ್ರತಿಬಿಂಬಾದಿಗಳಲ್ಲಿ ವ್ಯಭಿಚಾರ ಬರುವದರಿಂದ, ಯಾವದು ಮಿಥ್ಯಾ ಅದು ಸಾಧಕವಾಗಲಾರದು ಎಂದು ತರ್ಕಮೂಲಭೂತ ವ್ಯಾಪ್ತಿಯಂತೆ, ಜಗತ್ತು ಇಲ್ಲವಾದ್ದರಿಂದ ಅದರ ಉಪಜೀವಿಸಿದ ದೃಶ್ಯತ್ವ ಅನುಮಾನದ ಅಸಾಧಕತ್ವ ಆಪಾದನವು ಸಂಭವಿಸುತ್ತದೆ ಎಂಬ ಅಭಿಪ್ರಾಯವನ್ನು ಈ ಟೀಕಾವಾಕ್ಯ ಶಂಕಿಸುತ್ತದೆ.

**आदि पदेन स्वाप्नार्थ परिग्रहः। बिम्बादि इत्यादि पदेन शुभाशुभ परिग्रहः।**

ಇಲಿ आदि ಪದದಿಂದ ಸ್ವಪ್ನಾರ್ಥಗಳನ್ನು ಪರಿಗ್ರಹಿಸಲಾಗಿದೆ. ಮತ್ತು, बिम्बादि इत्यादि, ಪದಗಳಿಂದ ಶುಭಾಶುಭಗಳನ್ನು ಪರಿಗ್ರಹಿಸಲಾಗಿದೆ.

**यद्यपि प्रतिबिम्ब मिथ्यात्वस्य वादिप्रतिवादि असम्मतत्वात् न तत् उपन्यासः अत्र उचितः। तथापि परमते स्वरूपेण सत्यत्वेऽपि तस्य बिम्बैक्येन साध्य अविशिष्टतया बिम्बसाधकत्व अनुपपत्त्या विच्छेदोपेतस्यैव साधकत्व वक्तव्ये विच्छेदस्य मिथ्यात्वात् तत् उदाहरणम्।**

ಪ್ರತಿಬಿಂಬದ ಮಿಥ್ಯಾತ್ವದ ಬಗ್ಗೆ ವಾದಿಪ್ರತಿವಾದಿಗಳಲ್ಲಿ ಸಮ್ಮತಿ ಇಲ್ಲದಾಗಿದ್ದರಿಂದ ಇಲ್ಲಿ ಅದರ ವಿಮರ್ಶೆಯು ಉಚಿತವಲ್ಲದಿದ್ದರೂ, ಪರಮತದಲ್ಲಿ ಸ್ವರೂಪದಿಂದ ಸತ್ಯವಾಗಿದ್ದರೂ, ಬಿಂಬೈಕ್ಯ ಸಾಧ್ಯ ಅವಿಶಿಷ್ಟಮೂಲಕ ಬಿಂಬ ಸಾಧಕತ್ವವು ಅಸಂಗತವೆನಿಸುವದರಿಂದ ವಿಚ್ಛೇದದಿಂದ ಅಂದರೆ ಪ್ರತ್ಯೇಕದಿಂದ ಕೂಡಿದ್ದನ್ನೆ ಸಾಧಕತ್ವ ವೆಂದು ಹೇಳಬೇಕಾದುದರಿಂದ, ಪ್ರತ್ಯೇಕತೆಯು ಮಿಥ್ಯಾ ಆಗಿರುವದರಿಂದ ಈ ಉದಾಹರಣೆಯನ್ನು ಇಲ್ಲಿ ಪ್ರತಿಪಾದಿಸಲಾಗಿದೆ.

**यद्वा, अत्र प्रतिबिम्ब शब्दः तत् विच्छेदपरः। बिम्ब शब्दश्च तद् व्यवस्था विशेषपरः। तथा च "न ईक्षत उद्यन्तं आदित्यं " इति उद्यदादित्य दर्शन निषेधेऽपि तत् प्रतिबिम्ब दर्शन अनिषेधः। वारिस्थ सूर्यदर्शन निषेधेऽपि गगनस्थ तद् दर्शन अनिषेधः। प्रतिबिम्ब दर्शनेऽपि दृष्ट्वा स्नायात्**



**इति शास्त्रार्थान् अनुष्ठानम्। बिम्बस्य अवदातत्वेऽपि प्रतिबिम्बस्य श्यामत्व मिथ्यादि व्यवस्थाया विच्छेदकत्वात्। तस्य च मिथ्यात्वात्, तत् उपन्यास इति गुरुचरणाः।**

ಅಥವಾ, ಇಲ್ಲಿ ಪ್ರತಿಬಿಂಬ ಶಬ್ದವು ಬಿಂಬದ ವಿಚ್ಛೇದಪರ ಅಂದರೆ ಪ್ರತ್ಯೇಕತೆಯ ಪರವಾಗಿರುತ್ತದೆ. ಮತ್ತು ಬಿಂಬ ಶಬ್ದವು ಪ್ರತಿಬಿಂಬದ ವ್ಯವಸ್ಥೆಯ ವಿಶೇಷಪರವಾಗಿರುತ್ತದೆ. ಅದರಂತೆ, "न ईक्षत उद्यन्तं आदित्यं " ಎಂಬ ಮನುಸ್ಮೃತಿ ವಾಕ್ಯದಂತೆ, ಉದಯಿಸುತ್ತಿರುವ ಸೂರ್ಯನ ದರ್ಶನ ನಿಷೇಧಿಸಿದ್ದರೂ, ಅವನ ಪ್ರತಿಬಿಂಬ ದರ್ಶನ ನಿಷೇಧಿಸಿಲ್ಲ. ಮೋಡದಲ್ಲಿಯ ಅಥವಾ ಗ್ರಹಣಸ್ಥ ಸೂರ್ಯದರ್ಶನ ನಿಷೇಧಿಸಿದ್ದರೂ, ಗಗನಸ್ಥ ಅವನ ದರ್ಶನ ನಿಷೇಧಿಸಿಲ್ಲ. ಮತ್ತು, ಪ್ರತಿಬಿಂಬ ದರ್ಶನದಲ್ಲಿ ಕೂಡ ಅದನ್ನು ನೋಡಿ, ಮಂತ್ರಪೂರ್ವಕ ನೀರಿನಲ್ಲಿ ಅವಗಾಹನ ಮಾಡಿ ಸ್ನಾನ ಮಾಡಬೇಕು ಎಂದು ಶಾಸ್ತ್ರಾರ್ಥಗಳ ಅನುಷ್ಠಾನವಿರುತ್ತದೆ. ಬಿಂಬವು ಶುದ್ಧವಾಗಿದ್ದರೂ, ಪ್ರತಿಬಿಂಬದ ದೋಷತ್ವ, ಮಿಥ್ಯಾದಿ ವ್ಯವಸ್ಥೆಯಿಂದ ಪ್ರತ್ಯೇಕವಾಗಿರುತ್ತದೆ. ಮತ್ತು ಅದು ಮಿಥ್ಯಾ ಆಗಿರುತ್ತದೆ. ಇದು ಪರಪಕ್ಷದವರ ಮತದ ವಿವರಣೆ, ಇತಿ ಗುರುಚರಣಗಳಲ್ಲಿ ಸಮರ್ಪಣೆ.

## ॥ न इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**दृश्यत्व हेतोः असत्यत्व असाधकत्वं इति यदुक्तं तत् न इत्यर्थः।**

ಅಂದರೆ, ಅಸತ್ಯವಾದ ದೃಶ್ಯತ್ವ ಹೇತುವು ಸಾಧಕವಾಗಲಾರದು ಎಂದು ಹೇಳಿದ್ದು ಸರಿಯಲ್ಲ ಎಂದರ್ಥ

## ॥ प्रतिबिम्बादि असत्यता असिद्धेः इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**आदि पदेन स्वाप्नार्थ ग्रहंणम्। छायावत् प्रतिध्वनिवत् सूर्यस्य पार्श्वे प्रतिसूर्यवत् च प्रतिबिम्बस्य सत्यतायाः, स्वाप्नार्थस्य वासनोपादानकस्य सत्यतायाश्च तत्वनिर्णयादौ उपपादितत्वात् इत्यर्थः।**

ಇಲ್ಲಿ, आदि ಪದದಿಂದ ಸ್ವಾಪ್ನಾರ್ಥವನ್ನು ಗ್ರಹಿಸಲಾಗಿದೆ. ನೆರಳಿನಂತೆ, ಪ್ರತಿಧ್ವನಿಯಂತೆ, ಮತ್ತು ಸೂರ್ಯನ ಪಾರ್ಶ್ವದಲ್ಲಿ ಪ್ರತಿಸೂರ್ಯನಂತೆ ಪ್ರತಿಬಿಂಬದ ಸತ್ಯವಾಗಿರುವದನ್ನು, ಮತ್ತು ಸ್ವಾಪ್ನಾರ್ಥವು ವಾಸನಮಯದ ಉಪಾದಾನಕ ವಾಗಿರುವದರಿಂದ ಸತ್ಯವಾಗಿರುವದನ್ನು ತತ್ತ್ವನಿರ್ಣಯಾದಿ ಗ್ರಂಥಗಳಲ್ಲಿ ಸಮರ್ಥಿಸಲಾಗಿದೆ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**छायावत् प्रतिध्वनिवत् प्रतिसूर्यवत् च प्रतिबिम्बादेःसत्यत्वात् इति भावः।**

ನೆರಳಿನಂತೆ, ಪ್ರತಿಧ್ವನಿಯಂತೆ. ಮತ್ತು ಪ್ರತಿಸೂರ್ಯನಂತೆ ಪ್ರತಿಬಿಂಬಾದಿಗಳು ಸತ್ಯವಾಗಿರುತ್ತವೆ ಎಂಬ ಭಾವವಿರುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**बिम्ब प्रतिबिम्बयोः ऐक्ये प्रमाण निराकरणेन, "भेदे यथा एषापुरुषेच्छ" इति आगम उदाहरणेन विच्छेदस्य सत्यताया, अत एव उपमेत्यधिकरणे अर्थज्ञानात्मक स्वप्न सत्यतायाश्च स्वप्नाधिकरणे, विशेष्यतया तत्त्वनिर्णयादौ च समर्थिततत्वेन विच्छेदादेः मिथ्यात्वस्यैव अभावात् न तत्र व्यभिचार् इत्याशयेन आह– प्रतिबिम्बादि असत्यता असिद्धेः इति॥**

ಬಿಂಬ ಪ್ರತಿಬಿಂಬಗಳಲ್ಲಿಯ ಐಕ್ಯದಲ್ಲಿ ಪ್ರಮಾಣದ ನಿರಾಕರಣೆಯಿಂದ, "भेदे यथा एषापुरुषेच्छ" ಎಂಬ ಆಗಮ ಉದಾಹರಣೆಯಿಂದ ವಿಚ್ಛೇದದ ಅಂದರೆ ಪ್ರತ್ಯೇಕತೆಯ ಸತ್ಯವಾದುದನ್ನು ಉಪಮೆತ್ಯಧಿಕರಣದಲ್ಲಿ, ಅರ್ಥಜ್ಞಾನಾತ್ಮಕ ಸ್ವಪ್ನದ ಸತ್ಯತೆಯನ್ನು ಸ್ವಪ್ನಾಧಿಕರಣದಲ್ಲಿ, ಮತ್ತು ವಿಶೇಷವಾಗಿ ತತ್ತ್ವನಿರ್ಣಯಾದಿ ಗ್ರಂಥಗಳಲ್ಲಿ, ಸಮರ್ಥಿಸಿದ್ದರಿಂದ, ವಿಚ್ಛೇದಾದಿಗಳು, ಮಿಥ್ಯಾನೇ ಇಲ್ಲದಿರುವಾಗ, ಅಲ್ಲಿ ವ್ಯಭಿಚಾರಕ್ಕೆ ಆಸ್ಪದವಿರುವದಿಲ್ಲ ಎಂಬುದನ್ನು ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ.

## टीका

सवितृसुषिरादिना अनिष्ट अनुमानं कथं इति चेत् न। तत्रापि तत् ज्ञानस्यैव साधकत्वात्।

ज्ञानभेद अनवच्छिन्नस्य ज्ञानमात्रस्य अतिप्रसङ्गितत्वात् तत् अवच्छिन्नस्य सिद्धाङ्गतायां तत् अपि अङ्गत्वं इति चेत् न। दोषवशात् सत्य तत् विषय ज्ञानसदृशस्य ज्ञानस्य अङ्गता अङीकारात्।

ननु एवं सति, प्रकृतेऽपि अनुमानाङ्गानां प्रतीति सद्भावात् किं तत् सत्यतया, इति चेत् न। प्रतीतेः अपि परेण सत्ता अनभ्युपगमात्।

किं च अस्ति अयं विभागः। किञ्चित् स्वरूपेण सत् ज्ञाततया अनुमानाङ्गम्। कस्यचित् ज्ञानमेव इति। अथ सतः साधकत्वं कुतः इति चेत्। असतः साधकत्व अदर्शनात् इति, आस्तां विस्तरः।

ಅಸತ್ಯವಾದ ದೃಶ್ಯತ್ವ ಹೇತುವನ್ನ ಅಸಾಧಕವೆಂದು ಅಂಗೀಕರಿಸುವದಾದರೆ, ಅಸತ್ಯವಾದ ಸವಿತೃಸುಷಿರಾದಿಗಳು (ರಂಧ್ರ ಸೂರ್ಯ) ಅನಿಷ್ಟ ಸಾಧಕಗಳಾಗಲು ಹೇಗೆ ಸಾಧ್ಯ? ಎಂದರೆ. ಅದು ಹಾಗಿರುವದಿಲ್ಲ. ಅಲ್ಲಿ ಕೂಡ ಸವಿತೃಸುಷಿರಾದಿಗಳ ಜ್ಞಾನವೇ ಸಾಧಕವಾಗಿರುತ್ತದೆ.

ಅದಕ್ಕೆ ನಾವು (ಪರಪಕ್ಷದವರು) ಹೀಗೆ ಕೇಳುತ್ತೇವೆ. ಏಕೆ ವಿಷಯಗಳನ್ನು ಬೇರ್ಪಡಿಸದೆ ಅವುಗಳ ಜ್ಞಾನಮಾತ್ರ ಅನಿಷ್ಟ ಸಾಧಕವಾಗುತ್ತದೊ? ಅಥವಾ ಸುಷಿರಾದಿರೂಪ ವಿಷಯ ಅವಚ್ಛಿನ್ನ (ಬೇರ್ಪಡಿಸಿದ) ಜ್ಞಾನವು ಅನಿಷ್ಟ ಸಾಧಕವಾಗುತ್ತದೊ? ಮೊದಲನೆ ವಿಕಲ್ಪವು



ಸರಿಯಲ್ಲ. ಏಕೆಂದರೆ, ಜ್ಞಾನಮಾತ್ರ ಅನಿಷ್ಟಸಾಧಕವಾಗುವುದಾದರೆ, ಘಟಾದಿರೂಪ ಅಸುಷಿರಾದಿ ಜ್ಞಾನವೂ ಕೂಡ ಅನಿಷ್ಟದ ಸಾಧಕವಾಗುವ ಪ್ರಸಂಗವದಗುವದು. ಇನ್ನು ಎರಡನೆ ವಿಕಲ್ಪವೂ ಸರಿಯಲ್ಲ. ಏಕೆಂದರೆ, ಸುಷಿರಾದಿರೂಪ ವಿಷಯ ಅವಚ್ಛಿನ್ನ ಜ್ಞಾನವು ಅನಿಷ್ಟ ಸಾಧಕವಾದರೆ, ಸುಷಿರಾದಿರೂಪ ವಿಷಯಾದಿಗಳು ಕೂಡ ಅನಿಷ್ಟ ಸಾಧಕಗಳಾಗುತ್ತವೆ ಎನ್ನುತ್ತೇವೆ ಎಂದರೆ? ಹಾಗೆ ಹೇಳುವದು ಸರಿಯಲ್ಲ. ಅಲ್ಲಿ ಯಾವದೊ ದೋಷವಳಕ್ಕಾಗಿ, ಸತ್ಯವಾದ ಸವಿತೃಸುಷಿರಾದಿ ವಿಷಯಗಳ ಜ್ಞಾನಸದೃಶ ಜಾನವನ್ನು ಅಂದರೆ ಅವುಗಳ ಪ್ರತೀತಿಯನ್ನು ಸಾಧಕವೆಂದು ಅಂಗೀಕರಿಸಬೇಕು.

ಹಾಗಿದ್ದರೆ, ಪ್ರಕೃತ ದೃಶ್ಯಾನುಮಾನದಲ್ಲಿ ಕೂಡ ಎಲ್ಲ ಅನುಮಾನಾಂಗಗಳ ಪ್ರತೀತಿ ಇರುವಾಗ, ಮತ್ತೇಕೆ ಅವುಗಳ ಸತ್ಯತ್ವ ಬಗ್ಗೆ ಇಷ್ಟೊಂದು ಆಗ್ರಹ ಎಂದರೆ? ಹಾಗೆ ಹೇಳುವದು ಸರಿಯಲ್ಲ. ಏಕೆಂದರೆ ಇಲ್ಲಿ ಪರಪಕ್ಷದವರು ಪ್ರತೀತಿಯ ಸತ್ತೆಯನ್ನು ಒಪ್ಪಿರುವದಿಲ್ಲ.

ಮತ್ತು ಈತರಹದ ವಿಭಾಗ ಇರುತ್ತದೆ. ಕಿಂಚಿತವಾಗಿ ಸ್ವರೂಪದಿಂದ ಸತ್ಯವಾಗಿ ತಿಳಿದದ್ದು ಅನುಮಾನಾಂಗ ಅಥವ ಸಾಧಕವಾಗುತ್ತದೆ, ಅದು ಯಾವುದಾದರ ಜ್ಞಾನವಿರಲಿ. ಹಾಗಾದರೆ, ಸತ್ಯವಾದದ್ದೇ ಸಾಧಕವಾಗುತ್ತದೆ ಎಂದು ಹೇಗೆ ಹೇಳುತ್ತೀರಿ.? ಅಂದರೆ, ಎಲ್ಲಿಯೂ ಅಸತ್ಯವು ಅಸಾಧಕವಾಗಿದೆ ಕಂಡುಬಂದಿರುತ್ತದೆ. ಮತ್ತು ಎರಡು ಪರಸ್ಪರ ವಿರುದ್ಧವಾದವುಗಳಿರುವಾಗ, ಒಂದನ್ನು ನಿಷೇಧಿಸಿದಲ್ಲಿ, ಇನ್ನೊಂದು ವಿಧಿಯಾಗಿ ಮರುಕಳಿಸುತ್ತದೆ. ಗ್ರಂಥ ವಿಸ್ತಾರ ಭಯದಿಂದ ಇಲ್ಲಿಗೆ ಸಾಕು ಈ ವಿಷಯ ಮೇಲಿನ ಚರ್ಚೆ.

## टिप्पणीनाम् विशेषार्थानि

॥ सवितृसुषिरादिना इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**दृश्यत्व हेतोः असत्यस्य असाधकत्व अङ्गीकारे इति शेषः।**

ಇಲ್ಲಿ, ಅಸತ್ಯವಾದ ದೃಶ್ಯತ್ವ ಹೇತುವನ್ನು ಅಸಾಧಕವೆಂದು ಅಂಗೀಕರಿಸಿದರೆ ಎಂಬುದನ್ನು ಸೇರಿಸಿ ಅರ್ಥಮಾಡಬೇಕು.

**सवितृसुषिरस्य असत्यत्वात् इति भावः।**

ರಂಧ್ರದ ಸೂರ್ಯನು ಅಸತ್ಯವಾಗಿರುತ್ತಾನೆ ಎಂಬ ಭಾವವಿರುತ್ತದೆ.

**सुषिरादिना इत्यादि पदेन छिद्रां वा छायां पश्येत इति श्रुति उक्तं ग्राह्यम्।**

ಇಲ್ಲಿ सुषिरादिना ಪದದಲ್ಲಿಯ इत्यादि ಪದದಿಂದ ಛಿದ್ರ ಅಥವಾ ನೆರಳು ನೋಡಬೇಕು ಎಂದು ಶೃತಿಯು ಹೇಳಿದ್ದನ್ನು ಗ್ರಹಿಸಬೇಕು.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**तथापि स्थलान्तरे व्यभिचारात् मूल शैथल्यं इत्याशयेन् शङ्कते– सवितृसुषिरादिना इति॥**
**आदि पदेन रज्जुसर्पादि परिग्रहः। सर्प भ्रमादौ अपि हि ज्ञानम् अस्ति एव तादृशम्।**

ಇಲ್ಲಿ, ಅಸತ್ಯವಾದ ದೃಶ್ಯತ್ವ ಹೇತುವನ್ನು ಅಸಾಧಕವೆಂದು ಅಂಗೀಕರಿಸಿದರೆ, ಸ್ಥಲಾಂತರದಲ್ಲಿ ವ್ಯಭಿಚಾರ ಉಂಟಾಗಿ, ಮೂಲಕಾರಣವೇ ಕುಂದುವಂತಾಗುವದು ಎಂಬ ಆಶಯದಿಂದ ಈ ಟೀಕಾವಾಕ್ಯ ಶಂಕಿಸುತ್ತದೆ.

ಇಲ್ಲಿ आदि ಪದದಿಂದ ಹಗ್ಗುಹಾವಾದಿಗಳನ್ನು ಪರಿಗ್ರಹಿಸಲಾಗಿದೆ. ಸರ್ಪ ಭ್ರಮೆಯಲ್ಲಿಯೂ ಕೂಡ ಜ್ಞಾನ ಇರುತ್ತದೆ ಎಂಬುದೆ ಸದೃಶತೆ ಆಗಿರುತ್ತದೆ.

## ॥ अनिष्ट इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**न चिरं इव जीविष्यति इति विद्यात् इति श्रुति उक्त मरणरूप अनिष्ट इत्यर्थः।**

ಇಲ್ಲಿ ಅನಿಷ್ಟ ಎಂದರೆ, ದೀರ್ಘಕಾಲ ಜೀವಿಸುವದಿಲ್ಲ ಅಥವಾ ಇರುವದಿಲ್ಲ ಎಂದು ಶೃತಿಯಲ್ಲಿ ಹೇಳಿದ ಮರಣರೂಪ ಅನಿಷ್ಟ ಎಂದರ್ಥ.

## ॥ तत्रापि इति ॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**तदेव अर्थक्रियाकारि तत् सत् एव अर्थकारकं इति अनुव्याख्यानं मनसि निधाय उक्तं व्यभिचारं परिहरति– तत्र अपि इति॥**

ಇಲ್ಲಿ "तदेव अर्थक्रियाकारि तत् सत् एव अर्थकारकं" ಅಂದರೆ, ಸತ್ಯವೇ ಅರ್ಥಕಾರಕವಾಗುತ್ತದೆ ಎಂಬ ಅನುವ್ಯಾಖ್ಯಾನದಲ್ಲಿಯ ವಾಕ್ಯವನ್ನು ಮನಸ್ಸಿನಲ್ಲಿಟ್ಟು, ಮೇಲೆ ಪ್ರತಿಪಾದಿಸಿದ ವ್ಯಭಿಚಾರವನ್ನು ಈ ಟೀಕಾವಾಕ್ಯ ಪರಿಹರಿಸುತ್ತದೆ.

## ॥ तत् ज्ञानस्यैव इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**सवितृसुषिर ज्ञानस्य एव इत्यर्थः। अत एव श्रुतौ अथापि, यत्र छिद्र इव आदित्यः दृश्यत इति दृशिग्रहणं कृतं इति ज्ञातव्यम्।**

ಅಂದರೆ, ರಂಧ್ರಸೂರ್ಯನ ಜ್ಞಾನವೇ ಎಂದರ್ಥ. ಅದನ್ನೆ ಶೃತಿ ಕೂಡ ತಿಳಿಸುತ್ತದೆ. ಎಲ್ಲಿ ಛಿದ್ರದಂತೆ ಆದಿತ್ಯ ಕಾಣಿಸುತ್ತಾನೆ ಎಂದು ದೃಶ್ಯಗ್ರಹಣ ಮಾಡಿದ್ದು ಎಂದು ತಿಳಿಯಬೇಕು.

**ज्ञानं तु सत्यमेव इति सत्यस्यैव साधकत्वं इति भावः।**

ಜ್ಞಾನವಾದರೂ ಸತ್ಯವೇ ಆಗಿರುತ್ತದೆ, ಆದ್ದರಿಂದ ಇಲ್ಲಿ ಸತ್ಯವಾದುದೆ ಸಾಧಕತ್ವ ಆಗುತ್ತದೆ ಎಂಬ ಭಾವವಿರುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:



**सुषिरादि ज्ञानस्य इत्यर्थः। तस्य च सत्यत्वात् न इदं मिथ्याभूतस्य साधकत्वे व्यभिचार स्थलं इति हृदयम्।**

ಸುಷಿರಾದಿಗಳ ಜ್ಞಾನವೇ ಎಂದರ್ಥ. ಅದು ಸತ್ಯವಾಗಿರುವದರಿಂದ ಇದು ಮಿಥ್ಯಾಭೂತದ ಸಾಧಕತ್ವದಲ್ಲಿಯ ವ್ಯಭಿಚಾರ ಸ್ಥಲವಾಗುವದಿಲ್ಲ ಎಂಬ ಅಭಿಪ್ರಾಯವಿರುತ್ತದೆ.

**न च भ्रमत्वात् ज्ञानं अपि असत्यं इति वाच्यम्। नाभूत् अत्र सुषिरं, नाभूत् अत्र सर्प इतिवत् च न सुषिरज्ञानं मम अभूत्, न सर्पज्ञानं अभूत् इति च कस्यचित् बाधज्ञान अनुदयात्। बाधोत्तर कालमपि सुषिरज्ञानं अभूत्, सर्पज्ञानं अभूत् इत्येव अनुवृत्तेः। भ्रमत्वस्य च विषय वैपरीत्येन एव उपपत्तेः। अर्थस्य असत्वेऽपि भ्रमस्य सत्यत्व सम्भवात् इति भावः।**

ಇನ್ನು ಭ್ರಮವಿರುವದರಿಂದ ಜ್ಞಾನ ಕೂಡ ಅಸತ್ಯವೆಂದು ಹೇಳಲಿಕ್ಕಾಗುವದಿಲ್ಲ. ಇಲ್ಲಿ ಸುಷಿರ ಇರುವದು ಬೇಡ, ಮತ್ತು ಇಲ್ಲಿ ಸರ್ಪ ಇರುವದು ಬೇಡ, ನನಗೆ ಸುಷಿರದ ಜ್ಞಾನ ಇರುವದಿಲ್ಲ, ನನಗೆ ಸರ್ಪಜ್ಞಾನ ಇರುವದಿಲ್ಲ ಎಂದು ಯಾರಿಗೂ ಬಾಧದಜ್ಞಾನೋದಯ ಆಗುವದಿಲ್ಲ. ಭ್ರಾಂತಿಯನಂತರ ಕಾಲದಲ್ಲೂ ನನಗೆ ಸುಷಿರಜ್ಞಾನವಿದೆ, ನನಗೆ ಸರ್ಪ ಜ್ಞಾನವಿದೆ ಎಂದೆ ಜ್ಞಾಪನವಿರುತ್ತದೆ. ಭ್ರಮತ್ವವು ವಿಷಯಗಳ ವಿಪರೀತತೆಯಿಂದಲೇ ಆಗುತ್ತದೆ. ಇಲ್ಲಿ ಅರ್ಥ ಅಂದರೆ ಪ್ರತಿಪಾದ್ಯ ವಸ್ತು ಅಸತ್ಯವಾಗಿದ್ದರೂ ಭ್ರಮದ ಸತ್ಯತ್ವ ಸಂಭವಿಸಬಹುದು ಎಂಬ ಭಾವ ವಿರುತ್ತದೆ.

## ॥ ज्ञेयभेद इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**असत्यस्यैव साधकत्वं अङ्गीकार्यं इति शङ्कते– ज्ञेयभेद इति॥**

ಅಸತ್ಯವೇ ಸಾಧಕತ್ವವಾಗುತ್ತದೆ ಎಂದು ಅಂಗೀಕರಿಸಬೇಕು ಎಂಬುದನ್ನು ಈ ಟೀಕಾವಾಕ್ಯ ಶಂಕಿಸುತ್ತದೆ.

**सुषिरादिरूप विषय विशेष इत्यर्थः।**

ಅಂದರೆ, ಸುಷಿರಾದಿ ವಿಷಯ ವಿಶೇಷ ಎಂದರ್ಥ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु च अत्र सवितृसुषिर अनवच्छिन्नमेव ज्ञानं अनिष्टादि साधकम् इति अभिप्रायः, किं वा तदवच्छिन्न ज्ञानं तत् साधकं इति विकल्पद्वयं मनसि निधाय आद्यं दूषयति– ज्ञेय इति॥**

ಮತ್ತು ಇಲ್ಲಿ, ಸವಿತೃಸುಷಿರದಿಂದ ಬೇರ್ಪಡಿಸದ ಜ್ಞಾನವು ಅನಿಷ್ಟಾದಿಗಳ ಸಾಧಕವಾಗುತ್ತದೆ ಎಂದು ತಮ್ಮ ಅಭಿಪ್ರಾಯವೊ ಅಥವಾ ಅದರಿಂದ ಬೇರ್ಪಡಿಸಿದ ಜ್ಞಾನವು ಅನಿಷ್ಟದ ಸಾಧಕವಾಗುತ್ತದೊ ಎಂಬ ವಿಕಲ್ಪಗಳನ್ನು ಮನಸ್ಸಿನಲ್ಲಿರಿಸಿ, ಈ ಟೀಕಾವಾಕ್ಯದಿಂದ ಮೊದಲ್ನೆ ವಿಕಲ್ಪವನ್ನು ದೂಷಿಸುತ್ತಾರೆ.

## ॥ अतिप्रसङ्गितत्वात् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

घटादिरूप सुषिरज्ञान साधारण्यात् इत्यर्थः।

ಇಲ್ಲಿ ಜ್ಞೇಯಭೇದ ಅಥವಾ ತಿಳಿದ ಹಾಗೂ ಸವಿತೃಸುಷಿರದಿಂದ ಬೇರ್ಪಡಿಸದ ಜ್ಞಾನದ ಭೇದಜ್ಞಾನವಿಲ್ಲದೆ, ಕೇವಲ ಜ್ಞಾನಮಾತ್ರ, ಇದು ಘಟಾದಿರೂಪ ಸಾಧಾರಣ್ಯವಾಗಿರುತ್ತದೆ ಎಂದರ್ಥ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

ज्ञानमात्रस्यैव अरिष्टादि साधकत्वे घट ज्ञानस्यापि ज्ञानत्वेन अरिष्टादि साधकत्वं स्यात् इति अतिप्रसङ्गात् इत्यर्थः।

अतिप्रसङ्गात् इत्यतः परमरिष्टादि सिद्ध्यङ्गत्वात् अनुपपत्तेः इति शेषः।

ಇಲ್ಲಿ ಜ್ಞೇಯಭೇದ ಅಥವಾ ತಿಳಿದ ಹಾಗೂ ಸವಿತೃಸುಷಿರದಿಂದ ಬೇರ್ಪಡಿಸದ ಜ್ಞಾನದ ಭೇದಜ್ಞಾನವಿಲ್ಲದೆ, ಕೇವಲ ಜ್ಞಾನಮಾತ್ರವೇ ಅರಿಷ್ಟಾದಿಗಳನ್ನು ಸಾಧಿಸುವದಾದರೆ, ಘಟದ ಜ್ಞಾನವು ಕೂಡ ಜ್ಞಾನವಾಗಿರುವದರಿಂದ, ಅದರಿಂದಲೂ ಅರಿಷ್ಟಾದಿ ಸಾಧಕತ್ವ ಉಂಟಾಗುವದರಿಂದ, ವಿಷಯಕ್ಕೆ ಸಂಬಂಧಪಡದದ್ದೆಂಬ ಅತಿಪ್ರಸಂಗ ದೋಷ ಉಂಟಾಗುವದು.

ಇಲ್ಲಿ ಅತಿಪ್ರಸಂಗವೆಂದದ್ದರಿಂದ ಪರಮರಿಷ್ಟಾದಿಗಳು ಅನುಮಾನದ ಸಿದ್ಧಿಯ ಅಂಗಗಳೆನ್ನಲು ಬರುವದಿಲ್ಲ ಎಂಬುದನ್ನು ಸೇರಿಸಿ ಅರ್ಥಮಾಡಬೇಕು.

## ॥ तत् अवच्छिन्नस्य इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

सुषिरादिरूप विषय अवच्छिन्नस्य इत्यर्थः।

ಅಂದರೆ, ಸುಷಿರಾದಿರೂಪ ವಿಷಯದ ಅವಚ್ಛಿನ್ನದ ಅಂದರೆ ಬೇರ್ಪಡಿಸಲ್ಪಟ್ಟ ಜ್ಞಾನದ ಎಂದರ್ಥ

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

द्वितीयं दूषयति–तदवच्छिन्नस्य इति॥

ಮೇಲೆ ನಮೂದಿಸಿದ, ಸುಷಿರಾದಿ ವಿಷಯ ಅವಚ್ಛಿನ್ನದ ಜ್ಞಾನವು ಅನಿಷ್ಟ ಸಾಧಕವೆಂಬ, ಎಂಬ ಎರಡನೆ ವಿಕಲ್ಪವನ್ನು ಈ ಟೀಕಾವಾಕ್ಯ ದೂಷಿಸುತ್ತದೆ.

यत् विशिष्टस्य यस्य यत् भवति तत् विशेषणस्यापि भवति इति व्याप्तेः अर्थ अवच्छिन्नस्य ज्ञानस्य अरिष्टादि सिद्ध्यङ्गत्वे अवच्छेदकस्य अर्थस्यापि तदङ्गत्व अवश्यम्भावात् इति भावः।

ಯಾವದರಿಂದ ವಿಶಿಷ್ಟವು ಹೇಗಾಗುತ್ತದೊ ಅದರಂತೆ ಅದರ ವಿಶೇಷಣವು ಆಗುತ್ತದೆ ಎಂಬ ವ್ಯಾಪ್ತಿಯಂತೆ, ಅರ್ಥ ಅವಚ್ಛಿನ್ನದ ಜ್ಞಾನವು ಅರಿಷ್ಟಾದಿಗಳ ಸಿದ್ಧಿಸಾಧಕವಾದಲ್ಲಿ, ಅವಚ್ಛೇದಕದ ಅರ್ಥವು ಕೂಡ ಅನಿಷ್ಟ ಸಿದ್ಧಿಯ ಅಂಗವಾಗಬೇಕಾಗುತ್ತದೆ ಎಂಬ ಭಾವ.



## ॥ सिद्धाङ्गतायां इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

मरणरूप अनिष्ट साधकत्वं इत्यर्थः।

ಅಂದರೆ, ಮರಣರೂಪ ಅನಿಷ್ಟ ಸಾಧಕತ್ವ ಎಂದರ್ಥ.

## ॥ तस्यापि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

सुषिरादिरूप विषयस्यापि इत्यर्थः।

ಅಂದರೆ, ಸುಷಿರಾದಿರೂಪ ವಿಷಯವು ಕೂಡ ಎಂದರ್ಥ.

## ॥ अङ्गत्वं इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

अनिष्ट साधकत्वं प्राप्तं इत्यर्थः।

ಅಂದರೆ, ಅನಿಷ್ಟ ಸಾಧಕತ್ವ ಪ್ರಾಪ್ತವಾಯಿತು ಎಂದಂರ್ಥ.

तथा च असत्यस्यैव साधकत्वं प्राप्तं इति द्रष्टव्यं।

ಅದರಂತೆ, ಅಸತ್ಯಕ್ಕೆಯೆ ಸಾಧಕತ್ವ ಪ್ರಾಪ್ತವಾಯಿತು ಎಂದು ತಿಳಿಯಬೇಕು.

अयं भावः–

यदुक्तं तत्रापि तत् ज्ञानस्यैव साधकत्वात् इति तत्र पृच्छामः। किं विषयानवच्छिन्नं ज्ञानमात्रं मरणरूप अनिष्ट साधकं, किं वा सुषिरादिरूप विषयावच्छिन्न ज्ञानम्।

न आद्यः। घटादिरूप असुषिरज्ञानस्यापि ज्ञानत्वेन अनिष्ट साधकत्व प्रसङ्गात्।

न द्वितीयः। सुषिरादिरूप विषय अवच्छिन्नस्य ज्ञानस्य अनिष्ट सिद्ध्यंगत्वे सुषिरादिरूप विषयस्यापि अनिष्ट साधकत्व आपत्तेः। अवच्छिन्नस्य यद्भ्वति तत् अवच्छेदकस्यापि भवति इति नियमस्य लम्बकर्णमानय इत्यादौ दर्शनात् इति।

ಮೇಲಿನ ತಾತ್ವಿಕ ವಿವೇಚನೆಯ ಈ ಭಾವವಿರುತ್ತದೆ:

"तत्रापि तत् ज्ञानस्यैव साधकत्वात्" ಅಂದರೆ, ಅಲ್ಲಿ ಕೂಡ ಸುಷಿರಾದಿಗಳ ಜ್ಞಾನವೇ ಸಾಧಕವಾಗುತ್ತದೆ, ಎಂದು ಮೇಲೆ ಹೇಳಲಾಯಿತು. ಅದಕ್ಕೆ ನಾವು (ಪರಪಕ್ಷದವರು) ಹೀಗೆ ಕೇಳುತ್ತೇವೆ. ಏಕೆ ವಿಷಯಗಳನ್ನು ಬೇರ್ಪಡಿಸದೆ ಅವುಗಳ ಜ್ಞಾನಮಾತ್ರ ಅನಿಷ್ಟ ಸಾಧಕವಾಗುತ್ತದೊ? ಅಥವಾ ಸುಷಿರಾದಿರೂಪ ವಿಷಯ ಅವಚ್ಛಿನ್ನ (ಬೇರ್ಪಡಿಸಿದ) ಜ್ಞಾನವು ಅನಿಷ್ಟ ಸಾಧಕವಾಗುತ್ತದೊ?

ಮೊದಲನೆ ವಿಕಲ್ಪವು ಸರಿಯಲ್ಲ. ಏಕೆಂದರೆ, ಜ್ಞಾನಮಾತ್ರ ಅನಿಷ್ಟಸಾಧಕವಾಗುವುದಾದರೆ, ಘಟಾದಿರೂಪ ಅಸುಷಿರಾದಿ ಜ್ಞಾನವೂ ಕೂಡ ಅನಿಷ್ಟದ ಸಾಧಕವಾಗುವ ಪ್ರಸಂಗವದಗುವದು.

ಇನ್ನು ಎರಡನೆ ವಿಕಲ್ಪವೂ ಸರಿಯಲ್ಲ. ಏಕೆಂದರೆ, ಸುಷಿರಾದಿರೂಪ ವಿಷಯ ಅವಚ್ಛಿನ್ನ ಜ್ಞಾನವು ಅನಿಷ್ಟ ಸಾಧಕವಾದರೆ, ಸುಷಿರಾದಿರೂಪ ವಿಷಯಾದಿಗಳು ಕೂಡ ಅನಿಷ್ಟ

ಸಾಧಕಗಳಾಗುತ್ತವೆ. ಅವಚ್ಛಿನ್ನ ಹೇಗೆ ಆಗುತ್ತದೊ, ಅವಚ್ಛೇದಕ ಕೂಡ ಹಾಗೆಯೆ ಆಗುತ್ತದೆ ಎಂಬ ನಿಯಮವು ಲಂಬಕರ್ಣಮಾನ ಮುಂತಾದವುಗಳಲ್ಲಿ ಕಂಡುಬರುತ್ತದೆ.

## ॥ तत् अवच्छिन्नस्य सिद्धाङ्गतायां तस्यापि अङ्गत्वं इति चेत् न इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**अर्थ अवच्छिन्नं ज्ञानम् अङ्गं इति पक्षः अस्तु। तथात्वे अवच्छेदक अर्थस्यापि सिद्ध्यङ्गत्वात्वं स्यात् इति चेत्।**

ಅರ್ಥ ಅವಚ್ಛಿನ್ನದ (ಅಂದರೆ ಸುಷಿರಾದಿ ವಿಷಯಾದಿಗಳ) ಜ್ಞಾನವು ಅನಿಷ್ಟ ಸಾಧಕವಾಗುತ್ತದೆ ಎಂಬ ಪಕ್ಷವಿರಲಿ. ಹಾಗಾದರೆ, ಅವಚ್ಛೆದಕ ಅರ್ಥ (ಸುಷಿರಾದಿ ವಿಷಯಗಳ ಎಂದರ್ಥ) ಕೂಡ ಅನಿಷ್ಟ ಸಾಧಕಗಳಾಗುತ್ತವೆ ಎನುತ್ತೇವೆ ಎಂದರೆ?

**किम् अवच्छिन्नस्य यद्भवति तत् अवच्छेदकस्यापि भवति इति समान्य व्याप्तिः? किं वा अवच्छिन्नस्य हेतुत्वे अवच्छेदकस्यापि हेतुत्वं इति विशेष व्याप्तिः?**

ಏಕೆ, ಇದನ್ನು ತಾವು ಅವಚ್ಛಿನ್ನವು ಹೇಗಾಗುತ್ತದೊ ಹಾಗೆಯೆ ಅವಚ್ಛೆದಕದ ಕೂಡ ಆಗುತ್ತದೆ ಎಂಬ ಸಮಾನ್ಯ ವ್ಯಾಪ್ತಿಯನ್ನು ಅನುಸರಿಸಿ ಹೇಳುತ್ತೀರೊ ಅಥವಾ ಅವಚ್ಛಿನ್ನವು ಹೇತುವಾದಲ್ಲಿ ಅವಚ್ಛೆದಕವು ಕೂಡ ಹೇತುವಾಗುತ್ತದೆ ಎಂಬ ವಿಶೇಷ ವ್ಯಾಪ್ತಿಯಂತೆ ಹೇಳುತ್ತೀರೊ?

**न आद्यः। ब्रह्मज्ञानस्य वेदान्तसाध्यत्वेऽपि त्वया ब्रह्मणः तत् साध्यता अनभ्युपगमात्।**

ಮೊದಲನೆ ವಿಕಲ್ಪವನ್ನು ಹೇಳಲಿಕ್ಕಾಗುವದಿಲ್ಲ. ಏಕೆಂದರೆ, ಬ್ರಹ್ಮ ಜ್ಞಾನವು ವೇದಾಂತದಿಂದ ಸಾಧ್ಯವಾಗಿದ್ದರೂ ತಾವು ಬ್ರಹಣನು ಅವುಗಳಿಂದ ಸಾಧ್ಯ ಎಂದು ಒಪ್ಪುವದಿಲ್ಲ.

**न द्वितीयः। ब्रह्मज्ञानस्य जगत् उपादानत्वे ब्रह्मणोऽपि तत् प्रसंगात्। निर्विकारे च तस्मिन् तस्य अयोगात्। आत्म ज्ञानस्य अविद्यानिवृत्ति हेतुत्वे आत्मनोऽपि अविद्या निवृत्ति हेतुत्व प्रसङ्गात् च। तस्य च ज्ञानस्फोरकत्वेन तत् अनिवर्तकत्वात्।**

ಎರಡನೆ ವಿಕಲ್ಪವನ್ನು ಹೇಳುವದು ಸರಿಯಲ್ಲ. ಏಕೆಂದರೆ, ಬ್ರಹ್ಮಜ್ಞಾನವು ಜಗತ್ತಿಗೆ ಉಪಾದಾನತ್ವವಾದಲ್ಲಿ ಬ್ರಹ್ಮನು ಕೂಡ ಜಗತ್ತಿಗೆ ಉಪಾದಾನಕಾರಣನಾಗುವ ಪ್ರಸಂಗ ಉಂಟಾಗುವದು. ಆದರೆ ಬ್ರಹ್ಮನು ನಿರ್ವಿಕಾರನಾದ್ದರಿಂದ ಅವನಲ್ಲಿ ಅದು ಅಯೋಗ್ಯವೆನಿಸುವದು. ಹಾಗೂ ಆತ್ಮ ಜ್ಞಾನವು ಅವಿದ್ಯಾನಿವೃತ್ತಿಗೆ ಹೇತುವಾದಲ್ಲಿ ಆತ್ಮನು ಕೂಡ ಅವಿದ್ಯಾನಿವೃತ್ತಿಗೆ ಹೇತುವಾಗುವ ಪ್ರಸಂಗವದಗುವದು. ಮತ್ತು ಅವನು ಜ್ಞಾನಸ್ಫೂರಕನಾದ್ದರಿಂದ ಅಂದರೆ ಜ್ಞಾನ-ಅಗೋಚರನಾಗಿದ್ದರಿಂದ ಅವನು ಅವಿದ್ಯಾ ನಿವರ್ತಕವಾಗಲಾರ.

**ननु अथापि ज्ञेयस्य ज्ञानव्यावर्तकत्वात् व्यावर्तकत्वस्य च व्यावृत्ति ज्ञानहेतुत्वात् आरोपितस्यापि हेतुत्व सिद्धिः इति चेत्।**

ಹೀಗಿದ್ದರೂ, ಜ್ಞೇಯನು ಎಂದರೆ ತಿಳಿಯಲ್ಪಡುವವನು ಜ್ಞಾನವ್ಯಾವರ್ತಕ ಎಂದರೆ ಜ್ಞಾನಕ್ಕಿಂತ ಬೇರ್ಪಡಿಸಿರುತ್ತಾನೆ, ಮತ್ತು ವ್ಯಾವರ್ತಕವು ಅಂದರೆ ಬೇರ್ಪಡುವಿಕೆಯು,



ವ್ಯಾವೃತ್ತಿ ಅಂದರೆ ಬೇರ್ಪಡಿಸುವ ಜ್ಞಾನದ ಹೇತುವಾಗಿರುವದರಿಂದ, ಆರೋಪಿತಕ್ಕೂ ಕೂಡ ಹೆತುತ್ವದ ಸಿದ್ಧಿ ಆಗುತ್ತದೆ ಎಂದರೆ?

**स्यात् एतत् एवं, यदि व्यावृत्ति ज्ञानहेतुत्वं व्यावर्तकत्वं स्यात्। न च एवं। किं तु व्यावृत्तिज्ञान हेतुज्ञान विषयत्वमेव व्यावर्तकत्वम्। कुत् एतत्। सत्यपि दण्डे दण्ड अज्ञाने व्यावृत्ति अज्ञानात्। मया च आरोपितस्य हेतुता अनभ्युगमेऽपि व्यावृत्तिधी हेतुभूत ज्ञानविषयत्वस्य अभ्युपगतत्वेन आरोपितस्य व्यावृत्तिज्ञान हेतुज्ञानविषयत्वापरपर्याय् व्यावर्तकता उपपत्तेः।**

ತಾವು ಹೀಗೆ ಹೇಳುವದು ಸರಿ, ಯಾವಾಗ ವ್ಯಾವೃತ್ತಿ ಅಂದರೆ ಬೇರ್ಪಡಿಸುವ ಜ್ಞಾನ ಹೇತುತ್ವ, ವ್ಯಾವರ್ತಕ ಅಂದರೆ ಬೇರ್ಪಡುವಿಕೆ ಆಗುತ್ತದೆ. ಅದು ಹಾಗಿರುವದಿಲ್ಲ. ಕಿಂತು ವ್ಯಾವೃತ್ತಿ ಅಂದರೆ ಬೇರ್ಪಡಿಸುವ ಜ್ಞಾನ ಹೇತು ಜ್ಞಾನ ವಿಷಯತ್ವವೇ ವ್ಯಾವರ್ತಕ ಅಂದರೆ ಬೇರ್ಪಡುವಿಕೆ ಆಗಿರುತ್ತದೆ. ಇದನ್ನು ಹೇಗೆ ಹೇಳಿತ್ತೀರಿ? ಉದಾಹರಣೆಗೆ, ದಂಡವನ್ನು ಹಿಡಿದುಕೊಂಡವನು ಸತ್ಯವಾದರೂ, ದಂಡದ ಅಜ್ಞಾನವಿದ್ದಾಗ ವ್ಯಾವೃತ್ತಿ ಬೇರ್ಪಡಿಸುವಿಕೆಯ ಅಜ್ಞಾನವಿರುತ್ತದೆ. ನಾವಾದರೂ ಆರೋಪಿತವನ್ನು ಹೇತುವೆಂದು ಒಪ್ಪದೇ ಇದ್ದರೂ, ವ್ಯಾವೃತ್ತಿ ಎಂದರೆ ಬೇರ್ಪಡಿಸುವ ಬುದ್ಧಿ ಹೇತುಭೂತ ಜ್ಞಾನವಿಷಯತ್ವದ್ದಾಗಿರುತ್ತದೆ ಎಂದು ಒಪ್ಪಿದ್ದರಿಂದ, ಆರೋಪಿತದ ವ್ಯಾವೃತ್ತಿ ಅಂದರೆ ಬೇರ್ಪಡಿಸುವ ಜ್ಞಾನವು ಹೇತು ಜ್ಞಾನವಿಷಯತ್ವಪರಪರ್ಯಾಯ ವ್ಯಾವರ್ತಕ ಅಂದರೆ ಬೇರ್ಪಡುವಿಕೆಯೆಂದು ಸಮರ್ಥಿಸಲಾಗುತ್ತಿದೆ.

**ननु अवच्छेदकस्य आरोपिततया तत् अवच्छिन्नं अपि आरोपितमेव इति, पुनः अपि आरोपितस्य हेतुता प्राप्त इति चेत् न।**

ಇನ್ನು ಅವಚ್ಛೆದಕದ ಅಂದರೆ ವಿಷಯಾದಿಗಳ ಆರೋಪಿತವಾಗಿ ಅವುಗಳ ಅವಚ್ಛಿನ್ನ ಅಂದರೆ ಜ್ಞಾನವೂ ಕೂಡ ಆರೋಪಿತವೇ ಆಗುವದರಿಂದ, ಮತ್ತೆ ಆರೋಪಿತದ ಹೇತು ಪ್ರಾಪ್ತವಾಗುತ್ತದೆ ಎಂದರೆ? ಹಾಗೆ ಹೇಳುವದು ಸರಿಯಲ್ಲ.

**अज्ञानस्य अवच्छेदकस्य अनिर्वचनीयत्वेऽपि तत् अवच्छिन्न अज्ञानहानेः ब्रह्म अभिन्नायाः पञ्चमप्रकाराया वा सदसद्वैलक्षण्य लक्षण अनिर्वचनीयत्व अभावात्। द्वैतस्य असत्यत्वेऽपि तत् अवच्छिन्नस्य द्वैत अभावरूपस्य अद्वैतस्य सत्यतायाः त्वया अभ्युपगमाच्च। तत्र अज्ञान द्वैते तटस्थे इति चेत्। अत्र अपि ज्ञेयं तथा इति, अवच्छिन्नं पक्षमाश्रित्य केचित् परिहरन्ति।**

ಅವಚ್ಛೆದಕದ ಅಜ್ಞಾನ ಅನಿರ್ವಚನೀಯವೆನಿಸಿದರೂ ಅದರ ಅವಚ್ಛಿನ್ನ, ಅಜ್ಞಾನ ಹಾನಿ, ಬ್ರಹ್ಮ ಅಭಿನ್ನವಾಗಿ ಪಂಚಮಪ್ರಕಾರ ಅಥವಾ ಸದಸದ್ವೈಲಕ್ಷಣ್ಯ ಲಕ್ಷಣ ಅನಿರ್ವಚನಿಯತ್ವ ಎಂದೂ ಆಗುವದಿಲ್ಲ ಅಥವಾ ಇರುವದಿಲ್ಲ. ದ್ವೈತವು ಅಸತ್ಯವಾದರೂ ಅದರ ಅವಚ್ಛಿನ್ನದ (ವಿಷಯದ ಜ್ಞಾನದ ) ದ್ವೈತ ಅಭಾವರೂಪ ಅದ್ವೈತವನ್ನು ಸತ್ಯವೆಂದು ತಾವು ಈಗಾಗಲೆ ಒಪ್ಪಿರುತ್ತೀರಿ. ಅಲ್ಲಿ ದ್ವೈತದಲ್ಲಿಯ ಅಜ್ಞಾನ ತಟಸ್ಥವಾಗಿರುತ್ತದೆ ಎಂದರೆ. ಇಲ್ಲಿ ಕೂಡ ತಿಳಿಯಲ್ಪಡುವದನ್ನು ಹಾಗೆಯೆ ತಿಳಿಯಬೇಕು. ಹೀಗೆ ವಿಷಯಗಳ ಅವಚ್ಛಿನ್ನ ಜ್ಞಾನ ಸಾಧಕವಾಗುತ್ತದೆ ಎಂಬ ಪಕ್ಷವನ್ನು ಆಶ್ರಯಿಸಿ, ಪರಪಕ್ಷದವರ, ಅಸತ್ಯವಾದ ಅವಚ್ಛೇದಕ

ವಿಷಯಾದಿಗಳು ಕೂಡ ಅನುಮಾನ ಸಾಧಕಗಳಾಗುತ್ತವೆ ಎಂಬ ವಾದವನ್ನು ಕೆಲವರು ಪರಿಹರಿಸುತ್ತಾರೆ.

## ॥न दोषवशात् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**अर्थ अनवच्छिन्न ज्ञानमेव साधकम् इति पक्षं आश्रित्य परिहरति–दोषवशात् इत्यादिना।**

ಸುಷಿರಾದಿವಿಷಯಗಳ, ಅವುಗಳಿಂದ ಬೇರ್ಪಡಿಸದ ಜ್ಞಾನವೇ ಸಾಧಕವಾಗುತ್ತದೆ ಎಂಬ ಪಕ್ಷವನ್ನು ಆಶ್ರಯಿಸಿ, ಪರಪಕ್ಷದವರ ಅಸತ್ಯವಾದ ಸುಷಿರಾದಿವಿಷಯಗಳು ಅನುಮಾನದ ಸಾಧಕಗಳಾಗುತ್ತವೆ ಎಂಬ ವಾದವನ್ನು, ಈಗ ಪರಿಹರಿಸುತ್ತಾರೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**स्वयं तु अनवच्छिन्न पक्ष्मेव आश्रित्य आह– न दोषवशात् इति॥**

ಈಗ ಸ್ವತಃ ಸುಷಿರಾದಿಗಳಿಂದ ಜ್ಞೇಯಭೇದವನ್ನು ಬೇರ್ಪಡಿಸದ (ಅನವಚ್ಛಿನ್ನ) ಜ್ಞಾನದ ಪಕ್ಷವನ್ನೇ ಆಶ್ರಯಿಸಿ, ಪರಪಕ್ಷದವರ ಅಸತ್ಯವಾದ ಸುಷಿರಾದಿವಿಷಯಗಳು ಅನುಮಾನದ ಸಾಧಕಗಳಾಗುತ್ತವೆ ಎಂಬ ವಾದವನ್ನು, ಪರಿಹರಿಸುತ್ತಾರೆ.

**अयं अर्थः–अर्थ अनवच्छिन्नमेव सुषिरज्ञानं हेतुः। न च असुषिरज्ञानस्यापि हेतुता प्रसङ्गः। विषय अवच्छेदमन्तरेण धर्मान्तरेण एव असुषिरज्ञानात् व्यावृत्तेः। तथा हि–**

ಇಲ್ಲಿ, ಸುಷಿರಾದಿವಿಷಯಗಳ ಅನವಚ್ಛಿನ್ನ ಸುಷಿರಜ್ಞಾನವು ಹೇತು ಆಗಿರುತ್ತದೆ. ಇದರಿಂದ ಅಸುಷಿರಜ್ಞಾನಕೂಡ ಹೇತುವಾಗುವ ಪ್ರಸಂಗ ಉಂಟಾಗುತ್ತದೆ ಎಂದು ಹೇಳುವದು ಸರಿಯಲ್ಲ. ವಿಷಯ ಅವಚ್ಛೇದ ವ್ಯತಾಸದಿಂದ ಧರ್ಮ ವ್ಯತ್ಯಾಸದಿಂದಲೇ ಅಸುಷಿರಜ್ಞಾನದಿಂದ ಸುಷಿರಾದಿವಿಷಯಗಳ ಅನವಚ್ಛಿನ್ನ ಜ್ಞಾನವನ್ನು ಪ್ರತ್ಯೇಕಿಸಬಹುದು. ಇದನ್ನು ಈ ಕೆಳಗಿನಂತೆ ವಿವರಿಸಬಹುದು:

**सा किं सत्यसुषिरज्ञानस्य न इत्युच्यते। किं वा असत्यसुषिरज्ञानस्य।**

ಇಲ್ಲಿ ಅಸುಷಿರಜ್ಞಾನಕೂಡ ಹೇತು ಆಗುವುದಾದರೆ, ಅದನ್ನು ಸತ್ಯಸುಷಿರಜ್ಞಾನದಿಂದ ಪ್ರತ್ಯೇಕಿಸಲು ಆಗುವದಿಲ್ಲ ಎನ್ನುತ್ತೀರೊ? ಅಥವಾ ಅಸತ್ಯಸುಷಿರಜ್ಞಾನದಿಂದ ಪ್ರತ್ಯೇಕಿಸಲು ಆಗುವದಿಲ್ಲಂತೊ?

**न आद्यः। "सत्यसुषिरज्ञानम् असुषिरज्ञानात् व्यावर्तक धर्मोपेतं ततो व्यावृत्तत्वात् संमतवत्" इति तत् अनुमानात्। न च विषयेण अर्थान्तरतया तस्य अतद्धर्मत्वात्। नापि विषय सम्बन्धेन। ज्ञानज्ञेययोः संयोगादेः असम्भवात्। स्वरूप प्रत्यासत्तेश्च ज्ञानस्वरूप अनतिरिक्तत्वेन तत् व्यावर्तकत्व अयोगात्।**

ಮೊದಲನೆಯದನ್ನು ಹೇಳುವದು ಸರಿಯಲ್ಲ. "सत्यसुषिरज्ञानम् असुषिरज्ञानात् व्यावर्तक धर्मोपेतं ततो व्यावृत्तत्वात् संमतवत्" ಎಂಬ ಅನುಮಾನವನ್ನು ಪ್ರಯೋಗಿಸಬಹುದಾಗಿದೆ. ಮತ್ತು ವಿಷಯದಿಂದ ಅರ್ಥವ್ಯತ್ಯಾಸಗಳ ಮೂಲಕ ಅದನ್ನು ಧರ್ಮವಿಲ್ಲವುಗಳಾಗಿ



ಮಾಡಲಾಗುವದಿಲ್ಲ. ಹಾಗೂ ವಿಷಯಸಂಬಂಧದಿಂದ ಕೂಡ ಹಾಗೆ ಅನ್ನಲಾಗುವದಿಲ್ಲ. ಜ್ಞಾನಜ್ಞೇಯಗಳಲ್ಲಿ (ತಿಳುವಳಿಕೆ, ತಿಳಿಯಲ್ಪಡುವಗಳಲ್ಲಿ) ಸಂಯೋಗಾದಿಗಳು ಅಸಂಭವವಾಗಿರುತ್ತವೆ.

ಸ್ವರೂಪ, ಅದರ ಸಾದೃಶ್ಯಗಳ ಜ್ಞಾನಸ್ವರೂಪ ಅತಿರಿಕ್ತವಿರಲು ಸಾಧ್ಯವಿಲ್ಲ, ಆದ್ದರಿಂದ ಅವುಗಳನ್ನು ಪ್ರತ್ಯೇಕಿಸುವದು ಅಯೋಗ್ಯವೆನಿಸುತ್ತದೆ.

**किं च "सत्यसुषिर ज्ञानं विषय–उपाधिं अनपेक्ष्य असुषिरज्ञानात् विलक्षणं तत् जनक विलक्षण जनकजन्यत्वात् परोक्षज्ञानजनक विलक्षणजनकजन्य अपरोक्ष ज्ञानवत्"। न च असिद्धिः। असुषिर ज्ञानजनको यः असुषिरेन्द्रियु संयोगः तद्विलक्षण सुषिरेन्द्रिय सम्प्रयोगजन्यत्वात् सुषिरज्ञानस्य। न च दृष्टान्तस्य साध्यवैकल्यं। एकविषययोः अपि परोक्षत्व अपरोक्षत्व लक्षण वैलक्षण्य दर्शनेन अपरोक्षत्वस्य विषयोपाधिकत्व अभावात्। न च विलक्षणजनकजन्यत्वं सुषिराख्य विषयसम्बन्धरूप वैलक्षण्येन एव उपपन्नं इति तत् अतिरिक्त वैलक्ष्ण्य साधने अप्रयोजकता। यव बीज विलक्षण कलमबीजजन्यत्वस्यापि कदाचित् देवदत्तादि सम्बन्धरूप वैलक्ष्यण्येन एव उपपत्त्या कलमबीजांकुरस्य यवबीजांकुरात् स्वतः वैलक्ष्ण्यरूप कलमांकुरत्वस्य कदाचित् अभाव प्रसंगात्।**

ಮತ್ತು, "सत्यसुषिर ज्ञानं विषय–उपाधिं अनपेक्ष्य असुषिरज्ञानात् विलक्षणं तत् जनक विलक्षण जनकजन्यत्वात् परोक्षज्ञानजनक विलक्षणजनकजन्य अपरोक्ष ज्ञानवत्"। ಎಂಬ ಅನುಮಾನವನ್ನು ಪ್ರಯೋಗಿಸಬಹುದು. ಇಲ್ಲಿ ಅಸಿದ್ಧಿ ದೋಷವನ್ನು ಹೇಳಲಾಗದು. ಯಾವದು ಅಸುಷಿರ ಜ್ಞಾನಜನಕವು ಅಸುಷಿರ ಇಂದ್ರಿಯ ಸಂಯೋಗದಿಂದಾಗಿರುತ್ತದೊ, ಅದಕ್ಕಿಂತ ವಿಲಕ್ಷಣ ಸುಷಿರ ಇಂದ್ರಿಯ ಸಂಪ್ರಯೋಗಜನ್ಯ ಸುಷಿರಜ್ಞಾನವಾಗಿರುತ್ತದೆ. ಈ ದೃಷ್ಟಾಂತವನ್ನು ಸಾಧ್ಯವೈಕಲ್ಯವೆಂದು ಹೇಳಲಾಗುವದಿಲ್ಲ. ಒಂದೇ ವಿಷಯಗಳಾಗಿದ್ದರೂ ಪರೋಕ್ಷತ್ವ ಹಾಗೂ ಅಪರೋಕ್ಷತ್ವ ಲಕ್ಷಣ ವೈಲಕ್ಷಣ್ಯ ಕಂಡುಬಂದಿದ್ದರಿಂದ ಅಪರೋಕ್ಷತ್ವಕ್ಕೆ ವಿಷಯೋಪಾಧಿಕತ್ವದ ಅಭಾವವಿರುತ್ತದೆ. ಹಾಗೂ ವಿಲಕ್ಷಣಜನಕ ಜನ್ಯತ್ವವನ್ನು ಸುಷಿರಾಖ್ಯ ವಿಷಯಸಂಬಂಧರೂಪ ವೈಲಕ್ಷಣದಿಂದಲೇ ಉಪಪಾದಿಸಲಾಗಿತ್ತಿದೆಂದು ಅದರ ಅತಿರಿಕ್ತ ವೈಲಕ್ಷಣ ಸಾಧಿಸುವದು ಅಪ್ರಯೋಜಕವಾಗಿದೆ ಎಂದು ಹೇಳಲಾಗದು. ಹಾಗೆನ್ನುವದಾದರೆ, ಯವ ಬೀಜ ವಿಲಕ್ಷಣ, ಕಲಮ ಅಂದರೆ ಬತ್ತ ಬೀಜ ಜನ್ಯತ್ವದ ಕೂಡ ಕದಾಚಿತ್, ದೇವದತ್ತಾದಿ ಸಂಬಂಧರೂಪ ವೈಲಕ್ಷಣದಿಂದಲೇ ಉಪಪತ್ತಿ ಉಂಟಾಗಿ, ಕಲಮಬೀಜಾಂಕುರದ, ಯವಬೀಜಾಂಕುರದಿಂದ ಸ್ವತಃ ವೈಲಕ್ಷಣ್ಯರೂಪ ಕಲಮಾಂಕುರದ ಕದಾಚಿತ್, ಅಭಾವತೆಯ ಪ್ರಸಂಗ ಒದಗುತ್ತದೆ.

**अपि च "सत्यसुषिरज्ञानम् असुषिरजानात् अन्यसम्बन्धं अनपेक्ष्य विलक्षणं असुषिरज्ञानजनितार्थ क्रियाविलक्षणार्थ क्रियाकारित्वात् यवबीजात् कलमबीजवत्"। न च सुषिर सम्बन्धरूप वैलक्षण्येन एव विलक्षणार्थ क्रियाकारित्व उपपत्त्या स्वतः वैलक्षण्ये अप्रयोजकता। तथात्वे देवदत्त सम्बन्धेन विलक्षणस्य यवबीजस्य कदाचित् कलमांकुरोत्पादकत्व प्रसंगात्।**

ಮತ್ತು "सत्यसुषिरज्ञानम् असुषिरजानात् अन्यसम्बन्धं अनपेक्ष्य विलक्षणं असुषिरज्ञानजनितार्थ क्रियाविलक्षणार्थ क्रियाकारित्वात् यवबीजात् कलमबीजवत्"। ಎಂಬ ಅನುಮಾನನ್ನು ಕೂಡ ಪ್ರಯೋಗಿಸಬಹುದು. ಇನ್ನು ಸುಷಿರ ಸಂಬಂಧರೂಪ ವೈಲಕ್ಷಣ್ಯದಿಂದಲೇ ವಿಲಕ್ಷಣಾರ್ಥ ಕ್ರಿಯಾಕಾರಿತ್ವ ಉಪಪಾದಿಸುವಾಗ, ಸ್ವತಃದ ವೈಲಕ್ಷಣ್ಯದಲ್ಲಿ ಅಪ್ರಯೋಜಕತ್ವವನ್ನು ಹೇಳಲಾಗದು. ಹಾಗಿದ್ದರೆ, ದೇವದತ್ತ ಸಂಬಂಧದಿಂದ ಯವಬೀಜದ ವಿಲಕ್ಷಣಕ್ಕೆ ಕದಾಚಿತ್ ಕಲಮಾಂಕುರ ಉತ್ಪಾದಕತ್ವದ ಪ್ರಸಂಗ ಉಂಟಾಗುವದು.

ननु एवं घटाभावस्यापि घटसम्बन्धं अनपेक्ष्यैव पटाभावदिभ्यो वैलक्षण्यं स्यात् इति चेत्। स्यात् एव अन्यथा पटसम्बन्धेनापि विलक्षणं न स्यात्।

ಇನ್ನು ಈ ರೀತಿಯಿಂದ ಘಟಾಭಾವದ ಕೂಡ ಘಟ ಸಂಬಂಧವನ್ನು ಅಪೇಕ್ಷಿಸದೇ ಪಟಾಭಾವದಿಗಳ ವೈಲಕ್ಷಣ್ಯ ಆಗಬೇಕಾಗುತ್ತದೆ ಎಂದರೆ, ಹಾಗೇ ಇರುತ್ತದೆ, ಅನ್ಯಥಾ ಪಟಸಂಬಂಧದಿಂದ ಕೂಡ ಘಟಾಭಾವದ ವಿಲಕ್ಷಣವಿಲ್ಲವೆಂದೆನ್ನ ಬೇಕಾಗುತ್ತದೆ.

न हि स्वतः अविलक्षणं अन्य सम्बन्धमात्रेण विलक्षणं भवति। एकस्यैव सत्तादेः ईश्वरज्ञानादेश्च विलक्षण अनेकसम्बन्धेन वैलक्ष्ण्यप्रसंगात्। एकस्यैव दृशः अनेकदृश्य सम्बन्धेन वैलक्षण्य आपाताच्च। देवदत्तादेः अपि न दण्डादीनाम् वैलक्षण्यम्। किंतु स्वत एव। दण्डादिना तु दण्ड्यादिरूपं विशिष्टाख्यं वस्त्वन्तरमेव उत्पद्यत इति न कश्चित् दोषः।

ಸ್ವತಃ ಅವಿಲಕ್ಷಣವಿದ್ದು ಅನ್ಯರ ಸಂಬಂಧಮಾತ್ರದಿಂದ ವಿಲಕ್ಷಣವಾಗಲು ಸಾಧ್ಯವಿಲ್ಲ. ಹಾಗಿದ್ದರೆ, ಒಂದರ ಸತ್ತೆಯಿಂದಲೇ ಈಶ್ವರಜ್ಞಾನಾದಿಗಳ ವಿಲಕ್ಷಣ ಅನೇಕ ಸಂಬಂಧ ಮೂಲಕ ವೈಲಕ್ಷಣ್ಯ ಉಂಟಾಗುವ ಪ್ರಸಂಗ ಬರುತ್ತದೆ. ಅದಲ್ಲದೆ, ಒಂದೇ ನೋಟಕ್ಕೆ ಅನೇಕ ದೃಶ್ಯ (ನೋಡಬಹುದಾದ) ಸಂಬಂಧದಿಂದ ವೈಲಕ್ಷಣ ಉಂಟಾಗಬೇಕಾಗುತ್ತದೆ. ದೇವದತ್ತಾದಿಗಳಿಗೆ ಕೂಡ ದಂಡಾದಿಗಳಿಂದ ವೈಲಕ್ಷಣ್ಯ ಉಂಟಾಗುವದಿಲ್ಲ ಕಿಂತು ಸ್ವತಃದ್ದೇ ಆಗಿರುತ್ತದೆ. ದಂಡಾದಿಗಳಿಗಾದರೂ ದಂಡ್ಯಾದಿರೂಪ ವಿಶಿಷ್ಟಾಖ್ಯ ವಸ್ತು ವ್ಯತ್ಯಾಸಗಳಿಂದಲೇ ವೈಲಕ್ಷಣ್ಯ ಉಂಟಾಗುವದರಿಂದ , ಇಲ್ಲಿ ಯಾವದೆ ದೋಷಕ್ಕೆ ಆಸ್ಪದವಿರುವದಿಲ್ಲ.

काकातिरेकेण गृहे संस्थानविशेषवत्। क्षीरसम्बन्धातिरेकेण क्षीरमाधुर्ये गुडादिमाधुर्यात् वैलक्षण्यवत् च। घटसम्बन्धातिरेकेण घटाभावस्यापि पटाभावादितो विलक्षण स्वभाव विशेषस्य घटनिरूपणाधीन निरूपणविषयस्य विलक्षणकारणजन्यत्वस्य विलक्षणकार्यकरत्वस्य वा अनुभवसिद्धत्वस्य वा अनुभवसिद्धत्वात्।

स्वतः अविलक्षणस्य च न अन्यसम्बन्धमात्रेण विलक्षणकारणजन्यत्वं विलक्षणकार्यकरत्वं च इत्युक्तम्।

ಕಾಕಗಳ ಆಧಿಕ್ಯ ಅಥವಾ ವ್ಯತ್ಯಾಸದಿಂದ ಗೃಹದಲ್ಲಿ ಸಂಸ್ಥಾನ ವಿಶೇಷತೆಯಂತೆ. ಹಾಲಿನಸಂಬಂಧದ ವ್ಯತ್ಯಾಸದಿಂದ ಹಾಲಿನಮಾಧುರ್ಯದಲ್ಲಿ ಬೆಲ್ಲಾದಿಮಾಧುರ್ಯಕ್ಕಿಂತ ವೈಲಕ್ಷಣದಂತೆ. ಘಟ ಸಂಬಂಧವ್ಯತ್ಯಾಸದಿಂದ, ಘಟಾಭಾವದ ಕೂಡ, ಪಟಾಭಾವದಿಗಳಿಗಿಂತ ವಿಲಕ್ಷಣ ಸ್ವಭಾವ ವಿಶೇಷದ, ಘಟ ನಿರೂಪಣೆಯ ಅಧೀನ



ನಿರೂಪಣ ವಿಷಯದ ವಿಲಕ್ಷಣಕಾರಣಜನ್ಯತ್ವದ ವಿಲಕ್ಷಣ ಕಾರ್ಯಕತ್ವದ ಅಥವಾ ಅನುಭವಸಿದ್ಧತ್ವದ ಅನುಭವ ಸಿದ್ಧವಾಗಿರುತ್ತದೆ.

तस्मात् अज्ञानवद् अभावादिरपि स्वत एव अन्यस्मात् विलक्षणः। व्यवहार समये तु अनुभवसिद्धस्यापि तस्य अभाव स्वभावविशेषस्य क्षीरमाधुर्यादिवत् विशिष्याख्यातुं अशक्तः क्षीरपदवत् तत् उपलक्षकं घटपदमेव प्रयुंक्ते घटो नास्ति इति। अलं प्रसक्त अनुप्रसक्त्या।

ಆದ್ದರಿಂದ ಅಜ್ಞಾನದಂತೆ, ಅಭಾವಾದಿಗಳು ಕೂಡ ಸ್ವತಃವಾಗಿಯೇ ಅನ್ಯಕ್ಕಿಂತ ವಿಲಕ್ಷಣವಾಗಿರುತ್ತವೆ. ವ್ಯವಹಾರ ಸಮಯದಲ್ಲಿಯಾದರೂ ಅನುಭವಸಿದ್ಧವಾಗಿದ್ದರೂ ಅದರ ಅಭಾವ ಸ್ವಭಾವವಿಶೇಷದ ಹಾಲಿನಮಾಧುರ್ಯದಂತೆ ವಿಶೇಷಾಖ್ಯಮಾಡಲು ಅಶಕ್ಯವಾಗಿರಲು ಅಲ್ಲಿ ಕ್ಷೀರಪದದಂತೆ ಅದರ ಉಪಲಕ್ಷಕ ಘಟಪದವನ್ನೆ ಪ್ರಯೋಗಿಸಿ घटो नास्ति, ಎಂದು ಮುಂತಾಗಿ ಹೇಳಲಾಗುತ್ತಿದೆ. ಇಲ್ಲಿಗೆ ಸಾಕು, ಪ್ರಾರಂಭಿಸಿದ ವಿಷಯಕ್ಕೆ ಸಂಬಂಧಿಸಿದ ಯುಕ್ತಿವಾದ.

## ॥ सत्य तत् विषय ज्ञानसदृशस्य इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

सत्यसुषिरविषयक ज्ञानेन सदृशं यत् ज्ञानम् असत्यसुषिरज्ञानं तस्य इत्यर्थः।

ಅಂದರೆ, ಯಾವದು ಸತ್ಯಸುಷಿರವಿಷಯಕ ಜ್ಞಾನದ ಸದೃಶವಾದ ಜ್ಞಾನ. ಅಂದರೆ ಅದು ಅಸತ್ಯಸುಷಿರಜ್ಞಾನ ಎಂದರ್ಥ.

अयं भावः– अर्थ अनवच्छिन्नं सुषिरज्ञानं अनिष्ट साधकं। न च असुषिरज्ञानस्यापि हेतुत्व प्रसङ्ग इति वाच्यम्। तत् अभावात्। तथा हि–

ಇಲ್ಲಿ ಈ ಭಾವವಿರುತ್ತದೆ: ಅರ್ಥ ಅನವಚ್ಛಿನ್ನ ಅಂದರೆ ಅರ್ಥವಿಷಯಾದಿಗಳನ್ನು ಬೇರ್ಪಡಿಸದ ಸುಷಿರಜ್ಞಾನವು ಅನಿಷ್ಟ ಸಾಧಕವಾಗುತ್ತದೆ ಎಂದು ಹೇಳಲಾಯಿತು. ಅದು ಅಸುಷಿರಜ್ಞಾನವನ್ನು ಕೂಡ ಹೇತುತ್ವವನ್ನಾಗಿ ಮಾಡುವ ಪ್ರಸಂಗ ತರುತ್ತದೆ ಎಂದು ಹೇಳಬಾರದು. ಏಕೆಂದರೆ, ಅಸುಷಿರಜ್ಞಾನ ಹೇತುವಾಗಲು ಸಾಧ್ಯವಿಲ್ಲ. ಅದನ್ನು ಹೀಗೆ ವಿವರಿಸಬಹುದು:

सत्यसुषिरज्ञानं तावत् असुषिर ज्ञानात् स्वत एव व्यावृत्तं, असुषिरज्ञान जनितार्थ क्रियाविलक्षणार्थ क्रियाकारित्वात्। यव बीज कलमबीजवत्। न च अप्रयोजकता। तत्रापि विषयस्यैव व्यावर्तकत्व उपपत्तेः इति वाच्यम्। विषयस्य ज्ञान धर्मत्व अभावात्। न च ज्ञाने विषयसम्बन्ध एव व्यावर्तक इति वाच्यम्। ज्ञानज्ञेययोः संयोगादेः असम्भवात्। स्वरूपसम्बन्धस्य ज्ञानस्वरूप अनतिरिक्तत्वेन तत् व्यावर्तकत्व अयोगात्।

ಸತ್ಯಸುಷಿರಜ್ಞಾನವು ಅಸುಷಿರಜ್ಞಾನದಿಂದ ಸ್ವತಃ ನೆ ಪ್ರತ್ಯೇಕಿಸಲ್ಪಟ್ಟಿರುತ್ತದೆ. ಅದು ಅಸುಷಿರಜ್ಞಾನ ಜನಿತಾರ್ಥ ಕ್ರಿಯಾ ವಿಲಕ್ಷಣಾರ್ಥ ಕ್ರಿಯಾಕಾರಕವಾಗಿರುತ್ತದೆ. ಉದಾಃ ಯವ ಮತ್ತು ಕಲಮ ಅಂದರೆ ಬತ್ತದ ಬೀಜಗಳಂತೆ. ಅದು ಅಪ್ರಯೋಜಕವೆಂದು ಹೇಳಲಾಗದು. ಅಲ್ಲಿ ಕೂಡ ವಿಷಯದಿಂದಲೇ ಪ್ರತ್ಯೇಕಿಸುವಿಕೆಯನ್ನು ಸಮರ್ಥಿಸಲು ಸಾಧ್ಯವಾಗುತ್ತದೆ ಎಂದು

ಹೇಳಬೇಕು. ವಿಷಯಕ್ಕೆ ಜ್ಞಾನ ಧರ್ಮತ್ವ ಇರುವದಿಲ್ಲ. ಮತ್ತು ಜ್ಞಾನದಲ್ಲಿ ವಿಷಯ ಸಂಬಂಧಮಾತ್ರ ವ್ಯಾವರ್ತಕ ಅಂದರೆ ಪ್ರತ್ಯೇಕಿಸುವ ಸಾಮರ್ಥ್ಯವಿದೆ ಎಂದು ಹೇಳಬಾರದು. ಏಕೆಂದರೆ ಜ್ಞಾನ (ಅಂದರೆ ತಿಳುವಳಿಕೆ) ಮತ್ತು ಜ್ಞೆಯ (ಅಂದರೆ ತಿಳಿಯಲ್ಪಡುವ) ಇವುಗಳ ಸಂಯೋಗ ಅಸಂಭವವಾಗಿರುತ್ತದೆ. ಸ್ವರೂಪ ಸಂಬಂಧವು ಜ್ಞಾನಸ್ವರೂಪಕ್ಕಿಂತ ಅತಿರಿಕ್ತವಾಗಲು ಸಾಧ್ಯವಿಲ್ಲದ್ದರಿಂದ ಅದನ್ನು ವ್ಯಾವರ್ತಕ ಅಂದರೆ ಪ್ರತ್ಯೇಕಿಸುವ ಸಾಧನ ಎಂದು ಹೇಳುವದು ಅಯೋಗ್ಯವಾಗಿದೆ.

एवमेव असत्यसुषिर ज्ञानस्यापि असुषिरज्ञानात् विषय सम्बन्धं अनपेक्ष्य स्वत एव व्यावर्तकत्वात् न अतिप्रसङ्गः। न च सत्यसुषिरज्ञानस्य सुषिरेन्द्रिय सन्निकर्षरूप सामग्रिजन्यत्वात्, असत्यसुषिरज्ञानस्य च असता सुषिरेन्द्रियस्य सन्निकर्ष अयोगेन तत् जन्यत्व असम्भवात् कथं असत्यसुषिरज्ञानस्य विषयसम्बन्धं अनपेक्ष्य सुषिरज्ञानसदृशत्वं इति वाच्यम्।

ಅದರಂತೆಯೆ ಅಸತ್ಯಸುಷಿರಜ್ಞಾನವು ಕೂಡ ಅಸುಷಿರಜ್ಞಾನದಿಂದ ವಿಷಯ ಸಂಬಂಧ ಅಪೇಕ್ಷಿಸದೆ ಸ್ವತಃನೆ ಪ್ರತ್ಯೇಕಿಸಲ್ಪಡುವದರಿಂದ, ಅತಿಪ್ರಸಂಗ ದೋಷ ಉಂಟಾಗುವದಿಲ್ಲ. ಇನ್ನು ಸತ್ಯಸುಷಿರಜ್ಞಾನವು ಸುಷಿರೇಂದ್ರಿಯ ಸನ್ನಿಕರ್ಷರೂಪ ಸಾಮಗ್ರಿಜನ್ಯವಾಗಿರುತ್ತದೆ, ಮತ್ತು ಅಸತ್ಯಸುಷಿರಜ್ಞಾನವು ಅಸತ್ಯವಾಗಿರುವದರಿಂದ ಅದಕ್ಕೆ ಸುಷಿರೇಂದ್ರಿಯ ಸನ್ನಿಕರ್ಷ ಅಯೋಗವಾಗಿರುವದರಿಂದ ಅದರಿಂದ ಅದರ ಜನ್ಯತ್ವ ಅಸಂಭವವಾದ್ದರಿಂದ, ಅಸತ್ಯಸುಷಿರಜ್ಞಾನವು ವಿಷಯಸಂಬಂಧ ಅಪೇಕ್ಷಿಸದೆ ಸುಷಿರಜ್ಞಾನಸದೃಶ ಹೇಗೆ ಆಗುತ್ತದೆ ಎಂದು ಶಂಕಿಸಬಾರದು.

दोषवशात् उपपत्तेः। तथा च असुषिरज्ञानात् सत्यसुषिरज्ञाने विषयातिरिक्तो व्यावर्तको धर्मविशेषः समीचीनसामग्र्या जातः, असत्यसुषिरज्ञाने तु दोषघटिततया सामग्र्य इति, युक्तमेव सादृश्यं इति न कश्चित् दोषः।

ಇದನ್ನು ದೋಷವಶದ ಮೂಲಕ ಸಮರ್ಥಿಸಬಹುದು. ಅದರಂತೆ, ಅಸುಷಿರ ಜ್ಞಾನದಿಂದ ಸತ್ಯಸುಷಿರಜ್ಞಾನದಲ್ಲಿ ವಿಷಯ ಅತಿರಿಕ್ತ ವ್ಯಾವರ್ತಕ ಅಂದರೆ ಪ್ರತ್ಯೇಕಿಸುವ ಧರ್ಮವಿಶೇಷ ಸತ್ಯವಾದ ಸಾಮಗ್ರಿಗಳು ಇರುತ್ತವೆ, ಅಸತ್ಯಸುಷಿರಜ್ಞಾನದಲ್ಲಿ ದೋಷಘ್ಅಟಿತ ಅಥವಾ ದೋಷದಿಂದುಂಟಾದ ಸಾಮಗ್ರಿಗಳಿರುತ್ತವೆ. ಆದ್ದರಿಂದ ಇಂತಹ ಪ್ರಸಂಗದಲ್ಲಿ ಸಾದೃಶ್ಯ ಉಂಟಾಗುವದು ಯುಕ್ತವಾಗಿರುತ್ತದೆ. ಆದ್ದರಿಂದ ಇಲ್ಲಿ ಯಾವದೇ ದೋಷವಿರುವದಿಲ್ಲ ಎಂಬ ಭಾವವಿರುತ್ತದೆ.

ननु तर्हि अवच्छेदकीभूत सुषिरादिरूपार्थस्यापि साधकं स्यात् इति चेत् अत्र प्रष्टव्यम्। किं अवच्छिन्नस्य यद्भवति तत् अवच्छेदकस्यापि भवति इति सामान्य व्याप्तिः। किं वा अवच्छिन्नस्य हेतुत्वे अवच्छेदकस्यापि हेतुत्वं इति विशेष व्याप्तिः।

ಹಾಗಾದರೆ ಅವಚ್ಛೇದಕೀಭೂತ ಸುಷಿರಾದಿರೂಪ ಅರ್ಥವಿಷಯಾದಿಗಳೂ ಕೂಡ ಅನಿಷ್ಟ ಸಾಧಕವಾಗುತ್ತವೆ ಎಂದರೆ, ಇಲ್ಲಿ ಇದನ್ನು ಸ್ಪಷ್ಟವಾಗಿ ಹೇಳಬೇಕು; ಏಕೆ ಇಲ್ಲಿ ಅವಚ್ಛಿನ್ನವು (ವಿಷಯಾದಿಗಳ ಜ್ಞಾನ) ಹೇಗಾಗುತ್ತದೊ ಹಾಗೆ ಅವಚ್ಛೇದಕ (ವಿಷಯಾದಿಗಳು) ಹಾಗೆಯೆ



ಆಗುತ್ತದೆ ಎಂಬ ಸಾಮಾನ್ಯ ವ್ಯಾಪ್ತಿಯನ್ನು ಅನುಸರಿಸಿ ನಿಮ್ಮ ವಕ್ತವ್ಯವಿರುತ್ತದೊ? ಅಥವಾ ಅವಚ್ಛಿನ್ನವು (ವಿಷಯಗಳ ಜ್ಞಾನ) ಹೇತುವಾದಲ್ಲಿ ಅವಚ್ಛೇದಕ (ವಿಷಯ) ಕೂಡ ಹೇತುವಾಗುತ್ತದೆಂಬ ವಿಶೇಷ ವ್ಯಾಪ್ತಿಯನ್ನು ಅನುಸರಿಸಿ?

न आद्यः। अदृष्टत्वात्। लम्बकर्णमानय इत्यादौ दर्शनात् इति चेत्। चित्रगुमानय इत्यादौ व्यभिचारः अपि किं न दृष्टः।

ಮೊದಲನೆಯದನ್ನು ಹೇಳಲಾಗುವದಿಲ್ಲ. ಅದು ಎಲ್ಲೂ ಕಂಡುಬಂದಿರುವದಿಲ್ಲ. ಲಂಬಕರ್ಣಮಾನಯ ಆಡು ಅಥವಾ ಮೇಕೆಗಳಲ್ಲಿ ಹಾಗೆ ಗೌರವಿಸುವದು ಕಂಡುಬಂದಿರುತ್ತದೆ ಎಂದರೆ. ಹಾಗೆಯೆ ಹಾಳೆಯಮೇಲೆ ಚಿತ್ರಗಳನ್ನು ಬಿಡಿಸುವದು ಮುಂತಾದವುಗಳಲ್ಲಿ ವ್ಯಭಿಚಾರ ಕೂಡ ಉಂಟಾಗುತ್ತದೆಂಬುದನ್ನು ಕೂಡ ಏಕೆ ಲಕ್ಷಕ್ಕೆ ಬರಲಿಲ್ಲ?

न द्वितीयः। ब्रह्म अज्ञानस्य जगत् उपादानत्वे ब्रह्मणः अपि तत् प्रसङ्गात्। निर्विकारे च तस्मिन् तस्य अयोगात्। आत्मज्ञानस्य अविद्यानिवृत्ति हेतुत्वे आत्मनः अपि तत् निवृत्ति हेतुत्व प्रसङ्गात् च। तस्य ज्ञान स्फोरकत्वेन तत् अनिवर्तकत्वात्।

ಇನ್ನು ಎರಡನೆ ವಿಕಲ್ಪವನ್ನು ಕೂಡ ಹೇಳಲಾಗುವದಿಲ್ಲ. ಉದಾಃ ಬ್ರಹ್ಮನ ಅಜ್ಞಾನವು ಜಗತ್ತಿನ ಉಪಾದಾನಕಾರಣವಾದರೆ ಬ್ರಹ್ಮನು ಕೂಡ ಹಾಗೆಯೆ ಆಗುವ ಪ್ರಸಂಗ ಉಂಟಾಗುತ್ತದೆ. ಮತ್ತು ಅವನು ನಿರ್ವಿಕಾರನಾದ್ದರಿಂದ ಅದು ಅಯೋಗ್ಯವೆನಿಸುತ್ತದೆ. ಮತು ಆತ್ಮಜ್ಞಾನವು ಅವಿದ್ಯಾ ನಿವೃತ್ತಿಗೆ ಹೇತುವೆನ್ನುವುದಾದರೆ ಆತ್ಮನು ಕೂಡ ಅದರ ನಿವೃತ್ತಿ ಹೇತುವಾಗುವ ಪ್ರಸಂಗ ಉಂಟಾಗುವದು. ಅವನು ಜ್ಞಾನ ಸ್ಫೋರಕನಾದ್ದರಿಂದ ಅಂದರೆ ಜ್ಞಾನ-ಅಗೋಚರನಾದ್ದರಿಂದ ಅವನು ಅವಿದ್ಯೆಯನ್ನು ನಿವರ್ತಿಸಲಾರಾ.

ननु अथापि सुषिररूपज्ञेयस्य ज्ञानव्यावर्तकत्वात् व्यावर्तकत्वस्य व्यावृत्तिज्ञान हेतुत्व रूपत्वात् आरोपित सुषिरस्यापि हेतुत्व सिद्धिः इति चेत्।

ಹೀಗಿದ್ದರೂ, ಸುಷಿರರೂಪಜ್ಞೆಯವು ಜ್ಞಾನವ್ಯಾವರ್ತಕವಾದ್ದರಿಂದ ವ್ಯಾವರ್ತಕವು ವ್ಯಾವೃತ್ತಿಜ್ಞಾನದ ಹೇತುರೂಪವಾದ್ದರಿಂದ ಆರೋಪಿತ ಸುಷಿರಾದಿವಿಷಯಗಳಿಗೂ ಕೂಡ ಹೇತು ಸಿದ್ಧವಾಗುತ್ತದಲ್ಲ ಎಂದರೆ

स्यात् एतत् एवं यदि व्यावृत्ति ज्ञान हेतुत्वं व्यावर्तकत्वं स्यात्। न च एवं। किंतु व्यावृत्तिज्ञानहेतुभूत ज्ञानविषयत्वमेव। कुत इति चेत्। सत्यपि दण्डे दण्ड अज्ञाने देवदत्ते अदण्डिव्यावृत्ति अज्ञानात्। तथा च आरोपितस्य व्यावृत्ति हेतुत्व अनभ्युपगमेऽपि व्यावृत्तिज्ञानहेतुभूतं यत् ज्ञानं तत्र उल्लिख्यमानत्वरूप तद्विषयस्य अभ्युपगतत्वेन आरोपितस्य व्यावृत्तिज्ञानहेतुभूत ज्ञानविषयत्वापरपर्याय व्यावर्तकत्व उपपत्तेः। व्यावृत्तिहेतुभूतं ज्ञानं तु सत्यमेव न कश्चित् दोषः।

ಈ ರೀತಿಯಾಗಿಯೇ ಆಗಬಹುದಾಗಿತ್ತು, ಒಂದು ವೇಳೆ ವ್ಯಾವೃತ್ತಿ ಜ್ಞಾನ ಹೇತುವು ವ್ಯಾವರ್ತಕವಾಗುವುದಾದರೆ, ಆದರೆ ಅದು ಹಾಗೆ ಇರುವದಿಲ್ಲ. ಪರಂತು ವ್ಯಾವೃತ್ತಿಜ್ಞಾನ ಹೇತುಭೂತ ಜ್ಞಾನವಿಷಯತ್ವವೇ ಹಾಗಾಗಲು ಸಾಧ್ಯ. ಇದನ್ನು ಹೇಗೆ ಹೇಳುತ್ತಿರಿ ಎಂದರೆ. ಉದಾಃ ಸತ್ಯವಾದ ದಂಡು ಹಿಡಿದ ದೇವದತ್ತನಿದ್ದರೂ, ದಂಡದ ಅಜ್ಞಾನದಲ್ಲಿ,

ದೇವದತ್ತನಲ್ಲಿಯ ಅದಂಡಿಯ ವ್ಯಾವೃತ್ತಿ ತಿಳಿಯಲು ಸಾಧ್ಯವಿಲ್ಲ. ಹಾಗೂ ಆರೋಪಿತದ ವ್ಯಾವೃತ್ತಿ ಹೇತುತ್ವ ಒಪ್ಪದೇ ಇದ್ದರೂ ಕೂಡ ಆರೋಪಿತದ ವ್ಯಾವೃತ್ತಿಜ್ಞಾನ ಹೇತುಭೂತ ಜ್ಞಾನವಿಷಯತ್ವಪರ ವ್ಯಾವರ್ತಕತ್ವವನ್ನು ಸಮರ್ಥಿಸಲು ಸಾಧ್ಯವಾಗುತ್ತದೆ. ಮತ್ತು ವ್ಯಾವೃತ್ತಿ ಜ್ಞಾನವು ಮಾತ್ರ ಸತ್ಯವೇ ಅಗಿರುತ್ತದೆ. ಆದ್ದರಿಂದ ಇಲ್ಲಿ ಯಾವದೇ ದೋಷ ಉಂಟಾಗುವದಿಲ್ಲ.

ननु अवच्छेदकस्य सुषिरस्य आरोपितत्वात् तत् अवच्छिन्नं ज्ञानं अपि आरोपितमेव इति पुनः अपि आरोपितस्य हेतुता प्राप्तेः इति चेत्।

ಇನ್ನು ಅವಚ್ಛೇದಕ ಸುಷೀರಾದಿವಿಷಯಾದಿಗಳು ಆರೋಪಿತಗಳಾಗಿರುವದರಿಂದ ಅವುಗಳಿಂದ ಪ್ರತ್ಯೇಕಿಸಲ್ಪಟ್ಟ ಅವುಗಳ ಜ್ಞಾನ ಕೂಡ ಆರೋಪಿತವೇ ಆಗಿರುತ್ತದೆ. ಅದರಂತೆ ಪುನಃ ಆರೋಪಿತಕ್ಕೆ ಹೇತುವು ಪ್ರಾಪ್ತವಾಗುತ್ತದೆ ಎಂದರೆ.

अज्ञानरूप अवच्छेदकस्य अनिर्वचनीयतया आरोपितत्वेऽपि तत् अवच्छिन्न अज्ञान निवृत्तेः पञ्चमप्रकारायाः तत् अभावात्। द्वैतस्य असत्यत्वेऽपि तत् अवच्छिन्नस्य द्वैत अभावरूप अद्वैतस्य असत्यत्व अभ्युपगमाच्च। तत्र अज्ञानद्वैते तटस्थे इति चेत्। तर्हि तत्र अपि तथा इति संतोष्टव्यम् इति द्रष्टव्यम्।

ಅಜ್ಞಾನರೂಪ ಅವಚ್ಛೇದಕವು ಅನಿರ್ವಚನೀಯವಾಗಿ ಆರೋಪಿತವಾದರೂ ಅದರ ಅವಚ್ಛಿನ್ನ ಅಜ್ಞಾನ ನಿವೃತ್ತವಾದ್ದರಿಂದ ಅಲ್ಲಿ ಪಂಚಮಪ್ರಕಾರಾದಿಗಳು ಇರುವದಿಲ್ಲ. ಮತ್ತು ದ್ವೈತವು ಅಸತ್ಯವಾದರೂ ಅದರ ಅವಚ್ಛಿನ್ನದ ದ್ವೈತ ಅಭಾವರೂಪ ಅದ್ವೈತದ ಅಸತ್ಯತ್ವವನ್ನು ತಾವು (ಪರಪಕ್ಷದವರು) ಒಪ್ಪಿರುತ್ತಾರೆ. ಅಲ್ಲಿ ಅಜ್ಞಾನ ದ್ವೈತ ಎಂದು ತಟಸ್ಥ ಎನ್ನುವುದಾದರೆ, ಹಾಗಾದರೆ ಅಲ್ಲಿ ಕೂಡ ಹಾಗೆಯೆ ಎಂದು ತಿಳಿದು ಸಂತೋಷಗೊಳ್ಳಬೇಕು ಎಂದು ತಿಳಿಯಬೇಕು.

<u>ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ.</u>

न द्वितीयः। असत्यसुषिरज्ञानस्यापि सत्यसुषिरज्ञानवत् विषयोपाधिं अनपेक्ष्य व्यावृत्तेः अङ्गीकार्यत्वात्। तत् एतत् आह– सत्यतद्विषयज्ञानसदृशस्य इति॥

ಮೇಲೆ ನಮೂದಿಸಿದ ಎರಡನೆ ವಿಕಲ್ಪ ಕೂಡ ಹೇಳಲು ಬರುವದಿಲ್ಲ. ಅಸತ್ಯಸುಷಿರಜ್ಞಾನವು ಕೂಡ ಸತ್ಯಸುಷಿರಜ್ಞಾನದಂತೆ ವಿಷಯೋಪಾಧಿ (ಅಂದರೆ ವಿಷಯಗಳ ಪ್ರತ್ಯೇಕಿಸಲ್ಪಟ್ಟ)ಗಳನ್ನು ಅಪೇಕ್ಷಿಸದೆ, ಅದರ ವ್ಯಾವೃತ್ತಿ ಅಂದರೆ ಪ್ರತ್ಯೇಕತೆಯನ್ನು ಅಂಗೀಹರಿಸಬೇಕು. ಅದನ್ನೇ ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ.

न च क्लृप्त सुषिरेन्द्रिय सम्प्रयोगादि सुषिर ज्ञान सामग्रि अजन्यस्य अस्य कथं विषयोपाधिं अनपेक्ष्य असुषिरज्ञानात् व्यावृत्वाकारेण सुषिरज्ञान सदृशत्वं इति वाच्यम्। दोषवशात् उपपत्तेः। अन्यथा तौ अपि असत्यसुषिरज्ञानस्य सुषिरविषय अवच्छेदकस्य अपि अभावप्रसङ्गात् इत्याह– दोषवशात् इति॥



ಇನ್ನು ಸುಷಿರೆಂದ್ರಿಯ ಪ್ರಯೋಗಾದಿ ಸುಷಿರಜ್ಞಾನ ಸಾಮಗ್ರಿ ಮೂಲಕ ಅಜನ್ಯವಾದ ಅಸತ್ಯಸುಷೀರಜ್ಞಾನ, ವಿಷಯೋಪಾಧಿಯನ್ನು ಅಪೇಕ್ಷಿಸದೆ ಅಸುಷಿರಜ್ಞಾನದಿಂದ ವ್ಯಾವೃತ್ತಾಕಾರದಿಂದ ಅಂದರೆ ಪ್ರತ್ಯೇಕವಾದ ಆಕಾರರೂಪ ಸುಷಿರಜ್ಞಾನ ಸದೃಶತ್ವವನ್ನು ಹೇಗೆ ಹೊಂದಲು ಸಾಧ್ಯ ಎಂದು ಶಂಕಿಸ ಬಾರದು. ಇದು ದೋಷಬಂದ ಮೂಲಕ ಸಮರ್ಥಿಸಬಹುದಾಗಿದೆ. ಅನ್ಯಥಾ, ಅಸತ್ಯಸುಷಿರಜ್ಞಾನ ಹಾಗೂ ಸುಷಿರವಿಷಯ ಅವಚ್ಛೇದಕದ ಕೂಡ ಇಲ್ಲದಾಗುವ ಪ್ರಸಂಗವದಗುವದು. ಇದನ್ನು ಸ್ಪಷ್ಟಪಡಿಸಲು ಟೀಕಾಕೃತ್ಪಾದರು दोषवशात् ಎಂದು ಹೇಳಿರುತ್ತಾರೆ.

## ॥ एवं सति इति ॥

<u>ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:</u>

ज्ञानस्यैव साधकत्व अङ्गीकारे इत्यर्थः।

ಅಂದರೆ, ಜ್ಞಾನಕ್ಕೆನೆ ಸಾಧಕತ್ವವನ್ನು ಅಂಗೀಕರಿಸಿದರೆ ಎಂದರ್ಥ.

<u>ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:</u>

न दोषवशात् इत्येतत् चिरन्तन टीकायां एव स्पष्टम्। तत् एव प्रतिपत्तव्यम्। अर्थस्य असत्त्वेऽपि ज्ञानस्य सत्वात् तत् एव उदाहृत स्थले सिद्धि उपपादन इत्यर्थः।

ಇಲ್ಲಿ, न दोषवशात् ಎಂಬ ಮುಂತಾದವುಗಳನ್ನು ಚಿರಂತನ ಎಂದರೆ ವ್ಯಾಸತೀರ್ಥರ ಮಂದಾರ ಮಂಜರೀ ವ್ಯಾಖ್ಯಾನಲ್ಲಿಯೆ ಸ್ಪಷ್ಟವಾಗಿ ವಿವರಿಸಲಾಗಿದೆ. ಅದನ್ನು ಹಾಗೆಯೆ ತಿಳಿದುಕೊಳ್ಳಬೇಕು.

ಅಂದರೆ, ವಿಷಯಾದಿಗಳು ಅಸತ್ಯವಾಗಿದ್ದರೂ ಅವುಗಳ ಜ್ಞಾನವು ಸತ್ಯವಾಗಿದ್ದರಿಂದ ಅದೇ ಉದಾಹೃತ ಸ್ಥಳದಲ್ಲಿ ಸಿದ್ಧಿಯ ಉಪಪಾದಕ ಎಂದರ್ಥ.

## ॥ प्रकृतेऽपि इति ॥

<u>ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:</u>

दृश्यत्व अनुमानाङ्गभूतानां व्याप्त्यादीनां इत्यर्थः।

ಅಂದರೆ, ದೃಶ್ಯತ್ವ ಅನುಮಾನದ ಅಂಗಭೂತಗಳಾದ ವ್ಯಾಪ್ತ್ಯಾದಿಗಳನ್ನು ಎಂದರ್ಥ.

## ॥ प्रतीति इति ॥

<u>ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:</u>

तस्याश्च भवद्भिः सत्यत्व अङ्गीकारात् इति भावः।

ಅಂದರೆ ವ್ಯಾಪ್ತ್ಯಾದಿ ಅಂಗಭೂತಗಳನ್ನು ಸಿದ್ಧಾಂತಿಗಳಾದ ತಾವು ಸತ್ಯವೆಂದು ಅಂಗೀಕರಿಸಿರುತ್ತೀರಿ ಎಂಬ ಭಾವವಿರುತ್ತದೆ.

## ॥ परेण इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**सत्यं मन्मते तथा इति, त्वया तु वृत्तिरूपायाः तत् प्रतिबिम्बित चैतन्यरूपाया वा प्रतीतेः सत्यत्व अनभ्युपगमेन पक्षादि प्रतीतेः अपि सत्यत्व अभावात् इति भावः।**

ಹೌದು ತಾವು ಹೇಳುವದು ನಿಜ, ನಮ್ಮ ಮತದಂತೆ ಹಾಗೆಯೆ ಇರುತ್ತದೆ. ಆದರೆ ತಾವು ವೃತ್ತಿರೂಪಾದಿಗಳ ಅಥವಾ ಅವುಗಳ ಪ್ರತಿಬಿಂಬಗಳಾದ ಚೈತನ್ಯರೂಪಗಳ ಪ್ರತೀತಿ ಸತ್ಯವೆಂದು ಒಪ್ಪದಿರುವದರಿಂದ, ಪಕೃತದಲ್ಲಿ ಪಕ್ಷಾದಿಗಳ ಪ್ರತೀತಿ ಕೂಡ ಸತ್ಯವಾಗಿರುವದಿಲ್ಲ ಎಂಬ ಭಾವವಿರುತ್ತದೆ.

## ॥ सत्ता अनभुपगमात् इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**वृत्तिरूपायाः तत् प्रतिबिम्बित चैतन्यरूपायाः वा प्रतीतेः परेण सत्यत्व अनभ्युपगमात् पक्षादि प्रतीतेः अपि अङ्गता वक्तुं अशक्या इत्यर्थः।**

ಅಂದರೆ, ವೃತ್ತಿರೂಪಗಳ ಅಥವಾ ಅವುಗಳ ಪ್ರತಿಬಿಂಬಗಳಾದ ಚೈತನ್ಯರೂಪಗಳ ಪ್ರತೀತಿಯನ್ನು ಪರಪಕ್ಷದವರು ಸತ್ಯವೆಂದು ಅಂಗೀಕರಿಸಿರುವದಿಲ್ಲ. ಆದ್ದರಿಂದ ಪ್ರಕೃತದಲ್ಲಿ, ಪಕ್ಷಾದಿಗಳ ಪ್ರತೀತಿ ಉಂಟಾದರೂ ಕೂಡ ಅವುಗಳನ್ನು ಸಾಧಕ ಅಂಗಗಳೆಂದು ಹೇಳಲು ಶಕ್ಯವಾಗುವದಿಲ್ಲ ಎಂದರ್ಥ.

## ॥ किं च अस्ति इत्यादि ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**व्याप्त्यादिकं स्वरूपेण सदेव ज्ञाततया अनुमानाङ्गं, न प्रतीति मात्रेण। व्याप्ति प्रतीतिमात्रस्य व्यभिचारेपि सम्भवात्। लिङ्गप्रतीतिमात्रस्य स्वरूप असिद्धेपि साम्यात्। पक्षादिकस्य तु ज्ञानमेव अनुमानाङ्गम्। न तु तत् सत्ता आवश्यकी। भ्रान्ति प्रतिपन्नं रजतादिकं पक्षीकृत्य तत् तत् वादिभि:असत्वादि साधनात्। त्वया एव मिथ्यात्व साधने दृष्टान्तीकरणाच्च्। एवं च अनुमानाङ्गं सर्वं प्रतीतिमात्रेण एव अंगं इत्यस्य अयुक्तत्वात्। लिङ्गव्याप्त्यादेः स्वरूपसत्वं अङ्गीकार्यम्। तथा च जगद्न्तः पातित्वेन लिङ्गव्याप्त्यादे:असत्त्वात् असाधकत्वेन अनध्यवसित कथनं यक्तमेव इति भावः।**

ವ್ಯಾಪ್ತಾದಿಗಳು ಸ್ವರೂಪದಿಂದ ಸತ್ಯವೆಂದು ತಿಳಿಯುವಮೂಲಕ ಅನುಮಾನದ ಅಂಗಗಳಾಗುತ್ತವೆ ವಿನಹ ಕೇವಲ ಅವುಗಳ ಪ್ರತೀತಿಯಂದಲ್ಲ. ಏಕೆಂದರೆ ವ್ಯಾಪ್ತಿಯ ಕೇವಲ ಪ್ರತೀತಿ ಮಾತ್ರದ ಮೂಲಕ ವ್ಯಭಿಚಾರ ಕೂಡ ಸಂಭವಿಸಬಹುದು. ಅದರಂತೆ ಸ್ವರೂಪ ಅಸಿದ್ಧವಾದಾಗಲೂ ಲಿಂಗಪ್ರತೀತಿಮಾತ್ರದ ಅವಸ್ಥೆಯು ಕೂಡ ಈ ತರಹದ್ದೆ ಆಗಿರುತ್ತದೆ. ಪಕ್ಷಾದಿಗಳ ಜ್ಞಾನವೇ ಅನುಮಾನಾಂಗವಾಗಲು ಸಾಧ್ಯ ವಿನಹಾ ಅದರ ಸತ್ತಾ ಆವಶ್ಯಕವಾಗುವದಿಲ್ಲ. ಭ್ರಾಂತಿಯಿಂದ ತಿಳಿಯಲ್ಪಟ್ಟ ರಜತಾದಿಕಗಳನ್ನು ಪಕ್ಷೀಕರಿಸಿ ಆ ಆ ವಾದಿಗಳು ಅಸತ್ಯಾದಿಗಳನ್ನು ಸಾಧಿಸುತ್ತಾರೆ. ತಾವು ಕೂಡ ಮಿಥ್ಯಾತ್ವ ಸಾಧಿಸುವದಲ್ಲಿ ಅವುಗಳನ್ನು ದೃಷ್ಟಾಂತೀಕರಣ ಮಾಡಿರುತ್ತೀರಿ. ಈ ರೀತಿಯಾಗಿ, ಎಲ್ಲ



ಅನುಮಾನಾಂಗಗಳನ್ನು ಪ್ರತೀತಿಮಾತ್ರದಿಂದಲೇ ಅವುಗಳನ್ನು ಅಂಗ ಎಂದು ಪರಿಗಣಿಸುವದು ಅಯುಕ್ತವಾಗಿರುತ್ತದೆ. ಲಿಂಗ ವ್ಯಾಪ್ತ್ಯಾದಿಗಳನ್ನು ಸ್ವರೂಪತಃ ಸತ್ಯವೆಂದೆ ಅಂಗೀಕರಿಸಬೇಕು. ಪ್ರಕೃತದಲ್ಲಿ, ಜಗತ್ತು ಇಲ್ಲದಾಗುವದರಿಂದ, ಲಿಂಗವ್ಯಾಪ್ತ್ಯಾದಿಗಳು ಅಸತ್ಯಗಳಾಗುವದರಿಂದ ಅವುಗಳು ಅಸಾಧಕಗಳಾಗುತ್ತವೆ. ಆದ್ದರಿಂದ ಪ್ರಸ್ತುತ ಅನುಮಾನಕ್ಕೆ ಅನಧ್ಯವಸಿತವೆಂಬ ದೋಷವನ್ನು ಹೇಳುವದು ಯುಕ್ತವಾಗಿರುತ್ತದೆ ಎಂಬ ಭಾವ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**व्याप्त्यादिकं स्वरूपेण सत् ज्ञाततया अनुमानाङ्गम्। व्याप्ति प्रतीतिमात्रस्य व्यभिचारेऽपि सम्भवात्। पक्षादिकं तु ज्ञाततया एव। भ्रान्तिप्रतिपन्न रजतादिकं पक्षीकृत्य तत् तत् वादिभिः असत्वादि साधनात्। एवं च अनुमानाङ्गं सर्वं प्रतीतिद्वारा अङ्गं इति अव्याप्त्यादेः स्वरूपसत्वं अङ्गीकार्यमं इत्यर्थः।**

ವ್ಯಾಪ್ತ್ಯಾದಿಗಳು ಸ್ವರೂಪದಿಂದ ಸತ್ಯವೆಂದು ತಿಳಿದಮೂಲಕ ಅನುಮಾನಾಂಗಗಳಾಗುತ್ತವೆ. ವ್ಯಾಪ್ತಿಯ ಪ್ರತೀತಿಮಾತ್ರವು ಅದನ್ನು ಅನುಮಾನಂಗ ಮಾಡುತ್ತದೆ ಎಂದರೆ ವ್ಯಭಿಚಾರ ಕೂಡ ಸಂಭವಿಸಬಹುದು. ಪಕ್ಷಾದಿಗಳು ಜ್ಞಾತವಾಗುವ ಮೂಲಕವೇ ಅನುಮಾನದ ಅಂಗಗಳಾಗಲು ಸಾಧ್ಯವಾಗಿರುತ್ತವೆ. ಭ್ರಾಂತಿಯಿಂದ ತಿಳಿಯಲ್ಪಟ್ಟ ರಜತಾದಿಗಳನ್ನು ಪಕ್ಷೀಕರಿಸಿ ಆ ಆ ವಾದಿಗಳು ಅಸತ್ಯಾದಿಗಳನ್ನು ಸಾಧಿಸುತ್ತಾರೆ. ಹೀಗೆ ಸರ್ವ ಅನುಮಾನಾಂಗಗಳು ಪ್ರತೀತಿಮೂಲಕ ಅನುಮಾನಾಂಗ ಎಂದು ಎನ್ನುವದಾದರೆ ಅವ್ಯಾಪ್ತ್ಯಾದಿಗಳನ್ನು ಸ್ವರೂಪತಃ ಸತ್ಯವೆಂದು ಅಂಗೀಕರಿಸಬೇಕು ಎಂದರ್ಥ.

## ॥ अतः सत इति ॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**सतः साधकत्वे साधक अभावात् असत्यस्यापि साधकत्वं अस्तु इति शङ्काभिप्राय इति प्राक् विकल्पित द्वितीय पक्षं आशंकते– अतः सत इति॥**

ಹೇಗೆ ಸತ್ಯವು ಸಾಧಕವಾಗಿದ್ದರೂ ಸಾಧಕವಿಲ್ಲದಿರಬಹುದು ಅದರಂತೆ ಅಸತ್ಯವು ಕೂಡ ಸಾಧಕತ್ವ ಆಗಬಹುದಲ್ಲ ಎಂಬ ಶಂಕಾಭಿಪ್ರಾಯವಾದ ಹಿಂದೆ ವಿಕಲ್ಪಿತ ಎರಡನೆ ಪಕ್ಷವನ್ನು ಇಲ್ಲಿ ಮತ್ತೆ ಆಶಂಕಿಸುತ್ತಾರೆ.

## ॥ असतः असाधकत्व इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**परस्पर विरुद्धयोः अन्यतर निषेधस्य अन्यतर विधिना अन्तरीयकत्वात् इति भावः।**

ಅಂದರೆ, ಪರಸ್ಪರ ವಿರುದ್ಧವಾದವುಗಳಲ್ಲಿ ಒಂದನ್ನು ನಿಷೇಧಿಸಿದಲ್ಲಿ, ಇನ್ನೊಂದು ವಿಧಿರೂಪದಿಂದ ಮರುಕಳಿಸುತ್ತದೆ ಎಂಬ ಭಾವ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

परिहरति– असत इति॥
ಮೇಲಿನ ಶಂಕೆಯನ್ನು ಈ ಟೀಕಾವಾಕ್ಯ ಪರಿಹರಿಸುತ್ತದೆ.

उपलक्षणं च एतत्। सत्यस्यापि साक्षिणो ज्ञानादिसाधकत्वस्य त्वत् सम्मतत्वाच्च् इत्यपि द्रष्टव्यम्।
ಇದು ಉಪಲಕ್ಷಣವಾಗಿರುತ್ತದೆ. ಸತ್ಯವಾದ ಸಾಕ್ಷಿಗೆ ಜ್ಞಾನಾದಿ ಸಾಧಕತ್ವ ತಮಗೆ (ಪರಪಕ್ಷದವರಿಗೆ) ಸಮ್ಮತವಾಗಿರುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕು.

॥ आस्तां विस्तर इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ

ननु "असतोऽपि साधकत्वं अस्ति, अनुत्पन्नस्यापि कार्यस्य कारणगत शक्ति अवच्छेदकता दर्शनात्। कालान्तरे सत्वं न उपयोगि।" इत्यादि शङ्का प्राप्तौ, मैवं शक्ति अवच्छेदकता हि शक्ति विषयता। सा च शक्ति साध्यता इति साध्यत्वमेव अनुत्पन्नस्य, न तु साधकत्वं। साध्यत्वं च न अत्यन्त असतः। किंतु प्राग् अभाव प्रतियोगिनः।" इत्यादिकं समाधानं यद्यपि वक्तव्यम् अस्ति। तथापि ग्रन्थगौरव भयात् संक्षिप्यत इत्याह– आस्तां विस्तर इति॥
ಅಸತ್ಯ ಕೂಡ ಸಾಧಕವಾಗುತ್ತದೆ, ಉತ್ಪನ್ನವಾಗದ ಕಾರ್ಯದ ಕಾರಣಗತ ಶಕ್ತಿ ಕೂಡ ಅವಚ್ಛೇದಕ (ವಿಷಯಾದಿಗಳು) ವಾಗುವದನ್ನು ಕಂಡುಬಂದಿರುತ್ತದೆ. ಹಾಗೂ ಕಾಲಾಂತರದಲ್ಲಿ ಸತ್ಯ ಕೂಡ ಸಾಧಕ ಉಪಯೋಗಿ ಆಗುವದಿಲ್ಲ ಎಂದು ಮುಂತಾದ ಶಂಕೆಗಳು ಉದ್ಭವಿಸಲು. ಅದು ಹಾಗಲ್ಲ, ಶಕ್ತಿಯ ಅವಚ್ಛೇದಕವೆಂದರೆ ಶಕ್ತಿಯ ವಿಷಯತಾ ಎಂದರ್ಥ. ಅದು ಶಕ್ತಿ ಸಾಧ್ಯವಾಗಿರುತ್ತದೆ. ಅಂದರೆ ಅದು ಅನುತ್ಪನ್ನದ ಸಾಧ್ಯವಾಗಿರುತ್ತದೆ ಸಾಧಕತ್ವ ವಲ್ಲ. ಮತ್ತು ಸಾಧ್ಯತ್ವವು ಅತ್ಯಂತ ಅಸತ್ಯವಿರುವದಿಲ್ಲ. ಕಿಂತು ಅದು ಪ್ರಾಕ್ ಅಭಾವದ ಪ್ರತಿಯೋಗಿ ಆಗಿರುತ್ತದೆ ಎಂದು ಮುಂತಾಗಿ ಸಮಾಧಾನವನ್ನು ಹೇಳಬಹುದಾಗಿದೆ. ಹಾಗಿದ್ದರೂ ಗ್ರಂಥದ ವಿಸ್ತಾರತೆಯ ಭಯದಿಂದ ಸಂಕ್ಷೇಪಿಸುತ್ತಾರೆ. ಅದಕ್ಕೇನೆ ಸಾಕು ವಿಸ್ತಾರವೆಂದು ಹೇಳಿದ್ದು ಎಂದರ್ಥ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

ननु साक्ष्यपि अविद्यावृत्ति प्रतिबिम्बित एव अज्ञानादि साधक इति आशंक्य, साक्षिगत साधकताया अज्ञानाधीनत्वे अपारमार्थिकतया प्रातिभासिकस्य अज्ञान सत्वस्य साक्षिणा सिद्धिं विना अयोगात् अन्योन्याश्रयात् इति आशयवान् आह– आस्तां विस्तर इति॥
ಸಾಕ್ಷಿಕೂಡ ಅವಿದ್ಯಾವೃತ್ತಿ ಪ್ರತಿಬಿಂಬಿತವೇ ಆಗಿ ಅಜ್ಞಾನಾದಿಗಳ ಸಾಧಕವಾಗುತ್ತದೆ ಎಂದು ಆಶಂಕಿಸಿ, ಸಾಕ್ಷಿಗತ ಸಾಧಕತೆಯು ಅಜ್ಞಾನ ಅಧೀನವಾದಲ್ಲಿ, ಅಪರಮಾರ್ಥಿಕ ಪ್ರಾತಿಭಾಸಿಕವು, ಅಜ್ಞಾನ ಸತ್ಯ ಸಾಕ್ಷಿಯು ಸಿದ್ಧಿವಾಗದೆ ವಿನಾ ಅಯೋಗವೆನಿಸುವದರಿಂದ,



ಅನ್ಯೋನ್ಯಾಶ್ರಯ ದೋಷ ಉಂಟಾಗುವದು ಎಂದು ಹೇಳತಾ, ಸಾಕು ಇಲ್ಲಿ ವಿಸ್ತಾರವೆಂದು ಹೇಳಿದ್ದು.

## ७. विश्वमिथ्यात्व अनुमानस्य अनवसरः

### टीका

अनुमानस्य अनवसरो द्वेधा प्रमाणबाधः तत्प्रतिरोधश्च। तत्र आद्यः प्रबल इति तमेव आदौ दर्शयति।

ಈಗ ಮಿಥ್ಯಾತ್ವ ಅನುಮಾನದ ಮೇಲಿನ ದೋಷಗಳನ್ನು ತೋರಿಸುತ್ತಾರೆ. ಅನುಮಾನದ ಮೇಲಿನ ದೋಷಗಳು ಎರಡು ಪ್ರಕಾರ ಉಳ್ಳದ್ದಾಗಿವೆ: ೧. ಪ್ರಮಾಣ ಬಾಧ ಅಂದರೆ ಪ್ರಬಲ ಪ್ರಮಾಣಗಳಿಂದ ಅನುಮಾನಕ್ಕೆ ಬಾಧ ಎಂದರ್ಥ. ಇದನ್ನು ಕಾಲಾತ್ಯಯಾಪದಿಷ್ಟ ಎಂದು ಕರೆಯುತ್ತಾರೆ. ಪ್ರಬಲ ಪ್ರಮಾಣಗಳೆಂದರೆ, ಯಾವ ಪ್ರಮಾಣಗಳು ಅನುಮಾನಕ್ಕೆ ಉಪಜೀವಿಕೆ ಯಾದಂಥವುಗಳು. ಇಲ್ಲಿ ಪ್ರತ್ಯಕ್ಷ, ಅನುಮಾನ ಹಾಗೂ ಆಗಮಗಳಿಂದ ಸಿದ್ಧವಾದವುಗಳು ದೃಶ್ಯತ್ವ ಅನುಮಾನಕ್ಕೆ ಉಪಜೀವಿಕೆಗಳಾಗಿವೆ.
೨. ಮತ್ತು ಅನುಮಾನದ ಪ್ರತಿರೋಧ ಅಂದರೆ ಸಮಬಲ ಪ್ರಮಾಣದ ವಿರೋಧ, ಅಂದರೆ ಇಲ್ಲಿ ಅನುಮಾನಕ್ಕೆ ಅನುಮಾನದಿಂದಲೇ ವಿರೋಧ.
ಅವುಗಳಲ್ಲಿ ಮೊದಲನೆಯದು ಪ್ರಬಲವಾಗಿರುವದರಿಂದ ಅದನ್ನೇ ಮೊದಲಿಗೆ ತೋರಿಸುತ್ತಾರೆ.

### टिप्पणीनाम् विशेषार्थानि

॥ अनवसर इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

प्रतिबन्धक जिज्ञासाविच्छेदो हि अवसरः। तत् अभावः अनवसरः।
लिङ्गपरामर्शानन्तरमपि बाधसत्प्रतिपक्षावतार शङ्क्या मुहूर्तमात्रं अवलम्बते अनुमानावतार इति अभियुक्त वचनात् इति भावः।
ಅನುಮಾನದ ಮೇಲಿನ ಪ್ರತಿಬಂಧಕ ಶಂಕೆಗಳನ್ನು ಪರಿಹರಿಸುವದೇ ಅನುಮಾನದ ಅವಸರ ಎನಿಸುವದು. ಅದರ ಅಭಾವತೆಯೇ ಅನವಸರ ಎನಿಸುವದು. ಲಿಂಗಪರಾಮರ್ಶದ ನಂತರ ಕೂಡ ಬಾಧ ಸತ್ ಪ್ರತಿಪಕ್ಷ ಶಂಕೆಗಳನ್ನು ಅನುಮಾನವತಾರಕ್ಕಾಗಿ ಅವಲಂಬಿಸಲಾಗುತ್ತದೆ ಎಂಬ ವಚನವಿರುತ್ತದೆ ಎಂಬ ಭಾವ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**संज्ञा एषा पूर्वाचार्यस्य प्रमाणबाध तत्प्रतिरोधश्च– अनुमानस्य अनवसर इति॥**
**एतेन बाध प्रतिबाधयोः इव असिद्ध्यादेः अपि अनुमान अवसर विघातकत्वेन अनुमानस्य अनवसरत्वात्, अनुमानस्य अनवसर द्वैविध्य कथनम् अयुक्तं इति परास्त ।संज्ञायाः पुरुष इच्छाधीनत्वेन सर्वेषां अपि इयं संज्ञा स्यात इति शङ्कानवकाशात्।**
ಅನುಮಾನದ ಅನವಸರವು ಪೂರ್ವಾಚಾರ್ಯರ ಸಂಜ್ಞೆಯಾಗಿರುತ್ತದೆಃ ಪ್ರಮಾಣ ಬಾಧ ಮತ್ತು ಅನುಮಾದ ಪ್ರತಿರೋಧ. ಇದರಿಂದ ಬಾಧ ಪ್ರತಿಬಾಧಗಳಂತೆ, ಅಸಿಧ್ಯಾದಿಗಳು ಕೂಡ ಅನುಮಾನದ ಅವಸರದ ಘಾತಕಗಳಾಗಿರುತ್ತವೆಂದು, ಅವುಗಳು ಕೂಡ ಅನುಮಾನದ ಅನವಸರವಾಗುತ್ತವೆ ಎಂದು ಅನುಮಾನದ ಅನವಸರ ಎರಡು ವಿಧವಾಗಿದೆ ಎಂಬ ಕಥನವು ಅಯುಕ್ತವಾಗಿದೆ ಎಂಬುದನ್ನು ನಿರಾಕರಿಸಲಾಯಿತು. ಸಂಜ್ಞಾಗಳು ಪುರುಷಾಧೀನವಾಗಿರುವದರಿಂದ ಸರ್ವರಿಗೂ ಇವುಗಳು ಸಂಜ್ಞಾ ಆಗುತ್ತವೆ ಎಂದು, ಇಲ್ಲಿ ಯಾವ ತರಹದ ಶಂಕೆಗೆ ಆಸ್ಪದವಿರುವದಿಲ್ಲ

### *७.१ मिथ्यात्वानुमानस्य प्रबलप्रमाणबाधोपपादनम्*

प्रपञ्चमिथ्यात्वानुमानखण्डनम्

**प्रत्यक्षादिविरुद्धत्वात् "विश्वं सत्यं" इत्यादिवाक्यविरुद्धत्वाच्च कालात्ययापदिष्टः।**

**ಪ್ರತ್ಯಕ್ಷಾದಿ (ಎಂದರೆ, ಪ್ರತ್ಯಕ್ಷ, ಅನುಮಾನ ಮತ್ತು ಆಗಮ) ಪ್ರಮಾಣಗಳಿಗೆ ವಿರುದ್ಧವಾಗಿರುವದರಿಂದ ಮತ್ತು "ವಿಶ್ವಂ ಸತ್ಯಂ" ಎಂಬ ಇತ್ಯಾದಿ ವೇದವಾಕ್ಯಗಳಿಗೆ ವಿರುದ್ಧವಾಗಿರುವದರಿಂದ, ಮಿಥ್ಯಾತ್ವ ಅನುಮಾನಕ್ಕೆ ಕಾಲಾತ್ಯಯಾಪದಿಷ್ಟ ದೋಷವಿದೆ.**

### श्रीपद्मनाभतीर्थीयटीका

**प्रत्यक्षागमादि विरुद्धश्च अयं जगन्मिथ्यात्व अनुमापकः दृश्यत्व हेतुः इत्याह- प्रत्यक्षादि इति॥**

ಈ ಜಗತ್ ಮಿಥ್ಯಾತ್ವ ಅನುಮಾನದ ದೃಶ್ಯತ್ವ ಹೇತುವು ಪ್ರತ್ಯಕ್ಷ ಮತ್ತು ಆಗಮಾದಿಗಳ ವಿರುದ್ಧವಾಗಿದೆ. ಆದ್ದರಿಂದ ಮಿಥ್ಯಾತ್ವ ಅನುಮಾನಕ್ಕೆ ಕಾಲಾತ್ಯಯಾಪದಿಷ್ಟ ಎಂಬ ದೋಷವಿದೆ ಎಂದು ಶ್ರೀಮದಾಚಾರ್ಯರ ಮೂಲವಾಕ್ಯವು ಸ್ಪಷ್ಟಪಡಿಸುತ್ತದೆ.



### टीका

**यथायथं प्रत्यक्ष अनुमान आगम सिद्धान् पदार्थान् खलु पक्षीकृत्य तन्मिथ्यात्वं अनुमातव्यम्। प्रमाणानि च तत् सत्यता अवगाहीनि इति तत् बाधितत्वात् कालात्ययापदिष्टो भवति।**

ಯಥಾಯೋಗ್ಯವಾಗಿ ಪ್ರತ್ಯಕ್ಷ, ಅನುಮಾನ ಮತ್ತು ಆಗಮ ಪ್ರಮಾಣಗಳಿಂದ ಸಿದ್ಧವಾದ ಪದಾರ್ಥಗಳನ್ನು ಪಕ್ಷೀಕರಿಸಿ, ಪ್ರಪಂಚದ ಮಿಥ್ಯಾತ್ವವನ್ನು ತಾವು ಅನುಮಾನಿಸಬೇಕು. ಆದರ ಈ ಪ್ರಮಾಣಗಳು ಪ್ರಪಂಚವನ್ನು ಸತ್ಯವಾಗಿಯೆ ಗ್ರಹಿಸುತ್ತವೆ. ಇದು ದೃಶ್ಯತ್ವ ಅನುಮಾನವನ್ನು ಬಾಧಿಸುವದರಿಂದ ಅದಕ್ಕೆ ಕಾಲಾತ್ಯಯಾಪದಿಷ್ಟ ಎಂಬ ದೋಷ ಉಂಟಾಗುತ್ತದೆ.

### टिप्पणीनाम् विशेषार्थानि

**॥ यथायथं इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ

**प्रत्यक्षादीनां प्राबल्य सिद्धये तेषां अनुमान उपजीव्यत्वं दर्शयति– यथायथं इति॥**
**यथायोग्यं इत्यर्थः।**
ಪ್ರತ್ಯಕ್ಷಾದಿಗಳ ಪ್ರಾಬಲ್ಯವನ್ನು ಸಿದ್ಧಮಾಡಲು, ಅವುಗಳು, ದೃಶ್ಯತ್ವ ಅನುಮಾನದ ಉಪಜೀವಿಕಗಳಾಗಿವೆ ಎಂಬುದನ್ನು ಈ ಟೀಕಾವಾಕ್ಯದಿಂದ ತೋರಿಸುತ್ತಾರೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**प्रत्यक्षादीनां प्राबल्य सिद्धये तेषां अनुमान उपजीव्यतां आह– यथायथ इति ॥**
ಪ್ರತ್ಯಕ್ಷಾದಿಗಳ ಪ್ರಾಬಲ್ಯವನ್ನು ಸಿದ್ಧಮಾಡಲು ಅವುಗಳಿಗೆ, ಅನುಮಾನದ ಉಪಜೀವ್ಯತ್ವವನ್ನು ಈ ಟೀಕಾವಾಕ್ಯದಿಂದ ಹೇಳುತ್ತಾರೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु प्रत्यक्षादीनां दृश्यत्व अनुमानापेक्षया प्राबल्य अनिर्णयात् कथं तत् बाधकत्वम्। प्राबल्येऽपि वा प्रत्यक्षादीनां प्रपञ्च स्वरूपमात्र विषयत्वात्, दृश्यत्व अनुमानस्य च तत् मिथ्यात्व विषयकत्वात्, भिन्न विषयतया परस्पर वार्ता अनभिज्ञयोः कथं बाध्य बाधकभाव इति आशङ्क्य, प्राबल्यं तावत् उपपादयति– यथयथं इति॥**
**अन्यथा आश्रय हीनत्व प्रसङ्गः इति भावः।**
ಪ್ರತ್ಯಕ್ಷಾದಿಗಳು ದೃಶ್ಯತ್ವ ಅನುಮಾನಕ್ಕಿಂತ ಪ್ರಾಬಲ್ಯವೆಂದು ನಿರ್ಣಯವಾಗಿಲ್ಲದಾಗ ಅವುಗಳು ದೃಶ್ಯತ್ವ ಅನುಮಾನಕ್ಕೆ ಬಾಧಕ ಹೇಗಾಗುತ್ತವೆ? ಅಥವಾ ಪ್ರಬಲವಾದರೂ ಪ್ರತ್ಯಕ್ಷಾದಿಗಳಿಗೆ ಪ್ರಪಂಚ ಸ್ವರೂಪಮಾತ್ರ ವಿಷಯವಾಗಿರುವಾಗ, ಮತ್ತು ದೃಶ್ಯತ್ವ

ಅನುಮಾನದ ಪ್ರಪಂಚ ಮಿಥ್ಯಾತ್ವ ವಿಷಯವಾದ್ದರಿಂದ, ಪ್ರತ್ಯಕ್ಷಾದಿಗಳ ಮತ್ತು ದೃಶ್ಯತ್ವ ಅನುಮಾನದ ಪರಸ್ಪರ ವಿಷಯಗಳ ಅರಿವಿಕೆ ಇಲ್ಲದಿರುವಿಕೆಯಿಂದ ಅವುಗಳಲ್ಲು ಬಾಧ್ಯಬಾಧಕ ಭಾವ ಇರಲು ಸಾಧ್ಯ ಎಂದು ಆಶಂಕಿಸಿ, ಪ್ರತ್ಯಕ್ಷಾದಿಗಳ ಪ್ರಾಬಲ್ಯವನ್ನು ಈ ಟೀಕಾವಾಕ್ಯದಿಂದ ಸಮರ್ಥಿಸುತ್ತಾರೆ.

**॥ अनुमातव्यम् इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**अन्यथा आश्रयासिद्धिः स्यात् इति भावः।**

ಅಂದರೆ ಅನ್ಯಥಾ ಆಶ್ರಯಾಸಿದ್ಧಿದೋಷ ಉಂಟಾಗುತ್ತದೆ ಎಂಬ ಭಾವವಿರುತ್ತದೆ.

**॥ प्रमाणानि (तानि) च इति॥**

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**विरुद्धार्थतां उपपादयति– तानि च इति॥**

ಈ ಟೀಕಾವಾಕ್ಯವು ಪ್ರತ್ಯಕ್ಷಾದಿಗಳ ವಿರುದ್ಧಾರ್ಥವನ್ನು ಸಮರ್ಥಿಸುತ್ತದೆ.

**यद्यपि स्तम्भः अयं इत्यादि प्रतीतिः न सत् इत्येवं आकारा। तथापि स्तम्भादीनां सद्विशेषत्वात् न सत्तां व्यभिचरति। अस्ति च सत् इत्यपि प्रतीतिः। अतः सर्वथा प्रत्यक्षादिभिः प्रतीयमानं वस्तु सत् इत्येव प्रतीयत इति प्रत्यक्षादि विरोधः अनुमानस्य इति भावः।**

ಇನ್ನು "ಇದು ಕಂಬ" ಎಂಬ ಮುಂತಾದವುಗಳ ಪ್ರತೀತಿ ಸತ್ಯವೆಂದು ಪರಿಗಣಿಸಬಾರದಾದರೂ, ಕಂಬಾದಿಗಳ ಸತ್ವಿಶೇಷದಿಂದ ಸತ್ತೆಯನ್ನು ವ್ಯಭಿಚರಿಸದಂತಾಗುವದಿಲ್ಲ. ಅವುಗಳ ಸತ್ಯ ಎಂಬ ಪ್ರತೀತಿ ಕೂಡ ಇದ್ದೆ ಇದೆ. ಆದ್ದರಿಂದ ಪ್ರತ್ಯಕ್ಷಾದಿಗಳಿಂದ ಸರ್ವಥಾ ಪ್ರತೀತವಾಗುವ ವಸ್ತು ಸತ್ಯ ಎಂದೇ ಪ್ರತೀತವಾಗುತ್ತದೆ. ಹೀಗಾಗಿ ದೃಶ್ಯತ್ವ ಅನುಮಾನಕ್ಕೆ ಪ್ರತ್ಯಕ್ಷಾದಿಗಳ ವಿರೋಧವಿದೆ ಎಂಬ ಭಾವವಿರುತ್ತದೆ.

**॥ कालात्ययापदिष्ट इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**धर्मिग्राहक प्रमाण बाधः इत्यर्थः।**

ಅಂದರೆ, ಧರ್ಮಿಗ್ರಹಿಸುವದಕ್ಕೆ ಪ್ರಮಾಣದ ಬಾಧವಿದೆ ಎಂದರ್ಥ.

### ७.१.१ प्रपञ्चे त्रैकालिक अबाध्यत्वस्य आगमसिद्धत्व उपपादनम्

## टीका

**ननु केयं सत्यता। या प्रत्यक्षादिगोचरा ब्रह्मणि परेण अङ्गीक्रियते सा एव इति ब्रूमः। कालत्रय (त्रिकाल) अबाध्यता लक्षणा सा न प्रत्यक्षादि गोचरा इति**



**चेत्। (न हि) तर्हि ब्रह्मणोऽपि कुतः सिद्धः। "तत् सत्यम्" इत्यादि आगमात् (वाक्यात्) इति चेत्। तर्हि तत् प्रकृतेऽपि समं इति। तद्विरोधात् कालातीत एव। तदिदं उक्तं " विश्वं सत्यं" इत्यादिना। अन्यथा प्रत्यक्षादि इत्यादि पदेन वाक्यस्यापि गृहितत्वात् पुनः ग्रहणं व्यर्थं स्यात्।**

ಇದೆಂತಹ ಸತ್ಯತೆ? ಪ್ರತ್ಯಕ್ಷಾದಿಗಳಿಗೆ (ಅಂದರೆ, ಪ್ರತ್ಯಕ್ಷ ಅನುಮಾನ ಮತ್ತು ಆಗಮ ಗಳಿಗೆ) ಗೋಚರನಾದ ಬ್ರಹ್ಮನಲ್ಲಿ ಹೇಗೆ ಪರಪಕ್ಷದವರು ಸತ್ಯತೆಯನ್ನು ಅಂಗೀಕರಿಸಿದ್ದಾರೋ ಅದರ ಸದೃಶವಾದ ಸತ್ಯತೆಯೇ, ಎಂದು ಸಿದ್ಧಾಂತಿಗಳಾದ ನಾವು ಹೇಳುತ್ತೇವೆ. ಕಾಲತ್ರಯ ಅಬಾಧಿತ ಲಕ್ಷಣದಿಂದ ಕೂಡಿದ ಬ್ರಹ್ಮನಲ್ಲಿ ಅಂಗೀಕರಿಸಿದ ಪಾರಮಾರ್ಥಿಕ ಸತ್ಯತ್ವವು ಪ್ರತ್ಯಕ್ಷಾದಿಗಳಿಗೆ ಗೋಚರವಾಗುವದಿಲ್ಲ ಎಂದೆನ್ನುತ್ತೇವೆ (ಪರಪಕ್ಷದವರು) ಎಂದರೆ? ಹಾಗಾದರೆ, ಇಂತಹ ಸತ್ಯತ್ವವನ್ನು ಹೊಂದಿದ ಬ್ರಹ್ಮನು ಕೂಡ ಹೇಗೆ ಸಿದ್ಧನಾಗಿದ್ದಾನೆ? "तत् सत्यम्" ಎಂದು ಮುಂತಾದ ಆಗಮ ವಾಕ್ಯಗಳಿಂದ ಎನ್ನುತ್ತೇವೆ ಎಂದರೆ? ಹಾಗಾದರೆ, ಅದು ಪಕ್ಷೀಭೂತ ಜಗತ್ತಿನಲ್ಲಿಯೂ ಕೂಡ ಸಮವಾಗಿದೆ. ಅದರಂತೆ ಆಗಮದ ವಿರೋಧ ಬರುವದರಿಂದ ದೃಶ್ಯತ್ವ ಅನುಮಾನಕ್ಕೆ ಕಾಲಾತ್ಯಯಾಪದಿಷ್ಟ ದೋಷ ಹಾಗೆಯೆ ಉಳಿಯುತ್ತದೆ. ಇದನ್ನು ಸ್ಪಷ್ಟಪಡಿಸಲೆಂದೆ " विश्वं सत्यं" ಎಂಬ ಆಗಮವಾಕ್ಯವನ್ನು ಶ್ರೀಮದಾಚಾರ್ಯರು ಉದಾಹರಿಸಿದ್ದಾರೆ.

ಇಲ್ಲವಾದರೆ, ಪ್ರತ್ಯಕ್ಷಾದಿ ಪದದಲ್ಲಿಯ ಇತ್ಯಾದಿ ಪದದಿಂದಲೇ ಆಗಮವನ್ನು ಕೂಡ ಗೃಹಿಸಿದ್ದರಿಂದ ಪುನಃ ಅದನ್ನು ಗ್ರಹಿಸುವದು ವ್ಯರ್ಥವೆನಿಸುತ್ತದೆ. ಹಾಗೂ ಪ್ರತ್ಯಕ್ಷದಂತೆ, ಆಗಮಕ್ಕೆ ವಿವಕ್ಷಿತ ಸತ್ತೆಯನ್ನು ಗ್ರಹಿಸುವದು ಪ್ರಯಾಸ ಸಾಧ್ಯವಲ್ಲ ಪರಂತು ಅನಾಯಾಸವಾಗಿ ಸಿದ್ಧಮಾಡಬಹುದು ಎಂದು ಸೂಚಿಸಲು ಕೂಡ ಶ್ರೀಮದಾಚಾರ್ಯರು "विश्वं सत्यं" ಎಂಬ ಆಗಮವಾಕ್ಯವನ್ನು ಮತ್ತೆ ಪ್ರತಿಪಾದಿಸಿದ್ದಾರೆ.

## टिप्पणीनाम् विशेषार्थानि

**॥ ननु इति ॥**

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु मिथ्यात्व अनुमानस्य न प्रत्यक्षादि विरोधः। प्रत्यक्षादिगृहीत सत्वस्य, अनुमान गृहीत प्रपञ्चमिथ्यात्व विरोधित्वात्, अनुमान गृहीत मिथ्यात्व विरोधि सत्वस्य च प्रत्यक्षादिना अग्रहात् इत्यभिप्रायेण सत्वं आक्षिपति– ननु इति॥**

ಮಿಥ್ಯಾತ್ವ ಅನುಮಾನಕ್ಕೆ ಪ್ರತ್ಯಕ್ಷಾದಿಗಳ ವಿರೋಧ ಬರುವದಿಲ್ಲ. ಏಕೆಂದರೆ, ಪ್ರತ್ಯಕ್ಷ್ಯಾದಿಗಳು ಗ್ರಹಿಸಿದ ಸತ್ಯಕ್ಕೆ, ಅನುಮಾನ ಗ್ರಹಿಸಿದ ಪ್ರಪಂಚ ಮಿಥ್ಯಾತ್ವ ವಿರೋಧವಿರುತ್ತದೆ. ಮತ್ತು ಅನುಮಾನ ಗ್ರಹಿಸಿದ ಮಿಥ್ಯಾತ್ವದ ವಿರೋಧಮಾಡುವ ಸತ್ಯವನ್ನು ಪ್ರತ್ಯಕ್ಷಾದಿಗಳು ಗ್ರಹಿಸಲಾರವು ಎಂಬ ಅಭಿಪ್ರಾಯದಿಂದ ಈ ಟೀಕಾವಾಕ್ಯ ಪ್ರತ್ಯಕ್ಷಾದಿಗಳ ಸತ್ಯತ್ವವನ್ನು ಆಕ್ಷೇಪಿಸುತ್ತದೆ.

**इयं सत्ता का? न कापि इत्यर्थः। तथाहि–**

ಇದು ಎಂಥಹ ಸತ್ತೆ ಅಂದರೆ ಸತ್ಯವಾಗಿರುವಿಕೆ? ಎಂತಹದ್ದೂ ಅಲ್ಲ ಎಂದರ್ಥ. ಅದು ಹೀಗಿರುತ್ತದೆಃ

**किं सत्ता परजातिः उत असद्विलक्षणत्वं अर्थक्रियाकरित्वं वा अबाध्यत्वं वा।**

ಏಕೆ, ಈ ಸತ್ಯವಾಗಿರುವಿಕೆ ಪರಜಾತಿಯೊ, ಅಥವಾ ಅಸದ್ವಿಲಕ್ಷಣತ್ವವೊ ಅಥಾವಾ ಅರ್ಥಕ್ರಿಯಾಕಾರಿತ್ವವೆಂದೊ ಅಥವಾ ಅಬಾಧಿತವಾದದ್ದೊ?

**न आद्यः। तथा सति मिथ्यात्ववादिना मया, प्रपञ्च इति अभ्युपगत परजात्यादिरूप सत्ताया एव प्रत्यक्षादिना ग्रहणेन प्रत्यक्षादेः अनुमान गृहीत मिथ्यात्व विरोधि सत्व ग्राहकत्व अभावेन प्रत्यक्षादेः अनुमान बाधकत्व अभाव आपत्तेः।**

ಇನ್ನು ಮೋದಲನೆಯದು ಅನ್ನುವದು ಸರಿಯಲ್ಲ. ಹಾಗಾದರೆ, ಮಿಥ್ಯಾತ್ವವಾದಿಯಾದ ನಮಗೆ, ಪ್ರಪಂಚ ಎಂದು ಒಪ್ಪಿದ ಪರಜಾತ್ಯಾದಿರೂಪ ಸತ್ಯವಾಗಿರುವಿಕೆಯೆ ಪ್ರತ್ಯಕ್ಷಾದಿಗಳಿಂದ ಗ್ರಹಿಸಿದ್ದರಿಂದ, ಮತ್ತು ಪ್ರತ್ಯಕ್ಷಾದಿಗಳಿಗೆ ಅನುಮಾನ ಗ್ರಹಸಿದ ಮಿಥ್ಯಾತ್ವ ವಿರೋಧವಾದ ಸತ್ಯ ಗ್ರಾಹಕತ್ವ ಇರುವದಿಲ್ಲ. ಆದ್ದರಿಂದ ಪ್ರತ್ಯಕ್ಷಾದಿಗಳಿಗೆ ಮಿಥ್ಯಾತ್ವ ಅನುಮಾನದ ಬಾಧಕತ್ವದ ಅಭಾವತೆ ಪ್ರಾಪ್ತವಾಗುತ್ತದೆ.

**न चतुर्थः। बाधस्य प्रतिपन्न उपाधौ त्रैकालिक सत्य तत् निषेधरूपत्वेन सत्यता अनिरूप्यत्वात्। अबाध्यत्वरूप सत्यतायाश्च बाध निरूप्यत्वेन अन्योन्याश्रय आपातात्। वर्तमानमात्रग्राहि प्रत्यक्षस्य तात्कालिक अबाधग्राहकत्वेऽपि त्रिकाल अबाध्यत्व अग्राहकतया अनुमान बाधकत्व अनुपपत्तेश्च इति शङ्काभिप्रायः।**

ಇನ್ನು ನಾಲ್ಕನೆ ಪರ್ಯಾಯ ಕೂಡ ಸರಿಯೆನಿಸುವದಿಲ್ಲ. ಬಾಧವನ್ನು, ತಿಳಿಯಲ್ಪಟ್ಟ ಉಪಾಧಿಯಲ್ಲಿ ತ್ರೈಕಾಲಿಕ ಸತ್ಯ ಮತ್ತು ಅದರ ನಿಷೇಧತ್ವರೂಪತ್ವದಿಂದ, ಸತ್ಯವಾಗಿ ನಿರೂಪಿಸಲು ಸಾಧ್ಯವಿಲ್ಲವಾದ್ದರಿಂದ, ಅಬಾಧ್ಯತ್ವರೂಪ ಸತ್ಯತೆಯನ್ನು ಬಾಧ ನಿರೂಪಿಸುವದರಿಂದ, ಅನ್ಯೋನ್ಯಾಶ್ರಯ ದೋಷ ಬರುತ್ತದೆ.

ಇನ್ನು ವರ್ತಮಾನಮಾತ್ರ ಗ್ರಹಿಸುವ ಪ್ರತ್ಯಕ್ಷಾದಿಗಳಿಗೆ ತಾತ್ಕಾಲಿಕ ಅಬಾಧ್ಯ ಗ್ರಾಹಕತ್ವವನ್ನು ಒಪ್ಪಿದರೂ, ತ್ರಿಕಾಲ ಅಬಾಧ್ಯತ್ವವನ್ನು ಗ್ರಹಿಸದೆ, ದೃಶ್ಯತ್ವ ಅನುಮಾನಕ್ಕೆ ಬಾಧಕತ್ವವನ್ನು ಹೇಳುವದು ಯುಕ್ತಿ ಇಲ್ಲದ್ದಾಗಿದೆ. ಎಂದು ಮುಂತಾಗಿ ಶಂಕಾಭಿಪ್ರಾಯವಿರುತ್ತದೆ.

**॥ या इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:



**प्रश्नस्य असङ्गति परिहाराय आह– या इति॥**

ಇಲ್ಲಿ ಮೇಲಿನ ಪ್ರಶ್ನೆಯ ಅಸಂಗತಿಯನ್ನು ಈ ಟೀಕಾವಾಕ್ಯ ಪರಿಹರಿಸುತ್ತದೆ.

**॥ ब्रह्मणि इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**उत्तरम आह– ब्रह्मणि इति॥**

ಮೇಲಿನ ಪ್ರಶ್ನೆಯ ಉತ್ತರವನ್ನು ಈ ಟೀಕಾ ವಾಕ್ಯ ಹೀಗೆ ಕೊಡುತ್ತದೆ.

**परेण मायावदिना।**

ಇಲ್ಲಿ परेण ಪದದ ಅರ್ಥ ಮಾಯಾವದಿಗಳು ಎಂದು ತೆಗೆದುಕೊಳ್ಳಬೇಕು.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆಃ

**ब्रह्मणि या स्वरूपसत्ता अङ्गीकृता सैव तत् सदृश स्वरूपसत्ता इत्यर्थः। एतेन परेण ब्रह्मणो निर्धर्मत्व अङ्गीकारात् ब्रह्मणि या अङ्गीकृता इति अनुपपन्नम्। तथा धर्माणां प्रातिस्विकत्वात् सैव इति चोद्यं परस्तम्।**

ಅಂದರೆ, ಬ್ರಹ್ಮನಿಗೆ ಯಾವ ಸ್ವರೂಪ ಯಾಥಾರ್ಥತೆಯನ್ನು ಅಂಗೀಕರಿಸಲ್ಪಟ್ಟಿದೆಯೊ ಅದರ ಸದೃಶವಾದ ಸ್ವರೂಪದ ಯಾಥಾರ್ಥತೆ ಎಂದರ್ಥ. ಇದರಿಂದ, ಪರರು ಬ್ರಹ್ಮನನ್ನು ನಿರ್ಧರ್ಮಕ ಎಂದು ಅಂಗೀಕರಿಸಿದ್ದರಿಂದ, "ಬ್ರಹ್ಮನಿಗೆ ಯಾವ ಸ್ವರೂಪ ಸತ್ತೆಯನ್ನು ಅಂಗೀಕರಿಸಲಾಗಿದೆಯೊ.." ಮುಂತಾದವು ಯುಕ್ತಿ ಇಲ್ಲದ್ದಾಗಿದೆ, ಹಾಗೂ ಧರ್ಮಗಳು ಅಸಾಧಾರಣಗಳಾದ್ದರಿಂದ "ಸದೃಶವಾದ.." ಮುಂತಾಗಿ ಹೇಳುವದು ಸರಿಯಲ್ಲ, ಎಂಬ ಹೇಳಿಕೆಗಳನ್ನು ನಿರಾಕರಿಸಲಾಯಿತು.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆಃ

**परेण ब्रह्मणि अङ्गीकृतायाः त्रिकाल अबाध्यत्व लक्षण सत्यताया एव मयापि प्रपञ्चे तत्वेन अङ्गीकारात। प्रतिपन्न उपाधौ त्रैकालिक निषेधमात्रस्य वा विज्ञानेन निवृत्तेः एव वा बाधत्व अभ्युपगमेन तस्य सत्ता घटितत्व अभावेन अन्योन्याश्रय अप्रसङ्गात्। तादृश सत्तायाश्च अनुमान गृहीत मिथ्याविरोधित्वेन तद् ग्राहक प्रमाणबाधो दृश्यत्व अनुमानस्य न दुष्परिहार एव इति आशयवान् परकीय ब्रह्मणि त्रिकाल अबाध्यत्वरूप सत्यता अङ्गीकारं परमुखेन एव वाचयितुं गूढाभिसन्धिः उत्तरं आह– ब्रह्मणि इति॥**

**या यादृशी सा तादृशी। यादृशं ब्रह्मणः सत्वं तादृशं स्यात् जगत्यपि इति वचनात् इत्याशयः**

ಪರಪಕ್ಷದವರು ಬ್ರಹ್ಮನಲ್ಲಿ ಅಂಗೀಕರಿಸಿದ ತ್ರಿಕಾಲ ಅಬಾಧ್ಯತ್ವ ಲಕ್ಷಣ ಸತ್ಯತೆಯನ್ನು ನಾವು ಕೂಡ ಪ್ರಪಂಚದಲ್ಲಿ ತಾತ್ವಿಕವಾಗಿ ಅಂಗೀಕರಿಸಿದ್ದೇವೆ. ತಿಳಿಯಲ್ಪಟ್ಟ ಉಪಾಧಿಯಲ್ಲಿ ತ್ರೈಕಾಲಿಕ ನಿಶೇಧ ಮಾತ್ರ ಅಥವಾ ವಿಜ್ಞಾನದಿಂದ ನಿವೃತ್ತಿ ಹೊಂದಿದ್ದೇ ಬಾಧತ್ವವೆಂದು ಒಪ್ಪಿದ್ದರಿಂದ ಅದರ ಸತ್ಯವಾಗಿರುವಿಕೆ ಅಂದರೆ ಸತ್ತೆ ಸಂಭವಿಸುವಿಕೆ ಇಲ್ಲವಾದ್ದರಿಂದ, ಇಲ್ಲಿ ಅನ್ಯೋನ್ಯಾಶ್ರಯ ಅಸಂಗತವೆನಿಸುವದು. ಇಂತಹ ತಾದೃಶ ಸತ್ತೆಯು, ಅನುಮಾನ ಗ್ರಹಿಸಿದ

ಮಿಥ್ಯಾದ ವಿರೋಧಿಯಾದ್ದರಿಂದ, ಅದನ್ನು ಗ್ರಹಿಸಿದ ಪ್ರಮಾಣ ಬಾಧ ದೃಶ್ಯತ್ವ ಅನುಮಾನದ ದುಷ್ಪರಿಹಾರವಾಗಲಾರದು ಎಂದು ಆಶಯವುಳ್ಳವರಾಗಿ, ಪರಕೀಯ ಬ್ರಹ್ಮನಲ್ಲಿಯ ತ್ರಿಕಾಲ ಅಬಾಧ್ಯತ್ವರೂಪ ಸತ್ಯ ಅಂಗೀಕಾರವನ್ನು ಪರರ ಮುಖವಾಗಿಯೆ ಹೇಳಿಸಲು ಗೂಢ ಧ್ಯೇಯರೂಪ ಉತ್ತರವನ್ನು ಈ ಟೀಕಾವಾಕ್ಯ ಹೇಳುತ್ತದೆ.

ಇಲ್ಲಿ या ಅಂದರೆ ಯಾವ ತರಹನಾಗಿ ಎಂದರ್ಥ; सा ಅಂದರೆ ಆ ತರಹವಾಗಿ ಎಂದರ್ಥ. ಅಂದರೆ, ಯಾವ ತರಹ ಬ್ರಹ್ಮಣ ಸತ್ಯನಾಗಿದ್ದಾನೊ ಆ ತರಹದಿಂದ ಜಗತ್ತು ಕೂಡ ಸತ್ಯವಾಗಿದೆ ಎಂಬ ವಚನವಿರುತ್ತದೆ ಎಂಬ ಆಶಯವಿರುತ್ತದೆ

## ॥ कालत्रय (त्रिकाल) इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**पारमार्थिकत्वरूप इत्यर्थः। लक्षणा इति अनन्तरं ब्रह्मणि अङ्गीकृता इति शेषः।**

ಅಂದರೆ ಪಾರಮಾರ್ಥಿಕತ್ವರೂಪ ಎಂದರ್ಥ. ಈ ಟೀಕಾವಾಕ್ಯದಲ್ಲಿ लक्षणा ಅನಂತರ ब्रह्मणि अङ्गीकृता ಎಂಬ ಪದಗಳನ್ನು ಸೇರಿಸಿ ಅರ್ಥಮಾಡಬೇಕು. ಅಂದರೆ, ಪಾರಮಾರ್ಥಿಕಸ್ವರೂಪ ಲಕ್ಷಣ ಬ್ರಹ್ಮನಲ್ಲಿ ಅಂಗೀಕರಿಸಿದ್ದು ಎಂಬ ಅರ್ಥ ಸಿಗುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**आशयम् अजानानः शङ्कते– त्रिकाल इति॥**

ಮೇಲಿನ ಆಶಯ ತಿಳಿಯದವರ ಶಂಕೆಯನ್ನು ಈ ಟೀಕಾವಾಕ್ಯ ಪ್ರತಿಪಾದಿಸುತ್ತದೆ.

**ब्रहमणि त्रिकाल अबाध्यत्वलक्षणा सत्यता मया अङ्गीक्रियते। न च सा एव च त्वया जगति अङ्गीकर्तुं शक्यते। तथा सति तस्य वर्तमानमात्रग्राहि प्रत्यक्ष ग्राह्यत्व अभावेन, दृश्यत्व अनुमानस्य प्रत्यक्षेण बाध अभाव प्रसङ्गात् इत्यर्थः।**

ನನ್ನಿಂದ (ಪರಪಕ್ಷದವರಿಂದ) ಬ್ರಹ್ಮನಲ್ಲಿ ತ್ರಿಕಾಲ ಅಬಾಧ್ಯತ್ವಲಕ್ಷಣ ಸತ್ಯತೆಯನ್ನು ಅಂಗೀಕರಿಸಿದ್ದನ್ನು ತಮ್ಮಿಂದ (ಸಿದ್ಧಾಂತಿಗಳಿಂದ ) ಹಾಗೆ ಜಗತ್ತಿನಲ್ಲಿ ಅಂಗೀಕರಿಸಲು ಸಾಧ್ಯವಿಲ್ಲ. ಹಾಗೆನಾದರೆ ಜಗತ್ತಿಗೆ ವರ್ತಮಾನಗ್ರಾಹಿ ಪ್ರತ್ಯಕ್ಷದ ಗ್ರಾಹ್ಯತ್ವ ಇಲ್ಲದಾಗಿ, ದೃಶ್ಯತ್ವ ಅನುಮಾನಕ್ಕೆ ಪ್ರತ್ಯಕ್ಶದಿಂದ ಬಾಧ ಉಂಟಾಗಲಾರದ ಪ್ರಸಂಗ ಒದಗುವದು ಎಂದರ್ಥ.

## ॥ न प्रत्यक्षादि गोचरा इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**प्रत्यक्षस्य वर्तमानमात्र ग्राहित्वात् इति भावः।**

ಅಂದರೆ, ಪ್ರತ್ಯಕ್ಷವು ವರ್ತಮಾನವನ್ನು ಮಾತ್ರ ಗ್ರಹಿಸುತ್ತದೆ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:



**धर्मिग्राहक प्रत्यक्ष अनुमान आगम गोचरः न भवति इत्यर्थः। कालत्रय अबाध्यत्व लक्षणा इति विशेषणं वर्तमानमात्र ग्रहण स्वभावात् न प्रत्यक्षस्य तद् ग्राहकत्वम्। यत् जन्यं महत्वाधिकरणं तत् कालत्रय अबाध्यं सर्वावयवारब्धं इति व्याप्तिग्रह अभावात्।**

ಅಂದರೆ, ಧರ್ಮಿ ಗ್ರಹಿಸುವ ಪ್ರತ್ಯಕ್ಷ, ಅನುಮಾನ ಮತ್ತು ಆಗಮಗಳಿಗೆ ಗೋಚರವಾಗದ ಎಂದರ್ಥ. कालत्रय अबाध्यत्व लक्षणा ಎಂಬ ವಿಶೇಷಣವನ್ನು ವರ್ತಮಾನವನ್ನು ಮಾತ್ರ ಗ್ರಹಿಸುವ ಪ್ರತ್ಯಕ್ಷವು ಗ್ರಹಿಸಲು ಸಾಧ್ಯವಿಲ್ಲ. ಏಕೆಂದರೆ, ಯಾವದು ಶ್ರೇಷ್ಠಾಶ್ರಯದಿಂದ ಹುಟ್ಟಿರುವದು ಅದು ಕಾಲತ್ರಯ ಅಬಾಧ್ಯವಾದುದು, ಸರ್ವಾವಯದಿಂದ ಪ್ರಾರಂಭಿಸಲ್ಪಟ್ಟಿದ್ದು, ಎಂಬ ವ್ಯಾಪ್ತಿ ಇರುವದಿಲ್ಲ.

**प्रत्युत निर्विशेषेण सावयवारब्धत्वेन व्याप्तिग्रहणात्। अनुमानं न कालत्रय अबाध्यत्वग्रहजनकम्। स्वर्गादि स्वरूप प्रतिपादकं वाक्यं कालत्रय अबाध्यत्व बोधक पद अभावात् न कालत्रय अबाध्यत्वग्रह जनकं इति सूचनाय इति द्रष्टव्यम्।**

ಆದರೆ ವಿರುದ್ಧವಾದ ನಿರ್ವಿಶೇಷಣ ಸರ್ವಾಯವಯ ಪ್ರಾರಂಭಸಿಲ್ಪಡುವದರಿಂದ ಮೇಲೆ ನಮೂದಿಸಿದ ವ್ಯಾಪ್ತಿಯನ್ನು ಗ್ರಹಿಸುತ್ತದೆ. ಅದರಂತೆ ಅನುಮಾನ ಕೂಡ ಕಾಲತ್ರಯ ಅಭಾಧ್ಯತ್ವ ಗ್ರಹಜನಕವಾಗುವದಿಲ್ಲ.

ಇನ್ನು ಸ್ವರ್ಗಾದಿ ಸ್ವರೂಪವನ್ನು ಪ್ರತಿಪಾದಿಸುವ ಆಗಮ ವಾಕ್ಯ, ಕಾಲತ್ರಯ ಬೋಧಕ ಪದ ಇಲ್ಲದಮೂಲಕ ಕಾಲತ್ರಯ ಅಬಾಧ್ಯತ್ವ ಗ್ರಹಜನಕವಾಗಲಾರದು. ಇದನ್ನೆ ಈ ಟೀಕಾವಾಕ್ಯ ಸೂಚಿಸುತ್ತದೆ ಎಂದು ತಿಳಿಯಬೇಕು.

## ॥ (न हि) तर्हि इति ॥

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**यदि सत्ता न धर्मिग्राहक मान गोचरा, तर्हि ब्रह्मणोऽपि कुतः सिद्धः इत्यर्थः।**

ಸತ್ಯವಾಗಿರುವಿಕೆ ಅಥವಾ ಸತ್ತೆಯು ಧರ್ಮಿಗ್ರಾಹಕ ಪ್ರಮಾಣದಿಂದ ಗೋಚರಿಸದಿದ್ದಲ್ಲಿ, ಬ್ರಹ್ಮನು ಕೂಡ ಸತ್ಯ ಎಂದು ಹೇಗೆ ಸಿದ್ಧವಾಗುತ್ತಾನೆ ಎಂದರ್ಥ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**प्रत्यक्षस्य वर्तमानमात्र ग्राहित्वेन त्रिकाल अबाध्यत्व अग्राहकत्वेन दृश्यत्व अनुमान अभावस्य प्रत्यक्षेण बाध अभावेऽपि न अस्माकं काचित् क्षतिः। आगमस्यैव ब्रह्मणि इव प्रपञ्चेऽपि त्रिकाल अबाध्यत्व ग्राहकत्वेन दृश्यत्व अनुमानस्य आगमबाधितताया अवर्जनीयत्वात् इति अभिप्रेत्य, आगमस्य त्रिकाल अबाध्यता ग्राहकतां परमुखेन एव वाचयितुं ब्रह्मणि तादृश सत्ता ग्राहकम् प्रमाणं आक्षिपति– न हि इति॥**

ಪ್ರತ್ಯಕ್ಷವು ವರ್ತಮಾನವನ್ನು ಮಾತ್ರ ಗ್ರಹಿಸುತ್ತದೆ. ಆದ್ದರಿಂದ ತ್ರಿಕಾಲ ಅಬಾಧ್ಯತ್ವವನ್ನು ಅದು ಗ್ರಹಿಸಲಾರದು. ಆದ್ದರಿಂದ ದೃಶ್ಯತ್ವ ಅನುಮಾನದ ಅಭಾವತೆಯ ಪ್ರತ್ಯಕ್ಷದಿಂದ ಬಾಧ ಇಲ್ಲವಾದರೂ ಸಿದ್ಧಾಂತಿಗಳಾದ ನಮಗೆ ಯಾವ ಕ್ಷತಿಯೂ ಇಲ್ಲ. ಆಗಮದಿಂದಲೇ ಬ್ರಹ್ಮನಲ್ಲಿ ತ್ರಿಕಾಲ ಅಬಾಧ್ಯತ್ವರೂಪ ಸತ್ಯವಾಗಿರುವಿಕೆ ಸಿದ್ಧವಾದಂತೆ, ಪ್ರಪಂಚ ಕೂಡ

ತ್ರಿಕಾಲ ಅಬಾಧ್ಯತ್ವ ಗ್ರಹಿಸುವದರಿಂದ, ದೃಶ್ಯತ್ವ ಅನುಮಾನಕ್ಕೆ ಆಗಮದ ಮೂಲಕ ಒದಗಿದ ಈ ಬಾಧವನ್ನು ವರ್ಜಿಸಲು ಅಥವಾ ಪರಿಹರಿಸಲು ಸಾಧ್ಯವಿಲ್ಲವೆಂದು ಅಭಿಪ್ರಾಯಪಟ್ಟು, ಆಗಮದ ತ್ರಿಕಾಲ ಅಬಾಧ್ಯ ಗ್ರಹಿಸುವದನ್ನು ಪರಮುಖದಿಂದಲೇ ಹೇಳಿಸಲು, ಈ ಟೀಕಾ ವಾಕ್ಯದಿಂದ ಬ್ರಹ್ಮನಲ್ಲಿ ಅಂತಹ ಸತ್ಯವಾಗಿರುವಿಕೆಯ ಗ್ರಾಹಕ ಪ್ರಮಾಣವನ್ನು ಆಕ್ಷೇಪಿಸುತ್ತಾರೆ.

## ॥ कुतः सिद्ध इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**कालत्रय अबाध्यत्व लक्षण सत्यता कुतः प्रमाणात् सिद्धः इत्यर्थः।**

ಅಂದರೆ, ಕಾಲತ್ರಯ ಅಬಾಧ್ಯತ್ವ ಲಕ್ಷಣ ಸತ್ಯತೆಯು ಯಾವ ಪ್ರಮಾಣದಿಂದ ಸಿದ್ಧವಾಗಿದೆ ? ಎಂದರ್ಥ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**न कुतोऽपि । प्रत्यक्षादिभिः तत् सिद्धेः असम्भवात् अन्यस्य च साधकस्य अभावात् इत्यर्थः।**

ಯಾವ ಪ್ರಮಾಣದಿಂದಲೂ ಅಲ್ಲ. ಪ್ರತ್ಯಕ್ಷಾದಿಗಳಿಂದ ಅಂತಹ ಸತ್ಯ ಸಿದ್ಧವಾಗಲು ಸಾಧ್ಯವಿಲ್ಲ ಮತ್ತು ಅನ್ಯ ಸಾಧಕಗಳು ಇರುವದಿಲ್ಲ ಎಂದರ್ಥ.

## ॥ "तत् सत्यम्" इत्यादि आगमात् (वाक्यात्) इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**कालत्रय अबाध्यत्वलक्षण सत्यत्वस्य आगम सिध्यत्वं इत्यर्थः।**

ಅಂದರೆ ಕಾಲತ್ರಯ ಅಬಾಧ್ಯತ್ವಲಕ್ಷಣ ಸತ್ಯತ್ವವು ಆಗಮದಿಂದ ಸಿದ್ಧವಾಗಿದೆ ಎಂದರ್ಥ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**न च प्रत्यक्षादेः सर्वस्य त्रिकाल अबाध्यत्व अग्राहकतां ब्रूमः। येन उक्त दोष प्रसज्येत। किन्नाम्, वर्तमानमात्र ग्राहित्वात् प्रत्यक्षस्य तद् ग्राहकत्वं नास्ति इति। आगमस्य तु त्रिकाल अबाध्यत्व ग्राहकत्वं अभ्युपगम्यत एव। ततश्च ब्रह्मणः प्रत्यक्षेण उक्तरूप सत्यता सिद्धि असम्भवेऽपि आगमेन एव तत् सिद्धि सम्भवात् न तत् असिद्धिप्रसङ्ग इति आशयेन आह– तत् सत्यं इत्यादि वाक्यात् इति॥**

ನಾವು (ಪರಪಕ್ಷದವರು) ಪ್ರತ್ಯಕ್ಷಾದಿಗಳೆಲ್ಲ ತ್ರಿಕಾಲ ಅಬಾಧ್ಯತ್ವವನ್ನು ಗ್ರಹಿಸುವದಿಲ್ಲ ಎಂದು ಎನ್ನುವದಿಲ್ಲ. ಅದರಿಂದ ತಾವು (ಸಿದ್ಧಾಂತಿಗಳು) ಹೇಳಿದ ದೋಷ ಬರಬಹುದು, ಯಾವುದೆಂದರೆ, ವರ್ತಮಾನಮಾತ್ರ ಗ್ರಹಿಸುವದರಿಂದ ಪ್ರತ್ಯಕ್ಷಕ್ಕೆ ತ್ರಿಕಾಲ ಅಬಾಧ್ಯತ್ವರೂಪ ಸತ್ಯತ್ವದ ಗ್ರಾಹಕತ್ವ ಇರುವದಿಲ್ಲವೆಂಬ. ಆದರೆ, ಆಗಮಕ್ಕೆ ತ್ರಿಕಾಲ ಅಬಾಧ್ಯತ್ವ ಗ್ರಾಹಕತ್ವ ನಾವು (ಪರಪಕ್ಷದವರು) ಅಂಗೀಕರಿಸಿರುತ್ತೇವೆ. ಅದರಂತೆ, ಬ್ರಹ್ಮನಿಗೆ ಪ್ರತ್ಯಕ್ಷದಿಂದ



ಈಗಾಗಲೆ ಹೇಳಿದಂತೆ ಸತ್ಯತಾ ಸಿದ್ಧಿಸುವದು ಅಸಂಭವವಾದರೂ ಆಗಮದಿಂದ ಅದರ ಸಿದ್ಧಿಯ ಸಂಭವವಿರುವಾಗ, ಅದರ ಅಸಿದ್ಧಿ ಪ್ರಸಂಗ ಉಂಟಾಗುವದಿಲ್ಲ ಎಂದು ಪ್ರತಿಪಾದಿಸಲು ಈ ಟೀಕಾವಾಕ್ಯವಿರುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**न ब्रह्मणो धर्मिग्राहक भावेन सत्ता सिद्धा भवति किन्तु तटस्थ आगमेन इति शङ्कते– तत् सत्यं इत्यादो इति॥**

ಧರ್ಮಿಗ್ರಾಹಕ ಭಾವದಿಂದ ಬ್ರಹ್ಮನ ಸತ್ಯವಾಗಿರುವಿಕೆಯು ಸಿದ್ಧವಾಗುವದಿಲ್ಲ ಕಿಂತು ತಟಸ್ಥವಾದ ಆಗಮದಿಂದ ಸಿದ್ಧವಾಗುತ್ತದೆ ಎಂದು ಪ್ರತಿಪಾದಿಸಲು, ಈ ತರಹದ ಶಂಕೆಯನ್ನು ಎನ್ನು ಎತ್ತಿ ಪರಿಹರಿಸುತ್ತದೆ.

## ॥ तत् प्रकृतेऽपि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**प्रकृते पक्षीभूते जगति।**

ಇಲ್ಲಿ प्रकृते ಪದದ ಅರ್ಥಃ ಪಕ್ಷೀಭೂತವಾದ ಜಗತ್ತಿನಲ್ಲಿ ಎಂದು ತೆಗೆದುಕೊಳ್ಳಬೇಕು.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ

**हन्त एवं प्रत्यक्षेण प्रपञ्चस्य उक्तरूप सत्व सिद्धि असम्भवेऽपि ब्रह्मवद् आगमेन तत् सिद्धि सम्भवात् आगम बाधो दृश्यत्व अनुमानस्य इति यत् इष्ट सिद्धिः इति स्व आशयं सिद्ध्यान्ति उद्घाटयति– तत् इति॥**

ಈ ರೀತಿಯಾಗಿ ಪ್ರಪಂಚಕ್ಕೆ ಹೇಳಿದಂತೆ ಸತ್ಯತ್ವ ಸಿದ್ಧಿ ಅಸಂಭವವೆನಿಸಿದರೂ ಬ್ರಹ್ಮನಂತೆ ಆಗಮದಿಂದ ಅದರ ಸತ್ಯತ್ವದ ಸಿದ್ಧಿ ಸಂಭವವಿರುವಾಗ್, ಆಗಮ ಬಾಧ ದೃಶ್ಯತ್ವ ಅನುಮಾನಕ್ಕೆ ಯಾವದು ಇಷ್ಟವಾದದ್ದು ಸಿದ್ಧವಾಗಬೇಕೊ ಅದು ಸಿದ್ಧವಾಯಿತು ಎಂಬುದನ್ನು ಈ ಟೀಕಾವಾಕ್ಯ ಪ್ರಕಾಶಪಡಿಸುತ್ತದೆ ಅಥವಾ ಪ್ರಕಟಿಸುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ

**तटस्थ आगमेन एव बाधात् कालात्ययापदिष्टं अनुमानं भवति। किं धर्मिग्राहकस्य सत्ताग्राहकता व्युत्पादनेन इति भावेन आह– तत् प्रकृत इति॥**

ಇಲ್ಲಿ ತಟಸ್ಥವಾದ ಆಗಮದಿಂದಲೇ ದೃಶ್ಯತ್ವ ಅನುಮಾನಕ್ಕೆ ಬಾಧ ಉಂಟಾಗುವದರಿಂದ, ಕಾಲಾತ್ಯಯಾಪದಿಷ್ಟ ದೋಷ ಅನುಮಾನಕ್ಕೆ ಬರುತ್ತದೆ. ಏಕೆ, ಧರ್ಮೀಗ್ರಾಹಕದ ಸತ್ತೆಯನ್ನು ಗ್ರಹಿಸುವ ನಿಷ್ಪತ್ತಿಯಿಂದೆನು? ಎಂಬ ಭಾವದಿಂದ ಈ ಟೀಕಾವಾಕ್ಯವಿರುತ್ತದೆ.

## ॥ तदिदं उक्तं इति ॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**विवक्षितार्थे मूलकारीय ज्ञापकम् आह– तदिदं उक्तं इति॥**

ವಿವಕ್ಷಿತ ಅರ್ಥದಲ್ಲಿ ಶ್ರೀಮದಾಚಾರ್ಯರ ಮೂಲವಾಕ್ಯವನ್ನು ಜ್ಞಾಪಿಸಲು ಈ ಟೀಕಾವಾಕ್ಯವಿರುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**प्रत्यक्षादि इत्यादि शब्दोपात्तं अपि वाक्यं आदरात् पुनः उपादानेन "प्रत्यक्षवत् आगमस्य विवक्षित सत्ताग्राहित्वं न प्रयास साध्यं किन्तु अनायास सिद्धं " इति सूचितम् इत्यर्थः।**

ಪ್ರತ್ಯಕ್ಷಾದಿಪದದಲ್ಲಿ ಇತ್ಯಾದಿ ಶಬ್ದಮೂಲಕ ಉಪಯೋಗಿಸಲ್ಪಟ್ಟರೂ ಕೂಡ, ವಾಕ್ಯವನ್ನು ಪುನಃ ಗ್ರಹಿಸುವದರಿಂದ, ಪ್ರತ್ಯಕ್ಷದಂತೆ ಆಗಮಕ್ಕೆ ವಿವಕ್ಷಿತ ಸತ್ತೆಯನ್ನು ಗ್ರಹಿಸುವದು ಪ್ರಯಾಸ ಸಾಧ್ಯವಲ್ಲ ಪರಂತು ಅನಾಯಾಸವಾಗಿ ಸಿದ್ಧವಾಗುತ್ತದೆ ಎಂದು ಸೂಚಿಸಲು ಇರುತ್ತದೆ ಎಂದರ್ಥ.

## ॥ अन्यथा इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ब्रह्म प्रतिबन्धात् त्रैकालिक अबाध्यत्व लक्षण सत्यत्वं, जगत्यां एव सिद्धं वक्तुं विश्वं सत्यं इत्यादि मूलं प्रवृत्तं इति अभिप्राय अभावे इत्यर्थः।**

ಅಂದರೆ, ಬ್ರಹ್ಮ ಪ್ರತಿಬಂಧವಾದ ತ್ರೈಕಾಲಿಕ ಅಬಾಧ್ಯತ್ವ ಲಕ್ಷಣ ಸತ್ಯತ್ವವು ಜಗತ್ತಿನಲ್ಲೂ ಸಿದ್ಧವಾಗಿದೆ ಎಂದು ಹೇಳಲು "ವಿಶ್ವಂ ಸತ್ಯಂ" ಎಂದು ಮುಂತಾಗಿ ಮೂಲವಾಕ್ಯ ಪ್ರವೃತ್ತವಾಗಿದೆ ಎಂಬ ಅಭಿಪ್ರಾಯ ಇಲ್ಲದಾಗ ಎಂದರ್ಥ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**तस्य अन्यया उपपत्ति शङ्कानिरासेन उक्तार्थ ज्ञापकतां उपपादयति–अन्यथा इति॥**

ಅದನ್ನು ಅಂದರೆ ತ್ರೈಕಾಲಿಕ ಅಬಾಧ್ಯತ್ವ ಸತ್ಯತ್ವ ಜಗತ್ತಿನಲ್ಲೂ ಇದೆ ಎಂದು ಬೇರೆ ಯುಕ್ತಿಯಿಂದ ಅದಕ್ಕೆ ಬರುವ ಶಂಕೆಯನ್ನು ನಿರಾಕರಿಸಿ, ಈಗ ತಾವು ಹೇಳಿದ ಅರ್ಥದ ಜ್ಞಾಪನೆಯನ್ನು ಈ ಟೀಕಾವಾಕ್ಯ ಮೂಲಕ ಯುಕ್ತಿ ಪೂರ್ವಕ ಸಮರ್ಥಿಸುತ್ತಾರೆ.

## ॥ व्यर्थं स्यात् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**प्रत्यक्षादि इत्यादि पदेन एव वाक्यस्यापि उपात्तत्वात्। विश्वं सत्यं इति, यदा वाक्यं पुनः पृथक् उपात्तं तेन इदं उक्तं भवति। प्रत्यक्षवत् आगमस्य त्रैकालिक अबाध्यता लक्षण सत्ताग्राहित्वं न प्रयास साध्यं किन्तु अनायास साध्यं इति॥**

ಪ್ರತ್ಯಕ್ಷಾದಿ ಪದದಲ್ಲಿಯ ಇತ್ಯಾದಿ ಪದದಿಂದಲೇ ವಾಕ್ಯವನ್ನು ಕೂಡ ಸ್ವೀಕರಿಸಲ್ಪಟ್ಟಿರುತ್ತದೆ. ಯಾವಾಗ, ವಿಶ್ವಂ ಸತ್ಯಂ ಎಂಬ ವಾಕ್ಯವನ್ನು ಶ್ರೀಮದಾಚಾರ್ಯರು ಪುನಃ ಬೇರೆಯಾಗಿ ಪ್ರಯೋಗಿಸಿದ್ದಾರೊ ಅದರಿಂದ ಇದನ್ನು ಹೇಳಿದಂತಾಯಿತುಃ ಪ್ರತ್ಯಕ್ಷದಂತೆ ಆಗಮಕ್ಕೆ



ತ್ರೈಕಾಲಿಕ ಅಬಾಧ್ಯತಾ ಲಕ್ಷಣ ಸತ್ಯವಾಗಿರುವಿಕೆಯನ್ನು ಗ್ರಹಿಸುವದನ್ನು ಪ್ರಯಾಸದಿಂದ ಸಾಧಿಸ ಬೇಕಾಗಿಲ್ಲ ಪರಂತು ಅದು ಅನಾಯಾಸ ಸಾಧ್ಯವಾಗಿರುತ್ತದೆ.

### ७.१.२ प्रपञ्चे त्रैकालिक अबाध्यत्वस्य अङ्गीकारवादः

## टीका

## अङ्गीकारवादश्च अयम्। यथा च त्रैकालिक अबाध्यत्वलक्षणं सत्यत्वं प्रत्यक्षादिना एव सिद्धं तथा उपपादितं अन्यत्र इति।

ಪ್ರತ್ಯಕ್ಷದ ವರ್ತಮಾನ ಮಾತ್ರ ಗ್ರಹಿಸುವದನ್ನು ಅಂಗೀಕರಿಸಿ, ತ್ರೈಕಾಲಿಕ ಅಬಾಧ್ಯತ್ವರೂಪ ಸತ್ಯತ್ವವು, ಜಗತ್ತಿನಲ್ಲಿ ಪ್ರತ್ಯಕ್ಷ ಸಿದ್ಧವಲ್ಲ ಪರಂತು ಆಗಮದಿಂದ ಸಿದ್ಧಿಸುತ್ತದೆ ಎಂದು ಯಾವದು ಭಗವತ್ಪಾದರಿಂದ ಹೇಳಲಾಯಿತೊ ಅದು ಅಂಗೀಕರಿಸುವ ವಾದ ಆಗಿರುತ್ತದೆ ಎಂದರ್ಥ. ಹಾಗೆಯೆ ತ್ರೈಕಾಲಿಕ ಅಬಾಧ್ಯತ್ವ ಲಕ್ಷಣ ಸತ್ಯತ್ವವು ಪ್ರತ್ಯಕ್ಷಾದಿಗಳಿಂದ ಸಿದ್ಧವಾಗಿರುತ್ತದೆ ಎಂದು ಶ್ರೀಮದಾಚಾರ್ಯರು ತಮ್ಮ ಅನುವ್ಯಾಖ್ಯಾನ, ಪ್ರಮಾಣ ಲಕ್ಷಣ ಮುಂತಾದ ಗ್ರಂಥಗಳಲ್ಲಿ ಸಮರ್ಥಿಸಿದ್ದಾರೆ.

### टिप्पणीनाम् विशेषार्थानि

## ॥ अङ्गीकारवादश्च अयम् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**प्रत्यक्षस्य वर्तमानमात्र ग्राहित्वं अङ्गीकृत्य त्रैकालिक अबाध्यत्वरूप सत्यत्वं जगति न प्रत्यक्ष सिद्धं किन्तु आगमेन इति यदुक्तं भगवत्पादैः स अयं अङ्गीकार वाद इत्यर्थः।**

ಅಂದರೆ, ಪ್ರತ್ಯಕ್ಷದ ವರ್ತಮಾನ ಮಾತ್ರ ಗ್ರಹಿಸುವದನ್ನು ಅಂಗೀಕರಿಸಿ, ತ್ರೈಕಾಲಿಕ ಅಬಾಧ್ಯತ್ವರೂಪ ಸತ್ಯತ್ವವು, ಜಗತ್ತಿನಲ್ಲಿ ಪ್ರತ್ಯಕ್ಷ ಸಿದ್ಧವಲ್ಲ ಪರಂತು ಆಗಮದಿಂದ ಸಿದ್ಧಿಸುತ್ತದೆ ಎಂದು ಯಾವದು ಭಗವತ್ಪಾದರಿಂದ ಹೇಳಲಾಯಿತೊ ಅದು ಅಂಗೀಕರಿಸುವ ವಾದ ಆಗಿರುತ್ತದೆಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**प्रबल प्रत्यक्ष विरोधेन अङ्गीकार्या प्रामाण्य अनुमानादि, विरोधात् स्वतः प्राप्त प्रत्यक्ष प्रामाण्य त्याग अयोगाच्च. प्रत्यक्ष प्रामाण्यं अङ्गीकार्यम्।**

ಪ್ರಬಲ ಪ್ರತ್ಯಕ್ಷ ವಿರೋಧದಿಂದ ಅನುಮಾನದಿ ಪ್ರಾಮಾಣ್ಯವನ್ನು ಅಂಗೀಕರಿಸಿದರೆ, ಸ್ವತಃ ಪ್ರಾಪ್ತ ಪ್ರತ್ಯಕ್ಷದ ವಿರೋಧ ಬರುವದರಿಂದ, ಪ್ರತ್ಯಕ್ಷನ್ನು ತ್ಯಜಿಸುವದು ಅಯೋಗ್ಯವೆನಿಸುವರಿಂದ, ಪ್ರತ್ಯಕ್ಷ ಪ್ರಾಮಾಣ್ಯವನ್ನು ಅಂಗೀಕರಿಸಬೇಕು.

**तत् प्रामाण्यं च यत् कालादि अवच्छेदेन स्वविषयो गृहीतः तत् कालादि अवच्छिन्नतया तस्य असत्वे न उपपद्यत इति तत् कालादि अवच्छिन्नतया प्रत्यक्ष विषयस्य सत्त्वं अङ्गीकार्यम्।**

ಪ್ರತ್ಯಕ್ಷ ಪ್ರಾಮಾಣ್ಯವು ಯಾವ ಕಾಲಾದಿ ಅವಚ್ಛೇದದಿಂದ (ವ್ಯಾಪ್ತಿಯ ಮಿತಿ) ಸ್ವವಿಷಯವನ್ನು ಗ್ರಹಿಸುತ್ತದೊ, ಆ ಕಾಲಾದಿ ಅವಚ್ಛಿನ್ನದ್ವಾರಾ (ಬೇರ್ಪಡಿಸುವಿಕೆ) ಆ ವಿಷಯದ ಅಸತ್ಯವನ್ನು ಸಮರ್ಥಿಸಲು ಸಾಧ್ಯವಾಗುವದಿಲ್ಲವೆಂದು, ಆ ಕಾಲಾದಿ ಅವಚ್ಛಿನ್ನಮೂಲಕ ಪ್ರತ್ಯಕ್ಷ ವಿಷಯದ ಸತ್ಯವನ್ನು ಅಂಗೀಕರಿಸಬೇಕು.

**तथाच अविद्यमानस्य, तत् कालादि अवच्छेदेन असत्त्वस्य केनापि प्रमाणेन गृहितुं अशक्यत्वात्, कालान्तरादि भाविनोऽपि तत् कालादि अवच्छेदेन तत् असत्त्वग्राहि प्रमाणस्य अभाव निश्चयात्, प्रतिपन्न उपाधौ त्रैकालिकनिषेध प्रतियोगित्व लक्षणं बाध्यत्वं कदापि नास्ति इति अत्यन्त अबाध्यता असिद्धिः।**

ಅದರಂತೆ, ಪ್ರತ್ಯಕ್ಷ ಕಾಲಾದಿ ಅವಚ್ಛೇದದಿಂದ ಅವಿದ್ಯಮಾನವಾದ, ಅಸತ್ಯವನ್ನು , ಯಾವ ಪ್ರಮಾಣದಿಂದ ಗೃಹಿಸಲು ಅಶಕ್ಯವಾದ್ದರಿಂದ, ಕಾಲಾಂತರಾದಿ ಭಾವಿಗಳು ಕೂಡ ಪ್ರತ್ಯಕ್ಶ ಕಾಲಾದಿ ಅವಚ್ಛೇದದಿಂದ ಆ ಅಸತ್ಯಗ್ರಾಹಿ ಪ್ರಮಾಣದ ಅಭಾವತೆಯನ್ನು ನಿಶ್ಚಯಿಸುವದರಿಂದ, ತಿಳಿಯಲ್ಪಟ್ಟ ಉಪಾಧಿಯಲ್ಲಿ ತ್ರೈಕಾಲಿಕ ನಿಷೇಧ ಪ್ರತಿಯೋಗಿತ್ವ ಲಕ್ಷಣ, ಬಾಧವು ಕದಾಪಿ ಇರುವದಿಲ್ಲ ಎಂದು ಇಲ್ಲಿ ಅತ್ಯಂತ ಅಬಾಧ್ಯತ್ವವು ಅಸಿದ್ಧವಾಗುತ್ತದೆ.

**प्रत्यक्षेण यत् कालादि अवच्छेदेन स्वविषयो गृहीतः तत् अतिरिक्त कालादि अवच्छेदेन असत्त्वं तु घटादेः मया अपि अङ्गीक्रियते परिच्छिन्नत्त्वात् तस्य। तथा च प्रत्यक्षस्यापि कालत्रय अबाध्यत्वरूप सत्यता ग्राहित्वं अस्ति एव। आचार्यैः तु अङ्गीकारवादः कृत इति अभिप्रेत्य इत्याह– अङ्गीकारवादश्च इति॥**

ಯಾವ ಪ್ರತ್ಯಕ್ಷದಿಂದ ಕಾಲಾದಿ ಅವಚ್ಛೇದದಿಂದ ಸ್ವವಿಷಯ ಗೃಹಿಸುತ್ತದೊ ಅದರ ಅತಿರಿಕ್ತ ಕಾಲಾದಿ ಅವಚ್ಛೇದದಿಂದ ಘಟಾದಿಗಳಿಗೆ ಅಸತ್ಯವನ್ನು ಸಿದ್ಧಾಂತಿಗಳಾದ ನಾವು ಕೂಡ, ಅವಧಿಯ ಪರಿಮಿತಿಯನ್ನು ಪರಿಗಣಿಸಿ ಅಂಗೀಕರಿಸಿದ್ದೇವೆ. ಅದರಂತೆ, ಪ್ರತ್ಯಕ್ಷಕ್ಕೂ ಕೂಡ ಕಾಲತ್ರಯ ಅಬಾಧ್ಯತ್ವರೂಪ ಸತ್ಯತೆಯನ್ನು ಗ್ರಹಿಸುವಿಕೆ ಇದ್ದೆ ಇದೆ.

ಅದರಂತೆ ಇಲ್ಲಿ ಶ್ರೀಮದಾಚಾರ್ಯರಾದರೂ ಅಂಗೀಕಾರವಾದವನ್ನೇ ಮಾಡಿದ್ದಾರೆ ಎಂದು ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु कुतः अत्र प्रत्यक्ष बाध परित्याग आश्रयणम्। प्रत्यक्षस्य वर्तमानमात्र ग्राहित्वेन त्रिकाल अबाध्यत्व असम्भवात् एव् इति चेत् न।**

ಈ ಪ್ರಸ್ತುತದಲ್ಲಿ ಏಕೆ ಪ್ರತ್ಯಕ್ಷ ಬಾಧದ ಆಶ್ರಯವನ್ನು ತ್ಯಜಿಸಲಾಗುತ್ತಿದೆ? ಪ್ರತ್ಯಕ್ಷದ ವರ್ತಮಾನಗ್ರಾಹಿತ್ವ ಲಕ್ಷಣದಿಂದ, ಅದರ ತ್ರಿಕಾಲ ಅಬಾಧ್ಯತ್ವವನ್ನು ಗ್ರಹಿಸುವದು ಅಸಂಭವವಾಗಿದ್ದರಿಂದಲೇ ಎಂದು ಹೇಳುತ್ತೇವೆ ಎಂದರೆ,? ಹಾಗೆ ಹೇಳುವದು ಸರಿಯಲ್ಲ.



**प्रत्यक्षस्य वर्तमानमात्र ग्राहत्व नियमस्यैव असिद्धेः। स हि–**

ಪ್ರತ್ಯಕ್ಷವು ವರ್ತಮಾನವನ್ನು ಗ್ರಹಿಸುತ್ತದೆ ಎಂಬ ನಿಯಮವೇ ಅಸಿದ್ಧವಾಗಿರುತ್ತದೆ. ಅದನ್ನು ಈ ಕೆಳಗಿನಂತೆ ವಿವರಿಸಬಹುದು:

**किं चक्षुरादि प्रत्यक्षं अधिकृत्य वा अभिमतः मानस प्रत्यक्षं वा साक्षिप्रत्यक्षं वा।**

ಪ್ರತ್ಯಕ್ಷಕ್ಕೆ ವರ್ತಮಾನಗ್ರಾಹಿತ್ವ ನಿಯಮವು, ಚಕ್ಷುರಾದಿ ಪ್ರತ್ಯಕ್ಷವನ್ನು ಉದ್ದೇಶಿಸಿ ತಮ್ಮ ಅಭಿಮತವಾಗಿದೆಯೋ? ಅಥವಾ ಮಾನಸ ಪ್ರತ್ಯಕ್ಷವನ್ನು ಉದ್ದೇಶಿಸಿಯೊ? ಅಥವಾ ಸಾಕ್ಷಿಪ್ರತ್ಯಕ್ಷವನ್ನು ಉದ್ದೇಶಿಸಿಯೊ?

**न आद्यः। मानत्वं प्रत्यभिज्ञाया अपि सर्वानुभूतिगम्। अतीत वर्तमानत्व धर्मिणी सा न दृश्यत इत्यादिना भक्तिपादे, चक्षुरादि प्रत्यक्षस्य वर्तमानमात्र ग्राहकत्व नियम अभावस्य आचार्यैः उपपादितत्वेन तत् असम्भवात्।**

ಮೊದಲೆನೆ ವಿಕಲ್ಪವೆಂದರೆ, ಸರಿಯಲ್ಲ. ಪ್ರತ್ಯಭಿಜ್ಞಾ (ಅಂದರೆ, ಪೂರ್ವದಲ್ಲಿ ಅನುಭವಿಸಿದ ವಸ್ತುವಿನ ದರ್ಶನದಿಂದ ಉಂಟಾಗುವ ಹಿಂದಿನ ನೆನೆಪು.) ಪ್ರಮಾಣವು ಎಲ್ಲರ ಅನುಭವಸಿದ್ಧವಾಗಿದೆ. ಅತೀತವನ್ನು ವರ್ತಮಾನ ಧರ್ಮಿ ಅನುಭವಿಸಲಾರಯೆಂಬ ಮುಂತಾದವುಗಳಿಂದ ಭಕ್ತಿಪಾದ ಶಂಕರರಿಂದ ಪ್ರತಿಪಾದಿಸಲ್ಪಟ್ಟ ಚಕ್ಷುರಾದಿ ಪ್ರತ್ಯಕ್ಷದ ವರ್ತಮಾನಮಾತ್ರ ಗ್ರಾಹಕ ನಿಯಮ, ಇರುವದಿಲ್ಲವೆಂದು ಶ್ರೀಮದಾಚಾರ್ಯರಿಂದ ಸಮರ್ಥಿಸಲ್ಪಟ್ಟದ್ದರಿಂದ, ಮೊದಲನೆ ವಿಕಲ್ಪ ಅಸಂಭವವಾಗಿದೆ.

**न द्वितीयः। प्रत्यक्षं मानसं च एव यत् आतीतार्य गोचरम्। तदा स्मृति प्रमाणत्वं अतीतत्व विशेषितम् इत्यादिना तत्र एव मानस प्रत्यक्षस्यापि तत् नियम अभावस्य समर्थनात्।**

ಎರಡನೆ ವಿಕಲ್ಪವೂ ಸರಿಯಲ್ಲ. ಯಾವದಕ್ಕೆ ಅತೀತಾದಿಗಳ ಗೋಚರಿಸವದೊ ಅದು ಮಾನಸ ಪ್ರತ್ಯಕ್ಷವೇ, ಅದಕ್ಕೆಯೆ, ಸ್ಮೃತಿ ಪ್ರಮಾಣತ್ವವನ್ನು ಅತೀತತ್ವದಿಂದ ವಿಶೇಷಿತವಾಗಿರುತ್ತದೆ. ಅಲ್ಲಿಯೆ ಮಾನಸ ಪ್ರತ್ಯಕ್ಶಕ್ಕೂ ಕೂಡ ವರ್ತಮಾನಮಾತ್ರ ಗ್ರಾಹಿತ್ವದ ನಿಯಮ ಇರುವದಿಲ್ಲ ಎಂದು ಸಮರ್ಥಿಸಲಾಯಿತು.

**न तृतीयः। तच्च इन्नोत्तर गोचरम्। कथं एव उत्तरः कालस्तद्गो मोक्षस्य गृह्यत इत्यादिना, अतः न वर्तमानैक नियमः स्याद्। ग्रह अक्षज इत्यन्तेन ग्रन्थेन साक्षि प्रत्यक्षस्य तत् नियम निराकरणेन, तत् असिद्धेः।**

ಮೂರನೆ ವಿಕಲ್ಪವನ್ನು ಹೇಳುವದು ಸರಿಯಲ್ಲ. ಅದಕ್ಕೆ ಇಲ್ಲಿಂದ ಮುಂದಿನ ಕಾಲ ಗೋಚರಿಸುತ್ತದೆ. ಹಾಗಿಲ್ಲದಿದ್ದರೆ ಅದು ಉತ್ತರ ಕಾಲ ಗೋಚರಿಸುವ ಮೋಕ್ಷವನ್ನು ಹೇಗೆ ಗೃಹಿಸುತ್ತದೆ? ಎಂಬ ಮುಂತಾದವುಗಳಿಂದ ಅದಕ್ಕೂ ವರ್ತಮಾನಮಾತ್ರ ನಿಯಮವು ಲಾಗು ಆಗುವದಿಲ್ಲ. ಮತ್ತು " ग्रह अक्षज" ಎಂಬ ಅಂತವಾಗುವ ಗ್ರಂಥದಿಂದ ಸಾಕ್ಷಿ ಪ್ರತ್ಯಕ್ಷದ ವರ್ತಮಾನಗ್ರಹಿತ್ವ ನಿಯಮದ ನಿರಾಕಸಿದ್ದರಿಂದ. ವರ್ತಮಾನಮಾತ್ರ ಗ್ರಾಹಿ ಅಸಿದ್ಧವಾಗಿದೆ.

**तस्मात् उक्त नियमः न स्वसम्मतः। नापि परसंमतः। तथा सति रूप्यादेः प्रतिपन्न उपाधौ त्रैकालिकनिषेध प्रतियोगित्वरूप मिथ्यात्वस्य अप्रत्यक्षत्व प्रसङ्गात्। तस्मात् स्वपर असम्मतेः उक्त नियम एव असिद्धेः।**

ಆದ್ದರಿಂದ ಪ್ರತಿಪಾದಿಸಿದ ವರ್ತಮಾನಮಾತ್ರಗ್ರಾಹಿ ನಿಯಮವು ನಮಗೆ ಸಮ್ಮತವಾಗಿರುವದಿಲ್ಲ. ಪರಪಕ್ಷದವರಿಗೂ ಕೂಡ ಇದು ಸಮ್ಮತವಾಗುವದಿಲ್ಲ. ಹಾಗೆನಾದರು ಅವರಿಗೆ ಸಮ್ಮತವಿದ್ದ ಪಕ್ಷದಲ್ಲಿ, ತಿಳಿಯಲ್ಪಟ್ಟ ಉಪಾಧಿಯಲ್ಲಿ ತ್ರೈಕಾಲಿಕ ನಿಷೇಧ ಪ್ರತಿಯೋಗಿತ್ವರೂಪ ಮಿಥ್ಯಾತ್ವದ ಅಪ್ರತ್ಯಕ್ಷತ್ವ ಪ್ರಸಂಗ ಉಂಟಾಗಬೇಕಾಗುತ್ತದೆ. ಆದ್ದರಿಂದ, ಮೇಲಿನ್ ವರ್ತಮಾನಮಾತ್ರಗ್ರಾಹಿ ನಿಯಮವು ನಮಗೂ (ಸಿದ್ಧಾಂತಿಗಳಿಗೂ) ಹಾಗೂ ಪರಮತದವರಿಗೂ ಸಮ್ಮತವಿಲ್ಲವಾದ್ದರಿಂದ, ಆ ನಿಯಮವೇ ಅಸಿದ್ಧವಾಗಿದೆ.

**अस्तु वा तत् नियमः। तथापि प्रत्यक्षबाधः अवर्जनीय एव। वर्तमानमात्र अवगाहित्ववादिनां अपि प्रत्यक्षस्य वर्तमानकालीन बाध अभाव अवेदकस्य अभ्युपगमात्, अनुमानस्य च वर्तमानकालीन विश्वबाध ग्राहकत्वात्। ततश्च विरुद्धार्थयोः प्रबल–दुर्बलयोश्च प्रत्यक्ष–अनुमानयोः कथं न बाध्यबाधकभावः।**

ಅಥವಾ ವರ್ತಮಾತ್ರಗ್ರಹಿ ನಿಯಮವಿರಲಿ, ಹಾಗಿದ್ದರೂ, ದೃಶ್ಯತ್ವ ಅನುಮಾನಕ್ಕೆ ಪ್ರತ್ಯಕ್ಷ ಬಾಧವನ್ನು ನಿರಾಕರಿಸಲಾಗುವದಿಲ್ಲ. ವರ್ತಮಾತ್ರಗ್ರಾಹಿ ವಾದಿಗಳು ಕೂಡ, ಪ್ರತ್ಯಕ್ಷದ ವರ್ತಮಾನಕಾಲೀನ ಬಾಧದ ಅಭಾವತೆಯನ್ನು ತಿಳಿಯಲಾಗುವದಿಲ್ಲ ಎಂದು ಒಪ್ಪಿದ್ದಾರೆ. ಆದ್ದರಿಂದ ದೃಶ್ಯತ್ವ ಅನುಮಾನವು ವರ್ತಮಾನಕಾಲೀನ ವಿಶ್ವದ ಬಾಧ ಗ್ರಹಿಸುತ್ತದೆ ಎಂದಂತಾಯಿತು. ಅದರಂತೆ, ವಿರುದ್ಧರ್ಥವುಳ್ಳ ಪ್ರಬಲ ದುರ್ಬಲಗಳಾದ ಪ್ರತ್ಯಕ್ಷ ಅನುಮಾನಗಳಲ್ಲಿ ಬಾಧ್ಯಬಾಧಕಭಾವ ಇಲ್ಲವೆಂದು ಹೇಗೆ ಹೇಳುವದು?

**अथ अनुमानं आगामिनेव विश्वस्य बाधं बोधयति। न तु अधुनातम्। प्रत्यक्षं च इदानीन्तमेव बाधाभावं गृह्णाति। न तु आगामिनम्। न च भिन्न विषयोः विरोधः अस्ति। तथा सति इदानीन्तन घट अभाव ग्राहिणा प्रत्यक्षेण भविष्यति घट इति अनुमानस्यापि विरोध प्रसङ्गात्। तत् कथं बाध्यबाधकभाव इति चेत् न।**

ಇನ್ನು, ಈ ದೃಶ್ಯತ್ವ ಅನುಮಾನವು ಮುಂದೆ ಉಂಟಾಗುವ ವಿಶ್ವದ ಬಾಧವನ್ನು ಬೋಧಿಸುತ್ತದೆ. ವಿನಹಾ ಈಗಿನದಲ್ಲ. ಪ್ರತ್ಯಕ್ಷವು ಈಗಿನ ಬಾಧದ ಅಭಾವವನ್ನು ಗ್ರಹಿಸುತ್ತದೆ ವಿನಹಾ ಮುಂದಿನ ಆಗುವದನ್ನಲ್ಲ. ಮತ್ತು ಭಿನ್ನ ವಿಷಯಗಳಲ್ಲಿ ವಿರೋಧ ಉಂಟಾಗುವದಿಲ್ಲ. ಹಾಗೆನಾದರು ಆಗುವದಾದರೆ ಈಗಿನ ಘಟ ಅಭಾವವನ್ನು ಗ್ರಹಿಸುವ ಪ್ರತ್ಯಕ್ಷದಿಂದ, ಮುಂದೆ ಘಟ ಉಂಟಾಗುತ್ತದೆ ಎಂಬ ಅನುಮಾನಕ್ಕೂ ಕೂಡ ವಿರೋಧ ಉಂಟಾಗುವ ಪ್ರಸಂಗ ಒದಗುತ್ತದೆ. ಆದ್ದರಿಂದ ಇಲ್ಲಿ ಪ್ರತ್ಯಕ್ಷ ಅನುಮಾನಗಳಲ್ಲಿ ಬಾಧ್ಯಬಾಧಕಭಾವ ಹೇಗೆ ಉಂಟಾಗುತ್ತದೆ ಎಂದರೆ? ಹಾಗೆ ಹೇಳುವದು ಸರಿಯಲ್ಲ.

**बाधस्य प्रतिपन्न उपाधौ त्रैकालिक सत्ता निषेधरूपत्वात् तत् निषेधस्य च वर्तमानकालीन सत्ता ग्राहिणा प्रत्यक्षेण विरुद्धत्व अवश्यंभावेन तद् बोधकस्य अनुमानस्य प्रत्यक्षबाध अपरिहार स्यात्।**



ಬಾಧವು ತಿಳಿಯಲ್ಪಟ್ಟ ಉಪಾಧಿಯಲ್ಲಿ ತ್ರೈಕಾಲಿಕ ಸತ್ತಾ ನಿಷೇಧರೂಪವಾದ್ದರಿಂದ, ಅದರ ನಿಷೇಧಕ್ಕೆ, ವರ್ತಮಾನಕಾಲೀನ ಸತ್ತಾ ಗ್ರಾಹಕ ಪ್ರತ್ಯಕ್ಷದಿಂದ ವಿರುದ್ಧತ್ವ ಅವಶ್ಯವಾಗಿ ಉಂಟಾಗುವದರಿಂದ, ಅನುಮಾನದ ಬೋಧನೆಗೆ ಪ್ರತ್ಯಕ್ಷದ ಬಾಧ ಅಪರಿಹಾರವಾಗಿರುತ್ತದೆ.

**साक्षिणः साक्षात् स्वविषय गगनादि बाधाभाव ग्राहकतया विषय बाधं अनन्तर्भाव्य प्रामाण्य ग्रहण अनुपपत्तेः, निर्दोष तत् हि प्रामाण्य ग्रहणद्वारा स्वविषय घटादि बाध अभाव ग्राहकतया: "सत्यत्वं गगनादेः च साक्षिप्रत्यक्ष साधितम्" इत्यादिना बहुषु स्थलेषु व्युत्पादनाच्च। तत् कथं एतत् इत्यतः सत्यमेवं वस्तुगतिः। यत् प्रत्यक्षं त्रिकाल अबाध्यत्वग्राहकमेव इति।**

ಸಾಕ್ಷಿಯು, ಸಾಕ್ಷಾತ ಸ್ವವಿಷಯ ಗಗನಾದಿಗಳ ಬಾಧ ಅಭಾವ ಗ್ರಹಿಸುವ ಮೂಲಕ, ವಿಷಯ ಬಾಧ ನಂತರ ಹೊಂದಿದ ಪ್ರಾಮಾಣ್ಯ ಗ್ರಹಿಸುವದು ಯುಕ್ತಿಯಿಲ್ಲದ್ದಾಗಿದೆ. ಆದ್ದರಿಂದ ನಿರ್ದೋಷ ಪ್ರಮಾಣ ಗ್ರಹಣದ ಮೂಲಕ ಸ್ವವಿಷಯ ಘಟಾದಿ ಬಾಧ ಇಲ್ಲದಿರುವಿಕೆಯ ಮೂಲಕ "सत्यत्वं गगनादेः च साक्षिप्रत्यक्ष साधितम्" ಇತ್ಯಾದಿ ವಾಕ್ಯಗಳಿಂದ ಬಹಳ ಸ್ಥಳಗಳಲ್ಲಿ ಅದರ ವ್ಯುತ್ಪತ್ತಿಯನ್ನು ಮಾಡಲಾಗಿದೆ. ಇದನ್ನೆಲ್ಲ ಹೇಗೆ ಪ್ರತಿಪಾದಿಸುವದು? ಆದ್ದರಿಂದ, ಪ್ರತ್ಯಕ್ಷವು ತ್ರಿಕಾಲ ಅಬಾಧ್ಯತ್ವವನ್ನು ಗ್ರಹಿಸುತ್ತದೆ ಎಂದು ಒಪ್ಪಿಕೊಳ್ಳುವದೇ ಸತ್ಯವಾದ ವಸ್ತುಸ್ಥಿತಿ ಯಾಗಿದೆ.

**अयं तु ग्रन्थः प्रत्यक्षयस्य वर्तमानमात्रग्राहित्व नियमं, तत एव च प्रत्यक्षस्य त्रिकाल अबाध्यत्व ग्राहकत्वं च अङ्गीकृत्य प्रवृत्त इति अविरोध इत्याशयेन आह– अङ्गीकारवादश्च अयं इति॥**

ಈ ಗ್ರಂಥವು ಪ್ರತ್ಯಕ್ಷದ ವರ್ತಮಾನಮಾತ್ರ ಗ್ರಹಿಸುವ ನಿಯಮವೇ ತ್ರಿಕಾಲ ಅಬಾಧ್ಯತ್ವವನ್ನೂ ಗ್ರಹಿಸುತ್ತದೆ ಎಂದು ಅಂಗೀಕರಿಸಿ ಪ್ರವೃತ್ತವಾಗಿರುವದರಿಂದ, ಇಲ್ಲಿ ಯಾವ ವಿರೋಧಕ್ಕೆ ಆಸ್ಪದವಿಲ್ಲ ಎಂಬುದನ್ನು ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ.

## ॥ यथा च इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**वस्तु तत्त्वं कथं इत्यत आह– यथा च इति॥**

ಪ್ರತ್ಯಕ್ಷದ ಬಗ್ಗೆ ವಸ್ತುಸ್ಥಿತಿ ಏನಿದೆ ಎಂಬುದನ್ನು ಈ ಟೀಕಾ ವಾಕ್ಯ ಸ್ಪಷ್ಟ ಪಡಿಸುತ್ತದೆ.

**तथा हि–**

ಅದರ ವಿವರಣೆ ಹೀಗಿರುತ್ತದೆ:

**अनुमानेन जगति त्रैकालिकसत्ता प्रतिषेधरूप मिथ्यात्वं साध्यते, प्रतिपन्न उपाधौ वर्तमानकाले सत्यत्वरूप प्रतियोगि ग्राहकेण प्रत्यक्षेण तत्र तदा तत् अत्यन्त अभावरूप मिथ्यात्व ग्राहक अनुमानं विरुध्यत एव।**

ಈ ದೃಶ್ಯತ್ವ ಅನುಮಾನದಿಂದ ಜಗತ್ತನ್ನು ತ್ರೈಕಾಲಿಕ ಸತ್ಯವಾಗಿರುವಿಕೆಯ ಪ್ರತಿಷೇಧರೂಪ ಮಿಥ್ಯಾ ಎಂದು ಸಾಧಿಸಲಾಗುತ್ತಿದೆ. ಆಗ ತಿಳಿಯಲ್ಪಟ್ಟ ಉಪಾಧಿಯಲ್ಲಿ ವರ್ತಮಾನಕಾಲದಲ್ಲಿಯ ಸತ್ಯತ್ವರೂಪ ಪ್ರತಿಯೋಗಿಯನ್ನು ಗ್ರಹಿಸುವ ಪ್ರತ್ಯಕ್ಷವು ಅಲ್ಲಿ ಅತ್ಯಂತ ಅಭಾವರೂಪ ಮಿಥ್ಯಾತ್ವವನ್ನು ಗ್ರಹಿಸುವ ಅನುಮಾನವನ್ನು ವಿರೋಧಿಸುತ್ತದೆ.

**प्रतियोगिन: सत्वस्य स्व–अत्यन्त–अभाव अभावरूपत्वेन तद्ग्राहक प्रत्यक्षस्य साक्षात् ग्राह्य अभाव अवगाहित्वात्।**

ಪ್ರತಿಯೋಗಿಯಾದ ಸತ್ಯವು, ಸ್ವ-ಅತ್ಯಂತ-ಅಭಾವರೂಪ ಅನುಮಾನದ, ಅಭಾವರೂಪತ್ವದಿಂದ ಅದನ್ನು ಗ್ರಹಿಸುವ ಪ್ರತ್ಯಕ್ಷದ ಸಾಕ್ಷಾತ್ ಗ್ರಹಿಸುವ, ಅಭಾವದ ಅವಗಾಹಿಯಾಗಿರುತ್ತದೆ. ಅವಗಾಹಿ ಎಂದರೆ ಒಳಕ್ಕೆ ಪ್ರವೇಶಿಸುವದು ಎಂದರ್ಥ.

**अत्र वदन्ति। न साक्षात् विरोध:। वर्तमानकालीन सत्वस्य त्रैकालिकसत्ता प्रतिषेध विरह व्याप्यत्वेन साक्षात् विरहरूपत्व अभावात्। न हि विशेषण अभावो विशिष्ट अभावरूप: किंतु तद्व्याप्य एव् इति। न च तद्व्याप्यत्वेन एव विरोध: अस्तु इति वाच्यम्। तथात्वे अनुमानविरोध प्राप्त्या प्रत्यक्ष विरोध कथन अयोगात् इति।**

ಇಲ್ಲಿ ಪರಪಕ್ಷದವರು ಹೀಗೆ ವಾದಿಸುತ್ತಾರೆ. ಇದು ಸಾಕ್ಷಾತ ವಿರೋಧವೆನಿಸುವದಿಲ್ಲ. ವರ್ತಮಾನಕಾಲೀನ ಸತ್ಯಕ್ಕೆ ತ್ರೈಕಾಲಿಕ ಸತ್ತೆಯ, ಪ್ರತಿಷೇಧದ ವಿರಹರೂಪ ವ್ಯಾಪ್ಯತ್ವದಿಂದ, ಸಾಕ್ಷಾತ್ ವಿರಹರೂಪತ್ವ ಇರುವದಿಲ್ಲ. ವಿಶೇಷಣ ಇಲ್ಲದಾಗ ವಿಶಿಷ್ಟ ಇಲ್ಲದಾಗುವದಿಲ್ಲ ಕಿಂತು, ಅದರ (ವಿಶೇಷಣದ) ವ್ಯಾಪ್ಯತ್ವವೇ ಇಲ್ಲದಾಗುತ್ತದೆ. ಇನ್ನು ಅದರ ಅವ್ಯಾಪ್ಯತ್ವದಿಂದಲೇ ವಿರೋಧ ಬರುತ್ತದೆ ಎಂದು ಹೇಳಬಾರದು. ಹಾಗೆನಾದರೆ, ಅನುಮಾನದ ವಿರೋಧ ಪ್ರಾಪ್ತವಾಗಿ ಪ್ರತ್ಯಕ್ಷದ ವಿರೋಧ ಹೇಳುವದು ಅಯೋಗ್ಯವೆನಿಸುತ್ತದೆ.

**तत् न। तथात्वे वन्हि: अनुष्ण: इत्यत्रापि कालत्रये औष्ण्य अभावस्य साध्यत्वात्। प्रत्यक्षेण च वर्तमानकाल एव औष्ण्य ग्रहणात्। त्रैकालिक अनौष्ण्य अभाव अभाव व्याप्यभूत वर्तमानकालीन औष्ण्य ग्राहकत्वेन एव विरोध प्राप्त्या, साक्षात् ग्राह्य अभाव अवगाहित्वेन, न प्रत्यक्षस्य अनुमानबाधकत्वं सर्वसंमतं न स्यात् इति बाध उच्छेद एव स्यातत् इति।**

ಹಾಗೆ ಹೇಳುವದು ಸರಿಯಲ್ಲ. ಹಾಗೆನಾದರು ಹೇಳಿದರೆ, वन्हि: अनुष्ण: ಎಂಬಲ್ಲಿ ಕೂಡ ಕಾಲತ್ರಯದಲ್ಲಿ ಬೆಂಕಿಯಲ್ಲಿ ಉಷ್ಣತೆಯ ಅಭಾವತೆಯನ್ನು ಸಾಧಿಸಲಾಗುತ್ತದೆ. ಪ್ರತ್ಯಕ್ಷದಿಂದ ವರ್ತಮಾನಕಾಲದಲ್ಲಿ ಮಾತ್ರ ಉಷ್ಣತ್ವವನ್ನು ಗ್ರಹಿಸಲಾಗುತ್ತದೆ. ತ್ರೈಕಾಲಿಕ ಉಷ್ಣಹೀನತೆಯ ಅಭಾವ ಅಭಾವ ವ್ಯಾಪ್ಯಭೂತ ವರ್ತಮಾನಕಾಲೀನ ಉಷ್ಣದ ಗ್ರಹಿಸುವದರಿಂದಲೇ ವಿರೋಧ ಪ್ರಾಪ್ತವಾಗಿ, ಸಾಕ್ಷಾತ ಗ್ರಾಹ್ಯ ಅಭಾವ ಅವಗಾಹಿತ್ವದಿಂದ, ಪತ್ಯಕ್ಷಕ್ಕೆ ಅನುಮಾನ ಬಾಧಕತ್ವ ಸರ್ವಸಮ್ಮತವಲ್ಲ ಎಂದು ಹೇಳಲು ಬರುವದಿಲ್ಲ. ಮತ್ತು ಬಾಧ ನಾಶವಾಗುವ ಪ್ರಸಂಗವೇ ಉಂಟಾಗುತ್ತದೆ.

**अत्र ब्रूम:। त्रैकालिकसत्ता प्रतिषेध इत्यत्र कालत्रयस्य सत्ताप्रतिषेध विशेषणत्वेन निषेध्यकोटौ प्रवेशो न विवक्षित:। किन्तु तत् अधिकरणतया उपलक्षणत्वमेव। तथा च कालत्रये य: सत्ताप्रतिषेध तत् अत्यन्त अभाव इति यावत्। तत् विरहरूपत्वं कादाचित् कस्यापि प्रतियोगिन: अस्ति एव। कथं अन्यथा कादाचित् कस्य घटादे: त्रैकालिक प्रतिषेधरूप स्व–अत्यन्त अभाव विरहरूपत्वं इति।**



ಇದಕ್ಕೆ ಪರಪಕ್ಷದವರು ಹೀಗೆ ಹೇಳುತ್ತಾರೆ. ತ್ರೈಕಾಲಿಕ ಸತ್ತೆಯ ಪ್ರತಿಷೇಧ ಎಂಬಲ್ಲಿ, ಕಾಲತ್ರಯದ ಸತ್ತಾಪ್ರತಿಷೇಧ ವಿಶೇಷಣತ್ವದಿಂದ ನಿಷೇಧದ ಸಂಶಯ ಪ್ರಕಾರಗಳಲ್ಲಿ ಪ್ರವೇಶಿಸುವದು ವಿವಕ್ಷಿತವಿರುವದಿಲ್ಲ. ಪರಂತು ಅದು ಅಧಿಕರಣಪರ ಉಪಲಕ್ಷಣತ್ವವೇ ಆಗಿರುತ್ತದೆ. ಅದರಂತೆ, ಕಾಲತ್ರಯದಲ್ಲಿ ಯಾವುದರ ಸತ್ತೆಯ ಪ್ರತಿಷೇಧ ಮಾಡಲಾಗುತ್ತದೊ ಅದು ಅತ್ಯಂತ ಅಭಾವವೆನಿಸುತ್ತದೆ. ಅದರ ವಿರಹರೂಪವಾದ ಕದಾಚಿತ ಯಾವರೀತಿಯಿಂದ ಪ್ರತಿಯೋಗಿ ಇರುವದಿಲ್ಲ. ಹೀಗಿರುವಾಗ, ಹೇಗೆ ಯಾವುದಾದ ಘಟಾದಿಗಳು ತ್ರೈಕಾಲಿಕ ಪ್ರತಿಷೇಧರೂಪ ಸ್ವ-ಅತ್ಯಂತ ಅಭಾವದ ವಿರಹರೂಪಗಳಾಗಲು ಸಾಧ್ಯ?

**उक्तं च एतत् अभिप्रायेण एव न्यायामृते– स्वकाले हि अस्ति तां गृह्णन् साक्षात्कार: त्रिकालगम्। प्रतिषेधं निरुंधानो गृह्णात्येव अत्र बाध्यतां इति।**

ಈ ಅಭಿಪ್ರಾಯದ ಹಿನ್ನೆಲೆಯಲ್ಲಿಯೆ ನ್ಯಾಯಾಮೃತದಲ್ಲಿ ಹೀಗೆ ಹೇಳಲಾಗಿದೆ: ಸ್ವಕಾಲದಲ್ಲಿ ಇದ್ದುದ್ದನ್ನು ಗ್ರಹಿಸಿ ತ್ರಿಕಾಲದ ಸಾಕ್ಷಾತ್ಕಾರವಾಗುತ್ತದೆ. ಪ್ರತಿಷೇಧ ತಡೆಗಟ್ಟುವದನ್ನು ಗೃಹಿಸುವದರಿಂದಲೆ ಇಲ್ಲಿ ಬಾಧ್ಯತ್ವ ಉಂಟಾಗುತ್ತದೆ.

**उक्तं च भक्तिपादीय सुधायाम्– घटादिसत्ता प्रतिषेधरूपस्य बाधस्य तत् सत्ताग्राहिणा प्रत्यक्षेण विरोध अवश्यंभावात् इति।**

ಮತ್ತು ಭಕ್ತಪಾದೀಯ ಸುಧಾಗ್ರಂಥದಲ್ಲಿ ಹೀಗೆ ಹೇಳಲಾಗಿದೆ: ಘಟಾದಿ ಸತ್ತೆಯ ಪ್ರತಿಷೇಧರೂಪದ ಬಾಧಕ್ಕೆ, ಅದರ ಸತ್ತೆಯನ್ನು ಗ್ರಹಿಸುವ ಪ್ರತ್ಯಕ್ಷದಿಂದಲೇ ದೃಶ್ಯತ್ವ ಅನುಮಾನಕ್ಕೆ ವಿರೋಧ ಅವಶ್ಯವಾಗಿ ಉಂಟಾಗುತ್ತದೆ.

**व्याख्यातं च एतत् गुरुचरणै:– कुत्रापि कदापि घटादे: सत्ता नास्ति इत्येवम् आत्यन्तिक सत्ता प्रतिषेधरूपस्य बाधस्य कुत्रचित् कदाचित् तत् सत्ताग्राहिणा प्रत्यक्षेण साक्षात् ग्राह्य अभाव अवगाहित्वेन विरोध: अवश्यंभावात् इत्यर्थ: इति।**

ಗುರುಗಳಾದ ಯಾದವಾರ್ಯರು ಹೀಗೆ ವ್ಯಾಖ್ಯಾನಿಸಿದ್ದಾರೆ: ಎಲ್ಲಿಯೂ ಎಂದೆಂದಿಗೂ ಘಟಾದಿಗಳ ಸತ್ತೆ ಇಲ್ಲವೆಂದು, ಆತ್ಯಂತಿಕ ಸತ್ತಾ ಪ್ರತಿಷೇಧರೂಪ ಬಾಧಕ್ಕೆ, ಎಲ್ಲಿಯೂ ಎಂದೆಂದಿಗೂ ಅದರ ಸತ್ತೆಯನ್ನು ಗ್ರಹಿಸಿದ ಪ್ರತ್ಯಕ್ಷದಿಂದ ಸಾಕ್ಷಾತ್ ಗ್ರಾಹ್ಯ ಅಭಾವ ಅವಗಾಹಿತ್ವದಿಂದ ವಿರೋಧವು ಅವಶ್ಯವಾಗಿ ಉಂಟಾಗುತ್ತದೆ ಎಂದರ್ಥ.

**चक्षुरादि बाह्यप्रत्यक्ष अभिप्रायेण इदं उपपादितम्। अतीत–अनागत वर्तमानरूप कालत्रय अवगाहि साक्षि प्रत्यक्षं तु स्वविषयस्य गगनादे: त्रिकाल अबाध्यत्वरूपं सत्वं सक्षात् एव गृह्णाति। एवं मानस प्रत्यक्षमपि न वर्तमानग्राहि। यथा उक्तं अनुव्याख्याने– प्रत्यक्षं मानसं चैव यदा अतीतार्थगोचरम् तदा स्मृति प्रमाणत्वं इति।**

ಇಲ್ಲಿ, ಚಕ್ಷುರಾದಿ ಬಾಹ್ಯಪ್ರತ್ಯಕ್ಷದ ಅಭಿಪ್ರಾಯದೆ ಮೆರೆಗೆ ಇದನ್ನು ಪ್ರತಿಪಾದಿಸಲಾಗಿದೆ. ಅತೀತ,ಅನಾಗತ ವರ್ತಮಾನರೂಪ ಕಾಲತ್ರಯ ಅವಗಾಹಿ ಸಾಕ್ಷಿ ಪ್ರತ್ಯಕ್ಷವು ಸ್ವವಿಷಯ ಗಗನಾದಿಗಳ ತ್ರಿಕಾಲ ಅಬಾಧ್ಯತ್ವರೂಪ ಸತ್ಯವನ್ನು ಸಾಕ್ಷಾತ್ತಾಗಿಯೆ ಗೃಹಿಸುತ್ತದೆ. ಈ

ರೀತಿಯಾಗಿ ಮಾನಸ ಪ್ರತ್ಯಕ್ಷಕೂಡ ವರ್ತಮಾನಗ್ರಾಹಿ ಅಲ್ಲ. ಅದರಂತೆ ಅನುವ್ಯಾಖ್ಯಾನದಲ್ಲಿ ಹೀಗೆ ಹೇಳಲಾಗಿದೆ: ಪ್ರತ್ಯಕ್ಷ ಮಾನಸದಿಂದಲೆ ಯಾವಾಗ ಅತೀತಾರ್ಥ ಗೋಚರಿಸುತ್ತದೊ, ಆಗ ಸ್ಮೃತಿಗೆ ಪ್ರಮಾಣತ್ವ ಉಂಟಾಗುತ್ತದೆ.

**॥ उपपादितम् अन्यत्र इति ॥**

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**सत्यत्वं गगनादेश्च साक्षि प्रत्यक्ष साधितम् इत्यादौ इत्यर्थः।**

ಅಂದರೆ, ತ್ರೈಕಾಲಿಕ ಅಬಾಧ್ಯತ್ವ ಲಕ್ಷಣ ಸತ್ಯತ್ವವು ಪ್ರತ್ಯಕ್ಷಾದಿಗಳಿಗೂ ಸಿದ್ಧವಾಗಿದೆ ಎಂದು सत्यत्वं गगनादेश्च साक्षि प्रत्यक्ष साधितम् ಎಂದು ಮುಂತಾದ ವಾಕ್ಯಗಳಿಂದ ಯುಕ್ತಿ ಪೂರ್ವಕ ಸಾಧಿಸಲಾಗಿದೆ ಎಂದರ್ಥ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**अन्यत्र अनुव्याख्यान प्रमाणलक्षणादौ इत्यर्थः।**

ಇಲ್ಲಿ ಅನ್ಯತ್ರ ಎಂದರೆ, ಅನುವ್ಯಾಖ್ಯಾನ, ಪ್ರಮಾಣಲಕ್ಷಣ ಮುಂತಾದ ಗ್ರಂಥಗಳಲ್ಲಿ ಎಂದರ್ಥ.

### *७.२ मिथ्यात्वानुमानस्य प्रतिरोध उपपादनम्*

## टीका

**प्रतिरोधोऽपि द्विविधः तेनैव हेतुना हेत्वन्तरेण् इति । तत्र आद्यस्य अन्तरङ्गत्वात् प्रथमं तम् आह–**

ಅನುಮಾನಕ್ಕೆ ಅನುಮಾನದಿಂದಲೇ (ಅಂದರೆ ಸಮಬಲ ಪ್ರಮಾಣದಿಂದ) ವಿರೋಧವನ್ನು ತೋರಿಸುವದು ಪ್ರತಿರೋಧವೆನಿಸುವದು. ಅದರಲ್ಲಿಯೂ ಎರಡು ವಿಧಗಳಿವೆ: ೧. ಪರಪಕ್ಷದವರು ಪ್ರತಿಪಾದಿಸಿದ ಹೇತುವಿನಿಂದಲೇ ವಿರೋಧವನ್ನು ತೋರಿಸುವದು. ಅಂದರೆ, ಅವರು ಸಾಧಿಸುವ ಸಾಧ್ಯವನ್ನು ಇಲ್ಲವೆಂದು ಸಾಧಿಸುವದು. ಇದನ್ನು ಪ್ರಕರಣಸಮ ಎಂದೆನ್ನುತ್ತಾರೆ ೨. ಪರಪಕ್ಷದವರು ಪ್ರತಿಪಾದಿಸಿದ ಹೇತುವಿಕ್ಕಿಂತ ಬೇರೊಂದು ಹೇತುವಿನಿಂದ ಪರಪಕ್ಷದವರು ಸಾಧಿಸುವ ಸಾಧ್ಯವನ್ನು ಇಲ್ಲವೆಂದು ಸಾಧಿಸುವದು. ಇದನ್ನು ಸಪ್ರತಿಸಾಧನ ಎಂದೆನ್ನುತ್ತಾರೆ.

ಅಲ್ಲಿ, ಮೊದಲನೆಯದ ಹೇತುವು ದೂಷಿಸುವ ಅನುಮಾನದ ಅಂಗವಾದ್ದರಿಂದ, ಅದರಿಂದಲೇ ಉಂಟಾಗುವ ವಿರೋಧವನ್ನು ಶ್ರೀಮದಾಚಾರ್ಯರು ಮೊದಲಿಗೆ ತೋರಿಸುತ್ತಾರೆ ಅಥವಾ ಪ್ರತಿಪಾದಿಸುತ್ತಾರೆ.





**॥ अन्तरङ्गत्वात् इति॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**दूष्य अनुमान अतिरिक्त हेतु निरपेक्षत्वात् इत्यर्थः।**

ಅಂದರೆ, ದೂಷಿಸುವ ಅನುಮಾನದ ಹೇತುವಿಕ್ಕಿಂತ ಬೇರೆ ಹೇತುವನ್ನು ಅಪೇಕ್ಷಿಸದ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**दूष्य अनुमान अतिरिक्त हेतु निरपेक्षत्वात् इत्यर्थः।**

ಅಂದರೆ, ದೂಷಿಸುವ ಅನುಮಾನದ ಹೇತುವಿಕ್ಕಿಂತ ಬೇರೆ ಹೇತುವನ್ನು ಅಪೇಕ್ಷಿಸದ ಎಂದರ್ಥ.

### ७.२.१ मिथ्यात्वानुमानस्य प्रकरणसम दोष प्रतिपादनम्

प्रपञ्चमिथ्यात्वानुमानखण्डनम्

"रजतं दृष्टम्" इति भ्रममात्रत्वात् "विमतं सत्यं दृश्यत्वात् आत्मवत्" इत्यपि प्रयोज्यत्वात् प्रकरणसमः।

**ಶುಕ್ತಿಯನ್ನು ನೋಡಿ ರಜತ ಜ್ಞಾನ ಬಂದಾಗ "ರಜತವು ದೃಶ್ಯವಾಯಿತು" ಎಂಬ ಜ್ಞಾನ ಕೇವಲ ಭ್ರಾಂತಿಯಾದ್ದರಿಂದ "ಪ್ರಪಂಚವು ದೃಶ್ಯವಾದುದರಿಂದ ಆತ್ಮನಂತೆ ಸತ್ಯವಾಗಿದೆ " ಎಂದು ಅನುಮಾನವನ್ನು ಪ್ರಯೋಗಿಸಲು ಶಕ್ಯವಿರುವದರಿಂದ, ಮಿಥ್ಯಾತ್ವ ಅನುಮಾನಕ್ಕೆ ಪ್ರಕರಣಸಮ ಎಂಬ ದೋಷವಿದೆ.**

## श्रीपद्मनाभतीर्थीयटीका

**जगन्मिथ्यात्वे प्रयुक्ते, दृश्यत्व हेतोः आत्मवत् जगत् सत्यत्वेऽपि प्रयोक्तुं शक्यत्वात्, असौ दृश्यत्व हेतुः प्रकरणसमः भवेत्। शुक्तिरजतस्य अभावात् न तत्र हेतोः व्यभिचार शङ्कनीयः। न हि असति शुक्तिरजते तत् दृश्यत्वं सत् इति वक्तुं शक्यते तदाह- रजतं दृष्टं भ्रममात्रत्वात् इत्यादिना॥**

ಜಗತ್ ಮಿಥ್ಯಾತ್ವದಲ್ಲಿ ಪ್ರಯೊಗಿಸಿದ ದೃಶ್ಯತ್ವ ಹೇತುವು ಆತ್ಮನಂತೆ ಜಗತ್ ಸತ್ಯತ್ವ ಅನುಮಾನದಲ್ಲಿ ಕೂಡ ಪ್ರಯೋಗಿಸಲು ಶಕ್ಯವಾಗುವದರಿಂದ, ಈ ದೃಶ್ಯತ್ವ ಹೇತುವು ಪ್ರಕರಣಸಮ ದೋಷಗ್ರಸ್ತವಾಗುತ್ತದೆ. ಹಾಗೆಯೆ ಶುಕ್ತಿರಜತವು ಇಲ್ಲವಾದ್ದರಿಂದ ಅಲ್ಲಿ ದೃಶ್ಯತ್ವ ಹೇತುವಿಗೆ ವ್ಯಭಿಚಾರ ಉಂಟಾಗುತ್ತದೆ ಎಂದು ಶಂಕಿಸಕೂಡದು. ಅಸತ್ಯವಾದ ಶುಕ್ತಿರಜತದಲ್ಲಿ ಸತ್ಯವಾದ ದೃಶ್ಯತ್ವವಿದೆ ಎಂದು ಹೇಳಲು ಶಕ್ಯವಾಗುವದಿಲ್ಲ. ಅದು ಭ್ರಮಮಾತ್ರ ವಾಗಿರುತ್ತದೆ. ಅದನ್ನೆ ಶ್ರೀಮದಾಚಾರ್ಯರ ಮೂಲವಾಕ್ಯ ಸ್ಪಷ್ಟಪಡಿಸುತ್ತದೆ.

### ७.२.१.१ मूले प्रतिपादित अनुमानस्य दलं कृत्यम्

## टीका

"विमतं" इति पूर्ववत् व्याख्येयम्। सत्यं कालत्रय अबाध्यम्। आत्मनोऽपि दृश्यत्वस्य उपपादितत्वात् न दृष्टान्तः साधन विकलः। "इत्यपि प्रयोज्यत्वात्" प्रपञ्चमिथ्यात्व इव तत् सत्यत्वेऽपि दृश्यत्वस्य प्रयोक्तुं शक्यत्वात्।

ಇಲ್ಲಿ "ವಿಮತಂ" ಪದವನ್ನು ಹಿಂದೆ ಮಿಥ್ಯಾತ್ವ ಅನುಮಾನ ಪ್ರಸಂಗದಲ್ಲಿಯಂತೆ ವ್ಯಾಖ್ಯಾನಿಸಬೇಕು. ಸತ್ಯ ಎಂದರೆ ಕಾಲತ್ರಯ ಅಬಾಧಿತವಾದುದು ಎಂದರ್ಥ. ಆತ್ಮನು ಕೂಡ ದೃಶ್ಯನಾಗಿದ್ದಾನೆ ಎಂಬುದನ್ನು ಈಗಾಗಲೆ ಸಮರ್ಥಿಸಿದ್ದರಿಂದ ದೃಷ್ಟಾಂತಕ್ಕೆ ಸಾಧನ ವಿಕಲ ದೋಷ ಬರುವದಿಲ್ಲ. ಇನ್ನು "इत्यपि प्रयोज्यत्वात्" ಎಂದರೆ ಪ್ರಪಂಚಕ್ಕೆ ಮಿಥ್ಯಾ ಎಂದು ಸಾಧಿಸುವಂತೆ, ಅದರ ಸತ್ಯತ್ವವನ್ನು ಕೂಡ ದೃಶ್ಯತ್ವಹೇತುವಿಗೆ ಪ್ರಯೋಗಿಸಲು ಶಕ್ಯವಾಗಿರುತ್ತದೆ.

### टिप्पणीनाम् विशेषार्थानि

### ॥ पूर्ववत् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

विमतम् मिथ्या इत्यत्र विमतपद व्याख्यान न्यायेन इत्यर्थः। तथा हि–

ಅಂದರೆ विमतम् मिथ्या ಎಂಬಲ್ಲಿ ವಿಮತ ಪದದ ನ್ಯಾಯದಿಂದ ದಲಕೃತ್ಯ ಮಾಡಿದಂತೆ ಎಂದರ್ಥ. ಅದು ಈ ಕೆಳಗಿನಂತಿರುತ್ತದೆ:

सर्वं सत्यं इत्युक्ते शुक्तिरजतादौ बाधः, ब्रह्मणि सिद्धसाधनता च। अतो विमतम् इत्युक्तं।



सर्वं सत्यं ಎಂದಿದ್ದರೆ, ಶುಕ್ತಿರಜತಾದಿಗಳಲ್ಲಿ ಬಾಧ ಉಂಟಾಗುತಿತ್ತು, ಮತ್ತು ಬ್ರಹ್ಮನಲ್ಲಿ ಸಿದ್ಧಸಾಧನತಾ ದೋಷ ಬರುತಿತ್ತು. ಆದ್ದರಿಂದ ಇಲ್ಲಿ ವಿಮತಂ ಪದವನ್ನು ಇಡಲಾಗಿದೆ.

विमतेः अनेकविधत्वेऽपि साध्य विशेष उपादानात् तत् विशेष सिद्धिः। तथा च सत्यत्व मिथ्यात्वाभ्यां विप्रतिपत्ति विषयीभूतं वियदादि इत्युक्तं भवति। तथा यदि वियदादिरूप विश्वमेव न स्यात् तदा किम् आश्रयिणी विप्रतिपत्तिः स्यात्। यदि च तत् सत्यत्वं सिद्धं भवेत तदा कथं विप्रतिपत्तिः स्यात्। एक कोटेः निश्चितत्वात्। यदि वा सत्यत्वं अप्रसिद्धं भवेत तदापि कथं विप्रतिपत्तिः स्यात्। कोटेः अप्रसिद्धत्वात्। इत्येवं आश्रयासिद्धि, सिद्धसाधनता, अप्रसिद्धविशेषणत्वरूप प्रतिज्ञा दोषोद्धारोऽपि विमत ग्रहणेन सूचित इत्यपि द्रष्टव्यम्।

ವಿವಾದಾಸ್ಪವಾದ ವಿಷಯ ಅನೇಕವಿಧವಾಗಿದ್ದರೂ ಅದನ್ನು ಸಾಧ್ಯ ವಿಶೇಷವಾಗಿ ಗ್ರಹಿಸಿದರೆ, ಅದಕ್ಕೆ ವಿಶೇಷ ಸಿದ್ಧಿ ಉಂಟಾಗುತ್ತದೆ. ಅದರಂತೆ, ಸತ್ಯತ್ವ ಮಿಥ್ಯಾತ್ವಗಳ ಸಂಶಯಕ್ಕೆ ವಿಷಯೀಭೂತ ವಿಯದಾದಿರೂಪ ವಿಶ್ವ ಎಂದು ಹೇಳಿದಂತಾಯಿತು. ಹಾಗಾದರೆ, ಒಂದು ವೇಳೆ ವಿಯದಾದಿರೂಪ ವಿಶ್ವವೇ ಇಲ್ಲದಿದ್ದರೆ ಆಗ ಯಾವ ಆಶ್ರಯದಲ್ಲಿ ಸಂಶಯ ಹುಟ್ಟುತ್ತದೆ. ಅಥವಾ ಒಂದು ವೇಳೆ ವಿಯದಾದಿರೂಪ ವಿಶ್ವವು ಸತ್ಯವೆಂದು ಸಿದ್ಧವಾಗಿದ್ದರೆ ಆಗ ಕೂಡ ಸಂಶಯ ಹೇಗೆ ಹುಟ್ಟಲು ಸಾಧ್ಯ? ಏಕೆಂದರೆ, ಒಂದೆ ಕೊಟೆ ನಿಶ್ಚಯವಾಗಿರುತ್ತದೆ. ಅಥವಾ ಒಂದು ವೇಳೆ, ವಿಯದಾದಿ ವಿಶ್ವದ ಸತ್ಯತ್ವವು ಅಪ್ರಸಿದ್ಧವಾಗಿದ್ದರೆ ಆಗ ಕೂಡ ಹೇಗೆ ಸಂಶಯ ಹುಟ್ಟಲು ಸಾಧ್ಯ ? ಏಕೆಂದರೆ ಇಲ್ಲಿ ಕೊಟೆಯೆ ಅಪ್ರಸಿದ್ಧವಾಗುತ್ತದೆ. ಈ ರೀತಿಯಾಗಿ, ಆಶ್ರಯಾಸಿದ್ಧಿ, ಸಿದ್ಧಸಾಧನತಾ ಮತ್ತು ಅಪ್ರಸಿದ್ಧವಿಶೇಷಣತ್ವರೂಪ ಪ್ರತಿಜ್ಞಾ ದೋಷಗಳ ಪರಿಹಾರ ಕೂಡ, ವಿಮತ ಪದ ಗ್ರಹಿಸಿದ್ದರಿಂದ ಮಾಡಲಾಗಿದೆ ಎಂದು ತಿಳಿಯಬೇಕು.

### ॥ सत्यं कालत्रय अबाध्यम् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

व्यावहारिक सत्यत्वस्य परेण अपि अङ्गीकृतत्वात् आह– सत्यं कालत्रय अबाध्यम् इति॥

ಈ ಟೀಕಾವಾಕ್ಯ ಇಲ್ಲಿ ಸತ್ಯವೆಂದರೆ ಕಾಲತ್ರಯದಲ್ಲಿ ಅಬಾಧಿತವಾದದ್ದು, ಪರಪಕ್ಷದವರು ಅಂಗೀಕರಿಸಿದ ವ್ಯಾವಹಾರಿಕ ಸತ್ಯವಲ್ಲ ಎಂದು ಸ್ಪಷ್ಟಪಡಿಸುತ್ತದೆ.

### ॥ आत्मनोऽपि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

दृष्टान्तभूते आत्मनि दृश्यत्वस्य परेण अनङ्गीकारात् साधन वैकल्यं इत्यत आह– आत्मनोऽपि इति॥

ಇಲ್ಲಿ ದೃಷ್ಟಾಂತಭೂತದಲ್ಲಿಯ ಆತ್ಮನಲ್ಲಿ ದೃಶ್ಯತ್ವವನ್ನು ಪರಪಕ್ಷದವರು ಅಂಗೀಕರಿಸಿರುವದಿಲ್ಲ, ಆದ್ದರಿಂದ ದೃಷ್ಟಾಂತಕ್ಕೆ ಸಾಧನ ವೈಕಲ್ಯ ದೋಷ ಬರುತ್ತದಲ್ಲಾ ಎಂದರೆ, ಈ ಸಂಶಯವನ್ನೇ ದೂರಮಾಡಲು ಈ ಟೀಕಾವಾಕ್ಯ ಇರುತ್ತದೆ

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**ननु परोक्त अनिर्वचनीय दृश्यत्वस्य आत्मनि अभावात् साधन विकलो दृष्टान्त इत्यत आह– आत्मनोऽपि इति॥**

ಪರಪಕ್ಷದವರು ಪ್ರತಿಪಾದಿಸಿದ ಅನಿರ್ವಚನೀಯ ದೃಶ್ಯತ್ವ ಆತ್ಮನಲ್ಲಿ ಇರುವದಿಲ್ಲ, ಆದ್ದರಿಂದ ಸಾಧನ ವಿಕಲವೆಂಬ ದೋಷ ದೃಷ್ಟಾಂತಕ್ಕೆ ಉಂಟಾಗುತ್ತದಲ್ಲ ಎಂದರೆ. ಅದನ್ನೇ ಈ ಟೀಕಾವಾಕ್ಯ ಪರಿಹರಿಸುತ್ತದೆ.

**अनिर्वचनीयत्व विचारं अपहाय परोक्त दृश्यत्वं स्वपक्षे आत्मनि उपपादितत्वात् इत्यर्थः। अत एव असिद्धिः परास्ता। पराभिप्रेत धर्म विशिष्टतया जगति दृश्यत्व अभावेऽपि तदुक्त दृश्यत्व रूप स्वरूपमात्रस्य सत्वात्।**

ಪರಪಕ್ಷದವರ ಅನಿರ್ವಚನಿಯತ್ವದ ವಿಚಾರವನ್ನು ಅಪಾಕರಿಸಿ, ಅವರು ಪ್ರತಿಪಾದಿಸಿದ ದೃಶ್ಯತ್ವವನ್ನು ಆತ್ಮನಲ್ಲಿ ಸಮರ್ಥಿಸಲಾಗಿರುತ್ತದೆ ಎಂದರ್ಥ. ಆದ್ದರಿಂದ ಅಲ್ಲಿ ಉಂಟಾದ ಅಸಿದ್ಧಿಯನ್ನು ಅಲ್ಲಗೆಳೆಯಲಾಯಿತು.

### ॥ प्रयोक्तुं शक्यत्वात् इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**प्रयोज्यत्वात् इति पदं व्याख्याति– प्रयोक्तुं शक्यत्वात् इति॥**

प्रयोज्यत्वात् ಪದವನ್ನು प्रयोक्तुं शक्यत्वात् (ಅಂದರೆ, ಪ್ರಯೋಗಿಸಲು ಶಕ್ಯವಿದೆ ಎಂದರ್ಥ) ಎಂದು ವಾಖ್ಯಾನಿಸುತ್ತಾರೆ.

**प्रयोज्य नियोज्यौ शक्यार्थ इति सूत्रेण शक्यार्थे प्रयोज्य शब्द निपातनात् इति भावः।**

प्रयोज्य नियोज्यौ शक्यार्थ ಎಂಬ ಸೂತ್ರದಿಂದ ಶಕ್ಯಾರ್ಥದಲ್ಲಿ प्रयोज्य ಶಬ್ದವನ್ನು ಇಡಲಾಗಿದೆ ಎಂಬ ಭಾವವಿರುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**ननु "प्रयोग्यत्वात्" इति वक्तव्यम्। "चजोः कु घिण्यतोः" इति कुत्व विधानात् इति। अत उक्तं "प्रयोक्तुं शक्यत्वात्" इति "प्रयोज्य नियज्यौ शक्यार्थे" इति शक्यार्थे प्रयोज्य शब्दस्य निपातितत्वात् साधुत्व इत्यभिप्रायः।**

ಇಲ್ಲಿ "चजोः कु घिण्यतोः" ಎಂದು, ಕುತ್ವ ವಿಧಾನದಂತೆ, "प्रयोग्यत्वात्" ಎಂದು ಹೇಳಬೇಕಾಗಿತ್ತು. ಆದ್ದರಿಂದ, "प्रयोज्य नियज्यौ शक्यार्थे" ಎಂಬ ಸೂತ್ರದಂತೆ, ಶಕ್ಯಾರ್ಥದಲ್ಲಿ प्रयोज्य ಪದದ ನಿಷ್ಪನ್ನತೆ ಸಾಧು ಆಗಿದೆ ಎಂಬ ಅಭಿಪ್ರಾಯ ಮೆರೆಗೆ, ಅದನ್ನು "प्रयोक्तुं शक्यत्वात्" ಎಂದು ವ್ಯಾಖ್ಯಾನಿಸಲಾಗಿದೆ.

## ७.२.१.२ शुक्तिरजते दृग्विषयत्वरूप दृश्यत्व अभाव समर्थनम्

### टीका

**ननु मिथ्याभूतेऽपि शुक्तिरजते वर्तमानं दृश्यत्वं कथं प्रपञ्च सत्यता सिद्धौ प्रयोक्तुं शक्यते इति। अत उक्तं "रजतम्" इत्यादि।**



**इदं अत्र आकूतम्। दृग्विषयत्वं हि दृश्यत्वं अत्र अभिमतम्। "यत् सन्निकृष्टकरणेन यत् ज्ञानं उत्पद्यते स तस्य विषयः" इति अनित्यज्ञाने व्यवस्था। रजत ज्ञानं च शुक्ति सन्निकृष्ट इन्द्रियेण जातं इति स एव तस्य विषयः।**

ಇಲ್ಲಿ, ಮಿಥ್ಯಾಭೂತವಾದರೂ ಶುಕ್ತಿರಜತದಲ್ಲಿ ವರ್ತಮಾನದಲ್ಲಿ ದೃಶ್ಯತ್ವವಿರುವಾಗ ತಾವು ಸಿದ್ಧಾಂತಿಗಳು ಅದನ್ನು ಹೇಗೆ ಪ್ರಪಂಚದ ಸತ್ಯತ್ವವನ್ನು ಸಿದ್ಧಿಸಲು, ಪ್ರಯೋಗಿಸಲು ಸಾಧ್ಯವಾಗುತ್ತದೆ? ಆದ್ದರಿಂದ ಮೂಲದಲ್ಲಿ "ರಜತಮ್ " ಎಂದು ಮುಂತಾಗಿ ಹೇಳಲಾಗಿದೆ. ಇದನ್ನು ಇಲ್ಲಿ ಗ್ರಹಿಸಬೇಕು ಅಥವಾ ಇಲ್ಲಿ ಈ ಅಭಿಪ್ರಾಯವಿರುತ್ತದೆ. ಇಲ್ಲಿ ಜ್ಞಾನವಿಷಯತ್ವವೇ ದೃಶ್ಯತ್ವ ಎಂದು ಅಭಿಪ್ರಾಯವಿರುತ್ತದೆ. " ಎಲ್ಲಿ ಇಂದ್ರಿಯ ಸನ್ನಿಕೃಷ್ಟದಿಂದ ಯಾವ ಜ್ಞಾನ ಹುಟ್ಟುತ್ತದೊ ಅದೆ ಅದರ ವಿಷಯವಾಗಿರುತ್ತದೆ" ಎಂದು ಅನಿತ್ಯಜಾನದಲ್ಲಿ ವ್ಯವಸ್ಥೆ ಇರುತ್ತದೆ. ಇಲ್ಲಿ ರಜತ ಜ್ಞಾನವು ಶುಕ್ತಿ ಸನ್ನಿಕೃಷ್ಟ ಇಂದ್ರಿಯದಿಂದ ಹುಟ್ಟುತ್ತದೆ ಎಂದು ಶುಕ್ತಿಯೇ ಜ್ಞಾನದ ವಿಷಯವಾಗಿರುತ್ತದೆ.

## टिप्पणीनाम् विशेषार्थानि

### ॥ ननु मिथ्याभूतेऽपि इति ॥

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**ननु न च शुक्तिरजतादौ व्यभिचारेण, प्रतिपाद्य अनुमानस्य हीन बलत्वात् प्रकरणसमत्व भङ्ग इत्याशङ्कते– ननु मिथ्याभूत इति।**

ಶುಕ್ತಿರಜತಾದಿಗಳಲ್ಲಿ ವ್ಯಭಿಚಾರ ಉಂಟಾಗುವದರಿಂದ, ಮೂಲದಲ್ಲಿ ಪ್ರತಿಪಾದಿಸಿದ ಅನುಮಾನವು ಬಲಹೀನವಾಗುವದರಿಂದ ಪ್ರಕರಣಸಮತ್ವ ಎಂಬ ದೋಷದ ಭಂಗ ವಾಗುತ್ತದಲ್ಲಾ ಎಂಬ ಶಂಕೆಯನ್ನು ನಿವಾರಿಸಲು ಈ ಟೀಕಾವಾಕ್ಯ ಆ ಶಂಕೆಯನ್ನು ವ್ಯಕ್ತಪಡಿಸುತ್ತದೆ.

### ॥ इदं अत्र आकूतम् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु शुक्तिरजते दृश्यत्व अभावात् न व्यभिचार इति अत्र उच्यते।**

ಇಲ್ಲಿ ಒಂದು ಶಂಕೆಗೆ ಆಸ್ಪದವಿದೆಃ ಶುಕ್ತಿರ್ಜತದಲ್ಲಿ ದೃಶ್ಯತ್ವ ಇಲ್ಲವಾದ್ದರಿಂದ ವ್ಯಭಿಚಾರಕ್ಕೆ ಆಸ್ಪದವಿಲ್ಲ ಎಂದು ಹೇಳುತ್ತೀರಿ.

**प्राग्, अनिर्वचनीय असिद्धेः एव सपक्ष अभावात् विरुद्ध इति ग्रन्थेन अनिर्वचनीयस्य अप्रसिद्धत्वेन सपक्ष अभावात् वियदादि व्यतिरिक्तं सर्वं विपक्षं इति, दृश्यत्वस्य शुक्ति रजतादौ विपक्षे वर्तमानत्वेन साध्य विपरीत व्याप्त्या दृश्यत्व हेतुः विरुद्ध इति दृश्यत्वस्य शुक्तिरजते सत्त्वं उक्तं। तथा आत्मनोऽपि दृश्यत्वात् अनैकान्तिकता च इति, अनिकान्तिकत्वं उक्त्या च तत्र अपि शब्देन दृश्यत्वस्य दृश्यत्वस्य सपक्षभूत शुक्तिरजतादौ सत्त्वस्य उक्तत्वात्।**

ಆದರೆ, ಹಿಂದೆ "अनिर्वचनीय असिद्धेः एव सपक्ष अभावात् विरुद्धः" ಎಂಬ ವಾಕ್ಯದಿಂದ, ಅನಿರ್ವಚನೀಯವು ಅಪ್ರಸಿದ್ಧವಾದ್ದರಿಂದ ಸಪಕ್ಷ ಸಿದ್ಧವಾಗದ ಕಾರಣ, ವಿಯದಾದಿ ಪ್ರಪಂಚ ವ್ಯತಿರಿಕ್ತವಾದುದೆಲ್ಲವೂ ವಿಪಕ್ಷವಾಗುವದೆಂದು, ದೃಶ್ಯತ್ವವಾದ ಶುಕ್ತಿರಜತಾದಿಗಳು ವಿಪಕ್ಷದಲ್ಲಿ ಇರುವಂತಾಗುವದರಿಂದ, ಸಾಧ್ಯ ವಿಪರೀತ ವ್ಯಾಪ್ತಿ ಉಂಟಾಗಿ ದೃಶ್ಯತ್ವ ಹೇತುವು ವಿರುದ್ಧ ದೋಷಗ್ರಸ್ತವಾಗುತ್ತದೆ ಎಂದು ಶುಕ್ತಿರಜತದಲ್ಲಿ ದೃಶ್ಯತ್ವ ಸತ್ಯವಾಗಿದೆ ಎಂದು ಹೇಳಿರುತ್ತೀರಿ. ಹಾಗೆಯೆ "आत्मनोऽपि दृश्यत्वात् अनैकान्तिकता च" ಎಂದು ಅನೈಕಾಂತಿಕತ್ವ ಹೇಳಿ ಮತ್ತು ಅಲ್ಲಿ अपि ಶಬ್ದದಿಂದ ದೃಶ್ಯತ್ವವನ್ನು ಸಪಕ್ಷಭೂತವಾದ ಶುಕ್ತಿರಜತಾದಿಗಳಲ್ಲಿ ಸತ್ಯ ಎಂದು ಹೇಳುರಿತ್ತೀರಿ.

अतः पूर्वोत्तर ग्रन्थ विरोध इत्यत आह– इदं अत्र आकूतं इति॥

ಹೀಗಿರುವಾಗ ತಮ್ಮ ಪೂರ್ವೋತ್ತರ ಗ್ರಂಥದಲ್ಲಿ ವಿರೋಧ ಕಂಡುಬರುತ್ತದಲ್ಲಾ? ಈ ಶಂಕೆಯನ್ನು ನಿವಾರಿಸಲೆಂದೆ ಮುಂದಿನ ಕೆಲವು ಟೀಕಾ ವಾಕ್ಯಗಳು ಹೊರಟಿರುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

ननु सिद्धान्तिनां वस्तुतः रजतस्य दर्शन अङ्गीकारात् कथं तस्य भ्रान्ति सिद्धत्वं उक्तं इति। अत आह– इदं अत्र आकूतम्॥

ಸಿದ್ಧಾಂತಿಗಳು ವಸ್ತುತಃ ರಜತದ ದರ್ಶನವನ್ನು ಅಂಗೀಕರಿಸಿದ್ದರಿಂದ ಅದನ್ನು ಹೇಗೆ ಭ್ರಾಂತಿ ಸಿದ್ಧಿಗಾಗಿ ಇಲ್ಲಿ ಹೇಳಲಾಗಿದೆ? ಆದ್ದರಿಂದ ಈ ಶಂಕೆಯನ್ನು ನಿವಾರಿಸಲೆಂದೆ ಮುಂದಿನ ಕೆಲವು ಟೀಕಾವಾಕ್ಯಗಳು ಹೊರಟಿರುತ್ತವೆ.

## ॥ यत् सन्निकृष्टकरण इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

दृग्विषयत्वं ज्ञानविषयत्वं, किं तत् विषयत्वम् इत्यत आह– यत् सन्निकृष्ट इति॥

ದೃಗ್ವಿಷಯತ್ವಮ್ ಅಂದರೆ ಜ್ಞಾನವಿಷಯತ್ವ ಎಂದರ್ಥ. ಅದರ ವಿಷಯತ್ವ ಯಾವುದು? ಅದನ್ನೆ ಈ ಟೀಕಾವಾಕ್ಯ ಪ್ರತಿಪಾದಿಸುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

ज्ञान असाधारण कारणनिष्ठ, असाधारण करणसन्निकर्ष प्रतियोगित्वं, विषयत्वं इति लक्षणं अत्र विवक्षितम् इति स्वामिनः।

ಇಲ್ಲಿ ಅಸಾಧಾರಣವೆಂದರೆ ಸಮಾನ್ಯವಲ್ಲದ್ದು ಅಥವಾ ವಿಶೇಷಗುಣವುಳ್ಳದ್ದು ಎಂದರ್ಥ. ಅಂದರೆ, ವಿಶೇಷಗುಣವುಳ್ಳ ಜ್ಞಾನದ ಕಾರಣನಿಷ್ಠ, ವಿಶೇಷಗುಣವುಳ್ಳ ಇಂದ್ರಿಯ ಸನ್ನಿಕರ್ಷದ ಪ್ರತಿಯೋಗಿಯಾದುದು ಆ ಜ್ಞಾನದ ವಿಷಯತ್ವವಾಗುತ್ತದೆ ಎಂಬ ಲಕ್ಷಣವು ಇಲ್ಲಿ ವಿವಕ್ಷಿತವಾಗಿರುತ್ತದೆ ಎಂದು ನಮ್ಮ ಗುರುಗಳ ಅಭಿಪ್ರಾಯವಾಗಿರುತ್ತದೆ.



अत्र सन्निकर्षस्य कारणत्व विवक्षया, आकाशादिसन्निकृष्ट चक्षुरादिजन्य रूपादि ज्ञाने, आकाशादेः अपि रूपादि ज्ञानकरण चक्षुरादिनिष्ठ सन्निकर्ष प्रतियोगित्वात् विषयत्व प्रसङ्ग निरासः।

चक्षुरादेः आकाशादिना सन्निकर्षस्य रूपादिज्ञानकारणत्व अभावेन ज्ञानकारण सन्निकर्ष प्रतियोगित्वस्य तत्र अभावात्।

ಇಲ್ಲಿ ಸನ್ನಿಕರ್ಷದ ವಿಶಿಷ್ಟಕಾರಣತ್ವ ವಿವಕ್ಷಿತವಾದ್ದರಿಂದ, ಆಕಾಶಾದಿ ಸನ್ನಿಕೃಷ್ಟ ಚಕ್ಷುರಾದಿಗಳಿಂದ ಹುಟ್ಟಿದ ರೂಪಾದಿ ಜ್ಞಾನದಲ್ಲಿ, ಆಕಾಶಾದಿಗಳಲ್ಲಿ ಕೂಡ ರೂಪಾದಿ ಜ್ಞಾನ ಚಕ್ಷುರಾದಿ ಇಂದ್ರಿಯನಿಷ್ಠ ಸನ್ನಿಕರ್ಷ ಪ್ರತಿಯೋಗಿ ಆಗಿರುವದರಿಂದ ಅವುಗಳು ವಿಷಯತ್ವಗಳಾಗುತ್ತವೆ ಎಂಬ ಪ್ರಸಂಗವನ್ನು ನಿರಾಕರಿಸಲಾಯಿತು.

ಚಕ್ಷುರಾದಿಗಳ, ಆಕಾಶಾದಿಗಳ ಸನ್ನಿಕರ್ಷಕ್ಕೆ ರೂಪಾದಿಜ್ಞಾನಕಾರಣತ್ವ ಇಲ್ಲದಾಗಿರುವದರಿಂದ, ಜ್ಞಾನಕಾರಣ ಸನ್ನಿಕರ್ಷ ಪ್ರತಿಯೋಗಿತ್ವವು ಅಲ್ಲಿ ಇಲ್ಲದಾಗಿರುತ್ತದೆ.

करण असाधारणत्व विवक्षया च, आत्मसन्निकृष्ट मनोजन्यरूपादि ज्ञाने, आत्ममनः सन्निकर्षस्य कारणत्वेन, करणनिष्ठ ज्ञानकारण सन्निकर्ष प्रतियोगित्वात्, आत्मनो विषयत्व प्रसङ्ग निरासः।

ಮತ್ತು ಇಲ್ಲಿ, ವಿಶಿಷ್ಟಗೂಣವುಳ್ಳ ಇಂದ್ರಿಯ ವಿವಕ್ಷಿತವಾದ್ದರಿಂದ, ಆತ್ಮಸನ್ನಿಕೃಷ್ಟ ಮನೋಜನ್ಯರೂಪಾದಿ ಜ್ಞಾನದಲ್ಲಿ, ಆತ್ಮಮನ ಸನ್ನಿಕರ್ಷದ ಕಾರಣತ್ವದಿಂದ, ಇಂದ್ರಿಯನಿಷ್ಠ ಜ್ಞಾನಕಾರಣ ಸನ್ನಿಕರ್ಷದ ಪ್ರತಿಯೋಗಿಯಾಗಿರುವದರಿಂದ, ಆತ್ಮನ ವಿಷಯತ್ವ ಪ್ರಸಂಗವನ್ನು ಅಲ್ಲಗೆಳೆಯಲಾಯಿತು.

मनसो रूपादि ज्ञानकरणत्वेऽपि साधारणत्वेन असाधारण करणत्व अभावात्।

सन्निकर्ष असाधारण्य विवक्षया च, मनः सन्निकृष्टचक्षुर्जन्यरूप ज्ञाने, चक्षुषः असाधारण करणत्वेन तन्निष्ठज्ञानकरणमनः संयोग प्रतियोगित्वात् मनसो विषयत्व प्रसङ्ग निरासः।

ಇನ್ನು ಮನಸ್ಸು ರೂಪಾದಿಗಳ ಜ್ಞಾನದ ಇಂದ್ರಿಯವೆನಿಸಿದರೂ ಅದು ಸಾಧಾರಣವಾಗಿದ್ದರಿಂದ ಅಲ್ಲಿ ಅಸಾಧಾರಣ ಅಂದರೆ ವಿಶಿಷ್ಟಗುಣಗಳುಳ್ಳ ಇಂದ್ರಿಯತ್ವದ ಅಭಾವತೆ ಇದೆ. ಮತ್ತು, ಇಲ್ಲಿ ವಿಶಿಷ್ಟಗುಣಗಳುಳ್ಳ ಸನ್ನಿಕರ್ಷ ವಿವಕ್ಷಿತವಾಗಿದ್ದರಿಂದ, ಮನಸ್ಸಿನ ಸನ್ನಿಕೃಷ್ಟ ಚಕ್ಷುಜನ್ಯ ಜ್ಞಾನದಲ್ಲಿ, ಚಕ್ಷುಗಳು ಅಸಾಧಾರಣ ಇಂದ್ರಿಯಗಳಾಗುವದರಿಂದ ಅದರ ನಿಷ್ಠ ಜ್ಞಾನಕರಣ ಮನದ ಸಂಯೋಗವು ಪ್ರತಿಯೋಗಿ ಆಗುವದರಿಂದ ಮನಸ್ಸಿನ ವಿಷಯತ್ವ ಪ್ರಸಂಗವನ್ನು ನಿರಾಕರಿಸಲಾಯಿತು.

न च आत्मनः सन्निकर्षस्य साधारणकारणत्वात् सन्निकर्ष असाधारण विवक्षया एव मनोजन्यरूप प्रतीतेः आत्मविषयकत्व असिद्धेः करण असाधारण्यविवक्षा वैयर्थ्यं इति वाच्यम्।

ಮತ್ತು ಆತ್ಮನು ಸನ್ನಿಕರ್ಷದ ಸಾಧಾರಣ ಕಾರಣವಾಗುವದರಿಂದ, ಸನ್ನಿಕರ್ಷ ಅಸಾಧಾರಣ ವಿವಕ್ಷಿತವಾದ್ದರಿಂದಲೇ ಮನೊಜನ್ಯರೂಪ ಪ್ರತೀತಿಯು ಆತ್ಮವಿಷಯವಾಗಲಾರದ್ದರಿಂದ, ಕರಣ ಅಂದರೆ ಇಂದ್ರಿಯ ಅಸಾಧಾರಣ ವಿವಕ್ಷತೆಯು ವೈಯರ್ಥವಾಗಿದೆ ಎಂದು ಹೇಳಕೂಡದು.

**चाक्षुषज्ञानत्व अवच्छिन्ने चक्षुर्मनः सन्निकर्षस्यापि असाधारणत्वेन चक्षुःसन्निकृष्ट मनोजन्यरूपज्ञाने चक्षुषः अविषयत्वाय करण असाधारण्यस्यापि अवश्यं विवक्षणीयत्वात्।**

ಚಾಕ್ಷುಷಜ್ಞಾನತ್ವದ ಅವಚ್ಛಿನ್ನ (ಎಂದರೆ ಬೇರ್ಪಡಿಸಲ್ಪಟ್ಟ ತುಂಡು) ದಲ್ಲಿ, ಚಕ್ಷು ಮನಗಳ ಸನ್ನಿಕರ್ಷಕೂಡ ಅಸಾಧಾರಣವಾದ್ದರಿಂದ ಚಕ್ಷು ಸನ್ನಿಕೃಷ್ಟ ಮನೋಜನ್ಯರೂಪ ಜ್ಞಾನದಲ್ಲಿ, ಚಕ್ಷುಗಳ ಅವಿಷಯತ್ವದ ಸಲುವಾಗಿ, ಕರಣ ಎಂದರೆ ಇಂದ್ರಿಯ ಅಸಾಧಾರಣವನ್ನು ಕೂಡ ಅವಶ್ಯವಾಗಿ ವಿವಕ್ಷಿಸಬೇಕಾಗುತ್ತದೆ.

**न च तत् तत् इन्द्रियमनः संयोगानां तत्तज्ञानकरणत्व कल्पनस्य अनेककारण तत् अवच्छेदक कल्पनया गौरवकरत्वेन चाक्षुषज्ञानत्व अवच्छिन्ने चक्षुर्मनः संयोगस्य अकारणत्वात् न अयं अतिप्रसङ्ग इति वाच्यम्।**

ಆ ಆ ಇಂದ್ರಿಯಮನಗಳ ಸಂಯೋಗಗಳ ಆ ಆ ಜ್ಞಾನಇಂದ್ರಿಯತ್ವದ ಕಲ್ಪನೆಯ ಅನೇಕಕಾರಣ ಅವುಗಳ ಅವಚ್ಛೇದಕ ಕಲ್ಪನೆಯಪರವಾಗಿ ಮಾನ್ಯ ಮಾಡಿರುವದರಿಂದ, ಚಾಕ್ಷುಷಜ್ಞಾನತ್ವದ ಅವಚ್ಛಿನ್ನದಲ್ಲಿ ಚಕ್ಷುಮನಗಳ ಸಂಯೋಗದ ಅಕಾರಣತ್ವವು ಅತಿಪ್ರಸಂಗವಾಗುವದಿಲ್ಲ ಎಂದು ಹೇಳಕೂಡದು.

**तथा सति, गौरवात् एव रूपचक्षुः सन्निकर्षादिः असाधारण कारणस्य अकल्पनीयतया सन्निकर्ष असाधारणविवक्षायां रूपप्रतीते रूपविषयत्व अभाव प्रसङ्गात्।**

ಹಾಗಾದರೆ, ಮಾನ್ಯವಾದ ರೂಪಚಕ್ಷುಗಳ ಸನ್ನಿಕರ್ಷಗಳಲ್ಲಿ ಅಸಾಧಾರಣ ಕಾರಣದ ಅಕಲ್ಪನೀಯತ್ವದಿಂದ, ಸನ್ನಿಕರ್ಷ ಅಸಾಧಾರಣ ವಿವಕ್ಷೆಗಳ ರೂಪ ಪ್ರತೀತಿಯಲ್ಲಿ ರೂಪವಿಷಯತ್ವದ ಅಭಾವತೆಯ ಪ್ರಸಂಗ ಉಂಟಾಗುತ್ತದೆ.

**न च यत्किञ्चित् दण्डेन यत्किञ्चित् घटवत् यत्किञ्चित् अर्थेन्द्रिय सन्निकर्षेण अन्यविषयक ज्ञान आपत्त्या प्राग् अभावस्यैव तत् तत् इन्द्रियार्थ सन्निकर्षस्य तत् तत् ज्ञानहेतुताया अवश्यं अङ्गीकार्यत्वेऽपि अर्थसन्निकृष्टेन्द्रिये मनःसन्निकर्षस्य हेतुता अभ्युपगमे अतिप्रसङ्ग अभावेन अत्र विशिष्य हेतुहेतुमद्भावस्य न कल्पना युक्ता।**

ಮತ್ತು, ಯತ್ಕಿಂಚಿತ್ ದಂಡದಿಂದ, ಯತ್ಕಿಂಚಿತ್ ಘಟದಂತೆ, ಯತ್ಕಿಂಚಿತ್ ಅರ್ಥಇಂದ್ರಿಯ ಸನ್ನಿಕರ್ಷದಿಂದ ಅನ್ಯವಿಷಯಕ ಜ್ಞಾನ ಬರುವದರಿಂದ, ಪ್ರಾಕ್ ಅಭಾವವನ್ನೆ ಆ ಆ ಇಂದ್ರಿಯಾರ್ಥ ಸನ್ನಿಕರ್ಷದ ಆ ಆ ಜ್ಞಾನಹೇತುಮೂಲಕ ಅವಶ್ಯವಾಗಿ ಅಂಗೀಕರಿಸಿದರೂ ಅರ್ಥಸನ್ನಿಕೃಷ್ಟ ಇಂದ್ರಿಯದಲ್ಲಿ ಮನದ ಸನ್ನಿಕರ್ಷದ ಹೇತುವಾಗಿ ಒಪ್ಪುವದರಲ್ಲಿ ಅತಿಪ್ರಸಂಗವಿಲ್ಲವಾದ್ದರಿಂದ ಇಲ್ಲಿ, ವಿಶಿಷ್ಯ ಹೇತುಹೇತುಮದ್ಭಾವವನ್ನು ಕಲ್ಪಿಸುವದು ಯುಕ್ತವಲ್ಲ ಎಂದು ಹೇಳಕೂಡದು.

**अन्यथा दण्डादौ अपि विशिष्य तत् कल्पना आपत्तेः इति वाच्यम्। अर्थसन्निकर्षे स्वार्थसन्निकृष्टे चक्षुषि मनःसन्निकर्ष अभावेऽपि तेन स्वार्थज्ञान आपत्तिरूप अतिप्रसङ्गस्य अत्रापि सत्वात्।**

ಅನ್ಯಥಾ, ದಂಡಾದಿಗಳಲ್ಲಿ ಕೂಡ ವಿಶಿಷ್ಯ ಮತ್ತು ಅದರ ಕಲ್ಪನೆ ಬಂದೊದಗುತ್ತವೆ ಎಂದು ಹೇಳಬೇಕಾಗುತ್ತದೆ. ಅರ್ಥಸನ್ನಿಕರ್ಷ ಹಾಗೂ ಸ್ವಾರ್ಥಸನ್ನಿಕೃಷ್ಟವಾದ ಚಕ್ಷುಗಳಲ್ಲಿ ಮನದ



ಸನ್ನಿಕರ್ಷ ಇಲ್ಲದಿದ್ದರೂ ಅದರ ಸ್ವಾರ್ಥಜ್ಞಾನ ಬಂದೊದಗುವ ಅತಿಪ್ರಸಂಗ ಕೂಡ ಇಲ್ಲಿ ಸತ್ಯವಾಗಿರುತ್ತದೆ.

**विस्तरस्तु वाक्यार्थ चन्द्रिकायां द्रष्टव्यः।**

ಈ ವಿಷಯವನ್ನು, ವಾಕ್ಯಾರ್ಥ ಚಂದ್ರಿಕಾ ಗ್ರಂಥದಲ್ಲಿ ವಿಸ್ತಾರವಾಗಿ ವಿವೇಚಿಸಲಾಗಿದೆ

**ननु एवं अपि प्रत्यभिज्ञाया इन्द्रियस्य तत्तया लिङ्गज्ञानस्य लिङ्गिना वाक्यज्ञानस्य च वाक्यार्थेन असन्निकर्षात् तत्र अव्याप्तिः इति चेत् न।**

ಹೀಗಿದ್ದರೂ, ಪ್ರತ್ಯಭಿಜ್ಞಾದ ಇಂದ್ರಿಯದ ಆ ಆ ಲಿಂಗಜ್ಞಾನದ, ಮತ್ತು ಲಿಂಗದಿಂದ ವಾಕ್ಯಜ್ಞಾನದ ವಾಕ್ಯಾರ್ಥದಿಂದ ಸನ್ನಿಕರ್ಷವಾಗದಿರುವದರಿಂದ ಅಲ್ಲಿ ಅವ್ಯಾಪ್ತಿ ಉಂಟಾಗುತ್ತದಲ್ಲ ಎಂದರೆ? ಹಾಗೆ ಹೇಳುವದು ಸರಿಯಲ್ಲ.

**प्रत्यभिज्ञायां इन्द्रियस्य तत्तया संस्कारस्य, लिङ्गज्ञानस्य लिङ्गिना च तत् व्याप्तलिङ्ग विषयत्वस्य, वाक्य ज्ञानस्य वाक्यार्थेन च तत्पर वाक्यविषत्वस्यैव सन्निकर्षत्वेन तत्तादौ अपि उक्तलक्षण सद्भावात्।**

ಪ್ರತ್ಯಭಿಜ್ಞಾದಲ್ಲಿಯ ಇಂದ್ರಿಯದ ಆ ಆ ಸಂಸ್ಕಾರದ ಲಿಂಗ ಜ್ಞಾನದ ಮತ್ತು ಲಿಂಗದಿಂದ ಅದರ ವ್ಯಾಪ್ತಲಿಂಗ ವಿಷಯತ್ವದ ಮತ್ತು ವಾಕ್ಯ ಜ್ಞಾನದ ವಾಕ್ಯಾರ್ಥದ್ವಾರಾ ತತ್ಪರ ವಾಕ್ಯವಿಷಯತ್ವದ್ದೆ ಸನ್ನಿಕರ್ಷತ್ವದಿಂದ, ಅವುಗಳಲ್ಲಿ ಕೂಡ ಮೇಲೆ ಹೇಳಿದ ಲಕ್ಷಣ ಕಂಡುಬರುತ್ತದೆ.

**न च आत्माश्रयः। तद् व्याप्तविषयकत्वादेः असन्निकर्षत्वेन एव लक्षणशरीर प्रवेश अभ्युपगमात् इति ध्येयम्।**

ಮತ್ತು ಇದು ಆತ್ಮಾಶ್ರಯ ದೋಷವೆನಿಸುವದಿಲ್ಲ. ಅದರ ವ್ಯಾಪ್ತವಿಷಯಗಳ ಸನ್ನಿಕರ್ಷವಿಲ್ಲದ್ದರಿಂದಲೇ ಹೇಳಿದ ಲಕ್ಷಣದಲ್ಲಿ ಅವುಗಳ ಸಮವೇಶವನ್ನು ಒಪ್ಪಬೇಕಾಗುತ್ತದೆ ಎಂದು ತಿಳಿಯತಕ್ಕದ್ದು.

## ॥ अनित्यज्ञान इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु एवं तर्हि नित्यज्ञानविषये अतिव्याप्तिः इत्यत उक्तं– अनित्यज्ञान इति॥**

ಈ ರೀತಿಯಾಗಿ ಹೇಳಿದರೆ ನಿತ್ಯಜ್ಞಾನ ವಿಷಯದಲ್ಲಿ ಅತಿವ್ಯಾಪ್ತಿ ಉಂಟಾಗುತ್ತದೆ. ಅದನ್ನು ನಿವಾರಿಸಲು ಅನಿತ್ಯಜ್ಞಾನ ಎಂದು ಹೇಳಲಾಗಿದೆ.

**अनित्य ज्ञानस्यैव इदं लक्षणं इति न अतिव्याप्तिः इत्यर्थः।**

ಅಂದರೆ, ಈ ಲಕ್ಷಣವು ಅನಿತ್ಯ ಜ್ಞಾನದೇ ಆಗಿರುತ್ತದೆ. ಆದ್ದರಿಂದ ಅತಿವ್ಯಾಪ್ತಿಗೆ ಆಸ್ಪದವಿರುವದಿಲ್ಲ ಎದರ್ಂಥ.

## ॥ रजत ज्ञानं इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**रजत उल्लेखि ज्ञानं इत्यर्थः।**

ಇಲ್ಲಿ ರಜತವು ಊಹಿಸಿ ವರ್ಣಿಸಲ್ಪಡುವ ಜ್ಞಾನ ಎಂದರ್ಥ.

## ॥ शुक्ति सन्निकृष्ट इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**आरोपिततया अत्यन्त असता रजतेन इन्द्रियस्य सन्निकर्ष अयोगात्।**

ಅಂದರೆ ಆರೋಪಿತವಾದ ಅತ್ಯಂತ ಅಸತ್ಯವಾದ ರಜತಕ್ಕೆ ಇಂದ್ರಿಯದ ಸನ್ನಿಕರ್ಷ ಅಂದರೆ ಸಂಬಂಧ ಅಥವಾ ಸನ್ನಿಧಿಯನ್ನು ಹೇಳುವದು ಅಯೋಗ್ಯವಾಗಿದೆ.

**तस्य ज्ञानस्य।**

ಇಲ್ಲಿ ತಸ್ಯ ದ ಅರ್ಥ ಜ್ಞಾನದ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**नित्य ज्ञानस्य उत्पत्ति अयोगात् नित्य ज्ञानविषये अव्याप्ति निरासाय अनित्यज्ञान इत्युक्तम्।**

ನಿತ್ಯ ಜ್ಞಾನದ ಉತ್ಪತ್ತಿ ಅಯೋಗ್ಯವಾಗಿರುವದರಿಂದ, ನಿತ್ಯ ಜ್ಞಾನ ವಿಷಯದಲ್ಲಿ ಈ ಲಕ್ಷಣ ಅವ್ಯಾಪ್ತಿಯನ್ನು ಹೊದುವದರಿಂದ, ಅದನ್ನು ಪರಿಹರಿಸಲು ಅನಿತ್ಯ ಜ್ಞಾನ ಎಂದು ಹೇಳಲಾಗಿದೆ.

**आरोपितस्य रजतस्य इन्द्रिय सन्निकर्ष अयोगात् इत्यर्थः।**

ಆರೋಪಿತವಾದ ರಜತಕ್ಕೆ ಇಂದ್ರಿಯ ಸನ್ನಿಕರ್ಷ ಅಂದರೆ ಸನ್ನಿಧಿಯನ್ನು ಹೇಳುವದು ಅಯೋಗ್ಯವಾಗಿದೆ ಎಂದರ್ಥ.

### ७.२.१.३ दृग्व्यावर्तकत्वरूप दृगुल्लेख्यत्वमेव शुक्तिरजतस्येति समर्थनम्

## टीका

अत एव "अन्यत् अन्यात्मना अवगाहते" इति भ्रमः। तथा च "रजतं दृष्टम्" इति योयं अनुव्यवसायः स च भ्रम एव। न च भ्रान्तिकल्पितेन विपक्षवृत्तित्वेन लिङ्गस्य व्यभिचारो भवति। तथा सति सर्व अनुमान उच्छेद प्रसङ्गात्।

ಆದ್ದರಿಂದಲೇ "ಬೇರೆಯದನ್ನು ಬೇರೆಯವಾಗಿ ಗ್ರಹಿಸುವದಕ್ಕೆ" ಭ್ರಮವೆನ್ನುತ್ತಾರೆ. ಅದರಂತೆ ಇಲ್ಲಿ "रजतं दृष्टम्" ಎಂಬ ಜ್ಞಾನದ ಜ್ಞಾನವು ಭ್ರಮವೇ ಆಗಿರುತ್ತದೆ. ಮತ್ತು ಭ್ರಾಂತಿಕಲ್ಪಿತವಾದ ವಿಪಕ್ಷವೃತ್ತಿಯಿಂದ ಲಿಂಗದ ಅಥವಾ ಲಕ್ಷಣದ ವ್ಯಭಿಚಾರ ಉಂಟಾಗುವದಿಲ್ಲ. ಹಾಗೆನಾದರೆ ಎಲ್ಲ ಅನುಮಾನಗಳ ಬುಡಸಮೇತ ಕಿತ್ತುಹಾಕುವ ಪ್ರಸಂಗ ಉಂಟಾಗುವದು.





## ॥ अत एव इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**उल्लेख्य–इन्द्रियसन्निकृष्टयोः रजतशुक्तिकाशकलयोः भेदात् एव। अन्यत् इन्द्रियसन्निकृष्ट शुक्तिकाशकलम् अन्यात्मना इन्द्रिय–असन्निकृष्ट रजतात्मना अवगाहते उल्लिखति इति कृत्वा एव रजत ज्ञानस्य भ्रमत्वम्। इन्द्रियसन्निकृष्टस्यैव उल्लेख्यत्वे सन्मात उल्लेखित्व प्रसङ्गेन भ्रमत्व अयोगात् इत्यर्थः।**

ಅಂದರೆ, ಉಹಿಸಿ ತಿಳಿಯಲ್ಪಟ್ಟ ರಜತ ಹಾಗೂ ಇಂದ್ರಿಯ ಸನ್ನಿಕೃಷ್ಟ ಹೊಂದಿದ ಶುಕ್ತಿ ಇವುಗಳಲ್ಲಿಯ ಭೇದವಿರುವದರಿಂದಲೇ ಎಂದರ್ಥ. ಇಲ್ಲಿ अन्यत् ಎಂದರೆ ಇಂದ್ರಿಯಸನ್ನಿಕೃಷ್ಟವಾದ ಶುಕ್ತಿಶಕಲ अन्यात्मना ಎಂದರೆ ಇಂದ್ರಿಯ ಅಸನ್ನಿಕೃಷ್ಟ ರಜತವನ್ನು अवगाहते ಎಂದರೆ ಊಹಿಸಿ ತಿಳಿಯಲ್ಪಟ್ಟದ್ದರಿಂದಲೇ ರಜತ ಜ್ಞಾನವು ಭ್ರಮ ಎನಿಸುತ್ತದೆ. ಇನ್ನು ಇಂದ್ರಿಯಸನ್ನಿಕೃಷ್ಟವಾದುದನ್ನೆ ಉಹಿಸಿ ತಿಲಿಯಲ್ಪಟ್ಟಿದ್ದಲ್ಲಿ ಸತ್ಯವನ್ನೆ ಉಹಿಸಿ ತಿಳಿಯಲ್ಪಡುವ ಪ್ರಸಂಗದಿಂದ ಭ್ರಮತ್ವ ಎಂದು ಹೇಳುವದು ಅಯೋಗ್ಯವೆನಿಸುತ್ತಿತ್ತು.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**ननु रजतज्ञानं कथं शुक्तिविषयं स्यात्। अन्यज्ञानस्य अन्यविषयत्व अयोगात् इति चेत् । रजतज्ञानं इति कः अर्थः। किं रजतसम्बन्धिज्ञानं इति। किं वा रजतसन्निकृष्टकरण जन्य ज्ञानं इति। यद्वा रजतोल्लिखज्ञानं इति।**

ರಜತ ಜ್ಞಾನವು ಹೇಗೆ ಶುಕ್ತಿವಿಷಯವಾಗುತ್ತದೆ? ಅನ್ಯಜ್ಞಾನದ ಅನ್ಯವಿಷಯತ್ವ ಅಯೋಗ್ಯವಾಗಿರುತ್ತದಲ್ಲವೆ ? ಎಂದರೆ. ಇಲ್ಲಿ ರಜತ ಜ್ಞಾನ ಎಂದರೆ ಏನರ್ಥ?

ಅದು ರಜತಸಂಬಧಿ ಜ್ಞಾನವೆಂದೊ? ಅಥವಾ ರಜತಸನ್ನಿಕೃಷ್ಟಕರಣದಿಂದ ಜನಿಸಿದ ಜ್ಞಾನವೊ? ಅಥವಾ ರಜತವೆಂದು ಉಹಿಸಿ ತಿಳಿಯಲ್ಪಟ್ಟ ಜ್ಞಾನವೊ?

**न आद्यः। चक्षुरादिजन्यतया जन्यजनकभाव सम्बन्धेन चक्षुरादि सम्बन्धिनोऽपि ज्ञानस्य रूपादिविषयत्व उपलम्भात्।**

ಮೊದಲನೆಯದು ಸರಿಯಲ್ಲ. ಅಂದರೆ ಚಕ್ಷುರಾದಿಗಳಿಂದ ಜನಿಸಿದಮೂಲಕ, ಜನ್ಯಜನಕ ಭಾವ ಸಂಬಂಧದ್ವಾರಾ, ಚಕ್ಷುರಾದಿ ಸಂಬಂಧದಿಂದ ಕೂಡ ಜ್ಞಾನದ ರೂಪಾದಿವಿಷಯತ್ವ ಪ್ರಾಪ್ತವಾಗುತ್ತದೆ. ಪ್ರಸ್ತುತದಲ್ಲಿ ಇದು ಆಗುವದಿಲ್ಲ.

**न द्वितीयः। आपादक असिद्धेः उक्तत्वात्।**

ಎರಡನೆಯದು ಹೇಳುವದು ಸರಿಯಲ್ಲ. ಇದನ್ನು ಆಪಾದಕವು ಅಸಿದ್ಧ ಎಂದು ಹೇಳತಾಯಿದೆ.

**तृतीयं दूषयति– अत एव इति॥**

ಈ ಟೀಕಾವಾಕ್ಯ ಮೂರನೆ ವಿಕಲ್ಪವನ್ನು ದೂಷಿಸುತ್ತದೆ.

**अत एव उल्लेख्य–इन्द्रियसन्निकृष्टयोः भेदात एव, अन्यत् इन्द्रियसन्निकृष्टं शुक्त्यादि अन्यात्मना इन्द्रिय–असन्निकृष्ट रजतात्मना अवगाहते उल्लिखति इति कृत्वा भ्रमत्वम्। इन्द्रियसन्निकृष्टस्यैव उल्लेख्यत्वे सन्मात्र उल्लेखित्वेन भ्रान्तित्व अयोगात् इत्यर्थः।**

**एतेन "रजतस्य अविषयत्वे "रजतस्य ज्ञानम्" इति षष्ट्यार्थे न निरूपितः स्यात्। विषयविषयिभाव अतिरेकेण षष्ट्यर्थस्य सम्बन्धस्य अभावात्" इति निरस्तम्। उल्लेख्य-उल्लेखिभाव सम्बन्धस्य षष्ट्यर्थत्वात्।**

ಇಲ್ಲಿ ಅತ ಏವ ಎಂದರೆ, ಉಹಿಸಿ ತಿಳಿಯಲ್ಪಟ್ಟ ಮತ್ತು ಇಂದ್ರಿಯ ಸನ್ನಿಕೃಷ್ಟ ಇವುಗಳ ಬೇದದಿಂದಲೇ ಎಂದರ್ಥ. ಇಲ್ಲಿ अन्यत् ಎಂದರೆ ಇಂದ್ರಿಯ ಸನ್ನಿಕೃಷ್ಟ ಶುಕ್ತಿಶಕಲ अन्यात्मना ಎಂದರೆ ಇಂದ್ರಿಯ ಸನ್ನಿಕೃಷ್ಟದಿಂದಲ್ಲದ ರಜತ अवगाहते ಎಂದರೆ ಉಹಿಸಿ ತಿಳಿಯಲ್ಪಡುತ್ತದೆ. ಇದು ಭ್ರಮ. ಅಂದರೆ ಶುಕ್ತಿಯ ಇಂದ್ರಿಯ ಸನ್ನಿಕೃಷ್ಟದಿಂದುಂಟಾದ ಜ್ಞಾನವು, ಇಂದ್ರಿಯ ಸನ್ನಿಕೃಷ್ಟವಾಗದ ರಜತವನ್ನು ಉಹಿಸಿ ಗ್ರಹಿಸುತ್ತದೆ.

ಇನ್ನು ಇಂದ್ರಿಯ ಸನ್ನಿಕೃಷ್ಟವಾದುದನ್ನೇ ಉಹಿಸಿ ಗ್ರಹಿಸಿದಲ್ಲಿ ಸತ್ಯವನ್ನೆ ಉಹಿಸಿ ತಿಳಿಯಲ್ಪಟ್ಟಂತಾಗಿ ಅಲ್ಲಿ ಭ್ರಾಂತಿತ್ವ ಅಯೋಗ್ಯವೆನಿಸುತ್ತದೆ.

ಇದರಿಂದ, "ರಜತದ ವಿಷಯತ್ವ ಇಲ್ಲದ ಕಾರಣ ರಜತದ ಜ್ಞಾನ" ಎಂದು ಷಷ್ಟಿ ವಿಭಕ್ತ್ಯರ್ಥದಲ್ಲಿ ನಿರೂಪಣೆ ಇರುವದಿಲ್ಲ ಎಂದಂತಾಯಿತು. ವಿಷಯವಿಷಯಿ ಭಾವ ಇಲ್ಲದ ಮೂಲಕ ಇಲ್ಲಿ ಷಷ್ಟಿ ವಿಭಕ್ತ್ಯರ್ಥದ ಸಂಬಂಧ ಇರುವದಿಲ್ಲ, ಎಂಬ ಹೇಳಿಕೆಯನ್ನು ನಿರಾಕರಿಸಲಾಯಿತು. ಉಹಿಕೆ -ಉಹಿಸಲ್ಪಡುವಿಕೆಯಲ್ಲಿಯ್ ಸಂಬಂಧ ಷಷ್ಟ್ಯಾರ್ಥದಲ್ಲೆ ಇರುತ್ತದೆ.

**न च तद्विषयत्व अतिरिक्तं तदुल्लेख्यत्वं नास्ति इति युक्तम्। उक्तरूप विषयताहीनस्यापि रजतस्य व्यावर्तकतामात्ररूप उल्लेख्यत्व अनुभवात्।**

ಇನ್ನು ರಜತದ ವಿಷಯತ್ವದ ಅತಿರಿಕ್ತ, ಅದರ ಉಹಿಸುವಿಕೆ ಇರುವದಿಲ್ಲ ಎಂದು ಹೇಳುವದು ಯುಕ್ತವಲ್ಲ. ಮೇಲೆ ಹೇಳಿದಂತೆ, ವಿಷಯಹೀನವಾಗಿದ್ದರೂ ರಜತದ ವ್ಯಾವರ್ತಕ ಮಾತ್ರ (ಪರಸ್ಪರ ಭೇದ ತೋರಿಕೆಯ ಮಾತ್ರ) ರೂಪದ ಉಹಿಸುವಿಕೆಯು ಅನುಭವ ಸಿದ್ಧವಾಗಿದೆ.

**न च "मया हेतुकृतं दृश्यत्वं न दृग्जनककरणसन्निकृष्टत्वम्, किन्तु तदुल्लेख्यत्वमेव। त्वया अपि सत्यत्वे तदेव हेतुकर्तव्यम्। अन्यथा प्रकरणसमत्व अयोगात्। न हि अर्थ भेदेऽपि शब्दैक्यमात्रेण प्रकरणसमता। तथा च सत्यत्वसाधक दृश्यत्व हेतोः शुक्तिरूप्ये व्यभिचारः" इति साम्प्रतम्।**

ಮತ್ತು " ನಾವು (ಪರಪಕ್ಷದವರು) ಹೇತು ಮಾಡಿದ ದೃಶ್ಯತ್ವ ದೃಗ್ ಜನಕ ಸನ್ನಿಕೃಷ್ಟವಲ್ಲ ಕಿಂತು ಅದು ಉಹಿಸಲ್ಪಟ್ಟದ್ದೇ ಆಗಿದೆ. ಅದರಂತೆ ಸಿದ್ಧಾಂತಿಗಳಾದ ತಾವು ತಮ್ಮ ಪ್ರಪಂಚ ಸತ್ಯ ಎಂದು ಪ್ರತಿಪಾದಿಸುವ ಅನುಮಾನದಲ್ಲಿ, ಅದನ್ನೆ ಹೇತುವಾಗಿ ತೆಗೆದುಕೊಳ್ಳಬೇಕು. ಇಲ್ಲವಾದರೆ ಪ್ರಕರಣಸಮ ಎಂಬ ದೋಷವನ್ನು ಹೇಳಲು ಬರುಬದಿಲ್ಲ. ಕೇವಲ ಅರ್ಥ ಭೇದವಿದ್ದರೂ ಒಂದೆ ಶಬ್ದವನ್ನು ಬಳಿಸುವದರಿಂದ ಪ್ರಕರಣಸಮ ದೋಷವನ್ನು ಹೇಳಲಾಗುವದಿಲ್ಲ. ಅದರಂತೆ, ಸತ್ಯತ್ವಸಾಧಕ ದೃಶ್ಯತ್ವ ಹೇತುವಿಗೆ ಶುಕ್ತಿರೂಪ್ಯದಲ್ಲಿ ವ್ಯಭಿಚಾರ ಉಂಟಾಗುತ್ತದೆ" ಎಂದು ಈವಾಗ ಹೇಳುವದು ಸರಿಯಲ್ಲ.

**यदि दृश्यत्वं दृग्जनककरणसन्निकृष्टत्वं तदा प्रकरणसमता। यदा दृग्व्यावर्तकमात्रं तदा विरुद्धात्वादिः इति पक्षभेदेन प्रकरणसमता अभिधानात्।**



ಯಾವಾಗ ದೃಶ್ಯತ್ವವು ದೃಗ್ ಜನಕ ಕರಣ ಸನ್ನಿಕೃಷ್ಟವಾಗಿರುತ್ತದೊ ಆಗ ಪ್ರಕರಣಸಮ ದೋಷ. ಯಾವಾಗ ದೃಗ್ ವ್ಯಾವರ್ತಕಮಾತ್ರವಾಗಿರುತ್ತದೊ ಆಗ ವಿರುದ್ಧತ್ವಾದಿ ದೋಷ ಎಂದು ಪಕ್ಷಭೇದದಿಂದ ಪ್ರಕರಣಸಮ ದೋಷವನ್ನು ಹೇಳಿರುತ್ತದೆ..

**अत एव वक्ष्यति तदभ्युपगमेन न विरुद्धादि वादविरोधः इति। दृग्व्यावर्तकत्वमात्रस्य आत्मन्यपि विद्यमानतया त्वया तस्य हेतुकर्तुं अशक्यत्वात् च।**

ಆದ್ದರಿಂದಲೇ ಮುಂದೆ "तदभ्युपगमेन न विरुद्धादि वादविरोधः" ಎಂದು ಮುಂತಾಗಿ ಹೇಳುತ್ತಾರೆ. ಮತ್ತು ದೃಗ್ ವ್ಯಾವರ್ತಕಮಾತ್ರ ದೃಶ್ಯತ್ವವು ಆತ್ಮನಲ್ಲಿಯೂ ಇರುವದರಿಂದ ನೀವು (ಪರಪಕ್ಷದವರು) ಅದನ್ನು ಹೇತುವೆಂದು ಮಾಡಲು ಅಶಕ್ಯವಾಗಿರುತ್ತದೆ.

## ॥ तथा च इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु एवं सति रजतस्य ज्ञानविषयत्व अभावे रजतं दृष्टम् इति रजतज्ञानस्य रजतसन्निकृष्टेन्द्रिय जन्यत्व अवगाहि अनुव्यवसाय विरोधः। तेन रजतस्य ज्ञानविषयत्व प्राप्तेः इत्यतो रजतं दृष्टं इति भ्रममात्रत्वात् इत्यंशः प्रवृत्तः इत्यभिप्रेत्य आह- तथा च इति॥**

ಹೀಗಿದ್ದಲ್ಲಿ, ರಜತದ ಜ್ಞಾನವಿಷಯತ್ವ ಇಲ್ಲದಾಗ, "ರಜತವು ಕಾಣಿಸಿತು" ಎಂಬ ರಜತಜ್ಞಾನವನ್ನು, ರಜತಸನ್ನಿಕೃಷ್ಟ ಇಂದ್ರಿಯ ಜನ್ಯತ್ವವೆಂದು ಗ್ರಹಿಸುವದು ಅನುವ್ಯವಸಾಯದ (ಎಂದರೆ ಜ್ಞಾನದ ಜ್ಞಾನ) ವಿರೋಧ ಉಂಟಾಗುತ್ತದೆ. ಹಾಗೂ ಅದರಿಂದ ರಜತದ ಜ್ಞಾನವಿಷಯತ್ವ ಪ್ರಾಪ್ತವಾಗುತ್ತದೆ.

ಆದ್ದರಿಂದ रजतं दृष्टं इति भ्रममात्रत्वात् ಎಂಬ ಅಂಶವು ಮೂಲದಲ್ಲಿ ಪ್ರವೃತ್ತವಾಗಿರುತ್ತದೆ ಎಂದು ಅಭಿಪ್ರಾಯವನ್ನು ತಿಳಿಸಲು ಈ ಟೀಕಾವಾಕ್ಯವಿರುತ್ತದೆ.

**दृष्टं ज्ञानविषयिकृतम् इत्यर्थः।**

ಇಲ್ಲಿ दृष्टं ಎಂದರೆ ಜ್ಞಾನವಿಷಯಿಕರಿಸಲಾಗಿದೆ ಎಂದರ್ಥ.

## ॥ अनुव्यवसाय इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**रजतस्य ज्ञानविषयत्व अवगाहि इत्यर्थः। ज्ञान ज्ञानं अनुव्यवसाय शब्दार्थः।**

ಅಂದರೆ ರಜತದ ಜ್ಞಾನವಿಷಯತ್ವ ಗ್ರಹಿಸುವದು ಎಂದರ್ಥ. ಜ್ಞಾನದ ಜ್ಞಾನ ಎಂದು अनुव्यवसाय ಪದದ ಶಬ್ದಾರ್ಥವಾಗಿರುತ್ತದೆ.

## ॥ स च भ्रम एव इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु पराभिमत अनुव्यवसाय एव अस्माकं साक्षि तस्य अव्यभिचारितया प्रामाण्यनियमेन तस्य भ्रमत्व उक्तौ अपसिद्धान्त इति चेत्। उच्यते।**

ಪರಾಭಿಮತದ ಅನುವ್ಯವಸಾಯವೇ ನಮಗೆ (ಸಿದ್ಧಾಂತಿಗಳಿಗೆ) ಸಾಕ್ಷಿ ಎಂದೆನಿಸುತ್ತದೆ. ಇನ್ನು ಸಾಕ್ಷಿಯನ್ನು ಅವ್ಯಭಿಚಾರದ್ವಾರಾ ಪ್ರಾಮಣ್ಯ ನಿಯಮದಂತೆ ಅದನ್ನು ಭ್ರಮ ಎಂದು ಹೇಳುವದು ಅಪಸಿದ್ಧಾಂತ ದೋಷಕ್ರಾಂತವಗುತ್ತದೆ ಎಂದರೆ? ಅದಕ್ಕೆ ಹೇಳುತ್ತೇವೆ.

**इदं रजतं इति ज्ञानस्वरूपमात्रमेव साक्षिवेद्यं तत्र क्वचित् अपि सन्देह अभावेन तस्य सर्वत्र साक्षिवेद्यता नियमात्। तस्य ज्ञानस्य दृष्टं इति रजतसन्निकृष्टकरण जन्यत्वेन रजतविषयत्व अवगाही यः अनुव्यवसयः स मानस एव। न साक्षिरूपः।**

**यत् क्वचित् व्यभिचारि स्यात् दर्शनं मानसं हि तत् इति अनुव्याख्यानोक्तेः इति ज्ञातव्यं इति सम्प्रदायः।**

ಇದು ರಜತ ಎಂಬುದು ಜ್ಞಾನಸ್ವರೂಪಮಾತ್ರವೆಂದೆ ಸಾಕ್ಷಿ ತಿಳಿಯಲ್ಪಟ್ಟಿರುತ್ತದೆ. ಅಲ್ಲಿ ಯಾವ ಸಂದೇಹವು ಇಲ್ಲದಕಾರಣ, ಅದನ್ನು ಎಲ್ಲ ಕಡೆಗೂ ಸಾಕ್ಷಿಯಿಂದ ತಿಳಿಯಲ್ಪಟ್ಟಿದ್ದು ಎಂದು ನಿಯಮವಾಗುತ್ತದೆ. ಅಂತಹ ಜ್ಞಾನವು ಪ್ರಸ್ತುತದಲ್ಲಿ दृष्टं ಎಂದು ರಜತ ಸನ್ನಿಕೃಷ್ಟ ಕರಣ ಜನ್ಯತ್ವದ್ವಾರಾ ರಜತವಿಷಯತ್ವವನ್ನು ಗ್ರಹಿಸುವದೊ, ಯಾವದು ಅನುವ್ಯವಸಾಯವೊ ಅದು ಮಾನಸ ಜ್ಞಾನವೇ ಆಗಿರುತ್ತದೆ. ಅದು ಸಾಕ್ಷಿರೂಪವಾಗಿರುವದಿಲ್ಲ. ಇಲ್ಲಿ यत् क्वचित् व्यभिचारि स्यात् दर्शनं मानसं हि तत् ಎಂದು ಅನುವ್ಯಾಖ್ಯಾನದಲ್ಲಿ ಹೇಳಿದ್ದನ್ನು ಜ್ಞಾಪಿಸಿಕೊಳ್ಳಬೇಕು ಎಂದು ಸಂಪ್ರದಾಯವಿರುತ್ತದೆ.

**एतादृश अनुव्यवसायस्य साक्षिरूपत्वेऽपि न दोषः। आरोपितस्य करणसन्निकर्ष अयोगात् इति निरवकाश युक्त्या साक्षिणो बाधिततया रजत सन्निकृष्टेन्द्रिय जन्यत्वांशे साक्षिणः भ्रमत्वमेव इत्याहुः।**

ಇಂತಹ ಅನುವ್ಯವಸಾಯವಾದ ಮಾನಸ ಜ್ಞಾನವೇ ಸಾಕ್ಷಿರೂಪವಾದರೂ ಯಾವ ದೋಷ ಉದ್ಭವಿಸುವದಿಲ್ಲ. ಏಕೆಂದರೆ, ಆರೋಪಿತವಾದುದಕ್ಕೆ ಕರಣಸನ್ನಿಕರ್ಷ ಅಯೋಗ್ಯವಾಗಿರುತ್ತದೆ ಎಂಬ ನಿರವಕಾಶ (ಬಿಡುವಿಲ್ಲದ) ಯುಕ್ತಿಯಿಂದ, ಸಾಕ್ಷಿಗೆ ಬಾಧಕಮೂಲಕ ರಜತ ಸನ್ನಿಕೃಷ್ಟ ಇಂದ್ರಿಯಜನ್ಯತ್ವ ಅಂಶದಲ್ಲಿ ಸಾಕ್ಷಿಗೆ ಭ್ರಮತ್ವವೆಂದೆ ಹೇಳಲಾಗುವದು.

<u>ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:</u>

**ननु कथं एतत्। बाधकं विना भ्रान्तित्व अयोगात्। न च आरोपितस्य करणसन्निकर्षो नास्ति इति युक्तिः बाधिका। प्रत्यक्ष विरोधेन युक्ति अप्रामाण्यस्यैव न्याय्यत्वात्।**

ಇದನ್ನು ಭ್ರಮ ಎಂದು ಹೇಗೆ ಹೇಳುತ್ತೀರಿ? ಬಾಧಕವಿಲ್ಲದೆ ಭ್ರಾಂತಿ ಎಂದು ಹೇಳುವದು ಅಯೋಗ್ಯವೆನಿಸುತ್ತದೆ. ಮತ್ತು ಆರೋಪಿತವಾದುದಕ್ಕೆ ಕರಣ ಸನ್ನಿಕರ್ಷ ಇಲ್ಲವೆಂದು ಹೇಳುವ ಯುಕ್ತಿಯು ಬಾಧಕವಾಗುವದಿಲ್ಲ. ಮತ್ತು ಪ್ರತ್ಯಕ್ಷದ ವಿರೋಧದಿಂದ ಅದು ಅಪ್ರಾಮಾಣ್ಯವೆಂದೆ ಎನಿಸುತ್ತದೆ.

**स्वमते, अनुव्यवसायस्य नियत प्रामाण्य साक्षिरूपत्वेन तत् अप्रामाण्ये अपसिद्धान्तश्च। क्वचित् ज्ञानगतप्रामाण्ये सन्देहादिना तस्य मानसत्वेऽपि ज्ञानमात्रे क्वचित् अपि सन्देहादि अभावेन तस्य सर्वत्र साक्षिवेद्यता नियम इति हि स्वसिद्धान्त इति चेत्।**



ಹಾಗೂ ತಮ್ಮ(ಸಿದ್ಧಾಂತಿಗಳ) ಮತದಲ್ಲಿ ಅನುವ್ಯವಸಾಯವು ನಿಯತ ಪ್ರಾಮಾಣ್ಯ ಸಾಕ್ಷಿರೂಪವಾಗಿರುವದರಿಂದ, ಸಾಕ್ಷಿಯನ್ನು ಅಪ್ರಾಮಾಣ್ಯವೆಂದು ಹೇಳಿದರೆ, ತಮಗೆ ಅಪಸಿದ್ಧಾಂತ ದೋಷ ಉಂಟಾಗುತ್ತದೆ. ಹಾಗು, ಕ್ವಚಿತ್ ಜ್ಞಾನಗತ ಪ್ರಾಮಾಣ್ಯದಲ್ಲಿ ಸಂದೇಹಾದಿಗಳಿಂದ ಅದು ಮಾನಸವೆಂದಾದರೂ, ಜ್ಞಾನಮಾತ್ರದಲ್ಲಿ ಕ್ವಚಿತ್ ಕೂಡ ಸಂದೇಹಾದಿಗಳಿಲ್ಲವಾದ್ದರಿಂದ ಅದರ ಎಲ್ಲ ಕಡೆಗೂ ಸಾಕ್ಷಿವೇದ್ಯತ್ವ ನಿಯಮವಾಗಿರುತ್ತದೆ ಎಂದು ತಮ್ಮ ಸಿದ್ಧಾಂತವಾಗಿರುತ್ತದೆ.

**मैवम्। भाव अनबोधात्। "रजतं दृष्टम्" इति रजत अवच्छिन्नं दर्शनमेव अनुभूयते। न तु दर्शनस्य रजतसन्निकृष्ट इन्द्रियजन्यत्वम्। जन्यजनकभावस्य सर्वत्र अन्वयव्यतिरेक अवसेयत्वेन तस्य अप्रत्यक्षत्वात्। अथापि स साक्षिवेद्य इति अङ्गीकारे निरवकाश युक्त्या सावकाश साक्षिणः बाधिततया जन्यजनकभावे अनुव्यवसायो भ्रमः स्यात् इति आपादनं हि अत्र अभिप्रेतं इति न कोऽपि दोष इति।**

ಅದು ಹಾಗಿರುವದಿಲ್ಲ. ನಿಮಗೆ ಭಾವ ತಿಳಿದಿರುವದಿಲ್ಲ. ಇಲ್ಲಿ "रजतं दृष्टम्" ಎಂದು ರಜತ ಅವಚ್ಛಿನ್ನ (ಬೇರ್ಪಡಿಸಿದ) ದರ್ಶನದ ಅನುಭವವೇ ಆಗುತ್ತದೆ. ವಿನಹಾ ಆ ದರ್ಶನವು ರಜತಸನ್ನಿಕೃಷ್ಟ ಇಂದ್ರಿಯಜನ್ಯತ್ವದಿಂದ ಆಗಿರುವದಿಲ್ಲ. ಜನ್ಯಜನಕಭಾವವು ಎಲ್ಲಕಡೆಗೂ ಅನ್ವಯವ್ಯತಿರೇಕದಲ್ಲಿಯೆ ಕೊನೆಗಾಣುವದರಿಂದ ಅದು ಪ್ರತ್ಯಕ್ಷಕ್ಕೆ ಗೋಚರಿಸುವದಿಲ್ಲ. ಹಾಗಿದ್ದರೂ ಅದನ್ನು ಸಾಕ್ಷಿವೇದ್ಯ ಎಂದು ಅಂಗೀಕರಿಸಿದ್ದಲ್ಲಿ, ನಿರವಕಾಶ ಯುಕ್ತಿಯಿಂದ ಸಾವಕಾಶ ಸಾಕ್ಷಿಗೆ ಬಾಧಿತವಾಗಿ ಜನ್ಯಜನಕ ಭಾವದಲ್ಲಿಯ ಅನುವ್ಯವಸಾಯವು ಭ್ರಮ ಎಂದೆನಿಸುವದು ಎಂಬ ಆಪಾದನವೇ ಇಲ್ಲಿ ಅಭಿಪ್ರೇತವಾಗಿರುತ್ತದೆ. ಆದ್ದರಿಂದ ಇಲ್ಲಿ ಯಾವ ದೋಷವು ಉಂಟಾಗುವದಿಲ್ಲ.

## ॥ न च इति॥

<u>ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:</u>

**ननु यथा कथंचित् दृग्विषयत्वरूप दृश्यत्वस्य शुक्तिरजते सत्वात् व्यभिचार इति चेत् तत्र आह– न च इति॥**

ತಥಾಕಥಿತ ದೃಗ್ವಿಷಯತ್ವರೂಪ ದೃಶ್ಯತ್ವವು ಶುಕ್ತಿರಜತದಲ್ಲಿ ಸತ್ಯವಾಗಿದ್ದರಿಂದ ವ್ಯಭಿಚಾರ ಉಂಟಾಗುತ್ತದೆ ಎಂದರೆ? ಅದರ ಪರಿಹಾರವನ್ನು ಈ ಟೀಕಾವಾಕ್ಯ ಸೂಚಿಸುತ್ತದೆ.

## ॥ सर्व अनुमान इति ॥

<u>ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:</u>

**भ्रान्तिकल्पितस्य धूमस्य ह्रदेपि सत्वात् इति भावः।**

ಅಂದರೆ, ಭ್ರಾಂತಿಕಲ್ಪಿತವಾದ ಧೂಮವು ನೀರಿನ ಸರೋವರದಲ್ಲಿ ಕೂಡ ಸತ್ಯವಾಗುತ್ತದೆ ಎಂಬ ಭಾವ.

### ७.२.१.४ शुक्तिरजते दृग्विषयत्वरूप दृश्यत्वाभावे न विरुद्धादिवाद विरोधः

## टीका

दृग्विषयत्व अभावेऽपि दृग्व्यावर्तकमात्रं असतोऽपि शुक्तिरजतस्य अस्ति इति तत् अभ्युपगमेन न विरुद्धादि वाद विरोधः।

ननु अनैकान्त्यं दृष्टान्तस्य साधनवैकल्यं च अनाश्रित्य न प्रकरणसम प्रवृत्तिः इति ताभ्यां एव अलम्। किम् अनेन।

मैवं। तथा सति हेतु दोषं अनाश्रित्य दृष्टान्त दोष अप्रवृत्तेः सोऽपि अनुपसङ्ख्येयः स्यात्। स्फुटप्रतिभास वशात् तत् परिग्रहे प्रकृतेऽपि समानम्।

वस्तुतस्तु न इयं आचार्य प्रक्रिया। विरुद्ध–अनैकान्तिकादिवत् परपरिकल्पितरीत्या व्यवहार इति।

ಅಸತ್ಯವಾದ ಶುಕ್ತಿರಜತಕ್ಕೆ ದೃಗ್ ವಿಷಯತ್ವದ ಅಂದರೆ ಇಂದ್ರಿಯ ಸನ್ನಿಕೃಷ್ಟರೂಪ ವಿಷಯತ್ವದ ಅಭಾವತೆ ಇದ್ದರೂ, ದೃಗ್ ವ್ಯಾವರ್ತಕ ಮಾತ್ರ ಅಂದರೆ ಇಂದ್ರಿಯ ಉಲ್ಲೆಖ್ಯರೂಪಮಾತ್ರ ವಿಷಯತ್ವವಿದೆ. ಮತ್ತು ಅದನ್ನು ಒಪ್ಪುವಮೂಲಕ ಹಿಂದೆ ಹೇಳಿದ ವಿರುದ್ಧಾದಿಗಳ ವಿರೋಧ ಬರುವದಿಲ್ಲ.

ಇನ್ನು ಅನೈಕಾಂತ್ಯ ಮತ್ತು ದೃಷ್ಟಾಂತದ ದೋಷವಾದ ಸಾಧನವೈಕಲ್ಯವನ್ನು ಅವಲಂಬಿಸದೆ ಪ್ರಕರಣಸಮ ದೋಷದ ಪ್ರವೃತ್ತಿ ಉಂಟಾಗುವದಿಲ್ಲ ಎಂದು, ಅನೈಕಾಂತಿಕ, ಸಾಧನವೈಕಲ್ಯ ದೋಷಗಳನ್ನು ಪ್ರತಿಪಾದಿಸಿದ್ದೇ ಸಾಕಾಗಿತ್ತಲ್ಲ. ಮತ್ತೇಕೆ ಈ ಪ್ರಕರಣಸಮ ದೋಷದಿಂದ, ಏನು ಸಾಧ್ಯವಾಯಿತು?

ಹಾಗೆ ಹೇಳುವದು ಸರಿಯಲ್ಲ. ಹಾಗಾದರೆ, ಹೇತು ದೋಷವನ್ನು ಆಶ್ರಯಿಸದೆ ದೃಷ್ಟಾಂತ ದೋಷ ಪ್ರವರ್ತಿಸುವದಿಲ್ಲ, ಹಾಗಾಗಿ ಅವುಗಳನ್ನು ಕೂಡ ದೋಷಗಳಲ್ಲಿ ಪರಿಗಣಿಸಬಾರದು. ಇಲ್ಲ ಅಲ್ಲಿ ಸ್ಫುಟವಾಗಿ ತಿಳಿಯಲು ಅದನ್ನು ಪರಿಗ್ರಹಿಸಲಾಗಿದೆ ಎನ್ನುವುದಾದರೆ, ಪ್ರಕೃತದಲ್ಲಿ ಕೂಡ ಸಮವಾಗಿರುತ್ತದೆ.

ವಸ್ತುತಃ ಇದು ಶ್ರೀಮದಾಚಾರ್ಯರ ಪ್ರಕ್ರಿಯೆ ಆಗಿರುವದಿಲ್ಲ. ವಿರುದ್ಧ, ಅನೈಕಾಂತಿ ದೋಷಗಳಂತೆ ಇಲ್ಲಿ ಕೂಡ ಪರಪರಿಕಲ್ಪಿತ ರೀತಿಯಲ್ಲಿ ವ್ಯವಹರಿಸಲಾಗಿದೆ ಎಂದು ತಿಳಿತಕ್ಕದ್ದು.

## टिप्पणीनाम् विशेषार्थानि



## ॥ दृग्विषयत्व अभावेऽपि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

ननु एवं सति प्राक् शुक्तिरजतस्यापि दृश्यत्वं अङ्गीकृत्य विरुद्धत्व उक्ति विरोधः इत्यतः तं परिहरति– दृग्विषयत्व अभावेऽपि इति॥

ಈ ರೀತಿಯಾಗಿ ಮೇಲಿನಂತೆ ಹೇಳುವದಾದರೆ ಹಿಂದೆ ಶುಕ್ತಿರಜತಕ್ಕೂ ದೃಶ್ಯತ್ವ ಇದೆ ಎಂದು ಅಂಗೀಕರಿಸಿ, ದೃಶ್ಯತ್ವ ಅನುಮಾನಕ್ಕೆ ವಿರುದ್ಧ ದೋಷವನ್ನು ಹೇಳಿಕೆಯ ವಿರೋಧ ಉಂಟಾಗುತ್ತದಲ್ಲ ಎಂಬ ಶಂಕೆಯನ್ನು ಈ ಟೀಕಾವಾಕ್ಯ ನಿವಾರಿಸುತ್ತದೆ.

तत् सन्निकृष्टकरणजन्यत्वरूप ज्ञानविषयत्व अभावेऽपि इत्यर्थः।

ಇಲ್ಲಿ ದೃಶ್ಯತ್ವದ ಅಭಾವವಿದ್ದರೂ ಎಂದರೆ ಸನ್ನಿಕೃಷ್ಟಕರಣಜನ್ಯತ್ವರೂಪ ಜ್ಞಾನವಿಷಯತ್ವದ ಅಭಾವತೆ ಇದ್ದರೂ ಎಂದರ್ಥ.

## ॥ दृग्व्यावर्तकमात्रं असतोऽपि शुक्तिरजतस्य अस्ति इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

दृगुल्लेख्यत्वरूपं यत् दृग्व्यावर्तकत्वं तत् मात्ररूपं दृश्यत्वं इत्यर्थः।

ದೃಗ್ ಉಲ್ಲೆಖ್ಯತ್ವರೂಪ ಅಂದರೆ ದೃಷ್ಟಿಗೆ ಅಥವಾ ಅರಿವಿಗೆ ಊಹಿಸಿ ತಿಳಿಯಲ್ಪಡುವರೂಪವಾದದ್ದು ಯಾವದು ದೃಗವ್ಯಾವರ್ತಕ ಅಂದರೆ, ಅರಿವಿಗೆ ಪರಸ್ಪರ ಭೇದದಿಂದ ಎದ್ದು ತೋರುವಂತಹದು, ಅಂತಹದ್ದು ಮಾತ್ರರೂಪವಾದದ್ದು ದೃಶ್ಯತ್ವ ಎಂದರ್ಥ.

ननु व्यावर्तकत्वं नाम व्यावृत्ति प्रत्यय जनकत्वम्। तच्च पूर्वप्रवृत्तिरूपेण सत्तागर्भम्। तथा च असतो रजतस्य एतादृशं व्यावर्तकत्वं कथं इति चेत्।

ಇನ್ನು ದೃಗ್ ವ್ಯಾವರ್ತಕತ್ವವು ವ್ಯಾವೃತ್ತಿ ಎಂದರೆ ಇನ್ನೊಂದರಿಂದ ಪ್ರತ್ಯೇಕಿಸುವ ಪ್ರತ್ಯಯ ಅಂದರೆ ಪರಿಜ್ಞಾನದ ಜನಕವಾಗಿರುತ್ತದೆ. ಮತ್ತು ಅದು ಪೂರ್ವ ಪ್ರವೃತ್ತಿರೂಪ ಸತ್ತೆಯನ್ನು ಹೊಂದಿರುತ್ತದೆ. ಅದರಂತೆ ಅಸತ್ಯವಾದ ಶುಕ್ತಿರಜತಕ್ಕೆ ಇಂತಹ ವ್ಯಾವರ್ತಕತ್ವ ಅಂದರೆ ಪ್ರತ್ಯೇಕಿಸುವ ಗುಣ ಹೇಗೆ ಕೂಡುತ್ತದೆ. ಎಂದರೆ?

उच्यते। व्यावर्तकत्वं नाम न व्यावृत्तिप्रत्यय जनकत्वं किन्तु व्यावृत्ति धीजनक ज्ञानविषयत्वमेव। कुत इति चेत्। देवदत्त दण्डे सत्यपि तत् अज्ञाने दण्डि व्यावृत्ति अज्ञानात्। व्यावृत्ति धीजनकं तु सत्यमेव। तथा च असतोऽपि रजतस्य व्यावृत्ति धी हेतुभूत ज्ञाने उल्लेख्यमानरूप विषयत्व सद्भावेन तद् व्यावर्तकत्वं युक्तं इति न कश्चित् दोषः।

ಅದಕ್ಕೆ ಹೇಳುತ್ತೇವೆ. ವ್ಯಾವರ್ತಕತ್ವವು ವ್ಯಾವೃತ್ತಿಪ್ರತ್ಯಯ ಜನಕವಾಗಿರುವದಿಲ್ಲ ಪರಂತು ವ್ಯಾವೃತ್ತಿ ಧೀಜನಕ ಅಂದರೆ ಬುದ್ಧಿಜನಕ ಜ್ಞಾನವಿಷಯತ್ವವಾಗಿರುತ್ತದೆ. ಇದನ್ನು ಹೇಗೆ ತಿಳಿಯುವದು ಎಂದರೆ. ದಂಡು ಹಿಡಿದ ದೇವದತ್ತ ಸತ್ಯನಾಗಿದ್ದರೂ ದಂಡಿನ ಅಜ್ಞಾನದಲ್ಲಿ ದಂಡಿನ ವ್ಯಾವೃತ್ತಿಯ ಜ್ಞಾನ ಆಗುವದಿಲ್ಲ. ಅದರೆ ವ್ಯಾವೃತ್ತಿ ಬುದ್ಧಿಜನಕ ಸತ್ಯವೇ ಆಗಿರುತ್ತದೆ. ಅದರಂತೆ, ಅಸತ್ಯವಾದ ರಜತದ ವ್ಯಾವೃತ್ತಿ ತಿಳುವಳಿಕೆ ಅಥವಾ ಜ್ಞಾನ,

ಹೇತುಭೂತ ಜ್ಞಾನದಲ್ಲಿ ಉಲ್ಲೆಖ್ಯರೂಪ ವಿಷಯತ್ವವಾಗಿರುವದರಿಂದ, ಅದರ ವ್ಯಾವರ್ತಕತ್ವವು ಯುಕ್ತವಾಗಿದೆ. ಹೀಗಾಗಿ ಯಾವ ದೋಷವು ಬರುವದಿಲ್ಲ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु व्यावर्तकत्वं अपि असतो न अङ्गीकर्तुम शक्यम्। तत् हि, व्यावृत्ति जननशक्तिमत्वं व्यावृत्ति बुद्धिजननशक्तिमत्वं वा। न च शक्तिमतः अभावे शक्तिः सम्भवति इति चेत्।**

ವ್ಯಾವರ್ತಕತ್ವವನ್ನು ಕೂಡ ಅಸತ್ಯವಾದುದಕ್ಕೆ ಅಂಗೀಕರಿಸಲು ಶಕ್ಯವಾಗುವದಿಲ್ಲ. ವ್ಯಾವರ್ತಕತ್ವವು ವ್ಯಾವೃತ್ತಿ ಜನನಶಕ್ತಿಯುತ ಆಗಿರಬೇಕು ಅಥವಾ ವ್ಯಾವೃತ್ತಿ ಬುದ್ಧಿಜನನ ಶಕ್ತಿಯುತವಾಗಿರಬೇಕು. ಮತ್ತು ಶಕ್ತಿಮತದ ಅಭಾವತೆಯಲ್ಲಿ ಶಕ್ತಿ ಉಂಟಾಗಲು ಸಾಧ್ಯವಿಲ್ಲ.

**अत्र स्वामिनः। यथा हि– अतीतादि अर्थस्य न व्यावृत्ति जननशक्तिमत्वं व्यावृत्ति बुद्धिजननशक्तिमत्वं वा अभ्युपम्यते, किन्तु ज्ञाने अन्यस्मात् व्यावृत्तिः तत् जननशक्तिः ज्ञानहेतुषु एव। ज्ञानं अन्यस्मात् व्यावृत्तिं इति व्यावृत्ति बुद्धिजननशक्तिस्तु ज्ञानहेतु असादिते अवश्य अभ्युपगमनीये ज्ञाननिष्ठ स्वाभाविक विशेष एव। एवं च तत् उभयविधं व्यावर्तकत्वं ज्ञानहेतु ज्ञानगत स्वाभाविक विशेषयोः एव।**

ಇಲ್ಲಿ ನಮ್ಮ ಗುರುಗಳ ಮತ ಹೀಗಿರುತ್ತದೆ: ಅತೀತಾದಿ ಅಂದರೆ ಆಗಿಹೋದ ವಿಷಯದ ವ್ಯಾವೃತ್ತಿ ಜನನಶಕ್ತಿಮತ್ವ ಅಥವಾ ವ್ಯಾವೃತ್ತಿ ಬುದ್ಧಿಜನನ ಶಕ್ತಿಮತ್ವವನ್ನಾಗಲಿ ಒಪ್ಪಲುಬರುವದಿಲ್ಲ. ಪರಂತು ಅವುಗಳ ಜ್ಞಾನದಲ್ಲಿ ಬೇರೆ ವಿಷಯದ ವ್ಯಾವೃತ್ತಿ ಮತ್ತು ಅದರ ಜನನಶಕ್ತಿ ಜ್ಞಾನಹೇತುಗಳೇ ಇರುತ್ತವೆ. ಜ್ಞಾನವು ಬೇರೆ ವಿಷಯಗಳ ವ್ಯಾವೃತ್ತಿ ಎಂದು ವ್ಯಾವೃತ್ತಿ ಬುದ್ಧಿಜನನಶಕ್ತಿಯನ್ನು ಜ್ಞಾನಹೇತು ಅಸತ್ಯವಿಷಯಗಳಲ್ಲಿ ಅವಶ್ಯವಾಗಿ ಒಪ್ಪುವದು ಜ್ಞಾನನಿಷ್ಠ ಸ್ವಾಭಾವಿಕವಿಷಯವೇ ಆಗಿರುತ್ತದೆ. ಮತ್ತು ಈ ರೀತಿಯಾಗಿ ಮೇಲೆ ಪ್ರತಿಪಾದಿಸಿದ ಉಭಯವಿಧ ವ್ಯಾವರ್ತಕಗಳು ಜ್ಞಾನಹೇತು ಜ್ಞಾನಗತ ಸ್ವಾಭಾವಿಕ ವಿಷಯಗಳೇ ಆಗಿರುತ್ತವೆ.

**अतीतादि अर्थे तु ज्ञानहेतुजन्य व्यावृत्ति विशिष्टज्ञाने वा ज्ञानहेतु असादित स्वाभाविक विशेषेण जन्य व्यावृत्ति बुद्धौ च उल्लेखित्वमात्रं व्यावर्तकत्वं विषयत्व प्रयोजकत्वेन अभ्युपगम्यते। तथा उक्तरूपे द्विविधे ज्ञाने असतो रजतस्य उल्लेख्यमात्रम्। तच्च न तत् सत्तासापेक्षं इति को दोषः।**

ಅತೀತಾದಿ ವಿಷಯಗಳಲ್ಲಿಯಾದರು ಜ್ಞಾನಹೇತುಜನ್ಯ ವ್ಯಾವೃತ್ತಿ ವಿಶಿಷ್ಟ ಜ್ಞಾನದಲ್ಲಿ ಅಥವಾ ಜ್ಞಾನಹೇತು ಅಸತ್ಯವಾದ ಸ್ವಾಭಾವಿಕ ವಿಶೇಷಣ ಜನ್ಯ ವ್ಯಾವೃತ್ತಿ ಬುದ್ಧಿಯಲ್ಲಿ, ಉಲ್ಲಿಖಿತ್ವಮಾತ್ರ ವ್ಯಾವರ್ತಕ ವಿಷಯತ್ವ ಪ್ರಯೋಜಕವಾಗಿ ಒಪ್ಪಲಾಗಿರುತ್ತದೆ. ಹಾಗೆಯೆ ಹೇಳಲ್ಪಟ್ಟರೂಪದಲ್ಲಿ ಎರಡು ವಿಧ ಜ್ಞಾನದಲ್ಲಿ ಅಸತ್ಯವಾದ ರಜತವು ಉಲ್ಲೆಖ್ಯಮಾತ್ರವಾಗಿರುತ್ತದೆ. ಮತ್ತ ಅದು ಸತ್ತಾ ಸಾಪೇಕ್ಷವಾಗಿರುವದಿಲ್ಲ.

**न च अतीतादि ज्ञानस्य प्रमात्वेन जन्यज्ञाने भानोपयुक्त तत् तत् अनुभवजन्य संस्कारादेः सामग्रीकोटौ निवेशनेन तत्र हेतुसामर्थ्यादि कल्पन सम्भवेऽपि असत् ज्ञानरूपत्वेन जन्य ज्ञाने**



**असत् ज्ञानोपयुक्त तत् सन्निकर्षात् एव सम्भवेन तस्य सामग्रीकोटौ अनिवेशनेन तत्र एतत् कल्पना सम्भवति इति वाच्यम्।**

ಅತೀತಾದಿ ಜ್ಞಾನದ ಪ್ರಮಾತ್ವದಿಂದ ಹುಟ್ಟಿದ ಜ್ಞಾನದಲ್ಲಿ ತಿಳುವಳಿಕೆಗೆ ಉಪಯುಕ್ತ ಆ ಆ ಅನುಭವಜನ್ಯ ಸಂಸ್ಕಾರದಿಗಳಲ್ಲಿ ವ್ಯಾಪ್ತಿಪರಾಮರ್ಶರೂಪ ಸಂಗತಿಗಳನ್ನು ಇರಿಸುವದರಿಂದ ಅಲ್ಲಿ ಹೇತು ಸಾಮರ್ಥ್ಯಾದಿಗಳ ಕಲ್ಪನೆಯ ಸಂಭವವಿದ್ದರೂ, ಅಸತ್ಯ ಜ್ಞಾನರೂಪತ್ವದಿಂದ ಹುಟ್ಟಿದ ಜ್ಞಾನದಲ್ಲಿ ಅಸತ ಜ್ಞಾನೋಪಯುಕ್ತ ಅದರ ಸನ್ನಿಕರ್ಷದಿಂದಲೇ ಸಂಭವಿಸುವದರಿಂದ ಅದರ ವ್ಯಾಪ್ತಿ ಪರಾಮರ್ಶರೂಪ ಸಂಗತಿಗಳನ್ನಿರಿಸದೆ ಅಲ್ಲಿ ಇಂತಹ ಕಲ್ಪನೆ ಸಂಭವಿಸುತ್ತದೆ ಎಂದು ಹೇಳಲು ಬರುವದಿಲ್ಲ.

**अतीतादि ज्ञानस्य प्रमात्वात् समीचीन सामग्री उत्पादित ज्ञाने तादृश सामग्री उत्पादित स्वाभाविकविशेषजन्य व्यावृत्ति बुद्धौ वा उल्लेखित्वं इत्येतावत् मात्रविशेष सद्भावेऽपि स्वसामर्थ्य असादित ज्ञान उल्लेखित्वमात्रस्य व्यावर्तकत्वादिरूपतया ज्ञानसामग्री समीचीनत्वादेःअकिञ्चित्करत्वात्।**

ಅತೀತಾದಿ ಜ್ಞಾನದ ಪ್ರಮಾತ್ವದಿಂದ ಸಮೀಚೀನವಾಗಿ ವ್ಯಾಪ್ತಿಪರಾಮರ್ಷಾದಿ ಉತ್ಪಾದಿತ ಜ್ಞಾನದಲ್ಲಿ ಅಥವಾ ಅಂತಹ ವ್ಯಾಪ್ತ್ಯಾದಿ ಪರಾಮರ್ಶದಿಂದ ಉತ್ಪಾದಿತ ಸ್ವಾಭಾವಿಕ ವಿಶೇಷ ಜನ್ಯ ವ್ಯಾವೃತ್ತಿ, ಬುದ್ಧಿಯಲ್ಲಿ, ಉಲ್ಲೇಖಿತ್ವಮಾತ್ರ ವಿಶೇಷವಾಗಿ ಇದ್ದರೂ, ಸ್ವಸಾಮರ್ಥ್ಯ ಅಸತ್ಯ ಜ್ಞಾನ ಉಲ್ಲೇಖಿತಮಾತ್ರದ ವ್ಯಾವರ್ತಕರೂಪವಾಗಿ ಜ್ಞಾನ ಪರಾಮರ್ಶ ಸಮೀಚೀನವಾಗಿರುವದಲ್ಲಿ ಸಂಶಯಕ್ಕೆ ಆಸ್ಪದವೇವಿರುವದಿಲ್ಲ.

**शुक्ति सन्निकर्षसादृश्यादेः एव जन्यज्ञाने असद् भानोपयुक्तस्य भ्रमसामग्रीकोटौ अपि प्रवेशेन तादृश व्यावर्तकत्वस्य असत्यपि उपपन्नत्वात् इति।**

ಶುಕ್ತಿ ಸನ್ನಿಕರ್ಷ ಸಾದೃಶ್ಯಾದಿಗಳಿಂದಲೇ ಹುಟ್ಟಿದ ಜ್ಞಾನದಲ್ಲಿ ಅಸತ್ಯದ ತಿಳುವಳಿಕೆಗೆ ಉಪಯುಕ್ತವಾದವು ಕೂಡ ಭ್ರಮ ಪರಾಮರ್ಶ ಸಂಗತಿಗಳಲ್ಲಿ ಪ್ರವೇಶಿಸುವದರಿಂದ, ಆತರಹದ ವ್ಯಾವರ್ತಕತ್ವವು ಅಸತ್ಯದಲ್ಲಿ ಯುಕ್ತವಾಗಿರುತ್ತದೆ.

॥ तत् अभ्युपगमेन इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**एतादृशं दृश्यत्वं अङ्गीकृत्य पूर्वं विरुद्ध अनैकान्तिकत्वे अभिहिते, अतो न विरुद्धवाद विरोधः। विरुद्ध अनैकान्तिकत्व उक्ति विरोधो नास्ति इत्यर्थः।**

ಇಂತಹ ಮೇಲೆ ದೃಗ್ ವ್ಯಾವರ್ತಕಮಾತ್ರ ದೃಶ್ಯತ್ವ ಹೇತುವನ್ನು ಅಂಗೀಕರಿಸಿ ಪೂರ್ವದಲ್ಲಿ ವಿರುದ್ಧ, ಅನ್ಯೈಕಾಂತಿಕ ದೋಷಗಳನ್ನು ಪ್ರತಿಪಾದಿಸಿದಲಾಯಿತು. ಹೀಗೆ ಒಪ್ಪಿದ್ದರಿಂದ ವಿರುದ್ಧಾದಿಗಳಿಗೆ ವಿರೋಧ ಉಂಟಾಗುವದಿಲ್ಲ. ಅಂದರೆ ಹಿಂದೆ ಹೇಳಿದ ವಿರುದ್ಧ, ಅನ್ಯೈಕಾಂತಿಕತ್ವ ದೋಷಗಳನ್ನು ಪ್ರತಿಪಾದಿಸಿದ್ದಕ್ಕೆ ವಿರೋಧ ಬರುವದಿಲ್ಲ ಎಂದರ್ಥ.

**ननु प्रपञ्चमिथ्यात्व साधनाय मया उपन्यस्तं दृश्यत्वं न दृग्जनककरण सन्निकृष्टत्वरूपं विवक्षितम्, किन्तु भवद् उक्तरीत्या दृग्व्यावर्तकरूपं तत् उल्लेख्यत्वमेव। भवद्भिः अपि सत्यत्वे तदेव हेतुकर्तव्यम्। अन्यथा तेनैव हेतुना प्रतिरोधरूप प्रकरणसम अभिधान अयोगात्। न च अर्थभेदेऽपि**

शब्दैक्यमात्रेण प्रकरणसमता उक्त इति वाच्यम्। शब्दसाम्येन चेत् पृथिव्याः गोत्वात् शृङ्गं समापतेत्।

अतः सत्यत्व साधकस्य दृग्व्यावर्तकरूपं यद् उल्लेख्यत्वं तद् रूपस्य दृश्यत्वस्य शुक्तिरूप्ये सत्वात् व्यभिचार प्राप्त एव इति चेत् न।

ಇಲ್ಲಿ ಒಂದು ಶಂಕೆಗೆ ಆಸ್ಪದವಿದೆ. ಅದನ್ನು ಹೀಗೆ ಹೇಳಬಹುದು: ಪ್ರಪಂಚ ಮಿಥ್ಯಾತ್ವವನ್ನು ಸಾಧಿಸುವ ಸಲ್ಲುವಾಗಿ ನಾವು (ಪರಪಕ್ಷದವರು) ಪ್ರತಿಪಾದಿಸಿದ ದೃಶ್ಯತ್ವ ಹೇತುವು ದೃಗ್ ಜನಕಕರಣ ಸನ್ನಿಕರ್ಷರೂಪವನ್ನು ವಿವಕ್ಷಿಸುವದಿಲ್ಲ. ಪರಂತು ತಾವು (ಸಿದ್ಧಾಂತಿಗಳು) ಹೇಳಿದ ರೀತಿಯಲ್ಲಿ ದೃಗ್ ವ್ಯಾವರ್ತಕರೂಪ ಅದರ ಉಲ್ಲೆಖ್ಯರೂಪವಾದದ್ದೆ ಆಗಿರುತ್ತದೆ. ತಾವು (ಸಿದ್ಧಾಂತಿಗಳು) ಕೂಡ, ಪ್ರಪಂಚ ಸತ್ಯವನ್ನು ಸಾಧಿಸುವ ಅನುಮಾನದಲ್ಲಿ ಕೂಡ ಅದನ್ನೆ ಹೇತುವೆಂದು ಅಂಗೀಕರಿಸಬೇಕು. ಅನ್ಯಥಾ ನಾವು (ಪರಪಕ್ಷದವರು) ಹೇಳಿದ ಹೇತುವಿನಿಂದಲೇ ಪ್ರತಿರೋಧರೂಪ ಪ್ರಕರಣಸಮ ಎಂಬ ಅಭಿಧಾನವು ಅಯೋಗ್ಯವೆನಿಸುತ್ತದೆ. ಅರ್ಥದ ಭೇದವಿದ್ದರೂ ಶಬ್ದೈಕ್ಯಮಾತ್ರದಿಂದ ಪ್ರಕರಣಸಮ ದೋಷ ಉಂಟಾಗುತ್ತದೆ ಎಂದು ಹೇಳುವದು ಸರಿಯಲ್ಲ. ಶಬ್ದಸಾಮ್ಯದಿಂದ ಪ್ರಕರಣಸಮ ದೋಷವನ್ನು ಹೇಳುವುದಾದರೆ, ಪೃಥಿವಿಯು ಗೋವಿನಲ್ಲಿರುವ ಗುಣದಿಂದ ಕೂಡಿದ್ದರಿಂದ ಅದಕ್ಕೆ ಶೃಂಗ ಉಂಟಾಗಲಿ ಎಂದೆನ್ನಬೇಕಾಗುತ್ತದೆ.

ಆದ್ದರಿಂದ ಪ್ರಪಂಚ ಸತ್ಯತ್ವ ಸಾಧಿಸುವದಕ್ಕೆ, ದೃಗ್ ವ್ಯಾವರ್ತಕರೂಪ ಅಂದರೆ ಯಾವದು ಉಲ್ಲೆಖ್ಯರೂಪವಾಗಿದೆಯೊ ಅಂತಹ, ದೃಶ್ಯತ್ವದ ಶುಕ್ತಿರೂಪ್ಯದಲ್ಲಿ ಸತ್ಯವಾಗುವದರಿಂದ, ವ್ಯಭಿಚಾರ ಪ್ರಾಪ್ತವಾಗುತ್ತದಲ್ಲ ಎಂದರೆ? ಹಾಗೆ ಹೇಳುವದು ಸರಿಯಲ್ಲ.

अस्मद् अनुमाने व्यभिचार दानाय, दृश्यत्व अस्मद् उक्तरीत्या निर्वचन अङ्गीकारे ब्रह्मणि अपि एतादृश दृश्यत्वस्य सद्भावेन व्यभिचार प्राप्त्या मिथ्यात्व साधनाय हेतुकर्तुं अशक्यत्वात् इति आलोचनीयम्।

ನಮ್ಮ(ಸಿದ್ಧಾಂತಿಗಳ) ಅನುಮಾನದಲ್ಲಿ ವ್ಯಭಿಚಾರ ದಾನಮಾಡುವದಕ್ಕಾಗಿ, ನಮ್ಮಿಂದ (ಸಿದ್ಧಾಂತಿಗಳಿಂದ) ಪ್ರತಿಪಾದಿಸಿದ ರೀತಿಯಲ್ಲಿ ದೃಶ್ಯತ್ವವನ್ನು ತಾವು (ಪರಪಕ್ಷದವರು) ಅಂಗೀಕರಿಸಿದರೆ, ಬ್ರಹ್ಮನಲ್ಲಿ ಕೂಡ ಅಂತಹ ದೃಶ್ಯತ್ವದ ಇರುವಿಕೆಯಿಂದ, ವ್ಯಭಿಚಾರ ಪ್ರಾಪ್ತವಾಗಿ, ಅದನ್ನು ಪ್ರಪಂಚ ಮಿಥ್ಯಾತ್ವ ಸಾಧಿಸುವ ಹೇತುವೆಂದು ತೆಗೆದುಕೊಳ್ಳಲು ಅಶಕ್ಯವಾಗುತ್ತದೆ ಎಂದು ಕೂಡ ತಾವು (ಪರಪಕ್ಷದವರು) ಆಲೋಚಿಸಬೇಕು.

## ॥ ननु अनैकान्त्यं इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

विमतं मिथ्या दृश्यत्वात् इति अनुमानस्य, विमतं सत्यं दृश्यत्वात् इति तेनैव हेतुना प्रकरणसमरूप यत् प्रतिरोध अनुमानम्। तत्र दूष्य अनुमाने, ब्रह्मणो विपक्षत्वेन तत्र दृश्यत्व सद्भावात् अनैकान्तिकत्वं आयाति। तस्यैव ब्रह्मणः प्रकरणसम अनुमाने, सपक्षत्वात् तत् वृत्तित्वं दृश्यत्वस्य वक्तव्यम्।



विमतं मिथ्या दृश्यत्वात् ಎಂಬ ದೂಷ್ಯ ಅನುಮಾನದ, विमतं सत्यं दृश्यत्वात् ಎಂದು ಅದರ ಹೇತುವಿನಿಂದಲೇ ಯಾವ ಪ್ರಕರಣಸಮರೂಪ ದೋಷವನ್ನು ಹೇಳಲಾಯಿತು ಅದು ಪ್ರತಿರೋಧ ಅನುಮಾನವಾಗಿರುತ್ತದೆ. ಅಲ್ಲಿ ದೂಷ್ಯ ಅನುಮಾನದಲ್ಲಿ ಬ್ರಹ್ಮನು ವಿಪಕ್ಷವಾಗಿರುವದರಿಂದ ಅಲ್ಲಿ ದೃಶ್ಯತ್ವ ಇರುವದಾದರಿಂದ ಅನೈಕಾಂತಿಕತ್ವ ಹೇತುದೋಷ ಬರುತ್ತದೆ. ಅದೇ ಬ್ರಹ್ಮನು ಪ್ರಕರಣಸಮ ಅನುಮಾನದಲ್ಲಿ ಸಪಕ್ಷವಾಗುವದರಿಂದ, ಅವನಿಗೆ ದೃಶ್ಯತ್ವದ ವೃತ್ತಿತ್ವವನ್ನು ಹೇಳಬೇಕು.

तथा च दूष्य अनुमाने, हेतोः विपक्ष वृत्तित्वं विना, सत्प्रतिपक्ष अनुमाने सपक्ष वृत्तित्वं न उपपद्यत इति, दूष्य अनुमाने अनैकान्तिकत्वं प्रकरणसम अनुमानस्य उपजीव्यम्।

तथा दूष्य अनुमाने, सपक्षीभूतस्य शुक्तिरजतरूप दृष्टान्तस्य साधन वैकल्ये प्राप्ते, प्रकरणसम अनुमाने, तस्य विपक्षतया हेतोः तत् व्यावृत्ति सिध्यति।

ಹಾಗೆಯೆ ದೂಷ್ಯ ಅನುಮಾನದಲ್ಲಿ, ಹೇತುವಿನ ವಿಪಕ್ಷ ವೃತ್ತಿತ್ವವಿಲ್ಲದೆ, ಸತ್ ಪ್ರತಿಪಕ್ಷ ಅನುಮಾನದಲ್ಲಿ ಸಪಕ್ಷ ವೃತ್ತಿತ್ವವನ್ನು ಸಮರ್ಥಿಸಲಾಗುವದಿಲ್ಲ ಎಂದು, ದೂಷ್ಯ ಅನುಮಾನದಲ್ಲಿ ಅನೈಕಾಂತಿಕತ್ವವು ಪ್ರಕರಣಸಮ ಅನುಮಾನದ ಉಪಜೀವ್ಯವಾಗುತ್ತದೆ. ಹಾಗೆಯೆ ದೂಷ್ಯ ಅನುಮಾನದಲ್ಲಿ ಸಪಕ್ಷೀಭೂತವಾದ ಶುಕ್ತಿರಜತರೂಪ ದೃಷ್ಟಾಂತಕ್ಕೆ ಸಾಧನ ವೈಕಲ್ಯ ಪ್ರಾಪ್ತವಾಗಲು, ಪ್ರಕರಣಸಮ ಅನುಮಾನದಲ್ಲಿ ಅದರ ವಿಪಕ್ಷವಾಗಿರುವ ಹೇತುವಿಗೆ ಅದರ ವ್ಯಾವೃತ್ತಿ (ಇಲ್ಲದಿರುವಿಕೆ) ಸಿದ್ಧವಾಗುತ್ತದೆ.

अतो दूष्य अनुमाने, दृष्टान्तस्य साध्यवैकल्यं विना प्रकरणसम अनुमानस्य विपक्षात् व्याविर्तिः न सिध्यति इति, दूष्य अनुमाने दृष्टान्तस्य साधनवैकल्यं प्रकरणसम अनुमानस्य उपजीव्यं इति अनैकान्त्य साधन वैकल्याभ्याम् एव अलम्। मिथ्यात्व अनुमानस्य दुष्टत्वं अस्तु इतियावत्। किम् अनेन प्रकरणसम कथनेन इत्यर्थः।

ಆದ್ದರಿಂದ ದೂಷ್ಯ ಅನುಮಾನದಲ್ಲಿ, ದೃಷ್ಟಾಂತದ ಸಾಧ್ಯವೈಕಲ್ಯ ದೋಷವಿಲ್ಲದೆ ಪ್ರಕರಣಸಮ ಅನುಮಾನದ ವಿಪಕ್ಷದಿಂದ ವ್ಯಾವೃತ್ತಿ (ಅಂದರೆ ವಿಪಕ್ಷದಲ್ಲಿ ಇಲ್ಲದಿರುವಿಕೆ) ಸಿದ್ಧವಾಗುವದಿಲ್ಲ ಎಂದು, ದೂಷ್ಯ ಅನುಮಾನದಲ್ಲಿ ದೃಷ್ಟಾಂತದ ಸಾಧನ ವೈಕಲ್ಯವು ಪ್ರಕರಣಸಮ ಅನುಮಾನದ ಉಪಜೀವ್ಯವಾಗುತ್ತದೆ. ಆದ್ದರಿಂದ ದೂಷ್ಯ ಅನುಮಾನಕ್ಕೆ ಅನೈಕಾಂತ್ಯ ಮತ್ತು ಸಾಧನ ವೈಕಲ್ಯ ದೋಷಗಳನ್ನು ಹೇಳಿದ್ದು ಸಾಕಾಗಿತ್ತು. ಅಂದರೆ ಮಿಥ್ಯಾತ್ವ ಅನುಮಾನಕ್ಕೆ ಅನೈಕಾಂತಿಕ, ಸಾಧನ ವೈಕಲ್ಯ ದೋಷಗಳು ಇರಲಿ. ಮತ್ತೆ ಏಕೆ ಪ್ರಕರಣಸಮ ದೋಷ ಹೇಳಬೇಕಾಗಿತ್ತು?

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

एतत् अनुमाने सपक्षस्य ब्रह्मणो, दूष्य अनुमान विपक्षत्वात् "अस्य सपक्ष वृत्तित्वं दूष्य अनुमानस्य विपक्षवृत्तित्वं विना न उपपद्यते" इति दूष्य अनुमान अनैकान्तिकत्वं अस्य उपजीव्यम्।

ಮೂಲದಲ್ಲಿ ಪ್ರತಿಪಾದಿಸಿದ ಪ್ರಪಂಚ ಸತ್ಯತ್ವದ ಅನುಮಾನದಲ್ಲಿ ಸಪಕ್ಷವಾದ ಬ್ರಹ್ಮನು, ದೂಷ್ಯ ಅನುಮಾನದ ವಿಪಕ್ಷವಾದ್ದರಿಂದ " ಬ್ರಹ್ಮನ ಸಪಕ್ಷ ವೃತ್ತಿತ್ವವು ದೂಷ್ಯ ಅನುಮಾನದ ವಿಪಕ್ಷವೃತ್ತಿತ್ವವಿಲ್ಲದೆ ಸಮರ್ಥಿಸಲು ಸಾಧ್ಯವಾಗುವದಿಲ್ಲ." ಎಂದು ದೂಷ್ಯ ಅನುಮಾನದ ಅನೈಕಾಂತಿಕತ್ವ ದೋಷವು ಈ ಪ್ರಕರಣಸಮ ಅನುಮಾದ ಉಪಜೀವ್ಯವಾಗಿರುತ್ತದೆ.

तथा "एतत् अनुमान विपक्षस्य शुक्तिरूप्यस्य, दूष्य अनुमान दृष्टान्ततया अस्य विपक्षात् व्यावृत्तिः दूष्य अनुमान दृष्टान्तस्य साधन वैकल्यं विना न उपपद्यते" इति दूष्य अनुमान दृष्टान्त साधन वैकल्यं अस्य उपजीव्यं इत्यर्थः।

ಹಾಗೆಯೆ, "ಪ್ರಪಂಚ ಸತ್ಯತ್ವದ ವಿಪಕ್ಷವಾದ ಶುಕ್ತಿರೂಪ್ಯವು, ದೂಷ್ಯ ಅನುಮಾನ ದೃಷ್ಟಾಂತವಾಗಿ, ಈ ಪ್ರಕರಣಸಮ ಅನುಮಾನದ ವಿಪಕ್ಷದಿಂದ್ ವ್ಯಾವೃತ್ತಿಯು, ದೂಷ್ಯ ಅನುಮಾನದ ದೃಷ್ಟಾಂತದ ಸಾಧನ ವೈಕಲ್ಯ ದೋಷವಿಲ್ಲದೆ ಸಮರ್ಥಿಸಲು ಸಾಧ್ಯವಾಗುವದಿಲ್ಲ." ಎಂದು ದೂಷ್ಯ ಅನುಮಾನದ ದೃಷ್ಟಾಂತ ಸಾಧನ ವೈಕಲ್ಯ ದೋಷವು ಈ ಪ್ರಕರಣಸಮ ಅನುಮಾನದ ಉಪಜೀವ್ಯವಾಗಿರುತ್ತದೆ ಎಂದರ್ಥ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

ननु अनैकान्त्यं इत्यादिको ग्रन्थश्च चिरन्तन टीकानायां एव स्पष्टः। तत् एव अनुसन्धेयः।

ಟೀಕೆಯಲ್ಲಿಯ ಅನೈಕಾಂತ್ಯ ಇತ್ಯಾದಿ ಗ್ರಂಥದ ವ್ಯಾಖ್ಯಾನವು ಶ್ರೀವ್ಯಾಸತೀರ್ಥರ ಮಂದಾರ ಮಂಜರಿ ಟಿಪ್ಪಣಿಯಲ್ಲಿಯೇ ಸ್ಪಷ್ಟವಾಗಿರುತ್ವದರಿಂದ, ಅಭ್ಯಾಸಕರು ಅದನ್ನೇ ಮನನ ಮಾಡಬೇಕು ಅಥವಾ ಅನುಸಂಧಿಸಬೇಕು.

## ॥ तथा सति इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

यो दोषो यद्दोष उपजीवनेन प्रवर्तते तस्यैव दोषत्वेन गणनां कृत्वा स एव वक्तव्यो न तद् उपजीवी अन्य इति अङ्गीकारे अतिप्रसङ्गं आह– तथा सति इति॥

ಯಾವ ದೋಷವು, ಯಾವ ಉಪಜೀವ ದೋಷದಿಂದ ಪ್ರವರ್ತಿಸುತ್ತದೋ ಅದನ್ನೆ ದೋಷವೆಂದು ಗಣನೆ ಮಾಡಿ, ಆ ಉಪಜೀವಿ ದೋಷವನ್ನೇ ದೋಷವೆಂದು ಹೇಳಬೇಕು, ವಿನಹಾ ಬೇರೆದ್ದು ಅಲ್ಲ ಎಂದು ಅಂಗೀಕರಿಸಿದರೆ, ಅತಿಪ್ರಸಂಗ ಅಥವಾ ಅತಿಶಯೊಕ್ತಿ ಉಂಟಾಗುತ್ತದೆ ಎಂದು ಈ ಟೀಕಾವಾಕ್ಯ ಹೇಳುತ್ತದೆ.

अनैकान्तिको द्विविधः। साधारण अनैकान्तिकः असाधारण अनैकान्तिकश्च इति। पक्षादि त्रय वृत्तित्व हेतुः साधारण अनैकान्तिकः। पक्षमात्रवृत्ति हेतुः असाधारण अनैकान्तिकः। तत्र "शब्दो नित्यः प्रमेयत्वात्" इत्यत्र प्रमेयत्व हेतोः विपक्षभूत गगनादि वृत्तित्वे अनैकान्तिकत्व प्राप्ते सति, तत्र साध्यवैकल्यं प्राप्तमेव।



तथा "भूः नित्या गन्धवत्त्वात्" इत्यत्र गन्धवत्त्वस्य पक्षवृत्तित्वे सपक्षे गगनादि वृत्तित्वेन अनैकान्तिकत्व प्राप्ते सति, तत्र साध्यवैकल्य प्राप्तमेव।

तथा "भूः नित्या गन्धवत्त्वात्" इत्यत्र गन्धत्वस्य पक्षवृत्तित्वेन गगनादौ असत्व प्राप्त्या साधनवैकल्यं प्राप्तमेव।

इत्येवं साधारण अनैकान्तिकत्वादिरूपं हेतुदोषं आश्रित्यैव साध्य वैकल्यादिरूप दृष्टान्त दोषोऽपि प्रवृत्तेः, हेतुदोषेण एव अलं किम् दृष्टान्तदोषेण इति दृष्टान्तदोषोऽपि अनुपसङ्ख्येय स्यात्। पृथक गणनीयो न स्यात्। न चेष्टापत्तिः। भास सर्वज्ञादिभिः पृथक् उपसंख्यातत्वात् इति भावः।

ಇಲ್ಲಿ ಅತಿಪ್ರಸಂಗವನ್ನು ಹೀಗೆ ವಿವರಿಸಬಹುದು: ಅನೈಕಾಂತಿಕ ದೋಷವು ಎರಡು ವಿಧದ್ದಾಗಿರುತ್ತದೆ. ಸಾಧಾರಣ ಅನೈಕಾಂತಿಕ ಮತ್ತು ಅಸಾಧಾರಣ ಅನೈಕಾಂತಿಕವೆಂದು. ಪಕ್ಷತ್ರಯ(ಪಕ್ಷ, ಸಪಕ್ಷ ಮತ್ತು ವಿಪಕ್ಷ)ಗಳಲ್ಲಿ ವೃತ್ತಿತ್ವವಿರುವ ಹೇತುವು ಸಾಧಾರಣ ಅನೈಕಾಂತಿಕ ದೋಷಗ್ರಸ್ತ ವೆನಿಸುತ್ತದೆ. ಪಕ್ಷಮಾತ್ರದಲ್ಲಿ ವೃತ್ತಿತ್ವವಿರುವ ಹೇತುವು ಅಸಾಧಾರಣ ದೋಷಗ್ರಸ್ತವೆನಿಸುತ್ತದೆ. ಅಲ್ಲಿ "शब्दो नित्यः प्रमेयत्वात्" ಎಂಬ ಅನುಮಾನದಲ್ಲಿ, ಪ್ರಮೆಯತ್ವ ಹೇತುವಿಗೆ ವಿಪಕ್ಷಭೂತ ಗಗನಾದಿಗಳಲ್ಲಿ ವೃತ್ತಿತ್ವ ಇರುವದರಿಂದ ಅನೈಕಾಂತಿಕ ದೋಷ ಪ್ರಾಪ್ತವಾದರೂ, ಅಲ್ಲಿ ಸಾಧ್ಯವೈಕಲ್ಯದೋಷ ಕೂಡ ಪ್ರಾಪ್ತವಾಗುತ್ತದೆ.

ಹಾಗೆಯೆ "भूः नित्या गन्धवत्त्वात्" ಎಂಬ ಅನುಮಾನದಲ್ಲಿ ಹೇತುವಾದ ಗಂಧತ್ವದ ಪಕ್ಷದಲ್ಲಿ ವೃತ್ತಿತ್ವ ಮತ್ತು ಸಪಕ್ಷವೆನಿಸಿದ ಗಗನಾದಿಗಳಲ್ಲಿ ವೃತ್ತಿತ್ವದಿಂದ ಅನೈಕಾಂತಿಕತ್ವ ಪ್ರಾಪ್ತವಾದರೂ ಅಲ್ಲಿ ಸಾಧ್ಯವೈಕಲ್ಯ ದೋಷ ಕೂಡ ಪ್ರಾಪ್ತವಾಗುತ್ತದೆ.

ಹಾಗೆಯೆ "भूः नित्या गन्धवत्त्वात्" ಎಂಬ ಅನುಮಾನದಲ್ಲಿ ಗಂಧತ್ವದ ಪಕ್ಷವೃತ್ತಿತ್ವದಿಂದ ಗಗನಾದಿಗಳಲ್ಲಿ ಅಸತ್ವ ಪ್ರಾಪ್ತವಾಗಿ ಸಾಧನವೈಕಲ್ಯ ದೋಷ ಕೂಡ ಪ್ರಾಪ್ತವಾಗುತ್ತದೆ.

ಈ ರೀತಿಯಾಗಿ, ಸಾಧಾರಣ ಅನೈಕಾಂತ್ಯಾದಿರೂಪ ಹೇತುದೋಷಗಳನ್ನು ಆಶ್ರಯಿಸಿಕೊಂಡೆ ಸಾಧ್ಯವೈಕಲ್ಯಾದಿರೂಪ ದೃಷ್ಟಾಂತ ದೋಷಗಳು ಕೂಡ ಪ್ರವೃತ್ತವಾಗಿರುತ್ತವೆ. ಇಲ್ಲಿ ಕೂಡ ಹೇತುದೋಷ ಹೇಳಿದ್ದೆ ಸಾಕು, ಮತ್ತೆಕೆ ದೃಷ್ಟಾಂತ ದೋಷಗಳನ್ನು ಹೇಳಬೇಕು? ಅದರಂತೆ ಇಲ್ಲಿ ದೃಷ್ಟಾಂತ ದೋಷಗಳನ್ನು ಕೂಡ ಬೇರೆ ದೋಷಗಳೆಂದು ಗಣನೆಗೆ ತೆಗೆದು ಕೋಳ್ಳಬಾರದು ಎಂಬ ಪ್ರಸಂಗ ಉಂಟಾಗುವದು. ಇದು ಇಷ್ಟವಾದದ್ದು ಆಗುವದಿಲ್ಲ. ಹಾಗೂ ಭಾಸ, ಸರ್ವಜ್ಞಾದಿಗಳು ದೃಷ್ಟಾಂತ ದೋಷಗಳನ್ನು ಪ್ರತ್ಯೆಕವಾದ ದೋಷಗಳೆಂದು ಗಣಿಸಿರುತ್ತಾರೆ.

## ॥ हेतु दोषं इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

साध्य वैकल्यं हि दृष्टान्तस्य साधरण अनैकान्तिकताम् आश्रित्य प्रवर्तते। साध्य विकल दृष्टान्तस्यैव विपक्षतया तत् वृत्तेः हेतोः अनैकान्तिकता अवश्यंभावात्।

साधन वैकल्यं तु असाधारण अनैकान्तिकत्वं आश्रित्य प्रवर्तते। दृष्टान्ते साधन अभावे विपक्षादिव सपक्षादपि व्यावृत्ति अवश्यंभावात् इत्यादेः इति भावः।

ಅಂದರೆ, ದೃಷ್ಟಾಂತದ ಸಾಧ್ಯ ವೈಕಲ್ಯ ದೋಷವು ಸಾಧಾರಣ ಅನೈಕಾಂತಿಕ ಹೇತು ದೋಷವನ್ನು ಆಶ್ರಯಿಸಿ ಪ್ರವರ್ತಿಸುತ್ತದೆ. ಇನ್ನು ದೃಷ್ಟಾಂತದ ಸಾಧ್ಯ ವಿಕಲವು ಅದರ ವಿಪಕ್ಷ ವೃತ್ತಿತ್ವದಿಂದ ಹೇತುವಿನ ಅನೈಕಾಂತಿಕತ್ವವು ಆವಶ್ಯಕಾವಾಗಿರುತ್ತದೆ. ದೃಷ್ಟಾಂತದ ಸಾಧನ ವೈಕಲ್ಯವಾದರು ಹೇತುವಿನ ಅಸಾಧಾರಣ ಅನೈಕಾಂತಿಕತ್ವವನ್ನು ಅವಲಂಬಿಸಿ ಪ್ರವತಿಸುತ್ತದೆ. ದೃಷ್ಟಾಂತದಲ್ಲಿ ಸಾಧನ ಇಲ್ಲದಾಗ ವಿಪಕ್ಷಾದಿಯಂತೆ ಸಪಕ್ಷದಿಂದ ವ್ಯಾವೃತ್ತಿಯು ಆವಶ್ಯಕವಾಗುತ್ತದ ಎಂದು ಮುಂತಾಗಿ, ಎಂಬ ಭಾವ ವಿರುತ್ತದೆ.

## ॥ सोऽपि अनुपसङ्ख्येयः स्यात् इति॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

उपसंख्यातश्च भास सर्वज्ञादिभिः इति शेषः। नैयायिक एकदेशिभिः उदाहरण आभासः पृथक् न उपसंख्यातः। तान् प्रति व्याप्यत्व असिद्धिं अनाश्रित्य विरुद्धादि अप्रवृत्तेः, विरुद्धादि अपि न पृथक् उपसंख्येयं स्यात् इति वक्तव्यम्।

ಟೀಕೆಯಲ್ಲಿಯ ಈ ವಾಕ್ಯದ ನಂತರ उपसंख्यातश्च भास सर्वज्ञादिभिः इति ಎಂಬ ವಾಕ್ಯವನ್ನು ಸೇರಿಸಬೇಕು. ಈ ತರಹದ ಒಂದು ದೋಷದ ಮೇಲೆ ತನ್ನ ಪ್ರವೃತ್ತಿಗಾಗಿ ಅವಲಂಬಿಸಿದ ದೋಷಗಳನ್ನು ಭಾಸ ಸರ್ವಜ್ಞಾದಿಗಳು ಪ್ರತೇಕವಾದ ದೋಷವೆಂದು ಪರಿಗಣಿಸಿದ್ದಾರೆ ಎಂದರ್ಥ. ನೈಯಾಯಿಕರಲ್ಲಿಯ ಒಂದು ಪಂಗಡ, ಉದಾಹಾರಣೆ, ಆಭಾಸ ಗಳನ್ನು ಪ್ರತ್ಯೇಕ ಅನುಮಾನದ ದೋಷಗಳನ್ನಾಗಿ ಗಣಿಸುವದಿಲ್ಲ. ಅವರ ಪ್ರತಿ, ವ್ಯಾಪ್ಯತ್ವ ಅಸಿದ್ಧಿಯನ್ನು ಅವಲಂಬಿಸದೆ ವಿರುದ್ಧಾದಿ ದೋಷಗಳು ಪ್ರವರ್ತಿಸುವದಿಲ್ಲ, ಅದರಂತೆ ವಿರುದ್ಧಾದಿಗಳನ್ನು ಕೂಡ ಪ್ರತ್ಯೇಕವಾಗಿ ಪರಿಗಣಿಸಬಾರದು ಎಂದು ಹೇಳಬೇಕು.

## ॥ स्फुटप्रतिभास इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

ननु उक्तरीत्या हेतुदोषाश्रयेण दृष्टान्तदोष प्रवृत्तौ अपि दृष्टान्त दोषस्यैव आदौ स्फुटं प्रतिभासमानत्वात् तस्यैव परिग्रहः न हेतुदोषस्य इति चेत् समं प्रकृतेऽपि।

उक्तरीत्या अनैकान्त्यादि आश्रयणेन प्रकरणसम प्रवृत्तौ अपि, प्रकरणसमरूप दोषस्यैव आदौ स्फुटं प्रतिभासमानत्वात् स एव उक्त इत्यभिप्रेत्य आह– स्फुटप्रतिभास इति॥

ಅಂದರೆ, ಹೇಳಿದ ರೀತಿಯಲ್ಲಿ ಹೇತುದೋಷಾಶ್ರಯಣದಿಂದ ದೃಷ್ಟಾಂತ ದೋಷಗಳು ಪ್ರವೃತ್ತವಾಗಿದ್ದರೂ ದೃಷ್ಟಾಂತ ದೋಷಗಳೆ ಮೊದಲನೆಯಗಳನ್ನು ಸ್ಫುಟವಾಗಿ ಪ್ರಕಾಶಕ್ಕೆ ತರುವಂತಹಗಳಾಗಿದ್ದರಿಂದ ಅವುಗಳನ್ನೆ ಪರಿಗ್ರಹಿಸಬೇಕು ವಿನಹಾ ಹೇತುದೋಷಗಳನ್ನಲ್ಲ ಎಂದರೆ?, ಅದರಂತೆಯೆ ಪ್ರಕೃತದಲ್ಲಿ ಕೂಡ ಎಂದು ಪ್ರತಿ ಉತ್ತರವಾಗಿರುತ್ತದೆ.



ಈಗ ಹೇಳಿದಪ್ರಕಾರ ಅನೈಕಾಂತ್ಯಾದಿ ಆಶ್ರಯದಿಂದ ಪ್ರಕರಣಸಮ ಪ್ರವೃತ್ತವಾದರೂ ಪ್ರಕರಣಸಮರೂಪ ದೋಷವೆ ಮೊದಲಿನ ದೋಷಗಳನ್ನು ಸ್ಫುಟವಾಗಿ ಪ್ರಕಾಶಿಸುವದರಿಂದ, ಹಿಂದಿನ ವಾಕ್ಯದ ಅಭಿಪ್ರಾಯವನ್ನೆ ಇಲ್ಲಿ ಕೂಡ ತೆಗೆದುಕೊಳ್ಳಬೇಕು ಎಂದು ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ.

## ॥ वस्तुतस्तु न इयं इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

आचार्यमते असिद्धि अव्याप्त्योः एव हेतुदोषत्वात् इति भावः।

ವಸ್ತುತಃ ಆಚಾರ್ಯರ ಮತದಲ್ಲಿ ಅಸಿದ್ಧಿ, ಅವ್ಯಾಪ್ತಿಗಳೇ ಹೇತು ದೋಷಗಳಾಗಿರುತ್ತವೆ ಎಂಬ ಭಾವವಿರುತ್ತದೆ.

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

बाध प्रकरणसमयोः हेतुदोषत्व उक्तिः आचार्य प्रक्रिया तत् सिद्धान्तो न भवति इत्यर्थः।

ಅಂದರೆ, ಬಾಧ, ಪ್ರಕರಣಸಮಯಗಳು ಹೇತುದೋಷಗಳು ಎಂಬ ಉಕ್ತಿಯು ಶ್ರೀಮದಾಚಾರ್ಯರ ಪ್ರಕ್ರಿಯಾ ಅಥವಾ ಅವರ ಸಿದ್ಧಾಂತವಾಗಿರುವದಿಲ್ಲ.

असिद्धि अव्याप्तेः हेतु दोषत्वात्। बाध सत्प्रतिपक्षयोः प्रतिज्ञा दोषत्वेन हेतुदोषत्व अभावात् इति भावः।

ಅಸಿದ್ಧಿ ಮತ್ತು ಅವ್ಯಾಪ್ತಿಗಳು ಹೇತುದೋಷಗಳಾಗಿವೆ. ಬಾಧ ಮತ್ತು ಸತ್ ಪ್ರತಿಪಕ್ಷ ದೋಷಗಳು ಪ್ರತಿಜ್ಞಾ ದೋಷಗಳಾಗಿರುವದರಿಂದ, ಅವು ಹೇತು ದೋಷಗಳಾಗುವದಿಲ್ಲ ಎಂಬ ಭಾವವಿರುತ್ತದೆ.

## ॥ विरुद्ध इति ॥

ननु स्वप्रक्रिया अभावे, आचार्यणां तदुक्तिः व्यर्थ इत्यत आह– विरुद्ध इति॥

ಸ್ವಪ್ರಕ್ರಿಯಾದ ಅಭಾವತೆಯಲ್ಲಿ ಶ್ರೀಮದಾಚಾರ್ಯರ ಉಕ್ತಿಗಳು ವ್ಯರ್ಥವೆನಿಸುವವು ಎಂಬ ಶಂಕೆಯನ್ನು ಪರಿಹರಿಸಲು ಈ ಟೀಕಾವಾಕ್ಯವಿರುತ್ತದೆ.

विरुद्ध अनैकान्तिकयोः यथा हेतुदोषत्वं, एवं बाध सत्प्रतिपक्षौ अपि तद्दोषौ इति परिकल्पितरीतिः तथा इत्यर्थः। तेन विरुद्ध अनैकान्तिकयोः कथं पररीत्या कल्पितत्वं इति शंकानवकाशः।

ವಿರುದ್ಧ ಅನೈಕಾಂತಿಕಗಳನ್ನು ಹೇತು ದೋಷಗಳೆಂದು ಹೇಳಲಾಯಿತೊ, ಅದೇರೀತಿಯಲ್ಲಿ, ಬಾಧ, ಸತ್ ಪ್ರತಿಪಕ್ಷ ಮುಂತಾದ ದೋಷಗಳನ್ನು ಕೂಡ ಪರಿಕಲ್ಪಿತರೀತಿಯಲ್ಲಿಯೆ ಹೇಳಲಾಯಿತು. ಇದರಿಂದ ವಿರುದ್ಧ ಅನೈಕಾಂತಿಕಗಳು ಹೇಗೆ ಪರರೀತ್ಯ ಕಲ್ಪಿತವಾದವುಗಳಾದವು ಎಂಬ ಶಂಕೆಗೆ ಆಸ್ಪದವಿರುವದಿಲ್ಲ.

आचार्य प्रक्रिया तु इत्थं–

ಶ್ರೀಮದಾಚಾರ್ಯರ ಪ್ರಕ್ರಿಯಾ ಹೀಗಿರುತ್ತದೆ:

त्रिविध अनुमान विरोधः। प्रतिज्ञाविरोध, हेतुविरोध, दृष्टान्तविरोध भेदेन। प्रतिज्ञाविरोधः द्विविधः। प्रमाणविरोधः स्ववचनविरोधश्च। प्रमाणविरोधः अपि द्विविधः। प्रबलप्रमाण विरोधः सबलप्रमाण

**विरोधश्च। समबलप्रमाण विरोधः अपि द्विविधः। तेनैव हेतुना हेत्वन्तरेण च इति। हेतु विरोधोपि द्विविधः। असिद्धिः अव्याप्तिश्च। अव्याप्तिः त्रिविधः। लिङ्गस्य साध्येन तत् अभावेन च सम्बन्धः, साध्यसम्बन्ध अभावे सति तत् अभावेन एव सम्बन्धः, उभय सम्बन्ध अभावश्च इति।**

ಅನುಮಾನದ ವಿರೋಧಗಳು ಮೂರುವಿಧವಾಗಿರುತ್ತವೆ. ಪ್ರತಿಜ್ಞಾವಿರೋಧ, ಹೇತುವಿರೋಧ ಮತ್ತು ದೃಷ್ಟಾಂತವಿರೋಧಗಳೆಂದು. ಪ್ರತಿಜ್ಞಾ ವಿರೋಧವು ಎರಡುವಿಧವಾಗಿರುತ್ತವೆ. ಪ್ರಮಾಣವಿರೋಧ ಮತ್ತು ಸ್ವವಚನ ವಿರೋಧಗಳೆಂದು. ಪ್ರಮಾಣವಿರೋಧ ಕೂಡ ಎರಡು ಪ್ರಕಾರವುಳ್ಳದ್ದಾಗಿವೆ. ಪ್ರಬಲ ಪ್ರಮಾಣವಿರೋಧ ಮತ್ತು ಸಬಲಪ್ರಮಾಣವಿರೋಧವೆಂದು. ಸಬಲಪ್ರಮಾಣ ವಿರೋಧವು ಕೂಡ ಎರಡುವಿಧವಾಗಿರುತ್ತದೆ. ವಿರೋಧಿಸುವ ಅನುಮಾನದ ಹೇತುವಿಂದಲೇ ವಿರೋಧ ಮತ್ತು ಬೇರೆ ಹೇತುವಿನಿಂದ ವಿರೋಧವನ್ನು ಪ್ರಕಟಿಸುವದು. ಹೇತು ವಿರೋಧವು ಕೂಡ ಎರಡು ವಿಧದ್ದಾಗಿದೆ. ಅಸಿದ್ಧಿ ಮತ್ತು ಅವ್ಯಾಪ್ತಿ ಎಂದು. ಅವ್ಯಾಪ್ತಿಯು ಮೂರು ಪ್ರಕಾರದ್ದಾಗಿದೆ. ಲಿಂಗದ ಸಾಧ್ಯ ಮತ್ತು ಅದರ ಅಭಾವದ ಜೊತೆಗಿನ ಸಂಬಂಧ, ಸಾಧ್ಯ ಸಂಬಂಧ ಇಲ್ಲದಾಗ ಸಾಧ್ಯ-ಅಭಾವತೆ ಜೊತೆ ಸಂಬಂಧ, ಮತ್ತು ಉಭಯ ಸಂಬಂಧ ಇಲ್ಲದ ಎಂದು.

**एवं प्रक्रिया सत्यामपि विरुद्ध अनैकान्तिक अनध्यवसितानां यथा पररीत्या उक्तिः। एवं कालात्ययापदिष्टः सत्प्रतिपक्षयोः अपि हेतुदोषत्वं परपरिकल्पितरीत्या एव अङ्गीकृत्या उक्तम्।**

ಈ ರೀತಿಯಾದ ಪ್ರಕ್ರಿಯಾ ಸತ್ಯವಾಗಿದ್ದರೂ, ವಿರುದ್ಧ, ಅನೈಕಾಂತಿಕ ಮತ್ತು ಅನಧ್ಯವಸಿತಗಳೆಂಬ ದೋಷಗಳನ್ನು ಪರರೀತೀಯಲ್ಲಿ ಪ್ರತಿಪಾದಿಸಲಾಯಿತೊ. ಅದರಂತೆಯೆ, ಕಾಲಾತ್ಯಯಾಪದಿಷ್ಟ, ಸತ್ ಪ್ರತಿಪಕ್ಷಗಳೆಂಬ ಹೇತು ದೋಷಗಳನ್ನು ಕೂಡ ಪರಪರಿಕಲ್ಪಿತ ರೀತಿಯನ್ನು ಅಂಗೀಕರಿಸಿಯೆ ಹೇಳಲಾಗಿದೆ.

**स्वसिद्धैः साधनं परसिद्धैः दूषणम्। स्वन्यायैः साधनं कार्यं परन्यायैः तु दूषणं इति भगवत्पादैः एव उक्तत्वात् इति द्रष्टव्यम्।**

ಸ್ವಸಿದ್ಧಾಂತವನ್ನು ಸಾಧಿಸುವದು ಮತ್ತು ಪರಸಿದ್ಧಾಂತವನ್ನು ದೂಷಿಸುವದು. ಅದರಂತೆ, ಸ್ವನ್ಯಾಯದಂತೆ ಸಾಧನವನ್ನು ಮಾಡಬೇಕು, ಪರನ್ಯಾಯದಿಂದಲೇ ದೂಷಿಸಬೇಕು ಎಂದು ಭಗವತ್ಪಾದರದೇ ವಚನವಿರುತ್ತದೆ ಎಂದು ತಿಳಿಯಬೇಕು.

### ७.२.२. प्रपञ्चमिथ्यात्व अनुमाने सप्रतिसाधनदोष उपपादनम्

प्रपञ्चमिथ्यात्वानुमानखण्डनम्

"विमतं सत्यं प्रमाणदृष्टत्वात् यदित्थं तत् तथा यथा आत्मा" इति प्रयोगात् सप्रतिसाधनः।



**"ವಿವಾದಾಸ್ಪದವಾದ ಜಗತ್ತು ಪ್ರಾಮಾಣಿಕವಾಗಿ ಅನುಭವಗೋಚರವಾದ್ದರಿಂದ ಸತ್ಯವಾಗಿದೆ. ಯಾವುದು ಪ್ರಾಮಾಣಿಕವಾಗಿ ಅನುಭವಗೋಚರವಾಗಿದೆಯೊ ಅದು ಸತ್ಯವಾಗಿರುತ್ತದೆ. ಉದಾಹರಣೆಗೆ ಆತ್ಮಾ" ಹೀಗೆ ಪ್ರಪಂಚ ಸತ್ಯತ್ವವನ್ನು ಸಾಧಿಸಬಹುದಾದ್ದರಿಂದ, ಮಿಥ್ಯಾತ್ವ ಅನುಮಾನಕ್ಕೆ ಸಪ್ರತಿಸಾಧನ ದೋಷವನ್ನು ಸಮರ್ಥಿಸಬಹುದಾಗಿದೆ.**

### श्रीपद्मनाभतीर्थीयटीका

**आत्मवत् जगत् सत्यत्व साधकेन प्रमाणदृष्टत्व श्रुतिः इत्यादिना सप्रतिसाधनत्वात् न मिथ्यात्वं दृश्यत्व हेतुः जगन्मिथ्यात्वं साधयति इत्याह- विमतं सत्यं प्रमाणदृष्टत्वात इति॥**

ಆತ್ಮನಂತೆ ಜಗತ್ ಸತ್ಯತ್ವವನ್ನು ಪ್ರಮಾಣದೃಷ್ಟತ್ವ ಶೃತಿ ಮುಂತಾದವುಗಳಿಂದ ಸಾಧಿಸುವದರಿಂದ, ಮಿಥ್ಯಾತ್ವ ಅನುಮಾನಕ್ಕೆ ಸಪ್ರತಿಸಾಧನವೆಂಬ ದೋಷಬರುತ್ತದೆ. ಆದ್ದರಿಂದ ದೃಶ್ಯತ್ವ ಹೇತುವು ಜಗತ್ ಮಿಥ್ಯಾತ್ವ ಸಾಧಕವಾಗುವದಿಲ್ಲ. ಅದನ್ನೇ ಈ ಶ್ರೀಮದಾಚಾರ್ಯರ ಮೂಲವಾಕ್ಯ ಸ್ಪಷ್ಟಪಡಿಸುತ್ತದೆ.

### ७.२.२.१ प्रपञ्चसत्यत्व अनुमाने प्रमाणपदकृत्यम्

ಇಲ್ಲಿ ಮೂಲದಲ್ಲಿ ಪ್ರತಿಪಾದಿಸಿದ ಪ್ರಪಂಚ ಸತ್ಯತ್ವ ಅನುಮಾನದಲ್ಲಿಯ ಪ್ರಮಾಣ ಪದದ ಪದಕೃತ್ಯಮಾಡಲಾಗುವದು.

### टीका

ननु अत्र दृष्टत्वमात्रस्य व्यभिचारः अस्ति न वा। आद्ये पूर्व अनुमानं असत् स्यात्। तत्र तन्मात्रस्य प्रयोगात्। द्वितीये प्रमाणविशेषण वैयर्थं इति।

मैवम्। प्रमाणदृष्टत्व पदेन प्रामाणिकत्वमात्रस्य अभिमतत्वात्। अथवा दृग् व्यावर्तकत्वमेव अत्र दृष्टत्वं अभिमतम्। तत् च शुक्तिरजतादौ अस्ति इति सफलं विशेषणम्।

ಇಲ್ಲಿ ಪ್ರಮಾಣದೃಷ್ಟತ್ವಾತ್ ದ ಪದಾರ್ಥವು ದೃಷ್ಟತ್ವ ಮಾತ್ರ ಪದಾರ್ಥದ ವ್ಯಭಿಚಾರವಾಗುತ್ತದೊ ಇಲ್ಲವೊ? ಮೊದಲನೆಯದು ಎನ್ನುವುದಾದರೆ, ಹಿಂದಿನ ಪ್ರಪಂಚ ಸತ್ಯತ್ವದ ಅನುಮಾನ ಅಸತ್ಯ ಎನ್ನಬೇಕಾಗುತ್ತದೆ. ಅಲ್ಲಿ ದೃಶ್ಯತ್ವಮಾತ್ರ ದ ಪ್ರಯೋಗವಿರುತ್ತದೆ. ಇನ್ನು ಎರಡನೆಯ ವಿಕಲ್ಪವನ್ನು ಹೇಳುವುದಾದರೆ, ಪ್ರಮಾಣ ಎಂಬ ವಿಶೇಷಣ ವ್ಯರ್ಥವೆನಿಸುತ್ತದೆ.

ಅದು ಹಾಗಿರುವದಿಲ್ಲ. ಇಲ್ಲೈ ಪ್ರಮಾಣ ದೃಷ್ಟತ್ವ ಪದದಿಂದ ಪ್ರಾಮಾಣಿಕವಾದುದು ಎಂಬದು ಮಾತ್ರ ಅಭಿಮತವಾಗಿರುತ್ತದೆ. ಅಥವಾ ದೃಗ್ ವ್ಯಾವರ್ತಕತ್ವವೆ ಇಲ್ಲಿ ದೃಷ್ಯತ್ವವಾಗಿರುತ್ತದೆಂಬ ಅಭಿಮತವಾಗಿರುತ್ತದೆ. ಅದು ಶುಕ್ತಿರಜತಾದಿಗಳಲ್ಲಿ ಇರುತ್ತದೆ. ಆದ್ದರಿಂದ ಪ್ರಮಾಣ ವಿಶೇಷಣವು ವ್ಯರ್ಥವಾಗುವದಿಲ್ಲ. ಅರ್ಥಪೂರ್ಣವೇ ಆಗಿರುತ್ತದೆ.

## टिप्पणीनाम् विशेषार्थानि

### ॥ विमतम् सत्यं इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**विमतं सत्यम् इति मूलस्य हेत्वन्तरेण प्रतिरोधं आह इति अवतारिकायाः स्पष्टत्वात् अनुक्तिः इति ज्ञातव्यम्।**

ಇಲ್ಲಿ विमतं सत्यम् ಶ್ರೀಮದಾಚಾರ್ಯರ ವಾಕ್ಯವು ಅನ್ಯ ಹೇತು ಅಥವಾ ಪ್ರಕಾರಾಂತರ ಹೇತುವಿನಿಂದ ಪ್ರತಿರೋಧ ದೋಷವನ್ನು ಹೇಳುತ್ತಿದೆ ಎಂದು ಈ ಪರಿಚ್ಛೆದದ ಅವತಾರಿಕೆಯಲ್ಲಿಯೆ ಸ್ಪಷ್ಟಪಡಿಸಿದ್ದರಿಂದ, ಟೀಕಾಕೃತ್ಪಾದರು ಅದರ ಬಗ್ಗೆ ಏನು ಹೇಳಲು ಹೋಗಿಲ್ಲ ಎಂದು ತಿಳಿಯತಕ್ಕದ್ದು.

### ॥ ननु अत्र इत्यादिना॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**हेतौ प्रमाणपद वैयर्थ्यं आशङ्क्य परिहरति– ननु अत्र इत्यादिना॥**

ಇಲ್ಲಿ, ಈ ಟೀಕಾವಾಕ್ಯವು ಹೇತುವಿನಲ್ಲಿಯ ಪ್ರಮಾಣ ಪದದ ವ್ಯರ್ಥತೆಯನ್ನು ಆಶಂಕಿಸಿ ಅದನ್ನು ಪರಿಹರಿಸುತ್ತದೆ.

**दृष्टत्वमात्रस्य दृश्यत्वमात्रस्य।**

ದೃಷ್ಟತ್ವಮಾತ್ರಸ್ಯ ಎಂದರೆ ದೃಶ್ಯತ್ವಮಾತ್ರದ ಎಂದರ್ಥ.

### ॥ पूर्व अनुमानं इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**विमतं सत्यं दृश्यत्वात् इति प्रतिपक्ष अनुमानम् इत्यर्थः।**



ಇಲ್ಲಿ ಪೂರ್ವ ಅನುಮಾನವೆಂದರೆ ಹಿಂದೆ ಪ್ರತಿಪಾದಿಸಿದ "ವಿಮತಂ ಸತ್ಯಂ ದೃಶ್ಯತ್ವಾತ್" ಎಂಬ ಪ್ರಕರಣಸಮ ಅನುಮಾನ ಎಂದರ್ಥ.

### ॥ तत्र इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**कुत इत्यत आह– तत्र इति॥**

ಪೂರ್ವ ಅನುಮಾನ ಅಸತ್ಯ ಹೇಗಾಗುತ್ತದೆ ಎಂಬುದನ್ನು ಈ ಟೀಕಾವಾಕ್ಯ ವಿವರಿಸುತ್ತದೆ.

**प्रतिपक्ष अनुमाने निर्विशेषण दृश्यत्वमात्रस्य एव प्रयोगात्।**

ಅಂದರೆ, ಹಿಂದಿನ ಪ್ರಕರಣಸಮ ಅಥವಾ ಪ್ರತಿಪಕ್ಷ ಅನುಮಾನದಲ್ಲಿ ಯಾವದೆ ವಿಶೇಷಣವಿಲ್ಲದ ದೃಶ್ಯತ್ವ ಪದವನ್ನು ಮಾತ್ರ ಪ್ರಯೋಗಿಸಲಾಗಿದೆ ಎಂದರ್ಥ.

### ॥ प्रमाणदृष्टत्व पदेन इति ॥

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**प्रमाणदृष्टत्व पदेन प्रामाणिकत्वरूप उखण्डो धर्मः हेतुतया उक्त इत्यर्थः।**

ಇಲ್ಲಿ ಪ್ರಮಾಣದೃಷ್ಟತ್ವ ಪದದಿಂದ ಪ್ರಾಮಾಣಿಕವಾಗಿ ಪ್ರತೀತವಾಗುವ ಧರ್ಮವನ್ನು ಹೇತುವಾಗಿ ಹೇಳಲಾಗಿದೆ ಎಂದರ್ಥ.

### ॥ प्रामाणिकत्वमात्रस्य इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**तस्य च एकरूपत्वात् न तत्र विशेषणं अस्ति इति। न तत् विशेषण वैयर्थ्य शङ्कावकाशः। एकस्मिन् धर्मिणि, लघुगुरुधर्मद्वय समावेशे लघुना व्याप्ति अवच्छेदे गुरोः अनावश्यकत्वरूप व्यर्थ विशेषणता बीज अभावात् इति भावः।**

ಪೂರ್ವ ಅನುಮಾನದಲ್ಲಿ ಹೇತುವಾದ ದೃಶ್ಯತ್ವವು ಏಕರೂಪವಾದ್ದರಿಂದ ದೃಶ್ಯತ್ವಕ್ಕೆ ಯಾವ ವಿಶೇಷಣ ಇರಲಿಲ್ಲ ವೆಂದು, ಇಲ್ಲಿ ಪ್ರಮಾಣ ಪದದ ವಿಶೇಷಣ ವ್ಯರ್ಥವೆನ್ನುವದಕ್ಕೆ ಯಾವ ಶಂಕೆಗೆ ಆಸ್ಪದವಿರುವದಿಲ್ಲ. ಹಾಗೂ, ಯಾವುದಾದರೊಂದು, ಧರ್ಮಿಣಿಯಲ್ಲಿ ಚಿಕ್ಕ ಹಾಗೂ ದೊಡ್ಡ ಧರ್ಮಗಳ ಸಮಾವೇಶವಿದ್ದಲ್ಲಿ, ಚಿಕ್ಕದ ವ್ಯಾಪ್ತಿಯ ಏಕದೇಶ ಸಿದ್ಧವಾದಾಗ, ದೋಡ್ಡಧರ್ಮಕ್ಕೆ ಅನಾವಶ್ಯಕರೂಪ ವ್ಯರ್ಥ ವಿಶೇಷಣತಾ ಬೀಜದ ಅಭಾವತೆ ಇರುತ್ತದೆ ಎಂಬ ಭಾವವಿರುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**तस्य एकरूपत्वात् न विशेषणं अस्ति येन वैयर्थ्यं चोद्यते।**

ಹಿಂದಿನ ಅನುಮಾನದಲ್ಲಿ ಹೇತುವಾದ ದೃಶ್ಯತ್ವವು ಏಕರೂಪವಾದ್ದರಿಂದ ಅಲ್ಲಿ ಅದಕ್ಕೆ ಯಾವ ವಿಶೇಷಣವಿರಲಿಲ್ಲ, ಅದೇ ಈಗ ವಿಶೇಷಣದ ವ್ಯರ್ಥತೆಯ ಸಂಶಯವನ್ನು ಹುಟ್ಟಿಸುತ್ತದೆ.

**ननु अथापि प्रामाणिकत्वं प्रमाण ज्ञातत्वम्। तथा च ज्ञातत्वेन एव पूर्णत्वात् प्रमाणग्रहणं व्यर्थमेव।**

ಹಾಗಿದ್ದರೂ, ಪ್ರಾಮಾಣಿಕತ್ವವೆಂದರೆ ಪ್ರಮಾಣದಿಂದ ಜ್ಞಾತವಾದುದು ಎಂದರ್ಥ. ಅದರಂತೆ ಜ್ಞಾತವಾದ ಮಾತ್ರಕ್ಕೆ ಅದು ಪೂರ್ಣವಾಯಿತು, ಮತ್ತೆ ಪ್ರಮಾಣ ಪದವನ್ನು ಗ್ರಹಿಸುವದು ವ್ಯರ್ಥವೇ ಆಗುತ್ತದೆ.

**ननु च एवं अवयवार्थ विचारेण वैयर्थ्य अभिधाने "मान विषयत्वं मेयत्वं। तत्र विषयत्वमात्रेण् अलं। किं मानग्रहणेन्।" इत्यादेः वक्तुं शक्यत्वात् अतिप्रसङ्गः।**

ಮತ್ತು ಪ್ರಮಾಣವಿಷಯತ್ವವು ಪ್ರಮಾವೆನಿಸುತ್ತದೆ. ಅಲ್ಲಿ ಪ್ರಮಾಣವಿಷಯತ್ವಮಾತ್ರ ಇದ್ದಲ್ಲಿ ಸಾಕು. ಮತ್ತೇಕೆ ಪ್ರಮಾಣದಿಂದ ಎಂದು ಮುಂತಾಗಿ ಅವಯವಾರ್ಥ ವಿಚಾರದಿಂದ ವ್ಯರ್ಥ ಹೇಳಿಕೆಗಳನ್ನು ಕೊಡುವದು ಶಕ್ಯವಿರುವದರಿಂದ ಅತಿಪ್ರಸಂಗ ಉಂಟಾಗುತ್ತದೆ.

**तत्र प्रमेयपदेन एव सर्व उपात्तम्। न तु विशेषण उपादानार्थं, अधिको यत्नः कृतः अस्ति, यस्य वैयर्थ्यं शङ्क्यत इति चेत्।**

ಅಲ್ಲಿ, ಪ್ರಮೆಯ ಪದದಿಂದಲೇ ಎಲ್ಲವು ಪಡೆಯಲ್ಪಟ್ಟಿರುವಾಗ ವಿಶೇಷಣ ಉಪಾದಾನಕ್ಕಾಗಿ ಅಧಿಕ ಯತ್ನವನ್ನು ಮಾಡಲಿಲ್ಲ. ಹೀಗೆ ಇಲ್ಲಿ ವಿಶೇಷಣದ ವೈಯರ್ಥತೆಯನ್ನು ಶಂಕಿಸುತ್ತೇವೆ ಎಂದರೆ?

**मैवम्। प्रकृतेऽपि प्रामाणिकग्रहणेन एव सर्वस्य उपात्तत्वेन परिहार साम्यात्।**
**किंच न प्रामाणिकत्वं प्रमाणज्ञातत्वम्। किन्तु प्रमाण विषयत्वम्। तथा च पूर्वोक्त दृश्यत्वमात्रस्य प्रवेश एव नास्ति इति दृष्टत्वमात्रस्य व्यभिचारः अस्ति न वा इति विकल्प एव न सम्भवति। न च अत्र अपि प्रमाण ग्रहणम् व्यर्थम्। आरोपित रजतस्य इष्टत्वेन इच्छाविषये तस्मिन् विषयमात्रस्य व्यभिचारात् इति भावः।**

ಅದು ಹಾಗಿರುವದಿಲ್ಲ. ಪ್ರಕೃತದಲ್ಲಿ ಕೂಡ ಪ್ರಾಮಾಣಿಕತೆಯನ್ನು ಗ್ರಹಿಸುವದಿಂದಲೇ ಎಲ್ಲವನ್ನು ಪಡೆಯಲಾಗುತ್ತದೆ ಎಂಬ ಪರಿಹಾರ ಮೇಲಿನದಕ್ಕೆ ಸಾಮ್ಯವಾಗಿರುತ್ತದೆ. ಮತ್ತು ಪ್ರಾಮಾಣಿಕತ್ವವು ಪ್ರಮಾಣ ಜ್ಞಾತತ್ವ ಆಗುವದಿಲ್ಲ. ಪರಂತು ಪ್ರಮಾಣ ವಿಷಯತ್ವ ಆಗುತ್ತದೆ. ಅದರಂತೆ, ಹಿಂದೆ ಹೇಳಿದಂತೆ ದೃಶ್ಯತ್ವಮಾತ್ರದ ಇಲ್ಲಿ ಪ್ರವೇಶವೇ ಆಗುವದಿಲ್ಲ. ಹೀಗಾಗಿ ದೃಷ್ಟತ್ವಮಾತ್ರದ ವ್ಯಭಿಚಾರ ಇದೆಯೊ ಇಲ್ಲವೊ ಎಂಬ ವಿಕಲ್ಪವೇ ಸಂಭವಿಸುವದಿಲ್ಲ. ಹಾಗೆಯೆ ಇಲ್ಲಿ ಕೂಡ ಪ್ರಮಾಣ ಪದ ಗ್ರಹಿಸುವದು ವ್ಯರ್ಥವೆನಿಸುವದಿಲ್ಲ. ಆರೋಪಿತ ರಜತದ ಇಷ್ಟತ್ವದಿಂದ ಇಚ್ಛಾವಿಷಯದಲ್ಲಿ, ವಿಷಯಮಾತ್ರವೇ ವ್ಯಭಿಚಾರವಾಗಿರುತ್ತದೆ ಎಂಬ ಭಾವವಿರುತ್ತದೆ.

## ॥ अथवा इति॥

<u>ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:</u>

**अवयवार्थ विचारं अकृत्वा हेतुः कृतः तथापि अवयवार्थ विचारे विशेषणं आयाति एव। तथा हिः– प्रामाणिकत्वं नाम प्रमाणजन्यज्ञान विषयत्वं तत्र ज्ञानविषयत्वेन एव अलं। प्रमाणग्रहणं वैयर्थ्यं तदवस्थं एव इति अपरितोषात् पक्षान्तरं आह–अथवा इति॥**



ಇನ್ನು ಅವಯವಾರ್ಥವನ್ನು ವಿಚಾರ ಮಾಡದೆ ಹೇತುವನ್ನು ಮಾಡಲಾಗಿದೆ. ಹಾಗಿದ್ದರೂ ಅವಯವಾರ್ಥ ವಿಚಾರದಲ್ಲಿ ವಿಶೇಷಣ ಬಂದೆ ಬರುತ್ತದೆ. ಅದನ್ನು ಹೀಗೆ ವಿವರಿಸಬಹುದು: ಪ್ರಾಮಾಣಿಕತ್ವವು ಪ್ರಮಾಣದಿಂದ ಹುಟ್ಟಿದ ಜ್ಞಾನವಿಷಯತ್ವವಾಗಿರುತ್ತದೆ. ಅಲ್ಲಿ ಜ್ಞಾನವಿಷಯತ್ವ ಎಂದರೆ ಸಾಕಾಗಿರುವದು. ಮತ್ತೆ ಪ್ರಮಾಣ ಗ್ರಹಣ ಹೇಳುವದು ವೈಯರ್ಥತೆಯನ್ನು ಹಾಗೆಯೆ ಉಳಿದಂತಾಯಿತು. ಹೀಗೆ ಸಂತುಷ್ಟ ಆಗದವರಿಗೆ ಈ ಟೀಕಾವಾಕ್ಯ ಪಕ್ಷಾಂತರದಿಂದಲೂ ಪ್ರಮಾಣ ಪದದ ವೈಯರ್ಥತೆಯನ್ನು ನಿರಾಕರಿಸುತ್ತದೆ.

<u>ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:</u>

**यदि एवं तर्हि प्रामाणिकत्वात् इत्येववक्तव्यम्। लक्षणाश्रयणे प्रयोजन अभावात्। प्रमाण दृष्टत्वात् इति हि उक्तम्। एवं च प्रमाणग्रहण वैयर्थ्यं तदवस्थं इति अपरितोषात् पक्षान्तरम् आह्– अथवा इति॥**

ಹಾಗಾದರೆ, प्रामाणिकत्वात् ಎಂದೆ ಹೇಳಬೇಕಾಗಿತ್ತಲ್ಲ. ಆ ಲಕ್ಷಣ ಆಶ್ರಯದಿಂದ ಪ್ರಸ್ತುತದಲ್ಲಿ ಪ್ರಯೋಜನ ಇಲ್ಲದಿರುವದರಿಂದ प्रमाण दृष्टत्वात् ಎಂದೇ ಹೇಳಲಾಗಿದೆ. ಹೀಗೆ ಪ್ರಮಾಣ ಪದ ಗ್ರಹಣದ ವೈಯರ್ಥತೆಯು ಹಾಗೆಯೆ ಉಳಿದಂತಾಯಿತು ಎಂದು ಸಂತುಷ್ಟವಾಗದವರಿಗೆ ಈ ಟೀಕಾವಾಕ್ಯ ಪಕ್ಷಾಂತರದಿಂದ ಪ್ರಮಾಣ ಪದದ ವೈಯರ್ಥತೆಯನ್ನು ನಿರಾಕರಿಸುತ್ತದೆ

## ॥ तत् च शुक्तिरजतादौ इति ॥

<u>ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:</u>

**ननु यथा शुक्तिरजतादौ यथा दृग् व्यावृत्तकत्वं अस्ति तथा एव न इदं रजतप्रमाणजन्य दृक् व्यावृत्तकत्वं अस्ति एव इति व्यभिचार वारकत्वात्, व्यर्थमेव इदं विशेषणं इति चेत् न।**

ಹೇಗೆ ಶುಕ್ತಿರಜತಾದಿಗಳಲ್ಲಿ ಹೇಗೆ ದೃಗ್ ವ್ಯಾವರ್ತಕತ್ವ ಇರುತ್ತದೆ, ಅದರಂತೆಯೆ ಈ ರಜತವು ಪ್ರಮಾಣಜನ್ಯ ದೃಗ್ ವ್ಯಾವರ್ತಕತ್ವವಲ್ಲ ಎಂಬುದು ಇದ್ದೆ ಇದೆ. ಹೀಗಾಗಿ ಅಲ್ಲಿ ವ್ಯಭಿಚಾರದ ನಿವಾರಣೆಯಾದ್ದರಿಂದ, ಪ್ರಮಾಣ ಪದದ ವಿಶೇಷಣವು ವ್ಯರ್ಥವೇ ಆಗಿದೆ ಎನ್ನುತ್ತೇವೆ ಎಂದರೆ?

**रजतस्य न इदं रजतं इति ज्ञानोल्लेख्यत्वेऽपि तत् व्यावृत्तकत्वेन व्यभिचार परिहार असम्भवात्। न हि, इदं रजतं इति विभ्रमं यथा रजत ज्ञानत्वेन व्यवहरन्ति तथा न इदं रजतं इति विज्ञानं रजतज्ञानत्वेन व्यवहरन्ति। किन्तु रजत अभाव ज्ञानत्वेन येन तत् व्यावृत्तकत्वं रजतस्य स्यात्।**

ರಜತದ, ಇದು ರಜತವಲ್ಲ ಎಂದು ಜ್ಞಾನೊಲ್ಲೆಖ್ಯತ್ವವಾಗಿದ್ದರೂ ಅದರ ವ್ಯಾವೃತ್ತಕತ್ವದಿಂದ ವ್ಯಭಿಚಾರ ಪರಿಹಾರ ಅಸಂಭವವಾಗಿದೆ. ಇದು ರಜತ ಎಂಬ ವಿಭ್ರಮವು ಹೇಗೆ ರಜತದ ಜ್ಞಾನತ್ವದಿಂದ ವ್ಯವಹರಿಸಲಾಗುತ್ತದೊ ಅದರಂತೆ ಇದು ರಜತವಲ್ಲ ಎಂಬ ವಿಜ್ಞಾನವು ರಜತದ ಜ್ಞಾನತ್ವದಿಂದ ವ್ಯವಹರಿಸಲಾಗುವದಿಲ್ಲ, ಪರಂತು ರಜತ ಅಭಾವ ಜ್ಞಾನತ್ವದಿಂದ.

ಇದರಿಂದ ಅದು ರಜತದ ವ್ಯಾವರ್ತಕತ್ವವಾಗುತ್ತದೆ. ಅದಕ್ಕೆ ಇಲ್ಲಿ ಪ್ರಮಾಣ ವಿಶೇಷಣವು ವ್ಯರ್ಥವಲ್ಲ ಎಂದರ್ಥ.

### ७.२.२.२ अनुमाने व्याप्ति अभिधान नियम निराकरणम्

## टीका

**पूर्व अनुमाने व्याप्तिम् अनभिधाय अत्र यदित्थं तत्तथा इति ताम् अभिधता तत् अभिधान नियमो नास्ति इति सूचितम्। आत्मनः प्रमाणदृष्टत्व अनङ्गीकारे वेदान्त वैयर्थ्यं स्यात्।**

ಪೂರ್ವ ಪ್ರಪಂಚ ಸತ್ಯತ್ವ ಅನುಮಾನದಲ್ಲಿ ವ್ಯಾಪ್ತಿಯನ್ನು ಪ್ರತಿಪಾದಿಸದೆ, ಇಲ್ಲಿ यदित्थं तत्तथा ಎಂದು ಪ್ರತಿಪಾದಿಸಿದ್ದು, ವ್ಯಾಪ್ತಿಯನ್ನು ಈ ತರಹ ಪ್ರತಿಪಾದಿಸುವ ನಿಯಮವಿರುವದಿಲ್ಲ ಎಂದು ಸೂಚಿಸುತ್ತದೆ. ಆತ್ಮನಲ್ಲಿ ಪ್ರಮಾಣದೃಷ್ಟತ್ವ ಅನಂಗೀಕರಿಸಿದಲ್ಲಿ ವೇದಾಂತ ವೈಯರ್ಥ ಎನ್ನಬೇಕಾಗುವದು.

## टिप्पणीनाम् विशेषार्थानि

**॥ आत्मन इति॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**दृष्टान्ते साधनवैकल्यं परिहरति– आत्मन इति॥**

ಈ ಟೀಕಾವಾಕ್ಯವು ಸಾಧನವೈಕಲ್ಯ ದೋಷವನ್ನು ಪರಿಹರಿಸುತ್ತದೆ.

**ब्रह्म ज्ञान् जननाय एव तेषां प्रवृत्तत्वात् इति भावः।**

ಬ್ರಹ್ಮ ಜ್ಞಾನ ಜನನಕ್ಕಾಗಿಯೇ ಅವುಗಳು ಪ್ರವೃತ್ತವಾಗಿರುತ್ತವೆ ಎಂಬ ಭಾವವಿರುತ್ತದೆ.

### ७.२.२.३ प्रमाणदृष्टत्व अनुमाने असिद्धिशङ्का निराकरणम्

## टीका

**ननु अत्र तत्वावेदक प्रमाणदृष्टत्वं हेतुः। उत अतत्वावेदक प्रमाणदृष्टत्वम्। आद्ये असिद्धिः। द्वितीये विरोध इति। मैवम् (सत्यं)। "अतत्वावेदकं प्रमाणम्" इति च विप्रतिषिद्धं एतत्।**



**एवं तर्हि असिद्धिः एव अस्तु इति चेत् न। "प्रपञ्च मिथ्यात्व सिद्धौ प्रत्यक्षादीनां अप्रामाण्य सिद्धिः तत् सिद्धौ च तत् सिद्धिः" इति परस्पराश्रय प्रसङ्गः।**

ಇಲ್ಲಿ ಪ್ರಮಾಣದೃಷ್ಟತ್ವ ಹೇತು ಯಥಾರ್ಥ್ಯವನ್ನು ತಿಳಿಸುತ್ತದೊ? ಅಥವಾ ಅಯಥಾರ್ಥವಾದುದನ್ನು ತಿಳಿಸುತ್ತದೊ? ಮೊದಲನೆಯದಾದರೆ ಅಸಿದ್ಧಿ ದೋಷ ಉಂಟಾಗುತ್ತದೆ. ಎರಡನೆಯವದು ಹೇಳುವದಾದರೆ ವಿರೋಧ ಉಂಟಾಗುತ್ತದೆ.
ನೀವು ಹೇಳುವದು ನಿಜ. "अतत्वावेदकं प्रमाणम्" ಎಂದು ಹೇಳುವದು ಸ್ವವ್ಯಾಹತಿ ಎನಿಸುತ್ತದೆ. ಹಾಗಾದರೆ ಅಸಿದ್ಧಿಯೇ ಇರಲಿ ಎಂದರೆ? ಪ್ರಪಂಚ ಮಿಥ್ಯಾತ್ವ ಸಿದ್ಧವಾದಲ್ಲಿ, ಪ್ರತ್ಯಕ್ಷಾದಿಗಳ ಅಪ್ರಾಮಾಣ್ಯ ಸಿದ್ಧವಾಗುತ್ತದೆ, ಇನ್ನು ಪ್ರತ್ಯಕ್ಷಾದಿಗಳು ಅಪ್ರಾಮಾಣ್ಯ ಎಮ್ದು ಸಿದ್ಧವಾದರೆ ಪ್ರಪಂಚ ಮಿಥ್ಯಾತ್ವ ಸಿದ್ಧವಾಗುತ್ತದೆ. ಹೀಗೆ ಪರಸ್ಪರ ಆಶ್ರಯ ಪ್ರಸಂಗ ಉಂಟಾಗುತ್ತದೆ.

## टिप्पणीनाम् विशेषार्थानि

**॥ असिद्धि इति॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**प्रपञ्च अवेदक प्रमाणानां प्रत्यक्षादीनां तत्वावेदकत्व अभावेन, तत्वावेदक प्रमाण दृष्टत्वं प्रपञ्चे स्वरूप असिद्धिं इत्यर्थः।**

ಅಯಥಾರ್ಥವಾದ ಪ್ರಪಂಚ ತಿಳಿಸುವ ಪ್ರತ್ಯಕ್ಷಾದಿ ಪ್ರಮಾಣಗಳು ಯಥಾರ್ಥವನ್ನು ತಿಳಿಸಲು ಸಾಧ್ಯವಿಲ್ಲ, ಯಥಾರ್ಥ್ಯವನ್ನು ತಿಳಿಸುವ ಪ್ರಮಾಣ ದೃಷ್ಟತ್ವ ಹೇತುವು ಪ್ರಪಂಚದಲ್ಲಿ ಸ್ವರೂಪ ಅಸಿದ್ಧಿ ಯಾಗುತ್ತದೆ ಎಂದರ್ಥ.

**॥ द्वितीये विरोध इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**अतत्वावेदक प्रमाण दृष्टत्वस्य सत्यत्व अभावेन एव व्याप्तत्वात् इति भावः।**

ಅಯಥಾರ್ಥತಿಳಿಸುವ ಪ್ರಮಾಣ ದೃಷ್ಟತ್ವ ಹೇತುವು ಸತ್ಯತ್ವ ಇಲ್ಲದಿರುವಲ್ಲಿಯೆ ವ್ಯಾಪ್ಯತ್ವ ಹೊಂದಿರುತ್ತದೆ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**अतत्वावेदक प्रमाण दृष्टत्वस्य सत्व अभावेन एव व्याप्तत्वात् इति भावः।**

ಅಯಥಾರ್ಥ್ಯವನ್ನು ತಿಳಿಸುವ ಪ್ರಮಾಣ ದೃಷ್ಟತ್ವ ಹೇತುವಿಗೆ ಸತ್ಯತ್ವ ಇಲ್ಲದಿರುವಲ್ಲಿಯೇ ವ್ಯಾಪ್ಯತ್ವಹೊಂದಿರುವದರಿಂದ ಎಂಬ ಭಾವವಿರುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**अतत्वावेदक प्रमाणदृष्टस्य असत्वेन भाव्यत्वात्।**

ಅಯಥಾರ್ಥ್ಯವನ್ನು ತಿಳಿಸುವ ಪ್ರಮಾಣದೃಷ್ಟತ್ವವು ಅಸತ್ಯದಿಂದ ತೋರುತ್ತದೆ

## ॥ मैवम् (सत्यम्) इति ॥

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**साध्य अभिधाने व्याघात् इत्यर्थः।**

ತಾವು ಹೇಳುವದು ನಿಜ. ಅಂದರೆ, ಸಾಧ್ಯ ಹೇಳಿದರೆ ವ್ಯಾಘತವಾಗುವದು ಎಂದರ್ಥ.

ಪರಷು ಟಿಪ್ಪಣಿಯಲ್ಲಿ, ಟೀಕಾಯಲ್ಲಿಯ ಮೈವಮ್ ಪದದ ಬದಲಾಗಿ ಸತ್ಯಮ್ ಎಂದು ನಮೂದಿಸಲಾಗಿದೆ.

## ॥ विप्रतिषिद्धं इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**यथावस्थित अर्थ ज्ञेय विषयीकारित्वस्य प्रमाण शब्दार्थत्वात्। अतत्वावेदक प्रमाण इत्युक्ते स्वव्याहतिः स्यात्। अतो विकल्प एव अनुपपन्न इत्यर्थः।**

ಯಥಾವಸ್ಥಿತ ಅರ್ಥ ತಿಳಿಯಲ್ಪಟ್ಟು ವಿಷಯೀಕರಿಸುವದು ಪ್ರಮಾಣದ ಶಬ್ದಾರ್ಥವಾಗಿರುತ್ತದೆ. ಅಯಥಾರ್ಥ್ಯ ತಿಳಿಸುವದು ಪ್ರಮಾಣವೆಂದು ಹೇಳಿದರೆ ಸ್ವವ್ಯಾಹತ ದೋಷ ಬರುತ್ತದೆ. ಆದ್ದರಿಂದ ಮೇಲೆ ಹೇಳಿದ ವಿಕಲ್ಪವೇ ಯುಕ್ತಿ ವಿರುದ್ಧವಾಗಿದೆ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**तत्वावेदकत्वस्यैव प्रमाणशब्दार्थत्वात् इति भावः।**

ಯಾಥಾರ್ಥ್ಯವನ್ನು ತಿಳಿಸುವದೇ ಪ್ರಮಾಣದ ಶಬ್ದಾರ್ಥವಾಗಿರುತ್ತದೆ ಎಂಬ ಭಾವವಿರುತ್ತದೆ.

## ॥ अतत्वावेदकं इति॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**विकल्प प्रश्नेन दूषणम् उक्तम्। तत्र स्वव्याहतत्वात् विकल्प प्रश्न एव न उपपद्यते। दूरे दूषण अभिधानम्, इत्याशयेन व्याहतिम् उपपादयति– अतत्वावेदकम् इति॥**

ಇಲ್ಲಿ ವಿಕಲ್ಪ ಪ್ರಶ್ನೆಯಿಂದಲೇ ದೂಷಣ ಹೇಳಲಾಗಿದೆ. ಅಲ್ಲಿ ಸ್ವವ್ಯಾಹತಿ ದೋಷ ಬರುವದರಿಂದ ವಿಕಲ್ಪ ಪ್ರಶ್ನವೇ ಯುಕ್ತಿ ವಿರುದ್ಧವಾಗಿರುತ್ತದೆ, ದೂಷಣ ಅಭಿಧಾನ ದೂರವಿರಲಿ. ಎಂಬ ಆಶಯದಿಂದ ಯುಕ್ತಿಪೂರ್ವಕವಾಗಿ ವ್ಯಾಹತಿಯನ್ನು, ಈ ಟೀಕಾವಾಕ್ಯ ಪ್ರತಿಪಾದಿಸುತ್ತದೆ.

## ॥ एवं तर्हि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**व्याहतत्वेन उक्त विकल्पाभ्यां दूषण अनुपपतौ अपि इत्यर्थः।**



ವ್ಯಾಹತಿ ದೋಷ ಉಂಟಾಗುವದರಿಂದ ಹೇಳಿದ ವಿಕಲ್ಪಗಳಿಂದ ದೂಷಣವು ಕೂಡ ಯುಕ್ತಿ ವಿರುದ್ಧವಾಗಿದೆ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**अतत्वावेदकं प्रमाणम् इत्यस्य व्याहतत्वेन प्रमाणदृष्टत्वेन हेतुः स्यात्। स च असिद्ध एव इति भावः।**

ಅಯಥಾರ್ಥ್ಯವಾದುದನ್ನು ತಿಳಿಸುವ ಪ್ರಮಾಣ ಎಂಬದರ ವ್ಯಾಹತತ್ವದಿಂದ ಪ್ರಮಾಣದೃಷ್ಟತ್ವ ಹೇತು ಆಗುತ್ತದೆ. ಅದು ಅಸಿದ್ಧವೇ ಆಗಿರುತ್ತದೆ ಎಂಬ ಭಾವವಿರುತ್ತದೆ.

## ॥ असिद्धिः एव इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**प्रत्यक्षादेः प्रामाण्य अभावात् प्रमाणदृष्टत्व हेतोः स्वरूप असिद्धेः एव अस्तु इत्यर्थः।**

ಪ್ರತ್ಯಕ್ಷಾದಿಗಳಿಗೆ ಪ್ರಾಮಾಣ್ಯ ಇಲ್ಲದಿರುವದರಿಂದ ಪ್ರಮಾಣದೃಷ್ಟ ಹೇತುವಿಗೆ ಸ್ವರೂಪ ಅಸಿದ್ಧಿಯೇ ಇರಲಿ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**प्रत्यक्षादेः प्रामाण्यस्यैव अभावात् प्रमाणदृष्टत्वं असिद्धं इति भावः।**

ಪ್ರತ್ಯಕ್ಷಾದಿಗಳಿಗೆ ಪ್ರಾಮಾಣ್ಯವೇ ಇಲ್ಲದಾಗಿರುವದರಿಂದ ಪ್ರಮಾಣದೃಷ್ಟತ್ವ ಹೇತುವು ಅಸಿದ್ಧ ಎಂಬ ದೋಷಗ್ರಸ್ತವಾಗಿರುತ್ತದೆ ಎಂಬ ಭಾವ.

## ॥ न प्रपञ्च इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**प्रत्यक्षादीनां अप्रामाण्ये कारणान्तर अभावात् प्रपञ्चमिथ्यात्वमेव तत्र कारणं इति वाच्यम्। प्रत्यक्षादि प्रमाणसिद्ध प्रपञ्च मिथ्यात्वं च कुतः। इत्युक्ते तद् ग्राहि प्रत्यक्षादीनाम् अप्रामाण्यं इति वक्तव्यम्। अतो अन्योन्याश्रय इत्याह– न प्रपञ्च इति ॥**

ಇನ್ನು ಪ್ರತ್ಯಕ್ಷಾದಿಗಳಿಗೆ ಅಪ್ರಾಮಾಣ್ಯವು ಕಾರಣಾಂತರ ಇಲ್ಲದಾಗಿರುವದರಿಂದ ಪ್ರಪಂಚ ಮಿಥ್ಯಾತ್ವವೇ ಅಲ್ಲಿ ಕಾರಣ ಎಂದು ಹೇಳಬೇಕು. ಇನ್ನು ಪ್ರತ್ಯಕ್ಷಾದಿ ಪ್ರಮಾಣ ಸಿದ್ಧ ಪ್ರಪಂಚ ಮಿಥ್ಯಾ ಹೇಗಾಗುತ್ತದೆ? ಹೀಗೆ ಹೇಳಲು ಅದನ್ನು ಗ್ರಹಿಸುವ ಪ್ರತ್ಯಕ್ಷಾದಿಗಳಿಗೆ ಅಪ್ರಾಮಾಣ್ಯ ಎಂದು ಹೇಳಬೇಕು. ಆದ್ದರಿಂದ ಅನ್ಯೋನ್ಯಾಶ್ರಯ ದೋಷ ಬಂದಿತು. ಇದನ್ನೇ ಈ ಟೀಕಾವಾಕ್ಯ ಪ್ರತಿಪಾದಿಸುತ್ತದೆ.

## ॥ प्रपञ्च मिथ्यात्व सिद्धौ इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**उक्त अनुमाने न प्रपञ्चस्य मिथ्यात्वे सिद्धे तदन्तर्गतत्वात् प्रत्यक्षादीनाम् अप्रामाण्य सिद्धिः इत्यर्थः।**

ಶ್ರೀಮದಾಚಾರ್ಯರು ಪ್ರತಿಪಾದಿಸಿದ ಅನುಮಾನದಲ್ಲಿ, ಪ್ರಪಂಚ ಮಿಥ್ಯಾತ್ವ ಸಿದ್ಧವಾಗದೆ, ತದಂತರ್ಗತಗಳಾದ ಪ್ರತ್ಯಕ್ಷಾದಿಗಳ ಅಪ್ರಾಮಾಣ್ಯ ಸಿದ್ಧವಾಗುವದಿಲ್ಲ ಎಂದರ್ಥ.

॥ तत् सिद्धौ च तत् सिद्धिः इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**प्रत्यक्षादीनां अप्रामाण्ये सिद्धे प्रमाणदृष्टत्व हेतोः स्वरूप असिद्धत्वेन प्रतिपक्ष अनुमानस्य दुष्टतया तद्विरोध अभावे न उक्त अनुमानात् प्रपञ्चमिथ्यात्व सिद्धिः इति भावः।**

ಇನ್ನು ಪ್ರತ್ಯಕ್ಷಾದಿಗಳ ಅಪ್ರಾಮಾಣ್ಯ ಸಿದ್ಧವಾದಾಗ ಪ್ರಮಾಣದೃಷ್ಟತ್ವ ಹೇತುವಿಗೆ ಸ್ವರೂಪ ಅಸಿದ್ಧತ್ವ ಉಂಟಾಗುವದರಿಂದ ಪ್ರತಿಪಕ್ಷ ಅನುಮಾನದ, ದೂಷಿಸುವ ಅದರ ವಿರೋಧದ ಅಭಾವತೆ ಇರುವಾಗ, ಪರಪಕ್ಷದವರು ಪ್ರತಿಪಾದಿಸಿದ ಮಿಥ್ಯಾತ್ವ ಅನುಮಾನದಿಂದ ಪ್ರಪಂಚ ಮಿಥ್ಯಾತ್ವದ ಸಿದ್ಧಿ ಆಗುವದಿಲ್ಲ.

॥ परस्पराश्रयत्व इति ॥

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**ननु प्रपञ्चस्य सत्यत्व सिद्धौ प्रत्यक्षादि प्रामाण्य सिद्धिः। तत् सिद्धौ तत् सिद्धिः इति भवताम अन्योन्याश्रय एव इति चेत् न। प्रामाण्यस्य स्वतस्त्वेन न विषयीसिद्ध्यधीनत्व अभावात्।**

ಇಲ್ಲಿ ಪ್ರಪಂಚದ ಸತ್ಯತ್ವ ಸಿದ್ಧವಾದರೆ ಪ್ರತ್ಯಕ್ಷಾದಿಗಳ ಪ್ರಾಮಾಣ್ಯ ಸಿದ್ಧಿಸುತ್ತದೆ. ಮತ್ತು ಪ್ರತ್ಯಕ್ಷಾದಿಗಳ ಪ್ರಾಮಾಣ್ಯ ಸಿದ್ಧವಾದಾಗ ಪ್ರಪಂಚ ಸತ್ಯವೆಂದು ಸಿದ್ಧವಾಗುತ್ತದೆ ಎಂದು ಸಿದ್ಧಾಂತಿಗಳು ಪ್ರತಿಪಾದಿಸಿದ ಪ್ರಪಂಚ ಸತ್ಯತ್ವ ಅನುಮಾನವು ಅನ್ಯೋನ್ಯಾಶ್ರಯ ದೋಷಗ್ರಸ್ತವಾಗುತ್ತದೆ ಎಂದು ಹೇಳುತ್ತೇವೆ ಎಂದರೆ? ಪ್ರಾಮಾಣ್ಯವು ಸ್ವತಃ ಸಿದ್ಧವಾದ್ದರಿಂದ ಅದಕ್ಕೆ ವಿಷಯಗಳ ಸಿದ್ಧಿಯ ಅಧೀನತ್ವ ಇರುವದಿಲ್ಲ ಎಂದು ನಮ್ಮ ಉತ್ತರ ಎಂದು ತಿಳಿಯಬೇಕು.

### ७.२.२.४ प्रमाणदृष्टत्व अनुमाने शङ्कितस्य आत्मत्वोपाधेः विकल्पेन निरासः

## टीका

**आत्मत्वं अत्र उपाधिः इति चेत् न। तस्यैव अनिरुपणात्। न तावत् ज्ञानत्वं आत्मत्वम्। ज्ञातृज्ञेय शून्यस्य ज्ञानस्यापि शून्यत्वात्। नापि ज्ञानाश्रयत्वं निर्गुणत्व अङ्गीकारात्। न च सामान्य विशेष आत्मत्वम्। सामान्यस्यापि वास्तवस्य परेण अनङ्गीकारात्। कल्पितस्य तु देहादौ अपि सद्भावात्।**

ಇಲ್ಲಿ ಆತ್ಮತ್ವವು ಉಪಾಧಿಯಾಗಿದೆ ಅಂದರೆ ಅದು ಸಾಧ್ಯವ್ಯಾಪಕವಾಗಿದ್ದು, ಸಾಧನ



ಅವ್ಯಾಪಕವಾಗಿದೆ ಅಂದರೆ ಪ್ರಮಾಣ ವಿರುದ್ಧವಾಗಿದೆ ಎಂದೆನ್ನುತ್ತೇವೆ ಎಂದರೆ. ಹಾಗೆ ಹೇಳುವದು ಸರಿಯಲ್ಲ. ಏಕೆಂದರೆ ಆತ್ಮತ್ವವು ಇನ್ನೂ ನಿರೂಪಿತವೆ ಆಗಿಲ್ಲ.

ಇನ್ನು ಆತ್ಮತ್ವವನ್ನು ಜ್ಞಾನತ್ವವೆಂದು ಹೇಳಲಾಗದು. ಜ್ಞಾತೃ ಅಂದರೆ ತಿಳಿದು ಕೊಳ್ಳುವವನು ಜ್ಞೇಯ ಅಂದರೆ ತಿಳಿಯುವ ವಸ್ತು ಶೂನ್ಯವಾದಾಗ ಅಂದರೆ ಇಲ್ಲದಿರುವಾಗ ಅಲ್ಲಿ ಜ್ಞಾನವು ಕೂಡ ಶೂನ್ಯವಾಗುತ್ತದೆ ಅಥವಾ ಇಲ್ಲದಾಗುತ್ತದೆ. ಇನ್ನು ಆತ್ಮತ್ವವನ್ನು ಜ್ಞಾನಾಶ್ರಯತ್ವವೆಂದು ಹೇಳೋಣವೆಂದರೆ, ಪರಪಕ್ಷದವರು ಆತ್ಮನು ನಿರ್ಗುಣ ಎಂದು ಅಂಗೀಕರಿಸಿದ್ದಾರೆ. ಇನ್ನು ಆತ್ಮತ್ವವನ್ನು ಸಾಮಾನ್ಯವಿಶೇಷ ಎಂದರೆ ಜಾತಿ ವಿಶೇಷ ಹೇಳೋಣವೆಂದರೆ ಸಾಮಾನ್ಯವನ್ನು ಕೂಡ ವಾಸ್ತವವಾದುದು ಎಂದು ಪರಪಕ್ಷದವರು ಅಂಗೀಕರಿಸಿಲ್ಲ. ಇನ್ನು ಕಲ್ಪಿತವಾದುದು ಆತ್ಮತ್ವ ಎನ್ನುವುದಾದರೆ, ಅದು ದೇಹಾದಿಗಳಲ್ಲಿ ಕೂಡ ಸತ್ಯವಾಗಿದೆ. ಆದ್ದರಿಂದ ಆತ್ಮತ್ವವನ್ನು ಉಪಾಧಿ ಎಂದು ಹೇಳಲಾಗದು ಎಂದರ್ಥ.

## टिप्पणीनाम् विशेषार्थानि

॥ आत्मत्वं अत्र उपाधिः इति चेत् इत्यादिना ॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**स्वरूप असिद्धिं आशङ्क्य निरस्य व्याप्यत्व असिद्धिं अपि आशङ्क्य निरस्यति– आत्मत्वं अत्र उपाधिः इति चेत् इत्यादिना॥**

ಈವರೆಗೆ ಪ್ರಮಾಣದೃಷ್ಟತ್ವ ಹೇತುವಿನ ಸ್ವರೂಪ ಅಸಿದ್ಧಿಯನ್ನು ಆಶಂಕಿಸಿ ನಿರಾಕರಿಸಲಾಯಿತು ಈಗ ಈ ಟೀಕಾವಾಕ್ಯವು ಅದರ ವ್ಯಾಪ್ಯತ್ವ ಅಸಿದ್ಧಿಯನ್ನು ಕೂಡ ಆಶಂಕಿಸಿ, ನಿರಾಕರಿಸುತ್ತದೆ.

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ

**दृष्टान्तभूते आत्मनि, सत्यत्व आत्मत्वयोः सद्भावेन साध्य व्यापकत्वात्। प्रमाणदृष्टत्व साधनवति, प्रपञ्चे आत्मत्व अभावेन साधन अव्यापकत्वात् च इत्यर्थः।**

ಅಂದರೆ, ದೃಷ್ಟಾಂತಭೂತನಾದ ಆತ್ಮನಲ್ಲಿ, ಸಾಧ್ಯವಾದ ಸತ್ಯತ್ವವು ಆತ್ಮತ್ವಗಳಲ್ಲಿ ಸತ್ಯವಾಗಿ ಇರುವದರಿಂದ, ಸಾಧ್ಯವ್ಯಾಪಕತ್ವವಿದೆ. ಮತ್ತು ಪ್ರಮಾಣದೃಷ್ಟತ್ವ ಸಾಧನದಿಂದ ಕೂಡಿದ ಪ್ರಪಂಚದಲ್ಲಿ ಆತ್ಮತ್ವವಿರುವದಿಲ್ಲವಾದ್ದರಿಂದ ಸಾಧನ ಅವ್ಯಾಪಕತ್ವವಿದೆ ಎಂದರ್ಥ.

ಅಂದರೆ, ಆತ್ಮನಲ್ಲಿ ಸಾಧ್ಯವ್ಯಾಪಕತ್ವವಿದ್ದು ಸಾಧನವ್ಯಾಪಕತ್ವವಿಲ್ಲ , ಆದ್ದರಿಂದ ಆತ್ಮತ್ವವು ಉಪಾಧಿಯಾಗಿದೆ ಎಂಬ ಭಾವ.

॥ तस्यैव इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**आत्मत्वस्यैव इत्यर्थः।**

ಆತ್ಮತ್ವವೇ ಎಂದರ್ಥ.

## ॥ ज्ञातृज्ञेय शून्यस्य इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

लोके ज्ञानं ज्ञातृज्ञेय सापेक्षं दृष्टम्। आत्मस्वरूप ज्ञानस्य किम् स्वयमेव वा परोवा। न आद्यः। क्रियाकर्त्रोः ऐक्यस्य बाधितत्वात्। न द्वितीयः। तत् अतिरिक्तपर अभावात्।

ಲೋಕದಲ್ಲಿ ಜ್ಞಾನವು ಜ್ಞಾತೃ ಮತ್ತು ಜ್ಞೆಯಗಳ ಸಾಪೆಕ್ಷವಾಗಿರುವದು ಕಂಡುಬರುತ್ತದೆ. ಇನ್ನು ಆತ್ಮಸ್ವರೂಪವು, ಜ್ಞಾನದ ಸ್ವತಃನೆ ಆಗಿರುತ್ತದೊ? ಅಥವ ಬೇರೆಯವರದ್ದೊ? ಮೊದಲ್ನೆಯದು ಹೇಳಲಾಗುವದಿಲ್ಲ ಏಕೆಂದರೆ, ಕ್ರಿಯಾ, ಕರ್ತೃಗಳ ಐಕ್ಯವು ಬಾಧ ಉಟಿಮಾಡುತ್ತದೆ. ಎರಡನೆಯ ವಿಕಲ್ಪವೂ ಸರಿಯಲ್ಲ, ಆತ್ಮನ ವ್ಯತಿರಿಕ್ತ ಏನು ಇರುವದಿಲ್ಲ.

नापि ज्ञेयं अस्ति। आत्मस्वरूप ज्ञानं किम् स्वविषयं परविषयं वा। न आद्यः। एकस्यां क्रियायां कर्तृकर्मणोः एकत्वस्य विरुद्धत्वात्। न द्वितीयः। परस्य मिथ्यात्वात्।

ಮತ್ತು ಅಲ್ಲಿ ತಿಳಿಯುವದು ಏನು ಇರುವದಿಲ್ಲ. ಆತ್ಮಸ್ವರೂಪ ಜ್ಞಾನವು ಸ್ವವಿಷಯವಾಗಿದೆಯೊ ಅಥವಾ ಪರವಿಷಯವಾದುದೊ? ಮೊದಲ್ನೆಯದಾದರೆ ಒಂದೆ ಕ್ರಿಯೆಯ ಕರ್ತೃಕರ್ಮಣಗಳ ಎಕತ್ವ ವಿರುದ್ಧವಾಗುತ್ತದೆ. ಇನ್ನು ಎರಡನೆಯದಾದರೆ, ಆತ್ಮ ಹೊರತಗಿರುವದೆಲ್ಲ ಮಿಥ್ಯಾ ಆಗಿರುತ್ತದೆ.

संसरावस्थायां मिथ्याभूत ज्ञातृज्ञेययोः सत्वेऽपि मोक्षावस्थायां तत् उभय अभावात् तदानीं ज्ञानत्व न स्यात्। तथा च ज्ञातृज्ञेय शून्यस्य ज्ञानस्यापि शून्यत्वात् अभावात् इत्यर्थः।

ಸಂಸಾರವಸ್ಥೆಯಲ್ಲಿ ಮಿಥ್ಯಾಭೂತ ಜ್ಞಾತೃ ಮತ್ತು ಜ್ಞೇಯಗಳು ಸತ್ಯವಾದರೂ ಮೋಕ್ಷಾವಸ್ಥೆಯಲ್ಲಿ ಆ ಉಭಯತರು ಇರುವದಿಲ್ಲ, ಆದ್ದರಿಂದ ಅಲ್ಲಿ ಜ್ಞಾನತ್ವವು ಇರುವದಿಲ್ಲ. ಅದರಂತೆ ಜ್ಞಾತೃಜ್ಞೇಯ ಶೂನ್ಯವೆನಿಸಿದಾಗ ಜ್ಞನವೂ ಕೂಡ ಶೂನ್ಯವಾಗುತ್ತದೆ ಅಂದರೆ ಇಲ್ಲದಾಗುತ್ತದೆ ಎಂದರ್ಥ.

यथा उक्तं तत्वद्योते– आत्मनः स्वविषयत्व अभावात् परविषयत्व अभावात् च इति। विषयवर्जितः प्रकाश एव न भवति घटवत् इति च।

ತತ್ವದ್ಯೋತ ಗ್ರಂಥದಲ್ಲಿ ಹೀಗೆ ಹೇಳಲಾಗಿದೆ- ಆತ್ಮನಿಗೆ ಸ್ವವಿಷಯತ್ವ ಇರುವದಿಲ್ಲ ಮತ್ತು ಪರವಿಷಯತ್ವ ಇರುವದಿಲ್ಲ. ಹೀಗೆ ವಿಷಯವರ್ಜಿತನಾದವನಿಗೆ ಪ್ರಕಾಶವೇ ಇರುವದಿಲ್ಲ, ಉದಾಃ ಘಟದಂತೆ.

उक्तं च अन्यत्र– ज्ञातृज्ञेय विहीनंते ब्रह्म ज्ञानात्मकं यदि भोक्तृभोज्य विहीनापि भवेत् तर्हि भुजिक्रियेति।

ಮತ್ತೊಂದು ಕಡೆ ಶ್ರೀಮದಾಚಾರ್ಯರು ಹೀಗೆ ಹೇಳಿರುತ್ತಾರೆ- ಜ್ಞಾತೃ ಜ್ಞೇಯ ವಿಹೀನನಾದ ಬ್ರಹ್ಮನನ್ನು ಜ್ಞಾನಾತ್ಮಕ ಎಂದೆನ್ನುವದಾದರೆ, ಭೊಕ್ತೃ ಭೋಜ್ಯ ಇಲ್ಲದಿರುವಾಗ ಭೋಜನ ಕ್ರಿಯಾ ನೆರವೇರಲಿ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:



न तावत् आत्मा ज्ञाता ज्ञेयो वा।

ಆತ್ಮಾ ತಿಳಿಯುವವನು ಅಥವಾ ತಿಳಿಯುವವಸ್ತು ಆಗಲು ಸಾಧ್ಯವಿಲ್ಲ.

## ॥ सामान्य विशेष इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

सामान्यविशेषः जातिविशेषः।

ಸಾಮಾನ್ಯವಿಶೇಷವೆಂದರೆ ಜಾತಿವಿಶೇಷ ಎಂದರ್ಥ.

## ॥ परेण अनङ्गीकारात् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

जातेः अनेक अनुगतत्वेन आत्मत्वस्य जातित्वे आत्मनां बहुत्व आपत्तेः। तस्य च तव अनिष्टत्वात्। तथा च एक व्यक्तित्वेन नामत्वं जातिः इत्यर्थः।

ಜಾತಿಯು ಅನೇಕತ್ವದ ಅಧೀನವಾದ್ದರಿಂದ ಆತ್ಮತ್ವ ಜಾತಿತ್ವವಾದಲ್ಲಿ ಆತ್ಮನಿಗೆ ಬಹುತ್ವ ಉಂಟಾಗುತ್ತದೆ. ಅದು ನಿಮಗೆ ಅನಿಷ್ಟವಾಗಿರುತ್ತದೆ. ಅದರಂತೆ ಒಂದೆ ವ್ಯಕ್ತಿತ್ವಕ್ಕೆ ನಾಮತ್ವವನ್ನು ಜಾತಿ ಯಾಗಬೇಕಾಗುತ್ತದೆ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

नापि तत् अतिरिक्तम्। तस्य कल्पिततया मोक्षावस्थायां अभावात् इत्यर्थः।

ಹಾಗೂ ಆತ್ಮನ ಅತಿರಿಕ್ತ ಯಾವದೂ ಇರುವದಿಲ್ಲ. ಅದನ್ನು ಕಲ್ಪಿಸಿದಾಗ ಮೋಕ್ಷವಸ್ಥೆಯೆ ಇಲ್ಲದಾಗುತ್ತದೆ ಎಂದರ್ಥ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

ततश्च साध्य अव्यापकता इति भावः।

ಅದರಂತೆ ಇದು ಸಾಧ್ಯ ಅವ್ಯಾಪಕವಾಗುತ್ತದೆ ಎಂಬ ಭಾವ.

## ॥ कल्पितस्य तु इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

ननु कल्पितात्मनां बहूनां सत्वात् तत् इष्टं यत् कल्पितम् आत्मत्वं तत् जातिः भविष्यति इति आशङ्क्य निराकरोति– कल्पितस्य तु इति॥

ಕಲ್ಪಿತಾತ್ಮರ ಬಹುತ್ವವು ಸತ್ಯವಾಗಿರುವದರಿಂದ, ಈ ಟೀಕಾವಾಕ್ಯವು ಯಾವದು ಕಲ್ಪಿತವೊ ಅದು ಇಷ್ಟವಾದ ಆತ್ಮತ್ವ, ಅದು ಜಾತಿ ಆಗಬಹುದು ಎಂದು ಶಂಕಿಸಿ ಅದನ್ನು ನಿರಾಕರಿಸುತ್ತದೆ.

अन्योन्यस्मिन् अन्योन्यात्मकतां अन्योन्यधर्मांश्च अध्यस्य इति वदता परेण देहेन्द्रियादौ अपि आत्मत्व आरोपस्य अभ्युपगतत्वात् इत्यर्थः।

ಅನ್ಯೊನ್ಯಗಳಲ್ಲಿ ಅನ್ಯೋನ್ಯಾತ್ಮಕಗಳು ಅನ್ಯೋನ್ಯಧರ್ಮಗಳು ಅಧ್ಯಾಸ ಎಂದರೆ ಆರೋಪವಾದವುಗಳು ಎಂದು ಹೇಳುವ ಪರಪಕ್ಷದವರು ದೇಹೇಂದ್ರಿಯಾದಿಗಳಲ್ಲೂ ಆತ್ಮತ್ವದ ಆರೋಪವನ್ನು ಒಪ್ಪಿರುತ್ತಾರೆ ಎಂದರ್ಥ.

तथा च पक्षैकदेशाद् देहेन्द्रियादेः व्यावृत्तत्वेन साधन अव्यापकत्व अभावात् आत्मत्वं न उपाधिः इति भावः।

ಮತ್ತು ಅದರಂತೆ ಪಕ್ಷೈಕದೇಷದಿಂದ ದೇಹೇಂದ್ರಿಯಾದಿಗಳ ವ್ಯಾವೃತ್ತದಿಂದ ಸಾಧನ ಅವ್ಯಾಪಕತ್ವದ ಅಭಾವತೆಯಿಂದ ಅಂದರೆ ಸಾಧ್ಯ ವ್ಯಾಪಕತ್ವ ಇರುವದರಿಂದ, ಆತ್ಮತ್ವವು ಉಪಾಧಿ ಆಗುವದಿಲ್ಲ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

अन्योन्यस्मिन् अन्योन्यात्मकतां अध्यस्य" इति वदता परेण देहादौ आत्मत्व आरोपस्य अभ्युपगतत्वात् इत्यर्थः।

ಅನ್ಯೊನ್ಯಗಳಲ್ಲಿ ಅನ್ಯೋನ್ಯಾತ್ಮಕಗಳು ಅನ್ಯೋನ್ಯಧರ್ಮಗಳು ಅಧ್ಯಾಸ ಎಂದರೆ ಆರೋಪವಾದವುಗಳು ಎಂದು ಹೇಳುವ ಪರಪಕ್ಷದವರು ದೇಹಾದಿಗಳಲ್ಲೂ ಆತ್ಮತ್ವದ ಆರೋಪವನ್ನು ಒಪ್ಪಿರುತ್ತಾರೆ ಎಂದರ್ಥ

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

ननु कल्पितमेव आत्मत्वं उपाधिः इत्यत आह– कल्पितस्य इति॥

ಕಲ್ಪಿತತ್ವವಾದ ಆತ್ಮತ್ವ ಉಪಾಧಿಯಾಗಲಿ ಎಂಬುದನ್ನು ನಿರಾಕರಿಸಲು ಈ ಟೀಕಾವಾಕ್ಯವಿರುತ್ತದೆ.

देहादौ आत्मत्व आरोप सम्भवेन कल्पितस्य तत्र सद्भावात् इत्यर्थः। उपाधि व्यतिरेकेण साध्य व्यतिरेक साधन भाग असिद्धौ हेतु स्यात् इति भावः।

ದೇಹಾದಿಗಳಲ್ಲಿ ಆತ್ಮತ್ವದ್ ಆರೋಪ ಸಂಭವವಿರುವದರಿಂದ ಕಲ್ಪಿತವಾದವನು ಅಲ್ಲಿ ಸತ್ಯವಾಗಿ ಇರುತ್ತಾನೆ ಎಂದರ್ಥ. ಉಪಾಧಿ ವ್ಯತಿರೇಕದಿಂದ ಸಾಧ್ಯ ವ್ಯತಿರೇಕ ಸಾಧನ ಭಾಗ ಅಸಿದ್ಧ ಹೇತು ಆಗುತ್ತದೆ ಎಂಬ ಭಾವ.

## ॥ सद्भावात् इति ॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

ततश्च साधन व्यापकता इति भावः।

ಅದರಂತೆ ಆತ್ಮತ್ವವು ಸಾಧ್ಯ ವ್ಯಾಪಕವಾಗುತ್ತದೆ. ಆದ್ದರಿಂದ ಆತ್ಮತ್ವವು ಉಪಾಧಿಯಾಗುವದಿಲ್ಲ ಎಂಬ ಭಾವವಿರುತ್ತದೆ.

### ७.२.२.५ प्रपञ्च सत्यत्वे दृग्दृश्यसम्बन्धं विनैव दृश्यत्व उपपादनम्



## टीका

प्रपञ्चस्य सत्यत्वे दृग्दृश्यत्वयोः सम्बन्ध अनुपपत्तेः कथं दृश्यत्वम् इति चेत्। अन्तरेणैव सम्बन्धं दृश्यत्वं अस्तु। अतिप्रसङ्गं च प्रतीतिः एव अपाकरिष्यति।

ಪ್ರಪಂಚವು ಸತ್ಯವಾದರೆ, ದೃಗ್ ದೃಶ್ಯತ್ವಗಳ ಸಂಬಂಧ ಯುಕ್ತಿಯಿಂದ ಸಮರ್ಥಿಸಲು ಅಶಕ್ಯವಾದ್ದರಿಂದ ಅದೆಂತಹ ದೃಷ್ಯತ್ವ, ಎಂದರೆ? ಅದರ ಹೊರತಾದ ಸಂಬಂಧದಿಂದಲೇ ದೃಶ್ಯತ್ವವಿರಲಿ. ಮತ್ತು ಅಲ್ಲಿ ಉಂಟಾಗುವ ಅತಿಪ್ರಸಂಗವನ್ನು, ಅಲ್ಲಿ ಉಂಟಾಗುವ ಪ್ರತೀತಿಯಿಂದಲೇ ತಳ್ಳಿಹಾಕಬಹುದಾಗಿದೆ.

### टिप्पणीनाम् विशेषार्थानि

## ॥ प्रपञ्चस्य सत्यत्व इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

यदि प्रपञ्चः सत्यः स्यात् तर्हि दृग्दृश्ययोः सम्बन्ध अनुपपत्या दृश्यत्वमेव न स्यात्।

ಒಂದು ವೇಳೆ ಪ್ರಪಂಚವು ಸತ್ಯ ಎನ್ನುವುದಾದರೆ ದೃಗ್ ದೃಶ್ಯಗಳಲ್ಲಿಯ ಸಂಬಂಧವು ಯುಕ್ತಿ ಇಲ್ಲದಾದ್ದರಿಂದ ದೃಶ್ಯತ್ವವೇ ಇಲ್ಲ ವೆನ್ನಬೇಕಾಗುವದು.

तथा हि – वृत्तिप्रतिबिम्बित चैतन्य अभिव्यक्त अधिष्ठान चैतन्यरूपं यत् ज्ञानं तदेव दृग् इति उच्यते। तस्याः दृश्यस्य घटादेः प्रपञ्चस्य कः सम्बन्धः।

ಇದನ್ನು ಹೀಗೆ ವಿವರಿಸಬಹುದುಃ ವೃತ್ತಿ ಪ್ರತಿಬಿಂಬಿತ ಚೈತನ್ಯ ಅಭಿವ್ಯಕ್ತ ಅಧಿಷ್ಠಾನವಾದ ಚೈತನ್ಯರೂಪ, ಅದರ ಯಾವ ಜ್ಞಾನ ಅದನ್ನೆ ದೃಗ್ ಎಂದು ಹೇಳುತ್ತಾರೆ. ಅದರದು ಇಂದ್ರಿಯಗೋಚರವಾದ ಅಥವಾ ಅನುಭವಗೋಚರವಾದ ಘಟಾದಿ ಪ್ರಪಂಚದ ಜೊತೆ ಏನು ಸಂಬಂಧ?

न तावत् संयोगः। ज्ञानस्य अद्रव्यत्वात्।

ದೃಗ್ ದೃಶ್ಯಗಳ ಸಂಬಂಧ ಸಂಯೋಗವೆಂದು ಹೇಳಲಾಗದು. ಜ್ಞಾನವು ದ್ರವ್ಯತ್ವ ವಾಗುವದಿಲ್ಲ.

नापि समवायः। आत्मधर्मस्य ज्ञानस्य घटादेश्च अयुतसिद्धत्व अभावेन समवाय अयोगात्।

ದೃಗ್ ದೃಶ್ಯಗಳ ಸಂಬಂಧ ಸಮವಾಯ ಸಂಬಂಧ ಎಂದೂ ಹೇಳಲಾಗುವದಿಲ್ಲ. ಆತ್ಮಧರ್ಮದ ಜ್ಞಾನವು ಘಟಾದಿಗಳ ಅಯುತ ಸಿದ್ಧತ್ವವನ್ನು ಪಡೆದಿರುವದಿಲ್ಲ. ಆದರಿಂದ ಸಮವಾಯ ಸಂಬಂಧವನ್ನು ಹೇಳುವದು ಅಯೋಗ್ಯವಾಗಿರುತ್ತದೆ.

विषयविषयिभावस्तु सम्बन्ध एव न भवति। सम्बन्धिभिन्नत्व अभावात्। अद्विष्ठत्वात्।

ಮತ್ತು ವಿಷಯಿ ವಿಷಯಭಾವದ ಸಂಬಂಧವೇ ಆಗುವದಿಲ್ಲ. ಆತರಹದ ಸಂಬಂಧಿ ಭಿನ್ನತ್ವವೇ ಇರುವದಿಲ್ಲ. ಏಕೆಂದರೆ ಅದು ವಿಷಯವಿಲ್ಲದ್ದಾಗಿರುತ್ತದೆ.

**तथा च प्रपञ्चस्य सत्यत्वे दृग्दृश्ययोः संयोगसमवायरूप सम्बन्ध अनुपपत्तेः प्रपञ्चस्य दृशि अध्यस्तमेव सम्बन्ध इति वक्तव्यम्। आध्यासिक सम्बन्धश्च प्रपञ्चस्य सत्यत्वेन सम्भवति इति भवद् अनुमानस्य तर्कबाध इत्यर्थः।**

ಅದರಂತೆ ಪ್ರಪಂಚವು ಸತ್ಯವಾದರೆ ದೃಗ್ ದೃಶಗಳ ಸಂಯೋಗಸಮವಾಯುರೂಪ ಸಂಬಂಧ ಅಯುಕ್ತವಾದ್ದರಿಂದ ಪ್ರಪಂಚದ ದೃಶ್ಯದ ಆರೋಪಿತ ಅಥವಾ ಭ್ರಾಂತಿ ಸಂಬಂಧವೆಂದೆ ಹೇಳಬೇಕು. ಆದ್ದರಿಂದ ಆಧ್ಯಾಸಿಕ ಅಥವಾ ಆರೋಪಿತ, ಭ್ರಾಂತಿ ಸಂಬಂಧವುಳ್ಳ ಪ್ರಪಂಚದ ಸತ್ಯತ್ವದಿಂದ, ಸಿದ್ಧಾಂತಿ ಪ್ರತಿಪಾದಿಸಿದ ಪ್ರಪಂಚ ಸತ್ಯತ್ವ ಅನುಮಾನಕ್ಕೆ ತರ್ಕಬಾಧ ಉಂಟಾಗುತ್ತದೆ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**यदि प्रपञ्चः सत्यं तर्हि दृश्यत्वं न स्यात्। दृश्यत्वस्य दृग्दृश्य सम्बन्ध निबन्ध निबन्धत्वात्। सम्बन्धस्य च दृश्य आरोपितत्वात्। अन्यस्य अभावात्। तस्य त्वया अङ्गीकारात् इति भावः।**

ಒಂದು ವೇಳೆ ಪ್ರಪಂಚ ಸತ್ಯವಾದರೆ ದೃಶ್ಯತ್ವ ಇರುವದಿಲ್ಲ. ದೃಶ್ಯತ್ವವು ದೃಗ್ ದೃಶ್ಯಗಳ ಸಂಬಂಧ ನಿಯಮದಿಂದ ಬಂಧಿಸಿರುತ್ತದೆ. ಮತ್ತು ಬೇರೆ ಸಂಬಂಧವಿಲ್ಲದಾಗ ದೃಶ್ಯವು ಆರೋಪಿತವಾಗಿರುತ್ತದೆ. ಅದನ್ನು ನೀವು ಅಂಗೀಕರಿಸಿರುತ್ತೀರಿ ಎಂಬ ಭಾವವಿರುತ್ತದೆ.

## ॥ सम्बन्ध अनुपपत्तेः इति ॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**आत्मगुणस्य ज्ञानस्य ज्ञेयेन संयोग समवाययोः अयोगात्, विषयविषयि भावस्य च अद्विष्टत्वेन असम्बन्धत्वात् अन्यस्य च सम्बन्धस्य असम्भवात् इति भावः।**

ಆತ್ಮಗುಣದ ಜ್ಞಾನಕ್ಕೆ ತಿಳಿಯಲ್ಪಡುವದರಿಂದ ಸಂಯೋಗ ಸಮಾವಾಯ ಸಂಬಂಧ ಅಯೋಗ್ಯವಾಗಿರುತ್ತದೆ. ಅದು ವಿಷಯಹೀನವಾದ್ದರಿಂದ ವಿಷಯಿವಿಷಯಭಾವ ಸಂಬಂಧವೇ ಇರುವದಿಲ್ಲವಾದ್ದರಿಂದ ಅನ್ಯ ಯಾವ ಸಂಬಂಧವು ಅಸಂಭವವಾಗಿರುತ್ತದೆ.

## ॥ अन्तरेणैव सम्बन्धं इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**दृग्दृश्ययोः इति वर्तते।**

ಅಂದರೆ, ಅದರ ಹೊರತಾಗಿ ಸಂಬಂಧ ದೃಗ್ ದೃಶ್ಯತ್ವಗಳಲ್ಲಿ ಇರುತ್ತದೆ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**यथा असम्बन्धं अन्तरेण एव सम्बन्धो भवति एवं सम्बन्धं अन्तरेण एव दृश्यं अस्तु। धर्मस्य सम्बन्ध अपेक्ष नियम अभावात् इति भावः।**



ಹೇಗೆ ಅಸಂಬಂಧವು ಅಂತರೇಣದಿಂದಲೇ ಸಂಬಂಧವಾಗುತ್ತದೋ ಅಂದರೆ ಸಂಬಂಧ ಹೊರತಾಗಿ ಸಂಬಂಧವಾಗುತ್ತದೊ, ಅದರಂತೆ ಸಂಬಂಧವಿಲ್ಲದೆಯೆ ದೃಶ್ಯವಿರಲಿ. ಅಂದರೆ ಧರ್ಮದ ಸಂಬಂಧ ಅಪೆಕ್ಷೆ ನಿಯಮವಿಲ್ಲದೆ ಎಂಬ ಭಾವ.

## ॥ अतिप्रसङ्गं च इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु सम्बन्धं अन्तरेण दृश्यत्व अङ्गीकारे घट ज्ञानस्य पटोऽपि विषयः स्यात् इति अतिप्रसङ्ग इति चेत् तत्र आह– अतिप्रसङ्गं च इति॥**

ದೃಗ್ ದೃಶ್ಯಗಳ ಸಂಬಂಧದ ಹೊರತಾಗಿ ದೃಶ್ಯತ್ವವನ್ನು ಅಂಗೀಕರಿಸಿದರೆ ಘಟ ಜ್ಞಾನದ ಪಟವು ಕೂಡ ವಿಷಯವಾಗಬೇಕಾಗುತ್ತದೆ ಎಂದು ಅತಿಪ್ರಸಂಗ ಉಂಟಾಗುತ್ತದೆ ಎಂದರೆ? ಇದನ್ನು ನಿವಾರಿಸಲು ಈ ಟೀಕಾವಾಕ್ಯ ಇರುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**अयं भावः – दृश्यत्व नियामकत्वेन सम्बन्धो वाच्य इति हि त्वया उच्यते।**
**यथा उक्तं "न च दृक्सम्बन्धमात्रेण दृश्यत्वं इति युज्यते अतिप्रसङ्गात्" इति। तत् असङ्गतम्।**

ಇಲ್ಲಿ ಈ ಭಾವವಿರುತ್ತದೆ: ದೃಶ್ಯತ್ವ ನಿಯಾಮಕತ್ವದಿಂದ ಸಂಬಂಧವನ್ನು ಹೇಳಬೇಕೆಂದು ನೀವು (ಪರಪಕ್ಷದವರು) ಹೇಳುತ್ತೀರಿ. ತಮ್ಮ ಉಕ್ತಿ ಹೀಗಿರುತ್ತದೆ "ದೃಕ್ ಸಂಬಂಧಮಾತ್ರದಿಂದ ದೃಶ್ಯತ್ವವನ್ನು ಹೇಳಲಾಗುವದಿಲ್ಲ ಅತಿಪ್ರಸಂಗ ಉಂಟಾಗುತ್ತದೆ" ಎಂದು. ಅದು ಅಸಂಗತವಾಗಿದೆ.

**तथात्वे हि– तस्याऽपि नियामकान्तरं कल्प्यम्। एवं तस्य तस्याऽपि इति अनवस्था स्यात्। तथा च तत् परिहारार्थं "कश्चित् स्वनिर्वाहकः स्वभाव एव नियामकः। स च प्रतीति उन्नेयः" इति वाच्यम्। तथा च आदौ एव तथास्तु लाघवात्। न च एवं इति स्वभाववादप्रसङ्गः। बहुधा अन्वेषणेऽपि नियामकान्तर अलाभे स्वभाव स्वीकरणात्। प्रकृते च वास्तव सम्बन्धस्य भवत एव महता प्रयासेन निराकृततया तत् अलाभः तावत् सिद्धः।**

ಹಾಗಾದರೆ ಅದನ್ನು ಹೀಗೆ ವಿವರಿಸಬಹುದು: ಅದಕ್ಕೂ ಬೇರೆ ನಿಯಾಮಕವನ್ನು ಕಲ್ಪಿಸ ಬೇಕು. ಇನ್ನು ಅದಕ್ಕೂ ಮತ್ತೊಂದು ನಿಯಾಮಕವನ್ನು ಕಲ್ಪಿಸ ಬೇಕು, ಅದಕ್ಕೂ ಮತ್ತೊಂದು ಹೀಗೆ ಅನವಸ್ಥಾ ಉಂಟಾಗುತ್ತದೆ. ಹಾಗೆಯೆ ಅದರ ಪರಿಹಾರಕ್ಕಾಗಿ " ಯಾವದೋ ಸ್ವನಿರ್ವಾಹಕ ಸ್ವಭಾವವನ್ನೆ ನಿಯಾಮಕ ಎನ್ನಬೇಕು. ಅದು ಪ್ರತೀತಿ ಮೂಲಕ ಊಹಿಸಲ್ಪಡುತ್ತದೆ" ಎಂದು ಹೇಳಬೇಕು. ಹೀಗಾಗಿ ಮೊದಲನೆಯದೆ ಹೇಗಿದೆಯೋ ಹಾಗೆ ಇರಲಿ. ಈ ರೀತಿಯಾಗಿ ಬಹಳವಾಗಿ ಶೋಧಿಸಿದನಂತರ ಯಾವ ನಿಯಾಮಕ ಸಿಗದೆ ಇದ್ದ ಪಕ್ಷದಲ್ಲಿ ಈ ಸ್ವಭಾವವಾದ ಸ್ವೀಕರಿಸಲಾಗುವದರಿಂದ ಈ ಪಕ್ಷವು ಹಗುರವಾಗಿದೆ. ಹೀಗಾಗಿ ಅದನ್ನು ಸ್ವೀಕರಿಸುವದು ಅಯೋಗ್ಯವಾಗಿದೆ. ಮತ್ತು ಪ್ರಕೃತದಲ್ಲಿ, ವಾಸ್ತವವಾದ

ಸಂಬಂಧವಿರುವಾಗ ಮಹತ್ ಪ್ರಯತ್ನದಿಂದ ಅದನ್ನು ನಿರಾಕರಿಸಿ, ಬೇರೆ ನಿಯಾಮಕ ಸಿಗದೆ ಇರುವದರಿಂದ, ಪ್ರಕೃತದಲ್ಲಿಯ ಸಂಬಂಧ ಸಿದ್ಧವಾಗುತ್ತದೆ.

**आध्यासिक सम्बन्धोऽपि स्वस्य दृश्यता निर्वाहार्थं आध्यासिक सम्बन्धान्तरं अपेक्षते, एवं तदपि सम्बन्धान्तरं अपेक्षत इति अनवस्थानात् न नियामकः। किं च आध्यासिक सम्बन्ध इति कः अर्थः। किं यः कश्चित् सम्बन्ध एव अध्यस्त इति वा। किं वा दृश्यस्य दृग् अध्यस्तत्वं नाम सम्बन्ध इति। आद्ये सम्बन्धमात्रस्यैव मिथ्यात्वं लब्धं न दृश्यवर्गस्य इति तव अभिमतासिद्धिः। न द्वितीयः दृष्टदृश्यत्व निर्वाहार्थं तत् कल्पने दृष्ट अनेकपदार्थ हानिप्रसङ्गेन तस्य अकल्पनीयत्वात् न हि अल्पस्य हेतोः बहुत्यागो युक्त इति।**

ಇನ್ನು ಸ್ವತಃ ದೃಶ್ಯತ್ವವನ್ನು ನಿರ್ವಹಿಸುವಗೋಸ್ಕರ ಆಧ್ಯಾಸಿಕ ಅಂದರೆ ಆರೋಪಿತವಾದ ಸಂಬಂಧವನ್ನು ಹೇಳಬೇಕು, ಆ ಸಂಬಂಧವು ಮತ್ತೊಂದು ಸಂಬಂಧವನ್ನು ಅಪೇಕ್ಷಿಸುತ್ತದೆ, ಅದು ಮತ್ತೊಂದು ಹೀಗೆ ಇಲ್ಲಿ ಕೂಡ ಅನವಸ್ಥಾ ಉಂಟಾಗುವದರಿಂದ ನಿಯಾಮಕ ಸಿಗುವದೇ ಇಲ್ಲ. ಮತ್ತು ಆಧ್ಯಾಸಿಕ ಸಂಬಂಧವೆಂದರೆ ಏನರ್ಥಾ? ಯಃಕಶ್ಚಿತ್ ಸಂಬಂಧವೇ ಅಧ್ಯಸ್ತವೆಂದೊ? ಅಥವಾ ದೃಶ್ಯದ ದೃಗ್ ಅಧ್ಯಸ್ತ ಸಂಬಂಧವೆಂದೊ? ಮೊದಲನೆಯದಾದರೆ, ಸಂಬಂಧಮಾತ್ರದಿಂದಲೇ ಮಿಥ್ಯಾತ್ವ ಲಬ್ದವಾಗುತ್ತದೆ ವಿನಹಾ, ದೃಶ್ಯವರ್ಗದಿಂದಲ್ಲ ಎಂದು, ನಿಮ್ಮ ಅಭಿಮತ ಸಿದ್ಧವಾಗುವದಿಲ್ಲ. ಎರಡನೆಯ ವಿಕಲ್ಪವೂ ಸರಿಯೆನಿಸುವದಿಲ್ಲ. ದೃಷ್ಟ ದೃಶ್ಯ ನಿರ್ವಾಹಾರ್ಥಕ್ಕಾಗಿ ಅದನ್ನು ಕಲ್ಪಿಸುವದರಿಂದ ದೃಷ್ಟ ಅನೇಕಪದಾರ್ಥ ಉಂಟಾಗಿ ತಮ್ಮ ಮತಕ್ಕೆ ಹಾನಿಪ್ರಸಂಗ ಉಂಟಾಗುವದರಿಂದ ಅದು ತಮಗೆ ಅಕಲ್ಪನೀಯವಾಗಿರುತ್ತದೆ. ಯಾರು ಅಲ್ಪ ಹೇತುವಿಗಾಗಿ ದೊಡ್ಡದನ್ನು ತ್ಯಾಗಮಾಡುವದಿಲ್ಲ.

**अथवा, अस्तु कश्चित् दृग्दृश्ययोः सम्बन्धः। स च सम्बन्धिभ्यां न भिद्यते। येन सम्बन्धिभिन्न सम्बन्धस्य सम्बन्धिना सम्बन्धान्तरं अङ्गीकार्यम्। एवं तस्य तस्यापि इति अनवस्था स्यात्। न च एवं सम्बन्ध अभाव प्रसङ्गः। ज्ञान अभेदमात्रेण आनन्द अभाव प्रसङ्गेन मोक्षस्य अपुमर्थता प्रसङ्गात्।**

**अस्मत् मते अभेदेऽपि विशेषबलात् एकतर परिशेष अभावस्य अन्यत्र उपपादितत्वात्।**

ಅಥವಾ ದೃಗ್ ದೃಶ್ಯತ್ವಗಳಲ್ಲಿ ಯಾವುದಾದರೊಂದು ಸಂಬಂಧ ಇರಲಿ. ಯಾವದು ಸಂಬಂಧಿಗಳನ್ನು ಭಿನ್ನಿಸುವದಿಲ್ಲ. ಇದರಿಂದ ಸಂಬಂಧಿಭಿನ್ನ ಸಂಬಂಧದ ಸಂಬಂಧಿಯ ಸಂಭಂಧಾಂತರಗಳನ್ನು ಅಂಗೀಕರಿಸ ಬೇಕು. ಈ ರೀತಿಯಾಗಿ ಸಂಬಂಧಾಂತರಗಳ ಅನವಸ್ಥಾ ಉಂಟಾಗುತ್ತದೆ. ಮತ್ತು ಈ ರೀತಿಯಾಗಿ ಇಲ್ಲಿ ಸಂಬಂಧ ಇಲ್ಲದಿರುವ ಪ್ರಸಂಗ ಬರುವದು ಎಂದು ಹೇಳಬಾರದು. ಹಾಗಾದರೆ, ಜ್ಞಾನದ ಅಭೇದಮಾತ್ರದಿಂದ ಆನಂದ ಅಭಾವ ಪ್ರಸಂಗದಿಂದ ಮೋಕ್ಷಕ್ಕೆ ಅಪುರುಷಾರ್ಥ ಪ್ರಸಂಗ ಒದಗುವದು.

ನಮ್ಮ ಮತದಲ್ಲಿ ಅಭೇದವಿದ್ದರೂ ವಿಶೇಷದ ಬಲದಿಂದ ಒಂದರ ಪರಿಶೇಷ ಇಲ್ಲದಿರುವಿಕೆಯನ್ನು ಮತ್ತೆಡೆ ಗ್ರಂಥಗಳಲ್ಲಿ ಸಮರ್ಥಿಸಲಾಗಿದೆ.



ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**ननु यदि सम्बन्धं अनपेक्ष्य एव दृश्यत्वं स्यात् तर्हि वन्हि सम्बन्धं विना एव काष्ठादिना दाहः स्यात्। अविशेषात् इत्यत् आह्– अतिप्रसङ्गं इति॥**

**सम्बन्धं विना दाह अदर्शनात्। सम्बन्ध सापेक्ष सम्बन्ध विना अपि दृश्यत्व दर्शनात्। दृश्यत्वं सम्बन्ध निरपेक्ष धर्मः। ततश्च न अतिप्रसङ्गः इति पराकरिष्यति इत्यर्थः।**

ಒಂದು ವೇಳೆ ಸಂಬಂಧವನ್ನು ಅಪೇಕ್ಷಿಸದೆ ದೃಷ್ಯತ್ವ ಉಂಟಾಗುವದಾದರೆ ಬೆಂಕಿಯ ಸಂಬಂಧವಿಲ್ಲದೆಯೆ ಕಟ್ಟಿಗೆಗಳಿಗೆ ಉರಿತ ಉಂಟಾಗಬೇಕಾಗುವದು. ಹೀಗೆ ಅವಿಶೇಷತನದಿಂದ ಉಂಟಾದ ಅತಿಪ್ರಸಂಗವನ್ನು ಈ ಟಿಕಾವಾಕ್ಯ ತಳ್ಳಿ ಹಾಕುತ್ತಾದೆ. ಇಲ್ಲಿ ವಹ್ನಿಯ ಸಂಬಂಧವಿಲ್ಲದೆ ಉರಿಕೆ ಕಾಣುವದಿಲ್ಲ.

ಸಂಬಂಧ ಸಾಪೇಕ್ಷ ಸಂಬಂಧವಿಲ್ಲದೆಯೂ ದೃಶ್ಯತ್ವ ಕಂಡುಬರುತ್ತದೆ. ದೃಶ್ಯತ್ವವು ಸಂಬಂಧ ನಿರಪೇಕ್ಷ ಧರ್ಮವಾಗಿರುತ್ತದೆ. ಅದರಂತೆ, ಇಲ್ಲಿ ಅತಿಪ್ರಸಂಗ ಉಂಟಾಗುವದಿಲ್ಲ ಎಂದು ಪರಿಹರಿಸಲಾಗಿದೆ ಎಂದರ್ಥ.

॥ प्रतीतिः एव इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**घट ज्ञानवान् अहं इति अनुव्यवसायरूप प्रतीत्या घट ज्ञानस्य घटविषयकत्वस्यैव अवगाहनात् न पटविषकत्वं इति न अतिप्रसङ्ग इति भावः।**

ನಾನು ಘಟವನ್ನು ತಿಳಿದಿದ್ದೇನೆ ಎಂದು ಅನುವ್ಯವಸಾಯರೂಪ ಪ್ರತೀತಿಯಿಂದ ಘಟ ಜ್ಞಾನವು ಘಟ ವಿಷಯವನ್ನೆ ಅವಗಾಹಿಸುವದು ವಿನಹಾ ಪಟವಿಷಯವನ್ನಲ್ಲ. ಆದ್ದರಿಂದ ಇಲ್ಲಿ ಅತಿಪ್ರಸಂಗಕ್ಕೆ ಆಸ್ಪದವಿರುವದಿಲ್ಲ.

### ७.२.२.६ दृग्दृश्यत्वयोः संयोगसम्बन्ध अङ्गीकृत्य दृश्यत्वोपपादनम्

## टीका

**संयोगो वा अस्तु। गुणत्वात् न इति चेत्। त्यज्यतां गुणत्वम्, गुणत्वे वा। गुणादिपञ्चकस्य निर्गुणत्व निष्क्रियत्व परिभाषा न आदरणीया।**

ದೃಗ್ ದೃಶ್ಯತ್ವಕ್ಕೆ ಸಂಯೋಗ ಸಂಬಂಧ ಇರಲಿ. ಅದು ದೃಗ ದೃಶ್ಯಗುಣವಾದ್ದರಿಂದ ಅದಕ್ಕೆ ಸಂಯೋಗ ಸಂಬಂಧವನ್ನು ಹೇಳಲು ಬರುವದಿಲ್ಲ ಎಂದರೆ? ದೃಗ್ ಜ್ಞಾನದ ದೃಶ್ಯಗುಣ ತ್ಯಜಿಸಿರಿ ಅಥವಾ ದೃಶ್ಯಗುಣ ಇರಲಿ, ಅದಕ್ಕೆನೆಂತೆ? ಗುಣಾದಿಪಂಚಕಕ್ಕೆ ಅಂದರೆ ಗುಣ, ಕರ್ಮ, ಸಾಮಾನ್ಯ ವಿಶೇಷ ಮತ್ತು ಅವುಗಳ ಸಮವಾಯರೂಪ ಸಂಬಂಧ ಎಂಬ ಪಂಚ

ಪದಾರ್ಥಗಳಿಗೆ, ನಿಷ್ಕ್ರಿಯತ್ವ ಅಥವಾ ನಿರ್ಗುಣತ್ವವನ್ನು ಹೇಳುವದು ತಾತ್ವಿಕ ವಿಚಾರದಲ್ಲಿ ಆದರಣೀಯ ಏನಿಸುವದಿಲ್ಲ.

## टिप्पणीनाम् विशेषार्थानि

### ॥ संयोगो वा अस्तु इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**अन्तरेण एव सम्बन्धं दृश्यत्वं अस्तु इत्युक्तम्। अस्तु वा सम्बन्धः। स च संयोगः समवायश्च इति द्विविधः। तत्र आद्य तावत् अस्तु इत्याह– संयोगो वा अस्तु इति॥**

ಅಂತರೆಣ, ಹೊರತು ಸಂಬಂಧವೇ ದೃಶ್ಯತ್ವಕ್ಕೆ ಇರಲಿ ಎಂದು ಹೇಳಲಾಯಿತು. ಅಥವಾ ಯಾವುದಾದರು ಸಂಬಂಧ ಇರಲಿ. ಸಂಬಂಧವು ಎರಡು ತರಹದ್ದಾಗಿರುತ್ತದೆಃ ಸಂಯೋಗ ಮತ್ತು ಸಮವಾಯು ಎಂದು. ಅಲ್ಲಿ ಮೊದಲನೆಯದಾದ ಸಂಯೋಗವಿರಲಿ ಎಂದು ಈ ಟೀಕಾವಾಕ್ಯ ಪ್ರತಿಪಾದಿಸುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**ननु स तर्हि सम्बन्धः संयोगः समवायो वा। आद्यः तावत् अस्तु इत्याह– संयोगो वा इति॥**

ದೃಶ್ಯತ್ವಕ್ಕೆ ಸಂಬಂಧ ಇರಲಿ ಎನ್ನುವುದಾದರೆ, ಸಂಬಂಧವು ಸಂಯೋಗ ಅಥವಾ ಸಮವಾಯ ಎಂದು ಎರಡು ತರಹದ್ದಾಗಿರುತ್ತದೆ. ಈಗ ಮೊದಲನೆಯದಾದ ಸಂಯೋಗ ಸಂಬಂಧವಿರಲಿ ಎಂದು ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ

### ॥ गुणत्वात् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ज्ञानस्य इति शेषः। द्रव्ययोः एव संयोग इति भावः।**

ಇಲ್ಲಿ ಗುಣತ್ವಾತ್ ಎಂಬಲ್ಲಿ ज्ञानस्य इति ಎಂಬ ಪದಗಳನ್ನು ಸೇರಿಸಿ ಅರ್ಥಮಾಡಬೇಕು. ಅಂದರೆ ಜ್ಞಾನವು ಗುಣತ್ವವಾಗಿರುವದರಿಂದ ಸಂಯೋಗ ಸಂಬಂಧವನ್ನು ಅದಕ್ಕೆ ಹೇಳಲು ಬರುವದಿಲ್ಲ ಎಂದರ್ಥ. ಏಕೆಂದರೆ ದ್ರವ್ಯಗಳಲ್ಲಿ ಮಾತ್ರ ಸಂಯೋಗ ಸಂಬಂಧವನ್ನು ಹೇಳಲು ಬರುತ್ತದೆ ಎಂಬ ಭಾವ ವಿರುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆಃ

**दृश्यगुणत्वात् इत्यर्थः।**

ಇಲ್ಲಿ ಗುಣತ್ವ ಎಂದರೆ ದೃಶ್ಯಗುಣತ್ವ ಎಂದರ್ಥ.

### ॥ त्यज्यतां गुणत्वम् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ज्ञानस्य इति शेषः।**



ಇಲ್ಲಿ ಕೂಡ ಮೇಲಿನಂತೆ ज्ञानस्य इति ಎಂಬ ಪದವನ್ನು ಸೇರಿಸಿ ಅರ್ಥಮಾಡಬೇಕು. ಅಂದರೆ ಜ್ಞಾನದ ಗುಣತ್ವ ತ್ಯಜಿಸುವಂತಾಗಲಿ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**ज्ञानस्य इति शेषः।**

ಇಲ್ಲಿ ಕೂಡ ಮೇಲಿನಂತೆ ज्ञानस्य इति ಎಂಬ ಪದವನ್ನು ಸೇರಿಸಿ ಅರ್ಥಮಾಡಬೇಕು. ಅಂದರೆ ಜ್ಞಾನದ ಗುಣತ್ವ ತ್ಯಜಿಸುವಂತಾಗಲಿ ಎಂದರ್ಥ.

### ॥ गुणत्वे वा इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**तुष्यतु दुर्जन इति न्यायेन आह – गुणत्वे वा।**

ದುರ್ಜನರಿಗೆ ಆನಂದವಾಗುವುದಾದರೆ ಜ್ಞಾನವು ಗುಣತ್ವವಾಗಿದೆ ಎಂದಾಗಲಿ ಎಂದು ಈ ಟೀಕಾವಾಕ್ಯ ನಮೂದಿಸುತ್ತದೆ.

**ज्ञानस्य गुणत्वेऽपि घटादीनां संयोग एव सम्बन्धः अस्तु।**

ಜ್ಞಾನವು ಗುಣತ್ವವಾದರೂ ಘಟಾದಿಗಳ ಜೊತೆ ಸಂಯೋಗವೇ ಸಂಬಂಧವಿರಲಿ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆಃ

**ननु ज्ञानं गुणः अनित्यत्वे सति एकेन्द्रिय ग्राह्यत्वात् रूपवत् इति अनुमानेन सिद्धस्य गुणत्वस्य कथं त्याग् इत्यत अङ्गीकृत्य गुणत्वं संयोगं उपपादयति– गुणत्वे वा इति॥**

"ज्ञानं गुणः अनित्यत्वे सति एकेन्द्रिय ग्राह्यत्वात् रूपवत्" ಎಂಬ ಅನುಮಾನದಿಂದ ಸಿದ್ಧವಾದ ಗುಣತ್ವವನ್ನು ಏಕೆ ತ್ಯಜಿಸಬೇಕು ಎಂದು, ಜ್ಞಾನಕ್ಕೆ ಗುಣತ್ವ ಸಂಯೋಗವನ್ನು ಈ ಟೀಕಾವಾಕ್ಯ ಸಮರ್ಥಿಸುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**अयं अभिप्रायः– गुणे क्रिया तावत् अङ्गीकार्या।**

ಇಲ್ಲಿ ಈ ಅಭಿಪ್ರಾಯವಿರುತ್ತದೆಃ ಗುಣದ ಕ್ರಿಯೆಯನ್ನು ಅಂಗೀಕರಿಸಬೇಕು.

**पटे गच्छति तद्गतरूपेऽपि गति दर्शनात्। पटगता सा रूपे प्रतीयत इति चेत् विपरीतं किं न स्यात्। पट अवयव तन्तुगता गतिः पटे प्रतीयत इति वक्तुं शक्यत्वात् अतिप्रसङ्गाच्च।**

ಪಟ ಹೋಗುತ್ತಿರುವಾಗ ತದ್ಗತ ರೂಪದ ಗತಿಕೂಡ ಕಂಡುಬರುತ್ತದೆ. ಇದನ್ನು ಪಟ ಹೋಗುತ್ತಿದೆ ಎಂದು ಆ ರೂಪ ಕಂಡುಬರುತ್ತದೆ ಎಂದು ಹೇಳುತ್ತೇವೆ ಎಂದರೆ ಅದರ ವಿಪರೀತವಾಗಿಯೂ ಏಕೆ ಹೇಳಬಾರದು. ಪಟ ಅವಯವ ತಂತುಗಳ ಹೋಗಿತ್ತಿರುವ ಗತಿ ಪಟದಲ್ಲಿ ಕಾಣುತ್ತದೆ ಎಂದು ಹೇಳುವದು ಶಕ್ಯವಾಗಿರುತ್ತದೆ, ಮತ್ತು ತಾವು ಹೇಳುವದು ಅತಿಪ್ರಸಂಗ ಕೂಡ ಏನಿಸುತ್ತದೆ,

**किं च गच्छत्पटनिष्ठ महारजन द्रव्ये, गतिः अस्ति न वा।**

ಮತ್ತು ಇನ್ನು ಹೋಗುತ್ತಿರುವ ಪಟನಿಷ್ಠ ಮಹಾರಜನ ದ್ರವ್ಯಕ್ಕೆ ಗತಿ ಇದೆಯೊ ಅಥವಾ ಇಲ್ಲವೊ?

**न चेत् महारजनस्य देशान्तरेण सह संयोगो न स्यात्। असमवायिकारण अभावात्।**
**न च पटनिष्ठक्रिया तत् असमवायिकारणम्। कार्यैकार्थ प्रत्यासत्तेः कारणैकार्थ प्रत्यासत्तेश्च अभावेन तस्याः समवायिकारण प्रत्यासत्त्यभावात्।**

ಪಟನಿಷ್ಠ ಮಹಾರಜನ ದ್ರವ್ಯಕ್ಕೆ ಗತಿ ಇಲ್ಲ ಎನ್ನುವುದಾದರೆ, ಮಹಾರಜನದ ದೇಶಾಂತರದ ಜೊತೆ ಸಂಯೋಗವನ್ನು ಹೇಳಲು ಬರುವದಿಲ್ಲ. ಏಕೆಂದರೆ ಅಲ್ಲಿ ಅಸಮವಾಯಿಕಾರಣ ಇರುವದಿಲ್ಲ. ಮತ್ತು ಪಟನಿಷ್ಠಕ್ರಿಯಾ ಅದರ ಅಸಮವಾಯಿಕಾರಣವಾಗುವದಿಲ್ಲ. ಕಾರ್ಯಕ್ಕಾಗಿ ಸಾಮಿಪ್ಯ ಕಾರಣಕ್ಕಾಗಿ ಸಾಮಿಪ್ಯ ಇಲ್ಲದಿರುವದರಿಂದ ಅವುಗಳ ಸಮವಾಯಿಕಾರಣ ಸಾಮಿಪ್ಯ ಇರುವದಿಲ್ಲ.

**नापि परदेशान्तर संयोगः। देशान्तरेण पटस्य संयोगानन्तर महारजनस्य देशान्तरेणसह संयोग प्रतीति प्रसङ्गात्। तन्तु देशान्तर संयोगात् एव पटस्य देशान्तर संयोग सिद्धौ पटे क्रियाभाव प्रसंङ्गाच्च।**

ಇದು ಪರದೇಶಾಂತರ ಸಂಯೋಗ ಕೂಡ ಆಗುವದಿಲ್ಲ. ಏಕೆಂದರೆ, ದೇಶಾಂತರ ಜೊತೆ ಪಟದ ಸಂಯೋಗದ ನಂತರ ಮಹಾರಜನದ ದೆಶಾಂತರ ಜೊತೆ ಸಂಯೋಗ ಪ್ರತೀತಿ ಉಂಟಾಗುವ ಪ್ರಸಂಗ ಒದಗುವದು. ಹಾಗೂ ತಂತು ದೇಶಾಂತರ ಸಂಯೋಗದಿಂದಲೇ ಪಟದ ದೇಶಾಂತರ ಸಂಯೋಗ ಸಿದ್ಧವಾದಾಗ ಪಟದ ಕ್ರಿಯಾಭಾವ ಪ್ರಸಂಗ ಉಂಟಾಗುವದು.

**न च क्रियावता पटेन महारजन संयोगः तद् असमवायिकारणम्। क्रियाहीनस्य महारजन द्रव्यस्य क्रियावता पटेन संयोग अनुपपत्तेः।**

ಕ್ರಿಯಾವಂತ ಪಟದ ಜೊತೆ ಮಹಾರಜನದ ಸಂಯೋಗವು ಅಸಮವಾಯಿಕಾರಣ ಆಗುವದಿಲ್ಲ. ಕ್ರಿಯಾಹೀನನಾದ ಮಹಾರಜನ ದ್ರವ್ಯದ ಕ್ರಿಯಾವಂತ ಪಟದ ಜೊತೆ ಸಂಯೋಗವು ಯುಕ್ತಿವಿಹೀನವಾಗಿರುತ್ತದೆ.

**क्रियावत् संयोगस्य संयोग प्रतिसम्बन्धिनि क्रियाम् उत्पादयतः तन्निष्ठ क्रियाद्वारवतस्य देशान्तर संयोग उत्पादकता नियमेन महारजने क्रिया स्वीकार अवश्यम्भावाच्च।**
**तस्मात् गच्छत् पटनिष्ठ महारजने गतिः अस्ति इति पक्ष एव आश्रयणीयः। एवं च तदरीत्या रूपादौ अपि क्रियासिद्धिः। अनुभवस्य अविशेषात्।**

ಕ್ರಿಯೆಯಂತೆ ಸಂಯೋಗದ, ಸಂಯೋಗ ಪ್ರತಿ ಸಂಬಂಧಿಯ ಕ್ರಿಯೆಯನ್ನು ಉತ್ಪಾದಿಸುತ್ತಿರಲು ಅದರ ನಿಷ್ಠ ಕ್ರಿಯಾದ್ವಾರವಾದಂತಿರುವ ದೇಶಾಂತರ ಸಂಯೋಗ ಉತ್ಪಾದಕತೆಯ ನಿಯಮದಿಂದ ಮಹಾರಜನದಲ್ಲಿ ಕ್ರಿಯೆಯನ್ನು ಸ್ವೀಕರಿಸುವದು ಆವಶ್ಯಕವಾಗಿರುತ್ತದೆ.

ಆದ್ದರಿಂದ ಹೋಗುತ್ತಿರುವ ಪಟನಿಷ್ಠ ಮಹಾರಜನದಲ್ಲಿ ಗತಿ ಇದೆ ಎಂಬ ಪಕ್ಷವನ್ನೇ ಆಶಯಿಸಬೇಕು. ಮತ್ತು ಅದೇ ರೀತಿಯಾಗಿ ರೂಪಾದಿಗಳಲ್ಲಿ ಕ್ರಿಯಾಸಿದ್ಧಿಯನ್ನು ಅಂಗೀಕರಿಸಬೇಕು. ಇದು ಅನುಭವಸಿದ್ಧ. ಆದ್ದರಿಂದ ಅದರಲ್ಲಿ ವಿಶೇಶವೇನು ಇಲ್ಲ.



**एवं गुणे गुणः अपि अङ्गीकार्या। "एकं रूपं", "चतुर्विंशतिर्गुणाः" इति गुणेऽपि सङ्ख्यादि गुण प्रतीतेः।**

ಈ ರೀತಿಯಾಗಿ ಗುಣದಲ್ಲಿ ಗುಣವನ್ನು ಕೂಡ ಅಂಗೀಕರಿಸಬೇಕು. "ಒಂದು ರೂಪ", "ಇಪ್ಪತ್ತನಾಲ್ಕು ಗುಣಗಳು" ಎಂದು ಗುಣದಲ್ಲಿ ಕೂಡ ಸಂಖ್ಯಾದಿ ಗುಣ ಪ್ರತೀತವಾಗುತ್ತದೆ.

**यद्यपि गुणे संयोग व्यवहारं "द्रव्ययोः एव संयोगः" इति दर्शनाभ्यासवान् जनो न करोति, तथापि घटपटयोः संयुक्तयोः सतोः "तद्गत रूपेऽपि संयुक्ते" इति लोके करोति एव।**

ಹಾಗಿದ್ದರೂ, ಗುಣದಲ್ಲಿ ಸಂಯೋಗ ವ್ಯವಹಾರ, "ದ್ರವ್ಯಗಳಲ್ಲಿ ಮಾತ್ರ ಸಂಯೋಗ ಸಂಬಂಧವಿರುತ್ತದೆ" ಎಂದು, ದರ್ಶನಾಭ್ಯಾಸ ಜನಗಳು ಮಾಡುವದಿಲ್ಲವಾದರೂ, ಘಟಪಟಗಳಲ್ಲಿ ಸಂಯುಕ್ತ ಸತ್ಯವಾಗಿರಲು "ಅವುಗಳ ಅಂತರ್ಗತ ರೂಪಗಳ ಸಂಯುಕ್ತದಲ್ಲಿ" ಎಂದು ಲೋಕದಲ್ಲಿ ವ್ಯವಹಾರ ಮಾಡುತ್ತಾರೆ

**किंच "रूपेण युक्तो घटः" इति सर्वेऽपि व्यवहरन्ति। तथाऽपि "संयुक्तः" इति न व्यवहरन्ति इति चेत् न। ध्वंस प्रध्वंस शब्दयोः इव अनयोः अर्थभेद अस्फुरणात्। "द्रव्याणां कर्म संयोगः" इत्यादौ जैमिन्यादिभिः परीक्षकैः अद्रव्यसम्बन्धेऽपि संयोग व्यवहाराच्च।**

ಮತ್ತು "ರೂಪದಿಂದ ಯುಕ್ತವಾದದ್ದು ಘಟ" ಎಂದು ಸರ್ವರೂ ವ್ಯವಹರಿಸುತ್ತಾರೆ. ಹಾಗಿದ್ದರೂ ಸಂಯುಕ್ತ ಎಂದು ವ್ಯವಹರಿಸುವದಿಲ್ಲ ಎಂದರೆ? ಧ್ವಂಸ ಪ್ರಧ್ವಂಸ ಎಂಬ ಪದಗಳಲ್ಲಿಯಂತೆ ಯುಕ್ತ ಮತ್ತು ಸಂಯುಕ್ತ ಪದಗಳಲ್ಲಿ ಅರ್ಥಭೇದವಿರುವದಿಲ್ಲ ಎಂದರ್ಥ. ಮತ್ತು "द्रव्याणां कर्म संयोगः" ಮುಂತಾದವುಗಳನ್ನು ಜೈಮಿನಿ ಮುಂತಾದ ಪರೀಕ್ಷಕರು ಅದ್ರವ್ಯಸಂಬಂಧಗಳಲ್ಲಿ ಕೂಡ ಸಂಯೋಗ ವ್ಯವಹಾರವನ್ನು ಒಪ್ಪಿಕೊಂಡಿದ್ದಾರೆ.

**तथा च ज्ञानस्य गुणत्वेऽपि तस्य विषयेण सह गुणात्मकः संयोगः सम्बन्धः अस्तु।**
**न च ज्ञाने संयोग असमवायिकारण क्रियाभावात् संयोग अनुपपत्तिः। रूपादौ क्रियासाधन प्रकारेण ज्ञानेऽपि तत् साधनात्।**

ಅದರಂತೆ, ಜ್ಞಾನದ ಗುಣತ್ವದ ಕೂಡ ಅದರ ವಿಷಯದ ಸಹ ಗುಣಾತ್ಮಕ ಸಂಬಂಧ ಇದೆ. ಮತ್ತು ಜ್ಞಾನದಲ್ಲಿ ಸಂಯೋಗ ಅಸಮವಾಯಿಕಾರಣ ಕ್ರಿಯಾ ಇಲ್ಲದಿರುವದರಿಂದ ಅಲ್ಲಿ ಸಂಯೋಗ ಯುಕ್ತಿಹೀನವಾಗಿದೆ ಎಂದು ಹೇಳಲು ಬರುವದಿಲ್ಲ. ರೂಪಾದಿಗಳಲ್ಲಿ ಕ್ರಿಯಾಸಾಧನ ಪ್ರಕಾರದಂತೆ ಜ್ಞಾನದಲ್ಲಿ ಕೂಡ ಅದನ್ನು ಸಾಧಿಸಲು ಸಾಧ್ಯವಿದೆ.

**ननु अतीतेन विषयेण कथं संयोगः इति चेत्। किम् अतीतादेः सम्बन्धमात्रं न अङ्गीक्रियते, संयोग एव वा। न आद्यः। सम्बन्ध अभावस्याऽपि अतीतसम्बन्धित्व अभाव प्रसङ्गात्। प्रध्वंसादेः अतीतादि सम्बन्ध अभाव प्रसङ्गाच्च। न द्वितीयः। तद्वत् संयोगस्याऽपि अनुपपत्तेः।**

ಹಾಗಾದರೆ, ಅತೀತಾದಿ ವಿಷಯಗಳ ಜೊತೆಗೆ ಹೇಗೆ ಸಂಯೋಗವನ್ನು ಹೇಳಿತ್ತೀರಿ, ಎಂದರೆ? ಏಕೆ ತಾವು ಅತೀತಾದಿಗಲ ಸಂಬಂಧವನ್ನೇ ಅಂಗೀಕರಿಸುವದಿಲ್ಲವೊ? ಅಥವಾ ಅವುಗಳ ಜೊತೆ ಸಂಯೋಗಮಾತ್ರವನ್ನೊ? ಮೊದಲನೆಯದಾದರೆ, ಸಂಬಂಧದ ಅಭಾವಾತೆಗೆ ಕೂಡ ಅತೀತಸಂಬಂಧತ್ವ ಇಲ್ಲ ಎಂದು ಹೇಳಬೇಕಾದ ಪ್ರಸಂಗ ಒದಗುವದು. ಅಂದರೆ ಪ್ರಧ್ವಂಸಾದಿಗಳಿಗೆ ಅತೀತಾದಿಗಳ ಸಂಬಂಧದ ಅಭಾವವಿದೆ ಎಂದು ಹೇಳಬೇಕಾದ ಪ್ರಸಂಗ

ಒದಗುವದು. ಎರಡನೆ ವಿಕಲ್ಪ ಕೂಡ ಸರಿಯಲ್ಲ. ಏಕೆಂದರೆ, ಅಂತಹ ಸಂಯೋಗವೂ ಕೂಡ ಯುಕ್ತಿವಿಹೀನವಾಗಿರುತ್ತದೆ.

**न च अस्माभिः संयोगो द्विष्ठ इति अङ्गीक्रियते। येन विषयलक्षणाश्रय अभावे कथं तदाश्रित संयोगः अवतिष्ठेत इति चोद्यते। किम् नाम। सादृश्यादिवत् एकाश्रितः अन्यनिरूप्य इति।**

ಮತ್ತು ನಾವು ಕೂಡ ಸಂಯೋಗವು ಇಬ್ಬರಲ್ಲಿಯ ಸಂಬಂಧವೆಂದು ಅಂಗೀಕರಿಸುವುದಿಲ್ಲ. ಇದರಿಂದ, ವಿಷಯ ಲಕ್ಷಣಾಶ್ರಯ ಇಲ್ಲದಿರುವಾಗ ಅವುಗಳ ಆಶ್ರಿತ ಸಂಯೋಗ ಹೇಗೆ ಅವತರಿಸುತ್ತದೆ ಎಂಬ ಪ್ರಶ್ನೆ ಬರುತ್ತದೆ. ಅದಕ್ಕೆ, ಸಾದೃಶ್ಯಾದಿಗಳಂತೆ ಒಂದನ್ನು ಆಶ್ರಯಿಸಿ ಅನ್ಯವನ್ನು ನಿರೂಪಿಸುವಂತೆ ಎಂದು ಉತ್ತರ ಹೇಳಬಹುದು..

**"संयोगः" इति अबाधित व्यवहारास्पदत्वं च संयोग लक्षणम्। न च एवं अन्योन्याश्रयः। पूर्वपूर्व वृद्धकृत व्यवहार विषयत्व ज्ञानेन उत्तरोत्तरेषां व्यवहार उपपत्तेः। "मन्त्रः" इति अभियुक्त प्रसिद्धिः मन्त्र लक्षणं इति मीमांसकैः अङ्गीकृतत्वाच्च।**

ಮತ್ತು "ಸಂಯೋಗ" ಎಂದು ಅಬಾಧಿತ ವ್ಯವಹಾರಕ್ಕೆ ಆಸ್ಪದವಾದಂತದ್ದು ಸಂಯೋಗದ ಲಕ್ಷಣವಾಗಿರುತ್ತದೆ. ಇದರಿಂದ ಅನ್ಯೋನ್ಯಾಶ್ರಯ ದೋಷಕ್ಕೆ ಆಸ್ಪದವಿರುವದಿಲ್ಲ. ಪೂರ್ವದಲ್ಲಿ ವೃದ್ಧರು ಮಾಡಿದ ವ್ಯವಹಾರ ವಿಷಯತ್ವವು ಜ್ಞಾನದಿಂದ ಉತ್ತರೋತ್ತರ ವ್ಯವಹಾರಗಳಲ್ಲಿ ಸಮರ್ಥಿಸಲು ಸಾಧ್ಯವಾಗುತ್ತದೆ. "ಮಂತ್ರ" ಎಂದು, ಅದರ ಅಭಿಜ್ಞನ ಅಥವಾ ನಿಷ್ಣಾತನ ಪ್ರಸಿದ್ಧಿ, ಇದು ಮಂತ್ರದ ಲಕ್ಷಣ ಎಂದು ಮೀಮಾಂಸಕರು ಅಂಗೀಕರಿಸಿರುತ್ತಾರೆ.

## ॥ गुणादिपञ्चकस्य इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु संयोगस्य द्विष्ठत्वात् ज्ञानघटयोः संयोगसम्बन्ध अङ्गीकारे ज्ञानेऽपि संयोग प्राप्त्या गुणादिपञ्चकस्य निर्गुणत्व परिभाषा भङ्गः स्यात्। किञ्च ज्ञाने संयोग अङीकारे तस्य क्रियाजन्यत्वात् साऽपि अङ्गीकार्या स्यात् इति चेत् आह– गुणादिपञ्चकस्य इति॥**
**गुणकर्म सामान्यविशेष समवायरूप पदार्थ पञ्चकस्य इत्यर्थः।**

ಸಂಯೋಗವು ಇಬ್ಬರಲ್ಲಿರುವದರಿಂದ ಜ್ಞಾನಘಟಗಳಲ್ಲಿ ಸಂಯೋಗ ಸಂಬಂಧವನ್ನು ಅಂಗೀಕರಿಸಿದರೆ, ಜ್ಞಾನಕ್ಕೂ ಸಂಯೋಗ ಪ್ರಾಪ್ತವಾಗಿ ಗುಣಾದಿಪಂಚಕದ ನಿರ್ಗುಣತ್ವದ ಪರಿಭಾಷಾ ಭಂಗ ವಾಗುತ್ತದೆ. ಮತ್ತು ಜ್ಞಾನಕ್ಕೆ ಸಂಯೋಗ ಅಂಗೀಕರಿಸಿದರೆ ಅದಕ್ಕೆ ಕ್ರಿಯಾಜನ್ಯತ್ವವನ್ನು ಕೂಡ ಅಂಗೀಕರಿಸಬೇಕಾಗುವದು ಎಂದರೆ, ಅದನ್ನೆ ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ.

ಗುಣಾದಿಪಂಚಕ ಎಂದರೆ, ಗುಣ, ಕರ್ಮ, ಸಾಮಾನ್ಯ, ವಿಶೇಷ ಮತ್ತು ಅವುಗಳ ಸಮವಾಯುರೂಪ ಸಂಬಂಧ ಎಂದು ಐದು ಪದಾರ್ಥಗಳು ಎಂದರ್ಥ.

## ॥ निर्गुणत्व इति ॥



ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**गुणे गुणः अपि अङ्गीकार्या। चतुर्विंशतिगुणाः कर्माणि पञ्चसामान्यं त्रिविधं विशेषाः तु अनन्ताः समवायः तु एक एव इति प्रतीत्या गुणादिपञ्चकस्यापि सगुणत्व सिद्धेः गुणे संयोगस्याऽपि अङ्गीकार्यत्वात्।**

ಗುಣದಲ್ಲಿ ಗುಣವನ್ನು ಕೂಡ ಅಂಗೀಕರಿಸಬೇಕು. ಇಪ್ಪತ್ತನಾಲ್ಕು ಗುಣಗಳು, ಐದು ಕರ್ಮಗಳು, ಸಾಮಾನ್ಯ ಮೂರುವಿಧಗಳು, ಅನಂತ ವಿಶೇಷಗಳು, ಒಂದೇ ಸಮವಾಯು ಎಂದು ಪ್ರತೀತವಾಗಿರುವ ಗುಣಾದಿಪಂಚಕಗಳಿಗೂ ಕೂಡ ಸಗುಣತ್ವ ಸಿದ್ಧವಾಗಿರುವಾಗ ಗುಣದಲ್ಲಿ ಸಂಯೋಗವನ್ನು ಕೂಡ ಅಂಗೀಕರಿಸಬೇಕು.

**यद्यपि गुणेऽपि संयोग व्यवहारं द्रव्ययोः एव संयोग इति दुर्दर्शनाभ्यासवान् लोको न करोति। तथाऽपि घटपटयोः संयुक्तयोः सतोः तद्गतरूपे अपि संयुक्ते इति व्यवहारं लोकः करोति एव।**

ಹೀಗಿದ್ದರೂ, ಗುಣಕ್ಕೂ ಸಂಯೋಗ ವ್ಯವಹಾರವನ್ನು ,"ದ್ರವ್ಯಗಳಲ್ಲಿ ಮಾತ್ರ ಸಂಯೋಗ" ಎಂದು ಪ್ರತಿಪಾದಿಸುವ ದುದರ್ಶನಾಭ್ಯಾಸಿಗಳು ಲೋಕದಲ್ಲಿ ಮಾಡುವದಿಲ್ಲ. ಹಾಗಿದ್ದರೂ ಘಟಪಟಗಳಲ್ಲಿಯ ಸತ್ಯವಾದ ಸಂಯುಕ್ತಗಳು ಅವುಗಳಂತರ್ಗತ ರೂಪಗಳಲ್ಲಿ ಕೂಡ ಸಂಯುಕ್ತ ಎಂದು ವ್ಯವಹಾರವನ್ನು ಜನರು ಮಾಡುತ್ತಾರೆ.

**किञ्च रूपेण युक्तो घट इति सर्वेऽपि व्यवहरन्ति। तथाऽपि संयुक्त इति न व्यवहरन्ति इति चेत् न। ध्वंसप्रध्वंस शब्दयोः इव युक्तसंयुक्त शब्दयोः अपि अर्थभेद अननुभवात्। जैमिनीनाऽपि पूर्वमीमांसायां द्रव्याणां कर्मसंयोग इति सूत्रे द्रव्यकर्म सम्बन्धेऽपि संयोग व्यवहाराच्च। एवमेव ज्ञानस्य गुणत्वेऽपि तस्य विषयेण सहसंयोगः अस्तु।**

ಮತ್ತು ರೂಪದಿಂದ ಯುಕ್ತವಾದ ಘಟ್ ಎಂದು ಸರ್ವರೂ ವ್ಯವಹರಿಸುತ್ತಾರೆ. ಹಾಗಿದ್ದರೂ ಸಂಯುಕ್ತ ಎಂದು ಅವರು ವ್ಯವಹರಿಸುವದಿಲ್ಲ ಎಂದರೆ? ಅದು ಸರಿಯಲ್ಲ. ಧ್ವಂಸ ಪ್ರಧ್ವಂಸ ಪದಗಳಲ್ಲಿಯಂತೆ ಯುಕ್ತಸಂಯುಕ್ತ ಶಬ್ದಗಳಲ್ಲಿ ಅರ್ಥಭೇದದ ಅನುಭವವಿರುವದಿಲ್ಲ. ಜೈಮಿನೀ ಋಷಿಗಳೂ ಕೂಡ ಪೂರ್ವಮೀಮಾಂಸಾದಲ್ಲಿ, द्रव्याणां कर्मसंयोग ಎಂಬ ಸೂತ್ರದಲ್ಲಿ, ದ್ರವ್ಯಕರ್ಮಗಳ ಸಂಬಂಧದಲ್ಲಿ ಸಂಯೋಗವನ್ನು ವ್ಯವಹರಿಸಿದ್ದಾರೆ. ಅಂದರಂತೆಯೆ ಜ್ಞಾನದ ಗುಣತ್ವಕ್ಕೂ ಕೂಡ ಅದರ ವಿಷಯದ ಜೊತೆ ಸಂಯೋಗ ಇರುತ್ತದೆ.

**न च ज्ञाने संयोग असमवायिकारण क्रियाभावात् संयोग अनुपपत्तिः इति वाच्यम्। घटे चलति सति तद्गतरूपेऽपि चलन दर्शनेन गुणेऽपि क्रियायाः अङ्गीकार्यत्वात्।**
**ननु घटगतमेव चलनं रूपे प्रतीयत इति चेत् न। वैपरीत्यस्याऽपि वक्तुं सुवचत्वात्। पटावयव तन्तुगतमेव चलनं पटे प्रतीयत इत्यपि वक्तुं शक्यत्वाच्च। एवमेव देवदत्ते चलति सति तद्गत ज्ञानस्याऽपि चलन सम्भवेन संयोग असमवायिकारण चलनक्रियायाः ज्ञानेऽपि सम्भवेन संयोग उपपत्तेः। एतत् अर्थमेव निष्क्रियत्व ग्रहणं कृतम्। अन्यथा प्रसङ्ग अननुगुणत्वेन तद्ग्रहणस्य अकर्तव्यत्वात् इति अवधेयम्। प्रसङ्गात् उक्तं इत्यपि आहुः।**

ಮತ್ತು, ಜ್ಞಾನದಲ್ಲಿ ಅಥವಾ ಜ್ಞಾನಕ್ಕೆ ಸಂಯೋಗ ಅಸಮವಾಯಿಕಾರಣ ಕ್ರಿಯಾ ಇಲ್ಲದಿರುವಾಗ, ಸಂಯೋಗವು ಯುಕ್ತಿ ಇಲ್ಲದ್ದಾಗಿದೆ ಎಂದು ಹೇಳಕೂಡದು. ಘಟವು

ಚಲಿಸುತ್ತಿರುವಾಗ ಅದಂತರ್ಗತ ರೂಪದ ಕೂಡ ಚಲನ ಕಂಡುಬರುವದರಿಂದ, ಗುಣಕ್ಕೂ ಕ್ರಿಯೆಯನ್ನು ಅಂಗೀಕರಿಸಲಾಗಿದೆ.

ಇನ್ನು ಘಟಗತವಾದ ಚಲನವೇ ರೂಪದಲ್ಲಿ ಕಾಣಿಸುತ್ತದೆ ಎಂದು ಹೇಳುತ್ತೇವೆ ಎಂದರೆ? ಇದರ ವಿಪರೀತವಾಗಿಯೂ ಹೇಳಲು ಶಕ್ಯವಿದೆ. ಪಟದ ಅವಯವವಾದ ತಂತುಗತ ಚಲನವೇ ಪಟದಲ್ಲಿ ಕಾಣುತ್ತದೆ ಎಂದು ಕೂಡ ಹೇಳಲು ಬರುತ್ತದೆ. ಅದರಂತೆಯೆ ದೇವದತ್ತ ಚಲಿಸುತ್ತಿರುವಾಗ ಅವನಗತ್ ಜ್ಞಾನಕ್ಕೂ ಚಲನ ಸಂಭವವಿರುವಾಗ್, ಸಂಯೋಗ ಅಸಮವಾಯಿಕರಣ ಚಲನ ಕ್ರಿಯೆಯು ಜ್ಞಾನಕ್ಕೂ ಕೂಡ ಸಂಭವವಿರುವದರಿಂದ ಸಂಯೋಗ ಸಮರ್ಥಿಸಲು ಸಾಧ್ಯವಿದೆ. ಈ ಅರ್ಥದಲ್ಲಿಯೆ ನಿಷ್ಕ್ರೀಯತ್ವ ಪದವನ್ನು ಟೀಕಾದಲ್ಲಿ ಗ್ರಹಿಸಲಾಗಿದೆ. ಅನ್ಯಥಾ ಪ್ರಸಂಗಕ್ಕೆ ಅನುಗುಣವಾಗದಿರುವದರಿಂದ ಅದರ ಗ್ರಹಣವು ಅಕರ್ತವ್ಯವೆನಿಸುತ್ತಿತ್ತು ಎಂದು ತಿಳಿಯಬೇಕು. ಹಾಗೂ ಪ್ರಸಂಗ ಒದಗಿರುವದರಿಂದ ಹೇಳಲಾಗಿದೆ ಎಂದು ಕೂಡ ಹೇಳಬೇಕು.

### ೭.೨.೨.೭ दृग्दृश्यत्वयोः समवायसम्बन्धमाश्रित्य दृश्यत्वोपपादनम्

## टीका

## समवायो वा अस्तु। प्रक्रिया तु प्रकारान्तरेण कल्प्यताम्।

ಅಥವಾ ದೃಗ್ ದೃಶ್ಯತ್ವಗಳಲ್ಲಿ ಎರಡನೆ ವಿಧವಾದ ಸಮವಾಯ ಸಂಬಂಧ ಇರಲಿ. ದೃಗ್-ದೃಶ್ಯತ್ವಗಳಲ್ಲಿ ಅಯುತಸಿದ್ಧತ್ವ ಇಲ್ಲದಾಗ ಸಮವಾಯ ಸಂಬಂಧ ಹೇಗೆ ಕೂಡುತ್ತದೆ? ಅದಕ್ಕಾಗಿ ಇಲ್ಲಿ अयुतसिद्धत्व सम्बन्धः समवाय ಎಂಬ ಸಮವಾಯ ಸಂಬಂಧದ ಲಕ್ಷಣವನ್ನು ತ್ಯಜಿಸಿ संयोग अन्यः सम्बन्धः समवाय ಎಂಬ ಪ್ರಕಾರಾಂತರ ಲಕ್ಷಣವನ್ನನುಸರಿಸಿ ಇಲ್ಲಿ ಪ್ರಕ್ರಿಯೆಯನ್ನು ಕಲ್ಪಿಸಬೇಕು.

### टिप्पणीनाम् विशेषार्थानि

## ॥ प्रक्रिया तु इति ॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु अयुतसिद्धत्व अभावात् कथं दृग्–दृश्यत्वयोः समवाय इत्यत आह– प्रक्रिया इति॥**

ದೃಗ್-ದೃಶ್ಯತ್ವಗಳಲ್ಲಿ ಅಯುತಸಿದ್ಧತ್ವ ಇಲ್ಲದಿರುವಾಗ ಸಮವಾಯ ಸಂಬಂಧವನ್ನು ಹೇಗೆ ಹೇಳಲು ಬರುತ್ತದೆ ಎಂಬ ಶಂಕೆಗೆ ಉತ್ತರರೂಪವಾಗಿ ಈ ಟೀಕಾವಾಕ್ಯ ಇರುತ್ತದೆ.



**अयुतसिद्धत्व सम्बन्धः समवाय इति एतत् लक्षण परित्यागेन संयोग अन्यः सम्बन्धः समवाय इत्यनेन प्रकारेण इत्यर्थः।**

ಅಂದರೆ ಅಯುತಸಿದ್ಧತ್ವ सम्बन्धः समवाय ಎಂಬ ಸಮವಾಯ ಸಂಬಂಧದ ಲಕ್ಷಣವನ್ನು ಪರಿತ್ಯಜಿಸಿ संयोग अन्यः सम्बन्धः समवाय ಎಂಬ ಪ್ರಕಾರಾಂತರ ಲಕ್ಷಣವನ್ನು ತೆಗೆದುಕೊಂಡು ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**अयुतसिद्ध्ययोः एव समवाय अंगीकारात् दृग्–दृश्ययोः न समवायः इत्यत आह– प्रक्रिया तु इति॥**

ಅಯುತಸಿದ್ಧವಾದವುಗಳಲ್ಲಿಯೇ ಸಮವಾಯ ಸಂಬಂಧ ಅಂಗೀಕರಿಸಿದ್ದರಿಂದ, ದೃಗ್-ದೃಶ್ಯತ್ವಗಳಲ್ಲಿ ಸಮವಾಯ ಸಂಬಂಧ ಇರುವದಿಲ್ಲ. ಅದನ್ನು ನಿವಾರಿಸಲೆಂದೆ ಈ ಟೀಕಾವಾಕ್ಯ ಇರುತ್ತದೆ.

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु ज्ञान–घटयोः कथं समवायः। अयुतसिद्धत्व अभावात्। अयुतसिद्धयोः सम्बन्धः समवायः। स च एको नित्यश्च इति प्रक्रिया। तत्र आह– प्रक्रिया तु इति॥**

**संयोग अतिरिक्तः सम्बन्धः समवायः। स च अनित्यः अनेकश्च इति प्रकारान्तरेण इत्यर्थः।**

ಜ್ಞಾನ-ಘಟಗಳಲ್ಲಿ ಸಮವಾಯ ಸಂಬಂಧ ಹೇಗೆ ಕೂಡುತ್ತದೆ. ಅವುಗಳಲ್ಲಿ ಅಯುತ ಸಿದ್ಧತ್ವ ಇರುವದಿಲ್ಲ. ಏಕೆಂದರೆ अयुतसिद्धयोः सम्बन्धः समवायः,ಅಂದರೆ, ಅಯುತಸಿದ್ಧಗಳಲ್ಲಿಯ ಸಂಬಂಧ ಸಮವಾಯ ಎನ್ನಲಾಗುತ್ತದೆ .ಅದು ಒಂದೆ ನಿತ್ಯವಾಗಿರುತ್ತದೆ ಎಂದು ಪ್ರಕ್ರಿಯಾ ಇರುತ್ತದೆ. ಅದಕ್ಕಾಗಿಯೆ ಈ ಶಂಕೆಯನ್ನು ನಿವಾರಿಸಲು ಈ ಟೀಕಾವಾಕ್ಯ ಇರುತ್ತದೆ.

ಅಂದರೆ, संयोग अतिरिक्तः सम्बन्धः समवायः ಎಂಬ ಸಮವಾಯ ಲಕ್ಷಣ ತೆಗೆದುಕೊಂಡು. ಮತ್ತು ಅದು ಅನಿತ್ಯ ಮತ್ತು ಅನೇಕ ಎಂದು ವಿಧವಾಗಿರುತ್ತದೆ ಎಂದು ಮುಂತಾಗಿ ಪ್ರಕಾರಾಂತರದಿಂದ ಎಂದರ್ಥ.

## ॥ प्रकारान्तरेण इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**संयोग अतिरिक्तः सम्बन्धः समवायः। स च अनित्यः अनेकश्च इत्यादि प्रकारान्तर शब्दार्थः।**

ಅಂದರೆ, संयोग अतिरिक्तः सम्बन्धः समवायः ಎಂದು ಸಮವಾಯ ಸಂಬಂಧದ ಲಕ್ಷಣವೆಂದು ತೆಗೆದುಕೊಂಡು, ಮತ್ತು ಅದು ಅನಿತ್ಯ ಮತ್ತು ಅನೇಕ ಇತ್ಯಾದಿ ವಿಧವಾಗಿರುತ್ತದೆ, ಎಂದು ಮುಂತಾಗಿ ಪ್ರಕಾರಾಂತರ ಪದದ ಶಬ್ದಾರ್ಥ ಆಗಿರುತ್ತದೆ.

### ೭.೨.೨.೮ दृग्दृश्यत्वयोः संयोगसमवाय अतिरिक्त वास्त्व सम्बन्धमाश्रित्य दृश्यत्वोपपादनम्

## टीका

**किंच गुणगुणिनोः संयोग अनुपपत्तौ समवाय इव, तन्तुद्वयस्य समवाय असम्भवे संयोग इव च, दृग्–दृश्ययोः प्रसिद्ध सम्बन्ध अनुपपत्तौ, अन्य एव कश्चिद् वास्तवः किम् न कल्पनीयः। न हि प्रक्रिया परीक्षयो वस्तु परिक्षयाद् गरीयान्।**

ಮತ್ತು ಗುಣಗುಣಿಗಳಲ್ಲಿಯ ಸಂಯೋಗ ಯುಕಿಹೀನವಾದ್ದರಿಂದ, ಇದು ಸಮವಾಯ ಸಂಬಂಧದಂತೆ, ತಂತುದ್ವಯಗಳ ಸಮವಾಯ ಅಸಂಭವವಾದ್ದರಿಂದ ಅದು ಸಂಯೋಗ ಸಂಬಂಧದಂತೆ, ದೃಗ್- ದೃಶ್ಯಗಳಲ್ಲಿ ಪ್ರಸಿದ್ಧ ಸಂಬಂಧಗಳು ಯುಕ್ತಿಹೀನವಾದಲ್ಲಿ, ಅನ್ಯ ಯವುದಾದರೂ ವಾಸ್ತವ ಸಂಬಂಧವನ್ನು ಏಕೆ ಕಲ್ಪಿಸಬಾರದು. ಪ್ರಕ್ರಿಯಾ ಪರಿಕ್ಷೆಯು ವಸ್ತು ಪರಿಕ್ಷೆಗಿಂತಲೂ ಶ್ರೇಷ್ಠವಾಗಿಲ್ಲ ತಾನೆ.

## टिप्पणीनाम् विशेषार्थानि

### ॥ दृग्–दृश्ययोः इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**दृग्–दृश्ययोः ज्ञान–ज्ञेययोः।**

ಇಲ್ಲಿ ದೃಗ್-ದೃಶ್ಯ ಪದದ ಅರ್ಥ ಜ್ಞಾನ-ಜ್ಞೆಯ ಎಂದರ್ಥ.

### ॥ प्रसिद्ध इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**संयोग समवायरूप प्रसिद्ध सम्बन्धद्वय अनुपपत्तौ इत्यर्थः।**

ಅಂದರೆ, ಸಂಯೋಗ, ಸಮವಾಯರೂಪ ಪ್ರಸಿದ್ಧ ಸಂಬಂಧ ದ್ವಯಗಳು ಯುಕ್ತಿಹೀನವಾದಲ್ಲಿ ಎಂದರ್ಥ.

### ॥ वास्तव इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**संयोग–समवायरूप अतिरिक्त आध्यासिकः सम्बन्धः कल्प्यत एव इत्यत उक्तं– वास्तव इति॥**

ಇನ್ನು ಸಂಯೋಗ ಸಮವಾಯರೂಪ ಸಂಬಂಧದ ಅತಿರಿಕ್ತವಾದ ಆಧ್ಯಾಸಿಕ ಸಂಬಂಧವನ್ನು ಕಲ್ಪಿಸಬೇಕು ಎಂಬುದಕ್ಕೆ, ಈ ಟೀಕಾ ಆಧ್ಯಾಸಿಕ ಅಲ್ಲ ಯವುದಾದರೂ ವಾಸ್ತವಿಕೆ ಸಂಬಂಧವನ್ನು ಕಲ್ಪಿಸಬೇಕು ಎಂದು ಸ್ಪಷ್ಟಪಡಿಸುತ್ತದೆ,

**ननु यो वास्तवः सम्बन्धः कल्प्यते, तस्य किम् लक्षणं का च तस्य विशेष संज्ञा इति चेत् न। ज्ञान–ज्ञेययोः संयोग–समवाय सम्बन्ध अनुपपत्त्या सिद्धे, तत् अतिरिक्त सम्बन्धे लक्षणादि जिज्ञासायाः व्यर्थत्वात्। संयोगसमवाय इतरत्वे सति सम्बन्धत्वं इति तत् लक्षणस्य वक्तुं शक्यत्वात् च। विशेष संज्ञायाश्च विषयविषयिभाव रूपेण यथारुचि कल्पनीयत्वात् इति द्रष्टव्यम्।**



ಯಾವ ವಾಸ್ತವ ಸಂಬಂಧವನ್ನು ಕಲ್ಪಿಸಲಾಗುತ್ತಿದೆಯೊ ಅದರ್ ಅದರ ಲಕ್ಷಣವೇನು? ಏನು ಅದರ ವಿಶೇಷ ಸಂಜ್ಞಾ ಎಂದರೆ? ಹಾಗೆ ಕೇಳುವದು ಸರಿಯಲ್ಲ. ಜ್ಞಾನ-ಜ್ಞೇಯಗಳಲ್ಲಿ ಸಂಯೋಗ-ಸಮವಾಯ ಸಂಬಂಧಗಳು ಯುಕ್ತಿ ಹೀನ ಎಂದು ಸಿದ್ಧವಾದಲ್ಲಿ, ಅವುಗಳ ಅತಿರಿಕ್ತ ಸಂಬಂಧದಲ್ಲಿ ಲಕ್ಷಣಾದಿ ಜಿಜ್ಞಾಸಾ ವ್ಯರ್ಥವಾಗಿರುತ್ತದೆ. ಮತ್ತು ಸಂಯೋಗ ಸಮವಾಯ ಇವುಗಳ ಹೊರತಾಗಿರುವ ಸಂಬಂಧ ಎಂದು ಅದರ ಲಕ್ಷಣವೆಂದು ಹೇಳಬಹುದಾಗಿದೆ. ಇನ್ನು ವಿಶೇಷ ಸಂಜ್ಞೆಯನ್ನು ವಿಷಯವಿಷಯೀಭಾವರೂಪವಾಗಿ ಯಥಾರುಚಿ ಕಲ್ಪಿಸಬೇಕು ಎಂದು ತಿಳಿಯಬೇಕು.

### ॥ अन्य एव इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**उभय अतिरिक्ते सम्बन्धे अर्थापत्ति सिद्धे तस्य उभयतरत्वे सति सम्बन्धत्व लक्षणं नामान्तरं च करणीयम् इत्यर्थः।**

ಉಭಯ ಅತಿರಿಕ್ತವಾದ ಸಂಬಂಧದಲ್ಲಿ ಅರ್ಥಾಪತ್ತಿ ಸಿದ್ಧವಾದಲ್ಲಿ, ಅದರ ಉಭಯ ಸಮಬಂಧಗಳ ಹೊರತಾಗಿ ಇರುವ ಸಂಬಂಧ ಎಂಬ ಲಕ್ಷಣ ಹಾಗೂ ನಾಮಾಂತರಗಳನ್ನು ಮಾಡಬೇಕು ಎಂದರ್ಥ.

### ॥ न हि प्रक्रिया परीक्षय इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु एवं चेत् सम्बन्धो द्विविधः संयोग–समवायश्च इति प्रक्रिया भङ्गः। संयोग–समवाय अन्य सम्बन्ध कल्पने तस्य क्लृप्तपदार्थेषु अनन्तर्भावात् तत् आधिक्यं च स्यात् इति चेत् तत्र आह– न हि प्रक्रिया परिक्षय इति॥**

ಇನ್ನು ಈ ರೀತಿಯಾಗಿ ಸಂಯೋಗ ಸಮವಾಯ ಸಂಬಂಧಗಳ ಹೊರತಾಗಿ ವಾಸ್ತವ ಸಂಬಂಧವನ್ನು ಕಲ್ಪಿಸಿದರೆ, ಸಂಬಂಧಗಳು ಎರಡು ಪ್ರಕಾರದ್ದಾಗಿರುತ್ತವೆ ಸಂಯೋಗ ಸಮವಾಯವೆಂದು, ಎಂಬ ಪ್ರಕ್ರಿಯೆದ ಭಂಗವಾಗುತ್ತದೆ. ಹಾಗೂ ಸಂಯೋಗ ಸಮವಾಯ ಹೊರತಾಗಿ ಅನ್ಯ ಸಂಬಂಧ ಕಲ್ಪಿಸಿದಲ್ಲಿ, ಅದನ್ನು ಕ್ಲೃಪ್ತ ಪದಾರ್ಥಗಳಲ್ಲಿ ಅಂತರ್ಭಾವಮಾಡಲಾಗದೆ ಅದಕ್ಕೆ ಆದಿಕ್ಯ ಪದಾರ್ಥವಾಗಬೇಕು,, ಎಂದರೆ? ಈ ಶಂಕೆಯನ್ನು ನಿವಾರಿಸಲು ಈ ಟೀಕಾವಾಕ್ಯವಿರುತ್ತದೆ.

**किन्तु वस्तु परिक्षय गरीयान् इत्यर्थः। प्रमित वस्तु अनुसारेण हि प्रक्रिया कल्पनीया। न तु स्वकल्पित प्रक्रिया अनुरोधेन प्रमित अस्तु त्यागः। प्रसिद्ध सम्बन्ध अनुपपत्त्यैव तस्यापि सम्बन्धस्य प्रमितत्वात्। अत एव एतादृश सम्बन्ध अन्तर्भावेण एव पदार्था अपि गणनीया इति भावः।**

ಹೀಗಿದ್ದರೂ ಇವುಗಳಿಗಿಂತ ವಸ್ತು ಪರಿಕ್ಷೆ ಶ್ರೇಷ್ಠವಾದದ್ದು ಎಂದರ್ಥ. ಪ್ರಮಿತ ಅಥವಾ ತಿಳಿದ ವಸ್ತು ಅನುಸಾರವಾಗಿಯೇ ಪ್ರಕ್ರಿಯಾ ಕಲ್ಪಿಸಬೇಕು. ವಿನಹಾ ಸ್ವಕಲ್ಪಿತ ಪ್ರಕ್ರಿಯೆಯ

ಅವಲಂಬಿಸಿ ಪ್ರಮಿತ ವಸ್ತುವನ್ನು ತ್ಯಜಿಸುವದಾಗಬಾರದು. ಇಲ್ಲಿ ಪ್ರಸಿದ್ಧ ಸಂಬಂಧಗಳು ಯುಕ್ತಿಹೀನವಾಗಿವೆ ಎಂದೆ ಈ ವಾಸ್ತವ ಸಂಬಂಧವು ಪ್ರಮಿತವಾಗಿದೆ. ಆದ್ದರಿಂದ ಈತರಹದ ಸಂಬಂಧವನ್ನು ಅಂತರ್ಭಾವಮಾಡಿಕೊಂಡೆ ಪದಾರ್ಥಗಳ ಗಣನೆಯಾಗಬೇಕು ಎಂಬ ಭಾವವಿರುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु संयोग–समवाय अतिरिक्त सम्बन्ध कल्पनायां तस्य क्लृप्तपदार्थेषु अनन्तर्भावात् तत् आधिक्यं स्यात् इति, क्लृप्तपदार्थ प्रक्रिया सप्तैव इत्यादि रूपा भज्येत् इत्यतः प्रमित् वस्तु अनुसारेण एव प्रक्रियायाः कल्पनीयत्वात् न स्वकल्पित प्रक्रिया अनुरोधेन प्रमित वस्तु त्यागो युक्तः। अन्यथा अतिप्रसङ्गात् इति आशयवान् आह –न हि इति॥**

ಸಂಯೋಗ ಸಮವಾಯ ಅತಿರಿಕ್ತ ಸಂಬಂಧ ಕಲ್ಪಿಸಿದಾಗ, ಅದನ್ನು ಕ್ಲೃಪ್ತ ಪದಾರ್ಥಗಳಲ್ಲಿ ಸಮಾವೇಷಮಾಡಲಾಗುವದಿಲ್ಲ. ಆದ್ದರಿಂದ ಅದು ಆಧಿಕ್ಯ ವಾಯಿತು ಎಂದು ಕ್ಲೃಪ್ತ ಪದಾರ್ಥ ಪ್ರಕ್ರಿಯಾ सप्तैव इत्यादि रूपा भज्येत् ಎಂದು ಪ್ರಮಿತ ವಸ್ತು ಅನುಸಾರವಾಗಿಯೇ ಪ್ರಕ್ರಿಯೆಯನ್ನು ಕಲ್ಪಿಸಬೇಕು ವಿನಹಾ ಸ್ವಕಲ್ಪಿತ ಪ್ರಕ್ರಿಯನ್ನು ಅವಲಂಬಿಸಿ ಪ್ರಮಿತ ವಸ್ತುವನ್ನು ತ್ಯಜಿಸುವದು ಯುಕ್ತವಲ್ಲ. ಅನ್ಯಥಾ ಅತಿಪ್ರಸಂಗ ಉಂಟಾಗುತ್ತದೆ ಎಂದ ಆಶಯದ ಹಿನ್ನೆಲೆಯಲ್ಲಿ ಈ ಟೀಕಾವಾಕ್ಯವಿರುತ್ತದೆ.

### ೭.೨.೨.೯ प्रपञ्च मिथ्यात्वेऽपि दृश्यत्वानुपपत्ति समर्थनम्

## टिका

**किंच मिथ्यात्वेऽपि कथं दृश्यत्वम्। गगन इव गन्धर्वनगरस्य दृशि प्रपञ्चस्य आरोपितत्वात् इति चेत् तर्हि सर्वेण सर्वं दृश्यम्। न वा केनापि किञ्चित्। इन्द्रिय सन्निकर्षादिकं नियामकं इति चेत् तर्हि किम् अनेन आरोपितत्वेन। करणसम्बन्धादि निबन्धनो विषयविषयिभाव एव अस्तु दृग्दृश्ययोः सम्बन्ध इति संक्षेपः।**

ಮತ್ತು ಜಗತ್ತು ಮಿಥ್ಯಾವಾದಲ್ಲಿ ದೃಗ್-ದೃಶ್ಯತ್ವಗಳಲ್ಲಿಯ ಸಂಬಂಧ ಹೇಗೆ ಇರಲು ಸಾಧ್ಯ? ಹೇಗೆ ಗಂಧರ್ವನಗರವು ಗಗನ ಆರೋಪಿತವಾದದ್ದೊ ಹಾಗೆ ದೃಶ್ಯವಾದ ಅಥವಾ ಅನುಭವಗೋಚರವಾದ ಪ್ರಪಂಚವು (ಚೈತನ್ಯ) ಆರೋಪಿತವಾಗಿದೆ ಎಂಬ ಆಧ್ಯಾಸಿಕ ಸಂಬಂಧ ಇದೆಯಲ್ಲ ಎಂದರೆ? ಹಾಗಾದರೆ ಎಲ್ಲರೂ ಎಲ್ಲವನ್ನು ಅನುಭ್ವೈಸುವಂತಾಗಬೇಕು ಅಥವಾ ಯವದೂ ಯಾರಿಗೂ ಅನುಭವಗೋಚರವಾಗಬಾದದೆಂಬ ಪ್ರಸಂಗ ಉಂಟಾಗುತ್ತದೆ.



ಇನ್ನು ಇಂದ್ರಿಯ ಸನ್ನಿಕರ್ಷನಿಯಾಮಕ ಇದೆ ಎನ್ನುವದಾದರೆ, ಆಗ ಈ ಆರೋಪಿತತ್ವ ಸಂಬಂಧವೇಕೆ?

ಹೀಗಾಗಿ, ಸಂಕ್ಷೇಪದಲ್ಲಿ, ಕರಣ ಸಂಬಂಧಾದಿ ನಿಯಾಮಕ ವಿಷಯವಿಷಯಿಭಾವ ಸಂಬಂಧವೇ ದೃಗ್-ದೃಶ್ಯತ್ವಗಳಲ್ಲಿ ಇರಲಿ.

## टिप्पणीनाम् विशेषार्थानि

## ॥ किंच इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**यदि जगन्मिथ्या स्यात् तदाऽपि दृग्दृश्ययोः सम्बन्धो न स्यात् इति त्वां प्रति अपि आपादयितुं शक्यत्वेन, त्वदुक्त तर्कस्य अननुकूलत्वरूप अङ्गवैकल्यात् तर्काभासत्वं इति अभिप्रेत्य आह– किंच इति॥**

ಇನ್ನು ಒಂದು ವೇಳೆ ಜಗತ್ತು ಮಿಥ್ಯಾ ಆದರೆ ಆಗ ಕೂಡ ದೃಗ್-ದೃಶ್ಯಗಳಲ್ಲಿ ಸಂಬಂಧ ಇಲ್ಲದಂತಾಗುವದು ಎಂದು ತಮ್ಮ(ಪರಪಕ್ಷದವರ) ಪ್ರತಿ ಕೂಡ ಆಪಾದಿಸಲು ಶಕ್ಯವಿರುವದರಿಂದ, ತಾವು ಹೇಳಿದ ತರ್ಕಕ್ಕೆ ಅನನುಕೂಲತ್ವರೂಪ ಅಂಗವೈಕಲ್ಯ ಉಂಟಾಗುವದರಿಂದ ತರ್ಕಾಭಾಸತ್ವವನ್ನು ಹೇಳಬಹುದಾಗಿದೆ ಎಂದು ಅಭಿಪ್ರಾಯವನ್ನು ಈ ಟೀಕಾವಾಕ್ಯ ಪ್ರತಿಪಾದಿಸುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**गुणत्वात् ज्ञेये न घटादिना संयोगस्य अति–अगुणत्वाच्च समवायस्य असम्भवात्, अन्यस्य च सम्बन्धस्य अभावेन दृग्दृश्ययोः सम्बन्ध अनुपपत्तेः तुल्यत्वात् इति भावः।**

ಜಗತ್ತು ಮಿಥ್ಯಾ ಆದರೆ, ದೃಗ್-ದೃಶ್ಯತ್ವಗಳಲ್ಲಿಯ ಸಂಬಂಧ, ಹೇಗೆ ಜ್ಞೆಯ ಗುಣವಾಗಿರುವದರಿಂದ ಅದರ ಅಗುಣಗಳಾದ ಘಟಾದಿಗಳ ಜೊತೆ ಸಮವಾಯ ಸಂಬಂಧ ಅಸಂಭವವಾದ್ದರಿಂದ, ಮತ್ತು ಅನ್ಯ ಯಾವ ಸಂಬಂಧಗಳು ಇಲ್ಲವಾದ್ದರಿಂದ ಅಲ್ಲಿ ದೃಗ್-ದೃಶ್ಯತ್ವಗಳಲ್ಲಿ ಸಂಬಂಧ ಯುಕ್ತಿಹೀನ ಎಂದು ಹೇಳಲಾಯಿತೊ, ಅದರ ತುಲ್ಯತ್ವದಲ್ಲಿಯೆ ಯುಕ್ತಿಹೀನವಾಗಿದೆ ಎಂಬ ಭಾವ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**मिथ्यात्वेऽपि त्वदुक्तरीत्या दृश्यत्वं अनुपपन्नं इति आह– किंच इति॥**
**मिथ्यात्वे कथं दृश्यत्वं उपपन्नम्। दृग्दृश्य सम्बन्ध अभावस्य अत्रापि सत्वात् इति भावः।**

ಜಗತ್ತು ಮಿಥ್ಯಾ ಆದರೂ ಕೂಡ ತಾವು ಹೇಳಿದ ರೀತಿಯಲ್ಲಿ ದೃಶ್ಯತ್ವವು ಯುಕ್ತಿಹೀನವಾಗಿದೆ ಎಂದು ದೃಗ್-ದೃಶ್ಯತ್ವಗಳಲ್ಲಿಯ ಸಂಬಂಧವನ್ನು ಯುಕ್ತಿಹೀನವೆಂದು ಪ್ರತಿಪಾದಿಸುತ್ತದೆ.

ಅಂದರೆ, ಜಗತ್ತು ಮಿಥ್ಯಾವೆಂದಾಗ ಅಲ್ಲಿ ದೃಶ್ಯತ್ವವನ್ನು ಹೇಗೆ ಸಮರ್ಥಿಸಲು ಬರುತ್ತದೆ? ಹೀಗಾಗಿ ಇಲ್ಲಿ ಕೂಡ ದೃಗ್-ದೃಶ್ಯ ಸಂಬಂಧ ಇಲ್ಲದಿರುವದು ಸತ್ಯವಾಗಿದೆ ಎಂಬ ಭಾವ ವಿರುತ್ತದೆ.

### ॥ गगन इव इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**यथा गन्धर्वनगरं गगन आरोपितं एवं दृशि सर्वोऽपि प्रपञ्चः अद्यस्त इति आध्यासिक सम्बन्ध सद्भावात् न प्रपञ्चस्य मिथ्यात्वे दृग्दृश्ययोः सम्बन्ध अनुपपत्तिः इत्यर्थः।**

ಅಂದರೆ, ಹೇಗೆ ಗಂಧರ್ವನಗರವು ಗಗನ ಆರೋಪಿತವಾಗಿರುತ್ತದೊ ಅದೇರೀತಿಯಲ್ಲಿ ದೃಶಿ ಎಂದರೆ ಅನುಭವಗೋಚರವಾದ ಸರ್ವ ಪ್ರಪಂಚ ಆರೋಪಿತವಾದದ್ದಾಗಿದೆ ಎಂದು ಆಧ್ಯಾಸಿಕ ಸಂಬಂಧ ಇರುವಾಗ, ಪ್ರಪಂಚ ಮಿಥ್ಯಾ ಆದರೆ ದೃಗ್-ದೃಶ್ಯಗಳಲ್ಲಿಯ ಸಂಬಂಧ ಯುಕ್ತಿಹೀನವಾದದ್ದು ಎಂದು ಹೇಳಲಾಗುವದಿಲ್ಲ ಎಂದರ್ಥ.

### ॥ दृशि प्रपञ्चस्य आरोपितत्वात् इति ॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**तथा च अधिष्ठान अध्यस्त्व सम्बन्धेन चित् प्रकाश्यत्व उपपत्तेः न दृश्यत्व अनुपपत्तिः इति भावः।**

ಹಾಗೆಯೆ, ಅಧಿಷ್ಠಾನ- ಅಧ್ಯಸ್ತ ಸಂಬಂಧ ಇರುವದರಿಂದ ಚಿತ್ ಪ್ರಕಾಶತ್ವ ಸಮರ್ಥಿಸಲು ಬರುವದರಿಂದ, ಇಲ್ಲಿ ದೃಶ್ಯತ್ವ ಯುಕ್ತಿಹೀನ ಎಂದು ಹೇಳಲಾಗುವದಿಲ್ಲ ಎಂಬ ಭಾವವಿರುತ್ತದೆ.

### ॥ तर्हि सर्वेण इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**त्वत् मते चैतन्यस्य एव दृक्त्वात् तत्र प्रपञ्चस्य अध्यस्तत्वे पृच्छामः, अधिष्ठानभूत चैतन्यं इदानीं प्रकाशते न वा। आद्ये दोषम् आह – तर्हि सर्वेण इति॥**
**आरोपाधिष्ठानभूत चैतन्यस्य सर्वान् प्रति अविशिष्टत्वेन प्रकाशमानत्वात्। तत्र आरोपितं सर्वं सर्वेण दृश्येत इत्यर्थः।**

ನಿಮ್ಮ (ಪರಪಕ್ಷದವರ) ಮತದಂತೆ, ಚೈತನ್ಯನೆ ದೃಕ್ (ಜ್ಞಾನಸ್ವರೂಪ) ನಾದ್ದರಿಂದ. ಅಲ್ಲಿ ಪ್ರಪಂಚ ಆರೋಪಿಸಲಾಗಿದೆ ಎಂದರೆ ಅದಕ್ಕೆ ನಾವು ಹೀಗೆ ಪ್ರಶ್ನಿಸುತ್ತೇವೆ? ಅಧಿಷ್ಠಾನಭೂತ ಚೈತನ್ಯ ಈಗ ಪ್ರಕಾಶಿಸುತ್ತದೊ ಅಥವಾ ಇಲ್ಲವೊ? ಮೊದಲನೆಯ ವಿಕಲ್ಪಕ್ಕೆ ಈ ಟೀಕಾವಾಕ್ಯ ದೋಷವನ್ನು ಹೇಳುತ್ತದೆ.



ಆರೋಪಿಸಲ್ಪಟ್ಟ ಅಧಿಷ್ಠಾನಭೂತ ಚೈತನ್ಯವು ಸರ್ವರ ಪ್ರತಿ ಅವಿಶಿಷ್ಟರೀತಿಯಲ್ಲಿ ಎಂದರೆ ಸಮನಾಗಿ ಪ್ರಕಾಶಮಾನವಾಗುತ್ತದೆ. ಅಂದರೆ ಅಲ್ಲಿ ಆರೋಪಿತವಾದ ಸರ್ವವು ಎಲ್ಲರಿಗೂ ಕಾಣಿಸಲ್ಪಡುತ್ತದೆ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**अधिष्ठानभूता दृक् संसारावस्थायां प्रकाशते न वा। आद्ये दोषं आह– तर्हि सर्वेण इति॥**

ಅಧಿಷ್ಠಾನಭೂತವಾದ ದೃಕ್ ಸಂಸಾರ ಅವಸ್ಥೆಯಲ್ಲಿ ಪ್ರಕಾಶಿಸುತ್ತದೊ ಅಥವಾ ಇಲ್ಲವೊ? ಮೊದಲನೆಯದಾದರೆ, ಈ ಟೀಕಾವಾಕ್ಯ ದೋಷವನ್ನು ಪ್ರತಿಪಾದಿಸುತ್ತದೆ.

**प्रकाशमान दृग् अध्यस्तत्वस्य सर्वान् प्रति अविशिष्टत्वात् इति भावः।**

ಪ್ರಕಾಶಮಾನವಾದ ದೃಗ್ ಅಧ್ಯಸ್ತವಾದ ಸರ್ವರ ಪ್ರತಿ ಅವಿಶಿಷ್ಟವಾಗಿರುತ್ತದೆ ಎಂಬ ಭಾವವಿರುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**अधिष्ठानभूता दृक् संसार अवस्थायां प्रकाशते न वा। आद्ये दोषं आह– तर्हि इति॥**
**देवदत्तस्य घटज्ञानं यदा जायते तदा देवदत्तेन इव यज्ञदत्ताभिः घट इव पटदिः अपि तदेव अन्यत् अपि इत्येवं सर्वेण सर्वं सर्वदा अपि विज्ञाय इत्यर्थः।**
**प्रकाशमान दृग् अध्यस्तत्वस्य देवदत्तादीन् सर्वान् प्रति घटादीनां सर्वेषां सर्वदा अविशिष्टत्वात् इति भावः।**

ಅಧಿಷ್ಠಾನಭೂತ ದೃಕ್ ಸಂಸಾರ ಅವಸ್ಥೆಯಲ್ಲಿ ಪ್ರಕಾಶಿಸುತ್ತದೊ ಅಥವಾ ಇಲ್ಲವೊ? ಮೊದಲನೆಯ ವಿಕಲ್ಪಕ್ಕೆ ಈ ಟೀಕಾವಾಕ್ಯ ದೋಷವನ್ನು ಪ್ರತಿಪಾದಿಸುತ್ತದೆ.

ದೇವದತ್ತನ ಘಟಜ್ಞಾನ ಯಾವಗ ಆಗುತ್ತದೊ ಆಗ ದೇವದತ್ತನಂತೆಯೆ ಯಜ್ಞಾದತ್ತನಿಗೂ ಘಟದಂತೆ ಪಟಾದಿಗಳ ಕೂಡ ಅದರಂತೆಯೆ ಅನ್ಯಗಳು ಕೂಡ ಈ ರೀತಿಯಾಗಿ ಎಲ್ಲರಿಂದ ಎಲ್ಲವನ್ನು ಸರ್ವದಾ ತಿಳಿಯಲ್ಪಡುತ್ತದೆ ಎಂದರ್ಥ. ಪ್ರಕಾಶಮಾನವಾದ ದೃಗ್, ಅಧ್ಯಸ್ತತ್ವವಾದ ದೇವದತ್ತ ಮುಂತಾದ ಸರ್ವರ ಪ್ರತಿ, ಘಟಾದಿ ಮುಂತಾದ ಎಲ್ಲವೂ ಸರ್ವದಾ ಅವಿಶಿಷ್ಟವಾಗಿರುತ್ತವೆ ಎಂಬ ಭಾವವಿರುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**यदि शुक्तिरजतादिवत् घटादिकं सर्वं अध्यस्तं स्यात्। तर्हि घटादिकं यथा अनेक प्रतिपत्ति साधारणं तथा शुक्तिरजतादिकं अपि अनेक प्रतिपाद्य साधारणं स्यात्। आरोपितस्य घटादि साधारण्येन घटादिभ्यो रजतादौ विशेषान् आपादकत्वात् इत्यर्थः।**

ಒಂದು ವೇಳೆ ಶುಕ್ತಿರಜತಾದಿಗಳಂತೆ ಘಟಾದಿಗಳೆಲ್ಲವೂ ಆರೋಪಿತವಾದರೆ, ಆಗ ಘಟಾದಿಕಗಳ, ಹೇಗೆ ಅನೇಕ ಪ್ರತಿಪತ್ತಿ ಸಾಧಾರಣವೆನಿಸುತ್ತದೊ ಹಾಗೆ ಶುಕ್ತಿರಜತಾದಿಗಳ ಕೂಡ ಅನೇಕ ಪ್ರತಿಪಾದ್ಯ ಸಾಧಾರಣವೆನಿಸುತ್ತವೆ. ಆರೋಪಿತವಾದ ಘಟಾದಿ

ಸಾಧಾರಣದಿಂದ ಘಟಾದಿಕಗಳಲ್ಲಿ ರಜತಾದಿಗಳಲ್ಲಿ ವಿಶೇಷಾದಿಗಳು ಆಪಾದಕಗಳಾಗುತ್ತವೆ ಎಂದರ್ಥ.

## ॥ न वा केनापि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

द्वितीयं दूषयति– न वा केनापि इति॥

ಇನ್ನು ಎರಡನೆ ವಿಕಲ್ಪವನ್ನು ಈ ಟೀಕಾವಾಕ್ಯ ದೂಷಿಸುತ್ತದೆ.

अध्यस्य ज्ञाने अधिष्ठान प्रकाशस्य कारणत्वात् तत् अभावे केनापि किंचित् अपि दृश्येत् इत्यर्थः।

ಆರೋಪಿತ ಜ್ಞಾನಕ್ಕೆ ಅಧಿಷ್ಠಾನದ ಪ್ರಕಾಶ ಕಾರಣವಾದರಿಂದ, ಅದು ಇಲ್ಲದಾಗ , ಏನೂ ಯವದೂ ಕೂಡ ದೃಶ್ಯ ಅಥವಾ ಅನುಭವಿಸಲ್ಪಡುವದಿಲ್ಲ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

द्वितीयं दूषयति– न वा केनापि इति॥

ಇನ್ನು ಎರಡನೆ ವಿಕಲ್ಪವನ್ನು ಈ ಟೀಕಾವಾಕ್ಯ ದೂಷಿಸುತ್ತದೆ.

अधिष्ठान प्रकाशरूपस्य अध्यस्त स्फुरणस्य अभावात् न किंचित् अपि प्रकाशेत इत्यर्थः।

ಅಧಿಷ್ಠಾನ ಪ್ರಕಾಶರೂಪವಾದ ಆರೋಪಿತದ ಸ್ಫುರಣವು ಇಲ್ಲದಾಗ ಯಾವದೂ ಕಿಂಚಿತ್ ಕೂಡ ಪ್ರಕಾಶಿಸಲ್ಪಡುವದಿಲ್ಲ ಎಂದರ್ಥ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

अधिष्ठान प्रकाशरूप अध्यस्त स्फुरण उत्पादकस्य अभावात् देवदत्तेन अपि घटो न ज्ञायेत् इत्यर्थः।

ಅಧಿಷ್ಠಾನ ಪ್ರಕಾಶರೂಪ ಅಧ್ಯಸ್ತ ಸ್ಫುರಣ ಉತ್ಪಾದಕವು ಇಲ್ಲದಿರುವಾಗ ದೇವದತ್ತನಿಂದಲೂ ಕೂಡ ಘಟ ಕೂಡ ತಿಳಿಯಲ್ಪಡುವದಿಲ್ಲ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

ननु आरोपितस्य अयं स्वभावः स्वयं अज्ञान कल्पितं तद्दर्शनमात्र विषयत्वम्। तत् न शुक्तिरजतादेः सर्व प्रतिपत्ति साधारण्यं इत्यत आह– न केनापि इति॥
आरोपितस्य कल्पक अन्य दर्शन अयोग्यत्वे किंचित् घटादिकं केनापि कल्पक अन्येन केनापि न दृश्येत् इति सर्व प्रतिपत्ति साधारण्यं न स्यात् इति भावः।

ಆರೋಪಿತದ ಹೀಗೆ ಸ್ವಭಾವವಿರುತ್ತದೆಃ ಸ್ವತಃ ಅಜ್ಞಾನ ಕಲ್ಪಿತವಾಗಿದ್ದು ಅದರ ದರ್ಶನಮಾತ್ರವು ವಿಷಯವಾಗಿರುತ್ತದೆ. ಅದು ಶುಕ್ತಿರಜತಾದಿಗಳೆಲ್ಲ ಸಾಧಾರಣ ಪ್ರತಿಪತ್ತಿಯಾಗಿರುವದಿಲ್ಲ. ಅದಕ್ಕೆ ಈ ಟೀಕಾವಾಕ್ಯ ಹೀಗೆ ಹೇಳುತ್ತದೆ.

ಆರೋಪಿತದ ಕಲ್ಪಕ ಅನ್ಯ ದರ್ಶನ ಅಯೋಗ್ಯವಾದಾಗ್ ಕಿಂಚಿತ್ ಘಟಾದಿಗಳ ಯಾವದೂ ಕಲ್ಪಕ ಅನ್ಯರಿಂದ ಯವದೂ ಅನುಭವಗೋಚರವಾಗುವದಿಲ್ಲ ಎಂದು, ಸರ್ವ ಪ್ರತಿಪತ್ತಿ ಸಾಧಾರಣ ಇರುವದಿಲ್ಲ ಎಂಬ ಭಾವವಿರುತ್ತದೆ.



## ॥ इन्द्रिय सन्निकर्षादिकं इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

ननु सर्वेण सर्वं दृश्येत इत्युक्तं अयुक्तं यस्य सायवयं तैजसं अन्तःकरणं चक्षुरादिद्वारा बहिर्निर्गत्य विषयं प्राप्य तदाकारं भवति। तत्र वृत्ति उपारूढं जीवचैतन्यं घटाधिष्ठान चैतन्येन एकीभूय तत्रत्याज्ञानं नाशयति। तस्यैव तत्र अध्यस्तो घटः प्रकाशते न अन्य अस्ति न उक्त दोष इति आशङ्कते –इन्द्रिय इति॥

ಹಿಂದೆ, ಎಲ್ಲರಿಂದ ಎಲ್ಲವ್ರೂ ಅನುಭವಿಸಲ್ಪಡುತ್ತದೆ ಎಂಬ ಹೇಳಿಕೆಯು ಅಯುಕ್ತವಾಗಿದೆ. ಯವುದರ ಸ-ಅವಯವ ತೇಜಸ್ಸು ಅಂತಃಕರಣವು ಚಕ್ಷುರಾದಿದ್ವಾರಾ ಹೊರಗೆಬಿದ್ದು ವಿಷಯವನ್ನು ಪ್ರಾಪ್ತಮಾಡಿಕೊಂಡು ಅದರ ಆಕಾರವನ್ನು ಪಡೆಯುತ್ತದೆ. ಅಲ್ಲಿ ವೃತ್ತಿಯಿಂದ ಉಂಟಾದ ಜೀವ ಚೈತನ್ಯನು ಘಟಾಧಿಷ್ಠಾನ ಚೈತನ್ಯದಿಂದ ಒಂದಾಗಿ ಅಲ್ಲಿಯ ಅಜ್ಞಾನವನ್ನು ನಾಶಮಾಡುತ್ತದೆ. ಅಲ್ಲಿಯೇ ಆರೋಪಿತವಾದ ಘಟವು ಪ್ರಕಾಶಿಸುತ್ತದೆ ಬೇರೆ ಯಾವದೂ ಅಲ್ಲ. ಆದ್ದರಿಂದ ಅಲ್ಲಿ ಸಿದ್ಧಾಂತಿಗಳು ಹೇಳಿದ ದೋಷಕ್ಕೆ ಆಸ್ಪದವಿರುವದಿಲ್ಲ ಎಂದು ಈ ಟೀಕಾವಾಕ್ಯ ಆಶಂಕಿಸುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

ननु तत् तत् सन्निकृष्टेन्द्रियजन्य तत् तत् आकारवृत्तिद्वारकस्य अनादृत दृक् सम्बन्धस्यैव विषय प्रकाश उपपादकत्व अभ्युपगमात्, एक दृक् अध्यस्तत्वेऽपि कस्यचित् एव कश्चिद् एव प्रति कदाचित् एव च प्रकाशकः सम्भवति इति आशयेन शङ्कते– इन्द्रियसन्निकर्षादिकम् इति॥

ಆ ಆ ಸನ್ನಿಕೃಷ್ಟ-ಇಂದ್ರಿಯಜನ್ಯ ಆ ಆ ಆಕಾರವೃತ್ತಿದ್ವಾರಾ ಅಪೇಕ್ಷಿಸಲ್ಪಡದ ದೃಕ್ ಸಂಬಂಧದಿಂದಲೇ ವಿಷಯ ಪ್ರಕಾಶ ಉಪಪಾದಕತ್ವವನ್ನು ಒಪ್ಪಿರುವದರಿಂದ, ಒಂದೇ ದೃಕ್ ಆರೋಪಿತವಾಗಿದ್ದರೂ ಯಾವನಿಂದಲೂ, ಯಾವುದಾದರೂ, ಯಾವಾಗರೆ ಪ್ರಕಾಶಕ ಸಂಭವಿಸುತ್ತದೆ ಎಂಬ ಆಶಯದಿಂದ ಈ ಟೀಕಾವಾಕ್ಯ ಶಂಕಿಸುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

घटादेः व्यावहारिक सत्वात्। इन्द्रिय सन्निकर्ष सम्भवेन यस्य यस्य इन्द्रियेण संनिकृष्यते तेन तेन गृह्यत इति सर्व प्रतिपत्ति साधारणं इति भावः। विषयिविषय भाव एव अस्ति, ततश्च दृश्यत्वं उपपन्नं इति भावः।

ಘಟಾದಿಗಳು ವ್ಯಾವಹಾರಿಕ ಸತ್ಯವಾಗಿರುವದರಿಂದ ಇಂದ್ರಿಯ ಸನ್ನಿಕರ್ಷ ಸಂಭವಿಸುವದರಿಂದ ಯಾವ ಯಾವುದು ಇಂದ್ರಿಯದಿಂದ ಸನ್ನಿಕರ್ಷಿಸುತ್ತದೆ ಅದೆಲ್ಲ ಗ್ರಹಿಸಲಾಗುತ್ತದೆ ಎಂದು ಸರ್ವ ಪ್ರತಿಪತ್ತಿ ಸಾಧಾರಣ ಎಂಬ ಭಾವವಿರುತ್ತದೆ.

ವಿಷಯವಿಷಯಿ ಭಾವವೇ ಇರುತ್ತದೆ ಆದ್ದರಿಂದ ದೃಶ್ಯತ್ವವನ್ನು ಸಮರ್ಥಿಸಲಾಗುತ್ತದೆ ಎಂಬ ಭಾವವಿರುತ್ತದೆ.

## ॥ तर्हि किम् अनेन आरोपितत्वेन इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

इन्द्रिय सन्निकर्षस्य नियामकत्व अङ्गीकारे दृग्दृश्ययोः किम् अध्यासिक सम्बन्ध अङ्गीकार व्यसनेन, विषयविषयिभाव एव तयोः सम्बन्धः अस्तु इत्यर्थः।

ಇಂದ್ರಿಯ ಸನ್ನಿಕರ್ಷದ ನಿಯಾಮಕತ್ವವನ್ನು ಅಂಗೀಕರಿಸುವದಾದಲ್ಲಿ ದೃಗ್-ದೃಶ್ಯತ್ವಗಳಲ್ಲಿ ಅಧ್ಯಾಸಿಕ ಸಂಬಂಧ ಏಕೆ ಅಂಗೀಕರಿಸಬೇಕು? ಅವುಗಳಲ್ಲಿ ವಿಷಯವಿಷಯಿ ಭಾವ ಸಂಬಂಧವೇ ಇರಲಿ ಎಂದರ್ಥ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

परिहरति– किम् आरोपितत्वेन इति॥

ಮೇಲೆ ಪ್ರತಿಪಾದಿಸಿದ ಶಂಕೆಯನ್ನು ಈ ಟೀಕಾವಾಕ್ಯ ಪರಿಹರಿಸುತ್ತದೆ.

सत्यत्वेऽपि दृश्यत्व उपपत्तेः न दृश्यत्व उपपत्यर्थं आरोपितत्व अङ्गीकरणीयं इत्यर्थः।

ಸತ್ಯತ್ವಕ್ಕೂ ದೃಶ್ಯತ್ವ ಸಮರ್ಥಿಸಬಹುದಾದ್ದರಿಂದ, ದೃಶ್ಯತ್ವ ಸಮರ್ಥಿಸಲು ಸಾಧ್ಯವಿಲ್ಲವೆಂದು ಆರೋಪಿತತ್ವವನ್ನು ಅಂಗೀಕರಿಸಬೇಕು ಎಂದರ್ಥ.

## ॥ करणसम्बन्धादि निबन्धन इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

ननु ज्ञानज्ञेययोः विषयविषयिभाव सम्बन्ध अङ्गीकारे घटज्ञानस्य पटोऽपि विषयः स्यात् इति अतिप्रसङ्ग इति आशङ्का परिहाराय उक्तं– करण सम्बन्धादि निबन्धन इति॥

ಇನ್ನು ಜ್ಞಾನಜ್ಞೇಯಗಳಲ್ಲಿ ವಿಷಯವಿಷಯಿಭಾವ ಸಂಬಂಧ ಅಂಗೀಕರಿಸಿದರೆ ಘಟಜ್ಞಾನದ ಪಟ ಕೂಡ ವಿಷಯವಾಗುತ್ತದೆ ಎಂಬ ಅತಿಪ್ರಸಂಗವನ್ನು ಪರಿಹರಿಸಲು ಈ ಟೀಕಾವಾಕ್ಯವಿರುತ್ತದೆ.

यत् सन्निकृष्टेन करणेन यत् ज्ञानं उपजायते स तस्य विषय इति अङ्गीकारात् न अतिप्रसङ्ग इति भावः।

ಯಾವ ಇಂದ್ರಿಯ ಸನ್ನಿಕೃಷ್ಟದಿಂದ ಯಾವ ಜ್ಞಾನ ಉಂಟಾಗುತ್ತದೊ ಅದು ಅದರ ವಿಷಯವಾಗಿರುತ್ತದೆ ಎಂದು ಅಂಗೀಕರಿಸಬೇಕು, ಅದರಿಂದ ಅತಿಪ್ರಸಂಗಕ್ಕೆ ಆಸ್ಪದವಿರುವದಿಲ್ಲ ಎಂಬ ಭಾವವಿರುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

तत् कथं इत्यतः दृश्यत्वं इत्यत्र दृक् शब्देन किम् वृत्तिः विवक्षिता किम् वा चैतन्यं इति विकल्पद्वयं मनसि निधाय आद्यं दूषयति– करणसम्बन्धादि निबन्धन इति॥

ಅದು ಹೇಗೆ? ಎಂದು, ದೃಶ್ಯತ್ವ ಎಂಬಲ್ಲಿ ದೃಕ್ ಶಬ್ದದಿಂದ ವೃತ್ತಿ ವಿವಕ್ಷಿತವಾಗಿದೆಯೊ ಅಥವಾ ಚೈತನ್ಯವೋ ಎಂಬ ವಿಕಲ್ಪದ್ವಯಗಳನ್ನು ಮನಸ್ಸಿನಲ್ಲಿ ಹಿಡಿದು, ಈ ಟೀಕಾವಾಕ್ಯದಿಂದ ಮೊದಲನೆ ವಿಕಲ್ಪವನ್ನು ದೂಷಿಸುತ್ತಾರೆ.



## ॥ इति संक्षेप इति॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

"इदं अंशावच्छिन्ने चैतन्ये रजतं अध्यस्तम्। अविद्या वृत्तिप्रतिबिम्बित साक्षि चैतन्येन तु दृश्यते। एवं च यत्र अध्यस्तं न तेन दृश्यम्। येन च दृश्यं न तत्र अध्यस्तम्।
अपि च नित्य अनुमेय विषयस्य परोक्ष वृतिज्ञाने अध्यासः त्वया अपि न अङ्गीक्रियते। अथापि नित्य अनुमेयं तेन दृश्यत्वं अङ्गीकार्यम्। अन्यथा हेतोः भाग असिद्धि प्रसङ्गात् इति न दृग् अध्यस्तत्वं दृश्यता प्रयोजकम्।
किंच "यदि दृश्यं दृग् अध्यस्तं स्यात् तदा "दृग् घटः" इति तत् अनुविद्धतया घटादि प्रतीयेत।"

"ಅಂಶ ಅವಚ್ಛಿನ್ನ ಚೈತನ್ಯದಲ್ಲಿ ರಜತ ಆರೋಪಿತವಾದದ್ದು, ಅವಿದ್ಯಾ ವೃತ್ತಿ ಪ್ರತಿಬಿಂಬಿತ ಸಾಕ್ಷಿ ಚೈತನ್ಯನಿಂದ ಅನುಭವಿಸಲ್ಪಡುತ್ತದೆ. ಮತ್ತು ಈ ರೀತಿಯಾಗಿ, ಎಲ್ಲಿ ಆರೋಪಿತವಾದದ್ದು ಅದು ಚೈತನ್ಯನಿಂದ ಅನುಭವಿಸಲಾರದು. ಇದರಿಂದ ಯಾವದು ಅನುಭವವಾದದ್ದು ಅದು ಅಲ್ಲಿ ಆರೋಪಿತವಾಗಿರುವದಿಲ್ಲ. ಮತ್ತು, ನಿತ್ಯ ಊಹಿಸಲ್ಪಡುವ ವಿಷಯದ ಪರೋಕ್ಷ ವೃತ್ತಿಜ್ಞಾನವು ಅಧ್ಯಾಸವೆಂದು ತಾವು (ಪರಪಕ್ಷದವರು) ಕೂಡ ಅಂಗೀಕರಿಸಿರುವದಿಲ್ಲ. ಹಾಗುದ್ದರೂ ನಿತ್ಯ ಊಹಿಸಲ್ಪಡುವದನ್ನು ನೀವು ದೃಶ್ಯತ್ವವೆಂದು ಅಂಗೀಕರಿಸಬೇಕು. ಅನ್ಯಥಾ ಹೇತುವಿಗೆ ಭಾಗ ಅಸಿದ್ಧಿ ಉಂಟಾಗುವ ಪ್ರಸಂಗ ಒದಗಿ, ದೃಗ್ ಅಧ್ಯಸ್ತವು ದೃಶ್ಯತಾದ ಪ್ರಯೊಜಕವಾಗಲಾರದು.

ಮತ್ತು " ಒಂದು ವೇಳೆ ದೃಶ್ಯವು ದೃಗ್ ಅಧ್ಯಸ್ತವೆನಿಸಿದಾಗ "ದೃಗ್ ಘಟಃ" ಎಂದು ಅದರ ವ್ಯಾಪಿಸಲ್ಪಟದ್ದಾಗಿ ಘಟವು ತಿಳಿಯಲ್ಪಡುತ್ತದೆ".

न तु दृशि दृक्त्वात् अन्यः सामान्याकरोति। येन तत् अनिविद्धतया घटादिः प्रतीयेत, न तु दृग् रूपविशेष अनुविद्धतया इति चोद्येत" इत्यादि यद्यपि बहु वक्तव्यं अस्ति। तथापि ग्रन्थगौरव भायात् उपरम्यत् इति भावः

ದೃಶಿ ದೃಕ್ ವಾದ್ದರಿಂದ ಅನ್ಯವನ್ನು ಸಾಮಾನ್ಯಕರಿಸುವದಿಲ್ಲ. ಇದರಿಂದ ಅದು ವ್ಯಾಪಿಸಲ್ಪಟ್ಟಂತೆ ಘಟಾದಿಗಳು ಪ್ರತೀತವಾಗುತ್ತವೆ ವಿನಹಾ ದೃಗ್ ರೂಪವಿಶೇಷ ವ್ಯಾಪಿಸಿದ್ದಂತಾಗಿ ಅಲ್ಲ ಎಂದು ಮುಂತಾದವುಗಳನ್ನು ಸೂಚಿಸುತ್ತವೆ", ಇತ್ಯಾದಿ ಇನ್ನು ಬಹಳಷ್ಟು ಹೇಳುವದಿದೆ. ಹಾಗಿದ್ದರೂ ಗ್ರಂಥ ದೊಡ್ಡದಾಗುವ ಭಯದಿಂದ ಇಲ್ಲಿಯೆ ವಿರಮಿಸುತ್ತೇವೆ ಎಂಬ ಭಾವವಿರುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

न द्वितीय इत्याह– इति संक्षेप इति॥

ಇನ್ನು ಎರಡನೆ ವಿಕಲ್ಪವನ್ನು ಕೂಡ ದೂಷಿಸುತ್ತಾರೆ.

वृत्तिविषयत्वेन व्यवहारस्य वृत्तिगत स्वाभाविक विशेषेण विषय अपरोक्षस्य सम्भवेन चैतन्य अविषयत्वेऽपि बाधक अभावेन उक्तरूप दृश्यत्व अभावस्य इष्टत्वात्।

ವೃತ್ತಿವಿಷಯತ್ವದಿಂದ. ವ್ಯವಹಾರದ ವೃತ್ತಿಗತ ಸ್ವಾಭಾವಿಕ ವಿಶೇಷಣ ವಿಷಯದ ಅಪರೋಕ್ಷ ಸಂಭವವಾದ್ದರಿಂದ, ಚೈತನ್ಯ ಅವಿಷಯತ್ವವಾದರೂ ಬಾಧಕ ಇಲ್ಲದಿರುವದರಿಂದ, ಮೇಲೆ ಹೇಳಿದ ದೃಶ್ಯತ್ವ ಅಭಾವತೆಯು ಇಲ್ಲಿ ಇಷ್ಟವಾಗಿರುತ್ತದೆ.

सत्यत्वेऽपि तत् तत् सन्निकृष्ट इन्द्रियजन्य तत् तत् आकारवृत्तिद्वारक किंचित् सम्बन्धस्य सत्वेन चित् प्रकाश्यत्व सम्भवाच्च इति आशयः।

ಸತ್ಯತ್ವಕ್ಕೂ ಆ ಆ ಸನ್ನಿಕೃಷ್ಟ ಇಂದ್ರಿಯಜನ್ಯ ಆ ಆ ಆಕಾರವೃತ್ತಿದ್ವಾರಾ ಕಿಂಚಿತ್ ಸಂಬಂಧ ಸತ್ಯವಾದ್ದರಿಂದ ಚಿತ್ ಪ್ರಕಾಶದ ಸಂಭವವಿರುತ್ತದೆ ಎಂಬ ಆಶಯವಿರುತ್ತದೆ.

## ८. विश्वमिथ्यात्व अनुमानस्य दृष्टान्तदूषण अवसरः

### टीका

**अथ अवसरतः दृष्टान्तं दूषयिष्यन् साध्यसिद्ध्यर्थं साधन अन्वेषणम् इति प्राधान्यात् साध्यवैकल्यं तावत् आह–**

ಪ್ರತಿಜ್ಞಾ, ಹೇತು ನಿರಾಕರಣೆಯ ಆನಂತರ ದೃಷ್ಟಾಂತ ನಿರಾಸದ ಸದವಕಾಶ ಪ್ರಾಪ್ತವಾಗಲು ದೃಷ್ಟಾಂತವನ್ನು ದೂಷಿಸಲು, ಸಾಧ್ಯಸಿಧ್ಯರ್ಥಕ್ಕಾಗಿ ಸಾಧನ ಅನ್ವೇಶಣವಾಗಬೇಕು ಎಂದು ಸಾಧ್ಯದ ಪ್ರಾಧಾನ್ಯತೆಯನ್ನು ಲಕ್ಷದಲ್ಲಿಟ್ಟು ಶ್ರೀಮದಾಚಾರ್ಯರು ಮೊದಲಿಗೆ ದೃಷ್ಟಾಂತದ ಸಾಧ್ಯವೈಕಲ್ಯ ದೋಷವನ್ನು ಹೇಳುತ್ತಾರೆ.

### टिप्पणीनाम् विशेषार्थानि

**॥ अवसरत इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

अवसरतः प्राप्तं इति शेषः।

ಇಲ್ಲಿ अवसरतः ಪದದ ನಂತರ प्राप्तं ಎಂಬ ಪದವನ್ನು ಸೇರಿಸಿ ಅರ್ಥಮಾಡಬೇಕು.

प्रतिज्ञा हेतु निराकरणानन्तरं दृष्टान्तनिरासस्य अवसरतः प्राप्तं दृष्टान्तं दूषयिष्यन् इत्यर्थः।

ಪ್ರತಿಜ್ಞಾ, ಹೇತು ನಿರಾಕರಣೆಯ ಆನಂತರ ದೃಷ್ಟಾಂತ ನಿರಾಸದ ಸದವಕಾಶ ಪ್ರಾಪ್ತವಾಗಲು ದೃಷ್ಟಾಂತವನ್ನು ದೂಷಿಸಲು ಎಂದರ್ಥ.

**॥ साध्यसिद्ध्यर्थं इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

आदौ साधनवैकल्यं अनभिधाय साध्यवैकल्य अभिधाने निमित्तं आह इति– साध्यसिध्यर्थं इति॥



ಮೊದಲಿಗೆ ಸಾಧನವೈಕಲ್ಯವನ್ನು ಹೇಳದೆ ಸಾಧ್ಯವೈಕಲ್ಯ ಹೇಳುವದರಲ್ಲಿ ಏನು ಕಾರಣ? ಎಂಬುದನ್ನು ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ.

प्राधान्यात् साध्यस्य इति शेषः।

ಇಲ್ಲಿ प्राधान्यात् ಪದದ ನಂತರ साध्यस्य ಪದವನ್ನು ಸೇರಿಸಿ ಅರ್ಥಹೇಳಬೇಕು.

## *८.१ मिथ्यात्व अनुमाने दृष्टान्ते साध्यवैकल्योपपादनम्*

प्रपञ्चमिथ्यात्वानुमानखण्डनम्

शुक्तिरजतस्यापि अनिर्वचनीयत्व अभावात् साध्यविकलो दृष्टान्तः।

**ಶುಕ್ತಿರಜತವೂ ಕೂಡ ಅನಿರ್ವಚನೀಯವಲ್ಲ, ಆದ್ದರಿಂದ ಮಿಥ್ಯಾತ್ವ ಅನುಮಾನವನ್ನು ಸಾಧಿಸಲು ನಿದರ್ಶನವಾಗಿ ಕೊಟ್ಟ ದೃಷ್ಟಾಂತವು ಸಾಧ್ಯವಿಕಲವೆಂಬ ಅಂದರೆ ದೃಷ್ಟಾಂತವು ಸಾಧ್ಯಸಮಾನಧರ್ಮವಿಲ್ಲದಿರುವ ದೋಷದಿಂದ ಗ್ರಸ್ತವಾಗಿದೆ.**

### श्रीपद्मनाभतीर्थीयटीका

**जगत् अनिर्वचनीयत्वे शुक्तिरजतादेः न दृष्टान्तत्वं युज्यते। साध्य विकलत्वात्। न हि शुक्तिरजतस्य अनिर्वचनीयत्वं अस्ति। असत्वेन निरूच्यमानत्वात्।**

ಜಗತ್ ಅನಿರ್ವಚನೀಯ ಎಂದದಾದಲ್ಲಿ ಶುಕ್ತಿರಜತಾದಿಗಳು ದೃಷ್ಟಾಂತವಾಗಲಾರವು. ಆದ್ದರಿಂದ ಮಿಥ್ಯಾತ್ವ ಅನುಮಾನದ ದೃಷ್ಟಾಂತವು ಸಾಧ್ಯ ವಿಕಲ (ಅಂದರೆ ಸಾಧ್ಯಸಮಾನ ಧರ್ಮ ಇಲ್ಲದಿರುವ) ಎಂಬ ದೋಷಗ್ರಸ್ತವಾಗಿರುತ್ತದೆ. ಶುಕ್ತಿರಜತವು ಅನಿರ್ವಚನೀಯವಾಗಲಾರದು. ಅದನ್ನು ಅಸತ್ಯವೆಂದೆ ನಿರೂಪಿಸಲಾಗುತ್ತದೆ.

### टीका

"किमु तत् दृष्टान्तेन जगतः" इति अपि शब्दार्थः। असत्वस्य परेण जगति असिसाधयिषितत्वात् सद्विविक्तत्वादीनां च अनिर्वचनीयत्व अबहिर्भावं सिद्धवत् कृत्य "अनिर्वचनीयत्व अभावात्" इत्युक्तम्। "साध्य विकलः" इति साध्यसमान धर्म विकल उच्यते।

ದೃಷ್ಟಾಂತವಾದ ಶುಕ್ತಿರಜತವು ಅನಿರ್ವಚನೀಯವಲ್ಲ ಎಂದಮೇಲೆ ಜಗತ್ತು ಅನಿರವಚನೀಯವಲ್ಲ ಎಂದು ಮತ್ತೇನು ಹೇಳುವದು ಎಂದು अपि ಪದದ ಶಬ್ದಾರ್ಥವಾಗಿರುತ್ತದೆ. ಪರಪಕ್ಷದವರಿಂದ ಜಗತ್ತಿನ ಅಸತ್ಯತ್ವ ಸಾಧಿಸಲಾಗದಿರುವದರಿಂದ ಮತ್ತು ಅದು ಸದ್ವಿವಿಕ್ತತ್ವ ಮುಂತಾದವುಗಳ ಹೊರಗಿನ ಅರ್ಥವನ್ನು ತೆಗೆದು ಕೊಳ್ಳಬಾರದೆಂಬ ಅನಿರ್ವಚನೀಯ ಪದದ ಪದಕೃತ್ಯಮಾಡಿದ್ದರಿಂದ ಇಲ್ಲಿ ಶ್ರೀಮದಾಚಾರ್ಯರು "ಅನಿರ್ವಚನೀಯತ್ವ ಅಭಾವಾತ್" ಎಂದು ಹೇಳಿದ್ದಾರೆ. ಇಲ್ಲಿ ಸಾಧ್ಯ ವಿಕಲ, ಎಂದರೆ ಸಾಧ್ಯಸಮಾನ ಧರ್ಮದ ವಿಕಲ ಅಂದರೆ ಕೊರತೆ ಎಂದು ಹೇಳುತ್ತೇವೆ. ಸಾಧ್ಯ ವಿಕಲ ಎಂದರೆ ಸಾಧ್ಯಸಮಾನಧರ್ಮದ ನ್ಯೂನ್ಯತೆ ಎಂದರ್ಥ ಅದು ದೃಷ್ಟಾಂತದಲ್ಲಿದೆ ಎಂದರ್ಥ.

## टिप्पणीनाम् विशेषार्थानि

### ॥ जगत इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**जगतो नास्ति इति किमु वक्तव्यं इत्यर्थः।**

ಅಂದರೆ, ಜಗತ್ತು ಅನಿರ್ವಚನೀಯವಲ್ಲ ಎಂದು ಏನು ಹೇಳಬೇಕು ಎಂದರ್ಥ

### ॥ असत्वस्य इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु यदि असत्वं सद्विविक्तत्वं वा मिथ्यात्वं परस्य अभिमतं स्यात् तदा कथं साध्यवैकल्यं भवद्भिः अभिधातुं शक्यम् अपसिद्धान्त प्रसङ्गात् इत्यत आह– असत्वस्य इति॥**

ಮಿಥ್ಯಾತ್ವವು ಅಸತ್ವ ಅಥವಾ ಸದ್ವಿವಿಕ್ತತ್ವ ಎಂದು ಪರಪಕ್ಷದವರ ಅಭಿಮತವಾಗಿದ್ದರೆ ಆಗ ಸಿದ್ಧಾಂತಿಗಳಿಗೆ ಸಾಧ್ಯವೈಕಲ್ಯ ದೋಷವನ್ನು ಹೇಗೆ ಹೇಳಲು ಬರುತ್ತದೆ? ಹಾಗೂ ಅದು ಅಪಸಿದ್ಧಾಂತ ಪ್ರಸಂಗ ತಂದೊಡ್ಡುತ್ತದೆ. ಈ ಶಂಕೆಯನ್ನು ಈ ಟೀಕಾವಾಕ್ಯ ನಿವಾರಿಸುತ್ತದೆ.

**अपसिद्धान्त भयेन इति शेषः।**

ಇಲ್ಲಿ ಅಪಸಿದ್ಧಾಂತ ಭಯದಿಂದ ಎಂದು ಸೇರಿಸಿ ಅರ್ಥ ಹೇಳಬೇಕು.

### ॥ अनिर्वचनीयत्व इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**असद्विलक्षण स्वरूप अनुमर्देन सद्विलक्षणत्वे साध्ये अनिर्वचनीयत्वमेव उक्तं भवति इति सिद्धवत् कृत्य इत्यर्थः।**

ಅಸದ್ವಿಲಕ್ಷಣ ಸ್ವರೂಪವಿಲ್ಲವೆಂದು ಸದ್ವಿಲಕ್ಷಣತ್ವವನ್ನು ಸಾಧಿಸಲು, ಅದು ಅನಿರ್ವಚನೀಯ ಎಂದು ಹೇಳಿದಂತಾಯಿತು, ಎಂದು ಅನಿರ್ವಚನೀಯದ ಪದಕೃತ್ಯ ಎಂದರ್ಥ.



### ॥ साध्य विकल इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु साधयितुं योग्यं सन्दिग्धं इति यावत् साध्यं तद्वैकल्यं दृष्टान्तस्य भूषणमेव। तस्य निश्चित साध्यसमान धर्मवत्त्वात्। अतो व्याख्याति– साध्य विकल इति॥**
**तथाच तद्वैकल्यं दूषणमेव इत्याशयः।**

ಇನ್ನು ಸಾಧಿಸಲು ಯೋಗ್ಯ ಅಥವಾ ಸಂದಿಗ್ಧವಾದದ್ದು ಸಾಧ್ಯ ಎಂದರ್ಥ. ಅದರ ವೈಕಲ್ಯವು ಇಲ್ಲದಿರುವದು ದೃಷ್ಟಾಂತಕ್ಕೆ ಭೂಷಣವೇ ಆಗುತ್ತದೆ. ದೃಷ್ಟಾಂತವು ಸಾಧ್ಯದ ನಿಷ್ಚಿತ ಸಾಧ್ಯಸಮಾನ ಧರ್ಮವುಳ್ಳದ್ದಾಗಿರುತ್ತದೆ. ಅದಕ್ಕಾಗಿಯೆ ಈ ಟೀಕಾ ವಾಕ್ಯ ಸಾಧ್ಯ ವಿಕಲ ಪದದ ಅರ್ಥವನ್ನು ವಿವರಿಸುತ್ತದೆ. ಸಾಧ್ಯ ವಿಕಲ ಎಂದರೆ ಸಾಧ್ಯಸಮಾನಧರ್ಮದ ನ್ಯೂನ್ಯತೆ ಎಂದರ್ಥ. ಅದು ದೃಷ್ಟಾಂತದಲ್ಲಿದೆ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**ननु साधयितुं योग्यं हि साध्यं। एवं दृष्टान्तस्यापि सिद्धसाध्य सजातीय धर्म प्रति आश्रयत्वात् साध्यविकलत्वं इष्टमेव इत्यत आह– साध्य विकल इति॥**

ಇನ್ನು ಸಾಧಯಿಸಲು ಯೋಗ್ಯವಾದದ್ದು ಸಾಧ್ಯವೆನಿಸುತ್ತದೆ. ಈ ರೀತಿಯಲ್ಲಿ ದೃಷ್ಟಾಂತವು ಕೂಡ ಸಿದ್ಧಸಾಧ್ಯ ಸಜಾತೀಯ ಧರ್ಮಪ್ರತಿ ಆಶ್ರಯವಾಗಿರುತ್ತದೆ, ಹೀಗಾಗಿ ಅಲ್ಲಿ ಸಾಧ್ಯವಿಕಲತ್ವ ಇಷ್ಟವೇ ಆಯಿತಲ್ಲ? ಎಂಬ ಶಂಕೆಯನ್ನು ಈ ಟೀಕಾವಾಕ್ಯ ನಿವಾರಿಸುತ್ತದೆ.

## ८.१.१ शुक्तिरजत अनिर्वचनीयत्व साधक अर्थापत्ति निराकरणम्

### टीका

न तावत् शुक्तिरजतं सत्, बाध विरोधात्। न अपि असत्, अपरोक्षतया प्रतीति अनुपपत्तेः। ततः अर्थात् अनिर्वचनीयं तत् इति चेत् न।
सत्वात् प्रतीतिः, असत्वाच्च् बाधः इति सदसदात्मकत्वेन अपि उपपत्तेः। तत् विरुद्धम् इति चेत्। कः अयं विरोधः। अर्थापत्तिः चेत् तथा भावं गमयेत्। अन्यथा सदसद्वैलक्षण्यमपि न अङ्गीकार्यं स्यात्। विरुद्धविधि समुच्चयवत् विरुद्धनिषेध समुच्चयस्यापि विरुद्धत्वात्। निषेधसमुच्चयस्य अतात्विकत्वात् न विरोध इति चेत्। तर्हि विधिसमुच्चयः अपि अतात्विकत्व एव अङ्गीक्रियताम्। लाघवात्।

ಶುಕ್ತಿರಜತವು ಸತ್ಯವೆಂದು ಹೇಳಲಾಗುವದಿಲ್ಲ. ಏಕೆಂದರೆ, ಬಾಧದ ವಿರೋಧ ಬರುತ್ತದೆ. ಶುಕ್ತಿರಜತವು ಅಸತ್ಯವೆಂದೂ ಹೇಳಲಾಗುವದಿಲ್ಲ. ಏಕೆಂದರೆ ಅದರ ಅಪರೋಕ್ಷವಾದ

ಪ್ರತೀತಿಯನ್ನು ಸಮರ್ಥಿಸಲಾಗುವದಿಲ್ಲ. ಆದ್ದರಿಂದ ಅದು ಅರ್ಥಾಪತ್ತಿ ನ್ಯಾಯದಂತೆ ಅನಿರ್ವಚನೀಯ ಎಂದೆನ್ನುತ್ತೇವೆ ಎಂದರೆ. ಅದು ಸರಿಯಲ್ಲ.

ಶುಕ್ತಿರಜತವು ಸತ್ಯವಾಗಿರುವದರಿಂದ ಅದರ ಪ್ರತೀತಿ ಇದೆ, ಮತ್ತು ಅಸತ್ಯವಾಗಿರುವದರಿಂದ ಬಾಧವಿದೆ ಎಂದು, ಅದನ್ನು ಅರ್ಥಾಪತ್ತಿ ನ್ಯಾಯದಂತೆ ಸದಸದಾತ್ಮಕವೆಂದು ಕೂಡ ಸಮರ್ಥಿಸಲು ಸಾಧ್ಯವಿದೆ. ಅದು ವಿರುದ್ಧವಾಗಿದೆ ಎಂದರೆ. ಅಲ್ಲಿ ಎಂತಹ ವಿರೋಧ ಉಂಟಾಯಿತು? ಅರ್ಥಾಪತ್ತಿ ಇದೆ ಎಂದರೆ? ಆಗ ಅದರಂತೆ ಸದಸದಾತ್ಮಕ ಭಾವ ತಿಳಿದಂತಾಯಿತು. ಅನ್ಯಥಾ ಅಂದರೆ ವಿರೋಧವಿರುವದರಿಂದ ಅರ್ಥಾಪತ್ತಿ ಪ್ರವೃತ್ತಿಗೆ ಆಸ್ಪದ ಇಲ್ಲವೆಂದಾದರೆ , ಸದಸದ್ವೈಲಕ್ಷಣ್ಯವನ್ನು ಕೂಡ ತಾವು ಅಂಗೀಕರಿಸಬಾರದು. ಏಕೆಂದರೆ, ವಿರುದ್ಧವಿಧಿ ಸಮುಚ್ಚಯದಂತೆ ವಿರುದ್ಧ ನಿಷೇಧಸಮುಚ್ಚಯ ಕೂಡ ವಿರುದ್ಧವೆನಿಸುತ್ತದೆ. ಅಲ್ಲ ನಿಶೇಧಸಮುಚ್ಚಯವು ಅತಾತ್ವಿಕವಾಗಿರುವದರಿಂದ, ಅದಕ್ಕೆ ವಿರೋಧ ಉಂಟಾಗುವದಿಲ್ಲ ಎಂದರೆ. ಹಾಗಾದರೆ ಆ ನ್ಯಾಯದಂತೆ ವಿಧಿಸಮುಚ್ಚಯ ಕೂಡ ಅತಾತ್ವಿಕವೆಂದೆ ಅಂಗೀಕರಿಸಬೇಕು. ಅದು ಕಡಿಮೆ ದೋಷವುಳ್ಳದ್ದು ಎಂದರ್ಥ.

## टिप्पणीनाम् विशेषार्थानि

### ॥ न तावत् इत्यादिना॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**शुक्तिरजते अनिर्वचनीयत्व अभावात् साध्य वैकल्यं इत्युक्तं तत् अयुक्तम्। ख्याति बाध अन्यथा अनुपपत्या तस्य अनिर्वचनीयतायाः सिद्धत्वात् इत्यभिप्रेत्य शङ्कते–न तावत् इत्यादिना॥**

ಹಿಂದೆ ಶುಕ್ತಿರಜತದಲ್ಲಿ ಅನಿರ್ವಚನಿಯತ್ವ ಇಲ್ಲವಾದ್ದರಿಂದ ಸಾಧ್ಯ ವೈಕಲ್ಯ ದೋಷವನ್ನು ಹೇಳಲಾಯಿತು ಅದು ಅಯುಕ್ತವಾಗಿದೆ. ಖ್ಯಾತಿ ಎಂದರೆ ಜ್ಞಾನ ಮತ್ತು ಬಾಧಕ ಹೊರತಾಗಿ ಶುಕ್ತಿರಜತವನ್ನು ಸಮರ್ಥಿಸಲು ಬರುವದಿಲ್ಲವಾದ್ದರಿಂದ ಅನಿರ್ವಚನೀಯತ್ವ ಸಿದ್ಧವಾಗಿರುತ್ತದೆ ಎಂದು ಅಭಿಪ್ರಾಯಪಟ್ಟು, ಹೀಗೆ ಶಂಕಿಸುತ್ತಾರೆ.

### ॥ अपरोक्षतया इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु असत् अपि पदादिना अपरोक्षतः प्रतीयत एव। अन्यथा प्रपञ्चे असद्वैलक्षण्य ज्ञान अनुपपत्तेः इत्यत उक्तम्– अपरोक्षतया इति॥**

ಅಸತ್ಯದ ಕೂಡ ಪದಾದಿಗಳಿಂದ ಅಪರೋಕ್ಷವಾಗಿ ಪ್ರತೀತಿ ಇದ್ದೆಇರುತ್ತದೆ. ಇಲ್ಲವಾದರೆ, ಪ್ರಪಂಚ ಅಸದ್ ವಿಲಕ್ಷಣ ಎಂಬ ಜ್ಞಾನವನ್ನು ಸಮರ್ಥಿಸಲಾಗುದಿಲ್ಲ. ಅದಕ್ಕಾಗಿಯೆ अपरोक्षतया ಎಂದು ಹೇಳಲಾಗಿದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:



**परोक्ष भ्रमविषयश्च स्यात् सतोपि बाध सत्वात्। बाधो न असत्व प्रतिक्षेपाय अलं इत्यभिप्रेत्य हेत्वन्तर उपादानम् इति द्रष्टव्यं।**

ಪರೋಕ್ಷವು ಭ್ರಮವಿಷಯವಾಗುತ್ತದೆ. ಸತ್ಯಕ್ಕೂ ಕೂಡ ಬಾಧ ಇರುತ್ತದೆ. ಅಸತ್ಯವನ್ನು ಪ್ರಯೋಗಿಸಲು ಬಾಧವು  ಸಾಕಾಗಿಲ್ಲ, ಎಂದು ಅಭಿಪ್ರಾಯಪಟ್ಟು ಇದು ಹೇತ್ವಂತರ ಉಪಾದಾನವೆಂದು ತಿಳಿಯಬೇಕು.

### ॥ ततः अर्थात् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**शुक्तिरजतं असत् चेत् अपरोक्षतया न प्रतीयेत। यत् असत् तत् अपरोक्षतया न प्रतीयते यथा नरविषाणम्। इदं च अपरोक्षतया प्रतीयते तस्मात् असत् न भवति। सत् चेत् न बाध्येत, यत् सत् न बाध्यते, यथा आत्मा। बाध्यते च इदं तस्मात् सत् न भवति इति ख्यातिबाध अन्यथा अनुपपत्या एतत् शुक्तुरजतं सदसद्विलक्षणरूप अनिर्वचनीयमेव इत्यर्थः।**

ಶುಕ್ತಿರಜತವು ಅಸತ್ಯ ಆಗಿದ್ದರೆ, ಅಪರೋಕ್ಷವಾಗಿ ಅದರ ಪ್ರತೀತಿ ಉಂಟಾಗಬಾರದು. ಯಾವುದು ಅಸತ್ಯವಾಗಿದೆಯೊ ಅಪರೋಕ್ಷವಾಗಿ ಅದರ ಪ್ರತೀತಿ ಉಂಟಾಗುವದಿಲ್ಲ ಉದಾಃ ಮನುಷ್ಯನ ಕೋಡು. ಆದರೆ ಶುಕ್ತಿರಜತದ ಅಪರೋಕ್ಷವಾಗಿ ಪ್ರತೀತಿ ಉಂಟಾಗಿರುತ್ತದೆ. ಆದ್ದರಿಂದ ಅದು ಅಸತ್ಯವಾಗುವದಿಲ್ಲ. ಇನ್ನು ಅದು ಸತ್ಯವೆನ್ನುವುದಾದರೆ ಅದಕ್ಕೆ ಬಾಧ ಇರಬಾರದು. ಯಾವುದು ಸತ್ಯವೊ ಅದಕ್ಕೆ ಬಾಧ ಇರುವದಿಲ್ಲ ಉದಾಃ ಆತ್ಮಾ. ಆದರೆ ಶುಕ್ತಿರಜತಕ್ಕೆ ಬಾಧ ಇದೆ. ಆದ್ದರಿಂದ ಅದು ಸತ್ಯವಾಗಲಾರದು. ಹೀಗೆ ಖ್ಯಾತಿ ಎಂದರೆ ಜ್ಞಾನ ಅಥವಾ ಪ್ರತೀತಿ ಹೊರತಾಗಿ ಅದನ್ನು ಸಮರ್ಥಿಸಲಾಗುವದಿಲ್ಲ. ಆದ್ದರಿಂದ ಶುಕ್ತಿರಜತವು ಸದಸದ್ವಿಲಕ್ಷಣರೂಪ ಅನಿರ್ವಚನೀಯವೇ ಆಗಿದೆ ಎಂದರ್ಥ.

### ॥ न सत्वात् प्रतीतिःअसत्वाच्च् बाधः इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**अर्थापत्तेः अन्यथाऽपि उपपतत्तिरूपं दोषं आह– सत्वात् प्रतीतिः इत्यादिना॥**

ಮೇಲೆ ಪ್ರತಿಪಾದಿಸಿದ ಅರ್ಥಾಪತ್ತಿಯನ್ನು ಬೇರೆರೀತಿಯಿಂದಲೂ ಸಮರ್ಥಿಸಲು ಸಾಧ್ಯ ಎಂದು ಮೇಲಿನ ಅರ್ಥಾಪತ್ತಿಯಿಂದ ಅನಿರ್ವಚನೀಯವನ್ನು ಸಾಧಿಸಿದ್ದಕ್ಕೆ ದೋಷವನ್ನು ಈ ಟೀಕಾವಾಕ್ಯ ತೋರಿಸುತ್ತದೆ.

**असत् चेत् न प्रतीयेत, प्रतीयते च इदं, तस्मात् असत् न इत्युक्ते, सत्वेन अपि प्रतीति उपपत्तिः अस्तु, न तु तत् अन्यथा अनुपपत्त्या असद्वैलक्षण्यं कल्प्यम्।**

ಅಸತ್ಯವಾದರೆ ಅದರ ಪ್ರತೀತಿ ಉಂಟಾಗಬಾರದು. ಆದರೆ ಇದರ ಪ್ರತೀತಿ ಉಂಟಾಗುತ್ತದೆ. ಆದ್ದರಿಂದ ಅಸತ್ಯವಲ್ಲ ಎಂದು ಹೇಳಿ, ಸತ್ಯದಿಂದಲೂ ಕೂಡ ಪ್ರತೀತಿಯನ್ನು ಸಮರ್ಥಿಸಲು ಸಾಧ್ಯವಿದೆ, ಎಂದು ಅದನ್ನು ಇದರ ಹೊರತಾಗಿ ಸಮರ್ಥಿಸಲು ಸಾಧ್ಯವಿಲ್ಲ ಎಂದು ಅದನ್ನು ಅಸದ್ವಿಲಕ್ಷಣ ಎಂದು ಕಲ್ಪಿಸಬಾರದು.

एवं सत् चेत् न बाध्येत, बाध्यते च इदं, तस्मात् सत् न इत्युक्ते, असत्वेन अपि बाध उपपत्ति अस्तु, न तु तत् अन्यथा अनुपपत्त्या सद्वैलक्षण्यं कल्प्यम्।

ಇದೇ ರೀತಿಯಲ್ಲಿ, ಸತ್ಯವಾದರೆ ಅದಕ್ಕೆ ಬಾಧ ಉಂಟಾಗಬಾರದು, ಆದರೆ ಶುಕ್ತಿರಜತಕ್ಕೆ ಬಾಧ ಇದೆ ಆದ್ದರಿಂದ ಅದು ಸತ್ಯವಲ್ಲ ಎಂದು ಹೇಳಿ, ಅಸತ್ಯದಿಂದಲೂ ಕೂಡ ಬಾಧವನ್ನು ಸಮರ್ಥಿಸಲು ಸಾಧ್ಯವಿದೆ ಎಂದು, ಅದನ್ನು ಇದರ ಹೊರತಾಗಿ ಸಮರ್ಥಿಸಲು ಸಾಧ್ಯವಿಲ್ಲ ಎಂದು ಅದನ್ನು ಸದ್ವಿಲಕ್ಷಣ ಎಂದು ಕಲ್ಪಿಸಬಾರದು.

एवं च शुक्तिरूप्यादेः अत्यन्तसत्वे बाध अनुपपत्तेः, अत्यन्त असत्वे च प्रतीति अनुपपत्तेः सदसदात्मकत्वमेव अङ्गीकार्यं, न तु तत् बहिर्भावः।

ಮತ್ತು ಅದರಂತೆ ಶುಕ್ತಿರೂಪ್ಯಾದಿಗಳು ಅತ್ಯಂತ ಸತ್ಯವಾದಲ್ಲಿ ಬಾಧ ಇರಬಾರದು, ಇನ್ನು ಅತ್ಯಂತ ಅಸತ್ಯವಾದಲ್ಲಿ ಅದರ ಪ್ರತೀತಿ ಉಂಟಾಗಬಾರದು, ಅವುಗಳನ್ನು ಸದಸದಾತ್ಮಕವೆಂದೇ ಅಂಗೀಕರಿಸಬೇಕು ವಿನಹಾ ಸತ್-ಅಸತ್ ಗಳ ಹೊರಗಿನದು ಎಂದಲ್ಲ.

तथा च ख्यातेः सत्वेन बाधस्य च असत्वेन अपि उपपन्नत्वात्। अर्थापत्तेः अन्यथा उपपत्तिः इत्यर्थः। तथा हि– व्यवहारे भट्टनयः इति भट्टमतानुसारिणा त्वया गुणगुण्यादेः अत्यन्तभेदे गवाश्वादिवत् पृथक् उपलब्धि प्रसङ्गात्। अत्यन्त अभेदे च पर्यायत्व अन्यतरमात्र अवशेष प्रसङ्गात् , भेदाभेदौ स्वीकृतौ न उभय बहिर्भावः तद्वत् इति ज्ञातव्यः।

ಮತ್ತು ಅದರಂತೆಯೆ ಜ್ಞಾನಕ್ಕೆ ಸತ್ಯದಿಂದ ಬಾಧವನ್ನು ಅಸತ್ಯದಿಂದಲೂ ಕೂಡ ಸಮರ್ಥಿಸಲು ಸಾಧ್ಯವಿರುವದರಿಂದ, ಮೇಲಿನ ಅರ್ಥಾಪತ್ತಿಯನ್ನು ಬೇರೆರೀತಿಯಾಗಿಯೂ ಸಮರ್ಥಿಸಲು ಸಾಧ್ಯವಿರುತ್ತದೆ. ಅದು ಹೀಗಿರುತ್ತದೆ: ವ್ಯವಹಾರದಲ್ಲಿ ಭಟ್ಟಮತಾನುಯಾಯಿಗಳಾದ ತಾವು, ಗುಣಗುಣ್ಯದಿಗಳಲ್ಲಿ ಅತ್ಯಂತ ಭೇದವಿದೆ ಎಂದೆನ್ನುವದಾದರೆ ಆಕಳುಕುದರೆಗಳಂತೆ ಬೇರೆ ಬೇರೆಯಾಗಿರುವ ಉಪಲಬ್ಧಿಯನ್ನು ಒಪ್ಪಬೇಕಾಗುತ್ತದೆ, ಇನ್ನು ಅತ್ಯಂತ ಅಭೇದವಿದೆ ಎಂದೆನ್ನುವದಾದರೆ ಅವುಗಳಲ್ಲಿಯ ಭೇದಪರ ವ್ಯವಹಾರ ಮಾಡಲಾಗುವದಿಲ್ಲ, ಆದ್ದರಿಂದ ತಾವು ಅವುಗಳಲ್ಲಿ ಭೇದಾಭೇದವನ್ನು ಸ್ವೀಕರೀಸಿದ್ದೀರಿ ವಿನಹ ಭೇದ-ಅಭೇದಗಳ ಬಹಿರ್ಭಾವವಲ್ಲ. ಅದರಂತೆ ಇಲ್ಲಿ ಕೂಡ ಎಂದು ತಿಳಿಯಬೇಕು.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

यथा भट्टमतानुसारिणा त्वयापि गुणगुण्यादेः अत्यन्त भेदे गवाश्वादिवत् पृथक् सिद्ध्यादि प्रसङ्गात् अत्यन्त अभेदे च पर्यायत्व प्रसङ्गात् भेदभएदौ स्वीकृतौ न तु उभय बहिर्भावः।

ಹೇಗೆ ಭಟ್ಟಮತಾನುಸಾರಿಯಾದ ತಾವು ಕೂಡ ಗುಣಗುಣ್ಯಾದಿಗಳಲ್ಲಿ, ಅತ್ಯಂತ ಭೇದವೆಂದಾದರೆ ಗವಾಶ್ವಾದಿಗಳಂತೆ ಅವುಗಳು ಬೇರೆ ಬೇರೆ ಸಿದ್ಧವಾಗುವ ಪ್ರಸಂಗ ಉಂಟಾಗುತ್ತದೆಂದು, ಮತ್ತು ಅತ್ಯಂತ ಅಭೇದವೆಂದರೆ, ಅವುಗಳಲ್ಲಿ ವ್ಯಾವಹಾರಿಕೆ ಕಾರ್ಯಗಳನ್ನು ಮಾಡಲಾಗದ ಪ್ರಸಂಗ ಉಂಟಾಗುತ್ತದೆಂದು, ಭೆದಾಭೆದವನ್ನು ಸ್ವೀಕರಿಸಿದ್ದೀರಿ ವಿನಹಾ ಉಭಯ ಭೆದ-ಅಭೇದಕ್ಕಿಂತ ಹೊರಗಿನದನ್ನು ಅಲ್ಲ.



यथा वा जातेष्टेः शुद्धकाम्यत्वे "पुत्रे जाते" इति पुत्रजननरूप निमित्त श्रवणविरोधात् शुद्धनैमित्तिकत्वे च "पूत एव तेजस्वि अन्नादो भवति" इति पूतत्वादि फलश्रवण विरोधात् उभय सम्बन्ध अङ्गीकारः अङ्गीकृतः न तु उभय बहिर्भावः।

ಅಥವಾ ಶುದ್ಧಕಾಮದಿಂದ ಪುತ್ರ ಜನನವಾದಾಗ "पुत्रे जाते" ಎಂದು ಮುಂತಾದ ಶೃತಿಗಳಂತೆ ಪುತ್ರ ಜನನ ನಿಮಿತ್ತ ಶಾಸ್ತ್ರ ಶ್ರವಣಮಾಡಬಾರದಾಗಿ ಹೇಳಲಾಗುತ್ತದೆ, ಮತ್ತು ಶೌಚ ಶುದ್ಧಿ ನಿಮಿತ್ತದಿಂದ "पूत एव तेजस्वि अन्नादो भवति" ಎಂದು ಮುಂತಾದ ಶೃತಿಗಳು ಪ್ರಾಯಶ್ಚಿತ್ತ ವ್ರತವನ್ನು ಅನುಸರಿಸಿದಲ್ಲಿ ಪವಿತ್ರನಾಗುತ್ತನೆ ಎಂದು ಹೇಳುತ್ತದೆ. ಈ ಪ್ರಸಂಗದಲ್ಲಿ ಉಭಯ ಸಂಬಂಧಗಳನ್ನು ಅನುಸರಿಸಲಾಗುತ್ತಿದೆ ವಿನಹಾ ಅವುಗಳ ಹೊರತಾಗಿವಲ್ಲ.

तथा शुक्तिरूप्यादेः अत्यन्त सत्वे बाध अनुपपत्तेः अत्यन्त असत्वे च प्रतीति अनुपपत्तेः उभयात्मकत्वं अङ्गीकार्यम्।

ಹಾಗೆಯೆ ಶಿಕ್ತಿರೂಪ್ಯಾದಿಗಳಗೆ ಅತ್ಯಂತ ಸತ್ಯವೆಂದರೆ ಬಾಧ ಇರಬಾರದು, ಮತ್ತು ಅತ್ಯಂತ ಅಸತ್ವವೆಂದರೆ ಅವುಗಳ ಪ್ರತೀತಿ ಉಂಟಾಗಬಾರದು, ಹೀಗೆ ಉಭಯಾತ್ಮಕ ಭಾವವನ್ನು ಅಂಗೀಕರಿಸಬೇಕು.

तथा च ख्यातेः सत्वेन बाधस्य च असत्त्वेन अपि उपपन्नत्वात् अर्थापत्तेः अन्यथाऽपि उपपत्तिः इत्यर्थः।

ಅದರಂತೆ, ಖ್ಯಾತಿ ಎಂದರೆ ಜ್ಞಾನದ ಸತ್ಯದಿಂದ ಮತ್ತು ಬಾಧವು ಅಸತ್ಯದಿಂದ ಕೂಡ ಸಮರ್ಥಿಸಬಹುದಾದ್ದರಿಂದ ಬೇರೆ ರೀತಿಯ ಅರ್ಥಪತ್ತಿಯನ್ನು ಸಮರ್ಥಿಸಲು ಸಾಧ್ಯವಿರುತ್ತದೆ ಎಂದರ್ಥ.

## ॥ सदसदात्मकत्वेन अपि इति ॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

सदसदात्मकत्वेन एव इत्यर्थः।

ಅಂದರೆ, ಸದಸದಾತ್ಮಕದಿಂದಲೇ ಎಂದರ್ಥ.

## ॥ तत् विरुद्धम् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

सदसदात्मकत्वं विरुद्धं इत्यर्थः।

ಅಂದರೆ, ಸದಸದಾತ್ಮಕತ್ವವು ವಿರುದ್ಧವಾಗಿದೆ ಎಂದರ್ಥ.

## ॥ कः अयं विरोधः इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

किम् अर्थापत्ति प्रवृत्ति अनन्तरं सदसत्वं विरुद्धं इति उच्यते उत सदसत्वस्य विरुद्धत्वात् एतादृश विरुद्ध प्रमेय निर्णयाय अर्थापत्तिः एव न प्रवर्तत इति आद्यं दूषयति– कोऽयं विरोधः इति॥

अर्थापत्तिरूप प्रमाणमेव चेत् यदि सदसत्त्वं गमयेत् तदा कोऽयं विरोधो नाम्। प्रामाणिके अर्थे विरोधो किंचित्कर इति भावः।

ಏಕೆ ಅರ್ಥಾಪತ್ತಿಯ ಪ್ರವೃತ್ತಿ ಅನಂತರ ಸದಸತ್ವವು ವಿರುದ್ಧ ಎಂದು ಹೇಳುತ್ತೀರೊ? ಅಥವಾ ಸದಸತ್ವವು ವಿರುದ್ಧವಾಗಿರುವದರಿಂದ ಈತರಹದ ವಿರುದ್ಧ ಪ್ರಮೇಯದ ನಿರ್ಣಯಕ್ಕಾಗಿ ಅರ್ಥಾಪತ್ತಿ ಪ್ರವರ್ತಿಸಲಾರದು ಎಂದು ತಮ್ಮ ಹೇಳಿಕೆಯೊ? ಈ ಟೀಕಾವಾಕ್ಯದಿಂದ ಮೊದಲಿನ ವಿಕಲ್ಪವನ್ನು ದೂಷಿಸಲಾಗಿದೆ.

ಅರ್ಥಾಪತ್ತಿರೂಪ ಪ್ರಮಾಣವೇ ಎಂದರೆ, ಆಗ ಒಂದುವೇಳೆ ಸದಸತ್ವವು ತಿಳಿದಂತಾದರೆ ಆಗ ಯಾವ ವಿರೋಧ ಅಲ್ಲಿ ಉಂಟಾಗುತ್ತದೆ. ಹಾಗೂ ಪ್ರಾಮಾಣಿಕ ಅರ್ಥದಲ್ಲಿ ವಿರೋಧ ಬರಲು ಸಾಧ್ಯವಿಲ್ಲ ಎಂಬ ಭಾವವಿರುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

किम् अर्थापत्तौ प्रवृत्तायां अपि विरोधः। किम् वा विरोधात् अर्थापत्तिः एव न प्रवर्तते। आद्यं दूषयति– विरोध इति॥

ಅಂದರೆ, ಏಕೆ ಅರ್ಥಾಪತ್ತಿ ಪ್ರವೃತ್ತವಾದಗಲೂ ವಿರೋಧ ಉಂಟಾಗುವದೆಂದೊ? ಅಥವಾ ಏಕೆ ಸದಸದಾತ್ಮಕದಲ್ಲೆ ವಿರೋಧ ಇರುವದರಿಂದ ಅರ್ಥಾಪತ್ತಿಯೆ ಪ್ರವರ್ತಿಸುವದಿಲ್ಲವೆಂದೊ? ಮೊದಲನೆ ವಿಕಲ್ಪವನ್ನು ಈ ಟೀಕಾವಾಕ್ಯ ದೂಷಿಸುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

किम् अर्थापत्तौ प्रवृत्तायां विरोध उच्यते, उत विरोधापत्ति प्रवृत्तेः एव न सम्भवति इति उच्यत इति विकल्पद्वयं मनसि निधाय् आद्यं दूषयति– कोऽयं विरोध इति॥

ಏಕೆ ಅರ್ಥಾಪತ್ತಿ ಪ್ರವೃತ್ತವಾದಾಗಲೇ ವಿರೋಧವನ್ನು ಹೇಳುತೀರೋ? ಅಥವಾ ವಿರೋಧ ಉಂಟಾದ್ದರಿಂದ ಅರ್ಥಾಪತ್ತಿಯ ಪ್ರವೃತ್ತಿಯೆ ಸಂಭವಿಸುವದಿಲ್ಲವೆಂದು ಅನ್ನುತ್ತೀರೊ? ಎಂದು ವಿಕಲ್ಪದ್ವಯಗಳನ್ನು ಮನಸ್ಸಿನಲ್ಲಿರಿಸಿ, ಮೋದಲನೆಯ ವಿಕಲ್ಪವನ್ನು ಈ ಟೀಕಾವಾಕ್ಯದಿಂದ ದೂಷಿಸುತ್ತಾರೆ.

यदि अर्थापत्तौ प्रवृत्तायां अयं विरोधः तदा विरोधस्य अर्थापत्ति उत्तरकालं उपस्थितत्वेन ततः प्राग् अनुपस्थितत्वेन तत् प्रवृत्ति प्रतिबन्धकत्व अनुपपत्तेः अप्रतिबद्धा अर्थापत्तिः स्वप्रमेयं सदसदात्मकत्वं गमयेत एव इत्यर्थः।

ಒಂದು ವೇಳೆ ಅರ್ಥಾಪತ್ತಿ ಪ್ರವೃತ್ತವಾದಗಲೆ ವಿರೋಧವಿದೆ ಎನ್ನುವುದಾದರೆ, ಆಗ ವಿರೋಧವು ಅರ್ಥಾಪತ್ತಿಯ ಉತ್ತರಕಾಲದಲ್ಲಿ ಉಪಸ್ಥಿತವಾಗುವದರಿಂದ, ಅದರ ಮೊದಲಿಗೆ, ವಿರೋಧದ ಅನುಪಸ್ಥಿತಿಯ ಮೂಲಕ ಅರ್ಥಾಪತ್ತಿ ಪ್ರವೃತ್ತಿಗೆ ಪ್ರತಿಬಂಧಕ ಉಂಟಾಗಲಾರದು, ಹೀಗೆ ಅಪ್ರತಿಬದ್ಧವಾದ ಅರ್ಥಾಪತ್ತಿಯು ಸ್ವಪ್ರಮೇಯವಾದ ಸದಸದಾತ್ಮಕತ್ವವನ್ನು ಸರಿಯಾಗಿ ಬೋಧಿಸುತ್ತದೆ ಎಂದರ್ಥ.

## ॥ अन्यथा इति॥



ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

द्वितीयं प्रति आह– अन्यथा इति॥

ಈ ಟೀಕಾವಾಕ್ಯ ಮೇಲೆ ಪ್ರತಿಪಾದಿಸಿದ ವಿಕಲ್ಪಗಳಲ್ಲಿ ಎರಡನೆ ವಿಕಲ್ಪವನ್ನು ಅಲ್ಲಗಳೆಯುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

द्वितीयं प्रति आह– अन्यथा इति॥

ಈ ಟೀಕಾವಾಕ್ಯ ಮೇಲೆ ಪ್ರತಿಪಾದಿಸಿದ ವಿಕಲ್ಪಗಳಲ್ಲಿ ಎರಡನೆ ವಿಕಲ್ಪವನ್ನು ಅಲ್ಲಗಳೆಯುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

द्वितीयं दूषयति– अन्यथा इति॥

ಈ ಟೀಕಾವಾಕ್ಯ ಮೇಲೆ ಪ್ರತಿಪಾದಿಸಿದ ವಿಕಲ್ಪದ್ವಯಗಳಲ್ಲಿಯ ಎರಡನೆ ವಿಕಲ್ಪವನ್ನು ದೂಷಿಸುತ್ತದೆ.

तत्रापि विरोधेन अर्थापत्ति प्रवृत्ति कुण्ठनात् इति भावः।

ಸದಸದ್ವೈಲಕ್ಷಣ್ಯದಲ್ಲಿ ಕೂಡ ವಿರೋಧದಿಂದ ಅರ್ಥಾಪತ್ತಿ ಪ್ರವೃತ್ತಿ ಕುಂಠಿತವಾಗುತ್ತದೆ ಎಂಬ ಭಾವವಿರುತ್ತದೆ.

## ॥ विरुद्ध इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

कुत इत्यत आह– विरुद्ध इति॥

ಅದು ಹೇಗಾಗುತ್ತದೆ? ಎಂಬ ಪ್ರಶ್ನೆಗೆ ಉತ್ತರವಾಗಿ ಈ ಟೀಕಾವಾಕ್ಯವಿರುತ್ತದೆ.

विरुद्धे ये सदसत्त्वे तत् निषेधसमुच्चयस्यापि विरुद्धत्वात् इत्यर्थः।

ಸದಸತ್ವ ವಿರುದ್ಧವೆನ್ನುವುದಾದರೆ ಅದು ನಿಷೇಧಸಮುಚ್ಚಯಕ್ಕೂ ಕೂಡ ವಿರುದ್ಧವಾಗಿರುತ್ತದೆ ಎಂದರ್ಥ.

सदसत्त्वरूप प्रमेयस्य विरुद्धत्वात् अर्थापत्तेः एव न प्रवर्तत इति यदि उच्येत, तर्हि सदसतोः द्वयोः एव सर्वैः अनुभूयमानत्वेन सदसद्वैलक्षण्यरूप प्रमेयस्यापि विरुद्धत्वात् तत् निर्णयाय त्वदीय अर्थापत्तेः अपि प्रवृत्तिः नस्यात् इति भावः।

ಸದಸತ್ವ ಪ್ರಮೇಯವೇ ವಿರುದ್ಧವಾಗಿರುವದರಿಂದ ಅಲ್ಲಿ ಅರ್ಥಾಪತ್ತಿಯೇ ಪ್ರವರ್ತಿಸಲಾರದು ಎಂದು ತಾವು ಹೇಳುವದಾದರೆ, ಆಗ ಸದಸತದ್ವಯಗಳನ್ನೇ ಎಲ್ಲರು ಅನುಭವಿಸುತ್ತಿರುವಾಗ ಸದಸದ್ವೈಲಕ್ಷಣ್ಯರೂಪ ಪ್ರಮೇಯಕೂಡ ವಿರುದ್ಧವಾಗಿರುವಾಗ್ ಅದರ ನಿರ್ಣಯಕ್ಕಾಗಿ ತಾವು ಪ್ರತಿಪಾದಿಸಿದ ಅರ್ಥಾಪತ್ತಿಯ ಪ್ರವೃತ್ತಿಕೂಡ ಇರುವದಿಲ್ಲ ಎಂಬ ಭಾವವಿರುತ್ತದೆ.

ನಿಷೇಧಸಮುಚ್ಚಯವಾದ ಸದಸದ್ವೈಲಕ್ಷಣ್ಯರೂಪದ, ವಿಧಿಸಮುಚ್ಚಯವಾದದ್ದು ಸದಸತ್ವರೂಪವು ಎಂದರ್ಥ.

## ॥ विरुद्धनिषेध समुच्चयस्य इति॥

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**ननु इदं अनुपपन्नम्। विरुद्धयोः अपि गोत्व–अश्वत्वयोः निषेधद्वयस्य सामानाधिकरण्य दर्शनात्। न च विरुद्ध शब्देन भावाभावत्वरूपं विवक्षितम्। गोत्व–अश्वत्वयोः अतथात्वात् तत् अभाव समुच्चय इति सत्वासत्वयोः भावाभावरूपत्वात् तत् निषेध समुच्चयो न सम्भवति इति वाच्यम्। भावाभावात्मकयोः निषेधस्य भावाभावात्मकत्वेन विरुद्धनिषेधयोः विरुद्धत्वं इति पृथक अभिधानात् इति चेत् उच्यते।**

ಹೀಗೆ ಹೇಳುವದು ಸರಿಯಲ್ಲ. ವಿರುದ್ಧಗಳಲ್ಲಿ ಕೂಡ ಗೊತ್ವ ಮತ್ತು ಅಶ್ವತ್ವಗಳಲ್ಲಿ ನಿಷೇಧ ದ್ವಯಗಳಲ್ಲಿ ಸಾಮಾನಾಧಿಕರಣ ಕಂಡುಬರುತ್ತದೆ. ಮತ್ತು ಇಲ್ಲಿ ವಿರುದ್ಧ ಶಬ್ದದಿಂದ ಭಾವ-ಅಭಾವತ್ವರೂಪ ವಿವಕ್ಷಿತವಾಗಿರುವದಿಲ್ಲ. ಗೋತ್ವ ಮತ್ತು ಅಶ್ವತ್ವವಿಲ್ಲದವುಗಳು, ಅವುಗಳು ಗೊತ್ವ ಮತ್ತು ಅಶ್ವತ್ವಗಳ ಅಭಾವ ಸಮ್ಮುಚ್ಚಯವಾಗುತ್ತವೆ ಎಂದು, ಸತ್ವಾಸತ್ವಗಳು ಭಾವಾಭಾವರೂಪಗಳಾಗಿರುವದರಿಂದ ಅವುಗಳ ನಿಷೇಧ ಸಮುಚ್ಚಯ ಸಂಭವಿಸುವದಿಲ್ಲ ಎಂದು ಎನ್ನಕೂಡದು. ಭಾವಾಭಾವಾತ್ಮಕಗಳ ನಿಷೇಧದ ಭಾವಾಭಾವತ್ಮಕದಿಂದ ವಿರುದ್ಧನಿಷೇಧಗಳಲ್ಲಿ ವಿರುದ್ಧತ್ವ ಎಂದು ಮತ್ತೆ ಬೇರೆಯಾಗಿ ಹೇಳಬೇಕು ಎಂದು ಹೇಳುತ್ತೇವೆ ಎಂದರೆ. ಅದಕ್ಕೆ ಹೇಳುತ್ತೇವೆ.

**न एतत् विज्ञायते। विरुद्धनिषेधयोः विरुद्धनिषेध इति विज्ञायते। न च सत्वाभाववति शुक्तिरूप्यादि असत्वाभाव दर्शनात् सत्वासत्वनिषेधौ न विरुद्धौ इति वाच्यम्। तत् सिद्ध्यर्थमेव तु अप्रतनात्।**

ಅದನ್ನು ಹೀಗೆ ತಿಳಿದುಕೋಳಾಬಾರದು. ವಿರುದ್ಧನಿಷೇಧಗಳಲ್ಲಿ ವಿರುದ್ಧನಿಷೇಧವೆಂದೆ ತಿಳಿಯಬೇಕು. ಸತ್ವ-ಅಭಾವವಿದ್ದ ಶುಕ್ತಿರೂಪ್ಯಾದಿಗಳಲ್ಲಿ ಅಸತ್ವಅಭಾವ ಕಂಡುಬಂದಾಗ್ ಸತ್ವ-ಅಸತ್ವನಿಷೇಧಗಳಲ್ಲಿ ವಿರುದ್ಧವಲ್ಲದ್ದು ಎಂದು ಹೇಳಬಾರದು. ಅದರ ಸಿದ್ಧಯರ್ಥವಂತು ತಿಳಿಯಲಾರದ್ದಗಿದೆ.

## ॥ निषेध इति ॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**तथा च प्रतिबद्ध ख्याति बाध अन्यथा अनुपपत्त्या सदसद्विलक्षणत्व सिद्धिः उपपन्न इति भावः।**

ಮತ್ತು ಹಾಗೆಯೆ ಪ್ರತಿಬದ್ಧ ಖ್ಯಾತಿ ಬಾಧವನ್ನು, ಬೇರೆ ರೀತಿಯಲ್ಲಿ ಅಥಾವಾ ಅನ್ಯಥಾ ವಿವರಿಸಲು ಸಾಧ್ಯವಾಗುವದಿಲ್ಲ. ಆದ್ದರಿಂದ ಸದಸದ್ವಿಲಕ್ಷಣತ್ವದ ಸಇದ್ಧಿಯನ್ನು ಸಮರ್ಥಿಸಲು ಸಾಧ್ಯ ಎಂಬ ಭಾವವಿರುತ್ತದೆ.

## ॥ विधि समुच्चय इति ॥



ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**न च एवं निषेध समुच्चयस्य तात्विकता आपातः। निषेधसमुच्चयस्य अतात्विकत्वेऽपि विधिसमुच्चय तात्विकत्व प्रसङ्गस्य अविशेषात्।**

ಮತ್ತು ಈ ರೀತಿಯಾಗಿ ನಿಷೇಧ ಸಮುಚ್ಚಯಕ್ಕೆ ತಾತ್ವಿಕತಾ ಉಂಟಾಗುವದಿಲ್ಲ. ನಿಷೇಧಸಮುಚ್ಚಯವು ಅತಾತ್ವಿಕತ್ವವಾದರೂ ವಿಧಿಸಮುಚ್ಚಯ ತಾತ್ವಿಕತ್ವ ಪ್ರಸಂಗಕ್ಕೆ ಏನು ವಿಶೇಷತೆ ಇರುವದಿಲ್ಲ.

## ॥ अङ्गीक्रियताम् इति ॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**तथा च अप्रतिबन्धात् ख्यातिबाध अन्यथा अनुपपत्त्या सदसदात्मकत्व सिद्धिः अपि युक्ता इति भावः।**

ಮತ್ತು ಹಾಗೆಯೆ ಅಪ್ರತಿಬಂಧವಿರುವಾಗ ಖ್ಯಾತಿ ಬಾಧ ಅನ್ಯಥಾ ವಿವರಿಸಲು ಸಾಧ್ಯವಿಲ್ಲದಾಗ ಸದಸದತ್ಮಕತ್ವ ಸಿದ್ಧಿ ಕೂಡ ಯುಕ್ತವೇ ಆಗಿದೆ ಎಂಬ ಭಾವ ವಿರುತ್ತದೆ.

## ॥ लाघवात् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**विरुद्धः अतात्विक सदसद्वैलक्षण्य अङ्गीकार अपेक्षया विरुद्ध अतात्विक सदसत्व अङ्गीकारस्यैव लघुत्वात् इत्यर्थः।**

ವಿರುದ್ಧ ಅತಾತ್ವಿಕ ಸದಸದ್ವೈಲಕ್ಷಣ್ಯ ಅಂಗೀಕರಿಸುವಕ್ಕಿಂತ ವಿರುದ್ಧ ಅತಾತ್ವಿಕ ಸದಸತ್ವವನ್ನು ಅಂಗೀಕರಿಸುವದೇ ಹಗುರವಾದದ್ದು ಎಂದರ್ಥ.

**न च विधिसमुच्चयस्य अतात्विकत्वे तत् निषेधसमुच्चयस्य तात्विकत्व आपातः परस्पर विरुद्धयोः इति न्यायात् इति वाच्यम्। निषेधसमुच्चयस्य अतात्विकत्वे विधिसमुच्चयस्यापि तात्विकत्व प्रसङ्गः। उक्त न्यायात् एव साम्यात् इति भावः।**

ಮತ್ತು ವಿಧಿಸಮುಚ್ಚಯವು ಅತಾತ್ವಿಕತ್ವವಾದಲ್ಲಿ ಅದರ ನಿಷೇಧಸಮುಚ್ಚಕ್ಕೆ ತಾತ್ವಿಕತ್ವ ಉಂಟಾಗುತ್ತದೆ ಪರಸ್ಪರ ವಿರುದ್ಧಗಳಲ್ಲಿಯ ನ್ಯಾಯದಂತೆ ಎಂದು ಹೇಳಬಾರದು. ಏಕೆಂದರೆ, ಪರಸ್ಪರ ವಿರುದ್ಧನ್ಯಾಯದಂತೆಯೆ ನಿಷೇಧ ಸಮುಚ್ಚಯವು ಅತಾತ್ವಿಕವಾದರೆ ವಿಧಿಸಮುಚ್ಚಯಕ್ಕೂ ಕೂಡ ತಾತ್ವಿಕತ್ವ ಪ್ರಸಂಗ ಉಂಟಾಗುತ್ತದೆ ಎಂಬ ಭಾವವಿರುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु एवं सदसदात्मकत्वं सदसद्विलक्षणत्वयोः उभयोरपि ख्यातिबाध अन्यथा अनुपपत्त्या सिद्धि सम्भवे, सदसदात्मकत्वेन एव तत् उपपत्त्याश्रयणे किम् विनिगमकं इत्यतः तृतीयप्रकार असम्भव एव चतुर्थप्रकाराश्रयणस्य न्याय्यत्वात् तत् सम्भवेऽपि चतुर्थप्रकार कल्पनायां गौरवम्।**

ಈ ರೀತಿಯಾಗಿ ಸದಸದಾತ್ಮಕತ್ವ ಮತ್ತು ಸದಸದ್ವಿಲಕ್ಷಣಗಳಲ್ಲಿ, ಉಭಯತರುಗಳಲ್ಲಿ ಖ್ಯಾತಿ ಬಾಧ ಹೊರತಾಗಿ ವಿವರಿಸಲು ಸಾಧ್ಯವಿಲ್ಲವಾದ್ದರಿಂದ ಅವುಗಳ ಸಿದ್ಧಿ ಸಂಭವಿಸುವಾಗ, ಸದಸದಾತ್ಮಕತ್ವದಿಂದಲೇ ಯುಕ್ತಿಪೂರ್ವಕ ತಿಳಿಯಬೇಕು? ಎಂದು ಪ್ರಶ್ನೆಬಂದಾಗ, ಮೂರನೆ ಪ್ರಕಾರವಾದ ವಿಧಿಸಮುಚ್ಚಯ ಅಸಂಭವವೆನಿಸಿದಾಗ ಚತುರ್ಥಪ್ರಕಾರವಾದ ನಿಷೇಧಸಮ್ಮುಚ್ಚಯದ ಆಶ್ರಯಹೋಗುವದು ನ್ಯಾಯಸಮ್ಮತವಾಗುತ್ತದೆ. ಆದರೆ ತೃತೀಯ ಪ್ರಕಾರ ಸಂಭವಿಸುವಾಗ ಚತುರ್ಥಪ್ರಕಾರವನ್ನು ಕಲ್ಪಿಸುವದು ಸರಿಯೆನಿಸುವದಿಲ್ಲ.

**मत्पक्षे तु तत् अकल्पनात् लाघवमेव तत् नियामकम् इत्याशयेन आह– लाघवात् इति॥**

ನಮ್ಮ ಪಕ್ಷದಲ್ಲಿ ಹೀಗೆ ಕಲ್ಪನೆಗೆ ಆಸ್ಪದವಿಲ್ಲದ್ದರಿಂದ ಈ ನಿಯಾಮಕವು ನ್ಯಾಯದಲ್ಲಿ ಹಗುರವೇ ಆಗಿದೆ ಎಂದು ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ.

### ८.१.२ आध्यासिक सम्बन्धं विना दृश्यत्वानुपपत्तेः अभाव समर्थनम्

## टीका

किंच अपरोक्षप्रतीति विषयत्वं उक्तविधया न शुक्तिरजतस्य अस्ति इति कस्य अनुपपत्तिः। उल्लेखमात्रं तु असतः अपि चेत्। का अनुपपत्तिः। विस्तृतं एतत् अन्यत्र इति अलं पल्लवितेन।

ಮತ್ತು ಅಪರೋಕ್ಷ ಪ್ರತೀತಿ ವಿಷಯತ್ವವು,  ಈಗಾಗಲೆ ಹೇಳಿದ ಪ್ರಕಾರ ಶುಕ್ತಿರಜತಕ್ಕೆ ಉಂಟಾಗುವದಿಲ್ಲ. ಹೀಗಾಗಿ ಅಲ್ಲಿ ಯವುದಕ್ಕೆ ಅನುಪಪತ್ತಿ ಉಂಟಾಯಿತು? ಉಲ್ಲೇಖಮಾತ್ರ ಎಂದು ಹೇಳುವುದಾದರೆ ಅದು ಅಸತ್ತಿಗೂ ಇರುತ್ತದೆ ಎಂದರೆ ಅಲ್ಲಿ ಕೂಡ ಯಾವ ಅನುಪಪತ್ತಿ ಉಂಟಾಯಿತು? ಇದನ್ನು ವಿಸ್ತೃತವಾಗಿ ತತ್ತ್ವದ್ಯೋತಾದಿ ಗ್ರಂಥಗಳಲ್ಲಿ ವಿವರಿಸಲಾಗಿದೆ. ಇಲ್ಲಿಗೆ ವಿಸ್ತಾರ ಸಾಕು.

### टिप्पणीनाम् विशेषार्थानि

### ॥ किंच इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**किंच शुक्तिरजतम् अपरोक्षतया प्रतीयते तर्हि तत् अन्यथा अनुपपत्त्या असद्वैलक्षण्यं वक्तव्यम्। तदेव उक्त विधया नास्ति। अपरोक्षतया प्रतीयमानत्वं नाम इन्द्रियजन्य ज्ञानं विषयत्वम्। तथा च यत् सन्निकृष्टेन करणेन यत् ज्ञानं जायते स तस्य विषय इति निरुक्तविषयस्य अत्यन्त असति रजते असम्भवेन कस्य अनुपपत्तिः यया असद्वैलक्षण्यं सिध्येत इत्यर्थः।**



ಮತ್ತು ಶುಕ್ತಿರಜತವು ಅಪರೋಕ್ಷವಾಗಿ ಅರಿವಾಗುತ್ತದೆಂದರೆ ಅದರ ಹೊರತಾಗಿ ವಿವರಿಸಲಾಗುವದಿಲ್ಲ ಆದ್ದರಿಂದ ಅಸದ್ವೈಲಕ್ಷಣ್ಯವೆಂದು ಹೇಳಬೇಕು. ಅದೆನೆ ಹೇಳಿದ ಪ್ರಕಾರ ಅಲ್ಲಿ ಇರುವದಿಲ್ಲ. ಅಪರೋಕ್ಷವಾಗಿ ಪ್ರತೀತಿ ಉಂಟಾಗುತ್ತದೆ ಎಂಬುದು ಇಂದ್ರಿಯಜನ್ಯ ಜ್ಞಾನವಿಷಯವಾಗಿರುತ್ತದೆ. ಅದರಂತೆ ಯಾವದು ಇಂದ್ರಿಯ ಸನ್ನಿಕೃಷ್ಟದಿಂದ ಜ್ಞಾನ ಆಗುತ್ತದೊ ಅದು ಅಪರೋಕ್ಷದ ವಿಷಯವಾಗುತ್ತದೆ. ಹೀಗೆ ಉಂಟಾದ ನಿರುಕ್ತವಿಷಯವು ಅತ್ಯಂತ ಅಸತ್ಯವಾದ ರಜತದಲ್ಲಿ ಇರಲು ಅಸಂಭವವೆನಿಸುವಾಗ, ಇಲ್ಲಿ ಯಾವ ಯುಕ್ತಿಹೀನತೆ ಅಥವಾ ವಿವರಿಸಲು ಅಸಾಧ್ಯವಾದ್ದರಿಂದ ಅಸದ್ವೈಲಕ್ಷಣ್ಯವು ಸಿದ್ಧವಾಗುತ್ತದೆ ಎಂದರ್ಥ.

**तथा च असत् चेत् अपरोक्षतया न प्रतीयेत, प्रतीयते च इदं तस्मात् असत् न इति विपर्यय पर्यवसाने स्वरूप असिद्धिः इति भावः।**

ಅದರಂತೆ, ಅಸತ್ಯವಾದರೆ ಅದು ಅಪರೋಕ್ಷವಾಗಿ ಅರಿವಾಗುವದಿಲ್ಲ. ಆದರೆ ಅದರ ಪ್ರತೀತಿ ಅಥವಾ ಅರಿವು ಇದೆ ಆದ್ದರಿಂದ ಅದು ಅಸತ್ಯವಲ್ಲ ಎಂದು ವಿಪರ್ಯಯ ಪರ್ಯವಸಾನದಿಂದ ಸ್ವರೂಪ ಅಸಿದ್ಧಿ ಉಂಟಾಗುತ್ತದೆ ಎಂಬ ಭಾವವಿರುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**किंच अपरोक्षतया न प्रतीयेत इति कः अर्थः। अपरोक्षतया न विषयिक्रियेत इति वा। न उल्लेख्येत इति वा। तत्र आद्य इष्टापत्त्या दूषयति –किंच इति॥**

ಮತ್ತು ಅಪರೋಕ್ಷವಾಗಿ ಅದರ ಪ್ರತೀತಿ ಉಂಟಾಗುವದಿಲ್ಲ ಅಂದರೆ ಎನರ್ಥ? ಅಪರೋಕ್ಷವಾಗಿ ವಿಷಯೀಕ್ರಯಿಸುವದಿಲ್ಲ ವೆಂದೊ ಅಥವಾ ಉಲ್ಲೇಖಿಸಲು ಅಥವ ಉಹಿಸಲು ಸಾಧ್ಯವಿಲ್ಲವೆಂದೊ? ಅಲ್ಲಿ ಮೊದಲನೆಯ ವಿಕಲ್ಪವಾದರೆ ಅದನ್ನು ಇಷ್ಟಾಪತ್ತಿ ಮೂಲಕ ಈ ಟೀಕಾವಾಕ್ಯ ದೂಷಿಸುತ್ತದೆ.

### ॥ उक्तविधया इति ॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**शुक्तिरजत ज्ञानस्य रजतसन्निकृष्टकरण अजन्यत्वात् इत्युक्त विधया इत्यर्थः।**

ಅಂದರೆ, ಶುಕ್ತಿರಜತ ಜ್ಞಾನವು ರಜತ ಸನ್ನಿಕೃಷ್ಟ ಇಂದ್ರಿಯದಿಂದ ಉಂಟಾದದ್ದಲ್ಲ ಎಂದು ಹೇಳಿದ ಪ್ರಕಾರ ಎಂದರ್ಥ.

### ॥ उल्लेखमात्रं चेत् इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु अपरोक्ष प्रतीतिविषयत्वं न निरुक्तरूपम्। येन उक्त दोषः स्यात्। किम् नाम उल्लेखितमात्रमेव विवक्षितम् इति चेत् न। तथात्वे ज्ञाने उल्लेख्यत्व अन्यथा अनुपपत्त्या असद्वैलक्षण्यं साधितं**

**स्यात्। न च तत् युक्तम्। असतोपि ज्ञानव्यावर्तकत्वरूप तत् उल्लेख्यत्व सम्भवेन अनुपपत्तिः एव नास्ति। यया सद्वैलक्षण्यं साध्येत इत्याह– उल्लेखमात्रं चेत् इति॥**

ಅಪರೋಕ್ಷ ಪ್ರತೀತಿವಿಷಯವು ಮೇಲೆ ಹೇಳಿದ ನಿರುಕ್ತರೂಪ ವಿಷಯವಾಗಿರುವದಿಲ್ಲ. ಅದರಿಂದ ಸಿದ್ಧಾಂತಿಗಳು ಹೇಳಿದ ದೋಷ ಉಂಟಾಗುತ್ತದೆ. ಮತ್ತೇನು ಎಂದರೆ? ಉಲ್ಲೇಖಿತಮಾತ್ರ ಅಂದರೆ ಊಹಿತಮಾತ್ರವಾದದ್ದು ಎಂದು ವಿವಕ್ಷಿತವಾಗಿರುತ್ತದೆ ಎಂದು ಎನ್ನುತ್ತೇವೆ ಎಂದರೆ. ಹಾಗೆ ಹೇಳುವದು ಸರಿಯಲ್ಲ. ಅಂಥಹ ಜ್ಞಾನದಲ್ಲಿ ಉಲ್ಲೆಖ್ಯತ್ವವನ್ನು ಅನ್ಯಥಾ ಹೊರತಾಗಿ ವಿವರಿಸಲು ಸಾಧ್ಯವಿಲ್ಲವಾದ್ದರಿಂದ್ ಅಸದ್ವೈಲಕ್ಷಣ್ಯ ಸಾಧಿಸಬಹುದಾದರೂ ಹಾಗೆ ಹೇಳುವದು ಅಯುಕ್ತವಾಗಿದೆ. ಅಸತ್ಯಕ್ಕೂ ಕೂಡ ಜ್ಞಾನ ವ್ಯಾವರ್ತಕತ್ವರೂಪ ಅದರ ಉಲ್ಲೇಖ್ಯತ್ವ ಸಂಭವವಿರುವಾಗ ಅಲ್ಲಿ ಅನುಪಪತ್ತಿ ಅಂದರೆ ಯುಕ್ತಿಹೀನತೆ ಅಥವಾ ವಿವರಿಸಲು ಸಾಧ್ಯವಿಲ್ಲ ಎಂಬುದೇ ಇಲ್ಲ. ಅದರಂತೆಯೆ ಸದ್ವೈಲಕ್ಷಣ್ಯವು ಸಾಧಿಸಬೇಕು ಎಂಬುದನ್ನು ಅಲ್ಲಗೆಳೆಯಲು ಈ ಟೀಕಾವಾಕ್ಯವಿರುತ್ತದೆ.

**विषयत्वें इति शेषः।**

ಇಲ್ಲಿ विषयत्वें ಎಂಬ ಪದವನ್ನು ಸೇರಿಸಿ ಅರ್ಥಮಾಡಬೇಕು.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**यद्यपि ज्ञानजनक करण सम्बन्धित्वरूपं विषयत्वं सत्त्वं अपेक्षते। असतः करणसम्बन्ध अयोगात्। तथापि यथा परोक्षज्ञानं प्रति तत् जनित अभिपदनरूप व्यवहार विषयता योग्यतारूपं "कस्य ज्ञानम्" इत्युक्ते " अस्य ज्ञानम्" इति आश्रयाश्रयिभावादि सम्बन्धान्तर अभावेऽपि ज्ञान अवच्छेदकत्वरूपं तत् उल्लेख्यत्वं तथा अपरोक्षज्ञानं प्रति अपि अस्तु। अविशेषात्।**

ಹೇಗೆ ಜ್ಞಾನಜನಕವು ಇಂದ್ರಿಯ ಸಂಬಂಧರೂಪ ವಿಷಯತ್ವ ಸತ್ಯವನ್ನು ಅಪೇಕ್ಷಿಸುತ್ತದೊ, ಅಸತ್ಯಕ್ಕೆ ಇಂದ್ರಿಯ ಸಂಬಂಧ ಅಯೋಗ್ಯವಾಗಿದೆ. ಹಾಗಿದ್ದರೂ, ಹೇಗೆ ಪರೋಕ್ಷಜ್ಞಾನದ ಪ್ರತಿ, ಅದದಿಂದ ಜನಿತ ವ್ಯವಹಾರ ವಿಷಯತಾ ಯೋಗ್ಯತಾರೂಪ, ಇದು ಯಾವ ಜ್ಞಾನ ಎಂದು ಹೇಳಲು, ಇದು ಇದರ ಜ್ಞಾನ ಎಂದು ಆಶ್ರಯಾಶಯೀಭಾವ ಸಂಬಂಧಾಂತರದ ಅಭಾವವಿದ್ದರೂ, ಜ್ಞಾನ ಅವಚ್ಛೇದಕತ್ವರೂಪ ಅದರ ಉಲ್ಲೇಖಿಸಲಪಡುತ್ತದೊ ಹಾಗೆ ಅಪರೋಕ್ಷ ಜ್ಞಾನ ಪ್ರತಿ ಕೂಡ ಇರುತ್ತದೆ. ಅದರಲ್ಲಿ ಎನೂ ವಿಶೇಷವಿರುವದಿಲ್ಲ ಎಂದರ್ಥ.

**तथापि असतः अपरोक्ष ज्ञानं भ्रान्तेः अन्यत्र न दृष्टचरम् इति चेत् न। सद्विलक्षणस्यापि भ्रान्तेः अन्यत्र अदर्शनात् इति भावः।**

ಅದರಂತೆ ಅಸತ್ಯದ ಅಪರೋಕ್ಷ ಜ್ಞಾನವು ಭ್ರಾಂತಿಯಲ್ಲಿ ಬೇರೆಕಡೆ ದೃಶ್ಯವಾಗುವದಿಲ್ಲ ಎಂದರೆ, ಹಾಗೆ ಹೇಳುವದು ಸರಿಯಲ್ಲ. ಸದ್ವಿಲಕ್ಷಣವು ಕೂಡ ಭ್ರಾಂತಿಯಲ್ಲಿ ಅನ್ಯತ್ರ ಕಂಡುಬರುವದಿಲ್ಲ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**द्वितीयं अप्रयोजकत्वेन दूषयति– उल्लेख इति॥**



ಎರಡನೆ ವಿಕಲ್ಪವನ್ನು ಅಪ್ರಯೋಜಕತ್ವದಿಂದ ಈ ಟೀಕಾವಾಕ್ಯ ದೂಷಿಸುತ್ತದೆ.

**॥ विस्तृतं एतत् इति ॥**

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु व्यावृत्ति धीजनकत्वरूपं व्यावर्तकत्वमेव उल्लेख्यत्वं तत् कथं असतः सकलसामर्थ्यरहितस्य स्यात् इत्यत आह– विस्तृतं एतेत् इति॥**

ವ್ಯಾವೃತ್ತಿ ಬುದ್ಧಿಜನಕತ್ವರೂಪ ವಾವರ್ತಕವೇ ಉಲ್ಲೇಖ್ಯತ್ವವೆನಿಸುತ್ತದೆ, ಹಾಗಿದ್ದಾಗ ಅಸತ್ಯವು ಹೇಗೆ ಸಕಲ ಸಾಮರ್ಥರಹಿತವಾಗುತ್ತದೆ? ಅದಕ್ಕೆ ಈ ವಿಷಯವನ್ನು ಬೇರೆ ಗ್ರಂಥಗಳಲ್ಲಿ ವಿಸ್ತೃತವಾಗಿ ವಿವರಿಸಲಾಗಿದೆ ಎಂದು ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ.

**अन्यत्र तत्त्वद्योतादौ इत्यर्थः।**

ಇಲ್ಲಿ ಅನ್ಯತ್ರ ಎಂದರೆ ತತ್ತ್ವದ್ಯೋತಾದಿ ಗ್ರಂಥಗಳಲ್ಲಿ ಎಂದರ್ಥ.

## *८.२ मिथ्यात्व अनुमाने दृष्टान्ते साधनवैकल्योपपादनम्*

प्रपञ्चमिथ्यात्वानुमानखण्डनम्

**उक्त प्रकारेण दृश्यत्व अभावात् साधन विकलश्च।**

**"ರಜತದ ದೃಶ್ಯತ್ವವು ಭ್ರಮಮಾತ್ರವಾಗಿದೆ" ಎಂದು ಮುಂತಾಗಿ ಹೇಳಿದ ಪ್ರಕಾರದಂತೆ ದೃಶ್ಯತ್ವ ಹೇತುವು ದೃಷ್ಟಾಂತವಾದ ಶುಕ್ತಿರಜತದಲ್ಲಿ ಇಲ್ಲ. ಆದ್ದರಿಂದ ಮಿಥ್ಯಾತ್ವ ಅನುಮಾನದ ದೃಷ್ಟಾಂತವು ಸಾಧನ ವೈಕಲ್ಯ ವೆಂಬ ದೋಷದಿಂದ ಗ್ರಸ್ತವಾಗಿದೆ.**

### श्रीपद्मनाभतीर्थीयटीका

**अनिर्वचनीय दृश्यत्व अभावात् साधन विकलत्वं स्यात् शुक्तिरजत दृष्टान्तस्य तदाह्- शुक्तिरजतस्यादि इत्यादिना॥**

ಅನಿರ್ವಚನೀಯ ದೃಶ್ಯತ್ವ ಇಲ್ಲವಾದ್ದರಿಂದ ಶುಕ್ತಿರಜತ ದೃಷ್ಟಾಂತಕ್ಕೆ ಸಾಧನ ವಿಕಲತ್ವ ಉಂಟಾಗುತ್ತದೆ. ಅದನ್ನೆ ಶ್ರೀಮದಾಚಾರ್ಯರ ಮೇಲಿನ ಹಾಗೂ ಈ ಮೂಲವಾಕ್ಯಗಳು ಸ್ಪಷ್ಟಪಡಿಸುತ್ತವೆ.

### टीका

"रजतं दृष्टं इति भ्रममात्रत्वात्" इति उक्त प्रकारेण। "शुक्तिरजतस्य " इति अनुवर्तते । "च" कारो दृष्टान्त इत्यस्य अनुकर्षणार्थ:।

"ರಜತವು ದೃಶ್ಯವಾಯಿತು ಎಂದು ಭ್ರಮಮಾತ್ರವಾದುದು" ಎಂದು ಹೇಳಿದ ಪ್ರಕಾರದಂತೆ ಎಂದರ್ಥ. उक्त प्रकारेण ಪದಗಳ ನಂತರ शुक्तिरजतस्य ಎಂದು ಅನುವರ್ತಿಸಬೇಕು. ಇಲ್ಲಿ च ಶಬ್ದವನ್ನು ಹಿಂದಿನ ಮೂಲವಾಕ್ಯದಲ್ಲಿಯ ದೃಷ್ಟಾಂತ ಪದದ ಅನುಕರ್ಷದ ಸಲುವಾಗಿ ಇಡಲಾಗಿದೆ.

### टिप्पणीनाम् विशेषार्थानि

॥ इति उक्त प्रकारेण इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

दृश्यत्वं हि दृग् विषयत्वं तत् च यत् सन्निकृष्टेन इत्यादिरूपं तत् तु शुक्तिरजते नास्ति इति प्राग् उक्तप्रकारेण इत्यर्थ:।

ದೃಶ್ಯತ್ವವು ದೃಗ್ ವಿಷಯವಾದುದು ಮತ್ತು ಅದು ಯಾವುದು ಸಾನ್ನಿಕೃಷ್ಟ ಇತ್ಯಾದಿರೂಪವುಳ್ಳದ್ದು ಅದು ಶುಕ್ತಿರಜತದಲ್ಲಿ ಇರುವದಿಲ್ಲ ಎಂದು ಹಿಂದೆ ಹೇಳಿದ ಪ್ರಕಾರದಂತೆ ಎಂದರ್ಥ.

दृष्टान्त इत्यस्य पूर्ववाक्य स्थितस्य ।

ದೃಷ್ಟಾಂತ ಇತ್ಯಸ್ಯ ಎಂದರೆ ಪೂರ್ವ ಮೂಲವಾಕ್ಯದಲ್ಲಿದ್ದ ದೃಷ್ಟಾಂತ ಪದದ ಎಂದರ್ಥ

## ९. मिथ्यात्व अनुमाने उपाधि दोषोद्भावनम्

### टीका

केचित् उपाधिदोषं असिद्धौ अन्तर्भावयन्ति। अन्ये अनैकान्तिके। परे कालात्ययापदिष्टतायाम्। एके सत्प्रतिपक्षतायाम्। केचित् तु दृष्टान्तदोष इति। तत्र गुणदोष चिन्तायां न अयं अवसरः इति सर्वावसितौ उपाधिदोषं आह–

ಕೆಲವರು ಉಪಾಧಿದೋಷವನ್ನು ಅಸಿದ್ಧಿ ದೋಷದಲ್ಲಿ ಅಂತರ್ಭಾವ ಮಾಡುತ್ತಾರೆ. ಅನ್ಯರು ಅನೈಕಾಂತಿಕ ದೋಷದಲ್ಲಿ ಅಂತರ್ಭಾವ ಮಾಡುತ್ತಾರೆ. ಮತ್ತೆ ಕೆಲವರು ಕಾಲಾತ್ಯಯಾಪದಿಷ್ಟದಲ್ಲಿ ಮಾಡಿದರೆ ಮತ್ತೊಬ್ಬರು ಸತ್ಪ್ರತಿಪಕ್ಷದಲ್ಲಿ ಮಾಡುತ್ತಾರೆ. ಮತ್ತೆ ಕೆಲವರು ದೃಷ್ಟಾಂತ ದೋಷದಲ್ಲಿ. ಹೀಗೆ ಅಲ್ಲಿ ಗುಣದೋಷಗಳನ್ನೆನಿಸುವದರಲ್ಲಿ ಈಗ



ಅವಸರವಲ್ಲ ಎಂದು, ಶ್ರೀಮದಾಚಾರ್ಯರು ಎಲ್ಲವಾದಿಗಳಿಗೆ ಸಮ್ಮತವಾದ ಉಪಾಧಿದೋಷವನ್ನು ಹೇಳುತ್ತಾರೆ.

### टिप्पणीनाम् विशेषार्थानि

॥ केचित् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

ननु उत्तरत्र भगवत्पादैः मिथ्यात्व अनुमानस्य उपाधिरूप दोषः उच्यते तत् अयुक्तम्। उपाधि दोषत्व अभावात् इति चेत् न। उपाधेः दोषत्व अभावे सर्ववादिभिः तस्य हेत्वाभासादौ अन्तर्भावो न उच्येत्। अदोषस्य दोषे अन्तर्भाव कथन अयोगात्। अतः तस्य दोषत्वं सर्व संमतम् इति आशयेन आह– केचित् इति॥

ಮುಂದೆ ಭಗವತ್ಪಾದರು ಮಿಥ್ಯಾತ್ವ ಅನುಮಾನಕೆ ಉಪಾಧಿರೂಪ ದೋಷವನ್ನು ಹೇಳುತ್ತಾರೆ, ಅದು ಅಯುಕ್ತವಾಗಿದೆ. ಏಕೆಂದರೆ ಉಪಾಧಿ ದೋಷತ್ವವೆ ಇಲ್ಲ. ಅದು ಸರಿಯಲ್ಲ. ಒಂದು ವೇಳೆ ಉಪಾಧಿ ದೋಷವಿಲ್ಲ ಎನ್ನುವುದಾದರೆ, ಸರ್ವವಾದಿಗಳು ಅದನ್ನು ಹೇತ್ವಾಭಾಸಾದಿಗಳಲ್ಲಿ ಅಂತರ್ಭಾವವೆಂದು ಹೇಳುತ್ತಿರಲಿಲ್ಲ. ಯಾರು ಅದೋಷವಿದ್ದದನ್ನು ದೋಷಗಳಲ್ಲಿ ಅಂತರ್ಭಾವ ಮಾಡುವದಿಲ್ಲ ಹಾಗೂ ಅದು ಯೋಗ್ಯವೂ ಅಲ್ಲ. ಆದ್ದರಿಂದ ಉಪಾಧಿ ದೋಷವು ಸರ್ವವಾದಿ ಸಮ್ಮತವಾಗಿರುತ್ತದೆ ಎಂದಾಶಯದಿಂದ ಈ ಟೀಕಾವಾಕ್ಯ ವಿವರಿಸುತ್ತದೆ.

उपाधि दोषं उपाधिरूप दोषम्।

ಇಲ್ಲಿ ಉಪಾಧಿ ದೋಷವೆಂದರೆ, ಉಪಾಧಿರೂಪ ದೋಷ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

उपाधि व्यतिरेकेण साधनवति पक्षे साध्य अभाव सिद्धौ पक्ष अतिरिक्त एव व्यभिचारो वक्तव्य इति नियमात् पक्ष व्यभिचारस्य वक्तुं अशक्तत्वात्। केचित् उपाधि दोषं व्याप्यत्व असिद्धौ अन्तर्भावयन्ति।

ಉಪಾಧಿ ವ್ಯತಿರೇಕದಿಂದ ಅಂದರೆ ಇಲ್ಲದೆ, ಸಾಧನದಿಂದ ಕೂಡಿದ ಪಕ್ಷದಲ್ಲಿ ಸಾಧ್ಯ ಅಭಾವ ಸಿದ್ಧವಾದರೆ ಪಕ್ಷ ಅತಿರಿಕ್ತದಲ್ಲೆ ವ್ಯಭಿಚಾರ ಹೇಳಬೇಕಾದ ನಿಯಮವಿರುವದರಿಂದ, ಪಕ್ಷ ವ್ಯಭಿಚಾರವನ್ನು ಹೇಳಲು ಶಕ್ಯವಾಗುವದಿಲ್ಲ. ಆದ್ದರಿಂದ ಕೆಲವರು ಉಪಾಧಿ ದೋಷವನ್ನು ವ್ಯಾಪ್ಯತ್ವ ಅಸಿದ್ಧಿಯಲ್ಲಿ ಅಂತರ್ಭಾವ ಮಾಡುತ್ತಾರೆ.

साध्य अभाव साधकस्य उपाधि व्यतिरेकस्य प्राबल्येन हेतोः बाधित विषयत्वं भवति इति उपाधि दोषं अपरे कालात्ययापदिष्टतायाम् अन्तर्भावयन्ति।

ಸಾಧ್ಯ ಅಭಾವ ಸಾಧಕದ ಉಪಾಧಿ ವ್ಯತಿರೇಕದ ಪ್ರಾಬಲ್ಯದಿಂದ ಹೇತುವಿಗೆ ಬಾಧಿತ ವಿಷಯವಾಗುವದು ಎಂದು, ಮತ್ತೆ ಕೆಲವರು ಉಪಾಧಿದೋಷವನ್ನು ಕಾಲಾತ್ಯಯಾಪದಿಷ್ಟ ದೋಷದಲ್ಲಿ ಅಂತರ್ಭಾವ ಮಾಡುತ್ತಾರೆ.

उपाधि व्यतिरेकस्य पूर्व हेतुना समबलत्वात् उपाधिदोषं एके सत्प्रतिपक्षतायां अन्तर्भविष्यन्ति।

ಉಪಾಧಿ ವ್ಯತಿರೇಕವು ಪೂರ್ವ ಹೇತಿವಿನ ಸಮಬಲವಾದ್ದರಿಂದ, ಉಪಾಧಿ ದೋಷವನ್ನು ಕೆಲವರು ಸತ್ಪ್ರತಿಪಕ್ಷ ದೋಷದಲ್ಲಿ ಅಂತರ್ಭಾವ ಮಾಡುತ್ತಾರೆ.

**उपाधि व्यतिरेकेण पक्षे साध्य व्यतिरेक सिद्धौ पक्षस्यैव विपक्षत्वेन वैधर्म्य दृष्टान्तत्वात् तत्र व्यापक वैकल्पं अस्ति इति उपाधि वैधर्म्यं दृष्टान्त दोषे अन्तर्भावयन्ति इत्यर्थः।**

ಉಪಾಧಿ ವ್ಯತಿರೇಕದಿಂದ ಪಕ್ಷದಲ್ಲಿ ಸಾಧ್ಯ ವ್ಯತಿರೇಕ ಸಿದ್ಧವಾದಲ್ಲಿ ಪಕ್ಷವೇ ವಿಪಕ್ಷತ್ವ ಆಗುವದರಿಂದ ವೈಧರ್ಮ್ಯ ದೃಷ್ಟಾಂತವಾಗುವದರಿಂದ ಅಲ್ಲಿ ವ್ಯಾಪಕದ ವೈಕಲ್ಯ ಇರುತ್ತದೆ ಎಂದು ಉಪಾಧಿ ದೋಷವನ್ನು ವೈಧರ್ಮ್ಯ ದೃಷ್ಟಾಂತ ದೋಷದಲ್ಲಿ ಅಂತರ್ಭಾವ ಮಾಡುತ್ತಾರೆ ಎಂದರ್ಥ.

## ॥ असिद्धौ इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**व्याप्ति सम्बन्धः निरुपाधिकः इति उक्तत्वेन उपाधि सद्भावे निरुपाधिक साध्यसम्बन्धरूप व्याप्ति अभावेन तत् अभाव आपादकत्वात् उपाधेः व्याप्यत्व असिद्धौ अन्तर्भावः इत्यर्थः।**

ವ್ಯಾಪ್ತಿ ಸಂಬಂಧವು ನಿರುಪಾಧಿಕ ಎಂದ ಹೇಳಿದ್ದರಿಂದ ಉಪಾಧಿ ಇದ್ದಾಗ ನಿರುಪಾಧಿಕ ಸಾಧ್ಯ ಸಂಬಂಧ ರೂಪ ವ್ಯಾಪ್ತಿ ಇಲ್ಲವಾದ್ದರಿಂದ, ವ್ಯಾಪ್ತಿ ಅಭಾವ ಆಪಾದಕತ್ವವಾದ್ದರಿಂದ ಉಪಾಧಿಯನ್ನು ವ್ಯಾಪ್ಯತ್ವದ ಅಸಿದ್ಧಿಯಲ್ಲಿ ಅಂತರ್ಭಾವ ಮಾಡಲಾಗುತ್ತದೆ ಎಂದರ್ಥ.

**यथा आहुः– व्याप्यत्व असिद्धौ द्विविधः। एकः अव्याप्ति ग्राहक प्रमाणभावात्, अपरः तु उपाधि सद्भावात् इति।**

ಹೀಗೆ ಹೇಳಲಾಗುತ್ತದೆಃ ವ್ಯಾಪ್ಯತ್ವ ಅಸಿದ್ಧವು ಎರಡು ಪ್ರಕಾರದ್ದಾಗಿರುತ್ತದೆ. ಒಂದು ಅವ್ಯಾಪ್ತಿಯನ್ನು ಗ್ರಹಿಸುವ ಪ್ರಮಾಣ ಇರೋಣ ಹಾಗೂ ಎರಡನೆಯದು ಉಪಾಧಿಯ ಇರೋಣ ಎಂದು.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**उपाधि सद्भावे निरुपाधिक सम्बन्धरूप व्याप्तेः अभावात् उपाधिः व्याप्यत्व असिद्धौ अन्तर्भवति इत्यर्थः।**

ಉಪಾಧಿ ಇದ್ದಾಗ, ನಿರುಪಾಧಿಕ ಸಂಬಂಧರೂಪ ವ್ಯಾಪ್ತಿಯ ಅಭಾವತೆ ಉಂಟಾಗುವದರಿಂದ, ಉಪಾಧಿಯು ವ್ಯಾಪ್ಯತ್ವ ಅಸಿದ್ಧಿಯಲ್ಲಿ ಅಂತರ್ಭಾವವಾಗುತ್ತದೆ ಎಂದರ್ಥ.

## ॥ अनैकान्तिक इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**उपाधेः साधन अव्यापकत्वेन साधनवति पक्षे अभावात् साध्य व्यापकत्वेन व्यापकीभूतस्य निवृत्त्या स्वव्याप्यभूत साध्यस्यापि व्यावर्तनेन पक्षस्यैव विपक्षत्व प्राप्त्या तत्र वर्तमानस्य हेतोः अनैकान्त्यं इत्यर्थः।**



ಉಪಾಧಿಯ, ಸಾಧನ ಅವ್ಯಾಪಕತ್ವದಿಂದ ಸಾಧನದಿಂದ ಕೂಡಿದ ಪಕ್ಷದಲ್ಲಿ ಹೇತುವಿನ ಅಭಾವತೆ ಉಂಟಾಗಿ, ಉಪಾಧಿಯ ಸಾಧ್ಯ ವ್ಯಾಪಕತ್ವದಿಂದ ವ್ಯಾಪಕಭೂತದ ನಿವೃತ್ತಿಯಾಗಿ, ಸ್ವವ್ಯಾಪ್ಯಭೂತ ಸಾಧ್ಯದ ಕೂಡ ಪ್ರತ್ಯೇಕಿಸಲ್ಪಡುವದರಿಂದ ಪಕ್ಷವೇ ವಿಪಕ್ಷತ್ವವನ್ನು ಹೊಂದಿ ಅಲ್ಲಿ ಹೇತುವಿನ ಇರುವಿಕೆಯು ಅನೈಕಾಂತಿಕವನ್ನು ಉಂಟುಮಾಡುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**उपाधिरूप व्यापकनिवृत्त्या पक्षात् साध्यरूप व्याप्य निवृत्त्या पक्षस्यैव विपक्षत्वात् पक्षे वर्तमानस्य हेतोः अनैकान्तिकता इत्यर्थः।**

ಉಪಾಧಿರೂಪ ವ್ಯಾಪಕದ ನಿವೃತ್ತಿ ಉಂಟಾದಾಗ, ಪಕ್ಷದಿಂದ ವ್ಯಾಪ್ಯದ ನಿವೃತ್ತಿ ಹೊಂದುವದರಿಂದ ಪಕ್ಷವೇ ವಿಪಕ್ಷವಾಗುವದರಿಂದ, ಪಕ್ಷದಲ್ಲಿ ಹೇತುವಿನ ಇರುವಿಕೆಯು ಹೇತುವು ಅನೈಕಾಂತಿಕ ದೋಷಗ್ರಸ್ತವಾಗುತ್ತದೆ ಎಂದರ್ಥ.

## ॥ कालात्ययापदिष्टतायाम् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**उपाधिरूप व्यापक निवृत्तिलक्षण प्रबलप्रमाणेन पक्षे व्याप्यभूत साध्यस्यापि व्यावर्तितत्वेन साध्य अभावस्य निर्णीतत्वात् उपाधेः बाध अन्तरभाव इत्यर्थः।**

ಉಪಾಧಿರೂಪ ವ್ಯಾಪಕ ನಿವೃತ್ತಿಲಕ್ಷಣ ಪ್ರಭಲ ಪ್ರಮಾಣದಿಂದ ಪಕ್ಷದಲ್ಲಿ ವ್ಯಾಪ್ಯಭೂತ ಸಾಧ್ಯವು ಕೂಡ ನಿವೃತ್ತಿ ಹೊಂದುವದರಿಂದ, ಸಾಧ್ಯ ಅಭಾವದ ನಿರ್ಣಯಿಸಲ್ಪಟ್ಟದ್ದರಿಂದ ಉಪಾಧಿಯನ್ನು ಬಾಧದಲ್ಲಿ ಅಂತರ್ಭಾವ ಮಾಡಲಾಗುತ್ತದೆ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**उपाधिरूप व्यापक निवृत्तिलक्षण प्रबल प्रमाणेन पक्षे साध्य अभावस्य निर्णीतत्वात् इति भावः।**

ಉಪಾಧಿರೂಪ ವ್ಯಾಪಕ ನಿವೃತ್ತಿ ಲಕ್ಷಣ ಪ್ರಬಲ ಪ್ರಮಾಣದಿಂದ ಪಕ್ಷದಲ್ಲಿ ಸಾಧ್ಯದ ಅಭಾವತೆಯನ್ನು ನಿರ್ಣಯಿಸಲ್ಪಟ್ಟಿರುತ್ತದೆ ಎಂದರ್ಥ.

## ॥ सत्प्रतिपक्षतायाम् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**यागीय हिंसायां निशिद्धत्वरूप उपाधि व्यावृत्त्या अधर्मसाधनत्वस्य अपि निवर्तनेन, यागीयहिंसा धर्मसाधनं न भवति निशिद्धत्व शून्यत्वात् इत्येवं उपाधि व्यतिरेकस्य साध्य अभावसाधकत्व उपाधिः सत्प्रतिपक्षतायाम् अन्तर्भूत इत्यर्थः।**

ಯಜ್ಞದಲ್ಲಿಯ ಪಶುಹಿಂಸೆಯು ನಿಶಿದ್ಧತ್ವರೂಪ ಉಪಾಧಿಯನ್ನು ಬೇರ್ಪಡಿಸಲ್ಪಟ್ಟಾಗ ಅಧರ್ಮ ಸಾಧನತ್ವವು ಕೂಡ ಪ್ರತಿಕರಿಸಿಲ್ಪಟ್ಟದ್ದರಿಂದ , ಯಾಗೀಯ ಹಿಂಸಾ ಧರ್ಮಸಾಧನ ಆಗುವದಿಲ್ಲ, ನಿಶಿದ್ಧ ಶ್ಯೂನ್ಯವಾಗಿರುವದರಿಂದ ಎಂಬ ರೀತಿಯಾಗಿ, ಉಪಾಧಿ ವ್ಯತಿರೇಕದ ಸಾಧ್ಯ ಅಭಾವ ಸಾಧಕ ಉಪಾಧಿಯು ಸತ್ಪ್ರತಿಪಕ್ಷ ಎಂಬ ದೋಷದಲ್ಲಿ ಅಂತರ್ಭೂತ ಮಾಡಲಾಗುತ್ತದೆ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**उपाधि व्यतिरेकस्य पक्षे दूष्य अनुमान साध्य अभावसाधकत्वात् इति भावः।**

ಅಂದರೆ ಉಪಾಧಿ ವ್ಯತಿರೇಕದ ಪಕ್ಷದಲ್ಲಿ ದೂಷ್ಯ ಅನುಮಾನ ಸಾಧ್ಯದ ಅಭಾವಸಾಧಕವಗುತ್ತದೆ ಎಂಬ ಭಾವವಿರುತ್ತದೆ.

## ॥ दृष्टान्तदोष इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**व्याप्ति संवेदन स्थानं दृष्टान्त इति गीयत इति हि दृष्टान्त लक्षणम्। तथा च उपाधौ प्राप्ते हेतु साध्ययोः निरुपाधिक साध्य सम्बन्धरूप व्याप्ति अभावेन व्याप्ति संवेदनस्थानत्वरूप लक्षण अभावेन दृष्टान्तत्व अयोगात् आश्रय वैकल्यापादकत्वात् उपाधेः आश्रयवैकल्यरूप दृष्टान्त दोषे अन्तर्भाव इत्यर्थः।**

ವ್ಯಾಪ್ತಿ ಸಂವೇದನ ಸ್ಥಾನವು ದೃಷ್ಟಾಂತ ಎಂದು ದೃಷ್ಟಾಂತದ ಲಕ್ಷಣ ಎಂದು ಹೇಳಲಾಗುತ್ತದೆ. ಅದರಂತೆ ಉಪಾಧಿ ಪ್ರಾಪ್ತವಾದಾಗ ಹೇತು ಮತ್ತು ಸಾಧ್ಯಗಳಲ್ಲಿಯ ನಿರುಪಾಧಿಕ ಸಾಧ್ಯ ಸಂಬಂಧರೂಪ ವ್ಯಾಪ್ತಿಯ ಅಭಾವತೆಯಿಂದ, ವ್ಯಾಪ್ತಿ ಸಂವೇದನ ಸ್ಥಾನರೂಪ ಲಕ್ಷಣ ಇಲ್ಲದ್ಂತಾಗಿ ದೃಷ್ಟಾಂತವು ಅಯೋಗ್ಯವೆನಿಸುವದರಿಂದ ಆಶ್ರಯವೈಕಲ್ಯದ ಆಪಾದಕತ್ವ ಉಂಟಾಗಿ, ಉಪಾಧಿಯನ್ನು ಆಶ್ರಯವೈಕಲ್ಯರೂಪ ದೃಷ್ಟಾಂತ ದೋಷದಲ್ಲಿ ಅಂತರ್ಭಾವ ಮಾಡಲಾಗುತ್ತದೆ.

**यथा सिद्धसाधनता प्राप्तौ सन्दिग्ध साध्यधर्मवत्त्वरूप पक्ष लक्षण अपगमेन तस्याः आश्रय असिद्धौ अन्तर्भावः। यथा आहुः – आश्रयासिद्धता हेतोः सिद्धधर्मस्य साधने पक्षो हि संश्रयः तस्य स च साध्यान्वितो यत इति तद्वत् इति ज्ञातव्यम्।**

ಹೇಗೆ, ಸಿದ್ಧಸಾಧನತಾ ಪ್ರಾಪ್ತವಾದಾಗ ಸಂದಿಗ್ಧ ಸಾಧ್ಯಧರ್ಮವತ್ವರೂಪ ಪಕ್ಷ ಲಕ್ಷಣ ಕೂಡ ಹೊರಟುಹೋದ್ದರಿಂದ, ಅದನ್ನು ಆಶ್ರಯ ಅಸಿದ್ಧದೋಷದಲ್ಲಿ ಪರಿಗಣಿಸಲಾಗುತ್ತದೆ, ಅದರಂತೆ ಎಂದರ್ಥ. ಹೀಗೆ ಹೇಳಲಾಗಿದೆ: ಆಶ್ರಯ ಅಸಿದ್ಧತಾ ಹೇತುವಿಗೆ, ಸಿದ್ಧಧರ್ಮವನ್ನು ಸಾಧಿಸುವ ಪಕ್ಷವೇ ಆಶ್ರಯವಾಗಿರುತ್ತದೆ, ಅದು ಅದರ ಸಾಧ್ಯವಾಗಿರುತ್ತದೆ, ಅದರಂತೆ ಇಲ್ಲಿ ಕೂಡ ತಿಳಿಯಬೇಕು.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**साध्यादिमत एव दृष्टान्तत्ववत् उपाधि हीनस्यैव दृष्टान्तत्वात् साध्यवैकल्यादिवत् उपाधिः दृष्टान्तदोष इत्यर्थः।**

ಸಾಧ್ಯಾದಿಗಳಿಂದ ಕೂಡಿದ್ದೇ ದೃಷ್ಟಾಂತವೆನಿಸುವಂತೆ, ಉಪಾಧಿ ಹೀನವೇ ದೃಷ್ಟಾಂತವಾಗುತ್ತದೆ, ಹಾಗೆ ಸಾಧ್ಯವೈಕಲ್ಯಾದಿಗಳಂತೆ ಉಪಾಧಿಯೂ ದೃಷ್ಟಾಂತ ದೋಷವೆನಿಸುತ್ತದೆ ಎಂದರ್ಥ.

## ॥ गुणदोष चिन्तायां इति ॥



ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**तत्र सत्प्रतिपक्ष अन्तर्भाव पक्ष एव श्रेयान्। यथा उक्तं भगवत्पादैः –प्रतिज्ञायाः समबलप्रमाण विरोध एव सप्रतिसाधनः। स एव उपाधिदोषोऽपि इति।**

ಅಲ್ಲಿ ಉಪಾಧಿಯನ್ನು ಸತ್-ಪ್ರತಿಪಕ್ಷ ದೋಷದಲ್ಲಿ ಅಂತರ್ಭಾವ ಮಾಡುವ ಪಕ್ಷವೇ ಶ್ರೇಷ್ಠವಾದದ್ದು. ಭಗವತ್ಪಾದರು ಹೀಗೆ ಹೇಳಿರುತ್ತಾರೆ: "ಪ್ರತಿಜ್ಞೆಯ ಸಮಬಲಪ್ರಮಾಣ ವಿರೋಧವೇ ಸಪ್ರತಿಸಾಧನವಿನಿಸುವದು. ಅದೇ ಉಪಾಧಿ ದೋಷಕೂಡ ಆಗುತ್ತದೆ."

**पक्षादि विभागात् पूर्वं व्याप्तिग्रहण समये प्रवृत्तस्य उपाधेः व्यभिचार उन्नयकतया अनैकान्त्ये अन्तर्भाव पक्षः अपि युक्तः।**

ಪಕ್ಷಾದಿ ವಿಭಾಗವಾಗುವಕ್ಕಿಂತ ಮುಂಚೆ ವ್ಯಾಪ್ತಿಗ್ರಹಣದ ಸಮಯದಲ್ಲಿ ಪ್ರವೃತ್ತವಾದ ಉಪಾಧಿಯನ್ನು ವ್ಯಭಿಚಾರ ತರ್ಕ ಅಥವ ಊಹೆಪೂರ್ವಕ ಅನೈಕಾಂತ್ಯದಲ್ಲಿ ಅಂತರ್ಭಾವ ಪಕ್ಷವು ಕೂಡ ಯುಕ್ತವಾಗಿದೆ.

**यथा उक्तं अनुव्याख्याने – साध्यव्यापक वैलोम्यम् अव्याप्तिः साधनस्य च इति। व्याप्यत्व असिद्धि अन्तर्भाव पक्षः तु अयुक्तः। अव्यभिचारित साध्य सम्बन्धस्यैव व्याप्तिलक्षणत्वेन निरुपाधिक साध्य सम्बन्धस्य व्याप्तिलक्षणत्व अभावात्।**

ಅನುವ್ಯಾಖ್ಯಾನದಲ್ಲಿ ಹೀಗೆ ಹೇಳಲಾಗಿದೆ: ಸಾಧ್ಯವ್ಯಾಪಕತ್ವ ಇಲ್ಲದೆ ಇರೊಣ ಸಾಧನದ ಅವ್ಯಾಪ್ತಿ ಎನಿಸುವದು. ವ್ಯಾಪ್ಯತ್ವ ಅಸಿದ್ಧಿಯಲ್ಲಿ ಅಂತರ್ಭಾವ ಮಾಡುವ ಪಕ್ಷ ಅಯುಕ್ತವಾಗಿದೆ. ಏಕೆಂದರೆ, ಅವ್ಯಭಿಚರಿತ ಸಾಧ್ಯ ಸಂಬಂಧವೇ ವ್ಯಾಪ್ತಿಲಕ್ಷಣವೆನಿಸುವದರಿಂದ, ನಿರುಪಾಧಿಕ ಸಾಧ್ಯ ಸಂಬಂಧಕ್ಕೆ ವ್ಯಾಪ್ತಿಲಕ್ಷಣತ್ವ ವನ್ನು ಹೇಳಲಾಗುವದಿಲ್ಲ.

**तथा हि – उपाधिः नाम साध्यव्यापकः। व्यापकत्वं नाम व्याप्ति निरूपकत्वम्। एवं च व्याप्ति ज्ञाने तत् घटित उपाधि ज्ञानं तत् ज्ञाने निरुपाधिक साध्यसम्बन्धरूप व्याप्ति ज्ञानम् अभावज्ञाने प्रतियोगिज्ञानस्य कारणत्वात् इति अन्योन्याश्रयापत्तेः।**

ಅದನ್ನು ಹೀಗೆ ವಿವರಿಸಬಹುದು: ಉಪಾಧಿಯು ಸಾಧ್ಯವ್ಯಾಪಕವಾಗಿರುತ್ತದೆ. ವ್ಯಾಪಕತ್ವವೆಂದರೆ ವ್ಯಾಪ್ತಿಯನ್ನು ನಿರೂಪಿಸುವದು ಎಂದರ್ಥ. ಈ ರೀತಿಯಾಗಿ, ವ್ಯಾಪ್ತಿ ಜ್ಞಾನವಾದಾಗ ಅದರಿಂದ ಆದ ಉಪಾಧಿ ಜ್ಞಾನ, ಉಪಾಧಿ ಜ್ಞಾನದಿಂದ ನಿರುಪಾಧಿಕ ಸಾಧ್ಯ ಸಂಬಂಧರೂಪ ವ್ಯಾಪ್ತಿ ಜ್ಞಾನ, ಹೀಗೆ ಅಭಾವಜ್ಞಾನಕ್ಕೆ ಪ್ರತಿಯೋಗಿ ಜ್ಞಾನದ ಕಾರಣವಿರುವದರಿಂದ ಅನ್ಯೋನ್ಯಾಶ್ರಯ ದೋಷ ಉಂಟಾಗುತ್ತದೆ.

**दृष्टान्तदोष अन्तर्भाव पक्षोऽपि युक्तः। आश्रय असिद्धिवत् आश्रयवैकल्यस्य दृष्टान्तदोषत्व अभावेन तत्र उपाधेः अन्तर्भाव कल्पन अयोगात्। इत्यादि प्रकारेण तत् पक्षाणां गुणदोषचिन्तायाम् इत्यर्थः।**

ಇನ್ನು ದೃಷ್ಟಾಂತ ದೋಷ ಅಂತರ್ಭಾವ ಪಕ್ಷ ಕೂಡ ಯುಕ್ತವಾಗಿರುತ್ತದೆ. ಆಶ್ರಯ ಅಸಿದ್ಧಿಯಂತೆ, ಆಶ್ರಯವೈಕಲ್ಯಕ್ಕೆ ದೃಷ್ಟಾಂತದೋಷವು ಇರುವದಿಲ್ಲ, ಆದರಿಂದ ಅಲ್ಲಿ ಉಪಾಧಿಯ ಅಂತರ್ಭಾವ ಕಲ್ಪನ ಯೋಗ್ಯವೆನಿಸುವದಿಲ್ಲ. ಈ ಪ್ರಕಾರವಾಗಿ ಉಪಾಧಿ

ಯಾವುದರಲ್ಲಿ ಅಂತರ್ಭಾವ ಮಾಡುವ ಪಕ್ಷಗಳಲ್ಲಿಯ ಗುಣದೋಷಗಳನ್ನು ಅಳೆಯುಅವದರಲ್ಲಿ ಎಂದರ್ಥ.

**॥ न अयं अवसर इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**इत्येवं अन्तर्भाव कथन अन्यथा अनुपपत्त्या उपाधेः दोषातायाः सर्ववादिनां अवसितौ संमतौ सत्यां इत्यर्थः। क्वचित् सर्वावसितम् इति पाठः। सर्वेषां वादिनां दोषत्वेन सम्मतं इत्यर्थो द्रष्टव्यः इत्यपि आहुः।**

ಈ ರೀತಿಯಾಗಿ ಉಪಾಧಿಯ ಅಂತರ್ಭಾವ ಕಥನವು ಅನ್ಯಥಾ ಯುಕ್ತಿಹೀನವಾಗಿದ್ದರಿಂದ, ಉಪಾಧಿಯ ದೋಷಗಳಲ್ಲಿ ಸರ್ವವಾದಿಗಳಿಗೆ ಸಮ್ಮತವಾದ ಸತ್ಯವಾದ ಎಂದರ್ಥ. ಕೆಲವರಂತೆ, सर्वावसितम् ಎಂಬ ಪಾಠಕೂಡ ಇರುತ್ತದೆ. ಅಂದರೆ, ಎಲ್ಲ ವಾದಿಗಳಿಗೆ ದೋಷತ್ವದಿಂದ ಸಮ್ಮತವಾದ ಉಪಾಧಿ ದೋಷ ಎಂದರ್ಥ ಕೂಡ ತಿಳಿಯಬೇಕು ಎಂದು ಹೇಳುತ್ತಾರೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**उपाधेः दोषत्वे सर्ववादि संमतौ सत्यां इत्यर्थः। क्वचित् सर्वावसितम् इति पाठः, तदा सर्वावसितत्वं उपाधिदोष विशेषणम्।**

ಉಪಾಧಿ ದೋಷತ್ವದಲ್ಲಿ ಸರ್ವವಾದಿ ಸಮ್ಮತ ಹಾಗೂ ಸತ್ಯವಾದ ಎಂದರ್ಥ. ಕೆಲವರಂತೆ सर्वावसितम् ಎಂಬ ಪಾಠ ಕೂಡ ಇರುತ್ತದೆ; ಆಗ ಅದು उपाधिदोष ಪದಕ್ಕೆ ವಿಶೇಷಣವಾಗುತ್ತದೆ.

प्रपञ्चमिथ्यात्वानुमानखण्डनम्

## प्रमाण विरुद्धत्वं उपाधिः।

**ಮಿಥ್ಯಾತ್ವ ಅನುಮಾನಕ್ಕೆ ಪ್ರಮಾಣ ವಿರೋಧವು ಉಪಾಧಿ ದೋಷವಾಗಿರುತ್ತದೆ.**

### श्रीपद्मनाभतीर्थीयटीका

**शुक्तिरजतवत् जगन्मिथ्यात्वं न दृश्यत्व हेतुः साधयति प्रमाण विरुद्धत्वेन सोपाधिकत्वात्, न रजतं इत्यादि प्रमाण विरुद्धत्वं प्रयुक्तं मिथ्यात्वं शुक्तिरजतादौ न दृश्यत्व प्रयुक्तम्। अतः प्रत्यक्षादि प्रमाण विरुद्धं निवर्तमानं जगतः सकाशात् मिथ्यात्वं निवर्तयति इत्याह- प्रमाणविरुद्धत्वं उपाधिः इति॥**



ಶುಕ್ತಿರಜತದಂತೆ ಜಗತ್ ಮಿಥ್ಯಾ ಎಂದು ದೃಶ್ಯತ್ವ ಹೇತುವು ಸಾಧಿಸಲು ಸಾಧ್ಯವಿಲ್ಲ, ಪ್ರಮಾಣ ವಿರುದ್ಧತ್ವದಿಂದ ಉಪಾಧಿಯಿಂದ ಕೂಡಿರುತ್ತದೆ. ಇದು ರಜತವಲ್ಲ ಎಂದು ಮುಂತಾಗಿ, ಪ್ರಮಾಣ ವಿರುದ್ಧತ್ವ ಪ್ರಯುಕ್ತ ಶುಕ್ತಿರಜತಾದಿಗಳಿಗೆ ಮಿಥಾತ್ವ ಉಂಟಾಗುತ್ತದೆ ವಿನಹಾ ದೃಶ್ಯತ್ವ ಹೇತು ಪ್ರಯುಕ್ತವಲ್ಲ. ಆದ್ದರಿಂದ, ಪ್ರತ್ಯಕ್ಷಾದಿ ಪ್ರಮಾಣ ವಿರುದ್ಧವಾಗಿ ನಿವರ್ತನ ಹೊಂದುವ ಜಗತ್ತು ಸಕಾಶದಲ್ಲಿ ಮಿಥ್ಯಾತ್ವವನ್ನು ನಿವರ್ತಿಸುತ್ತದೆ. ಇದನ್ನೆ ಶ್ರೀಮದಾಚಾರ್ಯರ ಮೂಲವಾಕ್ಯ ಸ್ಪಷ್ಟಪಡಿಸುತ್ತದೆ.

### टीका

**ननु अत्र बाध्यत्वं साध्यम्। तदेव च प्रमाणविरुद्धत्वम्। न हि स्वस्मिन् स्वयं उपाधिः। व्याप्यव्यापकभावस्य भिन्नाश्रयत्वात् इति।**
**मैवम्। अन्यथा प्रतिपत्तिपूर्वकं तदुन्मूलनेन सम्यग् बोधो बाधः। प्रमाण विरोधस्तु विपरीतप्रमाण विषयत्वमात्रं इति भेदात्।**

ಇಲ್ಲಿ ಬಾಧ್ಯತ್ವವನ್ನು ಸಾಧಿಸಲಾಗುವದಿಲ್ಲ. ಮತ್ತು ಅದೇ ಪ್ರಮಾಣವಿರುದ್ಧತ್ವ ಆಗುತ್ತದೆ. ಬಾಧವು ಸ್ವತಃ ಉಪಾಧಿಯಾಗಲು ಸಾಧ್ಯವಿಲ್ಲ. ಏಕೆಂದರೆ ಉಪಾಧಿ ವ್ಯಾಪ್ಯ ವ್ಯಾಪಕ ಭಾವದ ಭಿನ್ನಾಶ್ರಯವನ್ನು ಹೊಂದಿರುತ್ತದೆ.
ಅದು ಹಾಗಿರುವದಿಲ್ಲ. ಸಾಧ್ಯ ಮತ್ತು ಉಪಾಧಿಗಳಲ್ಲಿ ಅಭೇದವಿರುವದಿಲ್ಲ. ಹಾಗೂ ಬಾಧ ಮತ್ತು ಪರಮಾಣ ವಿರುದ್ಧತ್ವಗಳಲ್ಲಿ ಕೂಡ ಅಭೇದವಾಗಲು ಸಾಧ್ಯವಿಲ್ಲ. ಅನ್ಯಥಾ ತಿಳುವಳಿಕೆಪೂರ್ವಕ ಅದನ್ನು ಮೂಲತಃ ಉನ್ಮೂಲನ ಅಂದರೆ ಕಿತ್ತುವಗೆಯುವದರಿಂದ ಸಮ್ಯಗ್ ಬೋಧನೆಯು ಬಾಧವೆನಿಸಿದರೆ, ಪ್ರಮಾಣ ವಿರೋಧವು ವಿಪರೀತಪ್ರಮಾಣದ ವಿಷಯಮಾತ್ರವಾಗಿರುತ್ತದೆ. ಹೀಗೆ ಅವುಗಳಲ್ಲಿ ಭೇದವಿರುತ್ತದೆ.

### टिप्पणीनाम् विशेषार्थानि

**॥ ननु इति ॥**

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**शिष्यः शङ्कते– ननु इति॥**

ಇಲ್ಲಿ ಈ ಟೀಕಾ ವಾಕ್ಯ ಶಿಷ್ಯರ ಶಂಕೆಯನ್ನು ಪ್ರತಿಪಾದಿಸುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**तटस्थः शङ्कते– ननु इति॥**

ಈ ಟೀಕಾ ವಾಕ್ಯ ತಟಸ್ಥರ ಶಂಕೆಯನ್ನು ಪ್ರತಿಪಾದಿಸುತ್ತದೆ.

**एतेन परमते ज्ञान निवृत्यत्वस्य बाध्यत्वात् प्रमाणविरुद्धत्वं इत्युक्तं इति परास्तम्।**

ಇದರಿಂದ ಪರಮತದಲ್ಲಿಯ ಜ್ಞಾನ ನಿವೃತ್ತಿತ್ವವು ಬಾಧಕವಾಗುವದರಿಂದ ಪ್ರಮಾಣ ವಿರುದ್ಧತ್ವ ಉಂಟಾಗುತ್ತದೆ ಎಂದು ಹೇಳಿದ್ದನ್ನು ನಿರಾಕರಿಸಲಾಯಿತು

## ॥ प्रमाणविरुद्धत्वम् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**तद्रूप मिथ्यात्वं इत्यर्थः।**

ಅಂದರೆ, ಅದರ ರೂಪ ಮಿಥ್ಯಾತ್ವ ಎಂದರ್ಥ.

## ॥ भिन्नाश्रयत्वात् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**भिन्नाधिकरण निष्ठत्वेन एकस्मिन एव अधिकरणे तत् अयोगात इत्यर्थः।**

ಉಪಾಧಿಯು ಭಿನ್ನಧಿಕರಣ ನಿಷ್ಠವಾಗಿರುವದರಿಂದ ಅದಕ್ಕೆ ಒಂದೇ ಅಧಿಕರಣ ದಲ್ಲಿ ಹೇಳುವದು ಅಯೋಗವಾಗಿರುತ್ತದೆ ಎಂದರ್ಥ.

## ॥ तदुन्मूलनेन इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**तदुन्मूलनेन अन्यथा प्रतिपत्ति उन्मूलनेन ।**

तदुन्मूलनेन ಅಂದರೆ, ಅನ್ಯಥಾ ತಿಳುವಳಿಕೆಯ ಮೂಲ ಸಹಿತ ಕಿತ್ತುಹಾಕುವದು ಎಂದರ್ಥ.

## ॥ अन्यथा इति ॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**साध्य उपाध्योः अभेदो न स्वरीत्या नापि परीत्या इति आशयवान्, स्वमते तयोः भेद उत्पादनेन एव परमतेऽपि तयोः भेदसिद्धिं मन्वानो विज्ञातस्य अन्यथा सम्यग्विज्ञानं हि एव तन्मतं इति अनुव्याख्यानं मनसि निधाय बाध्यत्वं तावत् वक्ति – अन्यथा इति॥**

ಸಾಧ್ಯ ಮತ್ತು ಉಪಾಧಿಗಳಲ್ಲಿ ಅಭೇದವು ನಮ್ಮರೀತಿಯಲ್ಲಿಯೂ ಹಾಗೂ ಪರರೀತಿಯಲ್ಲಿಯೂ ಸರಿಯಲ್ಲ ಎಂದು ಆಶಯಿಸಿ, ನಮ್ಮ ಮತದಲ್ಲಿ ಅವುಗಳಲ್ಲಿಯ ಭೇದವನ್ನು ತೋರಿಸುವದರಿಂದಲೇ ಪರಮತದಲ್ಲಿ ಅವುಗಳಲ್ಲಿಯ ಭೇದ ಸಿದ್ಧಿಸುವದು ಎಂದು ಮನ್ನಿಸಿ, ತಿಳಿದಿದ್ದನ್ನು ಅನ್ಯಥಾ ಸಮ್ಯಗ್ವಾಗಿ ತಿಳಿಯುವದೆ ನಮ್ಮ ಮತವಾಗಿದೆ ಎಂದು ಅನುವ್ಯಾಖ್ಯಾನದಲ್ಲಿ ಹೇಳಿದ ವಿಷಯವನ್ನು ಮನಸ್ಸಿನಲ್ಲಿಟ್ಟುಕೊಂಡು, ಬಾಧ್ಯತ್ವದ ಲಕ್ಷಣವನ್ನು ಹೇಳುತ್ತಾರೆ.

**अत्र तद्विषयत्वं बाध्यत्वं इति शेषः।**

ಇಲ್ಲಿ तद्विषयत्वं बाध्यत्वं ಎಂಬ ಪದಗಳನ್ನು ಸೇರಿಸಿ ಅರ್ಥಮಾಡಬೇಕು.



**बाध लक्षण दलंकृत्यः**

**सम्यग् बोधो बाधः इत्युक्ते सर्वोऽपि सम्यग्बोधो बाधः प्रसज्येत। न च तथा व्यवहारः। तत् निवृत्त्यर्थं अन्यथा प्रतिपत्तिपूर्वकं इत्युक्तं।**

ಇನ್ನು ಕೇವಲ सम्यग् बोधो बाधः ಅಂದರೆ, ಸಮ್ಯಗ್ ಬೋಧನೆಯು ಬಾಧ ಎಂದಿದ್ದರೆ, ಎಲ್ಲ ಸಮ್ಯಗ್ ಬೋಧನೆಯನ್ನು ಬಾಧ ಎನ್ನುವ ಪ್ರಸಂಗ ಒದಗುವದು. ಮತ್ತು ಹಾಗೆ ವ್ಯವಹಾರ ಇರುವದಿಲ್ಲ. ಅದರ ನಿವೃತ್ತಿಗಾಗಿಯೆ ಇಲ್ಲಿ अन्यथा प्रतिपत्तिपूर्वकं ಅಂದರೆ ಅನ್ಯಥಾ ತಿಳುವಳಿಕೆ ಪೂರ್ವಕ, ಎಂದು ಹೇಳಲಾಗಿದೆ.

**अन्यथा प्रतिपत्तिपूर्वकं बोध इत्येव उक्ते, धारावाहिकत्रये रजतत्वेन अवगतस्य शुक्तिशकलस्य पुनः नागवंगत्वादि ज्ञाने प्रसङ्गः। तत् निरासाय सम्यग् इत्युक्तं।**

ಇನ್ನು, अन्यथा प्रतिपत्तिपूर्वकं बोध ಎಂದಿಷ್ಟೆ ಹೇಳಿದ್ದರೆ, ಸಂತತವಾಗಿ ಮೂರರಲ್ಲಿ ರಜತತ್ವದಿಂದ ತಿಳಿಯಲ್ಪಟ್ಟ ಶುಕ್ತಿಶಕಲದ ಪುನಃ ನಾಂಗವಂಗತ್ವಾದಿ ಜ್ಞಾನ ಉಂಟಾಗುವ ಪ್ರಸಂಗ ಒದಗುವದು. ಅದನ್ನು ನಿರಾಕರಿಸಲು ಸಮ್ಯಗ್ ಎಂದು ಹೇಳಲಾಗಿದೆ.

**अन्यथात्वं स्वरूपापेक्षया विवक्षितम्। तेन घटस्यैव पटाद्यपेक्षया अन्यथा घटत्वेन विज्ञातस्य पुनः घटत्वेन विज्ञाने न अतिप्रसङ्गः। तावत् इत्युक्ते रजतत्त्वेन अवगतस्य शुक्तिशकलस्य शुक्लत्वादि ज्ञाने, तथा पुरुषान्तर सम्बन्धिनि तस्यैव वा पुरुषस्य कालान्तरभाविन्या जान सिद्धे सम्यग् ज्ञाने प्रसङ्गः। तत् निरासाय तदुन्मूलनेन इत्युक्तम्। तदुन्मूलकत्वं च अत्र तत् जनित प्रवृत्त्यादि परम्परा विघटकत्वम्। तच्च न उदाहृत ज्ञानस्य अस्ति इति न अतिप्रसङ्गः।**

ಇಲ್ಲಿ ಅನ್ಯಥಾತ್ವವು ಸ್ವರೂಪ ಅಪೇಕ್ಷೆ ಮೇರೆಗೆ ವಿವಕ್ಷಿತವಾಗಿರುತ್ತದೆ. ಇದರಿಂದ ಘಟವನ್ನೆ ಪಟಾದಿ ಅಪೆಕ್ಷೆ ಮೇರೆಗೆ ಅನ್ಯಥಾ ಎಂದು ಘಟತ್ವದಿಂದ ತಿಳಿದದ್ದು ಪುನಃ ಘಟತ್ವದಿಂದ ತಿಳಿಯಲ್ಪಡಲು, ಅದು ಅತಿಪ್ರಸಂಗವಾಗುವದಿಲ್ಲ.

ಇನ್ನು तावत् ಎಂದಿದ್ದರೆ, ರಜತತ್ವದಿಂದ ತಿಳಿಯಲ್ಪಟ್ಟ ಶುಕ್ತಿಶಕಲದ ಶುಕ್ಲತ್ವಾದಿ ಜ್ಞಾನದಲ್ಲಿ, ಹಾಗೆಯೆ ಅದರ ಪುರುಷಾಂತರ ಸಂಬಂಧವಾದ ಪುರುಷನಂತೆ ಅಥವಾ ಪರುಷನ ಕಾಲಾಂತರ ಭಾವ ಜ್ಞಾನ ಸಿದ್ಧಿಯಂತೆ ಸಮ್ಯಗ್ ಜ್ಞಾನದ ಪ್ರಸಂಗ ಒದಗುವದು. ಅದನ್ನು ನಿವಾರಿಸಲು तदुन्मूलनेन ಎಂದು ಹೇಳಲಾಗಿದೆ.

ಮತ್ತು ಅಲ್ಲಿ तदुन्मूलकत्वं ಅಂದರೆ ಅನ್ಯಥಾ ಪ್ರತಿಪತ್ತಿ ಮೂಲತಃ ಕಿತ್ತುಹಾಕುವದರಿಂದ ಅದರಿಂದ ಹುಟ್ಟಿತ ಪ್ರವೃತ್ತ್ಯಾದಿ ಪರಂಪರಯನ್ನು ನಾಶಮಾಡುತ್ತದೆ. ಮತ್ತು ಅದು ಉದಾಹೃತ ಜ್ಞಾನಕ್ಕೆ ಇರುವದಿಲ್ಲ ಆದ್ದರಿಂದ ಅತಿಪ್ರಸಂಗ ಉಂಟಾಗುವದಿಲ್ಲ.

**अनेन एव परमते आरोपपूर्वक स्व–अत्यन्ताभाव प्रतिनिषेध्यत्वेन विषयत्वं बाध्यत्वम्। प्रमाण विरुद्धत्वं च स्व–अत्यन्ताभाव प्रमा निषेध्यत्वेन विषयत्वमात्रं इति साध्य उपाध्योः भेदः सूचितो भवति।**

ಇದರಿಂದಲೇ ಪರಮತದಲ್ಲಿ ಆರೋಪಪೂರ್ವಕ ಸ್ವಾತ್ಯಂತ ಅಭಾವ ಪ್ರತಿನಿಷೇಧತ್ವದ ವಿಷಯವು ಬಾಧವೆನಿಸುತ್ತದೆ. ಮತ್ತು ಪ್ರಮಾಣ ವಿರುದ್ಧತ್ವವು ಸ್ವ-ಅತ್ಯಂತ ಅಭಾವ ಪ್ರಮಾ

ನಿಷೇಧದ ವಿಷಯಮಾತ್ರವಾಗಿರುತ್ತದೆ, ಎಂದು ಸಾಧ್ಯ ಮತ್ತು ಉಪಾಧಿಗಳಲ್ಲಿಯ ಭೇದವನ್ನು ಸೂಚಿಸಿದಂತಾಯಿತು.

**यद्वा सर्वस्मिन् प्रतिपन्न उपाधौ त्रैकालिक निषेधप्रतियोगित्वं वा ज्ञानत्वेन ज्ञाननिवर्त्यत्वं वा बाध्यत्वम्। विपरीत प्रमाणविषयत्वं तु प्रमाणविरुद्धत्वम्।**

**परमते साध्य उपाध्योः भेदस्य स्पष्टत्वात् तम् अनुपपाद्यैव स्वरीत्या तं उपपादयति– अन्यथा इति॥**

ಅಥವಾ ಎಲ್ಲದರಲ್ಲಿ ಹೊಂದಲ್ಪಟ್ಟ ಉಪಾಧಿಯಲ್ಲಿ ನಿಷೇಧಪ್ರತಿಯೋಗಿತ್ವವು ಅಥವಾ ಜ್ಞಾನತ್ವದಿಂದ ಜ್ಞಾನ ನಿವರ್ತಿಸುವದು ಬಾಧವೆನಿಸುವದು. ವಿಪರೀತ ಪ್ರಮಾಣ ವಿಷಯತ್ವವು ಪ್ರಮಾಣ ವಿರದ್ಧ ವೆನಿಸುವದು.

ಪರಮತದಲ್ಲಿ ಸಾಧ್ಯ ಉಪಾಧಿಗಳಲ್ಲಿಯ ಭೇದವು ಸ್ಪಷ್ಟವಾಗಿರುವದರಿಂದ, ಅದನ್ನು ಹಾಗೆ ಹೇಳದೆ ಇಲ್ಲಿ ನಮ್ಮ ರೀತಿಯಲ್ಲಿ ಟೀಕಾಕೃತ್ಪಾದರು ಪ್ರತಿಪಾದಿಸಿದ್ದಾರೆ.

## ॥ बाध इति ॥

<u>ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:</u>

**तत् विषयत्वं बाध्यत्वं इति शेषः।**

ಅದರ ವಿಷಯತ್ವವು ಬಾಧ್ಯತ್ವ ಎಂಬದುದನ್ನು ಬಾಧ ಪದದ ನಂತರ ಸೇರಿಸಬೇಕು.

**<u>बाध लक्षण दलंकृत्यः</u>**

**अत्र सम्यग्बोधो बाध इत्युक्ते घटोयं इत्यादि समस्त यथार्थ ज्ञानानां अपि बाधत्व प्रसङ्गः। अतः तत्र अतिव्याप्ति परिहाराय अन्यथा प्रतिपत्तिपूर्वकं इत्युक्तम्।**

ಇಲ್ಲಿ, सम्यग्बोधो बाध ಅಂದರೆ, ಸಮ್ಯಗ್ ಬೋಧನೆಯು ಬಾಧ ಎಂದಿಷ್ಟೆ ಅಂದಿದ್ದರೆ, "ಇದು ಘಟ" ಎಂದು ಮುಂತಾದ ಸಮಸ್ತ ಯಥಾರ್ಥ ಜ್ಞಾನಗಳಿಗು ಕೂಡ ಬಾಧಕತ್ವ ಉಂಟಾಗುತ್ತಿತ್ತು. ಆದ್ದರಿಂದ ಅಲ್ಲಿಯ ಅತಿವ್ಯಾಪ್ತಿಯನ್ನು ಪರಿಹರಿಸಲು अन्यथा प्रतिपत्तिपूर्वकं ಅಂದರೆ ಅನ್ಯಥಾ ತಿಳುವಳಿಕೆಪೂರ್ವಕ ಎಂದು ಹೇಳಲಾಗಿದೆ.

**तावत् इत्युक्ते शुक्तिकायां रजतज्ञानानन्तरं तस्यां एव इदं द्रव्यं इति जायमानस्य सम्यग्बोधस्यापि बाधत्व प्रसङ्गः। तदर्थं तदुन्मूलनेन इत्युक्तम्।**

ಇನ್ನು, ತಾವತ್ ಎಂದು ಹೇಳಿದ್ದರೆ, ಶುಕ್ತಿಕಾಯದಲ್ಲಿ ರಜತ ಜ್ಞಾನದನಂತರ ಅದೆ ಇದು ದ್ರವ್ಯ ಎಂಬ ಹುಟ್ಟುವ ಸಮ್ಯಗ್ ಬೊಧನೆಯಗೂ ಕೂಡ ಬಾಧತ್ವ ಪ್ರಸಂಗ ಉಂಟಾಗುತ್ತದೆ. ಅದಕ್ಕಾಗಿಯೆ तदुन्मूलनेन ಅಂದರೆ ಅದರ ಬುಡಸಮೇತ ಕಿತ್ತುಹಾಕುವದರಿಂದ ಎಂದು ಹೇಳಲಾಗಿದೆ.

**यद्यपि उत्तरज्ञानेन पूर्वज्ञानस्य उन्मूलनं भवति एव। तथाऽपि अत्र अन्यथा प्रतिपत्तेः उन्मूलनं नाम तद्विषय असत्व ज्ञापनं वा तस्याः भ्रान्तित्व ज्ञापनं वा विवक्षितम्। तथा च शुक्तौ रजतभ्रमा नन्तरं जायमानेन इदं द्रव्यं इति ज्ञानेन पूर्वं जातायाः अन्यथा प्रतिपत्तेः निरुक्तं उन्मूलनं न भवति इति न तस्य बाधत्व प्रसङ्गः। सम्यग् पद अभावे वल्मीके स्थाणुत्व भ्रमानन्तरं न अयं स्थाणुः किन्तु पुरुष इति भ्रमान्तरमपि बाधः स्यात् अत उक्तं सम्यग् इति।**



ಉತ್ತರ ಜ್ಞಾನದಿಂದ ಪೂರ್ವಜ್ಞಾನದ ಉನ್ಮೂಲನ ಅಂದರೆ ಮೂಲತಃ ಕಿತ್ತುಹಾಕುವಿಕೆ ಆಗೆ ಆಗುತ್ತದೆ. ಹಾಗಿದ್ದರೂ ಅಲ್ಲಿ ಅನ್ಯಥಾ ತಿಳುವಳಿಕೆಯ ಉನ್ಮೂಲನ ಎಂದರೆ ಅದರ ವಿಷಯದ ಅಸತ್ಯದ ಜ್ಞಾಪನೆ ಅಥವಾ ಅದರ ಭ್ರಾಂತಿತ್ವದ ಜ್ಞಾಪನವು ವಿವಕ್ಷಿತವಾಗಿರುತ್ತದೆ. ಮತ್ತು ಹಾಗೆಯೆ ಶುಕ್ತಿಯಲ್ಲಿ ರಜತದ ಭ್ರಮನಂತರ ಹುಟ್ಟಿದ "ಇದು ದ್ರವ್ಯ" ಎಂಬ ಜ್ಞಾನದ ಪೂರ್ವದಲ್ಲಿ ಹುಟ್ಟಿದ ಅನ್ಯಥಾ ತಿಳುವಳಿಕೆಯ ಪೂರ್ಣವಾಗಿ ಉನ್ಮೂಲನವಾಗಿರುವದಿಲ್ಲ ಎಂದು ಅದರ ಬಾಧತ್ವ ಉಂಟಾಗದಿರುವ ಪ್ರಸಂಗ ಉಂಟಾಗುವದು. ಇಲ್ಲಿ सम्यग् ಪದ ಇಲ್ಲದಾಗ, ಚಲಿಸದಿರುವ ದೇಹದಲ್ಲಿ ಭ್ರಮನಂತರ ಇದು ಸ್ಥಿರವಲ್ಲ ಪರಂತು ಪುರುಷನಾಗಿದ್ದಾನೆ ಎಂದು ಭ್ರಮದನಂತರ ಕೂಡ ಬಾಧವಿರುತ್ತದೆ. ಆದ್ದರಿಂದ ಸಮ್ಯಗ್ ಪದವನ್ನು ಇಡಲಾಗಿದೆ.

<u>ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:</u>

**बाध लक्षण दलंकृत्यः**

**"सम्यग्बोधो बाधः" इत्युक्ते "घटोऽयं" इति सम्यग्बोधो बाधः स्यात्। तदर्थं "अन्यथा प्रतिपत्तिपूर्वकम्" इत्युक्तम्।**

"सम्यग्बोधो बाधः" ಅಂದರೆ, ಸಮ್ಯಗ್ ಬೋಧನೆಯು ಬಾಧ ಎಂದಿದ್ದರೆ, "घटोऽयं" ಎಂಬ ಸಮ್ಯಗ್ ಬೋಧನೆಯು ಬಾಧ ವಾಗುತ್ತಿತ್ತು. ಅದಕ್ಕಾಗಿ "अन्यथा प्रतिपत्तिपूर्वकम्" ಅಂದರೆ, ಅನ್ಯಥಾ ತಿಳುವಳಿಕೆ ಪೂರ್ವಕ ಎಂದು ಹೇಳಲಾಗಿದೆ.

**तावत् इत्युक्ते शुक्तिकायां रजतत्व ज्ञानानन्तरं तस्यां एव इदं इति सम्यग्बोधो बाधः स्यात् "तदुन्मूलनेन" इत्युक्तम्। अन्यथा प्रतिपत्तेः उन्मूलनं च तद्विषय असत्त्व ज्ञापनं वा तस्या भ्रान्तित्व ज्ञापनं वा द्रष्टव्यम्।**

ತಾವತ್ ಎಂದು ಹೇಳಿದ್ದರೆ ಶುಕ್ತಿಕಾಯದಲ್ಲಿ ರಜತದ ಜ್ಞಾನನಂತರ ಅದೆ ಇದು ಎಂಬ ಸಮ್ಯಗ್ ಬೋಧನೆಗೂ ಬಾಧ ಹೇಳಬೇಕಾಗುತ್ತಿತ್ತು. ಆದ್ದರಿಂದ "तदुन्मूलनेन" ಅಂದರೆ "ಅದರ ಮೂಲತಃ ಕಿತ್ತುವಗೆಯುವದರಿಂದ", ಎಂದು ಹೇಳಲಾಗಿದೆ. ಮತ್ತು अन्यथा प्रतिपत्तेः उन्मूलनं ಅಂದರೆ, ಅದರ ವಿಷಯದ ಅಸತ್ಯತ್ವದ ಜ್ಞಾಪನ ಅಥವಾ ಅದರ ಭ್ರಾಂತಿತ್ವ ಜ್ಞಾಪನ ಎಂದು ತಿಳಿಯಬೇಕು.

**सम्यग् ग्रहण अभावे तु वल्मीके स्थाणुत्व भ्रमानन्तरं "नायं स्थाणुः किं तर्हि पुरुषः" इति भ्रान्त्यन्तरमपि बाधः स्यात्। तदर्थं सम्यग् ग्रहणम्।**

ಇನ್ನು, सम्यग् ಪದ ಗ್ರಹಿಸದಿದ್ದರೆ, ಚಲಿಸದಿರುವ ದೇಹದಲ್ಲಿ ಭ್ರಮಾನಂತರ, ಇದು ಜಡಶರೀರವಲ್ಲ ಇವನು ಪುರುಷನಿದ್ದಾನೆ ಎಂದು ಭ್ರಾಂತಿನಂತರ ಕೂಡಾ ಬಾಧವಿರಬೇಕಾಗುತ್ತದೆ. ಅದಕ್ಕಾಗಿ सम्यग् ಪದವನ್ನು ಗ್ರಹಿಸಲಾಗಿದೆ.

## ॥ विपरीतप्रमाण विषयत्वमात्रं इति ॥

<u>ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:</u>

शुक्तिकां दृष्ट्वा आदौ एव न इदं रजतं इति रजत अभाव ज्ञानं जायते। तत्र रजतविपरीतो यो रजत अभावः तद्ग्राहकत्वेन न इदं रजतं इति विपरीत प्रमाणं प्रति रजतस्य प्रतियोगित्वेन अवच्छेदकतया विषयत्वमात्रं प्रमाणविरुद्धं इत्यर्थः। मात्र शब्देन अन्यथा प्रतिपत्तिपूर्वकं तदुन्मूलनं व्यावर्त्यते।

ಶುಕ್ತಿಯನ್ನು ಕಾಣುವ ಮುಂಚೆಯೆ ಇದು ರಜತವಲ್ಲ ಎಂದು ರಜತದ ಅಭಾವ ಜ್ಞಾನ ಆಗುತ್ತದೆ. ಅಲ್ಲಿ ರಜತದ ವಿಪರೀತವಾದುದು ರಜತದ ಅಭಾವತೆ, ಅದನ್ನು ಗ್ರಹಿಸುವದರಿಂದ, ಇದು ರಜತವಲ್ಲ ಎಂಬ ವಿಪರೀತ ಪ್ರಮಾಣ ಪ್ರತಿ ರಜತದ ಪ್ರತಿಯೋಗಿತ್ವದಿಂದ ಅವಚ್ಛೆಕಪೂರ್ವಕ ವಿಷಯತ್ವಮಾತ್ರ ಪ್ರಮಾಣವಿರುದ್ಧವೆನಿಸುವದು ಎಂದರ್ಥ. ಇಲ್ಲಿ मात्र ಶಬ್ದದಿಂದ अन्यथा प्रतिपत्तिपूर्वकं तदुन्मूलनं ಎಂಬುದನ್ನು ಪ್ರತ್ಯೇಕಿಸಲ್ಪಟ್ಟಿರುತ್ತದೆ ಅಂದರೆ ಬೇರ್ಪಡಿಸಲ್ಪಟ್ಟಿರುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

"न इदं रजतं" इति अभाव ग्राहक प्रमाणं प्रति रजतादेः प्रतियोगित्वेन अवच्छेदकतया विषयत्वमात्रं इत्यर्थः। मात्र पदेन अन्यथा प्रतिपत्तिपूर्वकत्वं तदुन्मूलनं च व्यावर्तितम्। तेन उक्तरूप बाधं प्रति निषेध्यतया विषयत्वरूपत्वात् बाध्यत्वात् प्रमाण विरुद्धत्वस्य भेद इति द्रष्टव्यम्।

ಇದು ರಜತವು ಎಂಬ ಅಭಾವವನ್ನು ಗ್ರಹಿಸುವ ಪ್ರಮಾಣ ಪ್ರತಿ ರಜತಾದಿಗಳು ಪ್ರತಿಯೋಗಿತ್ವದಿಂದ ಅವಚ್ಛೇದಕಪೂರ್ವಕ ವಿಷಯತ್ವಮಾತ್ರ ವಾಗಿರುತ್ತವೆ ಎಂದರ್ಥ. ಇಲ್ಲಿ मात्र ಪದದಿಂದ अन्यथा प्रतिपत्तिपूर्वकत्वं तदुन्मूलनं ಎಂಬುದನ್ನು ಬೇರೆ ಮಾಡಲಾಗಿದೆ.

ಇದರಿಂದ ಮೇಲೆ ಹೇಳಿದ ಬಾಧ ಲಕ್ಷಣ ಪ್ರತಿ, ನಿಷಧಿಸುವ ವಿಷಯರೂಪ ಬಾಧ್ಯತ್ವವು ಪ್ರಮಾಣ ವಿರುದ್ಧತ್ವವು ಎಂಬ ಭೇದವನ್ನು ತಿಳಿಯಬೇಕು.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

"न इदं रजतं" इत्येवं अकारक बोधगोचरत्वं उपाधिः इति भावः।

ಅಂದರೆ, "ಇದು ರಜತವಲ್ಲ" ಎಂಬ ಅಕಾರಕ ಬೋಧಗೋಚರವು ಉಪಾಧಿ ಎಂದರ್ಥ.

### *९.१ प्रमाणविरुद्धत्व उपाधेः साध्यव्यापकत्व समर्थनम्*

## टीका

**तर्हि अनुपसञ्जात बाधभ्रमे प्रमाणविरुद्धत्वं नास्ति इति अव्याप्तिः इति चेत् न। तत्रापि बाध अर्हत्वस्य सत्वात्।**

ಹಾಗಾದರೆ, ಅನುಪಸಂಜಾತ (ಇನ್ನೂ ಹುಟ್ಟದಿರುವ) ಬಾಧ ಭ್ರಮೆಯಲ್ಲಿ ಪ್ರಮಾಣ ವಿರುದ್ಧತ್ವವು ಇರುವದಿಲ್ಲ ಹಾಗಾಗಿ ಸಾಧ್ಯದಲ್ಲಿ ಅವ್ಯಾಪ್ತಿ ಉಂಟಾಯಿತಲ್ಲ ಎಂದರೆ, ಅಲ್ಲಿ ಕೂಡ ಬಾಧ ಅರ್ಹತ್ವ ಸತ್ಯವಾಗಿದೆ ತಾನೆ. ಹೀಗಾಗಿ ಅವ್ಯಾಪ್ತಿ ಇರುವದಿಲ್ಲ ಎಂದರ್ಥ.



## टिप्पणीनाम् विशेषार्थानि

## ॥ तर्हि इति ॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

स्वरीत्या साध्य अव्यापकतां आशङ्कते– तर्हि इति॥

ಇಲ್ಲಿ ಸ್ವಪರವಾದ ಸಾಧ್ಯ ಅವ್ಯಾಪಕತ್ವವನ್ನು ಈ ಟೀಕಾವಾಕ್ಯ ಶಂಕಿಸುತ್ತದೆ.

अनुपसञ्जात बाधभ्रमविषये भ्रमविषयत्वात् सत्यपि, मिथ्यात्वे प्रमाणविरुद्धत्व अभावात् उपाधेः साध्य अव्यापकता इत्यर्थः।

ಅನುಪಸಂಜಾತ ಬಾಧ ಭ್ರಮವಿಷಯದಲ್ಲಿ ಭ್ರಮವಿಷಯತ್ವ ಸತ್ಯವಾದರೂ, ಮಿಥ್ಯಾತ್ವದಲ್ಲಿ ಪ್ರಮಾಣವಿರುದ್ಧತ್ವದ ಅಭಾವತೆ ಇರುವದರಿಂದ ಉಪಾಧಿಗೆ ಸಾಧ್ಯ ಅವ್ಯಾಪಕತಾ ಎಂದರ್ಥ.

उक्त भ्रमविषये प्रमाणविरुद्धत्व अभावं उपपादयितुं अनुपसञ्जात बाधत्वेन् भ्रमविशेषणं कृतम्। बाधपदं च अत्र विपरीत प्रमापरम्। न तु उक्त विधपरम् इति भवति अनेन प्रमाण विरुद्धत्व अभाव सिद्धिः।

ಹೇಳಿರುವ ಭ್ರಮವಿಷಯದಲ್ಲಿ ಪ್ರಮಾಣವಿರುದ್ಧತ್ವದ ಅಭಾವತೆಯನ್ನು ಪ್ರತಿಪಾದಿಸಲು ಅನುಪಸಂಜಾತ ಬಾಧತ್ವದಿಂದ ಭ್ರಮಕ್ಕೆ ವಿಶೇಷಣವನ್ನು ಮಾಡಲಾಗಿದೆ. ಮತ್ತು ಇಲ್ಲಿ ಬಾಧ ಪದವನ್ನು ವಿಪರೀತ ಜ್ಞಾನ ಪರವಾಗಿ ಉಪಯೋಗಿಸಲಾಗಿದೆ ವಿನಹಾ ಹೇಳಿದ ಪ್ರಕಾರವಲ್ಲ. ಇದರಿಂದ ಪ್ರಮಾಣ ವಿರುದ್ಧತ್ವದ ಅಭಾವತೆಯು ಸಿದ್ಧವಾಗುತ್ತದೆ.

यद्यपि उक्त स्थले विपरीत प्रमाण विषयत्वं च अस्ति एव भ्रान्तेन तत् अभावस्य अज्ञातत्वेऽपि ईश्वरादिभिः तस्य ज्ञातत्वात्। भ्रान्ति समानाधिकरणमेव समानाधिकरण भ्रान्ति प्रसंजित अन्यथाकार उन्मूलनेन बाधकं भवति इति नियमवत् भ्रान्ति सामानाधिकरण्यमेव विपरीत प्रमाणं भवति इति नियम अभावात्। तथा च न साध्यव्यापकत्व शङ्का अवकाशः।

ಮತ್ತು ಹೇಳಿದ ಸ್ಥಳದಲ್ಲಿ ವಿಪರೀತ ಪ್ರಮಾಣದ ವಿಷಯತ್ವವು ಇದ್ದೆ ಇರುತ್ತದೆ. ಭ್ರಾಂತಿಯಿಂದ ಅದರ ಅಭಾವತೆಯ ಅಜ್ಞಾನವಿದ್ದರೂ ಈಶ್ವರಾದಿಗಳಿಗೆ ಅದು ತಿಳಿದಿರುತ್ತದೆ. ಭ್ರಾಂತಿ ಸಮಾನಾಧಿಕರಣವೇ, ಸಮಾನಾಧಿಕರಣ ಭ್ರಾಂತಿ ಪ್ರವರ್ತಿತ ಅನ್ಯಥಾಕಾರವನ್ನು ಬುಡಸಮೇತ ಕಿತ್ತುಹಾಕುವದರಿಂದ ಬಾಧಕ ಉಂಟಾಗುತ್ತದೆ ಎಂಬ ನಿಯಮದಂತೆ ಭ್ರಾಂತಿ ಸಮಾನಾಧಿಕರಣ್ಯದಿಂದಲೇ ವಿಪರೀತ ಪ್ರಮಾಣ ಉಂಟಾಗುತ್ತದೆ ಎಂಬ ನಿಯಮ ವಿರುವದಿಲ್ಲ. ಮತ್ತು ಹಾಗೆ ಸಾಧ್ಯವ್ಯಾಪಕತ್ವದ ಶಂಕಾಕ್ಕೆ ಆಸ್ಪದವಿರುವದಿಲ್ಲ.

तथापि भ्रान्ति समानाधिकरणमेव विपरीतप्रमाणं भवति इति नियमं अभ्युपेत्य इयं आशङ्क इति द्रष्टव्यम्।

ಹಾಗಿದ್ದರೂ ಭ್ರಾಂತಿ ಸಮಾನಾಧಿಕರಣವೇ ವಿಪರೀತ ಪ್ರಮಾಣ ಆಗುತ್ತದೆ ಎಂಬ ನಿಯಮವನ್ನು ಅಂಗೀಕರಿಸಿ ಈ ಶಂಕೆ ಇರುತ್ತದೆ ಎಂದು ತಿಳಿಯಬೇಕು.

## ॥ अनुपसञ्जात बाधभ्रमे इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

न उपसंजातः अनुपसंजातः अनुपसंजानोबाधो यस्य स अनुपसंजातबाधः। स च असौ भ्रमश्च तस्मिन् इत्यर्थः।

ಇನ್ನೂ ಹುಟ್ಟದೆ ಇದ್ದ ಅದು ಅನುಪಸಂಜಾತ ಎನಿಸುವದು. ಯಾವುದರ ಹುಟ್ಟದೆ ಇರುವ ಬಾಧ ಅದು ಅದರ ಅನುಪಸಂಜಾತ ಬಾಧ. ಮತ್ತು ಅದು ಭ್ರಮದ ಅನುಪಸಂಜಾತ ಬಾಧ ಎಂದರ್ಥ.

## ॥ अनुपसञ्जात बाधभ्रमे प्रमाणविरुद्धत्वं नास्ति इति अव्याप्तिःइति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

अनुपसंजात बाधभ्रम विषये भ्रमविषयत्वात् एव योग्यतया प्रमाण विरुद्धत्वे सत्यपि अनुपसंजात बाधत्वात् बाधविषयतवरूप बाध्यत्वं नास्ति इति। यत्र प्रमाणविरुद्धत्वं तत्र बाध्यत्वं इति समव्याप्तेः अभावात् अनुपाधित्वं इत्यर्थः।

ಅನುಪಸಂಜಾತ ಬಾಧ ಭ್ರಮ ವಿಷಯದಲ್ಲಿ, ಅದು ಭ್ರಮವಿಷಯತ್ವವೇ ಯೋಗ್ಯತೆಯ ಅನುಗುಣವಗಿ ಪ್ರಮಾಣ ವಿರುದ್ಧತ್ವದಲ್ಲಿ ಸತ್ಯವಾದರೂ, ಅನುಪಸಂಜಾತ ಬಾಧತ್ವದಿಂದ ಬಾಧವಿಷಯತ್ವರೂಪ ಬಾಧ್ಯತ್ವವು ಇರುವದಿಲ್ಲ. ಎಲ್ಲಿ ಪ್ರಮಾಣವಿರುದ್ಧತ್ವವಿದೆಯೊ ಅಲ್ಲಿ ಬಾಧ್ಯತ್ವ ಇರುತ್ತದೆ ಎಂಬ ಸಮವ್ಯಾಪ್ತಿಯ ಇಲ್ಲಿ ಅಭಾವತೆ ಇರುವದರಿಂದ ಉಪಾಧಿತ್ವ ಇರುವದಿಲ್ಲ ಎಂದರ್ಥ.

ननु समव्याप्तत्वं न उपाधि लक्षणं इति चेत् न। तथात्वे शब्दः अनित्यः कृतकृत्वात् इत्यत्र अश्रावणत्वं उपाधिः स्यात्। साध्यव्यापकत्वात् साधन अव्यापकत्वाच्च। अतः अपेक्षितमेव समपदम्। गगनादौ व्यभिचारेण समव्याप्तेः अभावात् तत् व्यावृत्तिः।
यथा आहुः– साधन अव्यापकाः साध्यसमव्याप्ताः उपाधय इति।

ಇನ್ನು ಸಮವ್ಯಾಪ್ತಿಯು ಉಪಾಧಿಯ ಲಕ್ಷಣವಾಗುವದಿಲ್ಲ ಎಂದರೆ. ಹಾಗೆ ಹೇಳುವದು ಸರಿಯಲ್ಲ. ಹಾಗಾದರೆ, ಶಬ್ದವ್ಯ ಅನಿತ್ಯವಾಗಿದೆ ಕೃತಕೃತ್ವವಾಗಿರುವದರಿಂದ ಎಂಬಲ್ಲಿ ಅಶ್ರವಣತ್ವವು ಉಪಾಧಿಯಾಗುತ್ತದೆ. ಮತ್ತು ಉಪಾಧಿಯುಅ ಸಾಧ್ಯ ವ್ಯಾಪಕವಾಗಿರುವಾಗ ಸಾಧನ ಅವ್ಯಾಪಕತ್ವವಾಗಿರುತ್ತದೆ. ಆದ್ದರಿಂದ ಅಲ್ಲಿ ಸಮ ಪದವು ಅಪೇಕ್ಷಿತವಾಗಿರುತ್ತದೆ. ಗಗನಾದಿಗಳಲ್ಲಿ ವ್ಯಭಿಚಾರದಿಂದ ಸಮವ್ಯಾಪ್ತಿಯು ಇಲ್ಲವಾದ್ದರಿಂದ ಅದನ್ನು ಹೊರಗಿಡಲಾಗಿದೆ. ಹೀಗೆ ಹೇಳಲಾಗಿದೆ: ಸಾಧನ ಅವ್ಯಾಪಕವಾಗಿದ್ದು ಸಾಧ್ಯ ಸಮವ್ಯಾಪ್ತಿಯನ್ನು ಹೊಂದಿದ್ದು ಉಪಾಧಿ ಎಂದು.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

अनुपासंजातबाध भ्रमविषये मिथ्यात्वस्य सत्त्वेऽपि प्रमाणविरुद्धत्वं नास्ति इति उपाधेः साध्यव्यापकता नास्ति इत्यर्थः।



ಅಂದರೆ, ಅನುಪಸಂಜಾತ ಬಾಧ ಭ್ರಮವಿಷಯದಲ್ಲಿ ಮಿಥ್ಯಾತ್ವವು ಸತ್ಯವಾದರೂ ಪ್ರಮಾಣವಿರುದ್ಧತ್ವವು ಇರುವದಿಲ್ಲ ಎಂದು ಉಪಾಧಿಗೆ ಸಾಧ್ಯವ್ಯಾಪಕತಾ ಇರುವದಿಲ್ಲ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

अनुपसंजात बाधविषये बाधक प्रमा विषयत्वं नास्ति इति साध्यव्यापक उपाधिः इत्यर्थः।

ಅಂದರೆ, ಅನುಪಸಂಜಾತ ಬಾಧವಿಷಯದಲ್ಲಿ ಬಾಧಕ ಪ್ರಮಾ ಎಂದರೆ ಜ್ಞಾನ ವಿಷಯತ್ವ ಇರುವದಿಲ್ಲ ಎಂದು ಉಪಾಧಿಗೆ ಸಾಧ್ಯವ್ಯಾಪಕ ಇದೆ ಎಂದರ್ಥ.

## ॥ बाध अर्हत्वस्य इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ

बाधृ विलोडने अस्मात् कृत्ये यत् प्रत्यये बाध्य इति रूपम्। कृत्याश्च अहार्थे स्मर्यन्ते। अर्हेकृत्यतृश्च इति स्मरणात्। कृत्याः प्राङ्ण्वुल इति सूत्रेण ण्वुल्तृचौ इत्यतः प्राग्विहितानां प्रत्ययानां कृत्यत्व अभिधानात्। यत्प्रत्ययस्यापि तदन्तर्गतत्वात् इति द्रष्टव्यम्।

बाधृ ಮಥನದಿಂದ अस्मात् ಕೃತ್ಯದಲ್ಲಿ ಮತ್ತು यत् ಪ್ರತ್ಯಯದಲ್ಲಿ बाध्य ಎಂದು ರೂಪವಾಗುತ್ತದೆ. ಕೃತ್ಯವನ್ನು ಅಹರ್ಥದಲ್ಲಿ ಸ್ಮರಿಸಲಾಗುತ್ತದೆ. अर्हेकृत्यतृश्च ಎಂದು ಸ್ಮರಿಸಲಾಗುತ್ತದೆ. कृत्याः प्राङ्ण्वुल ಎಂಬ ಸೂತ್ರದಿಂದ ण्वुल्तृचौ ಎಂದು, ಅದರಂತೆ, प्राग्विहितानां प्रत्ययानां कृत्यत्व ಎಂಬ ಅಭಿಧಾನವಿರುತ್ತದೆ. ಅದರ ಪ್ರತ್ಯಯ ಕೂಡ ಅದರ ಅಂತರ್ಗತವಾಗಿರುತ್ತದೆ ಎಂದು ತಿಳಿಯಬೇಕು.

इदं च यस्य भ्रान्तिर्जाता तस्यैव बाधः अपेक्षित इत्यभ्युपेत्य तत् अभिप्रायेण् बाध अर्हत्वस्य सत्वात् इत्युक्तं। वस्तुतस्तु ईशवरीय बाधविषयत्वं  फलोपधानमेव अस्ति इति द्रष्टव्यम्।

ಮತ್ತು ಇದನ್ನು ಭ್ರಾಂತಿಯಿಂದ ಹುಟ್ಟಿದ್ದು ಅದೇ ಬಾಧ ಎಂದು ಅಪೇಕ್ಷಿತವಾದುದು ಎಂದು ಒಪ್ಪಿಕೊಂಡು ಅದರ ಅಭಿಪ್ರಾಯದಿಂದ ಬಾಧ ಅರ್ಹತ್ವವು ಸತ್ಯವಾಗಿದೆ ಎಂದು ಹೇಳಲಾಗಿದೆ. ವಸ್ತುತಃ ಈಶ್ವರೀಯ ಬಾಧವಿಷಯತ್ವ ಫಲ ಉಪಧಾನವೇ ಇರುತ್ತದೆ ಎಂದು ತಿಳಿಯಬೇಕು.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

प्रबल विपरीत प्रमाणविषयत्व योग्यतारूप प्रमाण विरुद्धत्वलक्षण उपाधेः इत्यर्थः। न तु बाध्यत्व रूप साध्यस्य इति भ्रमितव्यम्। तत्र तस्य परेण अपि अङ्गीकृतत्वात्, न विपरीत प्रमाण विषयत्वमात्रं उपाधिः। किन्तु तत् योग्यत्वम्। तच्च तत्र अपि अस्ति इति सिद्ध असाध्यव्यापकता इति भावः। एतच्च भ्रान्ति समानाधिकरणमेव विपरीत प्रमाणं अभ्युपेत्य उक्तम्। वस्तुतस्तु अनुपसंजातबाध भ्रमे विपरीतप्रमाण विषयत्वं च अस्ति एव। भ्रान्तेन तत् अभावज्ञानस्य अज्ञातत्वेऽपि ईश्वरादिभिः तत् अभावस्य ज्ञातत्वात्।

ಅಂದರೆ, ಪ್ರಬಲ ವಿಪರೀತ ಪ್ರಮಾಣವಿಷಯತ್ವದ ಯೋಗ್ಯತೆಯನ್ನು ಹೊಂದಿದ ಪ್ರಮಾಣವಿರುದ್ಧತ್ವ ಲಕ್ಷಣವು ಉಪಾಧಿ ಎಂದರ್ಥ. ವಿನಹಾ ಸಾಧ್ಯದ ಬಾಧ್ಯತ್ವರೂಪ

ಎಂದು ಭ್ರಮಿಸಕೂಡದು. ಅಲ್ಲಿ ಅದನ್ನು ಪರಪಕ್ಷದವರು ಕೂಡ ಅಂಗೀಕರಿಸಿರುತ್ತಾರೆ. ವಿಪರೀತ ಪ್ರಮಾಣ ವಿಷಯತ್ವ ಮಾತ್ರ ಉಪಾಧಿಯಲ್ಲಿ ಪರಂತು ಅದರ ಯೋಗ್ಯತ್ವವನ್ನು ಪರಿಗಣಿಸಲಾಗುತ್ತದೆ. ಮತ್ತು ಅದು ಅಲ್ಲಿ ಕೂಡ ಇರುತ್ತದೆ ಎಂದು, ಸಾಧ್ಯವ್ಯಾಪಕತಾ ಸಿದ್ಧವಾಯಿತು ಎಂಬ ಭಾವ ವಿರುತ್ತದೆ. ಇದನ್ನು ಭ್ರಾಂತಿ ಸಮಾನಾಧಿಕರಣವೇ ವಿಪರೀತ ಪ್ರಮಾಣವೆಂದು ಒಪ್ಪಿಕೊಂಡು ಹೇಳಲಾಗಿದೆ. ವಸ್ತುತಃ ಅನುಪಸಂಜಾತ ಬಾಧ ಭ್ರಮದಲ್ಲಿ ವಿಪರೀತ ಪ್ರಮಾಣ ವಿಷಯತ್ವ ಇದ್ದೇ ಇರುತ್ತದೆ. ಭ್ರಾಂತಿಯಿಂದ ಅದರ ಅಭಾವಜ್ಞಾನದ ಅಜ್ಞಾನವಿದ್ದರೂ ಈಶ್ವರಾದಿಗಳಿಗೆ ಅದರ ಅಭಾವವು ಜ್ಞಾತವಾಗಿರುತ್ತದೆ.

न हि भ्रान्ति समानाधिकरणमेव तदुन्मूलनं बाधकं भवति इति नियमः तथा भ्रान्ति समानाधिकरणमेव विपरीत प्रमाणं भवति इति नियमः।

ಭ್ರಾಂತಿ ಸಮಾನಾಧಿಕರಣವೇ ಅದನ್ನು ಬುಡ ಸಮೇತ ಕಿತ್ತುಹಾಕುವದು ಬಾಧಕ ಎನಿಸುತ್ತದೆ ಎಂಬ ನಿಯಮ ವಿರುವದಿಲ್ಲ. ಹಾಗೆ ಭ್ರಾಂತಿ ಸಮಾನಾಧಿಕರಣವೇ ವಿಪರೀತ ಪ್ರಮಾಣವಾಗುತ್ತದೆ ಎಂದು ನಿಯಮ ಇರುವದಿಲ್ಲ.

अनुपसंजात बाधभ्रमे प्रमाणविरुद्धत्वं अस्ति इति क्वचित्पाठः। तत्र–

ಇನ್ನು ಕೆಲವೆಡೆ ಅನುಪಸಂಜಾತ ಬಾಧಭ್ರಮದಲ್ಲಿ ಪ್ರಮಾಣವಿರುದ್ಧತ್ವವು ಇರುತ್ತದೆ ಎಂಬ ಪಾಠವಿರುತ್ತದೆ. ಅಲ್ಲಿ

"अनुपसंजातबाधभ्रमविषये भ्रमविषयत्वात् प्रमाण विरुद्धत्वे सत्यपि अनुपसंजात बाधत्वात् बाधविषयत्वरूप बाध्यत्वस्य अभावेन "यत्र उपाधिः तत्र साध्यम्" इति समव्याप्तेः अभावात् अनुपाधित्वं इत्यभिप्रायेण अनुपसंजात बाध इत्यनेन ग्रन्थेन शङ्कितत्वात् ।

" ಅನುಪಸಂಜಾತ ಬಾಧ ಭ್ರಮವಿಷಯದಲ್ಲಿ ಭ್ರಮವೀಷಯವಾದ್ದರಿಂದ ಪ್ರಮಾಣವಿರುದ್ಧತ್ವವು ಸತ್ಯವಾಗಿದ್ದರೂ ಅನುಪಸಂಜಾತ ಬಾಧವಾಗಿರುವದರಿಂದ ಬಾಧವಿಷಯತ್ವರೂಪ ಬಾಧ್ಯತ್ವ ಇರದಮೂಲಕ, "ಎಲ್ಲಿ ಉಪಾಧಿ ಅಲ್ಲಿ ಸಾಧ್ಯ" ಎಂಬ ಸಮವ್ಯಾಪ್ತಿಯ ಇಲ್ಲವಾದ್ದರಿಂದ ಉಪಾಧಿ ಇರುವದಿಲ್ಲ ಎಂಬ ಅಭಿಪ್ರಾಯದಿಂದ ಅನುಪಸಂಜಾತ ಬಾಧ ಎಂದು ಶಂಕಿಸಲಾಗಿರುತ್ತದೆ

तत्रापि बाधार्हत्वस्य सत्वात् इत्यनेन ग्रन्थेन परेणापि बाध्यत्वं बाधार्हत्वमेव विवक्षणियम्, अन्यथा अनुपसंजातबाधभ्रमविषये दृश्यत्व हेतोः व्यभिचार प्रसङ्गात्, बाधार्हत्वं च तत्र अपि अस्ति इति समव्याप्तिः अस्ति इति भावेन परिहृतम्" इति व्याख्येयः।

ಅಲ್ಲಿ ಕೂಡ ಬಾಧ ಅರ್ಹತ್ವದ ಸತ್ಯವಾಗಿದೆ ಎಂಬ ವಾಕ್ಯದಿಂದ ಪರರು ಕೂಡ ಬಾಧ್ಯತ್ವವೆಂದರೆ ಬಾಧ ಅರ್ಹತ್ವವೆಂದೆ ವಿವಕ್ಷಿಸಬೇಕು, ಅನ್ಯಥಾ ಅನುಪಸಂಜಾತ ಬಾಧ ಭ್ರಮವಿಷಯದಲ್ಲಿ ದೃಶ್ಯತ್ವ ಹೇತುವಿಗೆ ವ್ಯಭಿಚಾರ ಪ್ರಸಂಗ ಉಂಟಾಗುವದರಿಂದ, ಅಲ್ಲಿ ಕೂಡ ಬಾಧ ಅರ್ಹತ್ವ ಇರುತ್ತದೆ ಎಂದು ಸಮವ್ಯಾಪ್ತಿ ಇದೆ ಎಂಬ ಭಾವದಿಂದ ಪರಿಹರಿಸಲಾಗಿದೆ." ಎಂದು ವ್ಯಾಖ್ಯಾನಿಸಬೇಕು



<u>ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:</u>

अत्र अपि बाध पदं विपरीतप्रमाण परमेव। ततश्च विपरीत प्रमाण विषयत्व योग्यतारूप प्रमाणविरुद्धत्व उपाधेः इत्यर्थः। ततश्च उक्त भ्रमविषये अनुपसंजात विपरीत प्रमाणत्वेन विपरीतप्रमाण विषयत्व अभावेऽपि तत् योग्यत्व सत्वात् न साध्य अव्यापकता इत्याशयः।

ಇಲ್ಲಿ ಕೂಡ ಬಾಧ ಪದವು ವಿಪರೀತ ಪ್ರಮಾಣ ಪರವಾಗಿಯೇ ಇರುತ್ತದೆ. ಮತ್ತು ಅದರಂತೆ ವಿಪರೀತ ಪ್ರಮಾಣ ವಿಷಯತ್ವ ಯೋಗ್ಯತಾರೂಪ ಪ್ರಮಾಣ ವಿರುದ್ಧತ್ವವು ಉಪಾಧಿ ಎಂದರ್ಥ. ಅದರಂತೆ ಹೇಳಿದ ಭ್ರಮವಿಷಯದಲ್ಲಿ ಅನುಪಸಂಜಾತ ವಿಪರೀತ ಪ್ರಮಾಣತ್ವದಿಂದ ವಿಪರೀತ ಪ್ರಮಾಣ ವಿಷಯತ್ವದ ಅಭಾವವಿದ್ದರೂ ಅದರ ಯೋಗ್ಯತ್ವ ಸತ್ಯವಾಗಿರುವದರಿಂದ, ಸಾಧ್ಯ ಅವ್ಯಾಪಕತಾ ಇರುವದಿಲ್ಲ ಎಂಬ ಆಶಯವಿರುತ್ತದೆ.

क्वचित् अनुपसंजातबाधभ्रमे प्रमाणविरुद्धत्वं अस्ति इति पाठः। तत्रापि शङ्कापरिहार ग्रन्थयोः बाधपदं निरुक्त बाधपरमेव। ततश्च अनुपसंजातबाधभ्रम विषये भ्रमविषयत्वात् प्रमाण विरुद्धत्वे सत्यपि अनुपसंजातबाधत्वेन उक्तबाधविषयत्वरूप बाध्यत्वस्य अभावेन यत्र उपाधिः तत्र साध्यं इति व्याप्ति अभावेन असमव्याप्तेः अनुपाधित्व शङ्कार्थः।

ಕೆಲೆವೆಡೆ ಅನುಪಸಂಜಾತ ಬಾಧಭ್ರಮದಲ್ಲಿ ಪ್ರಮಾನವಿರುದ್ಧತ್ವ ಇರುತ್ತದೆ ಎಂದು ಪಾಠವಿರುತ್ತದೆ. ಅಲ್ಲಿ ಕೂಡ ಶಂಕಾಪರಿಹಾರ ವಾಕ್ಯಗಳಲ್ಲಿ ಬಾಧ ಪದವು ನಿರುಕ್ತ ಬಾಧಪರವೇ ಆಗಿರುತ್ತದೆ. ಅದರಂತೆ, ಅನುಸಂಜಾತ ಬಾಧ ಭ್ರಮ ವಿಷಯದಲ್ಲಿ, ಭ್ರಮವಿಷಯವಾಗಿರುವದರಿಂದ ಪ್ರಮಾಣ ವಿರುದ್ಧತ್ವ ಸತ್ಯವಾದರೂ, ಅನುಪಸಂಜಾತ ಬಾಧತ್ವದಿಂದ ನಮೂದಿಸಿದ ಬಾಧವಿಷಯತ್ವರೂಪ ಬಾಧ್ಯತ್ವದ ಅಭಾವದಿಂದ " ಎಲ್ಲಿ ಉಪಾಧಿ ಅಲ್ಲಿ ಸಾಧ್ಯ" ಎಂಬ ವ್ಯಾಪ್ತಿಯ ಅಭಾವತೆಯಿಂದ, ಸಮವ್ಯಾಪ್ತಿ ಇಲ್ಲವಾದ್ದರಿಂದ ಉಪಾಧಿ ಇಲ್ಲದಿರುವ ಶಂಕೆ ಇರುತ್ತದೆ ಎಂದರ್ಥ.

न बाध्यत्वमात्रं बाधविषयत्वं तथा सति अनुपसंजातबाधभ्रमविषये सत्यपि दृश्यत्वे बाध्यत्व अभावेन व्यभिचार प्रसङ्गात्। किन्तु बाधार्हत्वमेव। तच्च तत्रापि अस्ति एव इति समव्याप्तत्वात् उपाधित्वं इति परिहारार्थः।

ಬಾಧ್ಯತ್ವಮಾತ್ರವೇ ಬಾಧವಿಷಯವಲ್ಲ, ಹಾಗಿದ್ದರೆ ಅನುಪಸಂಜಾತ ಭ್ರಮವಿಷಯದಲ್ಲಿ ದೃಶ್ಯತ್ವ ಸತ್ಯವಾದರೂ ಬಾಧ್ಯತ್ವದ ಅಭಾವದಿಂದ ವ್ಯಭಿಚಾರ ಪ್ರಸಂಗ ಒದಗುವದು. ಪರಂತು ಬಾಧ ಅರ್ಹತ್ವವೇ ಬಾಧವಿಷಯವಾಗುತ್ತದೆ. ಅದು ಅಲ್ಲಿ ಕೂಡ ಇದ್ದೇ ಇರುತ್ತದೆ ಎಂಬ ಸಮವ್ಯಾಪ್ತತ್ವ ಇರುವದರಿಂದ ಉಪಾಧಿ ಇದೆ ಎಂಬ ಪರಿಹಾರಾರ್ಥವಾಗಿರುತ್ತದೆ.

अत्र च भ्रान्ति समानाधिकरणमेव विपरीत प्रमाणं भवति इति नियम अभावात् विपरीतप्रमाण विषयत्व सद्भावेऽपि भ्रान्ति समानाधिकरणमेव बाधकं भवति इति नियमात् उक्तभ्रमविषये बाध अभावश्च उपपन्न इति न पूर्ववत् असिद्धनियमाश्रयणम्। बाध पदस्य निरुक्तार्थ परत्व अपरित्यागश्च इति ध्येयम्। इमौ च शङ्कापरिहारौ समव्याप्त एव उपाधिः इति उदयनमत आश्रित्य द्रष्टव्यौ।

ಮತ್ತು ಇಲ್ಲಿ ಭ್ರಾಂತಿ ಸಮಾನಾಧಿಕರಣವೇ ವಿಪರೀತ ಪ್ರಮಾಣವಾಗುತ್ತದೆ ಎಂಬ ನಿಯಮವಿಲ್ಲದಿರುವದರಿಂದ ವಿಪರೀತ ಪ್ರಮಾಣ ವಿಷಯತ್ವ ಇದ್ದರೂ ಕೂಡ ಭ್ರಾಂತಿ ಸಮಾನಾಧಿಕರಣವೇ ಬಾಧಕವಾಗುತ್ತದೆ ಎಂಬ ನಿಯಮ ಇರುವದರಿಂದ ಹೇಳಿದ ಭ್ರಮವಿಷಯದಲ್ಲಿ ಬಾಧ ಅಭಾವದ ತಿಳುವಳಿಕೆ ಉಂಟಾಗುವದರಿಂದ, ಪೂರ್ವದಲ್ಲಿರುವಂತೆ ಅಸಿದ್ಧನಿಯಮಾಶ್ರಯಣದ ಅಗತ್ಯವಿರುವದಿಲ್ಲ. ಹಾಗೂ ಬಾಧ ಪದದ ನಿರುಕ್ತಾರ್ಥ ಪರತ್ವವನ್ನು ಪರಿತ್ಯಜಿಸಲಿಲ್ಲ ಎಂಬುದನ್ನು ಧ್ಯಾನದಲ್ಲಿಡಬೇಕು. ಮತ್ತು ಇವೆರಡು ಶಂಕಾಪರಿಹಾರಗಳನ್ನು "ಸಮವ್ಯಾಪ್ತಿಯೆ ಉಪಾಧಿ" ಎಂಬ ಉದಯನಮತವನ್ನು ಆಶ್ರಯಿಸಿ ಮಾಡಲಾಗಿದೆ ಎಂದು ತಿಳಿಯತಕ್ಕದ್ದು.

### *९. २ प्रमाणविरुद्धत्व उपाधेः साधन अव्यापकत्व समर्थनम्*

## टीका

**प्रपञ्चस्यापि प्रमाणविरुद्धत्वात् साधन व्यापकोयं इति चेत् न। प्रतीत प्रमाणानाम् अन्यथा व्याख्यातत्वात्। दृश्यत्वेन साधने मिथ्यात्वस्य उपाधित्वात्। अन्योन्य उपाधि भावेन अपि अनुमानस्य आभासत्वात्।**

ಪ್ರಪಂಚವು ಕೂಡ ಪ್ರಮಾಣವಿರುದ್ಧವಾಗಿರುವದರಿಂದ, ಈ ಉಪಾಧಿ ಲಕ್ಷಣ ಸಾಧನ ವ್ಯಾಪಕವಾಗಿರುತ್ತದೆ ಎಂದು ಅನ್ನುತ್ತೇವೆ ಎಂದರೆ, ಹಾಗೆ ಹೇಳುವದು ಸರಿಯಲ್ಲ. ಪ್ರಪಂಚ ಪ್ರತಿಪಾದಕ ಪ್ರತೀತ ಪ್ರಮಾಣಗಳನ್ನು ಅನ್ಯಥಾ ವ್ಯಾಖ್ಯಾನಿಸಲಾಗಿದೆ. ದೃಶ್ಯತ್ವ ಹೇತುವಿನಿಂದ ಮಿಥ್ಯಾತ್ವವನ್ನು ಸಾಧಿಸಿದಲ್ಲಿ, ಪ್ರಮಾಣವಿರುದ್ಧತ್ವ ಉಪಾಧಿಯಾಗಿರುತ್ತದೆ. ಇನ್ನು, ಅನ್ಯೋನ್ಯ ಉಪಾಧಿ ಭಾವದಿಂದ ಕೂಡ ಅನುಮಾನಕ್ಕೆ ಆಭಾಸತ್ವ ಉಂಟಾಗುತ್ತದೆ.

### टिप्पणीनाम् विशेषार्थानि

**॥ प्रपञ्चस्यापि इति ॥**

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆಃ

**पञ्चस्वरूप निषेधक प्रमाणजन्य बोधक ज्ञानविषयत्वात् इत्यर्थः।**
ಅಂದರೆ, ಪಂಚ ಸ್ವರೂಪ ನಿಷೇಧಕ ಪ್ರಮಾಣಜನ್ಯ ಬೋಧಕ ಜ್ಞಾನವಿಷವಾದುದು ಎಂದರ್ಥ.

**॥ प्रमाण इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**नेह नानास्ति किंचन इत्यादि सत्यत्वविपरीत मिथ्यात्व प्रतिपादक प्रमाण इत्यर्थः।**



ಅಂದರೆ ನೆಹ ನಾನಾಸ್ತಿ ಕಿಂಚನ ಎಂದು ಮುಂತಾದ ಸತ್ಯತ್ವವಿಪರೀತ ಮಿಥ್ಯಾತ್ವ ಪ್ರತಿಪಾದಕ ಪ್ರಮಾಣಗಳು ಎಂದರ್ಥ.

**॥ प्रतीत प्रमाणानाम् इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**प्रपञ्चमिथ्यात्व प्रतिपादकत्वेन प्रतीत इत्यर्थः।**
ಅಂದರೆ, ಪ್ರಪಂಚ ಮಿಥ್ಯಾತ್ವ ಪ್ರತಿಪಾದಕತ್ವದಿಂದ ಪ್ರತೀತವಾದ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**"नेह नाना" इत्यादि वाक्यानां इत्यर्थः।**
ಅಂದರೆ, ನೇಹಾ ನಾನಾ ಎಂದು ಮುಂತಾದ ವಾಕ್ಯಗಳನ್ನು ಎಂದರ್ಥ.

**॥ दृश्यत्वेन इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु दृश्यत्व हेतुना एव प्रमाणविरुद्धत्वं अपि पक्षे साध्यत इति उपाधिः साधनव्यापक एव इति आशङ्क्य आह– दृश्यत्व इति॥**
**साधने प्रमाणविरुद्धत्व उपाधेः पक्षे साधन इत्यर्थः।**
ದೃಶ್ಯತ್ವ ಹೇತುವಿನಿಂದಲೇ ಪ್ರಮಾಣವಿರುದ್ಧತ್ವವನ್ನು ಕೂಡ ಪಕ್ಷದಲ್ಲಿ ಸಾಧಿಸಲಾಗುತ್ತದೆ ಎಂದು ಉಪಾಧಿ ಸಾಧನ ವ್ಯಾಪಕವಾಗಿರುತ್ತದೆ ಎಂದು ಈ ಟೀಕಾವಾಕ್ಯ ಶಂಕಿಸುತ್ತದೆ.
साधने ಎಂದರೆ, ಪ್ರಮಾಣ ವಿರುದ್ಧತ್ವ ಉಪಾಧಿ ಪಕ್ಷದಲ್ಲಿ ಸಾಧನ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**दृश्यत्वेन एव प्रमाणविरुद्धत्वं प्रपञ्चे साध्यते। तथा च साधनवत् पक्षात् व्यावृत्तेः साधनव्यापक उपाधिः आशङ्क्य आह– दृश्यत्वेन इति॥**
ದೃಶ್ಯತ್ವ ಹೇತುವಿನಿಂದಲೇ ಪ್ರಮಾಣವಿರುದ್ಧತ್ವವನ್ನು ಪ್ರಪಂಚದಲ್ಲಿ ಸಾಧಿಸಲಾಗುತ್ತಿದೆ. ಅದರಂತೆ ಸಾಧನದಂತೆ ಪಕ್ಷದಿಂದ ವ್ಯಾವೃತ್ತಿಯಾದ್ದರಿಂದ ಪ್ರಮಾಣವಿರುದ್ಧತ್ವ ಲಕ್ಷಣ ಉಪಾಧಿ ಸಾಧನವ್ಯಾಪಕವಗುತ್ತದೆ ಎಂಬ ಶಂಕೆಗೆ ಈ ಟೀಕಾವಾಕ್ಯ ಪರಿಹಾರ ಸೂಚಿಸುತ್ತದೆ.

**ननु यदा दृश्यत्वेन मिथ्यात्व प्रमाणविरुद्धत्वयोः अन्यतरत् साध्येत तदा एकस्य साधने अपर उपाधिः भवति इति न कस्यापि सिद्धिः भवति। यदा तु मिथ्यात्वे सति प्रमाणविरुद्धत्वं विशिष्टं साध्येत तदा कथम् इति चेत् न। साध्यविशेषण प्रयोजनानां सिद्धसाधनता परिहारादीनाम् अभावेन तथा साध्य निर्देश असम्भवात्। उपाधित्वेन शङ्क्यमानानां अनन्तत्वेन तेषां साध्यशरीर प्रवेशन अयोगाच्च। किंच पक्षेतरत्वं पक्षे न साधयितुं शक्यं व्याघातात्। अनुकूलतर्कसद्भावे च तस्यापि उपाधित्वात्।**
ದೃಶ್ಯತ್ವ ಹೇತುವಿನಿಂದ ಮಿಥ್ಯಾತ್ವ ಮತ್ತು ಪ್ರಮಾಣವಿರುದ್ಧತ್ವಗಳಲ್ಲಿ ಯವುದಾದರೊಂದು ಸಾಧಿಸಲಾಗುತ್ತೊ ಆಗ ಒಂದನ್ನು ಸಾಧಿಸಿದಲ್ಲಿ ಎರಡನೆಯದು ಉಪಾಧಿಯಾಗುತ್ತದೆ, ಹೀಗಾಗಿ ಯಾವುದರ ಸಿದ್ಧಿ ಆಗುವದಿಲ್ಲ.

ಇಲ್ಲ, ಮಿಥ್ಯಾತ್ವ ಇದ್ದಾಗ ಪ್ರಮಾಣವಿರುದ್ಧತ್ವ ವಿಶಿಷ್ಟವನ್ನು ಸಾಧಿಸಲಾಗುತ್ತದೆ ಆಗ ತಾವು ಹೀಗೆ ಹೇಗೆ ಹೇಳುತ್ತೀರಿ ಎಂದರೆ? ಸಾಧ್ಯವಿಶೇಷಣ ಪ್ರಯೋಜನಗಳಿಗೆ ಸಿದ್ಧಸಾಧನತಾ ಪರಿಹಾರಾದಿಗಳು ಇರುವದಿಲ್ಲ, ಹಾಗೂ ಸಾಧ್ಯ ನಿರ್ದೇಶ ಅಸಂಭವವೆನಿಸುತ್ತದೆ. ಉಪಾಧಿತ್ವದಿಂದ ಶಂಕೆಮಾಡುವವರು ಅನಂತವಾಗಿರುವದರಿಂದ, ಅವುಗಳ ಸಾಧ್ಯದಲ್ಲಿ ಪ್ರವೇಶಿಸುವದು ಅಯೋಗ್ಯವಾಗಿರುತ್ತದೆ. ಮತ್ತ ಪಕ್ಷದಲ್ಲಿಲ್ಲದ್ದನ್ನು ಪಕ್ಷದಲ್ಲಿ ಸಾಧಿಸುವದು ವ್ಯಾಘಾತವೆಂಬ ದೋಷಕ್ಕೊಳಗಾಗುತ್ತದೆ.

**एतेन केनचित हेतुना विश्वसत्यतासाधने प्रमाणविरुद्धत्वं उपाधिः। तत् साधने च सत्यत्वं उपाधिः इति स्वव्याघात् इति निरस्तम्। अनुकूलतर्क अभाव एव एवं आश्रयणात्। मिथ्यात्वसत्यत्व साधक अनुमानेषु च अनुकूलतर्क अभाव अभावयोः अन्यत्र उक्तत्वात् च इति अलम्।**

ಇದರಿಂದ ಯಾವುದಾದರೊಂದು ಹೇತುವಿನಿಂದ ವಿಶ್ವದ ಸತ್ಯತೆಯನ್ನು ಸಾಧಿಸಿದಲ್ಲಿ, ಪ್ರಮಾಣವಿರುದ್ಧತ್ವವು ಉಪಾಧಿ ಎನಿಸುವದು. ಮತ್ತು ಅದನ್ನು (ಪ್ರಮಾಣವಿರುದ್ಧತ್ವವನ್ನು) ಸಾಧಿಸಿದರೆ ಸತ್ಯತ್ವವು ಉಪಾಧಿ ಎಂದು ಸ್ವವ್ಯಾಘಾತ ವೆಂದು ತಳ್ಳಿಹಾಕಲಾಯಿತು. ಅನುಕೂಲತರ್ಕ ಅಭಾವದಿಂದಲೇ ಇದನ್ನು ಆಶ್ರಯಿಸಲಾಗಿರುತ್ತದೆ. ಮಿಥ್ಯಾತ್ವ ಸತ್ಯತ್ವ ಸಾಧಕ ಅನುಮಾನಗಳಲ್ಲಿ ಅನುಕೂಲತರ್ಕ ಅಭಾವ, ಅಭಾವತೆಗಳನ್ನು ಬೇರೆ ಗ್ರಂಥಗಳಲ್ಲಿ ಹೇಳಲಾಗಿರುವದರಿಂದ ಈಗ ಇಲ್ಲಿಯೆ ಸಾಕು.

**॥ अन्योन्य उपाधि भावेन इति ॥**

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**तथा हि– अनुकूलतर्क अभावात् मित्रातनयत्वेन श्यामत्वे साध्ये शाकपाकजत्वं, तस्मिन् साध्ये श्यामत्वं उपाधिः इति अन्योन्य उपाधि भावेन अनुमानद्वयस्य आभासत्वम्।**

ಇದನ್ನು ಹೀಗೆ ವಿವರಿಸಬಹುದು: ಅನುಕೂಲತರ್ಕ ಇಲ್ಲದಾಗ, ಮಿತ್ರೆಯ ಶರೀರದಿಂದ ಕಪ್ಪುಬಣ್ಣ ಸಾಧ್ಯದಲ್ಲಿ ಕಾಯಿಪಲ್ಯಗಳ ಬೇಯಿಸುವದು (ಉಪಾಧಿ), ಇನ್ನು ಕಾಯಿಪಲ್ಯಗಳನ್ನು ಬೇಯಿಸುವದನ್ನು ಸಾಧಿಸುವಲ್ಲಿ ಕಪ್ಪುಬಣ್ಣ ಉಪಾಧಿ ಎಂದು ಅನ್ಯೋನ್ಯ ಉಪಾಧಿ ಭಾವದಿಂದ ಅನುಮಾನದ್ವಯಗಳಿಗೆ ಆಭಾಸತ್ವ ಉಂಟಾಗುತ್ತದೆ.

**तथा प्रकृत अनुमाने अनुकूलतर्क अभावात् दृश्यत्वेन मिथ्यात्व साध्ये प्रमाणविरुद्धत्वं उपाधिः तस्मिन् साध्ये मिथ्यात्वं इति अन्योन्य उपाधिभावेन अनुमानद्वयस्य अपि आभासत्वम्। युगपद् उभयसाधने तु अर्थान्तरम्। मिथ्यात्वे एव विप्रतिपत्तेः इति भावः।**

ಹಾಗೆಯೆ ಪ್ರಕೃತ ಅನುಮಾನದಲ್ಲಿ ಅನುಕೂಲತರ್ಕ ಇಲ್ಲವಾದ್ದರಿಂದ, ದೃಶ್ಯತ್ವ ಹೇತುವಿನಿಂದ ಮಿಥ್ಯಾತ್ವ ಸಾಧಿಸಿದಲ್ಲಿ ಪ್ರಮಾಣವಿರುದ್ಧತ್ವವು ಉಪಾಧಿ, ಇನ್ನು ಪ್ರಮಾಣವಿರುದ್ಧತ್ವ ಸಾಧಿಸಿದಲ್ಲಿ ಮಿಥ್ಯಾತ್ವವು ಉಪಾಧಿ ಎಂದು, ಅನ್ಯೋನ್ಯ ಉಪಾಧಿ ಭಾವದಿಂದ ಅನುಮಾನದ್ವಯಗಳಿಗೆ ಕೂಡಾ ಆಭಾಸತ್ವ ಉಂಟಾಗುತ್ತದೆ. ಇನ್ನು ಎರಡು



ಕೂಡಿ ಯುಗಪದವಾಗಿ ಉಭಯಗಳನ್ನು ಸಾಧಿಸಿದರೆ, ಅರ್ಥಾಂತರ ಹೇಳಬೇಕಾಗುತ್ತದೆ. ಮಿಥ್ಯಾತ್ವದಲ್ಲಿಯೆ ಶಂಕೆ ಹುಟ್ಟುತ್ತದೆ ಎಂಬ ಭಾವ.

**॥ आभासत्वात् इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**तथा च अन्योन्य उपाधिभावे मिथ्यात्व प्रमाणविरुद्धत्वयोः मध्ये कस्यापि सिद्धिः न स्यात् इति भावः।**

ಅದರಂತೆ, ಅನ್ಯೋನ್ಯ ಉಪಾಧಿಭಾವದಿಂದ ಮಿಥ್ಯಾತ್ವ ಪ್ರಮಾಣವಿರುದ್ಧತ್ವಗಳ ಮಧ್ಯದಲ್ಲಿ ಯಾವುದನ್ನು ಸಿದ್ಧಮಾಡಲಾಗುವದಿಲ್ಲ ಎಂಬ ಭಾವ.

### *१.३ प्रमाणविरुद्धत्वस्यैव मिथ्यात्वे प्रयोजकत्व समर्थनम्*

## टीका

**लोके च कस्यचित् अर्थस्य सत्यत्व मिथ्यात्वयोः विप्रतिपत्तौ दर्शनं सत्यतायां प्रमाणविरोधं मिथ्यात्वे अनुसरन्ति। ततो मिथ्यात्वे तदेव प्रयोजकम् इति ज्ञायते।**

ಮತ್ತು ಲೋಕದಲ್ಲಿ ಯಾವುದೊಂದು ಅರ್ಥಕ್ಕೆ ಸತ್ಯತ್ವ-ಮಿಥ್ಯಾತ್ವಗಳಲ್ಲಿ ವಿವಾದ ಉಂಟಾದಾಗ ಸತ್ಯತಾಗಳಲ್ಲಿಯ ಪ್ರಮಾಣವಿರೋಧವನ್ನು ಮಿಥ್ಯಾತ್ವದಲ್ಲಿ ಅನುಸರಿಸುತ್ತಾರೆ. ಆದ್ದರಿಂದ ಪ್ರಮಾಣವಿರುದ್ಧತ್ವರೂಪ ಉಪಾಧಿಯೇ ಪ್ರಯೋಜಕ, ದೃಶ್ಯತ್ವ ಹೇತು ಅಲ್ಲ ಎಂದು ತಿಳಿದುಬರುತ್ತದೆ.

### टिप्पणीनाम् विशेषार्थानि

**॥ लोके च इत्यादिना ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**मिथ्यात्वे प्रमाणविरुद्धत्वरूप उपाधिः एव प्रयोजको न दृश्यत्वहेतुः इति लोकानुभव सिद्धम्। अतो अयोजकः अयं दृश्यत्व हेतुः इत्याह्– लोके च इत्यादिना॥**

ಮಿಥ್ಯಾತ್ವದಲ್ಲಿ ಪ್ರಮಾಣವಿರುದ್ಧತ್ವರೂಪ ಉಪಾಧಿಯೇ ಪ್ರಯೋಜಕ, ದೃಶ್ಯತ್ವ ಹೇತು ಅಲ್ಲ ಎಂದು, ಲೋಕಾನುಭವದಿಂದ ಸಿದ್ಧವಾಗಿರುತ್ತದೆ. ಆದ್ದರಿಂದ ಈ ದೃಶ್ಯತ್ವ ಹೇತುವು ಇಲ್ಲಿ ಪ್ರಯೋಜಕವಲ್ಲ ಎಂದು ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**उपाधिः एव प्रयोजक इत्याह– लोक इत्यादिना॥**

ಇಲ್ಲಿ ಪ್ರಮಾಣವಿರುದ್ಧತ್ವರೂಪ ಉಪಾಧಿಯೇ ಪ್ರಯೋಜಕವಾಗಿರುತ್ತದೆ ಎಂದು ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ.

॥ प्रयोजक इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

प्रयोजकश्च उपाधिः इत्युच्यत इत्यर्थः।

ಅಂದರೆ ಉಪಾಧಿಯು ಪ್ರಯೋಜಕ ಎಂದು ಹೇಳುಲಾಗುತ್ತಿದೆ ಎಂದರ್ಥ.

## १०.अनुमान सम्बन्धिनि व्यवहृताः पदानां लक्षणकथनम्

### टीका

अत्र "आश्रयासिद्धः पक्षः", "सपक्ष अभावात् विरुद्धः" "असिद्धो हेतुः", "साध्यविकलो दृष्टान्तः" इति पक्षसपक्षविपक्षाः प्रतिज्ञा हेतु दृष्टान्ताश्च व्यवहृताः। न च पक्षादिस्वरूप अनवगतौ उक्तदोष स्पूर्तिः भवति इति क्रमेण तत् लक्षणानि आह–

ಈ ಗ್ರಂಥದಲ್ಲಿ "आश्रयासिद्धः पक्षः", "सपक्ष अभावात् विरुद्धः" "असिद्धो हेतुः", "साध्यविकलो दृष्टान्तः" ಎಂದು, ಪಕ್ಷ, ಸಪಕ್ಷ, ವಿಪಕ್ಷ, ಪ್ರತಿಜ್ಞಾ, ಹೇತು ಮತ್ತು ದೃಷ್ಟಾಂತ ಎಂಬ ಅನುಮಾನಕ್ಕೆ ಸಂಬಂಧಿತ ಪದಗಳನ್ನು ವ್ಯವಹರಿಸಲಾಗಿದೆ. ಈ ಪಕ್ಷಾದಿ ಪದಗಳ ಲಕ್ಷಣವನ್ನು ಸರಿಯಾಗಿ ಅವಗತ ಮಾಡದೆ, ಈ ಗ್ರಂಥದಲ್ಲಿ ಪ್ರತಿಪಾದಿಸಿದ ದೋಷಗಳು ಬುದ್ಧಿಗೆ ಹೊಳಿಯುವದಿಲ್ಲ ಎಂದು, ಶ್ರೀಮದಾಚಾರ್ಯರು ಈಗ ಕ್ರಮೇಣ ಆ ಪದಗಳ ಲಕ್ಷಣಗಳನ್ನು ವಿವರಿಸುತ್ತಾರೆ.

### टिप्पणीनाम् विशेषार्थानि

॥ अत्र इत्यादिना॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

उत्तरत्र भगवत्पादैः पक्षादीनां लक्षणं कथ्यते, तत् असङ्गतम्। पूर्वं पक्षादेः अप्रकृतत्वात् इति, अतः असङ्गति परिहाराय प्रकृतत्वं उपापादयति– अत्र इत्यादिना ॥

ಇನ್ನುಮುಂದೆ ಭಗವತ್ಪಾದರು ಪಕ್ಷಾದಿಗಳ ಲಕ್ಷಣವನ್ನು ಹೇಳುತ್ತಾರೆ, ಅದು ಅಸಂಗತವಾಗಿದೆ. ಪೂರ್ವದಲ್ಲಿ ಪಕ್ಷಾದಿಗಳ ಲಕ್ಷಣಾದಿಗಳನ್ನು ಹೇಳುವದು ಪ್ರಸಕ್ತವಾಗಿರಲಿಲ್ಲ ಎಂದು, ಆದ್ದರಿಂದ ಆ ಅಸಂಗತಿಯನ್ನು ಪರಿಹರಿಸಲು, ಈ ಟೀಕಾವಾಕ್ಯ ಅವುಗಳ ಲಕ್ಷಣವನ್ನು ಪ್ರತಿಪಾದಿಸುವ ಪ್ರಸಕ್ತಿಯನ್ನು ವಿವರಿಸುತ್ತದೆ.



यद्यपि विपक्षप्रतिज्ञे आचार्यैः न व्यवहृते।

ಹಾಗೆ ನೋಡಲಾಗಿ, ಶ್ರೀಮದಾಚಾರ್ಯರು ವಿಪಕ್ಷ, ಪ್ರತಿಜ್ಞಾ ಪದಗಳನ್ನು ವ್ಯವಹರಿಸಿಲ್ಲ.

तथापि आत्मनोऽपि दृश्यत्वात् इत्यत्र विपक्षस्य आत्मनोऽपि विवक्षितत्वात् स अपि अर्थात् व्यवहृतप्रायः।

ಹಾಗಿದ್ದರೂ, आत्मनोऽपि दृश्यत्वात् ಎಂಬಲ್ಲಿ ವಿಪಕ್ಷವಾದ ಆತ್ಮನು ಕೂಡ ವಿವಕ್ಷಿತವಾದ್ದರಿಂದ, ವಿಪಕ್ಷವನ್ನು ಕೂಡ ಅರ್ಥಾತ ವ್ಯವಹರಿತವಾದಂತಾಯಿತು.

जगतोऽभावात् आश्रयासिद्धः पक्ष इत्यादिना आश्रयासिध्यादिरूपं प्रतिज्ञादोष कथनेन अर्थात् प्रतिज्ञापि व्यवहृतप्राय इति द्रष्टव्यम्।

ಮತ್ತು, जगतोऽभावात् आश्रयासिद्धः पक्ष ಮುಂತಾದ ವಾಕ್ಯಗಳಲ್ಲಿ, ಆಶ್ರಯಾಸಿಧ್ಯಾದಿರೂಪ ಪ್ರತಿಜ್ಞಾ ದೋಷವನ್ನು ಪ್ರತಿಪಾದಿಸಿದ್ದರಿಂದ ಅರ್ಥಾತ್ ಪ್ರತಿಜ್ಞಾ ಪದವನ್ನು ವ್ಯವಹರಿಸದಂತಾಯಿತು ಎಂದು ತಿಳಿಯತಕ್ಕದ್ದು.

॥ पक्षसपक्षविपक्षाः प्रतिज्ञा हेतु दृष्टान्ताश्च व्यवहृता इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

यद्यपि विपक्षपदं प्रतिज्ञापदं च इह आचार्येण न प्रयुक्तं, तथापि आत्मनोऽपि दृश्यत्वात् इत्यत्र विपक्षस्य आत्मनोऽपि विवक्षितत्वात् विपक्षोऽपि व्यवहृतः।
तथा प्रतिज्ञादोषं आश्रयासिद्ध्यादिकं कथयता प्रतिज्ञापि अर्थात् व्यवहृता इति भावः।

ಹಾಗೆ ನೋಡಿದರೆ ಈ ಗ್ರಂಥದಲ್ಲಿ, ಶ್ರಿಮದಾಚಾರ್ಯರಿಂದ ವಿಪಕ್ಷ ಮತ್ತು ಪ್ರತಿಜ್ಞಾ ಪದಗಳನ್ನು ಪ್ರಯೋಗಿಸಲ್ಪಟ್ಟಿಲ್ಲ, ಹಾಗಿದ್ದರೂ, आत्मनोऽपि दृश्यत्वात् ಎಂಬಲ್ಲಿ ವಿಪಕ್ಷವಾದ ಆತ್ಮನು ಕೂಡ ವಿವಕ್ಷಿತವಾದ್ದರಿಂದ ವಿಪಕ್ಷ ಪದವನ್ನು ವ್ಯವಹರಿಸಲಾಗಿದೆ. ಅದರಂತೆ, ಪ್ರತಿಜ್ಞಾದೋಷಗಳಾದ ಆಶ್ರಯಾದಿಸಿದ್ಧಿ ಮುಂತಾದವುಗಳನ್ನು ಹೇಳುವಾಗ ಪ್ರತಿಜ್ಞಾ ಪದವನ್ನು ಕೂಡ ಅರ್ಥಾತ ವ್ಯವಹರಿಸಿದ್ದಾರೆ ಎಂಬ ಭಾವವಿರುತ್ತದೆ.

॥ व्यवहृता इति॥

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

यद्यपि प्रतिज्ञाविपक्षौ न आचार्यैः व्यवहृतौ तथापि आत्मनोऽपि दृश्यत्वात् इत्यत्र विपक्षस्य आत्मनोऽपि इति विवक्षितत्वात्, प्रतिज्ञादोषं कथयतः प्रतिज्ञाया अपि विवक्षितत्वात् प्रतिज्ञाविपक्षौ व्यवहृताभिप्रायौ इत्यभिप्रेत्य व्यवहृता इत्युक्तं इति द्रष्टव्यम्।

ಹಾಗೆ ನೋಡಿದರೆ ಇಲ್ಲಿ ಪ್ರತಿಜ್ಞಾ ಮತ್ತು ವಿಪಕ್ಷ ಪದಗಳು ಶ್ರೀಮದಾಚಾರ್ಯರಿಂದ ವ್ಯವಹರಿಸಲ್ಪಟ್ಟಿಲ್ಲ ಹಾಗಿದ್ದರೂ आत्मनोऽपि दृश्यत्वात् ಎಂಬಲ್ಲಿ ವಿಪಕ್ಷವಾದ ಆತ್ಮನು ಕೂಡ ವಿವಕ್ಷಿತವಾದ್ದರಿಂದ, ಪ್ರತಿಜ್ಞಾದೋಷವನ್ನು ಹೇಳುವಾಗ ಪ್ರತಿಜ್ಞಾ ಪದ ಕೂಡ ವಿವಕ್ಷಿತವಾದ್ದರಿಂದ ಪ್ರತಿಜ್ಞಾ ಮತ್ತು ವಿಪಕ್ಷ ಪದಗಳನ್ನು ವ್ಯವಹರಿಸಲಾಗಿದೆ ಎಂಬ ಅಭಿಪ್ರಾಯಮೆರೆಗೆ ಅವುಗಳನ್ನು ವ್ಯವಹೃತಾ ಎಂದು ಹೇಳಲಾಗಿದೆ ಎಂದು ತಿಳಿಯತಕ್ಕದ್ದು.

*१०.१ पक्षलक्षण कथनम्*

प्रपञ्चमिथ्यात्वानुमानखण्डनम्

**साध्यधर्मविशिष्टः पक्षः**

**ಸಾಧ್ಯಧರ್ಮದಿಂದ ವಿಶಿಷ್ಟವಾದುದು ಪಕ್ಷವೆನಿಸುತ್ತದೆ.**

**श्रीपद्मनाभतीर्थीयटीका**

**पक्षसपक्षादि व्यवहारार्थं पक्षादि स्वरूपं निर्दिशति- साध्यधर्म विशिष्टः पक्ष इत्यादिना॥**

ಪಕ್ಷ ಸಪಕ್ಷ ಮುಂತಾದ ಅನುಮಾನ ಸಂಬಂಧಿತ ಪದಗಳ ವ್ಯವಹಾರಕ್ಕಾಗಿ ಪಕ್ಷಾದಿ ಪದಗಳ ಸ್ವರೂಪವನ್ನು ಮುಂದಿನ ಕೆಲವೊಂದು ವಾಕ್ಯಗಳಿಂದ ತೋರಿಸುತ್ತಾರೆ

टीका

"यत् प्रतीतिः लिङ्गेन जनयितव्या स साध्यधर्मः" इति नास्ति कश्चित् क्षुद्रोपद्रवः। साध्यग्रहणं सपक्षादि व्यावृत्त्यर्थम्। "साध्य विशिष्टः" इत्येव उक्ते वस्तुतः अग्निविशिष्टस्य पर्वतस्य साध्यत्वात् तत् विशिष्टस्य अन्यस्य पक्षत्वं स्यात् तदर्थं धर्मग्रहणम्। धर्ममात्रस्य प्राग् एव सिद्धत्वात्, साध्यत्व अनुपपत्तेः विशिष्टग्रहणम्। तथाच साध्यत्वं धर्मस्य तत्सम्बन्धितया एव सिद्ध्यति। विशिष्टत्वं च धर्मधर्मि भावेन एव विवक्षितम्। न तु सम्बन्धमात्रेण। तेन साधन धर्मादौ अतिप्रसङ्ग अभावात् न तदर्थं धर्मि इति वक्तव्यम्।

"ಯಾವುದು ಪರಿಜ್ಞಾನ ಹೇತುವಿನಿಂದ ಹುಟ್ಟಿದ್ದು ಅದು ಸಾಧ್ಯಧರ್ಮವಾಗಿರುತ್ತದೆ" ಎಂದು ಇಲ್ಲಿಯಾವ ಕಿರುಕುಳ ಶಂಕೆಗಳಿಗೆ ಸ್ಥಾನವಿರುವದಿಲ್ಲ. ಇಲ್ಲಿ ಸಾಧ್ಯಪದವನ್ನು ಸಪಕ್ಷ ಮತ್ತು ವಿಪಕ್ಷಗಳಿಂದ ಪ್ರತ್ಯೇಕಿಸಲು ಗ್ರಹಿಸಲಾಗಿದೆ. ಇನ್ನು "साध्य विशिष्ट:" ಎಂದಿಷ್ಟೆ ಹೇಳಿದ್ದರೆ, ವಸ್ತುತಃ ಅಗ್ನಿವಿಶಿಷ್ಟ ಪರ್ವತವು ಕೂಡ ಸಾಧ್ಯವಾಗುವದರಿಂದ, ಅದರ ವಿಶಿಷ್ಟತ್ವವು ಅನ್ಯ ಅವಯವಗಳ ಪಕ್ಷತ್ವವಾಗುತ್ತದೆ, ಅದಕ್ಕಾಗಿ ಧರ್ಮಪದವನ್ನು ಗ್ರಹಿಸಲಾಗಿದೆ. ಧರ್ಮಮಾತ್ರವು ಮುಂಚೆಯೆ ಸಿದ್ಧವಾದ್ದರಿಂದ, ಅದರ ಸಾಧಯತ್ವವು ಯೋಗ್ಯವೆನಿಸುವದಿಲ್ಲ ಅದಕ್ಕಾಗಿ ವಿಶಿಷ್ಟ ಪದವನ್ನು ಗ್ರಹಿಸಲಾಗಿದೆ. ಅದರಂತೆ, ಸಾಧ್ಯತ್ವ ಧರ್ಮವು ಅದರ



ಸಂಬಂಧಿತವಾಗಿಯೆ ಸಿದ್ಧವಾಗುತ್ತದೆ. ಇಲ್ಲಿ ವಿಶಿಷ್ಟತ್ವವು ಧರ್ಮಧರ್ಮಿ ಭಾವದಿಂದಲೇ ವಿವಕ್ಷಿತವಾಗಿರುತ್ತದೆ ವಿನಹಾ ಕೇವಲ ಸಂಬಂಧಮಾತ್ರದಿಂದಲ್ಲ. ಇದರಿಂದ ಸಾಧನ ಧರ್ಮಾದಿಗಳಲ್ಲಿ ಅತಿವ್ಯಾಪ್ತಿ ಉಂಟಾಗುವದಿಲ್ಲ. ಅದಕ್ಕಾಗಿ ಧರ್ಮಿ ಪದವನ್ನು ಇಲ್ಲಿ ಇಡಬಾರದು.

टिप्पणीनाम् विशेषार्थानि

॥ यत् प्रतीतिः इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु साध्य शब्देन किम् सन्दिग्धो धर्मो विवक्षितः किम् वा परं प्रतिज्ञापनीयः। न तावत् सन्दिग्ध धर्मविशिष्टः पक्ष इत्याद्यो युक्तः। महानसे वह्ने प्रत्यक्ष सिद्धत्वेऽपि प्रत्यक्ष सिद्धमपि वह्निम् अनुमिनुयामिति अनुमित्सया यत् अनुमानं प्रवर्तते तदा तत् अनुमान पक्षीभूते महानसे अव्याप्तिः। सन्दिग्धधर्मविशिष्टत्व अभावेन पक्षत्व अभाव प्रसङ्गेन अव्यापकत्वात्। नापि परं प्रतिज्ञापनीय धर्मविशिष्टः पक्ष इति द्वितीयः। स्वार्थ अनुमाने पक्षे अव्याप्तेः। तत्र परस्यैव अभावात् इति क्षुद्रोपद्रव परिहाराय आह –यत् प्रतीतिः इति॥**

ಇಲ್ಲಿ ಸಾಧ್ಯ ಶಬ್ದದಿಂದ ಸಂದೇಹದಿಂದ ಕೂಡಿದ ಧರ್ಮ ವಿವಕ್ಷಿತವಾಗಿದೆಯೋ ? ಅಥವಾ ಬೆರೆ ಯಾವುದೊ ಪ್ರತಿಜ್ಞೆ ಮಾಡಲ್ಪಟ್ಟದ್ದು ಎಂದು? ಇನ್ನು ಸಂದಿಗ್ಧ ಧರ್ಮವಿಶಿಷ್ಟವಾದದ್ದು ಪಕ್ಷ ಎಂದು ಹೇಳಿರುವದಿಲ್ಲ ಆದ್ದರಿಂದ ಮೊದಲಿನ ವಿಕಲ್ಪ ಯುಕ್ತವಲ್ಲ. ಮಹಾನಸಾ ಅಂದರೆ ಅಡುಗೆಮನೆಯಲ್ಲಿ ಅಗ್ನಿಯು ಪ್ರತ್ಯಕ್ಷ ಸಿದ್ಧವಾಗಿದ್ದರೂ, ಪ್ರತ್ಯಕ್ಷ ಸಿದ್ಧವಾದ ಅಗ್ನಿಯನ್ನು ಅನುಮಾನಿಸಲಾಗುವದು ಎಂದು ಅನುಮಿತಿಯಿಂದ ಯಾವ ಅನುಮಾನವು ಪ್ರವರ್ತವಾಗುತ್ತದೊ ಆಗ ಆ ಅನುಮಾನದ ಪಕ್ಷವಾದ ಮಹಾನಸದಲ್ಲಿ ಅವ್ಯಾಪ್ತಿ ಉಂಟಾಗುತ್ತದೆ. ಏಕೆಂದರೆ ಅಲ್ಲಿ ಸಂದಿಗ್ಧ ಧರ್ಮವಿಶಿಷ್ಟತ್ವದ ಅಭಾವತೆಯಿಂದ ಪಕ್ಷತ್ವ ಅಭಾವ ಪ್ರಸಂಗದಿಂದ ಅವ್ಯಾಪಕತ್ವ ಉಂಟಾಗುತ್ತದೆ.

ಇನ್ನು ಪರರು ಪ್ರತಿಜ್ಞೆಯನ್ನು ಮಾಡಿದ ಧರ್ಮವಿಶಿಷ್ಟವಾದುದು ಪಕ್ಷ ಎಂದು ಹೇಳಿರುವದಿಲ್ಲ, ಆದ್ದರಿಂದ ಎರಡನೆ ವಿಕಲ್ಪವು ಸರಿಯಲ್ಲ. ಹಾಗೂ ಇದು ಸ್ವಾರ್ಥ ಅನುಮಾನದ ಪಕ್ಷದಲ್ಲಿ ಅವ್ಯಾಪ್ತಿಯನ್ನುಂಟು ಮಾಡುತ್ತದೆ. ಅಲ್ಲಿ ಬೆರೆಯದೆ ಇರುವದಿಲ್ಲ ತಾನೆ. ಇಂತಹ ಕಿರುಕುಳ ಸಂದೇಹಗಳನ್ನು ಈ ಟೀಕಾವಾಕ್ಯ ಪರಿಹರಿಸುತ್ತದೆ.

**तथा च लिङ्गजन्यप्रतीतिविषय धर्मस्यैव साध्यधर्म पदेन विवक्षितत्वात्। सिषाधयिषया प्रवृत्त अनुमान स्वार्थानुमान साध्ययोः अपि लिङ्गजन्यप्रतीतिविषयत्व सद्भावात् तत् विशिष्टत्वं उक्त अनुमानद्वय सम्बन्धिपक्षद्वयेऽपि अस्ति इति न अव्याप्तिरूप क्षुद्रोपद्रव इत्यर्थः।**

ಅದರಂತೆ, ಲಿಂಗಜನ್ಯಪ್ರತೀತಿವಿಷಯ ಅಂದರೆ ಹೇತುವಿನಿಂದ ಹುಟ್ಟಿದ ಪರಿಜ್ಞಾನವಿಷಯ, ಧರ್ಮವನ್ನೇ ಸಾಧ್ಯಧರ್ಮ ಪದದಿಂದ ಇಲ್ಲಿ ವಿವಕ್ಷಿತವಾಗಿರುತ್ತದೆ. ಸಾಧಿಸಲು ಪ್ರವೃತ್ತವಾದ ಅನುಮಾನ ಮತ್ತು ಸ್ವಾರ್ಥ ಅನುಮಾನಗಳ ಸಾಧ್ಯಗಳಲ್ಲಿ ಕೂಡ, ಲಿಂಗಜನ್ಯ

ಪ್ರತೀತಿ ವಿಷಯತ್ವ ಇರುವದರಿಂದ ಅದರ ವಿಶಿಷ್ಟತ್ವವು, ನಮೂದಿಸಿದ ಅನುಮಾನದ್ವಯ ಸಂಬಂಧಿತ ಪಕ್ಷಗಳಲ್ಲಿ ಕೂಡ ಇರುವದರಿಂದ, ಇಲ್ಲಿ ಅವ್ಯಾಪ್ತಿರೂಪ ಕಿರುಕುಳಗಳು ಉದ್ಭವಿಸುವದಿಲ್ಲ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**ननु एतत् लक्षणं सिषाधयिषया प्रवृत्त अनुमान पक्षे सिद्धधर्म वैशिष्ट्य सद्भावेन साध्यधर्म वैशिष्ट्य अभावात् अव्याप्तं इत्यत आह– यत् प्रतीतिः इति॥**

ಈ ಲಕ್ಷಣವು ಸಾಧಿಸಲು ಪ್ರವೃತ್ತ ಅನುಮಾನ ಪಕ್ಷದಲ್ಲಿ ಸಿದ್ಧಧರ್ಮ ವೈಶಿಷ್ಟ್ಯವಾಗಿ ಇರುವದರಿಂದ, ಅಲ್ಲಿ ಸಾಧ್ಯಧರ್ಮ ವೈಶಿಷ್ಟ್ಯ ಇಲ್ಲವಾದ್ದರಿಂದ ಅವ್ಯಾಪ್ತಿ ಉಂಟಾಗುವದು ಎಂಬುದಕ್ಕೆ ಉತ್ತರವಾಗಿ ಈ ಟೀಕಾವಾಕ್ಯವಿರುತ್ತದೆ

## ॥ नास्ति कश्चित् इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ

**साध्य शब्देन किम् सन्दिग्धो धर्मो विवक्षितः। किम् वा प्रतिज्ञापनीयः। अथ वा प्रमित्सितः। न आद्यः प्रमाण सम्प्लवादिना निश्चितेऽपि अनुमान प्रवृत्तेः अङ्गीकारात्। न द्वितीयः, स्वार्थानुमाने प्रयोज्यकर्तुः अभावेन प्रज्ञापन अभावात्। न तृतीयः अनिष्ट अनुमान अभाव प्रसङ्गात् इत्यादि रूप प्लवो नास्ति। लिङ्गजन्य प्रतीतिविषयधर्मस्य साध्यधर्म पदेन विवक्षितत्वात् इत्यर्थः।**

ಇಲ್ಲಿ ಸಾಧ್ಯ ಶಬ್ದದಿಂದ ಸಂದಿಗ್ಧ ಧರ್ಮ ವಿವಕ್ಷಿತವೊ? ಅಥವಾ ಬೇರೆಯವರಿಂದ ಪ್ರತಿಜ್ಞೆ ಮಾಡಿದ್ದೊ? ಪ್ರತ್ಯಕ್ಷಾದಿ ಪ್ರಮಾಣಗಳಿಂದ ಉಂಟಾದದ್ದೊ? ಮೊದಲನೆ ವಿಕಲ್ಪವು ಸರಿಯಲ್ಲ. ಏಕೆಂದರೆ, ಪ್ರಮಾಣದಲ್ಲಿ ಮುಳಿಗಿಹೋದ ವಾದಿಗಳು ನಿಶ್ಚಿತ ಧರ್ಮ ಕೂಡ ಅನುಮಾನ ಪ್ರವೃತ್ತವಾಗಬಹುದು ಎಂದು ಅಂಗೀಕರಿಸುತ್ತಾರೆ. ಇನ್ನು ಎರಡನೆ ವಿಕಲ್ಪವು ಕೂಡ ಸರಿಯಲ್ಲ ಸ್ವಾರ್ಥ ಅನುಮಾನವನ್ನು ಪ್ರಯೋಗಮಾಡುವವರು ಇಲ್ಲವಾದ್ದರಿಂದ ಅಲ್ಲಿ ಪ್ರಜ್ಞಾಪನ ಇರುವದಿಲ್ಲ. ಇನ್ನು ಮೂರನೆಯ ವಿಕಲ್ಪವು ಸರಿಯಲ್ಲ. ಏಕೆಂದರೆ, ಆಗ ಅನಿಷ್ಟ ಅನುಮಾನ ಇಲ್ಲವೆನ್ನುವ ಪ್ರಸಂಗ ಉಂಟಾಗುತ್ತದೆ. ಹೀಗೆ ಇಲ್ಲಿ ಮುಂತಾದ ಕಿರಿಕುಳಗಳಿಗೆ ಸ್ಥಾನವಿಲ್ಲ. ಇಲ್ಲಿ ಲಿಂಗಜನ್ಯ ಪ್ರತೀತಿ ವಿಷಯ ಧರ್ಮವು ಸಾಧ್ಯಧರ್ಮ ಪದದಿಂದ ವಿವಕ್ಷಿತವಾಗಿರುತ್ತದೆ ಎಂದರ್ಥ.

## ॥ सपक्षादि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ

**आदि पदेन विपक्ष ग्रहणम्। धर्मविशिष्टः पक्ष इत्युक्ते सपक्षे महानसे महासनत्वरूप धर्मविशिष्टत्वस्य, विपक्षे ह्रदत्वादि धर्मविशिष्टत्वस्य, सद्भावात् अतिव्याप्तिः स्यात् अतः साध्य इत्युक्तम्। तथा च सपक्षे न अतिव्याप्तिः। महानसनिष्ठे महानसत्वरूप धर्मे लिङ्गजन्यप्रतीतिविषयत्वरूप साध्यत्व अभावेन तत् विशिष्टत्व अभावात्। एवमेव विपक्षेपि न अतिव्याप्तिः। तत्र ह्रदत्वादि धर्मस्य निरुक्त साध्यत्व अभावेन तत् विशिष्टत्व अभावात् इत्यर्थः।**



ಇಲ್ಲಿ ಆದಿ ಪದದಿಂದ ವಿಪಕ್ಷವನ್ನು ಗ್ರಹಿಸಲಾಗಿದೆ. ಇನ್ನು धर्मविशिष्टः पक्ष ಎಂದು ಹೇಳಿದ್ದರೆ, ಸಪಕ್ಷವಾದ ಮಹಾನಸದಲ್ಲಿ ಮಹಾನಸತ್ವರೂಪ ಧರ್ಮವಿಶಿಷ್ಟತ್ವ, ವಿಪಕ್ಷದಲ್ಲಿ ಹೃದತ್ವಾದಿ ಧರ್ಮವಿಶಿಷ್ಟತ್ವ ಇರುವದರಿಂದ, ಅವುಗಳಲ್ಲಿ ಅತಿವ್ಯಾಪ್ತಿ ಉಂಟಾಗುತ್ತಿತ್ತು. ಆದ್ದರಿಂದ ಸಾಧ್ಯ ಎಂದು ಹೇಳಲಾಗಿದೆ. ಹಾಗೂ ಸಪಕ್ಷದಲ್ಲಿ ಅತಿವ್ಯಾಪ್ತಿ ಉಂಟಾಗುವದಿಲ್ಲ. ಮಹಾನಸನಿಷ್ಠ ಮಹಾನಸತ್ವರೂಪ ಧರ್ಮದಲ್ಲಿ ಲಿಂಗಜನ್ಯಪ್ರತೀತಿವಿಷಯತ್ವರೂಪ ಸಾಧ್ಯತ್ವ ಇಲ್ಲವಾದ್ದರಿಂದ ಅದರ ವಿಶಿಷ್ಟತ್ವ ಇರುವದಿಲ್ಲ. ಅದರಂತೆಯೆ ವಿಪಕ್ಷದಲ್ಲಿಯೂ ಅತಿವ್ಯಾಪ್ತಿ ಉಂಟಾಗುವದಿಲ್ಲ. ಅಲ್ಲಿ ಹೃದತ್ವಾದಿ ಧರ್ಮದ ನಿರುಕ್ತ ಅಂದರೆ ಮೇಲೆ ಹೇಳಿದ ಸಾಧ್ಯತ್ವ ಇಲ್ಲವಾದ್ದರಿಂದ ಅದರ ವಿಶಿಷ್ಟತ್ವ ಇರುವದಿಲ್ಲ ಎಂದರ್ಥ.

## ॥ अग्निविशिष्टस्य पर्वतस्य साध्यत्वात् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**अनन्तरं अपि शब्दः अध्याहार्यः। तथा च यथा अग्निः पर्वत सम्बन्धितया साध्यः एवं पर्वतः अपि अग्निसम्बन्धितया स साध्यः। अग्निपर्वतयोः स्वरूपमात्रस्य सिद्धत्वेपि विशिष्ट असिद्धेः उभयत्रापि समानत्वात्।**

**एवं च अग्निविशिष्ट पर्वतस्यापि साध्यत्वेन तत् विशिष्टस्य अन्यस्य तत् अवयवस्य पक्षत्वं स्यात्। अतः तत्र अतिव्याप्ति परिहाराय धर्मपदं दत्तम्। तथा च अग्निविशिष्टतया पर्वतस्य साध्यत्वेऽपि तस्य धर्मित्वेन धर्मत्व अभावात् न तत् विशिष्टस्य अन्यस्य पक्षत्वं इति न तत्र अतिव्याप्तिः इत्यर्थः।**

ಇಲ್ಲಿ अग्निविशिष्टस्य पर्वतस्य ಅನಂತರ ಅಪಿ ಶಬ್ದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಅದರಂತೆ, ಹೇಗೆ ಅಗ್ನಿ ಪರ್ವತದ ಸಂಬಂಧಿತವಾಗಿ ಸಾಧ್ಯವೆನಿಸುತ್ತದೆ, ಅದೇರೀತಿಯಲ್ಲಿ ಪರ್ವತಕೂಡ ಅಗ್ನಿ ಸಂಬಂಧಿತವಾಗಿ ಸಾಧ್ಯವೆನಿಸುತ್ತದೆ. ಅಗ್ನಿ ಪರ್ವತಗಳಲ್ಲಿ ಸ್ವರೂಪಮಾತ್ರದ ಸಿದ್ಧವಾಗಿದ್ದರೂ ವಿಶಿಷ್ಟ ಅಸಿದ್ಧವಾಗಿರುವದು ಉಭಯತ್ರಗಳಲ್ಲಿ ಕೂಡ ಸಮಾನವಾಗಿರುತ್ತದೆ.

ಅದರಂತೆ, ಅಗ್ನಿವಿಶಿಷ್ಟ ಪರ್ವತವೂ ಕೂಡ ಸಾಧ್ಯತ್ವ ಆಗಿರುವದರಿಂದ ಅದರ ವಿಶಿಷ್ಟವು, ಅದರ ಅನ್ಯ ಅವಯವದ ಪಕ್ಷತ್ವವಾಗುತ್ತದೆ. ಆದ್ದರಿಂದ ಅಲ್ಲಿ ಅತಿವ್ಯಾಪ್ತಿಯನ್ನು ಪರಿಹರಿಸಲು ಧರ್ಮ ಪದವನ್ನು ಇಡಲಾಗಿದೆ. ಅದರಂತೆ, ಅಗ್ನಿವಿಶಿಷ್ಟವಾದ ಪರ್ವತವು ಸಾಧ್ಯತ್ವವೆನಿಸಿದರೂ ಅದು ಧರ್ಮಿ ಎನಿಸುವದರಿಂದ, ಧರ್ಮತ್ವ ಇಲ್ಲವಾದ್ದರಿಂದ, ಅದರ ವಿಶಿಷ್ಟತ್ವ ಅನ್ಯದ ಪಕ್ಷತ್ವವಾಗುವದಿಲ್ಲ ಎಂದು, ಅಲ್ಲಿ ಅತಿವ್ಯಾಪ್ತಿ ಉಂಟಾಗುವದಿಲ್ಲ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**यथा अग्निः पर्वतसम्बन्धितया साध्यः तथा पर्वतेऽपि अग्नि सम्बन्धितया साध्यः। स्वरूपमात्र सिद्धौ अपि विशिष्ट असिद्धेः उभयत्र समत्वात् इत्यर्थः। एवं च अग्निविशिष्टस्य पर्वतस्यापि इति**

अपि शब्द अध्याहारेण योज्यम्। अन्यथा साध्यत्वं धर्मस्य तत् सम्बन्धितया एव इति उत्तरग्रन्थ विरोधात्।

ಹೇಗೆ ಅಗ್ನಿಯು ಪರ್ವತದ ಸಂಬಧಿತವಾಗಿ ಸಾಧ್ಯವೆನಿಸುತ್ತದೊ, ಹಾಗೆಯೆ ಪರ್ವತವು ಕೂಡ ಅಗ್ನಿ ಸಂಬಂಧಿತವಾಗಿ ಸಾಧ್ಯವಿನಿಸುತ್ತದೆ. ಇಲ್ಲಿ ಸ್ವರೂಪ ಮಾತ್ರ ಸಿದ್ಧವಾದರೂ ಕೂಡ ವಿಶಿಷ್ಟ ಅಸಿದ್ಧವಾಗಿರುವದು ಉಭಯತ್ರರಿಗೆ ಸಮವಾಗಿರುತ್ತದೆ ಎಂದರ್ಥ. ಅದರಂತೆ ಅಗ್ನಿವಿಶಿಷ್ಟ ಪರ್ವತವು ಕೂಡ ಎಂದು, अपि ಶಬ್ದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಅನ್ಯಥಾ ಸಾಧ್ಯತ್ವ ಧರ್ಮವು ಅದರ ಸಂಬಂಧವಾಗಿಯೆ ಇರುತ್ತದೆ ಎಂದು ಹೇಳುವ ಉತ್ತರ ಗ್ರಂಥದ ವಿರೋಧ ಉಂಟಾಗುತ್ತದೆ.

## ॥ धर्ममात्रस्य इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

विशिष्ट पदकृत्यं आह– धर्ममात्रस्य इति॥

साध्यत्व अनुपपत्तेः इति उपलक्षणम्। पक्षत्व अनुपपत्तेश्च इत्यपि द्रष्टव्यम्। तथा साध्यधर्मः पक्षः इत्येव उक्ते वन्हिरूप धर्मस्य एतत् अनुमानात् प्राक् यत्र कुत्रचित् सिद्धत्वेन लिङ्गजन्यप्रतीतिविषयत्वरूप साध्यत्व अनुपपत्तेः साध्यपद धर्मपदयोः विशेषण विशेष्य भाव अनुपपत्तिः। तस्य धर्मस्य पक्षत्व अभावात् असंभवश्च स्यात्। असत् परिहाराय विशिष्ट ग्रहणं कृतम् इत्यर्थः।

ಈ ಟೀಕಾವಾಕ್ಯ ವಿಶಿಷ್ಟ ಶಬ್ದದ ಪದಕೃತ್ಯಮಾಡುತ್ತದೆ.

ಇಲ್ಲಿ साध्यत्व अनुपपत्तेः ಯು ಉಪಲಕ್ಷಣವಾಗಿರುತ್ತದೆ. ಇದರಿಂದ ಪಕ್ಷತ್ವವು ಕೂಡ ಯುಕ್ತಿಹೀನ ಅಥವಾ ಯುಕ್ತಿ ಇಲ್ಲದ್ದಾಗಿದೆ ಎಂದು ಕೂಡ ತಿಳಿಯತಕ್ಕದ್ದು. ಅದರಂತೆ साध्यधर्मः पक्षः ಎಂದಿಷ್ಟೆ ಹೇಳಿದ್ದರೆ, ಅಗ್ನಿರೂಪ ಧರ್ಮದ ಈ ಅನುಮಾನದ ಮುಂಚೆಯೆ ಎಲ್ಲಿಯಾದರೂ ಸಿದ್ಧವಾಗಿರುವದರಿಂದ, ಲಿಂಗಜನ್ಯ ಪ್ರತೀತಿವಿಷಯತ್ವರೂಪ ಸಾಧ್ಯತ್ವ ಯುಕ್ತಿ ಇಲ್ಲದ್ದಾಗಿರುವದರಿಂದ, ಸಾಧ್ಯಪದ ಹಾಗೂ ಧರ್ಮಪದಗಳಲ್ಲಿ ವಿಶೇಷಣ ವಿಶೇಷ್ಯಭಾವ ಸಂಬಂಧವಿಲ್ಲದ್ದಗಿದೆ. ಮತ್ತು ಆ ಧರ್ಮದ ಪಕ್ಷತ್ವ ಇಲ್ಲವಾದ್ದರಿಂದ ಅದು ಅಸಂಭವಾವಗಿದೆ. ಈ ಅಸತ್ ಪರಿಹಾರಕ್ಕಗಿ ವಿಶಿಷ್ಟ ಪದವನ್ನು ಗ್ರಹಿಸಲಾಗಿದೆ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆಃ

साध्य धर्मो यस्य इति बहुव्रीहि विग्रह आश्रयणेन साध्यधर्म विशिष्ट लाभ संभवेपि यत् विशिष्ट ग्रहणं तत् प्रयोजनम् आह– धर्ममात्रस्य इति॥

ಯಾವುದರ ಸಾಧ್ಯ ಧರ್ಮ ಎಂದು ಬಹಿವ್ರೀಹಿ ಸಮಾಸ ವಿಗ್ರಹದ ಆಶ್ರಯದಿಂದ ಸಾಧ್ಯಧರ್ಮ ವಿಶಿಷ್ಟದ ಲಾಭ ಸಂಭವಿಸಿದರೂ, ವಿಶಿಷ್ಟ ಪದದ ಗ್ರಹಣದ ಪ್ರಯೋಜನವನ್ನು ಈ ಟೀಕಾವಾಕ್ಯ ವಿವರಿಸುತ್ತದೆ.

## ॥ तथाच साध्यत्वं इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:



पर्वतस्य साध्यधर्म विशिष्टत्व उक्त्या वह्निरूपधर्ममात्रस्य प्राग् एव सिद्धत्वात् न स्वरूपेण तस्य साध्यत्वम्। किन्तु पर्वत सम्बन्धितत्वेन। तस्य च पूर्व सिद्धत्वात् लिङ्गजन्य प्रतीतिविषयत्वरूपं साध्यत्वं युक्तं इति विशेषण विशेष्यभावो युक्त इति विशिष्ट ग्रहणेन सूचितम्। तेन असम्भवश्च परिहृतो द्रष्टव्यः।

ಇನ್ನು पर्वतस्य साध्यधर्म विशिष्टत्व ಎಂದು ಹೇಳುವದರಿಂದ ಅಗ್ನಿರೂಪ ಧರ್ಮಮಾತ್ರವು ಮುಂಚೆಯೆ ಸಿದ್ಧವಾಗಿದ್ದರಿಂದ, ಅದನ್ನು ಸ್ವರೂಪದಿಂದ ಸಾಧಿಸುವದಲ್ಲ ಕಿಂತು ಪರ್ವತ ಸಂಬಂಧಿತವಾಗಿ ಸಾಧಿಸುವದು. ಹಾಗೂ ಅದು ಪೂರ್ವದಲ್ಲಿ ಸಿದ್ಧವಾದ್ದರಿಂದ ಲಿಂಗಜನ್ಯಪ್ರತೀತಿವಿಷಯತ್ವರೂಪ ಸಾಧ್ಯತ್ವವು ಯುಕ್ತವಾಗಿದೆಂದು, ವಿಶೇಷಣ ವಿಶೇಷ್ಯಭಾವವು ಯುಕ್ತವಾಗಿದೆ ಎಂದು ವಿಶಿಷ್ಟ ಪದ ಗ್ರಹಣವು ಸೂಚಿಸುತ್ತದೆ. ಇದರಿಂದ ಅಸಂಭವತೆಯನ್ನು ಪರಿಹರಿಸಿದಂತಾಯಿತು ಎಂದು ತಿಳಿಯಬೇಕು.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

यद्यपि साध्यो धर्मो यस्य इति बहुव्रीहि आश्रयितुं शक्यत्वात् विशिष्ट ग्रहणं न लक्षणान्तर्गतम्। तथापि धर्मस्य न स्वरूपेण साध्यत्वं इत्यर्थ सूचकत्वात् विशिष्टग्रहणं सार्थकं इत्यर्थः।

ಹಾಗೆ ನೋಡಲಾಗಿ, ಯಾವುದರ ಸಾಧ್ಯ ಧರ್ಮವೊ ಎಂದು ಬಹುವ್ರೀಹಿ ಸಮಾಸ ವಿಗ್ರಹವನ್ನು ಆಶ್ರಯಿಸುವದು ಶಕ್ಯವಾಗಿರುವದರಿಂದ ವಿಶಿಷ್ಟ ಗ್ರಹಣವು ಲಕ್ಷಣಾಂತರವೆನಿಸುವದಿಲ್ಲ. ಹಾಗಿದ್ದರೂ ಇಲ್ಲಿ ಧರ್ಮದ ಸ್ವರೂಪದಿಂದ ಸಾಧಿಸುವದು ಅಪೇಕ್ಷಿತವಲ್ಲ ಎಂದು ಸೂಚಿಸಲು ವಿಶಿಷ್ಟ ಪದ ಗ್ರಹಣ ಸಾರ್ಥಕವಾಗಿದೆ ಎಂದರ್ಥ.

## ॥ विशिष्टत्वं च इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

अत्र साध्यधर्मं विशिष्टत्वं नाम साध्यधर्मसम्बन्धित्वमात्रम्। तच्च व्याप्यव्यापकभाव सम्बन्धेन साधनरूपधर्मस्यापि अस्ति इति तत्र अतिप्याप्तिः स्यात् तदर्थं कैश्चित् धर्मिग्रहणं कृतम्। यथा आह– पक्षः साध्यान्वितो धर्मि इति। सन्दिग्धसाध्यधर्म धर्मी पक्षः इति च।

ಇಲ್ಲಿ ಸಾಧ್ಯಧರ್ಮ ವಿಶಿಷ್ಟತ್ವವು ಸಾಧ್ಯಧರ್ಮ ಸಂಬಂಧಿತಮಾತ್ರವಾಗಿರುತ್ತದೆ. ಮತ್ತು ಅದು ವ್ಯಾಪ್ಯವ್ಯಾಪಕಭಾವ ಸಂಬಂಧದಿಂದ ಸಾಧನರೂಪಧರ್ಮಕೂಡ ಇರುತ್ತದೆ ಎಂದು ಅಲ್ಲಿ ಅತಿವ್ಯಾಪ್ತಿ ಆಗುತ್ತದೆ, ಅದಕ್ಕಾಗಿ ಕೆಲವರು ಇಲ್ಲಿ ಧರ್ಮಿ ಪದವನ್ನು ಗ್ರಹಿಸುದ್ದುಂಟು. ಅವರು ಪಕ್ಷದ ಲಕ್ಷಣ ಹೀಗೆ ಹೇಳುತ್ತಾರೆಃ ಪಕ್ಷವು ಸಾಧ್ಯದಿಂದಕೂಡಿದ ಧರ್ಮಿ ಆಗಿರುತ್ತದೆ. ಮತ್ತು ಸಂದಿಗ್ಧಸಾಧ್ಯಧರ್ಮದಿಂದ ಕೂಡಿದ ಧರ್ಮಿ ಪಕ್ಷವಿನಿಸುತ್ತದೆ ಎಂದು.

तथा च धर्मधर्मिभावेन एव साध्यधर्मसम्बन्धित्वस्य विवक्षितत्वात् साधने च साध्येन सहधर्मधर्मिभाव सम्बन्ध अभावात् धर्मिग्रहणेन तत्र अतिव्याप्ति परिहारः कृतः। स न कर्तव्यः इत्याह– विशिष्टत्वं च ॥

ಅದರಂತೆ ಧರ್ಮಧರ್ಮಿ ಭಾವದಿಂದಲೇ ಸಾಧ್ಯಧರ್ಮ ಸಂಬಂಧಿತ್ವವು ವಿವಕ್ಷಿತವಾಗಿರುವದರಿಂದ ಸಾಧನ ಮತ್ತು ಸಾಧ್ಯಗಳ ಸಹಧರ್ಮಧರ್ಮಿಭಾವ ಸಂಬಂಧ

ಇರುವದಿಲ್ಲ, ಆದ್ದರಿಂದ ಧರ್ಮಿ ಪದಗ್ರಹಣದಿಂದ ಅಲ್ಲಿ ಅತಿವ್ಯಾಪ್ತಿಯ ಪರಿಹಾರ ಮಾಡಲಾಗಿದೆ. ಅದನ್ನು ಮಾಡುವದು ಕಾರಣವಿಲ್ಲ ಎಂದು ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**साध्यधर्म विशिष्टत्वं साध्यधर्म सम्बन्धित्वम्। तच्च व्याप्यतया साधनस्य अपि अस्ति इति तत्र अतिव्याप्ति परिहारार्थं कैश्चित् धर्मिग्रहणम् कृतम्। तत् न कर्तव्य इति आह– विशिष्टत्वं च इति॥**

ಸಾಧ್ಯಧರ್ಮ ವಿಶಿಷ್ಟವಾದುದು ಎಂದರೆ ಸಾಧ್ಯಧರ್ಮ ಸಂಬಂಧಿತವಾದುದು ಎಂದರ್ಥ. ಮತ್ತು ಅದು ವ್ಯಾಪ್ಯದ ಮೂಲಕ ಸಾಧನದ ಕೂಡ ಆಗಿರುತ್ತದೆ ಎಂದು ಅಲ್ಲಿ ಅತಿವ್ಯಾಪ್ತಿಯನ್ನು ಪರಿಹರಿಸಲು ಕೆಲವರು ಧರ್ಮಿಪದವನ್ನು ಇಲ್ಲಿ ಗ್ರಹಿಸುತ್ತಾರೆ. ಅದು ಹಾಗೆ ಮಾಡಬಾರದು ಎಂದು ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ.

### ॥ विवक्षितम् इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**धर्मिग्रहणं कुर्वता अपि अवश्यं साध्यविशिष्ट शब्देन साध्येन धर्मितया सम्बन्धित्वं विवक्षित्व एव अतिव्याप्तिः परिहरणिया। न तु धर्मिग्रहणेन। साधनस्यापि स्वनिष्ठ धर्मं प्रति धर्मित्वात् इत्यर्थः।**

ಇಲ್ಲಿ ಧರ್ಮಿ ಪದವನ್ನು ಗ್ರಹಣವನ್ನು ಮಾಡಿದರೂ ಕೂಡ ಅವಶ್ಯವಾಗಿ ಸಾಧ್ಯವಿಶಿಷ್ಟ ಶಬ್ದದಿಂದಲೇ ಸಾಧ್ಯದ ಧರ್ಮಿತನ ಸಂಬಂಧಿತ್ವ ವಿವಕ್ಷತೆಯಿಂದಲೇ ಅತಿವ್ಯಾಪ್ತಿಯನ್ನು ಪರಿಹರಿಸಬೇಕು ವಿನಹ ಧರ್ಮಿಪದ ಗ್ರಹಣದಿಂದ ಅಲ್ಲ. ಸಾಧನವು ಕೂಡ ಸ್ವನಿಷ್ಠ ಧರ್ಮಪ್ರತಿ ಧರ್ಮಿಯಾಗಿರುತ್ತದೆ ಎಂದರ್ಥ.

### ॥ सम्बन्धमात्रेण इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**सम्बन्धमात्रेण– व्याप्यव्यापकभावादि सम्बन्धमात्रेण।**

ಇಲ್ಲಿ सम्बन्धमात्रेण ಎಂದರೆ ವ್ಯಾಪ್ಯವ್ಯಾಪಕಭಾವಾದಿ ಸಂಬಂಧಮಾತ್ರದಿಂದ ಎಂದರ್ಥ.

### ॥ तेन इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**धर्मधर्मिभावरूप सम्बन्ध अभिप्रायकेण विशिष्ट पदेन इत्यर्थः।**

ಅಂದರೆ ಧರ್ಮಧರ್ಮಿರೂಪ ಸಂಬಂಧ ಅಭಿಪ್ರಾಯಕ ವಿಶಿಷ್ಟ ಪದದಿಂದ ಎಂದರ್ಥ.

### ॥ अतिप्रसङ्ग इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**अतिव्याप्ति इत्यर्थः।**

ಅಂದರೆ ಅತಿವ್ಯಾಪ್ತಿ ಎಂದರ್ಥ.



### ॥ वक्तव्यम् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**धर्मिपदं न पृथक् दातव्यं इत्यर्थः।**

ಅಂದರೆ, ಧರ್ಮಿ ಪದವನ್ನು ಪ್ರತ್ಯೇಕವಾಗಿ ಇಡುವ ಕಾರಣವಿಲ್ಲ ಎಂದರ್ಥ.

## *१०.२ सपक्षलक्षण कथनम्*

प्रपञ्चमिथ्यात्वानुमानखण्डनम्

**साध्यसमानधर्मविशिष्टः सपक्षः।**

**ಸಾಧ್ಯದಂತಿರುವ ಧರ್ಮವುಳ್ಳದ್ದು ಸಪಕ್ಷ.**

### टीका

**पक्षविपक्षयोः अपि समानधर्म विशिष्टत्वात् तत् व्युदासार्थं साध्यग्रहणम्। समान ग्रहणं च पक्ष व्युदासार्थम्। समानत्वं च साध्यत्वं अपहाय साक्षात् एव इति न अतिप्रसङ्गः। शेषं पूर्ववत्।**

ಪಕ್ಷವಿಪಕ್ಷಗಳು ಕೂಡ ಸಮಾನ ಧರ್ಮಗಳನ್ನು ಹೊಂದಿರುತ್ತವೆ ಅವುಗಳನ್ನು ತಳ್ಳಿಹಾಕಲು ಸಾಧ್ಯ ಪದವನ್ನು ಗ್ರಹಿಸಲಾಗಿದೆ. ಮತ್ತು ಸಮಾನ ಪದವನ್ನು ಪಕ್ಷವನ್ನು ತಿರಸ್ಕರಿಸಲು ಇಡಲಾಗಿದೆ. ಮತ್ತು ಸಮಾನತ್ವವು ಸಾಧ್ಯತ್ವದ ಹೊರತಾಗಿ ಸಾಕ್ಷಾತ್ತವೇ ಆಗಿರುತ್ತದೆ, ಆದ್ದರಿಂದ ಇಲ್ಲಿ ಅತಿಪ್ರಸಂಗಕ್ಕೆ ಸ್ಥಾನವಿರುವದಿಲ್ಲ. ಇನ್ನು ಉಳಿದ ಪದಗಳ ಪದಕೃತ್ಯ ಪೂರ್ವದಲ್ಲಿಯಂತೆ ತಿಳಿಯಬೇಕು.

### टिप्पणीनाम् विशेषार्थानि

### ॥ पक्षविपक्षयोः इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**द्रव्यत्व प्रमेयत्वादिरूप सपक्षसमान धर्मविशिष्टत्वात् अतिव्याप्तिः इत्यर्थः।**

ಅಂದರೆ, ದ್ರವ್ಯತ್ವ ಪ್ರಮೇಯತ್ವಾದಿರೂಪ ಸಪಕ್ಷಸಮಾನ ಧರ್ಮಗಳುಳ್ಳದಾಗಿರುತ್ತವೆ. ಆದ್ದರಿಂದ ಅಲ್ಲಿ ಅತಿವ್ಯಾಪ್ತಿ ಉಂಟಾಗುತ್ತದೆ ಎಂದರ್ಥ.

### ॥ समान इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**साध्यधर्मविशिष्टः सपक्ष इत्युक्ते पक्षे अतिव्याप्तिः तदर्थं समान ग्रहणं कृतम् इत्याह– समान इति॥**

ಇಲ್ಲಿ, साध्यधर्मविशिष्ट: सपक्ष ಎಂದಿಷ್ಟೆ ಹೇಳಿದ್ದರೆ, ಪಕ್ಷದ ಲಕ್ಷಣದಲ್ಲಿ ಅತಿವ್ಯಾಪ್ತಿ ಉಂಟಾಗುತ್ತಿತ್ತು ಅದಕ್ಕಾಗಿ ಸಮಾನ ಪದದ ಗ್ರಹಣವನ್ನು ಮಾಡಲಾಗಿದೆ ಎಂದು ಈ ಟೀಕಾವಾಕ್ಯ ಸ್ಪಷ್ಟಪಡಿಸುತ್ತದೆ.

**तस्य साध्य धर्मेण एव विशिष्टतया समानधर्म विशिष्टत्व अभावात् न अतिव्याप्तिः इत्यर्थः।**

ಇನ್ನು ಸಾಧ್ಯಧರ್ಮವನ್ನೇ ಉಳ್ಳದ್ದಾಗಿರುವಾಗ ಸಮಾನಧರ್ಮ ಉಳ್ಳದ್ದಾಗಿರಲು ಸಾಧ್ಯವಿಲ್ಲ ಆದ್ದರಿಂದ ಅಲ್ಲಿ ಅತಿವ್ಯಾಪ್ತಿ ಉಂಟಾಗುವದಿಲ್ಲ ಎಂದರ್ಥ.

## ॥ समानत्वं च इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु साध्यग्रहणे न कथं पक्षविपक्षयोः अतिव्याप्ति परिहारः। द्रव्यत्व प्रमेयत्वादेः अपि साध्यसमान धर्मत्वेन तद्विशिष्टत्वस्य तयोः अपि सद्भावात्। किं च सपक्षगत धर्मस्य साध्यसमान धर्मत्वं सर्वथा विवक्षितम् उत यथाकथंचित्। न आद्यः, सन्दिग्धत्वादिना साध्यसमानत्वस्य महानसगत अग्निरूपधर्मे अभावात् असंगतः स्यात्। न द्वितीयः, अग्नि अभावस्यापि प्रमेयत्वादिना साध्यसमानत्वेन विपक्षस्यापि सपक्षत्व प्रसङ्गात् इत्यत आह– समानत्वं च इति॥**

ಇಲ್ಲಿ ಸಾಧ್ಯ ಪದ ಗ್ರಹಿಸುವದರಿಂದ ಪಕ್ಷವಿಪಕ್ಷಗಳಲ್ಲಿ ಬರುವ ಅತಿವ್ಯಾಪ್ತಿ ಹೇಗೆ ಪರಿಹಾರವಾಯಿತು? ದ್ರವ್ಯತ್ವ ಪ್ರಮೆಯತ್ವಾದಿಗಳು ಕೂಡ ಸಾಧ್ಯಸಮಾನ ಧರ್ಮಗಳಾಗುವವದರಿಂದ ಅವುಗಳುಳ್ಳವದು ಅವುಗಳಲ್ಲಿ (ಪಕ್ಷವಿಪಕ್ಷಗಳಲ್ಲಿ) ಕೂಡ ಇರುತ್ತವೆ. ಮತ್ತು ಸಪಕ್ಷಗತ ಧರ್ಮದ ಸಾಧ್ಯಸಮಾನ ಧರ್ಮತ್ವವು ಸರ್ವಥಾ ವಿವಕ್ಷಿತವಾಗಿದೆಯೋ? ಅಥವಾ ಕೆಲವಂದಿಷ್ಟುಮಾತ್ರವೊ? ಮೊದಲನೆಯ ವಿಕಲ್ಪವು ಸರಿಯಲ್ಲಃ ಸಂದಿಗ್ಧತ್ವಾದಿ ಸಾಧ್ಯಸಮಾನತ್ವದ ಮಹಾನಸಗತ ಅಗ್ನಿರೂಪ ಧರ್ಮದಲ್ಲಿ ಇರುವದಿಲ್ಲವಾದ್ದರಿಂದ ಅದು ಅಸಂಗತವೆನಿಸುತ್ತದೆ. ಇನ್ನು ಎರಡನೆ ವಿಕಲ್ಪಕೂಡ ಸರಿಯಲ್ಲ, ಅಗ್ನಿ ಅಭಾವವು ಕೂಡ ಪ್ರಮೇಯತ್ವಾದಿಯಂತೆ ಸಾಧ್ಯಸಮಾನವಾದ್ದರಿಂದ ವಿಪಕ್ಷವು ಕೂಡ ಸಪಕ್ಷವಾಗುವ ಪ್ರಸಂಗ ಉಂಟಾಗುತ್ತದೆ. ಇಂತಹ ಶಂಕೆಗಳನ್ನು ಪರಿಹರಿಸಲೆಂದೆ ಈ ಟೀಕಾವಾಕ್ಯ ಇರುತ್ತದೆ.

**साध्यत्वं सन्दिग्धत्वम् उपलक्षणम् एतत्। द्रव्यत्वप्रमेयत्वादिकम् अपि द्रष्टव्यम्।**

ಸಾಧ್ಯತ್ವವು ಎಂದರೆ ಸಂದಿಗ್ಧತ್ವ, ಇದು ಉಪಲಕ್ಷಣವಾಗಿದೆ. ಹಾಗೆಯೆ ದ್ರವ್ಯತ್ವ ಪರಮೆಯತ್ವಾದಿಗಳು ಉಪಲಕ್ಷಣ ಎಂದು ತಿಳಿಯಬೇಕು

**अयं भावः– सपक्षगत वह्निरूपधर्मस्य साध्यसमानत्वम्। साक्षात् व्यापकता अवच्छेदकभूतं यत् वह्नित्वं तेनैव विवक्षितम्। न अन्येन। न हि वह्निगतधूम व्यापकता अवच्छेदकं द्रव्यत्वप्रमेयत्वादिकं भवितुं अर्हति। धूमव्यापके घटादौ विद्यमानत्वेन अतिप्रसक्तस्य अवच्छेदकत्व अभावात्। तथा च न असम्भवः। न पक्षे अतिव्याप्तिः। तत्र व्यापकता अवच्छेदकीभूत वह्नित्वविशिष्ट वह्नेः एव सत्वेन तत् समानधर्म विशिष्टत्व अभावात्। नापि विपक्षे अतिव्याप्तिः। वह्नित्व अवच्छिन्नपक्षीय वह्निसमान वह्निरूप धर्मविशिष्टत्व अभावात्। तथा च न कः अपि अतिप्रसङ्गः इति।**



ಇಲ್ಲಿ ಈ ಭಾವವಿರುತ್ತದೆಃ ಸಪಕ್ಷಗತ ಅಗ್ನಿರೂಪ ಧರ್ಮದ ಸಾಧ್ಯಸಮಾನತ್ವವು ಸಾಕ್ಷಾತ್ ವ್ಯಾಪಕತಾ ಅವಚ್ಛೇದಕಭೂತ ಯಾವುದು ಅಗ್ನಿಯೊ ಅದೇ ವಿವಕ್ಷಿತವಾಗಿರುತ್ತದೆ ವಿನಹಾ ಬೇರೆದು ಅಲ್ಲ. ಇಲ್ಲಿ ಅಗ್ನಿಗತಧೂಮ ವ್ಯಾಪಕತಾ ಅವಚ್ಛೇದಕವು ದ್ರವ್ಯತ್ವ ಪ್ರಮೇಯತ್ವಾದಿಗಳಿಗೆ ಇರಲು ಸಾಧ್ಯವಿಲ್ಲ. ಧೂಮವ್ಯಾಪಕತ್ವವು ಘಟಾದಿಗಳಲ್ಲಿ ವಿದ್ಯಮಾನವಾದ್ದರಿಂದ ಅತಿಪ್ರಸಕ್ತದ ಅವಚ್ಛೇದಕತ್ವ ಇರುವದಿಲ್ಲ. ಅದರಂತೆ ಅದು ಅಸಂಭವವೆನಿಸುವದಿಲ್ಲ. ಹಾಗೆಯೆ ಪಕ್ಷದಲ್ಲಿ ಅತಿವ್ಯಾಪ್ತಿ ಉಂಟಾಗುವದಿಲ್ಲ. ಅಲ್ಲಿ ವ್ಯಾಪಕತಾ ಅವಚ್ಛೇದಕೀಭೂತ ಅಗ್ನಿವಿಶಿಷ್ಟ ಅಗ್ನಿಯೇ ಸತ್ಯವಾದ್ದರಿಂದ, ಅದರ ಸಮಾನಧರ್ಮ ವಿಶಿಷ್ಟತ್ವ ಇರುವದಿಲ್ಲ. ಹಾಗೆಯೆ ವಿಪಕ್ಷದಲ್ಲಿ ಕೂಡ ಅತಿವ್ಯಾಪ್ತಿ ಉಂಟಾಗುವದಿಲ್ಲ. ಅಲ್ಲಿ ಅಗ್ನಿತ್ವ ಅವಚ್ಛಿನ್ನ ಪಕ್ಷದ ಅಗ್ನಿಸಮಾನ ಅಗ್ನಿರೂಪ ಧರ್ಮವಿಶಿಷ್ಟತ್ವ ಇರುವದಿಲ್ಲ. ಮತ್ತು ಹಾಗೆಯೆ ಎಲ್ಲಿ ಕೂಡ ಅತಿಪ್ರಸಂಗ ಉಂಟಾಗುವದಿಲ್ಲ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**साध्यत्व अतिरिक्त साधारण धर्मेण इत्यर्थः। व्यापकता अवच्छेदक धर्मेण इति भावः।**

ಅಂದರೆ, ಸಾಧ್ಯತ್ವ ಅತಿರಿಕ್ತ ಸಾಧಾರಣ ಧರ್ಮದಿಂದ ಎಂದರ್ಥ. ಅಂದರೆ ವ್ಯಾಪಕತಾ ಅವಚ್ಛೇದಕ ಧರ್ಮದಿಂದ ಎಂದರ್ಥ.

## ॥ इति न अतिप्रसङ्गः इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**समानत्वं किं सर्वथा उत कथंचित्। न आद्यः, सन्दिग्धत्वादिना साम्यस्य महानसगत अग्नौ अपि अभावात्। न द्वितीयः, अग्नि अभावस्यापि प्रमेयत्वादिना साध्यसमत्वेन तद्वतो विपक्षस्यापि सपक्षता प्रसङ्गात् अयं दोषो नास्ति। सन्दिग्धत्वादिकं विना व्यापकता अवच्छेदक अग्नित्वादिना अपि विद्यमान साम्यस्य विवक्षितत्वात्। न हि धूमव्यापकत्वं अग्नित्वेन इव प्रमेयत्वेन अवच्छिद्यते। प्रमेयस्य धूमव्यापके घटादौ असत्वात्। अतिप्रसक्तस्य च अवच्छेदकत्व अयोगात् इति भावः।**

ಇಲ್ಲಿ ಸಮಾನತ್ವವನ್ನು ಸರ್ವಥಾ ಅರ್ಥದಲ್ಲಿ ತೆಗೆದುಕೊಳ್ಳಬೇಕೊ? ಅಥವಾ ಕೆಲವಂದೆಡೆ ಅರ್ಥದಲ್ಲಿ ತೆಗೆದುಕೊಳ್ಳಬೇಕು? ಮೊದಲನೆಯ ವಿಕಲ್ಪ ಸರಿಯಲ್ಲ. ಸಂದಿಗ್ಧತ್ವಾದಿ ಸಾಮ್ಯದ ಮಹಾನಸಗತ ಅಗ್ನಿಯಲ್ಲಿ ಕೂಡ ಇರುವದಿಲ್ಲ. ಎರಡನೆ ವಿಕಲ್ಪವೂ ಸರಿಯಲ್ಲ, ಅಗ್ನಿ ಅಭಾವವು ಕೂಡ ಪ್ರಮೇಯತ್ವದಿಗಳಂತೆ ಸಾಧ್ಯಸಮತ್ವವನ್ನು ಹೋಂದುವದರಿಂದ ವಿಪಕ್ಷವನ್ನು ಕೂಡ ಸಪಕ್ಷವೆಂದೆನ್ನ ಬೇಕಾಗುವ ಪ್ರಸಂಗ ಒದಗುವದು. ಹೀಗಾಗಿ ಈ ದೋಷವಿರುವದಿಲ್ಲ. ಸಂದಿಗ್ಧತ್ವಾದಿಗಳ ವಿನಾ ವ್ಯಾಪಕತಾ ಅವಚ್ಛೇದಕ ಅಗ್ನಿತ್ವಾದಿಗಳಿಂದಲೂ ಕೂಡ ವಿದ್ಯಮಾನ ಸಾಮ್ಯದ ವಿವಕ್ಷಿತವಾಗಿರುತ್ತದೆ. ಧೂಮವ್ಯಾಪಕತ್ವವು ಅಗ್ನಿತ್ವ ದಂತೆ ಪ್ರಮೇಯತ್ವವನ್ನು ಅವಚ್ಛೇದಿಸುವದಿಲ್ಲ. ಪ್ರಮೇಯದ ಧೂಮ ವ್ಯಾಪಕವು ಘಟಾದಿಗಳಲ್ಲಿ ಅಸತ್ಯವಾಗಿರುತ್ತದೆ. ಅತಿಪ್ರಸಕ್ತದ ಅವಚ್ಛೇದಕವು ಅಯೋಗ್ಯವಾಗಿರುತ್ತದೆ.

॥ शेषं पूर्ववत् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**वह्निविशिष्ट पर्वतस्यापि साध्यत्वेन द्रव्यत्वादिना साध्येन पर्वतेन समानो यो महानसः तद्विशिष्टस्य अन्यस्य तत् अवयवस्य सपक्षत्वं स्यात् इति धर्मपदम्। तथा च महानसस्य धर्मित्वेन धर्मत्व अभावात् न उक्त दोष इति। शेषम् अवशिष्ट धर्म पदकृत्यं पूर्ववत्। पक्षलक्षणगत धर्मपदकृत्यरीत्या द्रष्टव्यं इत्यर्थः।**

ಅಗ್ನಿವಿಶಿಷ್ಟ ಪರ್ವತವು ಕೂಡ ಸಾಧ್ಯವೆನಿಸುವಾಗ ದ್ರವ್ಯತ್ವಾದಿಗಳ ಸಾಧ್ಯವು ಪರ್ವತದ ಸಮಾನವಾದ ಯಾವುದು ಮಹಾನಸ, ಅದರವಿಶಿಷ್ಟದ ಅನ್ಯದ ಅವಯವದ ಸಪಕ್ಷ ವಾಗುತ್ತದೆ ಎಂದು ಇಲ್ಲಿ ಧರ್ಮಪದವನ್ನು ಇಡಲಾಗಿದೆ. ಅದರಂತೆ ಮಹಾನಸವು ಧರ್ಮಿ ಆಗುವದರಿಂದ ಅಲ್ಲಿ ಧರ್ಮತ್ವ ಇರುವದಿಲ್ಲ ಆದ್ದರಿಂದ ನಮೂದಿಸಿದ ದೋಷ ಉಂಟಾಗುವದಿಲ್ಲ. ಉಳಿದ ಪದಗಳ ಪದಕೃತ್ಯ ಹಿಂದೆ ಹೇಳಿದಂತೆ ಇರುತ್ತದೆ. ಅಂದರೆ ಪಕ್ಷಲಕ್ಷಣಗತ ಧರ್ಮ ಪದಕೃತ್ಯದಂತೆ ತಿಳಿಯಬೇಕು ಎಂದರ್ಥ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**विशिष्टत्वं च धर्मधर्मिभावेन एव विवक्षितम्। न तु सम्बन्धमात्रेण। तेन साधन धर्मादौ न अतिव्याप्तिः इत्यर्थः।**

ಅಂದರೆ, ಇಲ್ಲಿ ಕೂಡ ವಿಶಿಷ್ಟತ್ವವು ಧರ್ಮಧರ್ಮಿ ಭಾವದಿಂದಲೆ ವಿವಕ್ಷಿತವಾಗಿರುತ್ತದೆ ವಿನಹಾ ಸಂಬಂಧಮಾತ್ರದಿಂದಲ್ಲ. ಇದರಿಂದ ಸಾಧನ ಧರ್ಮಾದಿಗಳಲ್ಲಿ ಅತಿವ್ಯಾಪ್ತಿ ಉಂಟಾಗುವದಿಲ್ಲ ಎಂದರ್ಥ.

### *१०.३ विपक्षलक्षण कथनम्*

प्रपञ्चमिथ्यात्वानुमानखण्डनम्

**साध्य विपरीत धर्मविशिष्टो विपक्षः।**

**ಸಾಧ್ಯಕ್ಕೆವಿರುದ್ಧವಾದ ಧರ್ಮವುಳ್ಳದ್ದು ವಿಪಕ್ಷ.**

टीका

विपरीतो विरुद्धः। यथा अग्निमत्वसाधने निरग्निकत्वम्। तेन पक्षसपक्षयोः अपि व्युदासः।



ಇಲ್ಲಿ ವಿಪರೀತ ಪದದ ಅರ್ಥ ವಿರುದ್ಧವಾದುದು ಎಂದರ್ಥ. ಹೇಗೆ ಅಗ್ನಿತ್ವ ಸಾಧನದಲ್ಲಿ ನಿರ್ಗ್ನಿಕತ್ವದಂತೆ. ಇದರಿಂದ ಪಕ್ಷವಿಸಪಕ್ಷಗಳನ್ನು ಕೂಡ ತಿರಸ್ಕರಿಸಲಾಯಿತು ಅಥವಾ ತಳ್ಳಿಹಾಕಲಾಯಿತು.

## टिप्पणीनाम् विशेषार्थानि

॥ साध्य विपरीत इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**मूले साध्य विपरीत इत्यत्र साध्यतत्समानधर्म विपरीतधर्मविशिष्ट इति व्याख्येयम्। अन्यथा साध्यधर्मवान् विपक्ष इत्युक्ते व्याप्तिप्रसक्ति अभावेन विपरीतपदेन तत् व्युदासकथन अयोगात् इति द्रष्टव्यम्।**

ಮೂಲದಲ್ಲಿಯ साध्य विपरीत ಎಂಬಲ್ಲಿ, ಸಾಧ್ಯ ತತ್ ಸಮಾನಧರ್ಮ ವಿಪರೀತ ಧರ್ಮ ವಿಶಿಷ್ಟ ಎಂದು ವ್ಯಾಖ್ಯಾನಿಸಬೇಕು. ಅನ್ಯಥಾ साध्यधर्मवान् विपक्ष ಎಂದು ಹೇಳಿದರೆ, ವ್ಯಾಪ್ತಿ ಪ್ರಸಕ್ತ ಅಭಾವತೆಯಿಂದ, ಅಲ್ಲಿ विपरीत ಇಡುವದರಿಂದ ಸಪಕ್ಷದ ತಿರಸ್ಕರಿಸಲಾಯಿತು ಎಂಬ ಹೇಳಿಕೆಯು ಅಯೋಗ್ಯ ಎನಿಸುತ್ತದೆ.

॥ यथा इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**विपरीत धर्मं दर्शयति– यथा इति॥**

ಈ ಟೀಕಾವಾಕ್ಯವು ವಿಪರೀತ ಧರ್ಮವನ್ನು ತೋರಿಸುತ್ತದೆ.

**तेन विपरीत ग्रहणेन। तथा च साध्यधर्मविशिष्टो विपक्ष इत्युक्ते पक्षे अतिव्याप्तिः। समान धर्म विशिष्ट इत्युक्ते सपक्षे अतिव्याप्तिः। तदर्थ विपरीत पदम्। तथा च पक्षस्य साध्यविपरीतधर्म विशिष्टत्व अभावात्। सपक्षस्य च साध्यसमानधर्म विपरीतधर्म विशिष्टत्व अभावात् न अतिव्याप्ति इति भावः। विपरीत पद अभावे असंभवश्च स्यात् इति द्रष्टव्यम्।**

ಇಲ್ಲಿ तेन ಎಂದರೆ ವಿಪರೀತ ಪದ ಗ್ರಹಿಸುವದರಿಂದ ಎಂದರ್ಥ. ಅದರಂತೆ, साध्यधर्मविशिष्टो विपक्ष ಎಂದು ಹೇಳಿದ್ದರೆ, ಪಕ್ಷದಲ್ಲಿ ಅತಿವ್ಯಾಪ್ತಿ ಉಂಟಾಗುತ್ತಿತ್ತು. ಇನ್ನು समान धर्म विशिष्ट ಎಂದು ಹೇಳಿದ್ದರೆ, ಸಪಕ್ಷದಲ್ಲಿ ಅತಿವ್ಯಾಪ್ತಿ ಉಂಟಾಗುತ್ತಿತ್ತು, ಅದಕ್ಕಾಗಿ विपरीत ಪದವನ್ನು ಇಡಲಾಗಿದೆ. ಅದರಂತೆ, ಪಕ್ಷಕ್ಕೆ ಸಾಧ್ಯವಿಪರೀತ ಧರ್ಮವಿಶಿಷ್ಟತ್ವ ಇರುವದಿಲ್ಲ. ಹಾಗೂ ಸಪಕ್ಷಕ್ಕೆ ಸಾಧ್ಯಸಮಾನಧರ್ಮ ವಿಪರೀತ ಧರ್ಮದ ವಿಶಿಷ್ಟತ್ವ ಇರುವದಿಲ್ಲ, ಆದ್ದರಿಂದ ಅಲ್ಲಿ ಅತಿವ್ಯಾಪ್ತಿ ಉಂಟಾಗುವದಿಲ್ಲ ಎಂಬ ಭಾವವಿರುತ್ತದೆ. ಹಾಗೂ ವಿಪರೀತ ಪದದ ಅಭಾವತೆಯಲ್ಲಿ ಇದು ಅಸಂಭವವೆನಿಸುತ್ತದೆ ಎಂದು ತಿಳಿಯತಕ್ಕದ್ದು.

### *१०.४ प्रतिज्ञालक्षण कथनम्*

प्रपञ्चमिथ्यात्वानुमानखण्डनम्

## प्रक्षवचनं प्रतिज्ञा।

**ಪಕ್ಷದಲ್ಲಿ ಸಾಧ್ಯಸಂಬಂಧವನ್ನು ತಿಳಿಸುವವಾಕ್ಯ ಪ್ರತಿಜ್ಞಾ ಏನಿಸುತ್ತದೆ.**

### टीका

**ननु एवं सति "पक्षः" इत्यादेः प्रतिज्ञात्वं स्यात्। न स्यात्। येनाकारेण यः अर्थः परं प्रति जिज्ञापयिषितः तथा तत् निर्देशस्य विवक्षितत्वात्। अत एव न निगमने प्रसङ्गः।**

ಹೀಗಿದ್ದರೆ, "ಪಕ್ಷ" ಮುಂತಾದ ವಾಕ್ಯಗಳು ಪ್ರತಿಜ್ಞಾವೆನಿಸಬೇಕಾಗುತ್ತದೆ. ಇಲ್ಲಿ ಪಕ್ಷವಚನದಿಂದ, ಯಾವ ಸಂಜ್ಞೆಯಿಂದ ಯಾವ ಅರ್ಥ ಪರಪ್ರತಿ ಜ್ಞಾಪಿಸುವ ಇಷ್ಟವಾಗಿರುತ್ತದೊ ಹಾಗೆಯೆ ಅದರ ನಿರ್ದೇಶ ವಿವಕ್ಷಿತವಾಗಿರುತ್ತದೆ. ಆದ್ದರಿಂದಲೇ ನಿಗಮನದಲ್ಲಿ ಅತಿಪ್ರಸಂಗ ಉಂಟಾಗುವದಿಲ್ಲ.

### टिप्पणीनाम् विशेषार्थानि

### ॥ स्यात् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**तथा च अतिव्याप्तिः इति भावः।**

ಹಾಗೂ ಅತಿವ್ಯಾಪ್ತಿ ಉಂಟಾಗುತ್ತದೆ ಎಂಬ ಭಾವವಿರುತ್ತದೆ.

### ॥ येनाकारेण इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु पक्ष इत्यादेः वचनस्य कथं प्रतिज्ञात्वं नास्ति इत्यत आह– येनाकारेण इति ॥**

ಇನ್ನು "ಪಕ್ಷ" ಮುಂತಾದ ವಾಕ್ಯಗಳು ಏಕೆ ಪ್ರತಿಜ್ಞಾವಿನಿಸುವದಿಲ್ಲ? ಈ ಶಂಕೆಯನ್ನು ಈ ಟೀಕಾವಾಕ್ಯ ದೂರಮಾಡುತ್ತದೆ.

**येन पर्वतसम्बन्धित्वाकारेण यः अर्थः वह्न्यादिरूपः परं प्रति जिज्ञापयिषितो ज्ञापयितुं इष्टः। तथा पर्वतसम्बन्धित्वेन एव रूपेण तत् निर्देशस्य पक्षवचन पदेन विवक्षितत्वात्। तादृशश्च आकारः पर्वतो अग्निमान् इत्यादि रूप इत्यर्थः।**

ಪಕ್ಷವಚನದಿಂದ, ಪರ್ವತ ಸಂಬಂಧಿತ ಸಂಜ್ಞೆಯ ಯಾವ ಅರ್ಥ ಅಗ್ನ್ಯಾದಿರೂಪ ಪರರ ಪ್ರತಿ ಜ್ಞಾಪಿಸಲು ಇಷ್ಟವಾದದ್ದು ಸೂಚಿಸುತ್ತದೆ. ಅದರಂತೆ ಪರ್ವತ ಸಂಬಂಧಿತ ರೂಪದಿಂದಲೇ ಅದರ ನಿರ್ದೇಶದ ಪಕ್ಷವಚನ ಪದದಿಂದ ವಿವಕ್ಷಿತವಾಗಿರುತ್ತದೆ. ಆತರಹತ ಸಂಜ್ಞೆ ಎಂದರೆ, पर्वतो अग्निमान् ಇತ್ಯಾದಿ ರೂಪ ಎಂದರ್ಥ.



**तथा च पक्ष इति वचनस्य न प्रतिज्ञात्वं प्रसज्यते। वह्निं जिज्ञासमानं परं प्रति पक्षत्वाकारस्य पर्वत सम्बन्धित्वेन जिज्ञापयिषितत्व अभावात्। यत्र तु कदाचित् पक्षः क इति पक्षत्वमेव जिज्ञासितं तदा तं प्रति अयं पक्ष इति वचनं अपि प्रतिज्ञा भवति एव इति भावः।**

ಅದರಂತೆ "ಪಕ್ಷ" ಎಂಬ ವಾಕ್ಯವು ಪ್ರತಿಜ್ಞಾವಿಸುವದಿಲ್ಲ. ಏಕೆಂದರೆ ಅಗ್ನಿ ಜಿಜ್ಞಾಸದಿಂದ ಕೂಡಿದ ಪರರಪ್ರತಿ ಪಕ್ಷತ್ವಸಂಜ್ಞೆ ಪರ್ವತ ಸಂಬಂಧಿಯಾಗಿ ಜ್ಞಾಪಿಸುವ ಇಷ್ಟತ್ವ ಅಲ್ಲಿ ಇರುವದಿಲ್ಲ. ಎಲ್ಲಿಯಾದರೂ ಕದಾಚಿತ್ ಪಕ್ಷವಿರಲು, ಇದು ಯಾವುದರ ಪಕ್ಷ ಎಂದು ಜಿಜ್ಞಾಸೆ ಹುಟ್ಟಲು, ಆಗ ಅದರ ಪ್ರತಿ "ಇದು ಪಕ್ಷ" ಎಂಬ ವಚನವು ಕೂಡ ಪ್ರತಿಜ್ಞಾ ಏನಿಸುವದು ಎಂಬ ಭಾವವಿರುತ್ತದೆ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**न च पक्ष इत्यादिकं तथा। पक्षत्वाकारस्य पर्वतसम्बन्धित्वेन वह्निं जिज्ञासमानेन परेण अजिज्ञासितत्वेन प्रतिजानतापि पुरुषेण तस्य अजिज्ञापयिषितत्वात्। यत्र तु पक्षत्वमेव जिज्ञापयिषितं तत्र "अयं पक्षः" इति वचनमपि प्रतिज्ञा भवति इति भावः।**

ಹಾಗೆ "ಪಕ್ಷ" ಮುಂತಾದ ವಾಕ್ಯಗಳಲ್ಲಿ ಇರುವದಿಲ್ಲ. ಪಕ್ಷತ್ವ ಸಂಜ್ಞೆಯ ಪರ್ವತ ಸಂಬಂಧಿಯಾಗಿ ಅಗ್ನಿ ಜಿಜ್ಞಾಸಪೂರ್ವಕ ಪರರಿಂದ ಜಿಜ್ಞಾಸವಿಲ್ಲದ ಪ್ರತಿ ತಿಳಿದ ಪುರುಷನಿಂದ ಅದರ ಜ್ಞಾಪಿಸುವ ಇಷ್ಟತ್ವ ಇಲ್ಲದಾಗಿರುತ್ತದೆ. ಎಲ್ಲಿ ಪಕ್ಷತ್ವವೇ ಜ್ಞಾಪಿಸುವ ಇಷ್ಟತ್ವವನ್ನು ಹೊಂದಿರುತ್ತದೆ ಅಲ್ಲಿ "अयं पक्षः" ಎಂಬ ವಚನವು ಕೂಡ ಪ್ರತಿಜ್ಞಾ ಏನಿಸುತ್ತದೆ ಎಂಬ ಭಾವವಿರುತ್ತದೆ.

### ॥ अत एव इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**पक्षवचनम् इत्यस्य येनाकारेण इत्यादि अर्थस्य विवक्षितत्वात् एव इत्यर्थः। अन्यथा तस्मात् वह्निमान् एव इति निगमनस्यापि पक्षवचनत्वेन अतिव्याप्तिः स्यात्। एवं विवक्षायां तु न तत्र अतिव्याप्तिरूप अतिप्रसंगः।**

ಪಕ್ಷವಚನಮ್ ಎಂಬುದಕ್ಕೆ ಯೆನಾಕಾರೆಣ ಮುಂತಾಗಿ ಸಾಧ್ಯ ಸಂಬಂಧ ತಿಳಿಸುವ ಅರ್ಥವೇ ವಿವಕ್ಷಿತವಾಗಿರುತ್ತದೆ. ಅನ್ಯಥಾ तस्मात् वह्निमान् एव ಎಂಬ ನಿಗಮನವಾಕ್ಯವೂ ಕೂಡ ಪಕ್ಷವಚನೆವೆನಿಸಿ, ಅಲ್ಲಿ ಅತಿವ್ಯಾಪ್ತಿ ಉಂಟಾಗುತ್ತಿತ್ತು. ಈ ರೀತಿಯ ವಿವಕ್ಷೆಯಿಂದ ಅಲ್ಲಿ ಅತಿವ್ಯಾಪ್ತಿ ಪ್ರಸಂಗ ಬರುವದಿಲ್ಲ.

**निगमने हि येन पर्वतसम्बन्धित्वाकारेण यः अर्थः वह्निरूपोर्थः परं प्रति जिज्ञापयिषितः तथा पर्वत सम्बन्धित्वेन एव रूपेण वह्नि निर्देशो नास्ति। किन्तु तस्मात् धूमवत्वात् इति साधनोपलक्षित वह्नेः एव पर्वतसम्बन्धितया निर्दिश्यमानत्वात्।**

ನಿಗಮನವಾಕ್ಯದಲ್ಲಿ, ಯಾವ ಪರ್ವತ ಸಂಬಂಧಿತ ಸಂಜ್ಞೆಯಿಂದ ಯಾವ ಅರ್ಥ ಅಗ್ನ್ಯರ್ಥರೂಪ ಪರಪ್ರತಿ ಜ್ಞಾಪಿಸಲು ಇಷ್ಟವಾದದ್ದಾಗಿರುತ್ತದೊ. ಹಾಗೆಯೆ ಪರ್ವತ ಸಂಬಂಧದಿಂದಲೇ ಅಗ್ನಿರೂಪ ನಿರ್ದೇಶವಿರುತ್ತದೊ ಅದು ಇರುವದಿಲ್ಲ.

ಪರಂತು तस्मात् धूमवत्वात् ಎಂದು ಸಾಧನೋಪಲಕ್ಷಿತ ಅಗ್ನಿಯೇ ಪರ್ವತಸಂಬಂಧಿತವಾಗಿ ನಿರ್ದೇಶಿಸಲ್ಪಟ್ಟಿರುತ್ತದೆ.

**न च साधनोपलक्षितो वह्निः जिज्ञापयिषितः। किन्तु पक्षसम्बन्धितया साधनानुपलक्षित वह्नेः एव जिज्ञापयिषितत्वात्।**

ಮತ್ತು ಸಾಧನೋಪಲಕ್ಷಿತ ಅಗ್ನಿಯನ್ನು ಜ್ಞಾಪಿಸಲು ಇಷ್ಟವಾದದ್ದು ಎಂದು ಹೇಳಬಾರದು. ಪರಂತು ಪಕ್ಷ ಸಂಬಂಧಿತವಾಗಿ ಸಾಧನ ಅನುಪಲಕ್ಷಿತ ಅಗ್ನಿಯೇ ಜ್ಞಾಪಿಸಲು ಇಷ್ಟತ್ವವನ್ನು ಪಡೆದಿರುತ್ತದೆ.

**तर्हि निगमने तस्मात् इति अंशोपादानम् किमर्थं इति चेत्। वह्नि ज्ञापनोपायत्वेन एव तदुपादानं न तु वह्निवत्परं, प्रतितस्यापि ज्ञापनार्थत्वेन सिद्धत्वात् इति भावः।**

ಹಾಗಾದರೆ ನಿಗಮನವಾಕ್ಯದಲ್ಲಿ ತಸ್ಮಾತ ಎಂದು ಅಂಶ ಉಪಾದಾನವನ್ನು ಏಕೆ ಮಾಡಲಾಗುತ್ತದೆ? ಅಂದರೆ? ಅಲ್ಲಿ ಅಗ್ನಿ ಜ್ಞಾಪನ ಉಪಾಯತ್ವದಿಂದಲೇ ಹಾಗೆ ಉಪಾದಾನ ಮಾಡಲಾಗುತ್ತದೆ ವಿನಹಾ ಅಗ್ನಿವತ್ವಪರವಾಗಿ ಅಲ್ಲ. ಪ್ರತೀತವಾದುದು ಕೂಡ ಜ್ಞಾಪನಾರ್ಥದಿಂದಲೆ ಸಿದ್ಧವಾಗುತ್ತದೆ ಎಂಬ ಭಾವವಿರುತ್ತದೆ

<u>ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:</u>

**निगमने हि साधनोपलक्षितो वह्निः पर्वतसम्बन्धितया निर्दिश्यते। न च साधनोपलक्षितो वह्निः जिज्ञापयिषितः। पक्षसम्बन्धितया साध्यस्यैव जिज्ञापयिषितत्वात्। साधनस्य तत् ज्ञानोपायत्वेन उपादानात् इति भावः।**

ನಿಗಮನವಾಕ್ಯದಲ್ಲಿ ಸಾಧನೋಪಲಕ್ಷಿತ ಅಗ್ನಿಯನ್ನು ಪರ್ವತ ಸಂಬಂಧಿತವಾಗಿ ನಿರ್ದೇಶಿಸಲಾಗುತ್ತದೆ. ಸಾಧನೋಪಲಕ್ಷಿತ ಅಗ್ನಿಯು ಜ್ಞಾಪಯಿಸಲು ಇಷ್ಟವಾದದ್ದು ಆಗಿರುವದಿಲ್ಲ. ಪಕ್ಷ ಸಂಬಂಧಿತವಾದ ಸಾಧ್ಯವನ್ನೇ ಜ್ಞಾಪಿಸಲು ಇಷ್ಟವಾಗಿರುತ್ತದೆ. ಸಾಧನವು ಅದರ ಜ್ಞಾನದ ಉಪಾಯತ್ವದಿಂದ ಉಪಾದಾನವಾಗುತ್ತದೆ ಎಂಬ ಭಾವವಿರುತ್ತದೆ..

<u>ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:</u>

**येनाकारेण धर्मो जिज्ञासयिषितेन एवाकारेण इतुक्तत्वात् एव तथा इत्येवकारक पक्षवचने निगमने न अतिप्रसंगः इत्यर्थं न्यायवाक्य अवयवत्वं च विशेषण विवक्षितम्। तेन पर्वतो वह्निमान् इत्येवं आकारकस्य बाह्यवाक्य निरासः।**

ಯಾವದೊ ಸಂಜ್ಞೆಯಿಂದ ಧರ್ಮ ಜಿಜ್ಞಾಸಮೆರೆಗೆ ಸಂಜ್ಞೆಯಿಂದ ಹೇಳಲಾಗಿರುತ್ತದೆ. ಹಾಗೆಯೆ ಪಕ್ಷವಚನದ ನಿಗಮನದಲ್ಲಿ ಅತಿಪ್ರಸಂಗ ಉಂಟಾಗುವದಿಲ್ಲ ಎಂದರ್ಥವು ಮತ್ತು ನ್ಯಾಯವಾಕ್ಯ ಅವಯವತ್ವ ವಿಶೇಷಣ ವಿವಕ್ಷಿತವಾಗಿರುತ್ತದೆ. ಇದರಿಂದ पर्वतो वह्निमान् ಎಂಬುದು ಸಂಜ್ಞೆಯ ಬಾಹ್ಯವಾಕ್ಯವೆಂದು ನಿರಾಕರಿಸಲಾಯಿತು.

## *೧೦.೫ हेतुलक्षण कथनम्*





### लिङ्गं हेतुः।

**ವ್ಯಾಪ್ತಿ ಸಂಬಂಧದಿಂದ ಸಾಧ್ಯದ ಜ್ಞಾನವನ್ನು ಉಂಟುಮಾಡುವ ಧರ್ಮ ಹೇತು**

### टीका

**व्याप्तिबलेन अर्थगमकं लिङ्गम्। यद्यपि हेतु शब्दः साधनत्व अभिव्यञ्जक लिङ्गवचने प्रसिद्धः तथापि अर्थस्यैव अत्र विवक्षितत्वात् तत् लक्षणमेव उक्तं इति अर्थे वर्तते।**

ವ್ಯಾಪ್ತಿಬಲದಿಂದ ಜ್ಞಾನವನ್ನುಂಟು ಮಾಡುವದು ಲಿಂಗ. ಹಾಗೆ ನೋಡಲಾಗಿ, ಹೇತು ಶಬ್ದವು ಸಾಧನತ್ವದ ಅಭಿವ್ಯಂಜಕ ಲಿಂಗವಚನವೆಂದು ಪ್ರಸಿದ್ಧವಾಗಿದೆ. ಹಾಗಿದ್ದರೂ ಅರ್ಥವೇ ಅಥವಾ ಜ್ಞಾನವೇ ಇಲ್ಲಿ ವಿವಕ್ಷಿತವಾಗಿರುತ್ತದೆಂದು ಆ ಲಕ್ಷಣವನ್ನೆ ಹೇಳಲಾಗಿರುತ್ತದೆ ಎಂಬಂರ್ಥದಲ್ಲಿ ಹೇತು ಇರುತ್ತದೆ.

### <u>टिप्पणीनाम् विशेषार्थानि</u>

**॥ प्रसिद्ध इति ॥**

<u>ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:</u>

**साधनत्व अभिव्यंजके पञ्चम्यन्ते तृतीयान्ते वा।**

ಇಲ್ಲಿ साधनत्व अभिव्यंजके ಎಂದು ಪಂಚಮಿ ಅಥವಾ ತೃತೀಯಾದಲ್ಲಿ ತೆಗೆದುಕೊಳ್ಳಬೇಕು.

**लिङ्गस्य वचनं हेतुः साधकत्व प्रकाशकं इति वचनात् इत्यर्थः। तथापि अर्थे वर्तते इति अन्वयः। लक्षणया इति शेषः। प्रतिपाद्यप्रतिपादक भावो लक्षणाबीज सम्बन्ध इति भावः।**

ವ್ಯಾಪ್ತಿಬಲದಿಂದ ಜ್ಞಾನವನ್ನುಂಟುಮಾಡುವ ವಚನವು ಹೇತು ಅದು ಸಾಧಕತ್ವದ ಅಥವಾ ಸಾಧ್ಯದ ಪ್ರಕಾಶಕವಾಗಿರುತ್ತದೆ ಎಂದು ವಚನವಿರುತ್ತದೆ ಎಂದರ್ಥ. ಹಾಗೆಯೆ अर्थे वर्तते ಎಂದು ಅನ್ವಯವಿರುತ್ತದೆ. ಇಲ್ಲಿ लक्षणया ಎಂಬ ಪದವನ್ನು ಸೇರಿಸಿ ಅರ್ಥಹೇಳಬೇಕು. ಇಲ್ಲಿ ಪ್ರತಿಪಾದ್ಯಪ್ರತಿಪಾದಕ ಭಾವ ಲಕ್ಷಣಬೀಜ ಸಂಬಂಧವಾಗಿದೆ ಎಂಬ ಭಾವವಿರುತ್ತದೆ.

**॥ अर्थस्यैव अत्र विवक्षितत्वात् इति ॥**

<u>ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:</u>

**कुत इत्यत आह– अर्थस्यैव इति॥**

ಇದು ಹೇಗೆ ಎಂಬುದಕ್ಕೆ ಉತ್ತರ ಈ ಟೀಕಾವಾಕ್ಯ ನೀಡುತ್ತದೆ.

**अत्र ग्रन्थे पूर्वं असिद्धं हेतुः इति दृश्यत्वरूप अर्थस्यैव असिद्धिः उक्ता। हेतुः इति तदर्थो लिङ्गं उच्यते इति व्याख्यातत्वात्। अतः अत्र लिङ्गं हेतुः इति वचनार्थक हेतु शब्दोपलक्षित अर्थस्यैव लक्षणं उक्तं इत्यर्थः।**

ಈ ಗ್ರಂಥದಲ್ಲಿ ಪೂರ್ವದಲ್ಲಿ असिद्धं हेतु: ಎಂದು ದೃಶ್ಯತ್ವರೂಪ ಅರ್ಥದಿಂದಲೇ ಅಸಿದ್ಧಿಯನ್ನು ಹೇಳಲಾಗಿದೆ. ಹೇತು ಎಂದು तदर्थो लिङ्गं उच्यते ವ್ಯಾಖ್ಯಾನಮಾಡಲಾಗಿರುತ್ತದೆ. ಇಲ್ಲಿ लिङ्गं हेतु: ಎಂದು ವಚನಾರ್ಥಕ ಹೇತು ಶಬ್ದೋಪಕ್ಷಿತ ಅರ್ಥದಿಂದಲೇ ಲಕ್ಷಣವನ್ನು ಹೇಳಲಾಗಿದೆ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**असिद्धो हेतु: इत्यत्र अर्थ असिद्धे: एव उक्तत्वेन तस्यैव अत्र विवक्षितत्वात् इत्यर्थ:।**
असिद्धो हेतु: ಎಂಬಲ್ಲಿ ಅಸಿದ್ಧ ಅರ್ಥದಲ್ಲೆ ಹೇಳಲಾಗಿರುವದರಿಂದ ಅದೇ ಇಲ್ಲಿ ವಿವಕ್ಷಿತವಾಗಿರುತ್ತದೆ ಎಂದರ್ಥ.

### ॥ तत् लक्षणमेव उक्तं इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**लिङ्गं इत्यनेन हेतु शब्दार्थ लक्षणमेव उक्तं इत्यर्थ:।**
ಇಲ್ಲಿ लिङ्गं ಎಂಬುವದರಿಂದ ಹೇತು ಶಬ್ದಾರ್ಥ ಲಕ್ಷಣವನ್ನೆ ಹೇಳಲಾಗಿದೆ ಎಂದರ್ಥ.

### ॥ अर्थे वर्तते इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**हेतु शब्द इति अनुवर्तते।**
ಇಲ್ಲಿ ಹೇತು ಶಬ್ದವನ್ನು ಅನುವರ್ತಿಸ ಬೇಕು.

## *१०.६ दृष्टान्तलक्षण कथनम्*

प्रपञ्चमिथ्यात्वानुमानखण्डनम्

**निदर्शनं दृष्टान्त:।**

**ಸಾಧ್ಯ ಸಾಧನಗಳಿಗಿರುವ ವ್ಯಾಪ್ತಿಯನ್ನು ತಿಳಿಯಲು ಸಹಾಯಕವಾದ ಆಶ್ರಯ ದೃಷ್ಟಾಂತವೆನಿಸುವದು**

### टीका

**निदर्श्यते साध्यसाधनयो: व्याप्ति: यस्मिन् तत् निदर्शनम्। व्याप्तिग्रहण स्थलं इति यावत्। तत् वचनं उदाहरणं प्रसिद्धमेव।**

ಯಾವದು ಸಾಧ್ಯಸಾಧನಗಳಲ್ಲಿಯ ವ್ಯಾಪ್ತಿಯನ್ನು ನಿರ್ದಿಶಿಸುತ್ತದೊ ಅದು ನಿದರ್ಶನ. ಅಂದರೆ ವ್ಯಾಪ್ತಿಗ್ರಹಣ ಸ್ಥಲ ಎಂದಂತಾಯಿತು. ದೃಷ್ಟಾಂತದ ವಚನವು ಉದಾಹರಣವೆಂದು ಪ್ರಸಿದ್ಧವೇ ಆಗಿರುತ್ತದೆ.



## टिप्पणीनाम् विशेषार्थानि

### ॥ व्याप्तिग्रहण स्थलं इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**उक्तं च परेण व्याप्ति संवेदनस्थानं दृष्टान्त इति गीयत इति।**
ಪರಪಕ್ಷದವರು ಹೀಗೆ ಹೇಳಿರುತ್ತಾರೆ: ವ್ಯಾಪ್ತಿ ಸಂವೇದನ ಸ್ಥಾನವು ದೃಷ್ಟಾಂತ ಎಂದು.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**यत्र सतो: व्याप्यव्यापकयो: व्याप्ति: गृह्यते तत् व्याप्तिग्रहण स्थलं इति द्रष्टव्यम्।**
ಎಲ್ಲಿ ಸತ್ಯವಾಗಿ ವ್ಯಾಪ್ಯವ್ಯಾಪಕಗಳಲ್ಲಿಯ ವ್ಯಾಪ್ತಿ ಗೃಹಿಸಲಾಗುತ್ತದೊ ಅದು ವ್ಯಾಪ್ತಿಗ್ರಹಣ ಸ್ಥಲ ಎಂದು ತಿಳಿಯಬೇಕು.

### ॥ तत् वचनं इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु भगवत्पादै: उदाहरण लक्षणम् वक्तव्यम्। यत् इत्थं तत् तथा यथा संप्रतिपन्नम् इति उदाहरणस्यापि व्यवहृतत्वात्। अतो न्यूनता इति आशङ्क्य दृष्टान्त लक्षण कथनेन तदपि लक्षितप्रायमेव। अतो न न्यूनता इति आशयेन आह– तत् वचनं इति॥**
ಭಗವತ್ಪಾದರು ಉದಾಹರಣದ ಲಕ್ಷಣವನ್ನು ಹೇಳಬೇಕಾಗಿತ್ತು. यत् इत्थं तत् तथा यथा संप्रतिपन्नम् ಎಂದು ಅವರು ಉದಾಹರಣವನ್ನು ಕೂಡ ವ್ಯವಹರಿಸಿದ್ದಾರೆ. ಆದ್ದರಿಂದ ಅದು ನ್ಯೂನತಾ ದೋಷವನ್ನುಂಟು ಮಾಡುತ್ತದೆ ಎಂಬ ಆಶಂಕಿಸಿ ದೃಷ್ಟಾಂತ ಲಕ್ಷಣ ಹೇಳಿದ್ದರಿಂದ ಅದರ ಲಕ್ಷಣ ಹೇಳಿದಂತಾಯಿತು, ಆದ್ದರಿಂದ ಇಲ್ಲ ನ್ಯೂನತಾ ದೋಷಕ್ಕೆ ಆಸ್ಪದವಿಲ್ಲ ಎಂಬುದನ್ನು ಈ ಟೀಕಾವಾಕ್ಯ ವಿವರಿಸುತ್ತದೆ.

**सम्यग् व्याप्ति निर्देशपूर्वकं दृष्टान्त वचनं इत्यर्थ:। उक्तं च परेण: द्विध उदाहरणं सम्यग् व्याप्तिनिर्देशपूर्वकम्। दृष्टान्त वचनं तत् स्यात् इति।**
ಅಂದರೆ ಸಮ್ಯಗ್ ವ್ಯಾಪ್ತಿ ನಿರ್ದೇಶಪೂರ್ವಕ ದೃಷ್ಟಾಂತ ವಚನವು ಉದಾಹರಣ ಎಂದರ್ಥ. ಪರಪಕ್ಷದವರು ಹೀಗೆ ಹೇಳಿರುತ್ತಾರೆ: ದ್ವಿಧ ಉದಾಹರಣ ಸಮ್ಯಕ್ ವ್ಯಾಪ್ತಿ ನಿರ್ದೇಶಪೂರ್ವಕವಾಗಿರುತ್ತದೆ. ದೃಷ್ಟಾಂತ ವಚನ ಅದಾಗಿರುತ್ತದೆ.

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**ननु प्रतिज्ञादि समक्षतया उदाहरण लक्षणं वक्तव्यम्। तत् कथं दृष्टान्त लक्षणमात्र कथनम् इत्यत् आह– तत् वचनं इति॥**
ಇಲ್ಲಿ ಪ್ರತಿಜ್ಞಾದಿಗಳಂತೆ ಉದಾಹರಣದ ಲಕ್ಷಣವನ್ನು ಹೇಳಬೇಕಾಗಿತ್ತು. ಹಾಗಿದ್ದಾಗ, ದೃಷ್ಟಾಂತ ಲಕ್ಷಣವನ್ನು ಮಾತ್ರ ಏಕೆ ಹೇಳಲಾಗಿದೆ? ಇದನ್ನು ಈ ಟೀಕಾವಾಕ್ಯ ಉತ್ತರಿಸುತ್ತದೆ.

अतो हेतो:न तस्य अनभिधानं दोषाय इति शेष:।
ಆದಕಾರಣ ಉದಾಹರಣದ ಅಭಿಧಾನ ಮಾಡದೆ ಇರುವದು ದೋಷವಲ್ಲ ಎಂದು ಈ ಟೀಕಾವಾಕ್ಯದ ನಂತರ ಸೇರಿಸಬೇಕು.

## ११. प्रकरणान्ते मङ्गल पद्यं

### टीका

**यत् प्रसादात् यत् प्रीत्यैव च इदं प्रकरणं कृतवान् तमेव आचार्य: अन्ते स्तुतिप्रणाभ्यां प्रीणयति।**

ಯಾವನ ಪ್ರಸಾದದಿಂದ ಮತ್ತು ಯಾವನ ಪ್ರೀತಿಗಾಗಿಯೇ ಈ ಪ್ರಕರಣವನ್ನು ಶ್ರೀಮದಾಚಾರ್ಯರು ಮಾಡಿದರೋ ಅವನನ್ನೆ ಪ್ರಕರಣದ ಅಂತದಲ್ಲಿ ಸ್ತುತಿ ಹಾಗೂ ಪ್ರಣಾಮಾದಿಗಳಿಂದ ಸಂತೋಷಪಡಿಸುತ್ತಾರೆ.

प्रपञ्चमिथ्यात्वानुमानखण्डनम्
यो दृश्यते सदानन्दनित्यव्यक्तचिदात्मना।
निर्दोषाखिलकल्याणगुणं वन्दे रमापतिम्॥

**अन्वय: सदानन्दनित्यव्यक्तचिदात्मना य: दृश्यते निर्दोषाखिलकल्याणगुणं तम् रमापतिम् वन्दे।**
**ಯಾರು ದುಃಖವಿಲ್ಲದ ಆನಂದರೂಪನು, ನಿತ್ಯ ಅಭಿವ್ಯಕ್ತವಾದ ಜ್ಞಾನಾನಂದಾತ್ಮಕ ವಿಗ್ರಹವುಳ್ಳವನಾಗಿದ್ದು ಜ್ಞಾನಿಗಳಿಗೆ ದೃಷ್ಟಿಗೋಚರನಾಗುವನೊ, ನಿರ್ದೋಷನಾದ ಎಲ್ಲ ಮಂಗಲಕರಗುಣಗಳಿಂದ ಪರಿಪೂರ್ಣನಾದ ಆ ರಮಾಪತಿಯನ್ನು ನಾವು ನಮಸ್ಕರಿಸುತ್ತೇವೆ.**

॥इति श्रीमदानन्दतीर्थ भगवत्पादाचार्यविरचितं प्रपञ्चमिथ्यात्वानुमानखण्डनं सम्पूर्णम्॥

### श्रीपद्मनाभतीर्थीयटीका

**यद् दृश्यं तत् मिथ्या इत्येतत् अनुमानं दूषयित्वा दृश्यते त्वग्र्यया बुध्या इत्यादि श्रुति सिद्धं विष्णुं प्रणमति- यो दृश्यत इति॥**



ಯಾವದು ದೃಷ್ಟಿಗೋಚರವೋ ಅದು ಮಿಥ್ಯಾ ಎಂಬ ಅನುಮಾನವನ್ನು ದೂಷಿಸಿ, "दृश्यते त्वग्र्यया बुध्या ಎಂಬ ಮುಂತಾದ ಶೃತಿ ಸಿದ್ಧ ಜ್ಞಾನಿಗಳ ದೃಷ್ಟಿಗೋಚರನಾದ ವಿಷ್ಣುವಿಗೆ, ಶ್ರೀಮದಾಚಾರ್ಯರು ಪ್ರಕರಣದ ಅಂತ್ಯದಲ್ಲಿ ಪ್ರಣಾಮಿಸುತ್ತಾರೆ.

॥ इति श्रीमदानदतीर्थ भगवत्पादाचार्य विरचित मिथ्यात्वानुमानखण्डनटिका
श्रीपद्मनाभतीर्थभट्टारक विरचिता समाप्ता॥

### टीका

॥ दृश्यते इति ॥

**दृश्यते इत्यनेन "दृश्यते त्वग्र्या बुद्ध्या" इत्यादि श्रुतिं सूचयति। तेन यदुक्तं "आत्मनोऽपि दृश्यत्वात्" इति तत् उपपादितं भवति।**

ಇಲ್ಲಿ दृश्यते ಎಂಬುದರಿಂದ "दृश्यते त्वग्र्या बुद्ध्या" ಇತ್ಯಾದಿ ಶೃತಿಗಳನ್ನು ಸೂಚಿಸಲಾಗಿದೆ. ಈ ಶೃತಿ ವಾಕ್ಯಗಳಿಂದ ಹಿಂದೆ ಗ್ರಂಥದಲ್ಲಿ "आत्मनोऽपि दृश्यत्वात्" ಎಂದು ಹೇಳಿದ್ದನ್ನು ಸಮರ್ಥಿಸಿದಂತಾಯಿತು.

#### टिप्पणीनाम् विशेषार्थानि

॥ चिदात्मना इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:
**मूले चिदात्मना इत्यस्य चिदत्मक विग्रहत्वेन इत्यर्थो द्रष्टव्य:।**
ಮೂಲದಲ್ಲಿಯ चिदात्मना ಪದದ ಅರ್ಥ ಚಿದಾತ್ಮಕ ವಿಗ್ರಹದಿಂದ ಎಂಬರ್ಥವೆಂದು ತಿಳಿಯಬೇಕು.

॥ दृश्यते इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:
**श्रवणमनन सहकृतया बुध्या ध्यानेन दृश्यते अपरोक्षीक्रियत इत्यर्थ:। अथवा बुध्या अपरोक्ष ज्ञानेन दृश्यते विषयीक्रियत इत्यर्थो द्रष्टव्य:।**
ಅಂದರೆ, ಶ್ರವಣಮನನ ಸಹ ಬುದ್ಧಿಪೂರ್ವಕ ಧ್ಯಾನದಿಂದ ಅಪರೋಕ್ಷ ಜ್ಞಾನ ಪಡೆಯುವದು ಎಂದರ್ಥ. ಅಥವಾ ಅಪರೋಕ್ಷ ಜ್ಞಾನದಿಂದ ಪರಮಾತ್ಮನನ್ನು ವಿಷಯೀಕರಿಸುವದು ಎಂದರ್ಥ.

**आदिपदेन आत्मा वा अरेद्रष्टव्य: इत्यादि श्रुतिग्रहणम्।**
ಇಲ್ಲಿ ಆದಿ ಪದದಿಂದ आत्मा वा अरेद्रष्टव्य: ಎಂದು ಮುಂತಾದ ಶೃತಿಗಳನ್ನು ಗ್ರಹಿಸಲಾಗಿದೆ.

**तेन श्रुति सूचनेन।**
ಇಲ್ಲಿ ತೆನ ಪದದ ಅರ್ಥ ಶೃತಿ ಸೂಚನೆಯಮೇರೆಗೆ ಎಂದರ್ಥ.

॥ उपपादितं इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ

श्रुति सम्मति इति भावः।
ಅಂದರೆ ಶೃತಿ ಸಮ್ಮತಿಯನ್ನು ಸೂಚಿಸಲಾಯಿತು ಎಂಬ ಭಾವವಿರುತ್ತದೆ.

## टीका

॥ सदानन्द इति ॥

दृश्यते चेत् रूपादिमत्त्वेन अनित्यत्वं प्रसज्येत इति चेत् न। निर्दोष आनन्द नित्य अभिव्यक्त ज्ञानात्मकत्वेन अजडत्वात्। तदाह– सदानन्द इति॥
इत्थंभूत लक्षणे तृतीया।

ಭಗವಂತನು ದೃಷ್ಟಿಗೋಚರನಾಗಿದ್ದಾನೆ ಅಂದರೆ, ಅವನಿಗೆ ರೂಪಾದಿಗಳಿಂದ ಕೂಡಿದ ಶರೀರ ಇದೆ ಎಂದಂತಾಗಿ, ಅನಿತ್ಯತ್ವ ಉಂಟಾಗುತ್ತದೆ ಎಂದರೆ, ಅದು ಹಾಗಿರುವದಿಲ್ಲ. ನಿರ್ದೋಷ, ಆನಂದ ನಿತ್ಯ ಅಭಿವ್ಯಕ್ತ ಜ್ಞಾನಾತ್ಮಕತ್ವದಿಂದ ಆ ಶರೀರವು ಅಜಡತ್ವವಾಗಿರುತ್ತದೆ. ಇಂತಹ ಭಗವಂತನ ಶರೀರದ ಲಕ್ಷಣವನ್ನು ಶ್ರೀಮದಾಚಾರ್ಯರು ಸದಾನಂದ ಮುಂತಾದ ವಿಶೇಷಣಗಳಿಂದ ತೋರಿಸುತ್ತಾರೆ. ಇಂತಹ ಲಕ್ಷಣಗಳನ್ನು ತೃತೀಯಾ ವಿಭಕ್ತಿಯಲ್ಲಿ ಇಡಲಾಗಿದೆ.

## टिप्पणीनाम् विशेषार्थानि

॥ रूपादिमत्त्वेन इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

शरीरेन्द्रियादिमत्त्वेन इत्यर्थः।
ಅಂದರೆ ಶರೀರಾಇಂದ್ರಿಯಗಳಿಂದ ಕೂಡಿದ ಎಂದರ್ಥ.

अनित्यत्वं मरणम्। दृश्यत्व उक्त्या शरीरादिमत्व प्राप्तम्। शरीरेन्द्रियादिमतश्च अनित्यत्वं नियतम्। जडशरीरादेः तत् आपादकताया जीवे दृष्टत्वात् इति भावः।
ಇಲ್ಲಿ ಅನಿತ್ಯತ್ವ ಎಂದರೆ ಮರಣ ಎಂದರ್ಥ. ದೃಷ್ಟಿಗೋಚರತ್ವ ಹೇಳಿರುವದರಿಂದ ಭಗವಂತನಿಗೆ ಇಂದ್ರಿಯಾದಿಗಳಿಂದ ಕೂಡಿದ ಶರೀರ ಪ್ರಾಪ್ತವಾಯಿತು. ಇನ್ನು ಇಂದ್ರಿಯಾದಿ ಶರೀರವಿದೆ ಅಂದಮೇಲೆ ಅನಿತ್ಯತ್ವ ನಿಯಮದಿಂದ ಬರಬೇಕು. ಜೀವನ ಜಡಶರೀರಾದಿಗಳಿಗೆ ಅನಿತ್ಯತ್ವ ಪ್ರಾಪ್ತವಾಗುವದು ಕಂಡುಬಂದಿರುತ್ತದೆ ಎಂಬ ಭಾವವಿರುತ್ತದೆ.

॥ अजडत्वात् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:



रूपादेः इति शेषः। जडशरीरस्यैव अनित्यत्व आपादकत्वे, न भगवत् शरीरस्य, ज्ञानानन्दाद्यत्मकतया तत् अभिन्नत्वेन अजडत्वात् न अनित्यत्व आपादकत्वं इति भावः। तथा च श्रुतिः – "यदात्मको भगवान् तदात्मिका व्यक्तिः। किमात्मको भगवान्। ज्ञानात्मक ऐश्वर्यात्मकः सुखशक्त्यात्मकः।"इति।
ಇಲ್ಲಿ ರೂಪಾದೇಃ ಎಂಬ ಪದವನ್ನು ಸೇರಿಸಿ ಅರ್ಥಮಾಡಬೇಕು. ಜಡಶರೀರಕ್ಕೆ ಅನಿತ್ಯತ್ವ ಪ್ರಾಪ್ತವಾದರೂ, ಭಗವಂತನ ಶರೀರ ಅನಿತ್ಯತ್ವವು ಪ್ರಾಪ್ತವಾಗುವದಿಲ್ಲ ಏಕೆಂದರೆ ಭಗವಂತನ ಶರೀರ ಜ್ಞಾನಾನಂದಾತ್ಮವಾಗಿ ಅಭಿನ್ನವಾದ್ದರಿಂದ ಅಜಡತ್ವವಾಗಿರುತ್ತದೆ ಎಂಬ ಭಾವವಿರುತ್ತದೆ. ಅದನ್ನೆ ಇಲ್ಲಿ ನಮೂದಿಸಿದ ಶೃತಿಯು ಸ್ಪಷ್ಟಪಡಿಸುತ್ತದೆ.

॥ इत्थंभूत लक्षणे इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

ननु कर्तृकरणयोः तृतीया इति सूत्रेण कर्तरि करणे च तृतीया विहिता। व्यासेन कृतं बाणेन इति उदाहरणम्। प्रकृते च दृश्यत इत्युक्तं दर्शनक्रियां प्रति चिदानन्दात्मन इत्यस्य कर्तृकरणत्वयोः अभावात् कथं तृतीया इत्यत आह– इत्थंभूत लक्षण इति॥
कर्तृकरणयोः तृतीया ಎಂಬ ಸೂತ್ರದಂತೆ ಕರ್ತೃಮತ್ತು ಕರಣಗಳಲ್ಲಿ ತೃತೀಯಾ ವಿಭಕ್ತಿ ವಿಹಿತವಾಗಿರುತ್ತದೆ. ಉದಾಃ ವ್ಯಾಸನಿಂದ ಮಾಡಿದ ಬಾಣದಿಂದ. ಪ್ರಕೃತದಲ್ಲಿ, ದೃಶ್ಯತ ಎಂದು ಹೇಳಿದ್ದು, ದರ್ಶನಕ್ರಿಯಾ ಚಿದಾನಂದಾತ್ಮನ ಪ್ರತಿ, ಮತ್ತು ಅಲ್ಲಿ ಕರ್ತೃಕರಣಗಳಲು ಇರುವದಿಲ್ಲ , ಹೀಗಾಗಿ ಅಲ್ಲಿ ತೃತೀಯಾವಿಭಕ್ತಿ ಹೇಗೆ ಯೋಗ್ಯವಾಗುತ್ತದೆ? ಎಂಬ ಶಂಕೆಯನ್ನು ಈ ಟೀಕಾವಾಕ್ಯ ನಿವಾರಿಸುತ್ತದೆ,

इत्थं भूत लक्षणे तृतीया। किञ्चनप्रकारं प्राप्त इत्थं भूतः। तत् लक्षणे तत् ज्ञापके तृतीया स्यात्। यथा छात्रेण उपाध्यायं अद्राक्षीत् इति। अत्र उपाध्यायत्वरूप प्रकारं प्राप्त उपाध्याय इत्थं भूतः। तत्र उपाध्यायरूपप्रकारस्य अन्यत्र प्रसक्ति परिहाराय तत् ज्ञापके छात्रे तृतीया भवति।
ಇಲ್ಲಿ इत्थं भूत लक्षणे तृतीया ಎಂಬ ನಿಯಮವನ್ನು ಉಪಯೋಗಿಸಲಾಗಿದೆ. ಕೆಲವಂದು ಪ್ರಕಾರ ಅಂದರೆ ವಿಧ, ಅಥವಾ ಸಾದೃಶ್ಯವನ್ನು ಪ್ರಾಪ್ತವಾದುದು ಇತ್ಥಂ ಭೂತ ವೆನಿಸುತ್ತದೆ. ಅದರ ಲಕ್ಷಣ ಅದನ್ನು ಜ್ಞಾಪಿಸಲು ತೃತೀಯಾ ವಿಭಕ್ತಿವಿರುತ್ತದೆ. ಉದಾಃ ವಿದ್ಯಾರ್ಥಿಯು ಉಪಾಧ್ಯಾಯರನ್ನು ನೋಡಿದನು. ಇಲ್ಲಿ ಉಪಾಧ್ಯಾಯತ್ವರೂಪ ಪ್ರಕಾರವು ಪ್ರಾಪ್ತ ಉಪಾಧ್ಯಾಯರು ಇತ್ಥಂ ಭೂತವಿನಿಸುತ್ತಾರೆ. ಅಲ್ಲಿ ಉಪಾಧ್ಯಾಯರೂಪ ಪ್ರಕಾರದ ಬೇರೆಕಡೆ ವ್ಯಾಪ್ತಿಯನ್ನು ಪರಿಹರಿಸಲು ಅವರ ಜ್ಞಾಪಕ ವಿದ್ಯಾರ್ಥಿಯಲ್ಲಿ ತೃತೀಯಾವಿಭಕ್ತಿ ಆಗುತ್ತದೆ.

एवं दृश्यत इति दर्शनविषयत्वरूपप्रकारं प्राप्तो रमापतिः इत्थंभूतः तत्र दर्शनविषयत्वं केन प्रकारेण किं निर्गुणत्वेन वा अन्येन वा प्रकारेण शङ्कायां दर्शनविषयत्वरूपप्रकार ज्ञापकं चिदात्मकत्वं इति तत्र तृतीया युक्त इत्यर्थः।
ಈ ರೀತಿಯಾಗಿ ದೃಶ್ಯತ ಎಂದು, ದರ್ಶನವಿಷಯತ್ವರೂಪ ಪ್ರಕಾರ ಪ್ರಾಪ್ತವಾದ ರಮಾಪತಿಯು ಇತ್ಥಂ ಭೂತವೆನಿಸುವನು. ಅಲ್ಲಿ ದರ್ಶನವಿಷಯತ್ವವು ಯಾವ್ ಪ್ರಕಾರದ್ದಾಗಿರುತ್ತದೆ, ಅದು ನಿರ್ಗುಣತ್ವವಾಗಿರುತ್ತದೊ ಅಥವ ಅನ್ಯ ಪ್ರಕಾರದ್ದಾಗಿರುತ್ತದೊ?

ಎಂಬ ಶಂಕೆಯಲ್ಲಿ ದರ್ಶನವಿಷಯ ರೂಪ ಪ್ರಕಾರದ ಜ್ಞಾಪಕವು ಚಿದಾತ್ಮಕತ್ವವು ಎಂದು ಅಲ್ಲಿ ತೃತೀಯಾ ವಿಭಕ್ತಿ ಯೋಗ್ಯವಾಗಿರುತ್ತದೆ ಎಂದರ್ಥ.

ಇದನ್ನು ಶ್ರೀಸತ್ಯನಾಥರು ತಮ್ಮ ಪರಶುಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ:

**ननु चिदात्मना इति तृतीया अनुपपन्ना। कर्तृकरणयोः तृतीया इति कर्तृत्वकरण वाचकत्व अभिधानात्। प्रकृते च जीवस्य कर्तृत्वेन तत् इन्द्रियाणां करणत्वेन चिदात्मनः कर्तृत्वकरणत्वयोः अन्यतरस्य अभावात् इत्यत आह्–इत्थंभूत इति ॥**

ಇಲ್ಲಿ ಚಿದಾತ್ಮನಾ ಎಂದು ತೃತಿಯಾ ವಿಭಕ್ತಿ ಉಪಯೋಗಿಸಿದ್ದು ಅಯೋಗ್ಯವಾಗಿದೆ. कर्तृकरणयोः तृतीया ಎಂದು ಕರ್ತೃಕರಣ ವಾಚಕ ಅಭಿಧಾನವಿರುತ್ತದೆ. ಪ್ರಕೃತದಲ್ಲಿ ಜೀವನ ಕರ್ತೃತ್ವ ದಿಂದ ಅವನ ಇಂದ್ರಿಯಗಳ ಕರಣತ್ವದಿಂದ, ಚಿದಾತ್ಮನ ಕರ್ತೃಕರಣತ್ವಗಳಲ್ಲಿ ಒಂದಿಲ್ಲೊಂದರ ಅಭಾವತೆ ಇದೆ ಎಂಬ ಶಂಕೆಗೆ ಉತ್ತರರೂಪವಾಗಿ ಈ ಟೀಕಾವಾಕ್ಯ ಇರುತ್ತದೆ.

**विनाशयोग्यत्वरूपप्रकारं प्राप्तस्य ईश्वरस्य ज्ञापनाय केचित् आत्मक इत्थंभूत लक्षणा इति सूत्रेण तृतीया। यद्यपि विनाशयोग्यचिदात्मकश्च एक एव इति न ज्ञाप्यज्ञापकभावः। तथापि चिदात्मकत्वेन विनाशयोग्यत्वं ज्ञाप्यं इति विनाशयोग्यत्व अवच्छिन्नतया ईश्वरस्य ज्ञाप्यत्वं चिदात्मकत्व अवच्छिन्नतया ईश्वरस्य ज्ञापकत्वं अस्ति एव इति न तृतीया अनुपपत्तिः इति द्रष्टव्यम्।**

ಇಲ್ಲಿ, ವಿನಾಶಯೋಗ್ಯತ್ವರೂಪ ಪ್ರಕಾರ ಪ್ರಾಪ್ತವಾದ ಈಶ್ವರನ ಜ್ಞಾಪನಕ್ಕಾಗಿ ಕೆಲವೊಂದು ಆತ್ಮನ "ಇತ್ಥಂ ಭೂತ ಲಕ್ಷಣಾ" ಎಂಬ ಸೂತ್ರದಿಂದ, ಲಕ್ಷಣವಾದ ಚಿದಾತ್ಮಕ ಲಕ್ಷಣವನ್ನು ತೃತೀಯಾ ವಿಭಕ್ತಿಯಲ್ಲಿ ಇಡಲಾಗಿದೆ. ಹಾಗೆ ನೋಡಲಾಗಿ, ವಿನಾಶಯೋಗ್ಯಚಿದಾತ್ಮಕರೂಪ ಒಂದೇ ಆಗಿರುತ್ತದೆ, ಎಂದು ಅಲ್ಲಿ ಜ್ಞಾಪ್ಯಜ್ಞಾಪಕಭಾವ ಇರುವದಿಲ್ಲ. ಹಾಗಿದ್ದರೂ ಚಿದಾತ್ಮಕತ್ವದಿಂದ ವಿನಾಶಯೋಗ್ಯತ್ವವು ಜ್ಞಾಪ್ಯವಾಗಿರುತ್ತದೆ ಎಂದು ವಿನಾಶಯೋಗ್ಯತ್ವ ಬೇರ್ಪಡಿಸುವಿಕೆಯಿಂದ ಈಶ್ವರನ ಜ್ಞಾಪ್ಯತ್ವ , ಮತ್ತು ಚಿದಾತ್ಮಕತ್ವ ಬೇರ್ಪಡಿಸುವಿಕೆಯಿಂದ ಈಶ್ವರನ ಜ್ಞಾಪಕತ್ವ ಇದ್ದೇ ಇರುತ್ತದೆ ಎಂದು ಇಲ್ಲಿ ತೃತೀಯಾ ವಿಭಕ್ತಿ ಉಪಯೋಗಿಸುವಲ್ಲಿ ಯಾವ ಅಯೋಗ್ಯತೆಗೆ ಆಸ್ಪದವಿರುವದಿಲ್ಲ ಎಂದು ತಿಳಿಯತಕ್ಕದ್ದು.

॥इति श्रीमत्सत्यनिधितीर्थश्रीमच्चरणचरणाराधकश्रीमत्सत्यनाथयति विरचितः
मिथ्यात्वानुमानखण्डनपरशु समाप्तः॥

## टीका

### ॥ निर्दोष इति ॥

**न केवलं निर्दोषानन्दचिदात्मकः। नापि अभेदात् गुणगुणिभाव अभाव इति उक्तं–निर्दोष इति॥**

**कल्याणत्वं परिपूर्णत्वादिना।**



ಕೇವಲ ನಿರ್ದೋಷಾನಂದಚಿದಾತ್ಮಕನಲ್ಲ. ಹಾಗೂ ಅಭೇದವುಳ್ಳವನಾದ್ದರಿಂದ ಗುಣಗುಣಿಭಾವ ಇಲ್ಲವಾಗುವದಿಲ್ಲ ಎಂದು ನಿರ್ದೋಷ ಮುಂತಾದ ಭಗವಂತನ ಗುಣಗಳನ್ನು ಗ್ರಹಿಸಲಾಗಿದೆ.

ಕಲ್ಯಾಣತ್ವವೆಂದರೆ ಪರಿಪೂರ್ಣತ್ವ ಎಂದರ್ಥ.

## टिप्पणीनाम् विशेषार्थानि

### ॥ न केवलं इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**निर्दोष इति सत् शब्दार्थ अनुवादः। आनन्दज्ञानरूपगुणद्वयात्मक एव न भवति इत्यर्थः।**

ಇಲ್ಲಿ ನಿರ್ದೋಷ ಪದವು ಸದಾನಂದ ಪದದಲ್ಲಿಯ ಸತ್ ಪದಾರ್ಥದ ಅನುವಾದ ಆಗಿರುತ್ತದೆ. ಅಂದರೆ ಆನಂದಜ್ಞಾನರೂಪ ಗುಣದ್ವಯಗಳದ್ದಾಗಿರುವದಿಲ್ಲ ಎಂದರ್ಥ.

### ॥ नापि अभेदात् इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**चिदात्मना इत्युक्त्या अभेदात् गुणगुणिभाव अभाव प्रसक्तः। स नास्ति इत्यर्थः।**

ಚಿದಾತ್ಮನಾ ಎಂದು ಹೇಳಿದ್ದರಿಂದ, ಅದು ಅಭಿನ್ನವಾದ್ದರಿಂದ ಗುಣಗುಣಿಭಾವದ ಅಭಾವತೆಯ ಪ್ರಸಕ್ತಿ ಉಂಟಾಗುವದು ಎಂದರೆ ಅದು ಹಾಗಿರದೆ, ಗುಣಗುಣಿಭಾವದ ಅಭಾವತೆ ಇರುವದಿಲ್ಲ ಎಂದರ್ಥ.

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

**चिदात्मना इत्युक्त्या अभेदात् प्रसक्तो यो गुणगुणिभाव अभावः सोऽपि न इति गुणग्रहणं कुर्वता उक्तं इत्यर्थः। अभेदेऽपि विशेषबलात् गुणगुणिभावो भविष्यति इति भावः।**

ಚಿದಾತ್ಮನಾ ಎಂದು ಹೇಳಿದ್ದರಿಂದ, ಅಭೇದ ಪ್ರಸಕ್ತಿ ಉಂಟಾಗಿ, ಗುಣಗುಣಿಭಾವದ ಇಲ್ಲದಾಗುವ ಪ್ರಸಂಗ ಉಂಟಾಗುವದು ಎಂದರೆ, ಅದು ಹಾಗೆ ಉಂಟಾಗುವದಿಲ್ಲ, ಎಂದು ಭಗವಂತನ ಗುಣಗ್ರಹಣ ಮಾಡಿದ್ದರಿಂದ ಹೇಳಿದಂತಾಯಿತು ಎಂದರ್ಥ. ಅಭೇದದಲ್ಲಿ ಕೂಡ ವಿಶೇಷದ ಬಲದಿಂದ ಗುಣಗುಣಿ ಭಾವ ಉಂಟಾಗುತ್ತದೆ ಎಂಬ ಭಾವವಿರುತ್ತದೆ.

**अभीष्टफलदातारं शुकादिद्विजसेवितम्।**
**भवाध्वाटनखिन्नोऽहं विष्णुमन्दारमाश्रये॥**

ಈ ಸಂಸಾರಚಕ್ರದಲ್ಲಿಸಿಲುಕಿ ಖಿನ್ನನಾದ ನಾನು, ಎಲ್ಲ ಅಭೀಷ್ಟಫಲಗಳ್ ಪ್ರದಾತನಾದ, ಶುಕಾದಿ ದ್ವಿಜ ಶ್ರೇಷ್ಠರಿಂದ ಸೇವಿತನಾದ ವಿಷ್ಣುವಿನ ಮಂದಾರವನ್ನು ಆಶ್ರಯಿಸುತ್ತೇನೆ.

॥इति श्रीमद्ब्रह्मण्यतीर्थपूज्यपादानां शिष्येण व्यासतीर्थयतिना विरचिता
प्रपञ्चमिथ्यात्वानुमानखण्डनपञ्चिका भावप्रकाशिका मन्दारमञ्जरी सम्पूर्णा॥

ಇದನ್ನು ಶ್ರೀಕೇಶವಾಚಾರ್ಯರು ತಮ್ಮ ವಿಷಮಪದವಾಕ್ಯಾರ್ಥ ವಿವರಣೆಯಲ್ಲಿ ಹೀಗೆ ವಿವರಿಸುತ್ತಾರೆ:

**शिष्टं चिरन्तन टिकायां स्पष्टम्। तत एव प्रतिपत्तव्यं।**

ಇನ್ನು ಉಳಿದಿದ್ದೆಲ್ಲ ಶ್ರೀವ್ಯಾಸತೀರ್ಥರ ಟಿಪ್ಪಣಿಯಲ್ಲಿ ಸ್ಪಷ್ಟವಾಗಿರುತ್ತದೆ. ಅದನ್ನೇ ತಿಳಿದುಕೊಳ್ಳಬೇಕು.

**यद्विद्याधीशगुरोः शुश्रूषान्या न रोचते यस्मात्।**
**अस्त्वेषा भक्तियुक्ता श्रीविद्याधीशपादयोः सेवा॥**

ಶ್ರೀವಿದ್ಯಾಧೀಶಗುರುಗಳ ಸೇವೆಯ ಹೊರತಾಗಿ ನಮಗೆ ಯಾವದೂ ಇಷ್ಟವಿರುವದಿಲ್ಲವೊ ಹೀಗಾಗಿ ಈ ಭಕ್ತಿಪೂರ್ವಕವಾಗಿ ರಚಿಸಿದ ಗ್ರಂಥ, ಶ್ರೀವಿದ್ಯಾಧೀಶಪಾದಗಳ ಸೇವೆಯಾಗಲಿ.

॥ इति श्रीमत्पदवाक्यप्रमाणविदामग्रेसराणां परमहंसपरिव्राजकाचार्याणां श्रीमद्विद्याधीशतीर्थपूज्यपादानां निजशिष्येण केशवाचार्यविरचितम् मिथ्यात्वानुमानखण्डन विषमपदवाक्यार्थविवरणं समाप्तम्॥

## ॥ इति उक्तं इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**इत्याशयेन उक्तं इत्यर्थः।**

ಅಂದರೆ ಆಶಯದಿಂದ ಹೇಳಲಾಗಿದೆ ಎಂದರ್ಥ.

## ॥ निर्दोष इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**केवलं आनन्दचिदात्मक एव न भवति इत्येतत् अखिल इत्यनेन उक्तं अभेदाद् गुणगुणिभाव अभावः न इत्येतत् कल्याणाः गुणाः यस्य असौ तथोक्त इत्यनेन उक्तम्। अभेदेऽपि भेदकार्यकारी यः विशेषः तद्बलात् गुणगुणिभावः युक्त इत्यभिप्रायः।**

ಕೇವಲ ಆನಂದ ಚಿದಾತ್ಮಕವೇ ಆಗಿರುವದಿಲ್ಲ ಎಂದು ಅಖಿಲ ಎಂಬುದರಿಂದ ಹೇಳಿದ ಗುಣಗುಣಿಭಾವದ ಅಭಾವತೆ ಇರುವದಿಲ್ಲ ಎಂದು ಕಲ್ಯಾಣಗುಣಗಳು ಯಾವನದೊ ಅವುಗಳು, ಎಂಬುದರಿಂದ ಹೇಳಲಾಗಿದೆ. ಅಭೇದವಿದ್ದರೂ ಯಾವ ಭೇದಕಾರ್ಯಕಾರಿಯಾಗಿದೆಯೊ ಅದರ ವಿಶೇಷ ಬಲದಿಂದ ಗುಣಗುಣಿಭಾವ ಯುಕ್ತವಾಗಿದೆ ಎಂಬ ಅಭಿಪ್ರಾಯವಿರುತ್ತದೆ.

## ॥ परिपूर्णत्वादिना इति॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**गुणानां कल्याणत्वं नाम कीदृशं इत्यत आह– परिपूर्णत्वादिना इति॥**
**परिपूर्णत्वं नाम प्रत्येकं अपरिच्छिन्नत्वम्। आदिपदेन भगवदात्मकत्वादिग्रहणम्। गुणानां सङ्ख्या आनंत्यस्य अखिल इत्यनेन उक्तत्वात् गुणानाम् निःसीमत्वापरपर्याय परिपूर्णत्वरूपं यद्गुणत आनंत्यं**



**तत् कल्याणपदेन उक्तम्। प्रत्येकशो गुणानां तु निःसीमत्वं उदीर्यते। तदानंत्यं हि गूणतः ते च अनन्त हि सङ्ख्यया इति वचनात् इति भावः।**

ಗುಣಗಳ ಕಲ್ಯಾಣತ್ವವು ಯಾವ ತರಹದ್ದಾಗಿರುತ್ತದೆ, ಎಂಬುದನ್ನು ಪರಿಪೂರ್ಣತ್ವಾದಿಗುಣಗಳಿಂದ ವಿವರಿಸುತ್ತಾರೆ. ಪರಿಪೂರ್ಣತ್ವವೆಂದರೆ ಪ್ರತ್ಯೇಕವಾದ ಅವಧಿ ಇಲ್ಲದಂತಹದು. ಆದಿ ಪದದಿಂದ ಭಗವದಾತ್ಮಕತ್ವಾದಿ ಗುಣಗಳನ್ನು ಗ್ರಹಿಸಲಾಗಿದೆ. ಗುಣಗಳ ಸಂಖ್ಯೆಯ ಅನಂತತ್ವದ ಅಖಿಲ ಎಂಬುದರಿಂದ ಹೇಳಿದ್ದರಿಂದ ಗುಣಗಳ ನಿಃಸೀಮತ್ವಪರಪರ್ಯಾಯ ಪರಿಪೂರ್ಣತ್ವರೂಪವು ಯಾವದು ಗುಣಗಳಿಂದ ಅನಂತವಾದುದನ್ನು ಕಲ್ಯಾಣ ಪದದಿಂದ ಹೇಳಲಾಗಿದೆ. ಪ್ರತ್ಯೇಕ ಗುಣಗಳಿಗಾದರೂ ನಿಃಸೀಮತೆಯನ್ನು ಹೇಳಲಾಗಿದೆ. ಅದರಂತೆ ಟಿಪ್ಪಣಿಯಲ್ಲಿ ನಮೂದಿಸಿದ ಉಕ್ತಿಯಿಂದ ಇದು ಮತ್ತಿಷ್ಟು ಸ್ಪಷ್ಟವಾಗುತ್ತದೆ.

# टीका

## ॥ रमापतिम् इति॥

**रमापतिं इत्यनेन भगवती च अपि वन्दिता भवति।**

ರಮಾಪತಿ ಎಂಬುದರಿಂದ ಮಹಾಲಕ್ಷ್ಮೀಯನ್ನು ಕೂಡ ವಂದಿಸಿದಂತಾಯಿತು.

### टिप्पणीनाम् विशेषार्थानि

## ॥ भगवती इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**भगवती महालक्ष्मीः।**

ಭಗವತೀ ಎಂದರೆ ಮಹಾಲಕ್ಷ್ಮೀ ಎಂದರ್ಥ.

## ॥ अपि वन्दिता इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**भगवत् विशेषणत्वेन इत्यर्थः।**

ಅಂದರೆ ಭಗವಂತನ ವಿಶೇಷಣ ಪೂರ್ವಕ ಎಂದರ್ಥ.

**पूर्वार्धे यत् शब्द श्रवणात् उत्तरार्धे तम् इति अध्याहार्यम्।**

ಮೂಲ ಶ್ಲೋಕದ, ಪೂರ್ವಾರ್ಧದಲ್ಲಿ ಯತ್ ಶಬ್ದವಿರುವದರಿಂದ, ಉತ್ತರಾರ್ಧದಲ್ಲಿ ತಮ್ ಎಂದು ಅಧ್ಯಾಹಾರಮಾಡಿಕೊಳ್ಳಬೇಕು.

## १२. टीकान्ते मङ्गल पद्यम्

ಇಲ್ಲಿ ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**समापितं ग्रन्थः, भगवान् टीकाकारः अन्तेऽपि मङ्गलं आचरति– उत्पत्ति इति॥**

ತಮ್ಮ ಗ್ರಂಥವನ್ನು ಮುಗಿಸಲು ಹೊರಟ ಭಗವಾನ್ ಟೀಕಾಕಾರರು, ಅಂತ್ಯದಲ್ಲಿ ಕೂಡ ಮಂಗಲವನ್ನು ಆಚರಿಸುತ್ತಾರೆ:

**टीका**

**उत्पत्तिस्थितिभङ्गं विश्वं यस्मात् प्रपद्यते पुरुषात्।**
**स जयति जगतामन्तर्यामि स्वामी रमानाथः॥**

अन्वयः– यस्मात् पुरुषात् उत्पत्तिस्थितिभङ्गं विश्वं प्रपद्यते, स जगतां अन्तर्यामि स्वामी रमानाथः जयति।

ಯಾವ ಪುರುಷನಿಂದ, ಉತ್ಪತ್ತಿ, ಸ್ಥಿತಿ ಮತ್ತು ಲಯಗಳನ್ನು ವಿಶ್ವವು ಹೊಂದುತ್ತದೊ, ಆ ಜಗತ್ತಿನ ಅಂತರ್ಯಾಮಿ ಸ್ವಾಮೀ ರಮಾನಾಥನು ಉತ್ಕೃಷ್ಟನಾಗಿದ್ದಾನೆ.

॥ इति श्रीमदानन्दतीर्थ भगवत्पादाचार्य विरचित प्रपञ्चमिथ्यात्वानुमानखण्डनविवरणं जयतीर्थ भिक्षु विरचितं सम्पूर्णम्॥

### टिप्पणीनाम् विशेषार्थानि

### ॥ उत्पत्ति इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

**विश्वं कर्तुः। भङ्गं इति द्वितीया। परोदीरित प्रपञ्चमिथ्यात्व प्रमाणस्य आभासता व्युत्पादनेन सत्यभूत जगदुदयादिनिमित्त कारणत्वरूपं यत् परब्रह्मलक्षणं जन्माद्यस्य यत इति भगवता सूत्रकारेण उक्तं तत् अत्र समर्थितम्। तत् अभिप्रायेण उक्तं उत्पत्ति इत्यादि।**

ವಿಶ್ವವನ್ನು ಮಾಡಿದವನು. ಇಲ್ಲಿ ಭಂಗಂ ಎಂದು ದ್ವಿತೀಯಾ ವಿಭಕ್ತಿಯಲ್ಲಿ ಇರುತ್ತದೆ. ಪರರು ಪ್ರತಿಪಾದಿಸಿದ ಪ್ರಪಂಚ ಮಿಥ್ಯಾತ್ವ ಪ್ರಮಾಣದ ಆಭಾಸತೆಯ ವ್ಯುತ್ಪಾದನೆಯಿಂದ ಸತ್ಯಭೂತ ಜಗದುದಯಾದಿ ಕಾರಣತ್ವರೂಪ ಯಾವ ಪರಬ್ರಹ್ಮನ ಲಕ್ಷಣವನ್ನು जन्माद्यस्य यतः ಎಂದು ಭಗವತಾ ಸೂತ್ರಕಾರರು ಹೇಳಿರುವರೊ ಅದನ್ನು ಇಲ್ಲಿ ಸಮರ್ಥಿಸಲಾಯಿತು. ಈ ಅಭಿಪ್ರಾಯ ಹಿನ್ನೆಲೆಯಲ್ಲಿ ಈ ಅಂತ್ಯ ಮಂಗಲ ಪದ್ಯವನ್ನು ಟೀಕಾಕೃತ್ಪಾದರು ಆಚರಿಸಿರುತ್ತಾರೆ..



**उत्पत्तिश्च स्थितिश्च भङ्गश्च द्वन्द्वः। सर्वः द्वन्द्वः विभाषया एकवद्भवति इति एकवद्भावं सनपुंसकम्। यस्य एकवद्भावः सनपुंसकं स्यात् इति नपुंसकत्वं च आश्रित्य उत्पत्ति स्थिति भङ्गं इत्युक्तं इति ज्ञातव्यम्।**

ಉತ್ಪತ್ತಿಸ್ಥಿತಿಭಙ್ಗಂ ಎಂಬುದನ್ನು ಉತ್ಪತ್ತಿಶ್ಚ ಸ್ಥಿತಿಶ್ಚ ಭಙ್ಗಶ್ಚ ಎಂದು ದ್ವಂದ್ವಸಮಾಸವನ್ನು ಮಾಡಿ ಮತ್ತು ಮೇಲಿನ ನಮೂದಿಸಿದ ಹೇಳಿಕೆಯಂತೆ ನಪೂಂಸಕ ಲಿಂಗದಲ್ಲಿ ಇಡಲಾಗಿದೆ.

**जयति उत्कृष्टो वर्तते। इति अशेषं अतिमङ्गलम्।**

ಇಲ್ಲಿ ಜಯತಿ ಎಂದರೆ ಉತ್ಕೃಷ್ಟನಾಗಿದ್ದಾನೆ ಎಂದರ್ಥ. ಹೀಗೆ ಅಂತ್ಯದಲ್ಲಿ ಮಂಗಲವಿರುತ್ತದೆ.

**यादवाचार्यहृद्गतश्रीमध्वहृद्गतः।**
**प्रीयतामनया ग्रन्थकृत्या व्यासो गुणाकरः।**
**श्रीमध्वकृतसिद्धान्तं योऽभ्यधात्स्नेहतो मयि।**
**तं वन्दे यादवाचार्यगुरुं शिष्यकृपानिधिम्॥**

ಯಾದವಾಚಾರ್ಯಹೃದ್ಗತ್ ಶ್ರೀಮದ್ವಹೃದ್ಗತ್ ಗುಣಾಕರ ವ್ಯಾಸದೇವರು ನಮ್ಮಿಂದ ಮಾಡಲ್ಪಟ್ಟ ಈ ಗ್ರಂಥದಿಂದ ಪ್ರೀತನಾಗಲಿ.

ಯಾರು, ಈ ಶ್ರೀಮದ್ವಕೃತ ಸಿದ್ಧಾಂತವನ್ನು ಅತಂತಸ್ನೇಹಪೂರ್ವಕ ನನ್ನಲ್ಲಿ ಧಾರೆಯೆರೆದರೊ, ಆ ಶಿಷ್ಯಕೃಪಾನಿಧಿಗಳಾದ ಯಾದವಾಚಾರ್ಯ ಗುರುಗಳಿಗೆ ಹೃತ್ಪೂರ್ವಕವಾಗಿ ವಂದಿಸುತ್ತೇವೆ.

॥श्रीमद्यदुपत्याचार्यपूज्यपादाराधकेन श्रीनिवासेन विरचिता प्रपञ्चमिथ्यात्वानुमानखण्डन पञ्चिका संपूर्णा॥

यत् कृपाकारुण्यबलात् श्रीमध्वशास्त्रं भाति मया।
अस्तु एषा भक्तियुक्ता रामाचार्यगुरु पादयोः सेवा॥

॥श्रीमद्रामाचार्यपूज्यपादाराधकेन श्रीगुरुराजाचार्यसूनुना जयतीर्थेण विरचितं प्रपञ्चमिथ्यात्वानुमानखण्डन कन्नडभाषा विवरणं सम्पूर्णम्॥

---

# परिशीलित ग्रन्थसूचि


१. श्रीपद्मनाभतीर्थविरचित प्रपञ्चमिथ्यात्वानुमानखण्डनटीका
२. श्रीजयतीर्थविरचित प्रपञ्चमिथ्यात्वानुमानखण्डनटीका
३. श्रीव्यासतीर्थविरचित मन्दारमंजरी प्रपञ्चमिथ्यात्वानुमानखण्डनटीका टिप्पणि
४. श्रीनिवासतीर्थविरचित दुर्गमार्थव्याख्या प्रपञ्चमिथ्यात्वानुमानखण्डनटीका टिप्पणि
५. श्रीसत्यनाथतीर्थविरचित परशु प्रपञ्चमिथ्यात्वानुमानखण्डनटीका टिप्पणि.
६. श्रीपाण्डुरङ्गी केशवाचार्य विरचित विषमपदवाक्यार्थविवरणं प्रपञ्चमिथ्यात्वानुमानखण्डनटीका टिप्पणि.
७. श्रीपाण्डुरङ्गी केशवाचार्य विरचित प्रपञ्चमिथ्यात्वानुमानखण्डनोपन्यासः
८. सम्पादकः विद्वान् सत्यध्यानाचार्य कट्टी, "प्रपञ्चमिथ्यात्वानुमानखण्डनम्" द्वैतवेदान्तप्रतिष्टानम् बेंगलूरु
९. श्रीविद्यामान्यतीर्थविरचित खण्डनत्रय अनुवाद संग्रहः, पूर्णप्रज्ञविद्यापीठ बेंगलूरु
१०. श्रीवादिराजाचार्यविरचित प्रमाणसंग्रहः
११. श्रीचक्रवर्तिश्रीनिवासगोपालाचार्य कृत शब्दार्थकौस्तुभः
१२. महामहोपाध्याय भीमाचार्येण विरचितः न्यायकोशः


---



# पारिभाषिक शब्दार्थ कोशः

**अङ्गान्तर वैकल्यः** ಇದೊಂದು ಅನುಮಾನದ ದೋಷ. ಯಾವದೆ ಅನುಮಾನಕ್ಕೆ ವ್ಯಾಪ್ತಿ ಮತ್ತು ಪಕ್ಷ ಧರ್ಮತಾ ಎಂಬ ಎರಡು ಅಂಗಗಳು ಬೇಕು. ಅವುಗಳಲ್ಲಿಯ ಯಾವುದಾದರು ಒಂದು ಅಥವಾ ಎರಡೂ ಅಂಗಗಳಲ್ಲಿದ ಅಥವಾ ಅವು ದೋಷಪೂರ್ಣ ವಾಗಿದ್ದರೆ ಆ ಅನುಮಾನವು ಅಂಗಾಂತರ ವೈಕಲ್ಯ ದೋಷಗ್ರಸ್ತ ಅನುಮಾನವೆನಿಸುವದು.

**अतिप्रसङ्गः** ಅಧಿಕೊಕ್ತಿ, ವಿಷಯಕ್ಕೆ ಸಂಬಂಧಪಡದಿರುವಿಕೆ.

**अतिव्याप्तिः** ಇದು ಒಂದು ಲಕ್ಷಣದ ದೋಷ. ಲಕ್ಷಣವು ತಾನಿರಬೇಕಾದ ಲಕ್ಷ್ಯವನ್ನು ಬಿಟ್ಟು ಬೇರೆ ಕಡೆ ಸಂಬಂಧಿಸುವದು, ಹಾಗೂ ತನಗೆ ಸಂಬಂಧಿಸಿದ ಕಡೆಯೂ ಇರುವುದು. ಉದಾಃ श्रृङ्गी गौः ಎಂಬ ಗೋವಿನ ಲಕ್ಷಣಕ್ಕೆ ಮಹಿಷದಲ್ಲಿಯೂ ಶೃಂಗಿತ್ವವಿರುವದರಿಂದ ಅತಿವ್ಯಾಪ್ತಿ.

निरुक्तः ಪದಗಳ ಅವಯವಾರ್ಥಗಳನ್ನು ಹೇಳುವದು. ವೈದಿಕ ಪದಗಳ ಅರ್ಥಬೋಧನೆ.

**अर्थापत्तिः** ಒಂದು ಅಂಶದಿಂದ ಮತ್ತೊಂದು ಅಂಶವನ್ನು ಕಲ್ಪಿಸುವದು. ಉಪಪಾದ್ಯವಾದ ಅರ್ಥದಿಂದ ಅದರ ಉಪಪಾದಕದ ಜ್ಞಾನ ಉಂಟಾಗುವಿಕೆ

**अद्विषः** ಒಂದರಲ್ಲಿ

**अधिकरणः** ಆಧಾರ, ಆಶ್ರಯ.

**अनवस्था**ः ಉಪಪಾದ್ಯ ಹಾಗೂ ಉಪಪಾದಕಗಳಿಗೆ ಅಥವಾ ಕಾರ್ಯಕಾರಣಗಳಿಗೆ ಕೊನೆಯಿಲ್ಲದಿರುವುದು. ಒಂದರ ಉತ್ಪತ್ತಿ ಜ್ಞಪ್ತಿಗೆ ಮತ್ತೊಂದು, ಅದಕ್ಕೆ ಮಗದೊಂದು,, ಹೀಗೆ ಅನಂತ ಪದಾರ್ಥಗಳ ಪರಂಪರೆ ಒಪ್ಪುವದು ಅನವಸ್ಥಾ.

**अनारम्भणीय**ः ವಿವೇಕಿಗಳ ಅಧ್ಯಯನಕ್ಕೆ ಯೋಗ್ಯವಲ್ಲದ್ದು.

**अनिर्वचनीय**ः ಉಚ್ಚರಿಸಲಾಗದ, ಹೇಳಲಾಗದ. ಹೇಳಲು ಅಶಕ್ಯವಾದ ತೋರಿಕೆ.

**अन्यतर असिद्धिः** ಒಂದರಲ್ಲೊಂದು ಅಸಿದ್ಧಿ ಉಂಟಾಗುವದು.

**अध्यस्तः** ತಪ್ಪಾಗಿ ತಿಳಿಯಲ್ಪಟ್ಟ.

**आध्यासिकः** ತಪ್ಪುತಿಳಿವಳಿಕೆಯಿಂದ ಕಲ್ಪಿತವಾದ ವಸ್ತು.

**अन्योन्याश्रय**ःः ಪರಸ್ಪರಾವಲಂಬನ, ಪರಸ್ಪರ ಒಂದರ ಅಧಿನದಲ್ಲಿ ಮತ್ತೊಂದಿರುವಿಕೆ. ಅನ್ಯೊನ್ಯಾಶ್ರಯವು ಜ್ಞಪ್ತಿ, ಉತ್ಪತ್ತಿ ಮತ್ತು ಸ್ಥಿತಿಃ ಎರಡು ವಸ್ತುಗಳಲ್ಲಿ ಪರಸ್ಪರ ಒಂದರ ಜ್ಞಾನವುಂಟಾದರೆನೆ ಮತ್ತೊಂದರ ಜ್ಞಾನವುಂಟಾಗುವದು, ಇದು ಜ್ಞಪ್ತಿ ಅನ್ಯೊನ್ಯಾಶ್ರಯ; ಎರಡು ವಸ್ತುಗಳಲ್ಲಿ ಪರಸ್ಪರ ಒಂದರ ಉತ್ಪತ್ತಿಯು, ಮತ್ತೊಂದರ ಉತ್ಪತ್ತಿ ಅಪೇಕ್ಷಿಸಿಕೊಂಡಿರುವದು, ಇದು ಉತ್ಪತ್ತಿ ಅನ್ಯೊನ್ಯಾಶ್ರಯ; ಎರಡು ವಸ್ತುಗಳಲ್ಲಿ ಪರಸ್ಪರ

ಒಂದಿರಬೇಕಾದರೆ ಮತ್ತೊಂದರ ಇರುವಿಕೆ ಅವಶ್ಯವಾಗಿರಬೇಕು, ಇದು ಸ್ಥಿತಿ ಅನ್ಯೊನ್ಯಾಶ್ರಯ.

**अनुक्त उपालम्भ:** ಹೇಳದಿದ್ದ ವಕ್ತವ್ಯವನ್ನು ನಿಂದಿಸುವದು.

**अनुमान**: ಅನುಮಿತಿಗೆ ಕಾರಣ, ವ್ಯಾಪ್ಯವಸ್ತುವೊಂದರ ಜ್ಞಾನದಿಂದ ವ್ಯಾಪಕವಸ್ತುವಿದೆಯೆಂಬ ನಿಶ್ಚಯ. ಉದಾಃ ವ್ಯಾಪ್ಯವಾದ ಧೂಮ, ವ್ಯಾಪಕವಾದ ಬೆಂಕಿ ಇವೆರಡನ್ನು ಅಡುಗೆಮನಿಯಲ್ಲಿ ನೋಡಿದವನಿಗೆ ಪರ್ವತಾದಿಗಳಲ್ಲಿ ಧೂಮ ದರ್ಶನದಿಂದ ಪರ್ವತದಲ್ಲಿ ಬೆಂಕಿ ಇದೆ ಎಂಬ ನಿಶ್ಚಿತಜ್ಞಾನ ಉಂಟಾಗುವದು.

**अनुमिति:** ಪರಾಮರ್ಶದಿಂದುಂಟಾಗುವ ಜ್ಞಾನ, अनु + मा "क्तिन्"(३–३–९४). "यत्र धूमः तत्र अग्निः" ಎಂಬಲ್ಲಿ ಧೂಮವಿದ್ದ ಕಡೆ ಅಗ್ನಿಯೂ ಇರುವದೆಂಬ ಇವರೆಡರ ಸಾಹಚರ್ಯಕ್ಕೆ ವ್ಯಾಪ್ತಿ ಎಂದು ಹೆಸರು. ಇಂತಹ ವ್ಯಾಪ್ತಿಯಿಂದ ಕೂಡಿದ ಪಕ್ಷಧರ್ಮತಾ (ಅಗ್ನಿಯನ್ನು ಊಹಿಸಲು ಕಾರಣವಾದ ಧೂಮವು ಪರವತಾದಿಗಳಲ್ಲಿ ಇರುವಿಕೆಯ) ಜ್ಞಾನಕ್ಕೆ ಪರಾಮರ್ಶವೆಂದು ಹೆಸರು.

**अनुपपति:** ಅಸಂಗತಿ, ಹೊಂದಿಕೆ ಇಲ್ಲದಿರುವಿಕೆ.

**अनध्यवसित:** ದುಷ್ಟ ಹೇತು . ಇದು ಅನುಮಾನದ, ಹೇತು ಮತ್ತು ಸಾಧ್ಯಗಳಲ್ಲಿಯ ವ್ಯಾಪ್ತಿ ಸಂಬಂಧದ ದೋಷವನ್ನು ಸೂಚಿಸುತ್ತದೆ. ಅನಧ್ಯವಸಿತ ದೋಷಗ್ರಸ್ತ ಹೇತುವು ವ್ಯಾಪ್ತಿಯ ಜ್ಞಾನವನ್ನೆ ಉದಯಿಸುವದಿಲ್ಲ. साध्य तत् अभाव अनुभय सम्बन्धरूप: अनध्यवसित:।

**अनैकान्तिक:** ದುಷ್ಟ ಹೇತು, ಹೆತ್ವಾಭಾಸ. ಪಕ್ಷದಲ್ಲೂ, ವಿಪಕ್ಷದಲ್ಲೂ ಇರುವ ಹೇತು ಎಂದರ್ಥ. ದುಷ್ಟ ಹೇತು . ಇದು ಅನುಮಾನದ, ಹೇತು ಮತ್ತು ಸಾಧ್ಯಗಳಲ್ಲಿಯ ವ್ಯಾಪ್ತಿ ಸಂಬಂಧದ ದೋಷವನ್ನು ಸೂಚಿಸುತ್ತದೆ. ಅನೈಕಾಂತಿಕ ದೋಷಗ್ರಸ್ತ ಹೇತುವು ವ್ಯಾಪ್ತಿ ಸಂಬಂಧದಲ್ಲಿ ಸಂದೇಹವನ್ನು ಉತ್ಪನ್ನುಂಟು ಮಾಡುತ್ತದೆ. ಅಂದರೆ, साध्य तत् अभाव उभय सम्बन्ध: अनैकान्तिक:।

**अपसिद्धान्त:** ಪೂರ್ವಾಚಾರ್ಯರಿಂದ ಅಂಗೀಕೃತ ಪ್ರಮೆಯಕ್ಕೆ ವಿರುದ್ಧವಾದುದನ್ನು ಅಂಗೀಕರಿಸುವದು.

**अपरोक्ष:** ಪ್ರತ್ಯಕ್ಷವಾದ.

**अप्रसिद्धविशेषण:** ಎಲ್ಲೂ ಪ್ರಸಿದ್ಧವಲ್ಲದ ವಿಶೇಷಣವನ್ನು (ಸಾಧ್ಯವನ್ನು) ಪಕ್ಷದಲ್ಲಿ ಸಾಧಿಸುವದು.

**अप्रसिद्धविशेष्य**: ಪ್ರಸಿದ್ಧವಲ್ಲದ ವಿಶೇಷ್ಯ ಅಥವಾ ಆಶ್ರಯ."गगनारविन्द सुरभि" ಎಂಬಲ್ಲಿ ಗಗನಾರವಿಂದವು ಅಪ್ರಸಿದ್ಧವಿಶೇಷ್ಯವಾಗಿದೆ.

**अभाव:** ಇಲ್ಲದಿರುವಿಕೆ, ದ್ರವ್ಯಾದಿ ಸಪ್ತಪದಾರ್ಥಗಳಲ್ಲಿ ಒಂದು.



द्रव्यगुणकर्मसामान्यविशेषसमवायाभावा: सप्त पदार्था:। ಅಭಾವವು ನಾಲ್ಕುವಿಧಃ ಪ್ರಾಕ್ ಅಭಾವ, ಪ್ರಧ್ವಂಸ ಅಭಾವ, ಅತ್ಯಂತ ಅಭಾವ ಹಾಗೂ ಅನ್ಯೊನ್ಯ ಅಭಾವ.

**अभिधा:** ಅರ್ಥವನ್ನು ಕೊಡುವ ಶಬ್ದ. ಶಬ್ದದಲ್ಲಿರುವ ಸಂಕೆತ ಅರ್ಥವನ್ನು ಕೊಡುವ ಶಕ್ತಿ.

**अभिव्यञ्जक:** ಪ್ರಕಾಶಪಡಿಸುವ, ಚೆನ್ನಾಗಿ ತಿಳಿಯಪಡಿಸುವ

**अयुतसिद्ध:** ಕಾರ್ಯ ಕಾರಣಗಳು ಬೇರೆಬೇರೆ ಇರದೆ ಒಟ್ಟಿಗೆ ಸೇರಿ ಸಿದ್ಧವಾದ. ಕಾರಣಭೂತವಾದ ಕಪಾಲದ್ವಯಕ್ಕೂ ಕಾರ್ಯವಾದ ಘಟಕ್ಕೂ ಅವಿನಾಭಾವವಿರುವುದು. ಈ ಅವಿನಾಭೂತ ವಾದ ಕಾರ್ಯಕಾರಣಗಳಿಂದ ಸಿದ್ಧವಾದ ಘಟರೂಪವಾದ ಕಾರ್ಯವು ಅಯುತಸಿದ್ಧ. ಇದು ಐದು ವಿಧಃ ಅವಯವ-ಅವಯವಿ, ಗುಣಗುಣಿ, ಕ್ರಿಯೆ-ಕ್ರಿಯಾವತ್, ಜಾತಿ-ವ್ಯಕ್ತಿ ಮತ್ತು ನಿತ್ಯದ್ರವ್ಯ-ವಿಶೇಷ.

**अवगत:** ತಿಳಿಯಲ್ಪಟ್ಟ, ತಿಳಿದಿರುವ

**अवच्छिन्न:** ಬೇರ್ಪಡಿಸಲ್ಪಟ್ಟ, ವಿಂಗಡಿಸಲ್ಪಟ್ಟ, ಉಪಾಧಿಗಳಿಂದ ಭೇದ ತೋರಿಸಲ್ಪಟ್ಟ, ವಿಶೇಷ ಗುಣಗಳಿಂದ ಬೇರ್ಪಡಿಸಲ್ಪಟ್ಟ. ಘಟಾಕಾಶ ಮತ್ತು ಮಠಾಕಾಶಗಳಲ್ಲಿ, ಆಕಾಶ ಒಂದೆ ಇದ್ದರೂ, ಘಟ, ಮಠ ರೂಪವಾದ ಉಪಾಧಿಗಳು ಬೇರೆ ಬೇರೆ ಯಾದುದರಿಂದ ಘಟ ಅವಚ್ಛಿನ್ನ ಹಾಗೂ ಮಾಠ ಅವಚ್ಛಿನ್ನ, ಆಕಾಶಗಳು, ಬೇರೆ ಬೇರೆ ಎಂದು ವ್ಯವರಿಸಲ್ಪಡುತ್ತವೆ.

**अवच्छेद**: ವ್ಯಾಪ್ತಿ, ಇಷ್ಟೆಂದು ಮಿತಿಗೊಳಿಸುವಿಕೆ. ಒಂದು ವಸ್ತುವು ಒಂದೇ ಅಧಿಕರಣದಲ್ಲಿ ಏಕದೇಶದಲ್ಲಿದ್ದು ಮತ್ತೊಂದು ಪ್ರದೇಶದಲ್ಲಿಲ್ಲದಿದ್ದರೆ ಅದು ಅವ್ಯಾಪ್ಯವೃತ್ತಿಯಾಗುವದು. ಅಂತಹ ಅವ್ಯಾಪ್ಯವೃತ್ತಿತ್ವವನ್ನು ಉಪಪಾದಿಸಲು ಸಹಕಾರಿಯಾದುದು ಅವಯವ.

**अवच्छेदक**: ಅವ್ಯಾಪ್ಯ ವೃತ್ತಿತ್ವ ನಿಯಾಮಕ ಒಂದು ಅಧಿಕರಣದಲ್ಲಿ ತಾನಿರುವ ಏಕದೇಶವು ತನಕೆ ಅವಚ್ಛೆದಕವೆನಿಸುವದು. अग्रे वृक्ष: कपिसंयोगी न मूले। ಅಂದರೆ, ಒಂದು ಮರದಲ್ಲಿ, ಕಪಿಸಂಯೋಗವಿರುವ ಅಗ್ರಭಾಗವು ಕಪಿಸಂಯೋಗಕ್ಕು ಹಾಗೂ ಮೂಲವು ಕಪಿಸಂಯೋಗ ಅಭಾವಕ್ಕೂ ಅವಚ್ಛೆದಕಗಳಾಗುವವು.

**अवास्तव**: ನಿಜವಲ್ಲದ, ಯುಕ್ತಿಗೆ ವಿರುದ್ಧವಾದ, ಆಧಾರ ರಹಿತ.

**अविद्या**: ಜ್ಞಾನಕ್ಕೆ ವಿರೋಧಿಯಾದ, ಅಜ್ಞಾನ.

**अव्याप्ति:** ಕೆಲವು ಲಕ್ಷ್ಯಗಳಲ್ಲಿ ಲಕ್ಷಣವಿಲ್ಲದಿರುವದು. "शिखावान् ब्राह्मण:" ಎಂಬ ಲಕ್ಷಣವು ಶಿಖಾಸೂತ್ರಗಳಿಲ್ಲದ ಬ್ರಾಹ್ಮಣ ಸಂನ್ಯಾಯಲ್ಲಿಲ್ಲದುದರಿಂದ ಅಲ್ಲಿ ಅವ್ಯಾಪ್ತಿ.

**असत्**: ಅಸತ್ಯ, ಸುಳ್ಳು.

**असत्व**: ಅಸತ್ಯ, ಸುಳ್ಳು.

**असद्विलक्षण**: ಅಸತ್ಯಕ್ಕಿಂತ ಭಿನ್ನವಾದ.

**असाधारणकारणः** ಸಪಕ್ಷ ಅಥವಾ ವಿಪಕ್ಷಗಳಲ್ಲಿಲ್ಲದ ಕಾರಣ. ನಿರ್ದಿಷ್ಟವಾದ ಒಂದೇ ಕಾರ್ಯಕ್ಕೆ ಮೀಸಲಾದ ಕಾರಣ. ಎಲ್ಲಾ ಕಾರ್ಯಗಳಿಗೂ ಸಾಮಾನ್ಯವಾಗಿ, ಈಶ್ವರ, ಕಾಲ ಮತ್ತು ಅದೃಷ್ಟ ಮುಂತಾದವು ಸಾಧಾರಣ ಕಾರಣವಾಗುವವು. ದಂಡ, ಕುಲಾಲ, ಮತ್ತು ಚಕ್ರ ಮುಂತಾದವು ಘಟಕ್ಕೆ ಮಾತ್ರ ಕಾರಣಗಳಾಗುವದರಿಂದ ಅವು ಅಸಾಧಾರಣ ಕಾರಣ ವೆನಿಸುವವು. ಸಾಮಾನ್ಯವಲ್ಲದ, ವಿಶೇಷಗುಣಗಳುಳ್ಳ.

**असाधारण अनैकान्तिकम् :** ಇದೊಂದು ಹೇತುದೋಷ, पक्षमात्रवृत्ति हेतुः असाधारण अनैकान्तिकः ಅಂದರೆ ಪಕ್ಷಮಾತ್ರದಲ್ಲಿ ವೃತ್ತಿತ್ವವನ್ನು ಹೊಂದಿದ ಹೇತುವು ಅಸಾಧಾರಣ ಅನೈಕಾಂತಿಕ ಎಂದೆನಿಸುವದು.

**असमवायिकारणः** ಗುಣ ಕ್ರಿಯಾರೂಪವಾದ ಕಾರಣ ಅಸಮವಾಯಿಕಾರಣವು ಎರಡು ವಿಧಃ ೧. ಕಾರಣದಲ್ಲಿ ಸಮವಾಯ ಸಂಬಂಧದಿಂದ ಇದ್ದುಕೊಂಡು ಕಾರ್ಯವನ್ನುಂಟು ಮಾಡುವ ಕಾರಣ, ಉದಾಃ तन्तु संयोगः पटस्य असमवायिकारणम्। ಕಾರಣವಾದ ತಂತುವಿನಲ್ಲಿ ಸಮವಾಯ ಸಂಬಂಧದಿಂದ ಇರುವ ಸಂಯೋಗವು ಪಟರೂಪ ಕಾರ್ಯಕ್ಕೆ ಕಾರಣವಾಗುವುದು. ೨. ತನ್ನ ಸಮವಾಯಿ ಕಾರಣದೊಡನೆ ಅದರ ಕಾರಣದಲ್ಲಿ ಸಮವಾಯ ಸಂಬಂಧದಿಂದ ಇದ್ದುಕೊಂಡು ಕಾರ್ಯವನ್ನುಂಟು ಮಾಡುವ ಕಾರಣ. ಉದಾಃ तन्तुरूपं पटगतरूपस्य असमवायिकारणम्। ಇಲ್ಲಿ ಕಾರ್ಯವು ಪಟರೂಪ. ಅದರ ಕಾರಣ ಪಟ. ಪಟವೂ ತಂತುರೂಪವು ಸಮವಾಯಿಕಾರಣದಿಂದ ತಂತುವಿನಲ್ಲಿರುವದರಿಂದ ತಂತುರೂಪವು ಪಟರೂಪಕ್ಕೆ ಅಸಮವಾಯಿಕಾರಣ.

**आश्रय वैकल्य**: ಇದೊಂದು ದೃಷ್ಟಾಂತ ದೋಷ. ಆಶ್ರಯ ಇಲ್ಲದಿರುವಿಕೆ ಅಥವಾ ನ್ಯೂನಗ್ರಸ್ತ ಆಶ್ರಯ.

**असंगतम्**: ಕಾರ್ಯಕಾರಣಗಳಿಗೆ ವಿರುದ್ಧವಾದ, ಅಸಂಬದ್ಧತೆ, ಸಂಬಂಧವಿಲ್ಲದ.

**आगम**: ಶಾಸ್ತ್ರ. ದಾರ್ಶನಿಕರು ಅಂಗೀಕರಿಸಿರುವ ಶಬ್ದಪ್ರಮಾಣ, ವೆದಾದಿಶಾಸ್ತ್ರಗಳು. निर्दोष शब्दः आगमः।

**आपादक**: ದೋಷಾರೋಪಣೆ, ಆಪಾದನೆ.

**आभास**: ಭ್ರಾಂತಿ, ತಪ್ಪು ತಿಳುವಳಿಕೆ, ದುಷ್ಟ ಹೇತು.

**आश्रयासिद्धः** ದುಷ್ಟ ಹೇತು. ಪಕ್ಷತಾವಚ್ಛೆದಕವಿಲ್ಲದ ಪಕ್ಷವುಳ್ಳ ಹೇತು. आश्रयस्य पक्षस्य असिद्धिः। तद्वान् आश्रयासिद्धः। "गगनारविन्द सुरभि अरविन्दत्वात् सरोजारविन्दवत्।" ಎಂಬಲ್ಲಿ, ಸೌರಭಕ್ಕೆ ಆಶ್ರಯಭೂತವಾದ ಗಗನಾರವಿಂದವು (ಪಕ್ಷ) ಅಸಿದ್ಧವಾದುದರಿಂದ ಹೇತುವು ದುಷ್ಟವಾಯಿತು. ಅಥವಾ ಯಾವ ಅನುಮಾನದ ಆಶ್ರಯ ಹೇತುವಿಗೆ ಇಲ್ಲವೋ, ಪಕ್ಷ ಅಸತ್ ಆಗಿದೆಯೋ ಆ ಅನುಮಾನದ ಹೇತುವು ಆಶ್ರಯಾಸಿದ್ಧವೆನಿಸುತ್ತದೆ.



**इष्टापत्तिः** ವಾದಿಯ ಆಪಾದನೆಯೇ ಪತಿವಾದಿಗೂ ಸಮ್ಮತವಾಗಿರುವಿಕೆ.

**उपपत्तिः** ಯುಕ್ತಿಪೂರ್ವಕ ಮಾತು.

**उपपादितः** ಯುಕ್ತಿಯಿಂದ ಸಮರ್ಥಿಸಲ್ಪಟ್ಟ.

**उच्छेदः** ನಾಶ, ಬುಡ ಸಹಿತ ಕಿತ್ತುಹಾಕುವದು.

**उदाहरणवैकल्य**: ಯಾವುದೇ ಅನುಮಾನಕ್ಕೆ ಸಾಧ್ಯ ಮತ್ತು ಹೇತು ಗಳಲ್ಲಿಯ ವ್ಯಾಪ್ತಿ ಸಂಬಂಧವನ್ನು ಸ್ಪಷ್ಟವಾಗಿ ತಿಳಿಸುವ ದೃಷ್ಟಾಂತ ಇಲ್ಲದೆ ಇರೋಣ,

**उपादानः** ಮೂಲಕಾರಣ; ಮಣ್ಣು ಘಟಕ್ಕೆ ಮೂಲಕಾರಣ. ಕಾರ್ಯೋತ್ಪತ್ತಿಗಾಗಿ ಅವಶ್ಯವಾಗಿರಬೇಕಾದ ಕಾರಣ.

**उपाधिः ಶಾಸ್ತ್ರದಲ್ಲಿ ಇದನ್ನು ಮೂರು ತರಹದ್ದಾಗಿ ನಿರೂಪಿಸುತ್ತಾರೆ: ೧.** ವಿಶೇಷಣ, ಗುಣ ಅಥವಾ ಧರ್ಮ. ೨. ಸಾಧ್ಯವಿರುವೆಡೆಯಲ್ಲೆಲ್ಲಾ ಇದ್ದು ಅಂದರೆ ವ್ಯಾಪ್ಯತ್ವ ವನ್ನು ಹೊಂದಿದ್ದು, ಸಾಧನ ಎಂದರೆ ಹೇತುವಿರುವ ಕಡೆ ಇರಲೇಬೆಕೆಂಬ ನಿಯಮವಿಲ್ಲದ್ದು ಅಂದರೆ ಅವ್ಯಾಪ್ಯ ಹೊಂದಿದ್ದು. "धूमवान् वन्हेः" ಎಂಬಲ್ಲಿ, ಸಾಧ್ಯವಾದ ಹೊಗೆ ಇರುವ ಕಡೆಗೆಲ್ಲಾ ಇದ್ದು, ಹೇತುವಾದ ವಹ್ನಿವಿರುವ ಅಯೋಗೊಲಕ ಅಂದರೆ ಕಾದ ಕಬ್ಬಣ ದಲ್ಲಿ ಇಲ್ಲದಿರುವ ಹಸಿ ಕಟ್ಟಿಗೆಯ ಸಂಬಂಧ ಉಪಾಧಿ. (साध्य व्यापकत्वे सति साधन अव्यापकः उपाधिः।). ೩. ತನ್ನ ಸಂಬಂಧವುಳ್ಳ ಒಂದು ವಸ್ತುವನ್ನು ತನ್ನ ಸಂಬಂಧವಿಲ್ಲದ ಅದೇ ವಸ್ತುವಿಗಿಂತಲೂ ಬೆರೆಯೆಂದು ತಿಳಿಸುವ ಒಂದು ವಸ್ತು. ಉದಾಃ ಘಟದಲ್ಲಿರುವ ಆಕಾಶವು ಹೊರಗಿನ ಆಕಾಶಕ್ಕಿಂತಲೂ ಬೆರೆಯೆಂದು ಬುದ್ಧಿಯನ್ನುಂಟು ಮಾಡುವದರಿಂದ ಘಟವು ಉಪಾಧಿ.

ಶಾಸ್ತ್ರಾಭ್ಯಾಸ ಮಾಡುವಾಗ ಸಂದರ್ಭಕ್ಕೆ ಅನುಗೂಣವಾಗಿ ಮೇಲಿನ ಉಪಾಧಿಯ ನಿರೂಪಣೆಗಳನ್ನು ತೆಗೆದುಕೊಳ್ಳಬೇಕು..

**उल्लेखः** ವರ್ಣನೆ, ಉಹಿಸಿ ವರ್ಣಿಸುವಿಕೆ.

**उल्लिखत्**: ಊಹಿಸುತ್ತಿರುವ.

**कथाः** ಅನೇಕ ವಿದ್ವಾಂಸರ ನಡುವೆ ನಡೆಸಲ್ಪಡುವ ವಿಚಾರೋದ್ದೀಪಕ ವಾಕ್ಯ ಪ್ರಬಂಧವೇ ಅಥವಾ ತತ್ವನಿರ್ಣಯದ ಉದ್ದೇಶದಿಂದ ವಿದ್ವಾಂಸರ ನಡುವೆ ಸಲ್ಲುವ ವಿಚಾರಗೋಷ್ಠಿ ಕಥಾ ಎಂದೆನಿಸುವದು. ಇದು ಮೂರು ತರಹದ್ದಗಿರುತ್ತದೆ ವಾದ, ಜಲ್ಪ ಮತ್ತು ವಿತಂಡಾ ಎಂದು.

**कालात्ययापदिष्टः**: कालातीतः बलवता प्रमाणेन प्रबाधित इति कालात्ययापदिष्टः। ಅಂದರೆ ಯಾವುದೆ ಅನುಮಾನವು ಬಲವತ್ತರ ಪ್ರಮಾಣದಿಂದ ಬಾಧಿತವಾದರೆ ಆ ಅನುಮಾನವು ಕಾಲಾತ್ಯಯಾಪದಿಷ್ಟ ಎಂದೆನ್ನುತ್ತಾರೆ.

**ಕಥಾಭಾಸ**: ತತ್ವ ನಿರ್ಣಯಕ್ಕಾಗಿ ವಾದಿಪ್ರತಿವಾದಿಗಳಲ್ಲಿ ಜರಗುವ ಸಂಭಾಷಣೆಯ ಆಭಾಸತೆ.

**केवल अन्वयि हेतु:**– पक्ष व्यापकं सपक्ष वृत्ति अविद्यमान विपक्षं केवल अन्वयि। ಅಂದರೆ ಪಕ್ಷದಲ್ಲಿ ವ್ಯಾಪಿಸಿದ್ದು, ಸಪಕ್ಷವಿದ್ದು ಮತ್ತು ವಿಪಕ್ಷವಿಲ್ಲದ ಹೇತುವು ಕೇವಲ ಅನ್ವಯಿ ಎನಿಸುವದು. ಉದಾಃ "शब्दो अभिधेय: प्रमेयत्वात्" ಎಂಬಲ್ಲಿ ಪ್ರಮೆಯತ್ವವು ಎಲ್ಲ ಶಬ್ದಗಳಲ್ಲಿ ಎಂದರೆ ಪಕ್ಷದಲ್ಲಿ ವ್ಯಾಪಿಸಿದೆ, ಸಪಕ್ಷವಾದ ಘಟ ಮುಂತಾದ ಶಬ್ದಗಳಲ್ಲಿಯೂ ಇರುತ್ತದೆ. ಜಗತ್ತಿನಲ್ಲಿ ಅಭಿಧೇಯವಲ್ಲದ ಶಬ್ದವೇ ಇಲ್ಲ. ಆದ್ದರಿಂದ ವಿಪಕ್ಷ ಇಲ್ಲ.

**केवल व्यतिरेकि हेतु:**– पक्षव्यापकं अविद्यमान सपक्षं विपक्षात् व्यावृत्तं केवलव्यतिरेकि। ಅಂದರೆ ಪಕ್ಷ ವ್ಯಾಪಕವಾಗಿದ್ದು, ಸಪಕ್ಷವಿಲ್ಲದ್ದು ಮತ್ತು ವಿಪಕ್ಷದಲ್ಲಿ ಇಲ್ಲದ್ದು ಹೇತುವು ಕೆವಲ ವ್ಯತಿರೆಕಿ ಏನಿಸುವದು. ಉದಾಃ "ईश्वरं सर्वज्ञं सर्वकर्तृकत्वात्" ಎಂಬಲ್ಲಿ ಸರ್ವಕರ್ತೃತ್ವವು ಪಕ್ಷವೆಂದರೆ ಈಶ್ವರನಲ್ಲಿದೆ. ಈಶ್ವರನ ಹೊರತಾಗಿ ಯಾರಲ್ಲಿಯೂ ಸರ್ವಕರ್ತೃತ್ವವಿರುವದಿಲ್ಲ ಆದ್ದರಿಂದ ಸಪಕ್ಷ ಇಲ್ಲ. ಮತ್ತೆ ವಿಪಕ್ಷವಾದ ಜೀವರಲ್ಲಿ ಸರ್ವಕರ್ತೃತ್ವವಿಲ್ಲ, ಆದ್ದರಿಂದ ವಿಪಕ್ಷದಲ್ಲಿ ಇಲ್ಲ. ಹೀಗಾಗಿ ಸರ್ವಕರ್ತೃತ್ವ ಹೇತುವು ಕೇವಲ ವ್ಯತಿರೇಕಿ ವೆನಿಸುತ್ತದೆ.

**क्लृप्त पदार्थ:** ವಿಹಿತವಾದ ಪದಾರ್ಥ, ನಿಶ್ಚಿತವಾದ ಪದಾರ್ಥ

**छलप्रसङ्ग:** ಇದು ಮೂರು ತರಹದ್ದಾಗಿರುತ್ತದೆ. ವಾಕ್ ಛಲಃ ಶಬ್ದಕ್ಕೆ ಅನೇಕ ಅರ್ಥಗಳಿದ್ದಾಗ ಅಭಿಪ್ರೇತವಾದ ಒಂದರ್ಥನ್ನು ಬಿಟ್ಟು ಬೇರೆ ಅರ್ಥ ಮಾಡುವದು, ಸಾಮಾನ್ಯ ಛಲಃ ಒಂದು ಅಭಿಪ್ರಾಯದ ವಾಕ್ಯಕ್ಕೆ ಬೇರೆ ಅಭಿಪ್ರಾಯವನ್ನು ಕಲ್ಪಿಸುವದು ಮತ್ತು ಉಪಚಾರ ಛಲಃ ಶಬ್ದವೊಂದನ್ನು ಅಮುಖ್ಯವಾದ ಅರ್ಥದಲ್ಲಿ ಬಳಿಸಿದಾಗ ಅದನ್ನು ಮುಖ್ಯಾರ್ಥದಲ್ಲಿ ಕಲ್ಪಿಸುವದು.

**तात्विक:** ನಿಜವಾದ, ಸತ್ಯವಾದ, ಯತಾರ್ಥವಾದ.

**दूषण अनुमान**: ಯಾವುದೆ ಸಿದ್ಧಾಂತವನ್ನು ದೂಷಿಸಲು ಉಪಯೋಗಿಸುವ ಅನುಮಾನ. ಇದು ದೂಷಣಕ್ಕೊಳಗಾದ ಸಿದ್ಧಾಂತದ ಆಪಾದಕವನ್ನೊಳಗೊಂಡಿರುತ್ತದೆ.

**द्विष:** ಇಬ್ಬರಲ್ಲಿ.

**द्रव्य:** ನೈಯಾಯಿಕ ಮತದಲ್ಲಿ ಸಪ್ತಪದಾರ್ಥಗಳಲ್ಲೊಂದು. "द्रव्यं गुणस्तथा कर्म सामान्यं सविशेषकम्। समवाय: तथा अभाव: पदार्था: सप्त कीर्तित:। " क्षित्यप्तेजोमरुद्व्योमकालदिग्देहिनो मन:। द्रव्याणि"

**धर्मि:** ಧರ್ಮದಿಂದ ಕೂಡಿದಂಥದ್ದು.

**निग्रहस्थान:** निग्रहस्थान: ಇದು ವಾದ ಅಥವಾ ಕಥಾಕ್ಕೆ ಸಂಬಂಧಿಸಿದ್ದಾಗೆದೆ. ನಿಗ್ರಹ ಎಂದರೆ ಪರಾಜಯ, ಮತ್ತು ಸ್ಥಾನ ಎಂದರೆ ನಿಮಿತ್ತ. ಅಂದರೆ ಪರಾಜಯ ನಿಮಿತ್ತ. (परोक्त स्ववक्तव्ययो: अज्ञानं विपरीत ज्ञानं वा निग्रह: तल्लिंगं निग्रहस्थानम्।).

**निर्वचन**: ಪದಗಳ ಅವಯವಾರ್ಥವನ್ನು ವಿವರಿಸಿ ಹೇಳುವದು.



**निवेशन:** ಇಡುವದು, ಇರಿಸುವದು.

**निरुक्त**: ಪದಗಳ ಅವಯವಾರ್ಥಗಳನ್ನು ಹೇಳುವದು. ವೈದಿಕ ಪದಗಳ ಅರ್ಥಬೋಧನೆ.

**निरुपाख्य:** ವರ್ಣಿಸಲು ಅಶಕ್ತವಾದ, ಹೊಗಳಲು ಸಾಧ್ಯವಲ್ಲದ, ವಾಸ್ತವವಾಗಿಲ್ಲದ, ಕಾಲ್ಪನಿಕ ಸುಳ್ಳಾಗಿರುವ, ಅನಿರ್ವಚನೀಯ ಬ್ರಹ್ಮ.

**निराश्रय**: ಆಶ್ರಯವಿಲ್ಲದ, ಆಧಾರವಿಲ್ಲದ

**निरुपाधिक:** ಯಾವ ವಿಧವಾದ ಕಾರಣವೂ ಇಲ್ಲದ, ಯಾವ ನಿಮಿತ್ತವೂ ಇಲ್ಲದ.

**निरुपाधिक आत्मा**: निरुपाधिकं देहेन्द्रिय अन्त:करणरूप उपाधि अविशिष्टं शुद्धम् आत्मा, ನಿರುಪಾಧಿಕ ಎಂದರೆ ದೇಹೆಂದ್ರಿಯ ಅಂತಃಕರಣರುಪ ಉಪಾಧಿಯಿಂದ (ಅಂದರೆ ವಿಶೇಷಣ ಅಥವಾ ಗುಣಧರ್ಮದಿಂದ ) ವಿಶಿಷ್ಟವಲ್ಲದ್ದು, ಅಂದರೆ ಶುದ್ಧರೂಪ ಆತ್ಮಾಎಂದರ್ಥ.

**पक्ष**: ಯಾವ ಧರ್ಮವನ್ನು ಸಾಧಿಸಬೇಕಾಗಿದೆಯೋ, ಅಂತಹ ಧರ್ಮವುಳ್ಳ ಧರ್ಮಿ, ಪಕ್ಷ ಎನಿಸುವದು. ಅಂದರೆ, ಎಲ್ಲಿ ಧರ್ಮವನ್ನು ಸಾಧಿಸಲಾಗುವದೋ ಅದು ಪಕ್ಷ. साध्यधर्मविशिष्ट: पक्ष:। पर्वतो वन्हिमान् धूमवत्वात्। ಎಂಬಲ್ಲಿ ಪರ್ವತದಲ್ಲಿ ಬೆಂಕಿಯನ್ನು ಸಾಧಿಸಲಗುತ್ತಿದೆ. ಇಲ್ಲಿ ಪರ್ವತವು ಪಕ್ಷ. साध्य धर्मवान् धर्मि पक्ष:। ಅಂದರೆ ಸಾಧ್ಯರೂಪಧರ್ಮದಿಂದ ಕೂಡಿದ ಧರ್ಮಿಯು (ಧರ್ಮಕ್ಕೆ ಆಶ್ರಯವಾದದ್ದು ಎಂದರ್ಥ) ಪಕ್ಷ ಎನಿಸುವದು. ಉದಾಹರಣೆಗೆ "पर्वतो वन्हिमान् धूमवत्वात्" ಎಂಬಲ್ಲಿ वन्हिमान् पर्वत:। ವಹ್ನಿಯುಳ್ಳ ಪರ್ವತವು ಪಕ್ಷವೆನಿಸುವದು.

**पदार्थ:** ಪದಾರ್ಥವು ಭಾವ ಮತು ಅಭಾವ ಎಂದು ಎರಡು ವಿಧಃ ಭಾವ ಪದಾರ್ಥಗಳುಃ ವೈಶೇಷಿಕ ಮತದಂತೆಃ ದ್ರವ್ಯಂ, ಗುಣಃ, ಕರ್ಮ, ಸಾಮಾನ್ಯಮ್, ವಿಶೇಷ ಮತ್ತು ಸಮವಾಯ ಎಂದು ಆರು ವಿಧ, ಪ್ರಾಭಾಕರ ಮತದಂತೆಃ ದ್ರವ್ಯ, ಗುಣಃ, ಕರ್ಮ, ಸಾಮಾನ್ಯಮ್, ಸಂಖ್ಯಾ, ಸಮವಾಯಃ, ಸಾದೃಶ್ಯಮ್ ಮತ್ತು ಶಕ್ತಿಃ ಎಂದು ಎಂಟು ವಿಧ. ಅಭಾವ ಪದಾರ್ಥಗಳುಃ ಪ್ರಾಗ್, ಪ್ರಧ್ವಂಸ, ಅತ್ಯಂತ ಮತ್ತು ಅನ್ಯೋನ್ಯ ಅಭಾವವೆಂದು ನಾಲ್ಕು ವಿಧ.

**पञ्चावयव अनुमान:** ಪ್ರತಿಜ್ಞಾ, ಹೇತು, ಉದಾಹರಣ, ಉಪನಯ ಮತ್ತು ನಿಗಮನ ಎಂದು ಅನುಮಾನದ ಪಂಚ ಅವಯವಗಳಗಿರುತ್ತವೆ.

**परिशेष:**–प्रसक्त प्रतिषेध अन्यत्र प्रसङ्गात् परिशिष्यमाणे सम्प्रत्यय: परिशेष:। ಅಂದರೆ, ಪ್ರಸಕ್ತ ಪ್ರತಿಷೇಧದ ಬೇರೆಕಡೆ ಅನುಷಂಗವಿದ್ದಾಗ ಉಳಿದದ್ದೆಲ್ಲ ಪರಿಶೇಷ.

**परिच्छिन्न:** ಇಷ್ಟೆ ಎಂದು ಅವಧಿಯುಳ್ಳ.

**प्रकरणसम**: ಇದೊಂದು ಅನುಮಾನ ಪ್ರತಿರೋಧ ದೋಷ. ಇಲ್ಲಿ ಒಂದು ಅನುಮಾನಕ್ಕೆ, ಅದು ಪ್ರತಿಪಾದಿಸಿದ ಹೇತುವಿನಿಂದಲೇ ಇನ್ನೊಂದು ಅನುಮಾನದಿಂದ ವಿರೋಧವನ್ನು ಸೂಚಿಸಲಾಗುತ್ತದೆ.

**प्रतीति**: ಅರಿವು, ತಿಳುವಳಿಕೆ, ಪರಿಜ್ಞಾನ.

**प्रतिज्ञावाक्य**: ಪಕ್ಷದಲ್ಲಿ ಸಾಧ್ಯಸಂಬಂಧವನ್ನು ತಿಳಿಸುವ ವಾಕ್ಯ.

**प्रतिपत्तिगौरव**: ಯಾವದೋ ಉಹೆಯನ್ನವಲಂಬಿಸಿ ತಿಳುವಳಿಕೆಯನ್ನು ಮಾಡಿಕೊಳ್ಳುವದು.

**प्रतिपन्न** ಅಂಗೀಕರಿಸಲ್ಪಟ್ಟ, ತಿಳಿಯಲ್ಪಟ್ಟ.

**प्रतियोगिन्**: ವಿರುದ್ಧವಾದ್ ಸಂಬಂಧವುಳ್ಳ, ಪ್ರತಿಕೂಲ ಸಂಬಂಧ ಹೊಂದಿರುವ. ಯವುದೊಂದು ವಸ್ತುವಿನ ಅಭಾವವನ್ನು ಹೇಳಲಾಗುವದೊ ಆ ವಸ್ತುವು ಅಭಾವದ ಪ್ರತಿಕೂಲ ಸಂಬಂಧವನ್ನು ಹೊಂದಿರುವದರಿಂದ ಅದು ಅಭಾವದ ಪ್ರತಿಯೋಗಿ ಆಗುವದು. ಉದಾಃ ಘಟವು ಘಟಾಭಾವದ ಪ್ರತಿಯೋಗಿ ಆಗಿರುತ್ತದೆ.

**प्रतिरोध**: ಅಂದರೆ, ಸಮಬಲ ಪ್ರಮಾಣದಿಂದ ವಿರೋಧವನ್ನು ಪ್ರತಿಪಾದಿಸುವದು. ಪ್ರತ್ಯಕ್ಷಕ್ಕೆ ಪ್ರತ್ಯಕ್ಷದಿಂದಲೇ, ಅನುಮಾನಕ್ಕೆ ಅನುಮಾನದಿಂದಲೇ ಮತ್ತು ಆಗಮಕ್ಕೆ ಆಗಮದಿಂದಲೆ ವಿರೋಧವನ್ನು ಪ್ರತಿಪಾದಿಸುವದು ಪ್ರತಿರೋಧವೆನಿಸುವದು.

**प्रत्यावृत्त**: ಮತ್ತೆ ಸಂಭವಿಸಿದ.

**प्रमित**: ಪ್ರಸಿದ್ಧವಾದ.

**प्रध्वंस अभाव**: ಪದಾರ್ಥದ ಧ್ವಂಸದ ನಂತರ ಉಂಟಾಗುವ ಆ ಪದಾರ್ಥದ ಅಭಾವ.

**प्रमेय** ತತ್ವತಃ ತಿಳಿಯಲ್ಪಡುವ ವಿಷಯ, ಯಥಾರ್ಥ ಜ್ಞಾನಕ್ಕೆ ವಿಷಯವಾದುದು ಪ್ರಮೆಯ, ಪ್ರತ್ಯಕ್ಷಾದಿ ಪ್ರಮಾಣದಿಂದ ತಿಳಿಸಲ್ಪಡುವ ವಿಷಯ., ಪರಬ್ರಹ್ಮ, ಮೋಕ್ಷಾರ್ಥಿಗಳಿಂದ ಚೆನ್ನಾಗಿ ತಿಳಿಯಲ್ಪಡುವ ಪರಮಾತ್ಮ. ನ್ಯಾಯಮತದಲ್ಲಿ ಹನ್ನೆರಡು ಪ್ರಮೆಯಗಳಿವೆಃ ಆತ್ಮಾ, ಶರೀರ, ಇಂದ್ರಿಯ, ಅರ್ಥ, ಬುದ್ಧಿ, ಮನಸ್ಸು, ಪ್ರವೃತ್ತಿ, ದೋಷ, ಪ್ರೇತ್ಯಭಾವ, ಫಲ, ದುಃಖ ಮತು ಅಪವರ್ಗ.

**प्रमाण**: ಯಾವ ದೇಶ ಕಾಲದಲ್ಲಿ ಯಾವ ವಸ್ತುವು ಹೇಗೆ ಇರುತ್ತದೆಯೋ, ಆ ವಸ್ತುವನ್ನು ಅದೇ ರೀತಿಯಿಂದ ವಿಷಯೀಕರಿಸುವದು.

**प्रमाण बाधक**: ಯಾವದೇ ಒಂದು ವಿಷಯದಲ್ಲಿ ಪ್ರಯೋಗಿಸಿದ ಪ್ರಮಾಣಕ್ಕೆ ದೋಷವನ್ನು ಹೇಳುವದು.

**प्रत्यभिज्ञा**: प्रतिगता अभिज्ञानम्।, वा तद्देशकालवृत्तित्वरूपतत्तासंस्कारात् स एव अयं घटः इति प्रत्यभिज्ञा जायते।, ಗುರುತಿನ ವಸ್ತುವಿನಿಂದ ಉಂಟಾಗುವ ಪೂರ್ವಸ್ಮರಣೆ, ಪೂರ್ವದಲ್ಲಿ ಅನುಭವಿಸಿದ ವಸ್ತುವಿನ ದರ್ಶನದಿಂದ ಉಂಟಾಗುವ ಹಿಂದಿನ ನೆನಪು. ಒಂದು ಕಾಲದಲ್ಲಿ ಒಂದು ಕಡೆ ನೋಡಿದ್ದ ವಸ್ತುವನ್ನು ಮತ್ತೆ ನೋಡಿದಾಗ ಪೂರ್ವ ಸಂಸ್ಕಾರದಿಂದ ಅದೇ ಈ ವಸ್ತುವೆಂಬ ನೆನಪು ಉಂಟಾಗುವದು ಪ್ರತ್ಯಭಿಜ್ಞೆ.

**प्राक् अभाव**: ಪದಾರ್ಥ ಹುಟ್ಟುವ ಮುಂಚೆ ಇರುವ ಆ ಪದಾರ್ಥದ ಅಭಾವ.



**प्रातिभासिक सत्ता**: ಪ್ರತಿಭಾಸಿಕಾಲದಲ್ಲಿ ಮಾತ್ರವಿರುವುದರಿಂದ ಶುಕ್ತಿಯಲ್ಲಿ ರಜತಾದಿಗಳ ಸತ್ತೆಯು ಪ್ರಾತಿಭಾಸಿಕ.

**पारमार्थिक सत्य**: ಕಾಲತ್ರಯದಲ್ಲೂ ಅಬಾಧಿತವಾದ ಸತ್ಯಯು ಪಾರಮಾರ್ಥಿಕ ಸತ್ಯ.

**पुनरुक्ति**: ಒಂದು ಪದದಿಂದ ಅಥವಾ ವಾಕ್ಯದಿಂದ ಹೇಳಿದ ಅರ್ಥವನ್ನು ಬೇರೆ ಪದದಿಂದ ಅಥವಾ ವಾಕ್ಯದಿಂದ ಮತ್ತೆ ಹೇಳುವದು. ಪುನರುಕ್ತಿ ಅಥವಾ ಪೌನರುಕ್ತಿ ಎನಿಸುವದು. ವಾಕ್ಯಾರ್ಥದಲ್ಲಿ ಇದೊಂದು ದೋಷವೆಂದು ಪರಿಗಣಿಸಲಾಗುತ್ತದೆ.

**भाग असिद्धि**: ಪಕ್ಷದ ಏಕದೇಶದಲ್ಲಿ ಸಾಧ್ಯದ ಸಿದ್ಧಿ ಆಗದೆ ಇರೋಣ.

**मूकता**: ಸುಮ್ಮನಾಗುವದು. ತಾತ್ವಿಕ ವಾದದಲ್ಲಿಯ ಒಂದು ನಿಗ್ರಹಸ್ಥಾನ

**योगरूढि**: योगेन सहिता रूढिः। ಶಬ್ದದ ಅವಯವ ಶಕ್ತಿಯಿಂದ ಕೂಡಿದ ಸಮುದಾಯ ಶಕ್ತಿ. पङ्कज ಪದದಲ್ಲಿ ಪಂಕದಲ್ಲಿ ಎಂದರೆ ಕೆಸರಿನಲ್ಲಿ ಹುಟ್ಟಿದ ಕಮಲರೂಪವಾದ ಅರ್ಥವೆ ರೂಢಿಯಾಗಿರುವುದು. ಇಲ್ಲಿ ಅವಯವಶಕ್ತಿ ಮತ್ತು ಸಮುದಾಯಶಕ್ತಿಗಳೆರಡರಿಂದಲೂ ಕಮಲರೂಪವಾದ ರೂಢ್ಯರ್ಥ ಬೋಧವುಂಟಾಗುವದರಿಂದ ಈ ಪದವು ಯೋಗರೂಢ. ಈ ಪದದಲ್ಲಿ ಈ ಅರ್ಥವು ರೂಢಿ ಎನಿಸುವದು. यत्र योगार्थान्वित रूढ्यार्थबोधः तत्र सर्वत्र योगरूढिः।

**व्यतिरेक व्याप्ति**: ಸಾಧ್ಯ ಅಭಾವ ಮತ್ತು ಹೇತು ಅಭಾವಗಳಲ್ಲಿಯ ಸಾಹಚರ್ಯ, ವ್ಯತಿರೇಕವ್ಯಾಪ್ತಿ ಏನಿಸುವದು. ಉದಾಃ यत्र वह्नि अभावः तत्र धूम अभावः।

**व्यधिकरण**: ಬೇರೆ ಬೇರೆ ಅಧಿಕರಣ, ವಿಭಿನ್ನವಾದ ಆಶ್ರಯ

**व्यपदेश**: ಅಭಿಧಾನ, ಸಂಜ್ಞೆ

**व्यभिचार**: ಕಾರ್ಯಕಾರಣಭಾವವಿಲ್ಲದಿರುವಿಕೆ. ಸಾಧ್ಯವಿಲ್ಲದ ಕಡೆ ಹೇತುವಿರುವ ಒಂದು ದೋಷ.

**व्याप्ति**: ಸಾಧ್ಯ ಮತ್ತು ಹೇತುಗಳಲ್ಲಿಯ ಅನ್ಯೋನ್ಯ ಸಂಬಂಧ. पर्वतो वन्हिमान् धूमवत्वात्। ಎಂಬಲ್ಲಿ, ಬೆಂಕಿ ಮತ್ತು ಧೂಮ ಗಳಲ್ಲಿಯ ಅನ್ಯೋನ್ಯ ಸಂಬಂಧ.

**व्यावर्तक**: ಪರಸ್ಪರ ಭೇದ ತೋರಿಸುವ, ವಸ್ತುಗಳಲ್ಲಿ ಒಂದಕ್ಕೊಂದು ಭೇದವನ್ನು ತೋರಿಸಿ ಬೇರ್ಪಡಿಸುವ. ಉದಾಃ ಗೋವಿಗೂ ಮಹಿಷಕ್ಕೂ ವ್ಯತ್ಯಾಸವನ್ನು ತೋರಿಸುವ ಸಾಸ್ನಾದಿ ಅಂದರೆ ಗಂಗೆದೊಗಲು ಮುಂತಾದವುಗಳು ಗೋವಿನಿಂದ ಮಹಿಷವನ್ನು ಬೇರ್ಪಡಿಸುವದು. ಆದುದರಿಂದ ಸಾಸ್ನಾದಿಗಳು ಇಲ್ಲಿ ವ್ಯಾವರ್ತಕಗಳಾಗುತ್ತವೆ.

**व्यावहारिक**: ವ್ಯವಹಾರದಲ್ಲಿರುವ, ವ್ಯವಹಾರವೇ ಪ್ರಯೊಜನವಾದ, कालत्रये ज्ञातृकाले प्रतीतिसमय काले तथा बाधाभावात् पदार्थानां सत्त्वत्रैविध्यमिष्यते।तात्त्विकं ब्रह्मणः सत्त्वं, व्योमादेः व्यवहारिकम्, रूप्यादेः अर्थजातस्य प्रातिभासिकं इष्यते। सत्यत्वेऽपि व्यावहारिक सत्यत्व अभावेन प्रतिपन्न उपाधौ प्रतियोगित्व सम्भवात्।

**व्यावहारिक सत्य** ವ್ಯವಹಾರದಲ್ಲಿ ಮಾತ್ರ ಇರುವ ಸತ್ಯ.

**व्यावहारिक सत्ता**: ವ್ಯವಹಾರಕಾಲದಲ್ಲಿ ಮಾತ್ರ ಅಬಾಧಿತವಾದ ಘಟಾದಿಗಳ ಸತ್ತೆಯು ವ್ಯಾವಹಾರಿಕ.

**व्यावृत्त**: ಬೇರ್ಪಡಿಸಲ್ಪಟ್ಟ, ತ್ಯಜಿಸಲ್ಪಟ್ಟ, ಭೇದತೋರಿಸಿ ಇನ್ನೊಂದರಿಂದ ಪ್ರತ್ಯೇಕಿಸಲ್ಪಟ್ಟ.

**व्यावृत्ति**: ಇನ್ನೊಂದರಿಂದ ಪ್ರತ್ಯೇಕಿಸುವದು, ತ್ಯಜಿಸುವದು.

**व्यूदास**: ತಳ್ಳಿಹಾಕುವದು, ತಿರಸ್ಕರಿಸುವದು

**लिङ्ग**: ಗುರುತು, ಲಕ್ಷಣ, ಶಬ್ದದ ಸಾಧುತ್ವವನ್ನು ತಿಳಿಸುವ ಶಬ್ದದಲ್ಲಿರುವ ಧರ್ಮ. ಶಬ್ದದ ಸಾಮರ್ಥ್ಯ, ಪದಗಳಿಗೆ ಅರ್ಥಕೊಡುವ ಪರಸ್ಪರವಿರುವ ಒಂದು ಸಂಬಂಧ.

**लाघव**: ಲಘುತ್ವ, ಹಗುರವಾಗಿರುವದು.

**वादि–अनैकान्तिक**: ವಸ್ತುತಃ ಹೇತುವಿಗೆ ಅನೈಕಾಂತಕ ದೋಷವಿಲ್ಲದಿದ್ದರೂ, ವಾದಿಗಳು ಸಪಕ್ಷವನ್ನು ಅಂಗೀಕರಿಸಿದ್ದರಿಂದ ಅದರಂತೆಯೇ ಈ ಹೇತುವಿಗೆ ಅನೈಕಾಂತಿಕ ಹೇಳುವದು ವಾದಿ ಅನೈಕಾಂತಿಕ.

**विपक्ष**:– साध्य तत् समानधर्म रहितो धर्मि विपक्षः। ಅಂದರೆ ಸಾಧ್ಯ ಮತ್ತು ಅದರ ಸಮಾನ ಧರ್ಮದಿಂದ ರಹಿತ ಅಂದರೆ ಅವುಗಳಿಗೆ ಆಶ್ರಯವಲ್ಲದ ಧರ್ಮಿಯು ವಿಪಕ್ಷವೆನಿಸುವದು. ಉದಾಃ "पर्वतो वन्हिमान् धूमवत्वात्" ಎಂಬಲ್ಲಿ, ಪರ್ವತ ವಹ್ನಿ, ಮತ್ತು ಅದರ ಸಮಾನ ಧರ್ಮವೆಂದರೆ ಮಹಾನಸ ವಹ್ನಿ, ಇವೆರಡರಿಂದ ರಹಿತವಾದ ಧರ್ಮಿ, ಕೆರೆಯು ವಿಪಕ್ಷವೆನಿಸುವದು.

**विप्रतिषेध**: ಪ್ರತಿಷೇಧ, ನಿಷೇಧ, ವಿರೋಧ, ಅನೇಕ ಕಾರ್ಯಗಳು ಏಕಕಾಲದಲ್ಲಿ ಸಂಭವಿಸಿದಾಗ ಯಾವುದನ್ನು ಕೈಗೊಳ್ಳಬೇಕೆಂಬ ನಿರ್ಣಯಕ್ಕೆ ಬಾರದಿರುವದು.

**विप्रतिपन्न**: ಪರಸ್ಪರ ವಿರೋಧಿಸುವ, ಸಂಶಯ ಹುಟ್ಟಿಸುವ.

**विविक्त**: ಬೇರೆಬೇರೆಯಾಗಿರುವ, ರಹಿತವಾದ, ಶೂನ್ಯವಾದ.

विवक्षित: ಅಪೇಕ್ಷಿತವಾದ.

**विरुद्ध**: ದುಷ್ಟ ಹೇತು . ಇದು ಅನುಮಾನದ, ಹೇತು ಮತ್ತು ಸಾಧ್ಯಗಳಲ್ಲಿಯ ವ್ಯಾಪ್ತಿ ಸಂಬಂಧದ ದೋಷವನ್ನು ಸೂಚಿಸುತ್ತದೆ. ವಿರುದ್ಧ ದೋಷಗ್ರಸ್ತ ಹೇತುವು ಸಾಧ್ಯದ ವಿಪರೀತ ಜ್ಞಾನವನ್ನುಂಟು ಮಾಡುತ್ತದೆ. ಅಂದರೆ, ಸಾಧ್ಯದ ಜೊತೆ ವ್ಯಾಪ್ತಿ ಸಂಬಂಧವನ್ನು ಮಾಡದೆ, ಸಾಧ್ಯವಿಲ್ಲದೆಡೆ ವ್ಯಾಪ್ತಿ ಸಂಬಂಧವನ್ನು ಮಾಡುತ್ತದೆ. ಅಂದರೆ, साध्य सम्बन्ध अभावे सति, तत् अभावेन एव सम्बन्धः।

**विशेषण**: ವಿಶೇಷ್ಯಪದದ ಧರ್ಮ. ವಿಶೇಷ್ಯಪದದ ವಿಷಯವನ್ನು ವಿವರಿಸುವ ಗುಣ. ವಿಶೇಷಣವು ವ್ಯಾವರ್ತಕ, ವಿಧೇಯ ಮತ್ತು ಹೇತುಗರ್ಭಗಳೆಂದು ಮೂರು ವಿಧ. "नीलो



घटः" ಎಂಬಲ್ಲಿ ನೀಲವರ್ಣವು ಇತರ ವ್ಯಾವರ್ತಕ, "पर्वतो वन्हिमान्" ಎಂಬಲ್ಲಿ ಪರ್ವತದಲ್ಲಿಯ ವಹ್ನಿ ವಿಧೇಯ, "स कीचकैर्मारुतपूर्णरन्ध्रैः कूजद्भिरापादितवंशकृत्यं" ಎಂಬಲ್ಲಿ ಮಾರುತಪೂರ್ಣರಂಧ್ರತ್ವವು ಹೇತುಗರ್ಭ ವಿಶೇಷಣ.

**विशिष्ट**: ವಿಶೇಷಣದಿಂದ ಕೂಡಿದ ವಿಶೇಷ್ಯ.

**विशेष्य**: ವಿಶೇಷಣಪದದಿಂದ ವಿವರಿಸಲ್ಪಡುವ ಗುಣದಿಂದ ಕೂಡಿದ "विशेषण विशेष्येण बहुलम्"(पा.सू.೨–೧–೫೭)। "नीलम् उत्पलं" ಎಂಬಲ್ಲಿ ಇತರ ವರ್ಣ ವ್ಯಾವರ್ತಕವಾದ ನೀಲಪದವು ನೀಲಗುಣವಿಶಿಷ್ಟವಾದ ಉತ್ಪಲವನ್ನು ಬೋಧಿಸುವದಾದುದರಿಂದ उत्पल ಪದವು ವಿಶೇಷ್ಯ. ವ್ಯಾವರ್ತ್ಯವು ವಿಶೇಷ್ಯ.

**वैयर्थ्य**: ಪ್ರಯೋಜನವಿಲ್ಲದಿರುವಿಕೆ, ಫಲವಿಲ್ಲದಿರುವಿಕೆ.

**वैयधिकरण्य**: ಬೇರೆ ಬೇರೆ ಸ್ಥಳಗಳಲ್ಲಿರುವಿಕೆ, ವಿಭಿನ್ನ ದೇಶಗಳಲ್ಲಿರುವಿಕೆ.

**शास्त्रैकदेशसम्बन्ध्**

**सत्प्रतिपक्ष**: ಇದೊಂದು ಹೇತ್ವಾಭಾಸ, ದುಷ್ಟ ಹೇತು ಎಂದರ್ಥ. संश्चासौ प्रतिपक्षश्च। बाधोपस्थित समर्थपरामर्शकालीन साध्यसिद्धि समर्थपरामर्श विषयः। यस्य साध्य अभावसाधकं हेत्वन्तरं विद्यते स सत्प्रतिपक्षः।

**सत्प्रतिसाधन**: ಇದೊಂದು ಅನುಮಾನ ಪ್ರತಿರೋಧ ದೋಷ. ಇಲ್ಲಿ ಒಂದು ಅನುಮಾನಕ್ಕೆ, ಬೇರೊಂದು ಹೇತುವಿನಿಂದ ಇನ್ನೊಂದು ಅನುಮಾನದಿಂದ ವಿರೋಧವನ್ನು ಸೂಚಿಸಲಾಗುತ್ತದೆ.

**सत्ता**: ಸ್ಥಿತಿ, ಇರುವಿಕೆ. ಅಧಿಕರಣತ್ವ. ಆಶ್ರಯತ್ವ, ಯಥಾರ್ಥವಾಗಿರುವಿಕೆ ಅಥವಾ ಸತ್ಯವಾಗಿರುವಿಕೆ.

**सम्यग्ज्ञान**: ಯಥಾರ್ಥಜ್ಞಾನ, ಸತ್ಯವಾದ ಜ್ಞಾನ.

**सत्ववैधुर्यम**: ಸತ್ಯತ್ವವಿಲ್ಲದ ವಸ್ತು.

**सद्विलक्षण** ಸತ್ಯಕ್ಕಿಂತ ವಿಲಕ್ಷಣ ಅಂದರೆ ಸತ್ಯವಲ್ಲದ ವಸ್ತು.

**सपक्ष**:– साध्य समानधर्मवान् धर्मि सपक्षः। ಅಂದರೆ, ಸಾಧ್ಯಸಮಾನ ಧರ್ಮದಿಂದ ಕೂಡಿದ ಧರ್ಮಿಯು ಸಪಕ್ಷವೆನಿಸುವದು. ಉದಾಃ "पर्वतो वन्हिमान् धूमवत्वात्" ಎಂಬಲ್ಲಿ ಸಾಧ್ಯಧರ್ಮ ಎಂದರೆ ಪರ್ವತದಲ್ಲಿರತಕ್ಕ ವಹ್ನಿಯು. ಇದಕ್ಕೆ ಸಮಾನ ಧರ್ಮ ಎಂದರೆ ಅಡುಗೆ ಮನೆಯಲ್ಲಿರತಕ್ಕ ವಹ್ನಿಯು ಎಂದರ್ಥ. ಅಡುಗೆ ಮನೆಯಲ್ಲಿರತಕ್ಕ ವಹ್ನಿಗೆ ಆಶ್ರಯವಾದದ್ದು ಅಡುಗೆಮನೆ. ಅಂದರೆ ವಹ್ನಿಯುಳ್ಳ ಅಡುಗೆಮನೆಯೆ ಸಪಕ್ಷ.

**समवाय**: ಸಮೂಹ, ಅಯುತಸಿದ್ಧವಾದವುಗಳ ಸಂಬಂಧ. ಅವಯವ-ಅವಯವಿಗಳು, ಗುಣ-ಗುಣಿಗಳು, ಜಾತಿ-ವ್ಯಕ್ತಿಗಳು ಇವುಗಳಿಗಿರುವ ನಿತ್ಯಸಂಬಂಧವು ಸಮವಾಯ ಸಂಬಂಧ. ಘಟ ಮತ್ತು ಕಪಾಲಗಳಿಗಿರುವ, ತಂತು-ಪಟಗಳಿಗಿರುವ ಸಂಬಂಧವು ಸಮವಾಯ ಸಂಬಂಧ.

ಅಯುತ ಸಿದ್ಧವಾದ ಆಧಾರ್ಯ ಮತ್ತು ಆಧಾರಭೂತ ವಸ್ತುಗಳಿಗೆ ಸಂಬಂಧವು ಸಮವಾಯ ಸಂಬಂಧ.

**समवायिन्:** ನಿತ್ಯಸಂಬಂಧ ಹೊಂದಿರುವ. ಅಯುತಸಿದ್ಧವಾದ ಸಂಬಂಧವುಳ್ಳ.

**समवायिकारणम्:** ಅಯುತ ಸಿದ್ಧ ಸಂಬಂಧದಿಂದ ಕಾರ್ಯವನ್ನುಂಟು ಮಾಡುವ ಕಾರಣ तन्तवः पटस्य समवायिकारणम्। यस्मिन् समवायेन सम्बद्धं सत् कार्यमुत्पद्यते तत् समवायिकारणम्। अतः तन्तुः पटस्य समवायिकारणम् भवति। ತಂತುಗಳು ಸಮವಾಯ ಸಂಬಂಧದಿಂದ ಪಟರೂಪ ಕಾರ್ಯಕ್ಕೆ ಕಾರಣವಾಗುವುದರಿಂದ ಸಮವಾಯಿಕಾರಣವಾಯಿತು.

**समानाधिकरणः** ಏಕಧಿಕರಣವುಳ್ಳ, ಒಂದೆ ಆಶ್ರಯವುಳ್ಳ. नीलो घटः ಎಂಬಲ್ಲಿ, ನೀಲ ಮತ್ತು ಘಟ ಪದಗಳು ಏಕಧರ್ಮಿ (ಅಂದರೆ ಆಶ್ರಯ) ಬೋಧಕ ಪದಗಳಾಗಿರುವದರಿಂದ ಇವು ಸಮಾನಧಿಕರಣ ಪದಗಳು.

**सन्दिग्ध आश्रयासिद्धिः**: ಸಂದೇಹಗ್ರಸ್ತ ಆಶ್ರಯ ಅಸಿದ್ಧಿ ಎಂದರ್ಥ. ಇಲ್ಲಿ ಆಶ್ರಯಾಸಿದ್ಧಿಯನ್ನು ಪೂರ್ಣತಃ ಸಿದ್ಧಮಾಡಲಾಗದಿದ್ದರೂ, ಸಂಶಯದಿಂದ ಕೂಡಿದ ಪ್ರತಿಪಾದನೆಯಾದ್ದರಿಂದ, ಆಶ್ರಯಾಸಿದ್ಧಿದೋಷವನ್ನು ಅಲ್ಲಗೆಳೆಯಲಾಗುವದಿಲ್ಲ.

**संयोगः** ಅಸಾಧಾರಣ ಧರ್ಮ. ನ್ಯಾಯಮತದಲ್ಲಿ , ರೂಪ, ರಸಾದಿ ಇಪತ್ತನಾಲ್ಕು ಗುಣಗಳಲ್ಲೊಂದು. ಇದು ಅಪ್ರಾಪ್ತವಾಗಿದ್ದ ಎರಡು ವಸ್ತುಗಳ ಪ್ರಾಪ್ತಿ. ಸಂಯೋಗವು ಕರ್ಮಜ ಮತ್ತು ಸಂಯೋಗಜಗಳೆಂದು ಎರಡು ವಿಧ. ಕರ್ಮಜಸಂಯೋಗವು, ಅನ್ಯತರ ಕರ್ಮಜ ಮತ್ತು ಉಭಯ ಕರ್ಮಜ ಎಂದು ಎರಡು ವಿಧ. ಪಕ್ಷಿ ಪರ್ವತಗಳ ಸಂಯೋಗವು ಅನ್ಯತರಕರ್ಮಜ. ಎರಡು ಮೇಘಗಳ ಸನ್ನಿಪಾತವು ಉಭಯಕರ್ಮಜ.

**स्वव्याघातः** ತಮ್ಮ ಸಿದ್ಧಾಂತಕ್ಕೆ ವಿರುದ್ಧವಾದ ಮತವನ್ನು ಅಂಗೀಕರಿಸುವದು.

**स्ववचनविरोधः** ಪೂರ್ವಾಚಾರ್ಯರಿಂದ ಅಂಗೀಕೃತ ವಚನಕ್ಕೆ ವಿರುದ್ಧವಾದುದನ್ನು ಅಂಗೀಕರಿಸುವದು.

**स्ववचन व्याघातः** ತಾನು ಹೇಳಿದ ವಚನದ ವಿರುದ್ಧವಾದುದನ್ನು ಒಪ್ಪುವದು.

**समानाधिकरणः** ಏಕಾಧಿಕರಣವುಳ್ಳ, ಒಂದೇ ಆಶ್ರಯವುಳ್ಳ.

**साधारण अनैकान्तिकम्:** ಇದೊಂದು ಹೇತುದೋಷ. पक्षादि त्रय वृत्तित्व हेतुः साधारण अनैकान्तिकः, ಅಂದರೆ, ಪಕ್ಷ, ಸಪಕ್ಷ ಮತ್ತು ವಿಪಕ್ಷಗಳಲ್ಲಿ ವೃತ್ತಿತ್ವವನ್ನು ಹೊಂದಿದ ಹೇತುವು, ಸಾಧಾರಣ ಅನೈಕಾಂತಿಕ ಎಂದೆನಿಸುವದು.

**साध्यः** ಯಾವ ಧರ್ಮವನ್ನು ಹೇತುವಿನಮೂಲಕ ಪಕ್ಷದಲ್ಲಿ ಸಾಧಿಸಲಾಗುತ್ತದೊ, ಅದು ಸಾಧ್ಯ. पर्वतो वन्हिमान् धूमवत्वात्। ಎಂಬಲ್ಲಿ ಬೆಂಕಿಯನ್ನು ಪರ್ವತದಲ್ಲಿ ಸಾಧಿಸಲಾಗುತ್ತದೆ,



ಇಲ್ಲಿ ಬೆಂಕಿ ಸಾಧ್ಯ.

**साध्यधर्मः**– यत् प्रतीतिः लिङ्गेन जनयितव्या स साध्यधर्मः।

**साध्य वैकल्यः** ಇದೊಂದು ಉದಾಹರಣದ ದೋಷ ಎಲ್ಲಿ ಸಾಧ್ಯವೇ ಇರುವದಿಲ್ಲ.

**साधन वैकल्यः** ಇದೊಂದು ಉದಾಹರಣ ದೋಷ, ಎಲ್ಲಿ ಸಾಧನವೇ ಇರುವದಿಲ್ಲ.

**साधनशून्यः** ಸಾಧಿಸಲು ಏನೂ ಇಲ್ಲದ.

**सामग्री :** ಸಾಧನ, ಸಲಕರಣೆ, ಉಪಕರಣ, ಕಾರಣ. ಪ್ರತ್ಯಕ್ಷಕ್ಕೆ ಸಾಮಗ್ರಿಯು ಇಂದ್ರಿಯ ಸನ್ನಿಕರ್ಷ, ಅನುಮಿತಿಗೆ ಸಾಮಗ್ರಿಯು ವ್ಯಾಪ್ತಿಜ್ಞಾನ ಪರಮರ್ಶಗಳು.

**सिद्धसाधनताः** ಸಿದ್ಧವಾದವಿಷಯವನ್ನೆ ಮತ್ತೆ ಸಾಧಿಸುವದು. ಇದೊಂದು ಅನುಮಾನ್ ದೋಷ.

**सिंहावलोकन्यायः** ಸಿಂಹದಂತೆ ಹಿಂತಿರುಗಿ ನೋಡುವದು. ಸಿಂಹವು ನಡೆದಾಡುವಾಗ ಸ್ವಲ್ಪ ದೂರಹೋಗಿ ಹಿಂದೆ ನೋಡಿಕೊಂಡು ಮುಂದೆ ನಡೆಯುವದು ಅದರ ಸ್ವಭಾವ. ಅದರಂತೆಯೆ ಮನುಷ್ಯನು ಹಿಂದೆ ತಾನು ಮಾಡಿದ ಕಾರ್ಯವನ್ನು ಮತ್ತೆ ಪರಿಶೀಲಿಸಿ ಮುಂದಿನ ಕಾರ್ಯದಲ್ಲಿ ತೊಡಗುವನು. ಈ ಅರ್ಥದಲ್ಲಿ ಸಿಂಹಾವಲೋಕನ ನ್ಯಾಯವು ಪ್ರವೃತ್ತವಾಗಿದೆ.

**सोपाधिक आत्माः** सोपाधिकं देहेन्द्रिय अन्तःकरणरूप उपाधि विशिष्टं आत्मा, ಸೊಪಾಧಿಕ ಎಂದರೆ ದೇಹೆಂದ್ರಿಯ ಅಂತಃಕರಣರುಪ ಉಪಾಧಿಯಿಂದ (ಅಂದರೆ ವಿಶೇಷಣ ಅಥವಾ ಗುಣಧರ್ಮದಿಂದ ) ವಿಶಿಷ್ಟನಾದ, ಅಂದರೆ ವಿಶೇಷ ಗುಣ ಧರ್ಮದಿಂದ ಕೂಡಿದ ರೂಪವುಳ್ಳ ಆತ್ಮಾ ಎಂದರ್ಥ.

**हेतुः** ಕರಣ, ಲಿಂಗ ಅಥವಾ ಸಾಧ್ಯಧರ್ಮದ ಜ್ಞಾಪಕ. पर्वतो वन्हिमान् धूमवत्वात्। ಎಂಬಲ್ಲಿ, ಪರ್ವತದಲ್ಲಿ ಬೆಂಕಿಯನ್ನು ಸಾಧಿಸಲು ಧೂಮ ಕರಣ. ಅಥವಾ ವ್ಯಾಪ್ತಿ ಸಂಬಂಧವಿರುವದರಿಂದ ಸಾಧ್ಯದ ಜ್ಞಾನವನ್ನುಂಟುಮಾಡುವ ಧರ್ಮ ಹೇತು.

**हेतुछेदः** ಯಾವುದನ್ನು ಸಾಧಿಸಲು ಹೇತುವನ್ನು ಅಂಗೀಕರಿಸಿ, ಆ ಸಾಧ್ಯವನ್ನೆ ಅಂಗೀಕರಿಸದಿರುವದು, ಅದು ಹೇತುಛೇದವೆನಿಸುವದು.

ಇಲ್ಲಿ ಬೆಂಕಿ ಸಾಧ್ಯ.

----------------------------------------------------------------

## About the Author

Dr. Mangasuli Jayateerthacharya hails from the orthodox Madhva Brahmin family of scholars, his both grandfathers Pt Mangasuli Ramacharya, and Pt Chincholi Krishtacharya were eminent scholars. Being initiated into realm of Shri Madhvashastra by his guru illustrious late Pt. Mangasuli Ramacharya, author is very fortunate to pursue the Shri Madhvashastra studies initially under his father late Prof Gurajacharya and later incessantly on his own, along with modern scientific education. Besides, he has unique privilege of completing **Rigvedadhyana** under late Shri Vedacharya Ghaisas Guruji at Pune. As of today, author has proud credentials of completing studies of, **Ten Prakaran Granthas, Vadavali, Bhedojeevanam, Nyayamrutam, seven of ten major Upanishads and Geeta, along with teeka tippanis.** He has also published two books in ShriMadhvashaastra namely, one on Mayavaad Khandanam and other one on Ishavasyopanishat. Presently he is pursuing his studies on Brahmasutraas along the lines of, Tantra Deepika and Nyayamuktavali, the great works of Shri Raghavendra Teertha.

On professional front, as alumni of prestigious institutes, IIT Kanpur, IISc Bangalore and IIM Calcutta, author is a professional technocrat in the field of Telecom /Wireless/Internet technologies. His Ph.D. thesis is a pioneering work in the field of Broadcast Networks and is patented under IPR. Recently released his book on Next Generation Networks entitled "**Convergence through all IP networks**", being printed and published in USA by Taylor & Francis Group LLC New York, has been well recived by international community across the globe. Now it is getting translated into Chinese language, to be relased in China in early 2016.